ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ-೫೪

ಪ್ರಧಾನ ಸಂಪಾದಕ
ಡಾ॥ ಕೆ. ವಿ. ಪುಟ್ಟಪ್ಪ, ಎಂ.ಎ., ಡಿ.ಲಿಟ್.

ಹೊಯ್ಸಳ ವಾಸ್ತುಶಿಲ್ಪ

ಡಾ॥ ಎಸ್. ಶ್ರೀಕಂಠಶಾಸ್ತ್ರೀ, ಎಂ.ಎ., ಡಿ.ಲಿಟ್.

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
೧೯೬೫

ಸಾದಾ ಪ್ರತಿ : ರೂ. ೫-೫೦ ಉತ್ತಮ ಪ್ರತಿ : ರೂ. ೬-೫೦

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ-೫೪

ಪ್ರಧಾನ ಸಂಪಾದಕ

ಡಾ॥ ಕೆ. ವಿ. ಪುಟ್ಟಪ್ಪ, ಎಂ.ಎ., ಡಿ.ಲಿಟ್.

ಹೊಯ್ಸಳ ವಾಸ್ತುಶಿಲ್ಪ

ಡಾ॥ ಎಸ್. ಶ್ರೀಕಂಠಶಾಸ್ತ್ರೀ, ಎಂ.ಎ., ಡಿ.ಲಿಟ್.

ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ

೧೯೬೫

ಮೊದಲನೆಯ ಮುದ್ರಣ : ೧೯೬೫

ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದಲ್ಲಿ
ಪ್ರಸಾರಾಂಗದ ಡೈರೆಕ್ಟರ್ ಅವರಿಂದ ಪ್ರಕಟಿಸಿ ಪ್ರಚುರಿಸಲ್ಪಟ್ಟಿದೆ

ಮುನ್ನುಡಿ

ವಿದ್ಯಾಭ್ಯಾಸದ ಸರ್ವ ಶ್ರೇಣಿಗಳಲ್ಲಿಯೂ ದೇಶಭಾಷೆ ಶಿಕ್ಷಣ ಮಾಧ್ಯಮವಾಗಬೇಕಾದುದು ಅತ್ಯವಶ್ಯವಾಗಿದೆ. ಇದು ಒಬ್ಬಿಬ್ಬರು ಭಾಷಾಭಿಮಾನಿಗಳು ದುರುದ್ದೇಶದಿಂದಾಗಲಿ, ಪಕ್ಷಪಾತ ಮನೋಭಾವ ದಿಂದಾಗಲಿ ಹೇಳುವ ಮಾತಲ್ಲ. ರಾಷ್ಟ್ರದ ಸರ್ವತೋಮುಖವಾದ ಪ್ರಗತಿ ಮತ್ತು ವಿದ್ಯಾರ್ಥಿಗಳ ಸರ್ವಾಂಗೀಣ ವಿಕಾಸ—ಇವುಗಳ ಹಿನ್ನೆಲೆಯಲ್ಲಿ ನಡೆಸಿದ ಕೂಲಂಕಷವಾದ ಚರ್ಚೆ ಮತ್ತು ಸರ್ವಂಕಷವಾದ ವಿಚಾರ ಮಥನಗಳ ಫಲವಾಗಿ ಸಿದ್ಧಿಸಿದ ತತ್ತ್ವವಿದು. ಡಾ|| ಅಮರನಾಥ ಝಾ ರಂಥ ಶ್ರೇಷ್ಠ ಶಿಕ್ಷಣತಜ್ಞರಿಂದ ಹಿಡಿದು ಮಹಾತ್ಮಾ ಗಾಂಧೀಜಿಯಂಥ ರಾಷ್ಟ್ರನಾಯಕರವರೆಗೆ ಎಲ್ಲರೂ ದೇಶಭಾಷಾ ಮಾಧ್ಯಮದ ಸಾರ್ಥಕತೆ ಯನ್ನು ಒತ್ತಿಹೇಳಿದ್ದಾರೆ. ಹಿಂದಿನ ಆಂಗ್ಲ ಸರ್ಕಾರ ನೇಮಿಸಿದ್ದ ಸ್ಯಾಡ್ಲರ್ ವಿಚಾರಣಾ ಸಮಿತಿ ಮತ್ತು ಹಾರ್ಟೋಗ್ ಸಮಿತಿಗಳೂ ಸರ್ ಚಾರ್ಲ್ಸ್ ವುಡ್, ಸರ್ ಸಾರ್ಜಂಟ್ ಮೊದಲಾದ ವಿದೇಶೀಯ ಶಿಕ್ಷಣತಜ್ಞರೂ, ದೇಶಭಾಷಾ ಮಾಧ್ಯಮದಿಂದಲ್ಲದೆ ಭಾರತೀಯರ ಶಿಕ್ಷಣ ಸಫಲವಾಗದೆಂದೂ ಸಮರ್ಪಕವಾಗದೆಂದೂ ಏಕಕಂಠದಿಂದ ಸಾರಿದ್ದಾರೆ.

ಈ ಶಿಕ್ಷಣಸೂತ್ರವನ್ನು ದೃಷ್ಟಿಯಲ್ಲಿಟ್ಟುಕೊಂಡೇ .ಭರತಖಂಡದ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ದೇಶಭಾಷಾ ಮಾಧ್ಯಮ ಯಶಸ್ವಿಯಾಗಿ ಕಾರ್ಯಗತವಾಗುತ್ತಿದೆ. ನಾಗಪುರ, ಅಲಹಾಬಾದ್, ಕಾಶಿ ಮೊದಲಾದ ವಿಶ್ವವಿದ್ಯಾನಿಲಯಗಳಿಂದ ಅಧಿಕೃತವಾಗಿ ದೊರೆತ ವರದಿಗಳಿಂದ ವಿದ್ಯಾರ್ಥಿಗಳು ಆದರಪೂರ್ವಕವಾಗಿ ಅನಿರ್ಬಂಧವಾಗಿ ದೇಶಭಾಷಾ ಮಾಧ್ಯಮವನ್ನು ಆರಿಸಿಕೊಳ್ಳುತ್ತಿರುವುದೂ, ಅದರಿಂದ ಪರೀಕ್ಷೆಗಳಲ್ಲಿ ಫಲಿತಾಂಶ ತುಂಬಾ ಆಶಾದಾಯಕವಾಗಿ ಗೋಚರಿಸುತ್ತಿರುವುದೂ ಸುಸ್ಪಷ್ಟವಾಗುತ್ತಿದೆ.

ದೇಶಭಾಷಾ ಮಾಧ್ಯಮ ಬೇಡವೆನ್ನುವ ಸಂಪ್ರದಾಯಶರಣರ ಸಂಖ್ಯೆ ಈಗೀಗ ಬಹುಮಟ್ಟಿಗೆ ಇಳಿಮುಖವಾಗುತ್ತಿದ್ದರೂ ಅಲ್ಲೊಬ್ಬರು

ಇಲ್ಲೊಬ್ಬರು ಇನ್ನೂ ಇದ್ದಾರೆ. ಅವರು ತಮ್ಮ ನಿಲುವನ್ನು ಸಾಧಿಸಲು ಕೊಡುವ ಮುಖ್ಯ ಕಾರಣಗಳಿವು :

೧. ದೇಶಭಾಷೆಗಳಲ್ಲಿ ಪಾರಿಭಾಷಿಕ ಅಥವಾ ವೈಜ್ಞಾನಿಕ ಪದಗಳ ದಾರಿದ್ರ್ಯ.

೨. ಗ್ರಂಥಗಳ ಅಭಾವ.

೩. ವಿವಿಧ ಪ್ರಾಂತಗಳ ವಿದ್ವಾಂಸರ ಸಂಪರ್ಕಕ್ಕೆ ಮತ್ತು ಸರ್ಕಾರಿ ನೌಕರರ ಪರಸ್ಪರ ವಿನಿಮಯಕ್ಕೆ ಅಡಚಣೆ.

ಈ ಕಾರಣಗಳು ಸಂಪೂರ್ಣ ನಿರಾಧಾರವೆಂಬುದು ಕೆಳಗಣ ವಿವರಣೆಯಿಂದ ವ್ಯಕ್ತವಾಗುತ್ತದೆ :

೧. ವೈಜ್ಞಾನಿಕ ಅಥವಾ ಪಾರಿಭಾಷಿಕ ವಿಷಯಗಳಿಗೆ ಹೊಸ ಹೊಸ ಶಬ್ದಗಳನ್ನು ಸೃಷ್ಟಿಸುವ ಸಂಕಟಕ್ಕೆ ಗುರಿಯಾಗಬೇಕಾಗಿಲ್ಲ. ಅಂತರರಾಷ್ಟ್ರೀಯ ಶಬ್ದಗಳನ್ನೆ ಇದ್ದಹಾಗೆಯೆ ಬಳಸಿಕೊಳ್ಳಬಹುದು. ಆವಶ್ಯಕತೆ ಕಂಡುಬಂದರೆ ಮಾತ್ರ ವಿವರಣಾತ್ಮಕವಾಗಿ ದೇಶಭಾಷೆಯ ಶಬ್ದಗಳನ್ನು ಉಪಯೋಗಿಸಬಹುದು. ಪಾರಿಭಾಷಿಕ ಶಬ್ದಗಳು ವಾಸ್ತವವಾಗಿ ಅಂಕಿತನಾಮಗಳು ತಾನೆ! ಕೇಂದ್ರ ಸರ್ಕಾರದ ವಿದ್ಯಾಖಾತೆ ತಯಾರಿಸಿರುವ ಪಾರಿಭಾಷಿಕ ಪದಗಳ ಕೋಶ ಈ ತತ್ತ್ವವನ್ನೆ ಅವಲಂಬಿಸಿದೆ. ಮೈಸೂರು ವಿಶ್ವವಿದ್ಯಾನಿಲಯವೂ ಈ ಮಾರ್ಗವನೆ ಸಂಪೂರ್ಣವಾಗಿ ಅಂಗೀಕರಿಸಿದೆ.

೨. ಈಗಾಗಲೆ ಎಲ್ಲಾ ಭಾಷೆಗಳಲ್ಲಿಯೂ ವೈಜ್ಞಾನಿಕ ಗ್ರಂಥಗಳ, ಹೊರಬೀಳುತ್ತಿವೆ. ಆವಶ್ಯಕತೆ ಹೆಚ್ಚಿದಂತೆಲ್ಲ ಅವುಗಳ ಸಂಖ್ಯೆಯೂ ಬೆಳೆಯುತ್ತಿದೆ. ಪೇಟೆಯಲ್ಲಿ ಗಿರಾಕಿ ಇದೆಯೆಂದು ತಿಳಿದರೆ ಸಾಕು ಗ್ರಂಥಗಳು ಲೆಕ್ಕವಿಲ್ಲದೆ ಹೊರಬರುತ್ತವೆ.

೩. ಅಂತರರಾಷ್ಟ್ರೀಯ ಪಾರಿಭಾಷಿಕ ಶಬ್ದಗಳನ್ನು ಬಿಡುವುದಿಲ್ಲವಾದುದರಿಂದಲೂ, ಹಿಂದಿ ಅಥವಾ ಇಂಗ್ಲಿಷ್ ಭಾಷೆಯನ್ನು ಕಡ್ಡಾಯವಾಗಿ ಎಲ್ಲಾ ವಿದ್ಯಾರ್ಥಿಗಳು ಒಂದಲ್ಲ ಒಂದು ರೀತಿಯಲ್ಲಿ ಕಲಿಯಬೇಕಾಗಿರುವುದರಿಂದಲೂ ವಿದ್ವಾಂಸರ ಸಂಪರ್ಕಕ್ಕಾಗಲಿ, ಸರ್ಕಾರಿ ನೌಕರರ ವಿನಿಮಯಕ್ಕಾಗಲಿ ಅಡಚಣೆ ಆಗುವುದಿಲ್ಲ. ಈ ದೊಡ್ಡ

ರಾಷ್ಟ್ರದಲ್ಲಿ ಸರ್ಕಾರಿ ನೌಕರರ ಸಂಖ್ಯೆ ಅತ್ಯಲ್ಪ ಭಾಗವೆನ್ನುವುದನ್ನೂ, ಈ ಅತ್ಯಲ್ಪ ಸಂಖ್ಯೆಯ ಸರ್ಕಾರಿ ನೌಕರರ ಹಿತಕ್ಕಾಗಿ ಇಡೀ ರಾಷ್ಟ್ರದ ಕಲ್ಯಾಣವನ್ನು ಬಲಿಗೊಡುವುದು ಸರಿಯಲ್ಲವೆಂಬುದನ್ನೂ ಮರೆಯ ಬಾರದು.

ಡಾ|| ಎಸ್. ಶ್ರೀಕಂಠಶಾಸ್ತ್ರೀಯವರು ಹಲವು ವರ್ಷಗಳ ಕಾಲ ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸದ ಪ್ರಾಧ್ಯಾಪಕರಾಗಿದ್ದು 'ಹೊಯ್ಸಳ ವಾಸ್ತುಶಿಲ್ಪ'ದ ಬಗ್ಗೆ ಗಾಢವೂ ಅಗಾಧವೂ ಆದ ಅನುಭವ ವನ್ನು ಪಡೆದವರಾಗಿರುತ್ತಾರೆ. ಇವರ ಈ ಗ್ರಂಥ ಸರ್ವಮಾನ್ಯವಾಗು ವುದರಲ್ಲಿ ಸಂದೇಹವಿಲ್ಲ.

ಕೆ. ವಿ. ಪುಟ್ಟಪ್ಪ
ಪ್ರಧಾನ ಸಂಪಾದಕ

ಮೈಸೂರು
೨೬-೯-೧೯೬೪

ಅರಿಕೆ

ಪ್ರಪಂಚ ಪ್ರಖ್ಯಾತಿ ಪಡೆದು ಭರತಖಂಡಕ್ಕೂ ಕರ್ಣಾಟಕಕ್ಕೂ ಕಲಾತಿಲಕಾಯಮಾನವಾದ ಚಾಳುಕ್ಯ–ಹೊಯ್ಸಳ ವಾಸ್ತುಶಿಲ್ಪದ ವೈಶಿಷ್ಟ್ಯವನ್ನು ಸೂಚಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಹಳೆಯ ಮೈಸೂರಿನ ಉತ್ತರ ಭಾಗಗಳಾಗಿದ್ದ ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಗಳ ಉತ್ತರ ಸರಹದ್ದಿನಲ್ಲಿ ಕಂಡುಬರುವ ಚಾಳುಕ್ಯ ದೇವಾಲಯಗಳ ಹಿನ್ನೆಲೆಯಲ್ಲಿ ಚಾರಿತ್ರಕ ಸನ್ನಿವೇಶಗಳಿಗೆ ಹೊಂದಿಕೊಂಡು ವಿಶಾಲವಾಗಿ ಬೆಳೆದ ಹೊಯ್ಸಳ ವಾಸ್ತುಶಿಲ್ಪದ ಚರಿತ್ರೆಯ ಮುಖ್ಯ ಘಟ್ಟಗಳನ್ನೂ, ಹೊಯ್ಸಳರ ಅಂತಿಮದಶೆಯಲ್ಲಿ ವಿಜಯನಗರ ಸಾಮ್ರಾಜ್ಯವು ಹಂಪಿ, ಶೃಂಗೇರಿಗಳಲ್ಲಿ ಹೇಗೆ ಹೊಯ್ಸಳ ರೀತಿಯನ್ನು ಅಳವಡಿಸಿಕೊಂಡಿತ್ತೆಂಬುದನ್ನೂ ನಿರೂಪಿಸಲಾಗಿದೆ. ತಾಂತ್ರಿಕ ರಹಸ್ಯಗಳನ್ನು ಹೇಗೆ ಹೊಯ್ಸಳ ಶಿಲ್ಪದಲ್ಲಿ ಕಾಣಬಹುದೆಂದೂ ಸೂಚಿಸಲಾಗಿದೆ. ಶೈವ, ಶಾಕ್ತ, ವೈಷ್ಣವ, ಜೈನ ವಿಗ್ರಹ ಪ್ರಭೇದಗಳನ್ನು ಸ್ವಲ್ಪಮಟ್ಟಿಗೆ ವಿವರಿಸಲಾಗಿದೆ. ಆರ್ಥಿಕ, ರಾಜಕೀಯ, ಸಾಮಾಜಿಕ, ಕಲಾದೃಷ್ಟಿಗಳಿಂದ ಹೊಯ್ಸಳ ಶಿಲ್ಪವನ್ನು ಇನ್ನೂ ಅಧಿಕವಾಗಿ ಅಧ್ಯಯನಮಾಡಲು ಈ ಗ್ರಂಥವು ಸಹಾಯ ಮಾಡಿದರೆ ಕೃತಾರ್ಥನೆಂದು ಭಾವಿಸುತ್ತೇನೆ.

ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಡಾ|| ಎ. ಆರ್. ಕೃಷ್ಣಶಾಸ್ತ್ರೀಯವರು ೨೦–೧–೧೯೪೭ರಲ್ಲಿ ಅತ್ಯಂತ ಅಭಿಮಾನದಿಂದ ತಮ್ಮ ಬಳಿಯಲ್ಲಿದ್ದ ಮೈಸೂರು ಆರ್ಕಿಯಾಲಜಿ ರಿಪೋರ್ಟುಗಳನ್ನು (೧೯೨೯–೧೯೩೯) ನನಗೆ ಕೊಟ್ಟು ಈ ಗ್ರಂಥ ರಚನೆಗೆ ಸ್ಫೂರ್ತಿಯಿತ್ತುದನ್ನು ಕೃತಜ್ಞತೆಯಿಂದ ಇಲ್ಲಿ ಸ್ಮರಿಸುತ್ತೇನೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗಕ್ಕೆ ನನ್ನ ವಂದನೆಗಳು ಸಲ್ಲುತ್ತವೆ. ಮೈಸೂರು ಆರ್ಕಿಯಾಲಜಿ ಇಲಾಖೆಯವರು ಕೆಲವು ಚಿತ್ರಗಳನ್ನು ಒದಗಿಸಿಕೊಟ್ಟಿರುವುದಕ್ಕಾಗಿ ನನ್ನ ವಂದನೆಗಳು.

ಮೈಸೂರು
೨೦–೪–೧೯೬೪

ಎಸ್. ಶ್ರೀಕಂಠಶಾಸ್ತ್ರೀ

ವಿಷಯ ಸೂಚಿಕೆ

ಭಾಗ ೩


ಇತರ ಸಣ್ಣ ಹೊಯ್ಸಳ ದೇವಾಲಯಗಳು

ಭಾಗ ೪

ಇತರ ಸಣ್ಣ ಹೊಯ್ಸಳ ದೇವಾಲಯಗಳು

(ಮುಂದುವರೆದುದು)

ಚಿತ್ರಗಳು



ಬೇಲೂರು ಚೆನ್ನಕೇಶವ ದೇವಾಲಯದ ಭುವನೇಶ್ವರಿ

ಹೊಯ್ಸಳ ವಾಸ್ತುಶಿಲ್ಪ

ಭಾಗ ೧

ಹೊಯ್ಸಳ ರೀತಿ

೧. ಹೊಯ್ಸಳ ಶಿಲ್ಪದ ಹಿನ್ನೆಲೆ (The Background of Hoysala Sculpture): ಕರ್ಣಾಟಕದ ದಕ್ಷಿಣ ಮತ್ತು ಪಶ್ಚಿಮ ಭಾಗದಲ್ಲಿ ಪಡುವಣ ಕಡಲಿನ ಕರಾವಳಿಯಿಂದ ಮೂಡಲು ತಲಕಾಡು ನಂಗಿಲಿವರೆಗೂ ಸುಮಾರು ಮುನ್ನೂರು ವರ್ಷ ಹೊಯ್ಸಳ ಸಾಮ್ರಾಜ್ಯವು ಪ್ರಬಲವಾಗಿದ್ದಿತು. ಮಲೆನಾಡಿನ ನೈಸರ್ಗಿಕ ಸೌಂದರ್ಯದ ಬೀಡಿನಲ್ಲಿ ಶಾತವಾಹನ, ಕದಂಬ, ಆಳುಪ, ಬಾದಾಮಿ ಚಾಳುಕ್ಯ, ರಾಷ್ಟ್ರಕೂಟ ರಾಜರು ಪುರಾತನ ದೇವಾಲಯಗಳನ್ನೂ ಇತರ ಕಟ್ಟಡಗಳನ್ನೂ ನಿರ್ಮಿಸಿದ್ದರೆಂದು ಊಹಿಸಲು ಅವಕಾಶವಿದೆ. ಬನವಾಸಿ, ತಾಳಗುಂದ, ಮಳವಳ್ಳಿ, ಬಲ್ಲಿಗಾವೆ, ಇತ್ಯಾದಿ ಸ್ಥಳಗಳಲ್ಲಿ ಕಂಡುಬಂದಿರುವ ಅವಶೇಷಗಳಿಂದಲೂ ಸಾಹಿತ್ಯದ ಆಧಾರಗಳಿಂದಲೂ ಕ್ರಿಸ್ತ ಪೂರ್ವ ಎರಡು ಮೂರನೆಯ ಶತಾಬ್ದದಿಂದ ಮೌರ್ಯ ಮತ್ತು ಶಾತವಾಹನರ ಕಾಲದಲ್ಲಿಯೇ ಕೆಲವು ದೇವಾಲಯಗಳು ಬಹಳ ಪ್ರಸಿದ್ಧವಾಗಿದ್ದವೆಂದು ಹೇಳಬಹುದು. ಬಾದಾಮಿ ಚಾಳುಕ್ಯರು ಕ್ರಿಸ್ತ ಶಕ ೬ನೆಯ ಶತಮಾನದಿಂದ ಗುಹಾಲಯಗಳನ್ನೇ ಅಲ್ಲದೆ ಪ್ರತ್ಯೇಕ ದೇವಾಲಯ ನಿರ್ಮಾಣವನ್ನೂ ಆರಂಭಿಸಿ ಚಾಳುಕ್ಯ ರೀತಿಗೆ ಪೀಠಿಕೆ ಹಾಕಿದರು. ಶಿಲ್ಪಶಾಸ್ತ್ರಗಳಲ್ಲಿ ಭಾರತೀಯ ಶಿಲ್ಪವನ್ನು ನಾಗರ, ದ್ರಾವಿಡ, ವೇಸರ ಎಂಬುದಾಗಿ ವಿಭಜಿಸಿ ಉತ್ತರ ಭಾರತದಲ್ಲಿ ನಾಗರ, ಕಾವೇರಿಗೆ ದಕ್ಷಿಣದಲ್ಲಿ ದ್ರಾವಿಡ, ಮಧ್ಯದಲ್ಲಿ ವೇಸರ ರೀತಿಗಳಿವೆಯೆಂದು ಹೇಳಿದೆ. ಆದರೆ ತಿರುಳು ಕನ್ನಡ ಭಾಷೆಯ ನಾಡಿನಲ್ಲಿಯೇ ಮೊದಲು ದೇವಾಲಯ ನಿರ್ಮಾಣ ಆರಂಭವಾಗಿ ಅನಂತರ ಈ ಮೂರು ರೀತಿಗಳು ಬೇರೆಯಾದುವೆಂದು ಹೇಳಲು ಆಧಾರಗಳಿವೆ. ಪಲ್ಲವರ ಗುಹಾಲಯ ಮತ್ತು ಪ್ರತ್ಯೇಕ ದೇವಾಲಯಗಳು ಏಳನೆಯ ಶತಮಾನಕ್ಕೆ ಹಿಂದೆ ಕಂಡುಬರುವುದಿಲ್ಲ. ಕನ್ನಡನಾಡಿನಲ್ಲಿ

ಶಾತವಾಹನರ ಕಾಲದಿಂದಲೂ ಕಟ್ಟಡಗಳು ಕಂಡುಬರುತ್ತವೆ; ಮತ್ತು ಒಂದನೆಯ ಪುಲಿಕೇಶಿಯು ಆರನೆಯ ಶತಮಾನದ ಮಧ್ಯಭಾಗದಲ್ಲಿ ಬಾದಾಮಿಯ ಕೋಟೆಗಳನ್ನು ಕಟ್ಟಿಸಿದಾಗಲೆ ಅಲ್ಲಿನ ಗುಹಾಲಯಗಳು ರಚಿತವಾಗಿದ್ದುವೆಂದೂ, ಮಂಗಳೀಶನ ಕಾಲಕ್ಕೆ ಮುಂಚೆಯೇ ಮಹಾಕೂಟೇಶ್ವರ ದೇವಾಲಯವಿದ್ದಿತೆಂದೂ ಶಾಸನಗಳಿಂದ ತಿಳಿದು ಬಂದಿರುವುದರಿಂದ ಚಾಳುಕ್ಯರ ಶಿಲ್ಪವನ್ನನುಸರಿಸಿಯೇ ಪಲ್ಲವರು ದೇವಾಲಯಗಳನ್ನು ನಿರ್ಮಿಸಿದರು. ಮಹೇಂದ್ರವರ್ಮನು ಇಟ್ಟಿಗೆ ಮರ ಗಾರೆಗಳನ್ನು ಉಪಯೋಗಿಸದೆ ಕಲ್ಲಿನಿಂದ ರಚಿಸುವುದಕ್ಕೆ ತಾನೇ ಮೊದಲನೆಯವನೆಂದು ಹೇಳಿಕೊಂಡಿರುವುದು ಕೇವಲ ಆತ್ಮಪ್ರಶಂಸೆಯಾಗಿದೆ.

ಬಾದಾಮಿ ಚಾಳುಕ್ಯರ ಅನಂತರ ರಾಷ್ಟ್ರಕೂಟರು ಚಾಳುಕ್ಯ ರೀತಿಯಲ್ಲೆ ವೇರಳೂರು (ಎಲ್ಲೋರ) ದೇವಾಲಯವನ್ನೂ, ಬಂಕಾಪುರ ಶ್ರವಣಬೆಳಗೊಳ ಮುಂತಾದ ಸ್ಥಳಗಳಲ್ಲಿ ಬಸದಿಗಳನ್ನೂ ನಿರ್ಮಿಸಿದರು. ರಾಷ್ಟ್ರಕೂಟರ ಅನಂತರ ಕಲ್ಯಾಣದ ಪಶ್ಚಿಮ ಚಾಳುಕ್ಯರು ನಾಗರ ಮತ್ತು ದ್ರಾವಿಡ ರೀತಿಗಳಿಂದ ಪ್ರತ್ಯೇಕವಾದ ಚಾಳುಕ್ಯರೀತಿಗೆ ವೈಶಿಷ್ಟ್ಯವನ್ನು ಕೊಟ್ಟರು. ಕಲ್ಯಾಣಿಯ ಚಾಳುಕ್ಯರ ಸಾಮಂತರಾಗಿದ್ದ ಹೊಯ್ಸಳರು ಚಾಳುಕ್ಯರೀತಿಯನ್ನನುಸರಿಸಿದರು. ಆದರೂ ತಲವಿನ್ಯಾಸ, ಶಿಲ್ಪಬಾಹುಳ್ಯ, ಏಕ, ದ್ವಿ, ತ್ರಿ, ಚತುಸ್ ಮತ್ತು ಪಂಚಕೂಟಗಳು, ಜವಳಿ ದೇವಾಲಯಗಳು, ಇತ್ಯಾದಿ ಅಂಶಗಳಲ್ಲಿ ವೈಶಿಷ್ಟ್ಯವಿರುವುದರಿಂದಲೂ, ಹೊಯ್ಸಳರ ರಾಜ್ಯವಾದ ಕಾವೇರಿಯಿಂದ ತುಂಗಭದ್ರಾ ನದಿಯವರೆಗಿರುವ ಪ್ರದೇಶದಲ್ಲಿಯೇ ಇಂತಹ ದೇವಾಲಯಗಳು ಕಂಡುಬರುವುದರಿಂದಲೂ **ಹೊಯ್ಸಳ ರೀತಿ** ಎಂಬುದು ಪ್ರತ್ಯೇಕವೆಂದು ಹೇಳಬಹುದು.

೨. **ಹೊಯ್ಸಳ ಚರಿತ್ರೆ** (Hoysala History): ಹೊಯ್ಸಳ ವಂಶದ ಮೂಲಪುರುಷನೆಂದು ಭಾವಿಸಿರುವ ಸಳನು ಸುಮಾರು ಹತ್ತನೆಯ ಶತಮಾನದ ಅಂತ್ಯದಲ್ಲಿ ಮೂಡಿಗೆರೆ ತಾಲ್ಲೂಕಿನ ಸೊಸೆವೂರು (ಅಂಗಡಿ) ಪ್ರಾಂತದಲ್ಲಿ ಮಲೆಪರ ಸಣ್ಣ ರಾಜ್ಯವನ್ನು ನಿರ್ಮಿಸಿದನು. ಅನಂತರ ಹನ್ನೊಂದನೆಯ ಶತಮಾನದಲ್ಲಿ ವಿನಯಾದಿತ್ಯನು ರಾಜಧಾನಿಯನ್ನು ದ್ವಾರಸಮುದ್ರ (ಹಳೇಬೀಡು) ಮತ್ತು ಬೇಲೂರಿಗೆ ಬದಲಾಯಿಸಿದನು.

ಪಶ್ಚಿಮ ಚಾಳುಕ್ಯ ಚಕ್ರವರ್ತಿಯಾದ ತ್ರೈಲೋಕ್ಯಮಲ್ಲ ಒಂದನೆಯ ಸೋಮೇಶ್ವರನೊಡನೆ ವಿವಾಹಸಂಬಂಧ ಬೆಳಸಿ, ಕ್ರಿ. ಶ. ೧೦೪೭ರಿಂದ ೧೧೦೨ರ ವರೆಗೂ ಆಳಿದನು. ಇವನ ಕಾಲದಲ್ಲಿ ಮತ್ತವರದ ಬಸದಿ, ತೊಣಚಿಯ ಬಸವೇಶ್ವರ, ಅಂಗಡಿಯ ಬಸದಿ, ಬೆಳಗಾವಿಯ ಕೇದಾರೇಶ್ವರ ಮತ್ತು ತ್ರಿಪುರಾಂತಕ ದೇವಾಲಯ, ಕುಪ್ಪತ್ತೂರಿನ (ಕುಬಟೂರು) ಕೈಟಭ, ಚಿಕ್ಕಹನಸೋಗೆಯ ಆದಿನಾಥ ಬಸದಿ ನಿರ್ಮಿತವಾದವು.

ವಿನಯಾದಿತ್ಯನ ಹಿರಿಯ ಮೊಮ್ಮಗನಾದ ಒಂದನೆಯ ಬಲ್ಲಾಳನು (೧೧೦೨—೧೧೦೬) ಆಳಿದಾಗ, ಅವನ ಮಾವನಾದ ಮರಿಯಾನೆ ದಂಡನಾಯಕನು ಹಟ್ನದಲ್ಲಿ ಬಸದಿಯನ್ನು ಕಟ್ಟಿಸಿದನು. ಬಲ್ಲಾಳನ ತಮ್ಮನಾದ ವಿಷ್ಣುವರ್ಧನನು ೧೧೦೬ರಲ್ಲಿ ರಾಜನಾದರೂ ೧೧೧೧ರಲ್ಲಿ ಪಟ್ಟಾಭಿಷಿಕ್ತನಾದಂತೆ ಕಂಡುಬರುತ್ತದೆ. ಬಾಲ್ಯದಲ್ಲಿಯೇ ತನ್ನ ತಂದೆ ಎರೆಯಂಗ, ಅಣ್ಣ ಬಲ್ಲಾಳರಿಗೆ ಸಹಾಯಮಾಡಿ ತನ್ನ ಪರಾಕ್ರಮವನ್ನು ತೋರಿಸಿದ್ದನು. ಪಟ್ಟಕ್ಕೆ ಬಂದಮೇಲೆ ತಲಕಾಡನ್ನು ಹಿಡಿದಿದ್ದ ಚೋಳ ಒಂದನೆಯ ಕುಲೋತ್ತುಂಗನ ಸೈನ್ಯವನ್ನು ೧೧೧೬ರಲ್ಲಿ ಸೋಲಿಸಿ ಚೋಳರನ್ನು ಕೋಲಾರದ ಪೂರ್ವ ಮೇರೆಯಾದ ನಂಗಲಿಯಿಂದ ಆಚೆಗೆ ಓಡಿಸಿದನು. ಈ ವಿಜಯದ ಸ್ಮಾರಕಕ್ಕಾಗಿ ತಲಕಾಡು, ಬೇಲೂರು, ಇತ್ಯಾದಿ ಸ್ಥಳಗಳಲ್ಲಿ ವಿಜಯನಾರಾಯಣ ದೇವಾಲಯಗಳನ್ನು ಸ್ಥಾಪಿಸಿದನು. ಶ್ರೀ ರಾಮಾನುಜಾಚಾರ್ಯರ ಪ್ರೇರಣೆಯಿಂದ ಶ್ರೀವೈಷ್ಣವ ಮತವನ್ನು ಸ್ವೀಕರಿಸಿ ಜೈನ ಬೌದ್ಧರನ್ನು ಹಿಂಸಿಸಿ ವಿಷ್ಣುದೇವಾಲಯಗಳನ್ನು ನಿರ್ಮಿಸಿದನೆಂಬುದಕ್ಕೆ ಯಾವ ಶಾಸನಾಧಾರಗಳೂ ಸಿಕ್ಕಿಲ್ಲ. ಕ್ರಿಸ್ತ ಶಕ ೧೧೪೨ರವರೆಗೂ ವಿಷ್ಣುವರ್ಧನನು ಮೂಡಲಿನಲ್ಲಿ ನಂಗಲಿ ಪಡಿಯರ ಘಟ್ಟ, ದಕ್ಷಿಣದಲ್ಲಿ ಆನೇಮಲೆ ಕೊಂಗು ಚೇರ, ಪಡವಲಿನಲ್ಲಿ ಕೊಂಕಣ ಬಾರಕೂರು, ಉತ್ತರದಲ್ಲಿ ಸಾವಿಮಲೆ (ಸೊಂಡೂರು) ಮೇರೆಯಾಗಿದ್ದ ರಾಜ್ಯವನ್ನಾಳುತ್ತಿದ್ದನು. ವಿಷ್ಣುವರ್ಧನನ ಶಾಸನಗಳನ್ನು ವಿಮರ್ಶಿಸಿದರೆ ಸುಮಾರು ಶೇಕಡ ೬೦ರಷ್ಟು ಶಿವದೇವಾಲಯಗಳಿಗೂ, ೨೦ರಷ್ಟು ವಿಷ್ಣುದೇವಾಲಯಗಳಿಗೂ, ೨೦ರಷ್ಟು ಜೈನ ಬಸದಿಗಳಿಗೂ ದಾನಗಳನ್ನು ಕೊಟ್ಟಂತೆ ಕಂಡುಬರುತ್ತದೆ. ಆದ್ದರಿಂದ ಇವನು ಕೇವಲ

ವೈಷ್ಣವಾಭಿಮಾನಿಯೆಂದು ಹೇಳಲು ಅವಕಾಶವಿಲ್ಲ. ಅವನ ಪಿರಿಯರಸಿಯಾದ ಶಾಂತಲೆ, ಆಪ್ತ ದಂಡನಾಯಕರಾದ ಗಂಗರಾಜ, ಬೊಪ್ಪ, ಹುಳ್ಳ, ಪುಣಿಸಮಯ್ಯ ಮುಂತಾದವರು ಜೈನರೇ ಆಗಿದ್ದರು. ಬೇಲೂರಿನ ಚೆನ್ನಕೇಶವ ದೇವಾಲಯದ ಶಾಸನದಲ್ಲಿ ಶಿವಕೇಶವರ ಸ್ತೋತ್ರ ಆರಂಭದಲ್ಲಿ ಕಂಡುಬರುತ್ತದೆ. ಇವನ ಕಾಲದಲ್ಲಿ ನಿರ್ಮಿತವಾದ ಮುಖ್ಯ ದೇವಾಲಯಗಳು : ದೊಡ್ಡಗದ್ದವಳ್ಳಿಯ ಶ್ರೀ ಲಕ್ಷ್ಮೀ ದೇವಾಲಯ, ಬೇಲೂರು ಚೆನ್ನಕೇಶವ (೧೧೧೭) ಮತ್ತು ಕಪ್ಪೆಚೆನ್ನಿಗ, ತಳಕಾಡಿನ ಕೀರ್ತಿನಾರಾಯಣ (೧೧೧೭), ಮರಳೆಯ ಕೇಶವ ಮತ್ತು ಸಿದ್ಧೇಶ್ವರ (೧೧೩೦), ಶ್ರವಣಬೆಳಗೊಳದ ಗೊಮ್ಮಟೇಶ್ವರ " ಸುತ್ತಾಲಯ ", ಹಳೇಬೀಡಿನ ಪಾರ್ಶ್ವನಾಥ ಬಸದಿ (೧೧೩೩), ಶಿವಗಂಗೆಯ ಗಂಗಾಧರೇಶ್ವರ, ಶ್ರವಣಬೆಳಗೊಳದ ಸವತಿ ಗಂಧವಾರಣ ಬಸದಿ, ಜಿನನಾಥಪುರದ ಬಸದಿ, ಕಂಬದಹಳ್ಳಿಯ ಶಾಂತೀಶ್ವರ ಬಸದಿ, ಈಶಪುರದ ರಾಮೇಶ್ವರ, ಗ್ರಾಮದ ಧರ್ಮೇಶ್ವರ, ಬಮ್ಮಲೇಶ್ವರ, ನಾಗಮಂಗಲದ ಶಂಕರನಾರಾಯಣ, ಬಿಂಡಿಗನವಲೆ ಗೋವಿಂದವಾಡಿ ದೇವಾಲಯಗಳು.

ಒಂದನೆಯ ನರಸಿಂಹ(೧೧೪೨-೧೧೭೩)ನ ಕಾಲದಲ್ಲಿ ಹಳೆಯ ಬೀಡಿನ ಹೊಯ್ಸಳೇಶ್ವರ, ಚೋಳಸಮುದ್ರದ ತ್ರಿಕೂಟಬಸದಿ (೧೧೪೫), ಹೊನ್ನಾವರದ ಕೇಶವ (೧೧೪೯), ಧರ್ಮೇಶ್ವರದ ಕೇಶವ (೧೧೬೨), ಹುಲ್ಲೆಕೆರೆ ಕೇಶವ (೧೧೬೩), ತೆಂಗಿನಗಟ್ಟದ ಹೊಯ್ಸಳೇಶ್ವರ (೨), ಆನೆಕೊಂಡದ ಈಶ್ವರ, ನಾಗಮಂಗಲದ ಕೇಶವ, ಕಿಕ್ಕೇರಿಯ ಬ್ರಹ್ಮೇಶ್ವರ (೧೧೭೧), ಕೋರಮಂಗಲದ ಬೂಚೇಶ್ವರ (೧೧೭೩), ಶಿವಗಂಗೆಯ ಗಂಗಾಧರೇಶ್ವರ ಮಂಡಪ ಮುಂತಾದುವು ನಿರ್ಮಿತವಾದವು.

ಅನಂತರ ಇಮ್ಮಡಿ ಬಲ್ಲಾಳನ ಆಳಿಕೆಯಲ್ಲಿ (೧೧೭೩–೧೨೨೦) ಹೊಯ್ಸಳ ರೀತಿಯು ಅತ್ಯುಚ್ಚಸ್ಥಿತಿಯನ್ನು ಪಡೆಯಿತೆಂದು ಹೇಳಬಹುದು. ಬಲ್ಲಾಳನು ಬೇಲೂರಿನ ಚೆನ್ನಕೇಶವ ಮತ್ತು ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯಗಳನ್ನು ವಿಶೇಷವಾಗಿ ವಿಸ್ತರಿಸಿ ಚಿತ್ರಪಟ್ಟಿಕೆಗಳಿಂದ ಅಲಂಕರಿಸಿದನು. ಸುಮಾರು ಅರ್ಧ ಶತಮಾನದ ಆಳಿಕೆಯಲ್ಲಿ ಬಲ್ಲಾಳನು ಯಾದವ ಭಿಲ್ಲಮನನ್ನು ಸೋಲಿಸಿ ಚಕ್ರವರ್ತಿ ಬಿರುದು

ಗಳನ್ನು ಧರಿಸಿ ಹೊಯ್ಸಳರ ಸ್ವಾತಂತ್ರ್ಯವನ್ನು ಘೋಷಿಸಿದನು. ಹೊಯ್ಸಳ ರಾಜ್ಯವು ಮಲಪ್ರಭಾ ನದಿಯವರೆಗೆ ವಿಸ್ತರಿಸಿತು. ದಕ್ಷಿಣದಲ್ಲಿ ಹೊಯ್ಸಳರು ಚೋಳದೇಶವನ್ನಾಕ್ರಮಿಸಿ ಕಾವೇರಿ ಹತ್ತಿರ ಕಣ್ಣಾನೂರೆಂಬ ರಾಜಧಾನಿಯನ್ನು ಸ್ಥಾಪಿಸಿದರು. ಚೋಳ ಎರಡನೆಯ ಮತ್ತು ಮೂರನೆಯ ರಾಜರಾಜ ಮತ್ತು ರಾಜೇಂದ್ರರು ಹೊಯ್ಸಳರನ್ನು ಆಶ್ರಯಿಸಿದರು. ತಮಿಳುನಾಡಿನಲ್ಲಿ ಇಮ್ಮಡಿ ಬಲ್ಲಾಳನಿಂದ ಮೂರನೆಯ ಬಲ್ಲಾಳನವರೆಗೆ ಹೊಯ್ಸಳರ ಪ್ರಭಾವವು ಕಂಡುಬರುತ್ತದೆ. ಬಲ್ಲಾಳನ ಕಾಲದಲ್ಲಿ ಅಕ್ಕನಬಸದಿ (ಶ್ರವಣಬೆಳಗೊಳ), ಅಮೃತೇಶ್ವರ, ಹೆಬ್ಬಳಲು ಸಿಂಗೇಶ್ವರ (೧೨೦೦), ಶಾಂತಿನಾಥ ಬಸದಿ, ಮಾವತ್ತನಹಳ್ಳಿಯ ಮಹಾಲಿಂಗೇಶ್ವರ, ಚಟ್ಟನಹಳ್ಳಿಯ (ಚಟ್ಚಟ್ಟಹಳ್ಳಿ) ಚಟ್ಟೇಶ್ವರ, ಬಂದಣಿಕೆಯ ತ್ರಿಮೂರ್ತಿ ಮತ್ತು ಶಾಂತಿನಾಥ, ಹಿರೇಮಗಳೂರಿನ ಕೋದಂಡರಾಮ, ಕೊಡಕಣಿಯ ಸಿದ್ಧೇಶ್ವರ, ಹುಳಿಯರ ಮಲ್ಲೇಶ್ವರ, ಬೇಲೂರಿನ ಸಂಕೇಶ್ವರ ಮತ್ತು ಆಂಡಾಳ್, ಅಂಗಡಿಯ ಕೇಶವ, ಹೆರಗು ಕೀರ್ತಿನಾರಾಯಣ (೧೨೧೮), ಹಳೇಬೀಡು ಕೇದಾರೇಶ್ವರ (೧೨೧೯) ಮತ್ತು ವೀರಭದ್ರ (೧೨೨೦), ಅರಸೀಕೆರೆ ಈಶ್ವರ ಮತ್ತು ಸಹಸ್ರಕೂಟ ಬಸದಿ, ನಂದಿತಾವರೆಯ ಈಶ್ವರ, ಗದಗಿನ ಸರಸ್ವತಿ ಮತ್ತು ವೀರನಾರಾಯಣ, ಇತ್ಯಾದಿ ದೇವಾಲಯಗಳು ನಿರ್ಮಿತವಾದವು.

ಇಮ್ಮಡಿ ನರಸಿಂಹನ ಕಾಲದಲ್ಲಿ (೧೨೨೦–೧೨೩೫) ಹರಿಹರದ ಹರಿಹರೇಶ್ವರ, ಬೆಳ್ಳೂರಿನ ಮೂಲಸಂಗೇಶ್ವರ (೧೨೨೪), ಹೆಗ್ಗೆರೆಯ ಕಲ್ಲೇಶ್ವರ ಮತ್ತು ಗಳಗೇಶ್ವರ, ಹಾರ್ನಹಳ್ಳಿಯ ಸೋಮೇಶ್ವರ ಮತ್ತು ಕೇಶವ, ಬಸರಾಳಿನ ಮಲ್ಲಿಕಾರ್ಜುನ, ಭದ್ರಾವತಿಯ ಲಕ್ಷ್ಮೀನರಸಿಂಹ ದೇವಾಲಯಗಳೂ, ಸೋಮೇಶ್ವರ(೧೨೩೫–೧೨೫೪)ನ ಕಾಲದಲ್ಲಿ ನುಗ್ಗಿಹಳ್ಳಿ, ಜಾವಗಲ್ ಮತ್ತು ಹೊಸಹೊಳಲಿನ ಲಕ್ಷ್ಮೀನಾರಾಯಣ, ತಂಡಗ ಮತ್ತು ಅರಳಗುಪ್ಪೆಯ ಕೇಶವ, ಬೂದನೂರಿನ ಈಶ್ವರ ಮತ್ತು ಪದ್ಮನಾಭ, ಹುಲಿಕಲ್ಲು ಮಲ್ಲೇಶ್ವರ, ಗೋವಿಂದನ ಹಳ್ಳಿಯ ಪಂಚಲಿಂಗ, ನಾಗಲಪುರದ ಕೇಶವ ಮತ್ತು ಕೇದಾರೇಶ್ವರ ದೇವಾಲಯಗಳೂ, ತಮಿಳುನಾಡಿನಲ್ಲಿ ಕಣ್ಣಾನೂರು ಮತ್ತು ಜಂಬುಕೇಶ್ವರದಲ್ಲಿ ಪೊಯ್ಸಳೇಶ್ವರ

ದೇವಾಲಯ ನಿರ್ಮಿತವಾಗಿ, ಇಮ್ಮಡಿ ಬಲ್ಲಾಳ ಮತ್ತು ಪದ್ಮಲಾ, ಒಂದನೆಯ ನರಸಿಂಹ ಮತ್ತು ಸೋಮಲಾದೇವಿ ಭಕ್ತವಿಗ್ರಹಗಳು ತಮಿಳು ನಾಡಿನಲ್ಲಿ ಸ್ಥಾಪಿತವಾದವು. ಸೋಮೇಶ್ವರನು ಪಂಡರಾಪುರದ ವಿಠ್ಠಲ ದೇವಾಲಯುವನ್ನು ಜೀರ್ಣೋದ್ಧಾರಮಾಡಿದನು.

ಮೂರನೆಯ ನರಸಿಂಹನ ಕಾಲದಲ್ಲಿ (೧೨೫೪–೧೨೯೧) ಹೊಯ್ಸಳ ರಾಜ್ಯವು ಎರಡು ಭಾಗವಾಗಿ ಕನ್ನಡ ದೇಶವನ್ನು ನರಸಿಂಹನೂ, ತಮಿಳು ನಾಡನ್ನು ವೀರರಾಮನಾಥನೂ ಆಳುತ್ತಿದ್ದರು. ನರಸಿಂಹನ ಆಳಿಕೆಯಲ್ಲಿ ಸೋಮನಾಥಪುರದ ಕೇಶವ, ಪಂಚಲಿಂಗ ದೇವಾಲಯಗಳೂ, ಹರಿಹರದ ಪೂರ್ವಭಾಗವೂ ಸೋಮದಂಡನಾಯಕನಿಂದ ನಿರ್ಮಿತವಾದವು. ತುರುವೆ ಕೆರೆ ಕೇಶವ ಮತ್ತು ಮೂಲ ಸಂಕೇಶ, ಸೆಟ್ಟಿಕೆರೆ ಯೋಗಮಾಧವ, ಬೆಳ್ಳೂರು ಮಾಧವರಾಯ, ಹೊಳೆನರಸೀಪುರದ ಲಕ್ಷ್ಮೀನಾರಾಯಣ, ವಿಘ್ನಸಂತೆಯ ಲಕ್ಷ್ಮೀನಾರಾಯಣ ಮತ್ತು ಬಾಲಲಿಂಗ, ಬೆಳವಾಡಿ, ದೇವರಹಳ್ಳಿ, ರಾಮನಾಥಪುರ ದೇವಾಲಯಗಳೂ ಕಟ್ಟಲ್ಪಟ್ಟವು.

ಹೊಯ್ಸಳ ವಂಶದ ಕೊನೆಯ ಪ್ರಸಿದ್ಧ ರಾಜನಾದ ಮುಮ್ಮಡಿ ಬಲ್ಲಾಳನು (೧೨೯೧–೧೩೪೨) ಆಳಿಕೆಯ ಮೊದಲಲ್ಲಿ ಹೊಯ್ಸಳ ಸಾಮ್ರಾಜ್ಯದ ಕನ್ನಡ ತಮಿಳು ಪ್ರಾಂತಗಳನ್ನು ಒಟ್ಟುಗೂಡಿಸುವುದರಲ್ಲೂ ಅನಂತರ ಮಲ್ಲಿಕಾಫರ್, ಮಹಮ್ಮದ್‌ಬಿನ್ ತುಗ್ಲಖ್ ಮತ್ತು ಮಧುರೈ ಸುಲ್ತಾನರನ್ನು ಎದುರಿಸುವುದರಲ್ಲೂ ನಿರತನಾಗಿದ್ದನು. ಅಂತೆಯೇ ದೇವಗಿರಿ ಯಾದವ, ಕಂಪಿಲಿ ರಾಮನಾಥ, ಓರುಗಲ್ಲಿನ ಪ್ರತಾಪರುದ್ರ ಮತ್ತು ಪಾಂಡ್ಯರೊಡನೆಯೂ ಹೋರಾಡುತ್ತಿದ್ದನು. ಅರುಣಸಮುದ್ರ ಬಲ್ಲಾಳಪಟ್ಟಣ(ತಿರುವಣ್ಣಾಮಲೈ)ವನ್ನು ರಾಜಧಾನಿ ಮಾಡಿಕೊಂಡನು. ಕ್ರಿಸ್ತ ಶಕ ೧೩೧೦–೧೧ರಲ್ಲಿ ಮಲ್ಲಿಕಾಫರನು ದ್ವಾರ ಸಮುದ್ರಕ್ಕೆ ಮುತ್ತಿಗೆ ಹಾಕಿದಾಗ ಬಲ್ಲಾಳನು ಅವನಿಗೆ ಅಪಾರವಾದ ದ್ರವ್ಯವನ್ನು ಕೊಟ್ಟು ಪಾಂಡ್ಯರಮೇಲೆ ಕಳುಹಿಸಿದನೆಂದೂ, ಮಲ್ಲಿಕಾಫರನು ಡಿಲ್ಲಿಗೆ ಹಿಂತಿರುಗಿದಾಗ ತನ್ನ ಮಗನಾದ ನಾಲ್ಕನೆಯ ಬಲ್ಲಾಳನನ್ನು ಮಲ್ಲಿಕಾಫರನೊಡನೆ ಅಲಾಉದ್ದೀನ್ ಖಿಲ್ಜಿಯ ದರ್ಬಾರಿಗೆ ಕಳುಹಿಸಿದ ನೆಂದೂ ಮುಸ್ಲಿಮ್ ಚರಿತ್ರಕಾರರಾದ ಅಮೀರ್ ಖುಸ್ರು ಮತ್ತು

ಈಶಾಮಿ ಹೇಳುವರು. ಬಲ್ಲಾಳನು ರಾಜಧಾನಿಯನ್ನು ಪುನಃ ಜೀರ್ಣೋದ್ಧಾರಮಾಡಿ ಪುರಪ್ರವೇಶ ಮಾಡಿದನು. ಮುಸ್ಲಿಮರು ದೋರಸಮುದ್ರದ ಹೊರಭಾಗದಲ್ಲಿದ್ದ ಕೆಲವು ದೇವಾಲಯಗಳನ್ನು ನಾಶಪಡಿಸಿದರೂ ಬೇಲೂರು ಹಳೇಬೀಡು ಸೋಮನಾಥಪುರ ದೇವಾಲಯಗಳಿಗೆ ಹಾನಿಯಾಗಲಿಲ್ಲವೆಂದು ಕಂಡುಬರುತ್ತದೆ. ಅಲ್ಲಿನ ಶಾಸನಗಳಿಂದ ಹೊಯ್ಸಳರ ಅನಂತರವೂ ಪೂಜೆಗಳು ನಡೆಯುತ್ತಿದ್ದವೆಂದು ತಿಳಿದುಬರುವುದು. ವಿಜಯನಗರ ಸಾಮ್ರಾಜ್ಯದ ಆರಂಭದಲ್ಲಿ ದ್ರಾವಿಡ ರೀತಿಯು ಹೊಯ್ಸಳ ರೀತಿಯೊಡನೆ ಮಿಳನವಾಯಿತೆಂದು ವಿದ್ಯಾಶಂಕರ ದೇವಾಲಯ (ಶೃಂಗೇರಿ), ಹಂಪಿಯ ಹೇಮಕೂಟದ ದೇವಾಲಯಗಳು, ಹದಿನೈದನೆಯ ಶತಮಾನಕ್ಕೆ ಹಿಂದೆಯೇ ಆರಂಭಿಸಲ್ಪಟ್ಟ ಹಂಪಿ ವಿಠ್ಠಲ ದೇವಾಲಯಗಳಿಂದ ಕಂಡುಬರುತ್ತದೆ. ಸುಮಾರು ಕ್ರಿಸ್ತ ಶಕ ೧೩೦೦ಕ್ಕೆ ಶುದ್ಧ ಚಾಳುಕ್ಯ-ಹೊಯ್ಸಳ ರೀತಿಯು ಕೊನೆಗೊಂಡಿತೆಂದು ನಿಶ್ಚಯಿಸಬಹುದು.

ದೇವಾಲಯಗಳೇ ಅಲ್ಲದೆ ಹೊಯ್ಸಳರ ಕಾಲದ ಅರಮನೆಗಳೇ ಮುಂತಾದ ಕಟ್ಟಡಗಳು ವಿಶೇಷವಾಗಿದ್ದಿರಬೇಕು. ಬೇಲೂರು, ಹಳೇಬೀಡು, ಬಂಕಾಪುರ, ಲೊಕ್ಕಿಗುಂಡಿ, ವಿರೂಪಾಕ್ಷಪುರ, ಬೇತಮಂಗಲ, ತಲಕಾಡು, ಕುಂದಾಣಿ, ತಿರುವಣ್ಣಾಮಲೈ, ಕಣ್ಣಾನೂರು ಪ್ರಸಿದ್ಧ ಪಟ್ಟಣಗಳಾಗಿದ್ದವು. ಆದರೆ ನಗರನಿರ್ಮಾಣ, ಸಾಮಾನ್ಯ ಜನರ ಮನೆಗಳು, ರಾಜಕೀಯ ಕಟ್ಟಡಗಳು—ಎಲ್ಲವೂ ನಾಶವಾದಂತೆ ಕಂಡುಬರುತ್ತದೆ. ಹೆಚ್ಚಾಗಿ ಭೂಶೋಧನೆ ನಡೆದರೆ ಕೆಲವು ಕುರುಹುಗಳು ಕಂಡುಬರಬಹುದು. ಅದುವರೆಗೆ **ಹೊಯ್ಸಳ ವಾಸ್ತುಶಿಲ್ಪ** ಎಂದರೆ ದೇವಾಲಯಗಳನ್ನೇ ಗಣಿಸಬೇಕಾಗುವುದು.

೩. ಚಾಳುಕ್ಯ ಶಿಲ್ಪ (Chalukyan Architecture): ಚಾಳುಕ್ಯ-ಹೊಯ್ಸಳ ರೀತಿಯನ್ನು ಶಿಲ್ಪಶಾಸ್ತ್ರಗಳ "ವೇಸರ" ಪದ್ಧತಿಯೆಂದು ಕರೆಯಲಾಗಿದೆ. ಆದರೆ ಉತ್ತರದ "ನಾಗರ", ದಕ್ಷಿಣದ "ದ್ರಾವಿಡ" ರೀತಿಗಳ ಕೆಲವು ಲಕ್ಷಣಗಳು ಬಾದಾಮಿ ಚಾಳುಕ್ಯರ ಕಾಲದಲ್ಲೇ ಕಂಡುಬರುತ್ತವೆ. ಶಿಖರ ನಿರ್ಮಾಣದಲ್ಲಿ ಈ ವ್ಯತ್ಯಾಸಗಳಿವೆ. ಬೊಂಬುಗಳನ್ನು ಭೂಮಿಯಲ್ಲಿ ನಟ್ಟು, ಅವುಗಳ ಕೊನೆಗಳನ್ನು ಬಗ್ಗಿಸಿ ಕಟ್ಟಿದರೆ ಉತ್ತರ

ಭಾರತ ರೀತಿಯ ಶಿಖರಗಳಾಗುತ್ತವೆ. ಚಪ್ಪಟೆ ಕಲ್ಲುಗಳ ಮಂಡಪದ ಮೇಲೆ ಮೆಟ್ಟಲು ಮೆಟ್ಟಲಾಗಿ ಅಂತಸ್ತುಗಳನ್ನು ಕಟ್ಟಿದರೆ ದಕ್ಷಿಣ ರೀತಿಯ ಶಿಖರವುಂಟಾಗುತ್ತದೆ. ಗುಹಾಲಯಗಳಲ್ಲಿಯೂ ಬೊಂಬು ಮರಕೆಲಸದ ರೀತಿಯನ್ನೆ ಅನುಸರಿಸಿ ಕಲ್ಲಿನಲ್ಲಿ ಮೇಲ್ಛಾವಣಿಗಳನ್ನು ಮಾಡಿರುವುದು ಸ್ಪಷ್ಟವಾಗಿದೆ. ಅಂತೆಯೇ ಸ್ತಂಭಗಳ ನಿರ್ಮಾಣದಲ್ಲೂ ಮರದ ಕಂಬಗಳನ್ನನುಸರಿಸಿರುವರು. ಬಡಗಿಯನ್ನು ರೂವಾರಿಯು ಅನುಸರಿಸಿರುವನು. ಆದುದರಿಂದ ಚಾಳುಕ್ಯ–ಹೊಯ್ಸಳ ಶಿಲ್ಪದಲ್ಲಿ 'ಎಂಜಿನೀರ್'ನ ಕೌಶಲ್ಯಕ್ಕಿಂತ ಬಡಗಿ ಮತ್ತು ಸುವರ್ಣಕಾರರ ಕೈವಾಡವೇ ಹೆಚ್ಚಾಗಿದೆ. ದ್ರಾವಿಡ ದೇವಾಲಯಗಳಲ್ಲಿ ವಿಶಾಲವಾದ ಪ್ರದೇಶವನ್ನು ಆವರಿಸುವಂತೆ ಕಣಶಿಲೆ(Granite)ಯನ್ನುಪಯೋಗಿಸಿ ಬೃಹದಾಕಾರದ ಗೋಪುರಗಳನ್ನು ಹೆಚ್ಚಾಗಿ ನಿರ್ಮಿಸಲು ಸಾಧ್ಯವಾಯಿತು. ಚಾಳುಕ್ಯ–ಹೊಯ್ಸಳ ರೀತಿಯಲ್ಲಿ ಅಲಂಕರಣೆ ಮುಖ್ಯವಾದುದರಿಂದ ಮೃದುವಾಗಿರುವ ಬಳಪದ ಕಲ್ಲನ್ನು ಉಪಯೋಗಿಸಿ ಸೂಕ್ಷ್ಮವಾದ ಕೆತ್ತನೆ ಕೆಲಸ ಮಾಡಿರುವರು. ಆದರೆ ದೇವಾಲಯಗಳು ದ್ರಾವಿಡ ದೇವಾಲಯಗಳಷ್ಟು ಎತ್ತರವಿಲ್ಲ. ವೈಶಾಲ್ಯಪಡೆಯಬೇಕಾದರೆ ಹತ್ತಿರ ಹತ್ತಿರ ಸ್ತಂಭಗಳನ್ನು ಸ್ಥಾಪಿಸಿ ಅಂಕಣಗಳನ್ನು ಮಾಡಿ ಮಂಡಪಗಳನ್ನು ಸೇರಿಸಬೇಕಾಯಿತು. ಇದರಿಂದ ಕೆತ್ತನೆ ಕೆಲಸಕ್ಕೆ ಹೆಚ್ಚು ಅವಕಾಶವಾದರೂ ಗಾಳಿ ಬೆಳಕಿಗೆ ಅಡಚಣೆಯಾಗಿ ಕೆಲವು ದೇವಾಲಯಗಳಲ್ಲಿ ಕಲ್ಲಿನ ಜಾಲಂದ್ರಗಳನ್ನು ಸೇರಿಸಬೇಕಾಯಿತು.

ಸುಮಾರು ಏಳು ಎಂಟನೆಯ ಶತಮಾನಗಳ ಐಹೊಳೆ ಪಟ್ಟದಕಲ್ ದೇವಾಲಯಗಳಲ್ಲಿ ಗುಹಾಲಯಗಳಿಂದ ಚಾಳುಕ್ಯ ರೀತಿಯು ಹೇಗೆ ಬಂದಿತೆಂದು ಕಾಣಬಹುದು. ಗುಹೆಗಳ ಅಂಡಾಕಾರ (apsided) ತಲವಿನ್ಯಾಸವು ದುರ್ಗಿಗುಡಿಯಲ್ಲಿ ಕಂಡುಬರುತ್ತದೆ. ದೇವಾಲಯದ ಎರಡು ಮುಖ್ಯಭಾಗಗಳು ವಿಮಾನ ಮತ್ತು ಮಂಡಪ. ವಿಮಾನಕ್ಕೆ ಕಳಶಾಕಾರದ ಅಗ್ರಭಾಗವುಳ್ಳ ಮೆಟ್ಟಲುಮೆಟ್ಟಲು ಪಿರಮಿಡ್ ಆಕಾರದ ಶಿಖರವಿರುತ್ತದೆ. ಮುಂದಿನ ಮಂಡಪಕ್ಕೆ ಚಪ್ಪಟೆಯಾದ ಮೇಲ್ಛಾವಣಿ ಇರುತ್ತದೆ. ಬರುತ್ತ ವಿಮಾನದ ವಿಭಾಗಗಳಲ್ಲಿ ಅಲಂಕಾರವಾಗಿ ಒಂದರಮೇಲೊಂದು

ಗವಾಕ್ಷಗಳನ್ನು ಮಾಡಿ ಲಂಬಮಾನಕ್ಕೆ ಪ್ರಾಧಾನ್ಯ ಕೊಡಲಾಯಿತು. ಇದು ನಾಗರ ರೀತಿಯ ಲಕ್ಷಣ. ಮತ್ತು ಚಾಳುಕ್ಯ ಶಿಲ್ಪದಲ್ಲಿ ದ್ರಾವಿಡದಲ್ಲಿದ್ದಂತೆ ಸಾಂಧಾರ ಪ್ರದಕ್ಷಿಣಮಾರ್ಗ ಗರ್ಭಗುಡಿಯ ಸುತ್ತಲೂ ಇರುವುದಿಲ್ಲ. ಮಂಡಪಗಳು ವಿಮಾನಕ್ಕಿಂತ ವಿಸ್ತಾರವಾಗಿರುತ್ತವೆ. ಗೋಡೆಗಳನ್ನು ನಾಗರ ರೀತಿಯಂತೆ 'ರಥ'ಗಳಾಗಿ ವಿಂಗಡಿಸಿ ಅವುಗಳ ಮಧ್ಯೆ ದ್ರಾವಿಡ ರೀತಿಯ ಸಣ್ಣ ಕಂಬಗಳನ್ನು ಮಾಡಲಾಗಿದೆ. ಇವುಗಳ ಅಂತರದಲ್ಲಿ ಗವಾಕ್ಷಗಳನ್ನು ಮಾಡಿ ದೊಡ್ಡ ವಿಗ್ರಹಗಳನ್ನಿಟ್ಟಿರುವುದರಿಂದ ಶಿಲ್ಪಕೌಶಲ್ಯವನ್ನು ಪ್ರದರ್ಶಿಸುವುದಕ್ಕೆ ಅವಕಾಶವಾಯಿತು.

ತಲವಿನ್ಯಾಸದಲ್ಲಿ ಅಂಡಾಕಾರವು ಚತುರಸ್ರಾಕಾರವಾಗುತ್ತದೆ. ಈ ಚತುರಸ್ರವನ್ನು ಒಂದೇ ಅಕ್ಷದಮೇಲೆ ತಿರುಗಿಸುತ್ತ ಒಂದೊಂದು ಕೋಣವನ್ನು ಗುರ್ತುಮಾಡುತ್ತ ಬಂದರೆ ನಕ್ಷತ್ರಾಕಾರದ ತಲವಿನ್ಯಾಸವು ಬರುತ್ತದೆ. ಚಾಳುಕ್ಯರ ಕಾಲದ ಕಟ್ಟಡಗಳಲ್ಲಿ ಡಂಬಳದ ದೊಡ್ಡ ಬಸವದೇವಾಲಯದಲ್ಲಿ ಮಾತ್ರ ಈ ನಕ್ಷತ್ರಾಕಾರದ ತಲವಿನ್ಯಾಸವಿದೆ. ಹೊಯ್ಸಳ ಕಾಲದಲ್ಲಿ ಇದು ಸಾಮಾನ್ಯವಾಗಿ ಕಂಡುಬರುತ್ತದೆ.

ಸ್ತಂಭಗಳನ್ನು ಯಂತ್ರದಮೇಲೆ ತಿರುಗಿಸಿ ಹೊಳಪನ್ನು ಕೊಟ್ಟು ವಿಶೇಷಾಲಂಕಾರಮಾಡಿರುವರು. ಈ ಸ್ತಂಭಗಳು ಮೇಲ್ಛಾವಣಿಯನ್ನು ಅಂಕಣಗಳಾಗಿ ವಿಭಜಿಸಿ ಭುವನೇಶ್ವರಿಯನ್ನು ಧರಿಸಿರುವುವು. ಬಳಪದ ಕಲ್ಲಿನ ಈ ಸ್ತಂಭಗಳು ದ್ರಾವಿಡ ರೀತಿಯ ಕಣಶಿಲೆಯ ಸ್ತಂಭಗಳಂತೆ ಎತ್ತರವಿಲ್ಲದಿದ್ದರೂ ಕೌಶಲ್ಯಕ್ಕೆ ಅವಕಾಶಕೊಟ್ಟಿವೆ. ಕುಕ್ಕನೂರಿನ ಕಲ್ಲೇಶ್ವರ ಗುಡಿಯಲ್ಲಿ ದ್ರಾವಿಡ ರೀತಿಯ ವಿಮಾನ ಚಾಳುಕ್ಯ ರೀತಿಗೆ ತಿರುಗುತ್ತಿರುವುದನ್ನು ನೋಡಬಹುದು. ಹೊರಗಿನ ಗೋಡೆಗಳಲ್ಲಿ ಸಣ್ಣ ಕಂಬಗಳು ಶಿಖರವನ್ನು ಸೂಚಿಸುತ್ತ ಶಿಖರದ ಅಂತಸ್ತುಗಳಿಗೆ ಊರ್ಧ್ವ ಆಕಾರವನ್ನು ಕೊಟ್ಟಿವೆ; ಮತ್ತು ಶಿಖರದ ಒಂದೊಂದು ಅಂತಸ್ತಿನಲ್ಲೂ ಮಧ್ಯದಲ್ಲಿ ಗವಾಕ್ಷವಿದ್ದು ಎರಡು ಬಗ್ಗು ಇರುವ ಕಲಶವನ್ನು ನಿರ್ದೇಶಿಸುವುದರಿಂದ ಎತ್ತರವೆಂಬ ಭಾವವು ಬರುತ್ತದೆ.

ಮುಂದಿನ ಬೆಳವಣಿಗೆಯನ್ನು ಗದಗಿಗೆ ಪೂರ್ವದಲ್ಲಿರುವ ಲಕ್ಕುಂಡಿ (ಲೊಕ್ಕಿಗುಂಡಿ)ಯ ಜೈನದೇವಾಲಯದಲ್ಲಿ ಕಾಣಬಹುದು. ಮರಳು

ಕಲ್ಲನ್ನು ಬಿಟ್ಟು ಬಳಪದಕಲ್ಲನ್ನು ಉಪಯೋಗಿಸಿರುವುದರಿಂದ ವಿಸ್ತಾರವು ಕಡಿಮೆ ಆದರೂ ಅಲಂಕರಣೆಗೆ ಹೆಚ್ಚು ಅವಕಾಶವಾಯಿತು. ವಿಮಾನ, ಅರ್ಧಮಂಡಪ, ಮಂಡಪ ಮತ್ತು ತೆರೆದಿರುವ ರಂಗಮಂಡಪಗಳು ಮೊದಲು ಕಂಡುಬರುತ್ತವೆ ಎಂದು ಹೇಳಬಹುದು. ಮತ್ತು ಮೇಲ್ಚಾವಣಿಯು ತೆರೆದಿರುವ ಮಂಡಪದ ಸುತ್ತಲೂ ಮುಂದಕ್ಕೆ ಚಾಚಿಕೊಂಡಿದೆ. ಚೌಡದಾಮಪುರದ ಮುಕ್ತೇಶ್ವರ, ಹಾವೇರಿ ಸಿದ್ಧೇಶ್ವರ, ಹರಳಹಳ್ಳಿಯ ಸೋಮೇಶ್ವರ, ನೀರಲ್ಗಿಯ ಸಿದ್ಧರಾಮೇಶ್ವರ ದೇವಾಲಯಗಳು ಬೆಳವಣಿಗೆಯ ಕಾಲಕ್ಕೆ ಸೇರಿವೆ. ಚೌಡದಾಮಪುರದ ದೇವಾಲಯದಲ್ಲಿ ಮಂಡಪದ ಕಂಬಗಳ ಮಧ್ಯೆ ಜಗಲಿ ಅಥವಾ ಕಕ್ಷಾಸನಗಳಿವೆ. ಗೋಡೆಗಳ ಹೊರ ಭಾಗಗಳಲ್ಲಿ ಮತ್ತು ಜಗತಿಯಲ್ಲಿ ಅಲಂಕರಣಗಳು ಹೆಚ್ಚಾಗಿವೆ. ಶಿಖರವು ಚಾಳುಕ್ಯರೂಪವನ್ನು ಪಡೆದಿದೆ. ಕಳಶವು ಶಿಖರದಮೇಲೆ ಎರಡು ಬಗ್ಗಿನಿಂದ ಮತ್ತು ಮಧ್ಯದಲ್ಲಿ ಪಟ್ಟಿಕೆಯಿಂದ ಕೂಡಿದೆ. ಹರಳಹಳ್ಳಿಯ ಸೋಮೇಶ್ವರ ದೇವಾಲಯದಲ್ಲಿ ತ್ರಿಕೂಟಗಳಿವೆ. ಲಕ್ಕುಂಡಿಯ ಕಾಶೀವಿಶ್ವೇಶ್ವರ ದ್ವಿಕೂಟ ದೇವಾಲಯವಾಗಿದೆ. ಪಶ್ಚಿಮ ಮತ್ತು ಪೂರ್ವಗಳಲ್ಲಿ ಎರಡು ಗರ್ಭಗೃಹಗಳಿವೆ. ಮೆಟ್ಟಲು ಮೆಟ್ಟಲಾದ ಶಿಖರಗಳು ಕೆತ್ತನೆ ಕೆಲಸದಿಂದ ಊರ್ಧ್ವಭಾವವನ್ನು ಸೂಚಿಸುತ್ತವೆ. ಜಗತಿಯಲ್ಲೂ ಗೋಡೆಗಳ ಪಟ್ಟಿಕೆಗಳಲ್ಲೂ ಆಳವಾಗಿ ಕೆತ್ತಿರುವುದರಿಂದ ನೆರಳು–ಬೆಳಕು ವ್ಯಕ್ತವಾಗಿ ಕಾಶೀವಿಶ್ವೇಶ್ವರ ದೇವಾಲಯ ಪ್ರಖ್ಯಾತವಾಗಿದೆ. ಕ್ರಿ. ಶ. ೧೧೧೨ರಲ್ಲಿ ನಿರ್ಮಿತವಾದ ಇಟ್ಟಗಿಯ ಮಹಾದೇವ ದೇವಾಲಯವನ್ನು 'ದೇವಾಲಯ ಚಕ್ರವರ್ತಿ' ಎಂದು ಕರೆಯಲಾಗಿದೆ. ಹಳೆಯಬೀಡಿನ ದೇವಾಲಯದ ಅನಂತರ ಇದೇ ಅತ್ಯಂತ ಸುಂದರವೆಂದು ಕೌಸೆನ್ಸ್ ಹೇಳುವನು. ಎತ್ತರವಾದ ಜಗತಿಯ ಮೇಲೆ ದೇವಾಲಯದ ಗರ್ಭಗೃಹ, ಅರ್ಧಮಂಡಪ ಮತ್ತು ೬೮ ಕಂಬಗಳುಳ್ಳ ರಂಗಮಂಡಪ ನಿರ್ಮಿತವಾಗಿವೆ. ಮಧ್ಯದಲ್ಲಿರುವ ನಾಲ್ಕು ಕಂಬಗಳು, ಮೇಲಿನ ಭುವನೇಶ್ವರಿ, ದ್ವಾರಬಂಧ, ಗೋಡೆಯ ಹೊರಭಾಗ, ಶಿಖರ ಎಲ್ಲವೂ ಅತ್ಯಂತ ಸೂಕ್ಷ್ಮವಾದ ಕೆತ್ತನೆಗಳಿಂದ ಕೂಡಿವೆ. ಇದರ ಶಿಖರ ಹೊಯ್ಸಳ ಶಿಖರವನ್ನು ಹೋಲುವುದು. ಕುರುವತ್ತಿಯ ಮಲ್ಲಿಕಾರ್ಜುನ ದೇವಾಲಯದ ಕಂಬಗಳ ಮೇಲೆ

ಮೇಲ್ಚಾವಣಿಯನ್ನು ಧರಿಸಿರುವ ಮದನಿಕೆ ವಿಗ್ರಹಗಳಿವೆ. ಗದಗಿನ ಸರಸ್ವತಿ ದೇವಾಲಯದಲ್ಲಿ ಪ್ರದಕ್ಷಿಣಮಾರ್ಗ ಮುಚ್ಚಲ್ಪಟ್ಟಿದೆ. ಚಾಳುಕ್ಯ-ಹೊಯ್ಸಳ ಶಿಲ್ಪದಲ್ಲಿ ಇದೊಂದೇ ಸಾಂಧಾರ ಪ್ರದಕ್ಷಿಣವಾಗಿದೆ. ಗದಗಿನ ಸೋಮೇಶ್ವರ ಗುಡಿಯ ಜಗತಿ, ಗೋಡೆಗಳ ವಿಭಾಗಗಳು ಮತ್ತು ವಿಗ್ರಹ ಗಳು ಚಾಳುಕ್ಯ ಮತ್ತು ಹೊಯ್ಸಳ ರೀತಿಗಳ ಸಂಪರ್ಕವನ್ನು ಸೂಚಿಸು ತ್ತವೆ. ಚಾಳುಕ್ಯಶಿಲ್ಪದಲ್ಲಿ ನಕ್ಷತ್ರಾಕಾರದ ತಲವಿನ್ಯಾಸ ಕಂಡುಬಂದಿರು ವುದು ಡಂಬಳದ ದೊಡ್ಡ ಬಸವ ದೇವಾಲಯದಲ್ಲಿ ಮಾತ್ರ. ಹೊಯ್ಸಳ ರೀತಿಯಲ್ಲಿ ನಕ್ಷತ್ರಾಕಾರದ ತಲವಿನ್ಯಾಸ ಗರ್ಭಗುಡಿಗೆ ಮಾತ್ರ ಇರುತ್ತದೆ. ಮುಂದಿನ ಮಂಡಪ ಚತುರಸ್ರ ಅಥವಾ ದೀರ್ಘಚತುರಸ್ರವಾಗಿರುತ್ತದೆ. ಡಂಬಳದಲ್ಲಿ ಗರ್ಭಗುಡಿ ಮಂಡಪಗಳೆರಡು ನಕ್ಷತ್ರಾಕಾರವಾಗಿವೆ. ಗರ್ಭ ಗುಡಿ ಆರು ಶಾಖೆಗಳುಳ್ಳ (೨೪ ಕೋಣ), ಮಂಡಪವು ಎಂಟು ಶಾಖೆ ಗಳುಳ್ಳ (೩೨ ಕೋಣ) ನಕ್ಷತ್ರವಿನ್ಯಾಸದ ಮೇಲೆ ರಚಿತವಾಗಿರುವುದ ರಿಂದ ಎರಡೂ ಸೇರಿ ೮ ಆಕಾರ ಬಂದಿದೆ. ಆದರೆ ಪೂರ್ವದಲ್ಲೂ ದಕ್ಷಿಣ ದಲ್ಲೂ ದ್ವಾರಗಳಿರುವುದರಿಂದ ಗರ್ಭಗೃಹಕ್ಕೆ ೧೯ ಮಂಡಪಕ್ಕೆ ೧೯ ಕೋಣ ಗಳು ಮಾತ್ರ ಕಂಡುಬರುತ್ತವೆ. ಈ ಕೋಣಗಳ ರೇಖೆಗಳನ್ನೇ ಅನು ಸರಿಸಿ ಜಗತಿ, ದೇವಾಲಯದ ಗೋಡೆ, ಅದರಮೇಲಿನ ಶಿಖರ ಎಲ್ಲವೂ ರಚಿತವಾಗಿರುವುದರಿಂದ ಊರ್ಧ್ವತ್ವ, ನೆರಳು-ಬೆಳಕು, ಗೋಪುರದ ಮೆಟ್ಟಲು, ಶಿಖರದಮೇಲಿನ ಆಮಲಕ, ಇತ್ಯಾದಿ ಹೊಯ್ಸಳ ಲಕ್ಷಣ ಗಳೆಲ್ಲ ಇಲ್ಲಿ ಸೂಚಿತವಾಗಿವೆ ಎಂದು ಹೇಳಬಹುದು.

೪. **ಹೊಯ್ಸಳ ದೇವಾಲಯಗಳ ವಿಭಾಗಗಳು** (Parts of Hoysala Temple) : ಹೊಯ್ಸಳ ರೀತಿಗೆ ಸೇರಿಸಬಹುದಾದ ಸುಮಾರು ಎಂಬತ್ತು ಮುಖ್ಯ ದೇವಾಲಯಗಳನ್ನು ಗರ್ಭಗುಡಿಗಳ ಸಂಖ್ಯೆಗೆ ಅನುಸಾರವಾಗಿ ಏಕ, ದ್ವಿ, ತ್ರಿ, ಚತುಷ್ ಮತ್ತು ಪಂಚಕೂಟಗಳೆಂದು ವಿಭಾಗಿಸಬಹುದು. ದೊಡ್ಡಗದ್ದವಳ್ಳಿಯ ಲಕ್ಷ್ಮೀದೇವಾಲಯ ಚತು ಷ್ಕೂಟವಾಗಿಯೂ ಸೋಮನಾಥಪುರದ ಪಂಚಲಿಂಗ, ಕಂಬದಹಳ್ಳಿಯ ಪಂಚಕೂಟ ಬಸದಿ ಪಂಚಕೂಟವಾಗಿಯೂ ಇವೆ. ತ್ರಿಕೂಟಾಚಲಗಳೇ ವಿಶೇಷವಾಗಿವೆ. ಮರಳೆ ಮತ್ತು ಮೊಸಳೆಯಲ್ಲಿ ಪ್ರತ್ಯೇಕವಾದ ಜವಳಿ

ದೇವಾಲಯಗಳಿವೆ. ಶಿಖರವೇ ಹೊಯ್ಸಳ ರೀತಿಗೆ ಮುಖ್ಯವಾದುದರಿಂದ ಗರ್ಭಗುಡಿಯ ಮೇಲಿನ ಶಿಖರ ಅಥವಾ ಕೂಟವನ್ನು ಗಣಿಸಲಾಗಿದೆ. ದೇಹವೇ ದೇವಾಲಯವೆಂದೂ, ದೇವಾಲಯವನ್ನು ದೇವರ ದೇಹವೆಂದೂ ಭಾವಿಸಿರುವುದರಿಂದ ಪ್ರಾಸಾದಪುರುಷನ ಭಾಗಗಳಿಗೆ ಮನುಷ್ಯದೇಹದ ಅಂಗಗಳ ಹೆಸರನ್ನು ಇಡಲಾಗಿದೆ. ದೇವಾಲಯವು ಪವಿತ್ರವಾದ ತೀರ್ಥವಾದುದರಿಂದ ಸ್ನಾನಕ್ಕಾಗಿ ಕೊಳ (ಕಲ್ಯಾಣಿ), ಚೈತ್ಯವೃಕ್ಷ, ಬಲಿಪೀಠ, ಧ್ವಜಸ್ತಂಭ, ಯಾಗಶಾಲೆ, ಪ್ರಾಕಾರದಲ್ಲಿ ಆವರಣದೇವತೆಗಳು, ಕಲ್ಯಾಣಮಂಡಪ, ನಾಟ್ಯಶಾಲೆ, ಭಂಡಾರ, ಧರ್ಮಾಸನ, ವಿದ್ಯಾಲಯ, ವೈದ್ಯಾಲಯ ಮುಂತಾದುವನ್ನು ನಿರ್ಮಿಸಬೇಕು. ಭಾರತೀಯ ಸಂಸ್ಕೃತಿಯಲ್ಲಿ ದೇವಾಲಯಗಳ ಪಾತ್ರವು ಬಹು ಮುಖ್ಯವಾದುದು. ಆಹಾರ, ಅಭಯ, ಭೈಷಜ್ಯ, ಶಾಸ್ತ್ರದಾನಗಳಿಗೆ ದೇವಾಲಯವೇ ಕೇಂದ್ರವಾಗಿದ್ದಿತು. ಶಿಲ್ಪ, ಚಿತ್ರಕಲೆ, ಸಂಗೀತ, ನಾಟ್ಯ, ಇತ್ಯಾದಿ ಕಲೆಗಳನ್ನು ಪ್ರೋತ್ಸಾಹಿಸುವ ಸ್ಥಳವಾಗಿದ್ದಿತು. ಸಮಾಜದ ಉದ್ಧಾರಕ್ಕಾಗಿ ಜ್ಞಾನಪ್ರಸಾರಮಾಡುವ, ಆರ್ಥಿಕ ದೃಷ್ಟಿಯಿಂದ ಜನರಿಗೆ ಸಹಾಯಮಾಡುವ, ರಾಜಕೀಯ ದೃಷ್ಟಿಯಿಂದ ನ್ಯಾಯವನ್ನು ತೀರ್ಮಾನಿಸುವ, ಶರಣಾಗತರಿಗೆ ಅಭಯವನ್ನು ಕೊಡುವ ಕೆಲಸವನ್ನು ದೇವಾಲಯಗಳು ಮಾಡುತ್ತಿದ್ದವು. ಉಪಪನ್ನರಿಂದ ಧರ್ಮದ ಹೆಸರಿನಲ್ಲಿ ದ್ರವ್ಯವನ್ನು ಸಂಗ್ರಹಿಸಿ ಸಾರ್ವಜನಿಕರಿಗೆ ಹಂಚುವ ಕಾರ್ಯವನ್ನು ದೇವಾಲಯಗಳು ಮಾಡುತ್ತಿದ್ದವು. ವ್ಯಕ್ತಿಯ ಮತ್ತು ಸಮಾಜದ ಸರ್ವತೋಮುಖವಾದ ಅಭ್ಯುದಯಕ್ಕಾಗಿ ಭಾರತದ ದೇವಾಲಯಗಳು ನಿರ್ಮಿತವಾಗಿದ್ದವು.

ಹೊಯ್ಸಳ ದೇವಾಲಯಗಳಲ್ಲಿ ವಿಗ್ರಹಗಳನ್ನು ಯಾವ ಶಿಲ್ಪಶಾಸ್ತ್ರವನ್ನನುಸರಿಸಿ ಶಿಲ್ಪಿಗಳು ಮಾಡಿದರೆಂಬುದನ್ನು ನಿರ್ಧರಿಸುವುದು ಕಷ್ಟವಾಗಿದೆ. ಹೊಯ್ಸಳರ ಆಶ್ರಯದಲ್ಲಿ ಸಂಸ್ಕೃತದಲ್ಲಾಗಲಿ ಕನ್ನಡದಲ್ಲಾಗಲಿ ಯಾವ ಶಿಲ್ಪಗ್ರಂಥವೂ ರಚಿತವಾದಂತೆ ಕಂಡುಬರುವುದಿಲ್ಲ. ವರಾಹಮಿಹಿರನ ಬೃಹತ್ಸಂಹಿತಾ, ಮಾನಸಾರ, ಅಭಿಲಷಿತಾರ್ಥ ಚಿಂತಾಮಣಿ, ಇತ್ಯಾದಿ ಗ್ರಂಥಗಳಲ್ಲಿ ಕಂಡುಬರುವ ಅಂಶಗಳಿಗಿಂತ ಭಿನ್ನವಾದ ಕೆಲವು ಅಂಶಗಳು ಹೊಯ್ಸಳರ ಕಟ್ಟಡಗಳಲ್ಲಿ ಕಂಡು

ಬರುತ್ತವೆ. ವೈಷ್ಣವ ದೇವಾಲಯಗಳಿಗೆ ವೈಖಾನಸ ಅಥವಾ ಪಾಂಚರಾತ್ರ ಆಗಮಗಳು, ಶೈವ ದೇವಾಲಯಗಳಿಗೆ ಕಾರಣಾಗಮ ಈಶಾನ ಗುರುಪದ್ಧತಿ ಇತ್ಯಾದಿಗಳು, ಜೈನ ಬಸದಿಗಳಿಗೆ ಜೈನಪುರಾಣಗಳು ಆಗಮಗಳು ಆಧಾರಗಳೆಂದು ಹೇಳಲು ಸಾಧ್ಯವಿಲ್ಲ. ದೇವಾಲಯದ ಮುಖ್ಯಾಂಶಗಳಲ್ಲಿ ಜೈನ, ವೈಷ್ಣವ, ಶೈವಭೇದಗಳು ಕಂಡುಬರುವುದಿಲ್ಲ. ಹೊಯ್ಸಳರ ಕಾಲದ ಕನ್ನಡ ಸಾಹಿತ್ಯದಲ್ಲೂ ಕೂಡ ಪ್ರಾಚೀನ ಸಂಸ್ಕೃತ ಗ್ರಂಥಗಳಲ್ಲಿ ಕಂಡುಬರುವ ಶಿಲ್ಪಶಾಸ್ತ್ರದ ಪರಿಭಾಷಾ ಪದಗಳೇ ಉಪಯೋಗಿಸಲ್ಪಟ್ಟವೆ. ಆದರೂ ರೂವಾರಿಗಳು ತಾಲಮಾನ ವಿಗ್ರಹಲಕ್ಷಣ ಇತ್ಯಾದಿ ಅಂಶಗಳಲ್ಲಿ ತಮ್ಮಲ್ಲಿ ಪ್ರಚಾರವಾಗಿದ್ದ ಯಾವುದೋ ಶಿಲ್ಪ ಶಾಸ್ತ್ರವನ್ನನುಸರಿಸಿದ್ದಂತೆ ಕಂಡುಬರುತ್ತದೆ.

ಹೊಯ್ಸಳ ದೇವಾಲಯಗಳ ಕಾಲವನ್ನು ಶಾಸನಾಧಾರಗಳಿಲ್ಲದಿದ್ದರೆ ಕೇವಲ ಶಿಲ್ಪದಿಂದಲೆ ನಿರ್ಧರಿಸಲಾಗದು. ರಾಜರಾದ ವಿಷ್ಣುವರ್ಧನ ಬಲ್ಲಾಳ ಮುಂತಾದವರು ತಾವೇ ನಿರ್ಮಿಸಿದ ರಾಜಧಾನಿಗಳಲ್ಲಿದ್ದ ದೇವಾಲಯಗಳಿಗೆ ವಿಶೇಷ ಗಮನಕೊಡುತ್ತಿದ್ದರು. ದೇಶದೇಶಗಳಿಂದ ಪ್ರಸಿದ್ಧ ಶಿಲ್ಪಿಗಳನ್ನು ಕರೆಸಿ ಧನವ್ಯಯಮಾಡಿ ದೇವಾಲಯಗಳನ್ನು ಅಲಂಕರಿಸುತ್ತಿದ್ದರು. ಅಂತೆಯೇ ಅಮಿತಯ್ಯ, ಪೋಲಾಳ್ವದಂಡನಾಥ, ಸೋಮ ಮುಂತಾದ ಉಪಪನ್ನರಾದ ಅಧಿಕಾರಿಗಳು ಹಣ ವೆಚ್ಚಮಾಡಲು ಸಮರ್ಥರಾಗಿದ್ದರು. ಸಾಮಾನ್ಯಜನರು ಕೂಡ ತಮ್ಮ ಯೋಗ್ಯತೆಗೆ ತಕ್ಕಂತೆ ಸಾಧಾರಣ ರೀತಿಯಲ್ಲಿ ಗುಡಿಗಳನ್ನು ಕಟ್ಟಿಸುತ್ತಿದ್ದರು. ಆದ್ದರಿಂದ ಸಾಮಾನ್ಯ ಶಿಲ್ಪದ ಕಟ್ಟಡಗಳು ಪ್ರಾಚೀನವೆಂದೂ ಹೆಚ್ಚು ಕಲಾಕೌಶಲ್ಯವನ್ನು ತೋರಿಸುವ ದೇವಾಲಯಗಳು ಅನಂತರ ಬೆಳೆದವೆಂದೂ ತೀರ್ಮಾನಿಸುವುದು ಕಷ್ಟ. ಶಿಲ್ಪಿಗಳು ಕನ್ನಡ ದೇಶದವರೇ ಆಗಿದ್ದಂತೆ ಕಂಡುಬರುತ್ತದೆ. ಜಕ್ಕಣಾಚಾರಿ ವಿಷಯವಾದ ಕಥೆ ಪ್ರಚಾರದಲ್ಲಿದ್ದರೂ ಇದಕ್ಕೆ ಶಾಸನಾಧಾರವಿಲ್ಲ. ಭಾರತದ ಮತ್ತಾವ ಭಾಗದ ದೇವಾಲಯಗಳಲ್ಲೂ ಶಿಲ್ಪಿಗಳ ಹೆಸರು ಕಂಡುಬರುವುದಿಲ್ಲ. ಹೊಯ್ಸಳ ಕಟ್ಟಡಗಳಲ್ಲಾದರೆ ಶಿಲ್ಪಿಗಳ ಹೆಸರುಗಳು ಅವರ ಬಿರುದುಗಳು ಕಂಡುಬರುತ್ತವೆ. ಈ ಶಿಲ್ಪಿಗಳ ಹೆಸರುಗಳಲ್ಲಿ ಜಕ್ಕಣ ಡೆಂಕಣ ಕಂಡು

ಬರುವುದಿಲ್ಲ. ಆಚಾರಿ ಎಂಬುದಕ್ಕಿಂತ ಓಜ ರೂವಾರಿ ಎಂಬ ಪದಗಳೇ ಹೆಚ್ಚಾಗಿವೆ. ಈ ಮುಖ್ಯ ಶಿಲ್ಪಿಗಳ ನೇತೃತ್ವದಲ್ಲಿ ಅನೇಕ ಸಾಮಾನ್ಯ ಶಿಲ್ಪಿಗಳು ಕೆಲಸಮಾಡುತ್ತಿದ್ದರು. ಕಲ್ಲಿನ ಕಂಬಗಳಿಗೆ ಹೊಳಪನ್ನು ಕೊಡಲು ಕಂಬವನ್ನು ಚಕ್ರದಮೇಲಿಟ್ಟು ತಿರುಗಿಸುತ್ತ ಉಳಿಯಿಂದ ಕೊರೆಯುತ್ತಿದ್ದರು. ಈ ಭಾರವಾದ ಕಂಬವನ್ನು ತಿರುಗಿಸಲು ಎತ್ತುಗಳನ್ನುಪಯೋಗಿಸುತ್ತಿದ್ದರು. ಮುಖ್ಯ ಸೂತ್ರಧಾರನು ದೇವಾಲಯದ ವಿನ್ಯಾಸವನ್ನು ಬರೆದು ಪ್ರತಿಯೊಂದು ಭಾಗದ ಅಳತೆಯನ್ನೂ ನಿರ್ಧರಿಸಿದ ಮೇಲೆ ಕಲ್ಲುಗಳನ್ನು ಕಡೆದು ಜೋಡಿಸಲು ಓಜರು ಕಲ್ಲಿನ ಮೇಲೆ ಯಾವ ದಿಕ್ಕಿನ ಯಾವ ಭಾಗ ಎಂದು ಗುರ್ತಿಸಲು ತಮ್ಮ ಚಿಹ್ನೆಗಳನ್ನು ಹಾಕುತ್ತಿದ್ದರು. ಈ ಗುರ್ತುಗಳನ್ನು ಈಗಲೂ ನೋಡಬಹುದು. ಅಡಿಪಾಯ ಭದ್ರವಾದಮೇಲೆ ಅಂಗಳದಲ್ಲಿ ಸುಮಾರು ಐದು ಅಡಿ ಎತ್ತರದ ಜಗತಿಯನ್ನು ಹಾಕುತ್ತಿದ್ದರು. ಇದರ ಮಧ್ಯದಲ್ಲಿ ದಪ್ಪವಾದ ಗೋಡೆಗಳನ್ನು ಜಲ್ಲಿಕಲ್ಲು ಮುಂತಾದವುಗಳಿಂದ ತುಂಬಿ ಗೋಡೆಯ ಹೊರಭಾಗಕ್ಕೆ ಕೆತ್ತನೆ ಕೆಲಸ ಮಾಡಿದ ಶಿಲಾಫಲಕಗಳನ್ನು ತಾಮ್ರದ ಶಲಾಕೆಗಳಿಂದ ಅದುಕಿಸುತ್ತಿದ್ದರು. ಇಂತಹ ತಾಮ್ರ ಮತ್ತು ಕಬ್ಬಿಣ ಶಲಾಕೆಗಳನ್ನು ಬೇಲೂರು ಹಳೇಬೀಡು ದೇವಸ್ಥಾನಗಳಲ್ಲಿ ನೋಡಬಹುದು. ಗೋಡೆಗಳ ದಪ್ಪದಿಂದ ಒಳಭಾಗವು ಸಂಕುಚಿತವಾದಂತೆ ಕಂಡುಬರುತ್ತದೆ. ಹೊಯ್ಸಳ ದೇವಾಲಯದಲ್ಲಿ ಸುಕನಾಸಿಯ ಮೇಲೆ ಸಳನು ಹುಲಿಯನ್ನು ಕೊಲ್ಲುತ್ತಿರುವ ವಿಗ್ರಹವಿರುತ್ತದೆ.

ಹೊಯ್ಸಳ ದೇವಾಲಯಗಳನ್ನು ವಿವಿಧ ಭಾಗಗಳಾಗಿ ವಿಂಗಡಿಸಿ ವೈಶಿಷ್ಟ್ಯವನ್ನು ತಿಳಿಯಬಹುದು. ಕಟ್ಟಡದ ಆಕಾರ ಮತ್ತು ತಲ ವಿನ್ಯಾಸ, ಗೋಡೆಗಳು, ಶಿಖರದ ರಚನೆ ಮತ್ತು ಕಂಬಗಳು ಮುಖ್ಯವಾದವು. ವಿಶಾಲವಾದ ಅಂಗಳದಲ್ಲಿ ಪ್ರಾಕಾರದ ಗೋಡೆಯ ಹತ್ತಿರ ಮಂಡಪಗಳಿದ್ದು ಮಧ್ಯದಲ್ಲಿ ದೇವಾಲಯವಿರುತ್ತದೆ. ಇದರಲ್ಲಿ ಗರ್ಭಗೃಹ, ಸುಕನಾಸಿ ಅಥವಾ ಅರ್ಧಮಂಡಪ, ಸ್ತಂಭಗಳಿರುವ ಮುಖಮಂಡಪ, ಕೆಲವು ಸಲ ರಂಗಮಂಡಪಗಳು ಜಗತಿಯಮೇಲೆ ಇರುತ್ತವೆ. ಎರಡು, ಮೂರು, ನಾಲ್ಕು, ಐದು ಗರ್ಭಗುಡಿಗಳಿಗಾಗಿ ತಲವಿನ್ಯಾಸವನ್ನು

ವಿಸ್ತರಿಸಿರುವರು. ಅಥವಾ ಜವಳಿ ದೇವಾಲಯಗಳನ್ನು ಒಂದೇ ಪ್ರಮಾಣದಲ್ಲಿ ಒಂದೇ ಅಂಗಳದಲ್ಲಿ ಪ್ರತ್ಯೇಕವಾಗಿ ಕಟ್ಟಿರುವರು.

(೧) **ನಕ್ಷತ್ರಾಕಾರದ ತಲವಿನ್ಯಾಸ:** ಪಶ್ಚಿಮ ಭಾರತದ ಕೆಲವು ದೇವಾಲಯಗಳಲ್ಲಿ ರಾಜಪುಟಾಣ, ಪಾಟ್ಣ, ಕೋಕಂಥಮ್, ಲೋನಾರ್, ಅಸ್ಸಾಮಿನ ಗೌಹತಿ ಇತ್ಯಾದಿ ಸ್ಥಳಗಳಲ್ಲೂ ನಕ್ಷತ್ರಾಕಾರವು ಕಂಡುಬರುತ್ತದೆ. ಆದರೆ ಇವುಗಳಲ್ಲಿ ನಕ್ಷತ್ರರೂಪವನ್ನು ಮುಂದೆ ಚಾಚಿ ಹಿಂದಕ್ಕೆ ಎಳೆದುಕೊಂಡ ಸಮಕೋಣ ಮತ್ತು ಬಗ್ಗುಗಳಿಂದ ಮಾಡಿದಂತೆ ಕಂಡುಬರುತ್ತದೆ. ಹೊಯ್ಸಳ ಶಿಲ್ಪದ ಅಷ್ಟಭದ್ರ ತಲವಿನ್ಯಾಸ ಬೇರೆ ರೀತಿಯಲ್ಲಿ ಹುಟ್ಟಿತೆಂದು ಹೇಳಬಹುದು. ಸಮಚತುರಸ್ರಗಳಿಗೆ ಒಂದೇ ಕೇಂದ್ರವಿರುವಂತೆ ಆದರೆ ಭಾಜಕರೇಖೆಗಳು ಬೇರೆ ಬೇರೆ ಅಂಶ(ಡಿಗ್ರಿ)ಗಳಲ್ಲಿರುವಂತೆ, ಎಷ್ಟು ಕೋಣಗಳು ಆವಶ್ಯಕವೊ ಅದಕ್ಕೆ ತಕ್ಕಂತೆ ಅಂಶಗಳನ್ನು ಬದಲಾಯಿಸಿಕೊಂಡು ಗುರುತುಮಾಡಿಕೊಂಡರೆ ನಕ್ಷತ್ರರೂಪವು ಬರುವುದು. ಎಂದರೆ ಒಂದು ಸಮಚತುರಸ್ರವನ್ನು ಅಕ್ಷದ ಮೇಲೆ ತಿರುಗಿಸುತ್ತ ಬಂದರೆ ಎಷ್ಟು ಕೋಣಗಳ ನಕ್ಷತ್ರ ಬೇಕೊ ಅಷ್ಟನ್ನು ವೃತ್ತದಲ್ಲಿ ತರಬಹುದು. ನಾಲ್ಕು, ಆರು, ಎಂಟು, ಹನ್ನೆರಡು, ಹದಿನಾರು ಶಾಖೆಗಳುಳ್ಳ ನಕ್ಷತ್ರಾಕಾರದ ತಲವಿನ್ಯಾಸಗಳು ಕಂಡುಬರುತ್ತವೆ.

(೨) **ಜಗತಿ:** ಈ ತಲವಿನ್ಯಾಸದ ಮೂಲೆಗಳನ್ನೇ ಅನುಸರಿಸಿ ಸುಮಾರು ಐದು ಅಡಿ ಎತ್ತರದ ಜಗಲಿ ಇರುತ್ತದೆ. ಇದು ಅಗಲವಾಗಿದ್ದು ಮಧ್ಯದಲ್ಲಿ ದೇವಾಲಯವನ್ನು ಹೊಂದಿರುತ್ತದೆ. ಸಾಮಾನ್ಯವಾಗಿ ಹೊಯ್ಸಳ ದೇವಾಲಯದಲ್ಲಿ ಒಳಗೆ ಪ್ರದಕ್ಷಿಣ ಮಾರ್ಗವಿರುವುದಿಲ್ಲ. ಪ್ರದಕ್ಷಿಣೆಗಾಗಿ ಜಗತಿಯನ್ನೇ ಉಪಯೋಗಿಸಲಾಗಿದೆ. ಈ ಜಗತಿಯು ಮೆಟ್ಟುಮೆಟ್ಟಿಲಾಗಿ ಕೆತ್ತನೆ ಕೆಲಸದಿಂದ ಅಲಂಕೃತವಾಗಿರುತ್ತದೆ. ಮತ್ತು ಮುಖ್ಯ ದಿಕ್ಕುಗಳಲ್ಲಿ ದೇವತಾ ವಿಗ್ರಹಗಳನ್ನು ಹೊಂದಿರುವ ಗೋಪುರಗಳಿರುತ್ತವೆ. ದೇವಾಲಯದ ದ್ವಾರಕ್ಕೆ ಎದುರಾಗಿ ಜಗತಿಯನ್ನು ಹತ್ತಲು ಮೆಟ್ಟಲುಗಳಿರುತ್ತವೆ.

(೩) **ಕುಡ್ಯಗಳು:** ನಕ್ಷತ್ರಾಕಾರದ ಜಗತಿಯನ್ನನುಸರಿಸಿ ಗೋಡೆಗಳು ಇರುವುದರಿಂದ ಎತ್ತರವಾಗಿದ್ದಂತೆ ಕಂಡುಬರುವುದಿಲ್ಲ. ಆದರೂ ಗೋಡೆ

ಗಳನ್ನು ಪಟ್ಟಿಕೆಗಳಾಗಿ ವಿಂಗಡಿಸಿರುವುದರಿಂದ ಊರ್ಧ್ವತ್ವದ ಭಾವನೆ ಬರುತ್ತದೆ. ಗರ್ಭಗೃಹದ ಗೋಡೆಯನ್ನು ಮೂರು ಭಾಗವಾಗಿಯೂ ಮಂಡಪದ ಗೋಡೆಯನ್ನು ಎರಡು ಭಾಗವಾಗಿಯೂ ಮಾಡಿರುವರು. ಎರಡನ್ನೂ ವಿಶಾಲವಾದ ಮೇಲ್ಚಾವಣಿಯಿಂದ ಸಂಬಂಧಿಸಿರುವರು. ಗೋಡೆಗಳ ಕೆಳಭಾಗವನ್ನು ಪಟ್ಟಿಕೆಗಳಾಗಿ ವಿಂಗಡಿಸಿ ಒಂದೊಂದು ಪಟ್ಟಿಕೆಯಲ್ಲೂ ಆನೆ ಕುದುರೆ ಲತಾತೋರಣ ಕೀರ್ತಿಮುಖಗಳ ಸಾಲು ಗಳಿರುತ್ತವೆ. ಇವುಗಳ ಮೇಲೆ ಕಣ್ಣಿಗೆ ನೇರವಾಗಿ ಮಹಾಭಾರತ ರಾಮಾಯಣ ಭಾಗವತ ಪೌರಾಣಿಕ ಕಥೆಗಳು ಚಿತ್ರಿತವಾಗಿವೆ. ಇವುಗಳ ಮೇಲೆ ಯಾಳಿ ಹಂಸ ಮುಂತಾದ ಚಿತ್ರಗಳಿರುತ್ತವೆ. ಇವುಗಳ ಮೇಲೆ ದೊಡ್ಡ ವಿಗ್ರಹಗಳೂ ಜಾಲಂಧ್ರಗಳೂ ಇವೆ.

ಗರ್ಭಗುಡಿಯ ಗೋಡೆಗಳು ಮೂರು ಭಾಗಗಳಾಗಿದ್ದು ಸಣ್ಣ ಕಂಬಗಳು ಮೇಲಿನ ಭಾಗದಲ್ಲಿ ಮಾತ್ರ ಕಂಡುಬರುತ್ತವೆ. ದ್ರಾವಿಡ ಶಿಲ್ಪದಲ್ಲಿದ್ದಂತೆ ಈ ಸಣ್ಣ ಕಂಬಗಳು ಪ್ರಮುಖವಾಗಿ ಕಂಡುಬರುವುದಿಲ್ಲ. ಮೇಲ್ಚಾವಣಿಯ ಮೇಲಿನ ಮತ್ತು ಕೆಳಗಿನ ಬೋದಿಗೆಗಳ ಮೇಲೆ ಊರ್ಧ್ವಭಾಗವನ್ನು ಸೂಚಿಸಲು ಇರುತ್ತವೆ. ಗೋಡೆಯ ವಿಶಾಲವಾದ ಮಧ್ಯಭಾಗದಲ್ಲಿ ಗವಾಕ್ಷರೂಪವಾದ ಗೂಡುಗಳನ್ನು ಮಾಡಿ ಲತಾ ತೋರಣಗಳ ಕೆಳಗೆ ದೊಡ್ಡ ದೊಡ್ಡ ವಿಗ್ರಹಗಳನ್ನು ಇಟ್ಟಿರುವರು.

(೪) **ಮೇಲ್ಚಾವಣಿ ಮತ್ತು ಶಿಖರ:** ನಕ್ಷತ್ರವಿನ್ಯಾಸವನ್ನೇ ಅನುಸರಿಸಿ ಗರ್ಭಗುಡಿ ಸುಕನಾಸಿ ಮತ್ತು ಮಂಡಪಗಳ ಮೇಲೆ ಒಂದು ಅಥವಾ ಎರಡು ಮೇಲ್ಚಾವಣಿಗಳಿರುತ್ತವೆ. ಮೇಲ್ಚಾವಣಿಯ ಅಂಚು ಗೋಡೆ ಯಿಂದ ಮುಂದಕ್ಕೆ ಚಾಚಿಕೊಂಡು ಮಳೆಯ ನೀರು ಹೋಗುವುದಕ್ಕಾಗಿ ಒಂದು ಅಥವಾ ಎರಡು ಬಗ್ಗನ್ನು ಹೊಂದಿರುತ್ತವೆ. ಗರ್ಭಗುಡಿಯ ಶಿಖರ ಅದೇ ನಕ್ಷತ್ರಾಕಾರವಾಗಿ ಮೆಟ್ಟಲುಮೆಟ್ಟಲಾಗಿ ಮೇಲಕ್ಕೆ ಹೋಗುತ್ತದೆ. ಊರ್ಧ್ವಭಾಗದಲ್ಲಿ ಮೆಟ್ಟಲುಗಳು ಸಣ್ಣದಾಗುತ್ತ ಛತ್ರಾಕಾರದ ಕಲ್ಲಿನಲ್ಲಿ ಕೊನೆಗೊಳ್ಳುತ್ತವೆ. ಶಿಖರದ ಪ್ರತಿಯೊಂದು ಮೆಟ್ಟಲಿನಲ್ಲೂ ಕೀರ್ತಿಮುಖ ದೇವತಾವಿಗ್ರಹ ಲತಾಪಟ್ಟಿಗಳು ಇರುತ್ತವೆ. ಮೇಲಿರುವ ಛತ್ರಾಕಾರದ ಕಲ್ಲಿನ ಮೇಲೆ ಅಮೃತಕಳಶ ಮತ್ತು ಶಲಾಕೆ, ಪ್ರಾಸಾದಪುರುಷ ವಿಗ್ರಹ

ವಿರುತ್ತವೆ. ಶಿಖರದ ಮುಂಭಾಗ ಸುಕನಾಸಿವರೆಗೂ ಬಂದಿದ್ದು ಅದರ ಮೇಲೆ ಸಳನ ವಿಗ್ರಹವಿರುತ್ತದೆ. ಒಟ್ಟಿನಲ್ಲಿ ಶಿಖರವು ಒಂದು ಅಂಡಾಕಾರದ (parabola) ಭಾಗದಂತೆ ಕಂಡುಬರುವುದರಿಂದ ದ್ರಾವಿಡ ಗೋಪುರಗಳಷ್ಟು ಬೃಹತ್ತಾಗಿಲ್ಲದಿದ್ದರೂ ತ್ರಿಕೂಟಾಚಲದ ಮೂರು ಶಿಖರಗಳು ಕಲಾದೃಷ್ಟಿಯಿಂದ ಹೆಚ್ಚು ಆಕರ್ಷಕವಾಗಿವೆ ಎಂದು ಹೇಳಬಹುದು. ಮರಾಮತ್ತು ತತ್ತ್ವಗಳಿಂದ ನೋಡಿದರೆ ಅಷ್ಟು ಭದ್ರವೆಂದು ಕಂಡುಬರುವುದಿಲ್ಲ. ಬೇಲೂರು ದೇವಾಲಯದ ಗೋಪುರ ಅನೇಕ ಸಲ ಜೀರ್ಣೋದ್ಧಾರವಾದಂತೆ ಕಂಡುಬರುತ್ತದೆ.

ಸ್ತಂಭಗಳು ಮತ್ತು ಬೋದಿಗೆ: ಕಂಬಗಳ ಜೋಡಣೆ (Order) ದ್ರಾವಿಡ ರೀತಿಯ ಚತುರಸ್ರ ಬೋದಿಗೆಗಳುಳ್ಳ ಕಂಬಗಳನ್ನನುಸರಿಸಿದೆ. ಆದರೆ ಹೊಯ್ಸಳ ಕಂಬಗಳಿಗೆ 'ಲೇತ್' ಯಂತ್ರದ ಮೇಲೆ ತಿರುಗಿಸಿ ಮಾಡಿರುವುದರಿಂದ ಒಂದು ವಿಶಿಷ್ಟರೂಪ ಬಂದಿದೆ. ಬಳಪದ ಕಲ್ಲಿನ ಉದ್ದವಾದ 'ದಿಮ್ಮಿ'ಗಳನ್ನು ಮೊದಲು ಕೈಯಿಂದ ತಕ್ಕಮಟ್ಟಿಗೆ ಕಡೆದು ಚಕ್ರದಮೇಲಿಟ್ಟು ತಿರುಗಿಸುತ್ತಿದ್ದರು. ಕಂಬವು ತಿರುಗುತ್ತಿರುವಾಗ ಉಳಿಗೆ ತಗಲುವಂತೆ ಮಾಡಿ ಕಂಬದ ವಿವಿಧ ಭಾಗಗಳನ್ನು ವಿಂಗಡಿಸುತ್ತಿದ್ದರು. ಇದರಿಂದ ಕಲ್ಲಿನಮೇಲೆ ಉಂಗುರರೇಖೆಗಳು, ನಕ್ಷತ್ರಾಕಾರದ ಭಾಗಗಳು, ಚತುರಸ್ರ ಫಲಕಗಳು, ಮೇಲ್ಭಾಗದ ಬಾಳೆಯ ಹೂಗೊಂಚಲು ಮುಂತಾದುವನ್ನು ಮಾಡಲು ಸಾಧ್ಯವಾಗುತ್ತಿದ್ದಿತು. ಕಲ್ಲಿನ ಕೆಳಭಾಗವನ್ನು ಹಾಗೆಯೇ ಚತುರಸ್ರವಾಗಿ ಬಿಟ್ಟು ಅನಂತರ ಅದರ ಮೇಲೆ ಕೆತ್ತನೆ ಕೆಲಸ ಮಾಡುತ್ತಿದ್ದರು. ಅದರ ಮೇಲೆ ಕುಂಭ ಅಥವಾ ಗಂಟೆಯ ಆಕಾರದ ಭಾಗ ಎಲ್ಲ ಕಂಬಗಳಲ್ಲಿದ್ದರೂ ಹೊಯ್ಸಳ ಶಿಲ್ಪಿಗಳು ಅದ್ಭುತವಾದ ವೈವಿಧ್ಯವನ್ನು ತೋರಿಸಿರುವರು. ಸ್ತಂಭಗಳಿಗೆ ಕೊಟ್ಟ ಹೊಳಪಿನಿಂದ ಬೆಳಕು ಕನ್ನಡಿಯಿಂದ ಪ್ರತಿಫಲಿಸುವಂತೆ ಕಂಡುಬರುತ್ತದೆ. ಇಂತಹ ಚಕ್ರದ ಮೇಲೆ ತಿರುಗಿಸಿದ ಕಂಬಗಳನ್ನು ತಯಾರಿಸಲು ಅನೇಕ ಜನರು ಶ್ರಮಪಟ್ಟಿರಬೇಕು. ಕಂಬದ ಮೇಲ್ಭಾಗದಲ್ಲಿ ಅದಕ್ಕೂ ಮೇಲ್ಛಾವಣಿಗೂ ಸಂಬಂಧಿಸಿದಂತೆ ದೊಡ್ಡ 'ಮದನಿಕೆ' ವಿಗ್ರಹಗಳು ಬಗ್ಗಿಕೊಂಡು ಕೆಳಗೆ ನೋಡುತ್ತಿರುವಂತೆ ಸೇರಿಸಲ್ಪಟ್ಟಿವೆ.

ಭುವನೇಶ್ವರಿ: ಮಂಡಪದಲ್ಲಿ ಕಂಬಗಳನ್ನು ಜೋಡಿಸಿರುವುದರಲ್ಲಿ ಸಾಮಾನ್ಯವಾಗಿ ಮಧ್ಯದಲ್ಲಿರುವ ನಾಲ್ಕು ಕಂಬಗಳು ಒಂದೇ ರೀತಿಯಲ್ಲಿದ್ದು ಭುವನೇಶ್ವರಿಯನ್ನು ಧರಿಸಿರುವುವು. ಮಂಡಪವನ್ನು ಅಂಕಣಗಳಾಗಿ ವಿಭಾಗಿಸುವಾಗ ಕಂಬಗಳ ಮೇಲೆ ಬರುವ ಚಪ್ಪಟೆ ಕಲ್ಲುಗಳನ್ನು ರೇಖಾಚಿತ್ರ ಬರುವಂತೆ ಹರಡಿರುವರು. ಅಷ್ಟಕೋಣಗಳಲ್ಲಿ ಅಷ್ಟದಿಕ್ಪಾಲಕರು ಇರುವರು. ಅದರ ಮಧ್ಯದಲ್ಲಿ ಕಮಲವನ್ನು ಮುಗುಚಿ ಹಾಕಿದಂತೆ ಭುವನೇಶ್ವರಿ ಇರುವುದು. ಶಿಲ್ಪಿಯು ತನ್ನ ಕೌಶಲವನ್ನೆಲ್ಲ ಇಲ್ಲಿ ತೋರಿಸಲು ಯತ್ನಿಸುವನು. ಕಮಲದ ಕೇಸರ ಮೇಲಿನಿಂದ ಜೋಲಾಡುತ್ತಿದ್ದು ಅದರ ಕೊನೆಯಲ್ಲಿ ನರಸಿಂಹ, ನಟರಾಜ, ಇತ್ಯಾದಿ ವಿಗ್ರಹವನ್ನು ಕೆತ್ತಿರುವರು. ಅದರ ಸುತ್ತಲೂ ದಶಾವತಾರ, ದೇವತಾಗಣಗಳು, ಲತಾಪಟ್ಟಿಕೆ, ಇತ್ಯಾದಿ ಚಿತ್ರಗಳಿರುವುವು. ಕೆಲವು ದೇವಾಲಯಗಳಲ್ಲಿ ಎರಡು ಮೇಲ್ಛಾವಣಿಗಳಿದ್ದು ಇವುಗಳ ನಡುವೆ ದೇವಾಲಯದ ಭಂಡಾರ ಆಭರಣಗಳನ್ನಿಡಲು ಅವಕಾಶ ಮಾಡಿರುವರು.

ಸುಕನಾಸಿ ಅಥವಾ ಅರ್ಧ ಮಂಡಪ: ಗರ್ಭಗುಡಿಗೂ ರಂಗಮಂಡಪಕ್ಕೂ ಮಧ್ಯೆ ಉತ್ಸವ ವಿಗ್ರಹಗಳನ್ನಿಡಲು ಸುಕನಾಸಿ ಇರುತ್ತದೆ. ಹಳೆಯ ದೇವಾಲಯಗಳಲ್ಲಿ ಅರ್ಧಮಂಡಪ ಇರಲಿಲ್ಲ. ಗರ್ಭಗುಡಿಯ ಮುಂದೆಯೇ ಮಂಡಪವಿದ್ದು ಪ್ರೇಕ್ಷಕರು ನೇರವಾಗಿ ಮೂಲವಿಗ್ರಹವನ್ನು ನೋಡಬಹುದಾಗಿದ್ದಿತು. ಆಗಮಗಳ ಪ್ರಭಾವ ಹೆಚ್ಚಾದಂತೆ ಚಲಮೂರ್ತಿಗಾಗಿ ಅರ್ಧಮಂಡಪವನ್ನು ಸೇರಿಸಲಾಯಿತು. ಇದರ ದ್ವಾರಬಂಧದ ಮೇಲೆ ಗಜಲಕ್ಷ್ಮಿ ಮುಂತಾದ ವಿಗ್ರಹಗಳೂ ಪಕ್ಕಗಳಲ್ಲಿ ದ್ವಾರಪಾಲಕರು ತೀರ್ಥವನ್ನು ಸೂಚಿಸುವ ಲತಾಪಟ್ಟಿಕೆಗಳೂ ಇರುವುವು. ಸುಕನಾಸಿಯ ಗೂಡಿನಲ್ಲಿ ಚಲಮೂರ್ತಿಯನ್ನು ಇಟ್ಟಿರುವರು. ಸುಕನಾಸಿಯ ದ್ವಾರದ ಹೊಸಲಿನ ಮೇಲೆ ಭುವನವನ್ನು ಸೂಚಿಸುವುದಕ್ಕೆ, ಮಹಾದ್ವಾರದ ಹೊಸಲಿನಲ್ಲಿದ್ದಂತೆಯೇ ಕಮಲವು ಕೆತ್ತಲ್ಪಟ್ಟಿದೆ. ಶಿವದೇವಾಲಯಗಳಲ್ಲಿ ನಂದಿಯನ್ನು ಈ ಅಂತರಾಳದಲ್ಲಿಟ್ಟಿರುವರು.

ಗರ್ಭಗೃಹ: ವೃತ್ತ ಅಥವಾ ನಕ್ಷತ್ರಾಕಾರದ ತಲವಿನ್ಯಾಸದ ಮೇಲೆ ಚತುರಸ್ರಾಕಾರವಾಗಿ ಗರ್ಭಗುಡಿ ಇರುತ್ತದೆ. ಇದರ ಮಧ್ಯದಲ್ಲಿ

ಪಿಂಡಿಕೆಯನ್ನಿಟ್ಟು ಅದರಮೇಲೆ ಪ್ರಭಾವಳಿ, ಲತಾತೋರಣ, ಕೀರ್ತಿ ಮುಖಗಳ ಮಧ್ಯೆ ಮೂಲಬೇರವನ್ನು ಸ್ಥಾಪಿಸಿರುವರು. ಶಿವಲಿಂಗ ವಾಗಿದ್ದಲ್ಲಿ ಅದರ ಗೋಮುಖ ಉತ್ತರ ಅಥವಾ ಪೂರ್ವಕ್ಕೆ ತಿರುಗಿ ಕೊಂಡಿರಬೇಕು. ಅಭಿಷೇಕದ ಜಲವು ಪೂರ್ವ ಅಥವಾ ಉತ್ತರ ಪ್ರವಣವಾಗಬೇಕೆಂದು ಆಗಮಗಳಲ್ಲಿ ವಿಧಿಸಿದೆ. ಈ ನೀರು ದೇವಾಲಯದ ಹೊರಕ್ಕೆ ಹೋಗಿ ಅಂಗಳದಲ್ಲಿರುವ ತೀರ್ಥದಲ್ಲಿ ಬೀಳುತ್ತದೆ. ಮೂಲ ಬೇರದ ಪಿಂಡಿಕೆ(ಪೀಠ)ಯನ್ನು ಸ್ಥಾಪಿಸುವುದಕ್ಕೆ ಮುಂಚೆ ವಾಸ್ತು ಮಂಡಲದ ಮಧ್ಯಭಾಗವಾದ ಬ್ರಹ್ಮಸ್ಥಾನದಲ್ಲಿ ಬೀಜಾವಾಪನ, ಶಂಕು ಸ್ಥಾಪನ ಮುಂತಾದುವನ್ನು ಮಾಡಿ ಗರ್ಭಗುಡಿಯ ಪೂರ್ವ ಅಥವಾ ಉತ್ತರ ಗೋಡೆಯಲ್ಲೂ ಅಂತೆಯೇ ಬೀಜಾವಾಪನಮಾಡಿ ರಹಸ್ಯವಾಗಿ ಮುಚ್ಚಬೇಕೆಂದು ಆಗಮಗಳಲ್ಲಿ ಹೇಳಿದೆ. ಮೂಲಬೇರದ ಸ್ಥಾಪನೆಯಾದ ಮೇಲೆ ಪ್ರಾಣಪ್ರತಿಷ್ಠಾ ನೇತ್ರೋನ್ಮೀಲನಾದಿಕರ್ಮಗಳನ್ನು ವಿಧಿವತ್ತಾಗಿ ಮಾಡಿದರೆ ಕ್ಷೇತ್ರವು ಜಾಗೃತವಾಗುವುದು. ಮೂಲವಿಗ್ರಹದ ದೃಷ್ಟಿ ಹೊರಗಿರುವ ಬಲಿಪೀಠದ ಮೇಲೆ ಬೀಳುವಂತಿರಬೇಕು.

ಬಲಿಪೀಠ ಮತ್ತು ಧ್ವಜಸ್ತಂಭ: ಇವುಗಳ ಪ್ರಮಾಣವು ಮೂಲ ಬೇರದ ಪ್ರಮಾಣವನ್ನನುಸರಿಸಿರುತ್ತದೆ. ಪ್ರಧಾನ ದೇವತೆಯ ವಾಹನ, ಲಾಂಛನಗಳು, ಪಾದುಕೆಗಳು ಇಲ್ಲಿ ಇರುತ್ತವೆ. ಪರಿವಾರದೇವತೆಗಳಿಗಾಗಿ ನಿರ್ದಿಷ್ಟಸ್ಥಾನವಿರುತ್ತದೆ. ಮಂಡಪದಲ್ಲಿಯೇ ಆಗಲಿ ಹೊರಗಿನ ಅಂಗಳ ದಲ್ಲಿಯೇ ಆಗಲಿ ನಿಯಮಿತ ದಿಕ್ಕುಗಳಲ್ಲಿ ಸ್ಥಾನಮಾಡಿರುವರು. ಅನೇಕ ಪ್ರಾಚೀನ ದೇವಾಲಯಗಳಲ್ಲಿ ದೇವಿಗೆ ಪ್ರತ್ಯೇಕ ದೇವಾಲಯವಿರುವುದಿಲ್ಲ. ಮೂಲವಿಗ್ರಹದ ಹತ್ತಿರವೇ ಸುಕನಾಸಿಗೆ ಸಂಬಂಧಿಸಿದಂತೆ ದೇವೀ ವಿಗ್ರಹವಿರುತ್ತದೆ. ದೇವಾಲಯಗಳು ಬೆಳೆಯುತ್ತ ಬಂದಂತೆ ದೇವಿ, ನಂದಿ, ಹನುಮಂತ, ಗರುಡ, ಗಣೇಶ, ವೀರಭದ್ರ, ಸಪ್ತಮಾತೃಕಾ, ನವಗ್ರಹ, ಇತ್ಯಾದಿ ದೇವಾಲಯಗಳೂ, ಯಾಗಶಾಲೆ ಪಾಕಶಾಲೆ ಮುಂತಾದುವೂ ಸೇರಿಸಲ್ಪಟ್ಟವು. ಕಲ್ಯಾಣಮಂಡಪದಲ್ಲಿ ಸಂಗೀತ ನರ್ತನ ಇತ್ಯಾದಿ ಕುಶಲಕಲಾಪ್ರದರ್ಶನಕ್ಕಾಗಿ ಚಿತ್ರಫಲಕಗಳಿರುವುವು. ಮತ್ತೆ ಕೆಲವು ದೇವಾಲಯಗಳಲ್ಲಿ ಕಲ್ಲಿನ ಕಂಬ ಅಥವಾ ಮೆಟ್ಟಲು ಗಳಿಂದ ಸಂಗೀತದ ಸ್ವರಗಳು ಉದ್ಭವಿಸುವಂತೆ ಮಾಡಿರುವರು.

ಭಾಗ ೨

ಕೆಲವು ಪ್ರಸಿದ್ಧ ಹೊಯ್ಸಳ ದೇವಾಲಯಗಳು

೧. ಬೇಲೂರು : ವೇಲಾಪುರವೆಂದು ಪುರಾಣಪ್ರಸಿದ್ಧವಾದ ಬದರೀ ಅಥವಾ ಯುಗಚೀನದಿಯ ಹತ್ತಿರವಿರುವ ಸ್ಥಳವು ವೇದಪರ್ವತವೆಂದೂ ಮೋಹಿನೀ ಭಸ್ಮಾಸುರ ಕಥೆಯು ಇಲ್ಲಿ ನಡೆಯಿತೆಂದೂ ಸ್ಥಳ ಪುರಾಣಗಳು ಹೇಳುವುವು. ವಿಷ್ಣುರಹಸ್ಯ ಹಾರೀತಸಂಹಿತೆಯ ವೇಲಾಪುರ ಸೌಮ್ಯಕೇಶವ ಮಾಹಾತ್ಮ್ಯದಲ್ಲಿ ಬ್ರಹ್ಮನ ವಿಗ್ರಹವೇ ಇಂದ್ರದ್ಯುಮ್ನ, ವೈವಸ್ವತರಿಗೆ ಪರಂಪರೆಯಾಗಿ ಬಂದಿತೆಂದು ಕಲಿಯುಗದಾರಂಭದವರೆಗು ಚಂದ್ರದ್ರೋಣಪರ್ವತದಲ್ಲಿದ್ದಿತೆಂದೂ ಅನಂತರ ಕೇಶವನು ಶ್ರೀ ರಾಮಾನುಜ ವಿಷ್ಣುವರ್ಧನರಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡನೆಂದೂ ಹೇಳಿದೆ. ಶ್ರೀರಾಮಾನುಜರು ದಾಶರಥಿ ಮೊದಲಿಯಾಂಡಾನನ್ನು ಮೇಲುಕೋಟೆಯಿಂದ ಕಳುಹಿಸಿ ವಿಶ್ವಕರ್ಮನಿಂದ ಏಳು ದಿನಗಳಲ್ಲಿ ನಿರ್ಮಿತವಾದ ದೇವಾಲಯದಲ್ಲಿ ಶಾಲಿವಾಹನ ಶಕ ೧೦೨೧ ಹೇವಿಳಂಬಿ ಚೈತ್ರ ಶುದ್ಧ ಪಂಚಮಿ ಸ್ಥಿರವಾರದಿಂದ ತ್ರಯೋದಶಿವರೆಗೂ ಜಲಾಧಿವಾಸ ಮುಂತಾದ ಕರ್ಮಗಳು ನಡೆದಮೇಲೆ ತ್ರಯೋದಶಿ ಸ್ಥಿರವಾರ ಹಸ್ತನಕ್ಷತ್ರ ವೃದ್ಧಿ ಯೋಗ ಅಭಿಜನ್ಮುಹೂರ್ತದಲ್ಲಿ ಕೇಶವ ಪ್ರತಿಷ್ಠೆ ಮಾಡಿಸಿದರು. ದೇವಾಲಯದ ಸುತ್ತಲು ಭಗವದ್ವೈಭವದ ವೇಲೆಯಂತೆ ನಗರ ನಿರ್ಮಾಣವಾಯಿತು. ಗರುಡನು ಅಮೃತಕಲಶವನ್ನು ಒಯ್ಯುತ್ತಿರುವಾಗ ಒಂದು ಬಿಂದುವು ಕೆಳಕ್ಕೆ ಬಿದ್ದು ವಿಷ್ಣುಸಾಗರವಾಯಿತು. ಪರಶುರಾಮನು ಸಮುದ್ರರಾಜನಿಗೆ ಆಜ್ಞೆಮಾಡಿ ಅಲ್ಲಿ ನೆಲಸುವಂತೆ ಮಾಡಿದುದರಿಂದ ವಿಷ್ಣುಸಮುದ್ರದಲ್ಲಿ ಬಲ್ಮುರಿಶಂಖ ಮುತ್ತು ಮುಂತಾದವು ಉದ್ಭವಿಸುತ್ತವೆ. ವಿಷ್ಣುವರ್ಧನನಿಗೆ ಅನಂತರ ಶಿವನು ಪ್ರತ್ಯಕ್ಷನಾದುದರಿಂದ ಶಂಕರೇಶ್ವರ, ಪಾತಾಳೇಶ್ವರ, ಪಂಚಲಿಂಗೇಶ್ವರ, ಶಿಲಾಮಲ್ಲೇಶ್ವರ, ವಿಷಕಂಠೇಶ್ವರ ದೇವಾಲಯಗಳನ್ನು ಮಾಡಿಸಿದನು. ಚಂದ್ರದ್ರೋಣ ಪರ್ವತದಲ್ಲಿ ಋಷ್ಯಶೃಂಗನ ಕಮಂಡಲುವಿನಲ್ಲಿದ್ದ ಎಲ್ಲ ನದಿಗಳ ಜಲವು ಬದರೀಮರದ ಬುಡದಲ್ಲಿ ಬಿದ್ದುದರಿಂದ ಬದರೀನದಿಯು ಹುಟ್ಟಿತು.



ಬೇಲೂರಿನ ಚೆನ್ನಕೇಶವ ದೇವಾಲಯ
ಮೋಹಿನಿ


ಇದು ವೇಲಾಪುರದ ಪೂರ್ವತೀರ್ಥವಾಯಿತು. ಶ್ರೀ ರಾಮಾನುಜಾಚಾರ್ಯರು ಮೇಲುಕೋಟೆಯನ್ನು ಬಿಟ್ಟು ಶ್ರೀರಂಗಕ್ಕೆ ಹಿಂತಿರುಗುವಾಗ ಬೇಲೂರು ಸೌಮ್ಯಕೇಶವನನ್ನು ಮುವ್ವತ್ತು ದಿನ ಸ್ವಹಸ್ತದಿಂದ ಪೂಜಿಸಿದರೆಂದು ವೇಲಾಪುರದ ಮಾಹಾತ್ಮ್ಯವು ಹೇಳುತ್ತದೆ.

ಶಾಸನಗಳಿಂದ ವಿಷ್ಣುವರ್ಧನ ಮತ್ತು ಶಾಂತಲೆ ಕ್ರಿಸ್ತ ಶಕ ೧೧೧೭ ಹೇವಿಳಂಬಿ, ಚೈತ್ರ ಶುದ್ಧ ಪಂಚಮಿ ವಡ್ಡವಾರ (ಶನಿವಾರ) ವಿಜಯನಾರಾಯಣ ಪ್ರತಿಷ್ಠೆಮಾಡಿದರೆಂದೂ ಆಗಲೆ ಶಾಂತಲೆಯು ನಿರ್ಮಿಸಿದ 'ಕಪ್ಪೆಚೆನ್ನಿಗ' ದೇವಾಲಯವು ಅದೇ ಅಂಗಳದಲ್ಲಿ ಪ್ರತಿಷ್ಠಿತವಾಯಿತೆಂದೂ ಕಂಡುಬರುತ್ತದೆ. ಈ ಅಂಗಳವು ೪೪೩ ೧/೨ ಅಡಿ ಉದ್ದ, ೩೯೬ ಅಡಿ ಅಗಲವಿದೆ. ಇದರಲ್ಲಿ ತ್ರಿಕೂಟಾಚಲವಾದ ಕೇಶವ ದೇವಾಲಯ ೧೭೦ ಅಡಿ ಉದ್ದ ೧೫೬ ಅಡಿ ಅಗಲವಿದೆ. ಇದಕ್ಕೆ ಸ್ವಲ್ಪ ಹಿಂದೆ ದ್ವಿಕೂಟವಾದ ಕಪ್ಪೆಚೆನ್ನಿಗ ದೇವಾಲಯ ೧೨೪ ಅಡಿ ಉದ್ದ ೧೦೫ ಅಡಿ ಅಗಲ ಇದೆ. ಪೂರ್ವಕ್ಕೆ ಅಭಿಮುಖವಾಗಿರುವ ದೇವಾಲಯಗಳಿಗೆ ಉತ್ತರ ದಕ್ಷಿಣದಲ್ಲಿರುವ ಮಹಾದ್ವಾರಗಳಿವೆ. ಉತ್ತರ ಮಹಾದ್ವಾರದ ಮೇಲೆ ದೊಡ್ಡ ಗೋಪುರವಿದೆ. ವಿಷ್ಣುವರ್ಧನನು ಮೊದಲು ನಿರ್ಮಿಸಿದ್ದ ದೇವಾಲಯ ಸಣ್ಣದಾಗಿದ್ದಿತು. ನಕ್ಷತ್ರಾಕಾರದ ತಲವಿನ್ಯಾಸದಮೇಲೆ ಗರ್ಭಗುಡಿಯಿದ್ದಿತು. ಇದರ ಗೂಡುಗಳು ದಕ್ಷಿಣ ಪಶ್ಚಿಮ ಮತ್ತು ಉತ್ತರದಲ್ಲಿ ಸ್ವಲ್ಪ ದೊಡ್ಡದಾಗಿದ್ದವು. ಇವುಗಳು ಈಗ ಮುಚ್ಚಿಹೋಗಿವೆ. ಗರ್ಭಗುಡಿಯಲ್ಲಿ ವಿಜಯನಾರಾಯಣ ವಿಗ್ರಹವಿದ್ದಿತು. ಗರ್ಭಗುಡಿಯ ಮುಂದೆ ನವರಂಗಮುಂಡಪಕ್ಕೆ ಬರುವಂತೆ ವಿಭಾಗಿಸದೆ ಇದ್ದ ಸುಕನಾಸಿಯು ಇದ್ದಿತು. ಅದರ ಪಕ್ಕಗಳನ್ನು ನವರಂಗದ ಪಶ್ಚಿಮ ಭಾಗವನ್ನು ಬಳಪದಕಲ್ಲಿನ ಗೋಡೆಗಳಿಂದ ಮುಚ್ಚಿದರು. ಈ ಗೋಡೆಯ ಹೊರಭಾಗದಲ್ಲಿ ವಿಗ್ರಹಗಳೂ ಒಳಭಾಗದಲ್ಲಿ ಶಾಸನಗಳೂ ಇದ್ದವು. ಬೇಲೂರು ೫೮ ನೇ ಶಾಸನ ಇಲ್ಲಿದೆ. ನವರಂಗವು ವಿಶಾಲವಾಗಿದ್ದು ಪಶ್ಚಿಮದಲ್ಲಿ ವಿನಾ ಮಿಕ್ಕ ಎಲ್ಲ ದಿಕ್ಕುಗಳಲ್ಲೂ ತೆರೆದಿದ್ದಿತು. ಇದಕ್ಕೆ ಮೂರು ದ್ವಾರಗಳಿದ್ದು ದ್ವಾರಗಳ ಮಧ್ಯೆ ಕಲ್ಲಿನ ಜಗತಿಗಳಿದ್ದವು. ಪೂರ್ವದಿಂದ ಬಂದ ಬೆಳಕು ತಡೆ ಇಲ್ಲದೆ ಗರ್ಭಗುಡಿಯವರೆಗೂ

ಹೋಗಲು ಅವಕಾಶವಿದ್ದಿತು. ಗರ್ಭಗೃಹದ ಮೇಲೆ ಇಟ್ಟಿಗೆ, ಮರ ಮತ್ತು ಗಾರೆಯಿಂದ ಮಾಡಿದ ಶಿಖರವಿದ್ದಿತು. ದೇವಾಲಯವೆಲ್ಲ ಎತ್ತರವಾದ ಜಗತಿಯ ಮೇಲಿದ್ದಿತು. ಜಗತಿಗೆ ಪೂರ್ವ ಉತ್ತರ ದಕ್ಷಿಣದಲ್ಲಿ ಮೆಟ್ಟಲುಗಳಿದ್ದು ಮೆಟ್ಟಲಿನ ಎರಡು ಪಕ್ಕದಲ್ಲೂ ರಥಗಳಿದ್ದವು. ಜಗತಿಯ ಮೇಲೆ ಇಂತರ್ಹ ರಥಗಳಿದ್ದವು. ಎತ್ತರವಾದ ಭೂಮಿಯ (ವೇದಪರ್ವತ) ಮೇಲೆ ದೇವಾಲಯವು ಚಿನ್ನದ ಮುಲಾಮು ಹಾಕಿದ ತಾಮ್ರದ ತಗಡುಗಳಿಂದ ಮುಚ್ಚಲ್ಪಟ್ಟ ಶಿಖರದೊಡನೆ ಹೊಳೆಯುತ್ತಿದ್ದಿತು.

ಇದೇ ರೀತಿಯಲ್ಲಿ, ಆದರೆ ಸ್ವಲ್ಪ ಚಿಕ್ಕದಾಗಿ ಶಾಂತಲೆಯು ಕಪ್ಪೆ ಚೆನ್ನಿಗರಾಯ ದೇವಾಲಯವನ್ನು ಕಟ್ಟಿಸಿದಳು. .ಆದರೆ ಮಂಡಪದ ದ್ವಾರದ ದಕ್ಷಿಣಕ್ಕೆ ಶಾಂತಲೆ ತನಗೆ ಬಹುಶಃ ಇಷ್ಟದೇವತೆಯಾದ ನರಸಿಂಹ ಅಥವಾ ವೇಣುಗೋಪಾಲನಿಗೆ ಮತ್ತೊಂದು ಸಣ್ಣ ಗುಡಿಯನ್ನು ಕಟ್ಟಿಸಿದಳು. ಕಪ್ಪೆಚೆನ್ನಿಗ ವಿಗ್ರಹ ವಿಜಯನಾರಾಯಣ ವಿಗ್ರಹದಂತೆಯೇ ಇದ್ದು ಅದರ ಪೀಠದ ಮೇಲೆ ಶಾಂತಲೆಯ ಹೆಸರಿದೆ (ಬೇಲೂರು ೬೦). ಆದರೆ ವಿಜಯನಾರಾಯಣ ವಿಗ್ರಹದ ತೋರಣದ ಮೇಲೆ ವಿಷ್ಣುವಿನ ದ್ವಾದಶ ಮೂರ್ತಿಗಳಿವೆ. ಶಾಸನಗಳಲ್ಲಿ ವಿಷ್ಣುವರ್ಧನನು ಲಕ್ಷ್ಮೀನಾರಾಯಣ ವಿಗ್ರಹಕ್ಕೂ ದಾನಕೊಟ್ಟಂತೆ ಹೇಳಿದೆ. ಬಹುಶಃ ಇದು ಕಪ್ಪೆಚೆನ್ನಿಗ ದೇವಾಲಯದ ದಕ್ಷಿಣ ಗರ್ಭಗುಡಿಯಲ್ಲಿದ್ದಿತು. ಈಗ ವೇಣುಗೋಪಾಲ ವಿಗ್ರಹ ಇಲ್ಲಿದೆ. ಒಂದನೇ ನರಸಿಂಹನು (೧೧೪೨–೧೧೭೩) ಈ ದೇವಾಲಯಕ್ಕೆ ಎರಡು ದಾನಗಳನ್ನು ಮಾಡಿದನು. ನವರಂಗದ ದ್ವಾರಕ್ಕೆ ಉತ್ತರದಲ್ಲಿರುವ 'ದರ್ಬಾರ್' ಚಿತ್ರ ನರಸಿಂಹನದಾದರೆ ನರಸಿಂಹನ ಕಾಲದಲ್ಲಿ ದೇವಾಲಯಕ್ಕೆ ಕೆಲವು ಭಾಗಗಳನ್ನು ಸೇರಿಸಿದಂತೆ ಊಹಿಸಬಹುದು.

ಇಮ್ಮಡಿ ವೀರಬಲ್ಲಾಳ(೧೧೭೩–೧೨೨೦)ನ ಕಾಲದಲ್ಲಿ ದೇವಾಲಯದ ಆಕಾರವೇ ಮಾರ್ಪಡಿಸಿತು. ದೇವಾಲಯದ ನೈರುತ್ಯದಲ್ಲಿ ಹೊರಗಡೆಯ ಮೇಲೆ ಇರುವ 'ಯೇಣಿ ನರಸಿಂಹ'ನಿಗೆ ೧೧೭೩ರಲ್ಲಿ ದಾನಕೊಟ್ಟಿರುವುದರಿಂದ ಅಲ್ಲಿನ ವಿಗ್ರಹಗಳು ಬಹುಶಃ ನರಸಿಂಹನ ಕಾಲದಲ್ಲಿಯೇ ಇದ್ದವು. ಈ ಯೇಣಿ ನರಸಿಂಹನ ಮುಂದೆ ನಾಲ್ಕು



ಬೇಲೂರು ಚೆನ್ನಕೇಶವ ದೇವಾಲಯದಲ್ಲಿನ ವೀರಗಲ್

ಕಡೆಗಳಲ್ಲೂ ಗರುಡ ಇರುವ ಗರುಡಸ್ತಂಭವನ್ನು ನಟ್ಟಂತೆ ಕಂಡುಬರುತ್ತದೆ. ಕ್ರಿ.ಶ. ೧೧೭೫ರಲ್ಲಿ ಬಲ್ಲಾಳನು ಈಶಾನ್ಯ ದಿಕ್ಕಿನಲ್ಲಿ ವಾಸುದೇವ ತೀರ್ಥ ವೆಂಬ ಕಲ್ಯಾಣಿಯನ್ನು ಮಾಡಿಸಿದನು. ೧೧೮೦ರಲ್ಲಿ ವಾಯುವ್ಯ ಭಾಗ ದಲ್ಲಿ ಉಗ್ರಾಣವನ್ನು ಮಾಡಿಸಿದನು. ೧೨೦೦ಕ್ಕೆ ಮುಂಚೆ ಕಲ್ಯಾಣಿ, ಅದರ ಹತ್ತಿರ ಪಾಕಶಾಲೆ, ಪ್ರಾಕಾರದ ಗೋಡೆ ಮಾಡಿಸಿದ್ದನು. ಈ ಪ್ರಾಕಾರದಲ್ಲಿ ಚೆನ್ನಕೇಶವ ಮತ್ತು ಕಪ್ಪೆಚೆನ್ನಿಗ ದೇವಾಲಯಗಳ ಮುಂದೆ ಎರಡು ಮಹಾದ್ವಾರಗಳಿದ್ದವು. ಒಂದು ಮಂಡಪವನ್ನು ಮಾಡಿ ಸಿದ್ದನು. ಮುಖ್ಯ ದೇವಾಲಯದ ನವರಂಗ ಮಂಡಪ ತೆರೆದಿದ್ದಿತು. ಇದನ್ನು ಕಲ್ಲಿನ ಜಾಲಂದ್ರಗಳಿಂದ ಮುಚ್ಚಿಸಿ ಪೂರ್ವ ಉತ್ತರ ದಕ್ಷಿಣ ಗಳಲ್ಲಿ ದ್ವಾರಗಳನ್ನು ಮಾಡಿ ಬಹುಶಃ ಮರದ ಬಾಗಿಲುಗಳನ್ನು ಹಾಕಿ ಸಿದ್ದನು. ಈ ದ್ವಾರಗಳ ಹೊರಗಡೆ ಎರಡು ಪಕ್ಕಗಳಲ್ಲೂ ಗೋಪುರ ಗಳನ್ನು ಗರ್ಭಗುಡಿಯ ದಕ್ಷಿಣ ಪಶ್ಚಿಮ ಮತ್ತು ಉತ್ತರದಲ್ಲಿ ಎರಡು ಅಂತಸ್ತಿನ ಗೂಡುಗಳನ್ನು ಹಿಂದಿನ ಸಣ್ಣ ಗೂಡುಗಳು ಮುಚ್ಚಿ ಹೋಗುವಂತೆ ಮಾಡಿಸಿದನು. ಸುಕನಾಸಿಯನ್ನು ನವರಂಗದಿಂದ ಬೇರ್ಪಡಿಸಲು ಬಾಗಿಲನ್ನು ಸೇರಿಸಿದನು. ದೇವಸ್ಥಾನದಲ್ಲೆಲ್ಲ ಅತ್ಯಂತ ಸುಂದರವಾದ ಬಳಪದಕಲ್ಲಿನ ವಿಗ್ರಹಗಳನ್ನು ಇಡಲಾಯಿತು.

ಇಮ್ಮಡಿ ಬಲ್ಲಾಳನು ಅಂಗಳದಲ್ಲಿರುವ ವೀರನಾರಾಯಣ ಗುಡಿ ಯನ್ನು ಕಪ್ಪೆಚೆನ್ನಿಗ ದೇವಾಲಯದ ಜಾಲಂದ್ರಗಳನ್ನು ಮಾಡಿಸಿದನು. ಅನಂತರ ಹೊಯ್ಸಳ ಚಕ್ರವರ್ತಿಗಳು ಹೆಚ್ಚಾಗಿ ಸೇರಿಸಲಿಲ್ಲ. ಮುಮ್ಮಡಿ ವೀರಬಲ್ಲಾಳನ ಕಾಲದಲ್ಲಿ ಸೋಮಯ ದಂಡನಾಯಕನು ಮಧ್ಯದ ಶಿಖರವನ್ನು ಪುನಃ ಇಟ್ಟಿಗೆ ಮರದಿಂದ ಜೀರ್ಣೋದ್ಧಾರಮಾಡಿದನು.

ವಿಜಯನಗರದ ಚಕ್ರವರ್ತಿಗಳು ಬೇಲೂರು ದೇವಾಲಯಕ್ಕೆ ತಮ್ಮ ಕಾಣಿಕೆಯನ್ನು ಸಲ್ಲಿಸಿರುವರು. ಇಮ್ಮಡಿ ಹರಿಹರನ ಕಾಲದಲ್ಲಿ ಕಂಪಣ್ಣನು ೧೩೮೧ರಲ್ಲಿ ಸುಕನಾಸಿಯ ಮೇಲ್ಛಾವಣಿ ಕಲ್ಲುಗಳು ಒಡೆದು ಹೋಗಿರಲು ಕಣಶಿಲೆಯ ನಾಲ್ಕು ಸ್ತಂಭಗಳನ್ನು ನಟ್ಟನು. ೧೩೮೭ರಲ್ಲಿ ಮಲಗರಸನು ಭಿನ್ನವಾಗಿದ್ದ ಕಳಶವನ್ನು ಜೀರ್ಣೋದ್ಧಾರಮಾಡಿ ಚಿನ್ನದ ತಗಡನ್ನು ಹಾಕಿಸಿದನು. ಕಲ್ಲುಬುರಿಗೆಯ ಗಂಗಾಸಾಲಾರನು ಮುಖ್ಯ

ದೇವಾಲಯದ ಮುಂದಿದ್ದ ಏಳು ಅಂತಸ್ತಿನ ಗೋಪುರವನ್ನು ಸುಟ್ಟು ಹಾಕಿದನೆಂದೂ, ಇಮ್ಮಡಿ ಹರಿಹರನ ದಂಡನಾಯಕನಾದ ಗುಂಡನು ೧೩೯೭ರಲ್ಲಿ ಪುನಃ ಗೋಪುರವನ್ನು ಕಟ್ಟಿಸಿದನೆಂದೂ ಒಂದು ಶಾಸನ ಹೇಳುವುದು. ಈ ಕಾಲದಲ್ಲಿ ದ್ರಾವಿಡಶಿಲ್ಪದ ಪ್ರಭಾವ ಹೆಚ್ಚಾಗಿ ಕಂಡುಬರುವುದು. ಸೌಮ್ಯನಾಯಕಿಯ ಗುಡಿ, ವಾಹನ ಮಂಡಪ, ವಾಯವ್ಯದಲ್ಲಿ ಆಂಡಾಳ್ ಗುಡಿ ಇವುಗಳ ರಚನೆಯಲ್ಲಿ ಬಾಣವೂರಿನ ಬ್ರಹ್ಮೇಶ್ವರ, ವಿಷ್ಣುವರ್ಧನನಿಂದ ಕೇಶವ ದೇವಸ್ಥಾನಕ್ಕೆ ಈಶಾನ್ಯದಲ್ಲಿ ಕಟ್ಟಲ್ಪಟ್ಟ ವಿಷ್ಣ್ವೀಶ್ವರ ಮತ್ತು ಜೈನ ಬಸದಿಗಳ ಕಲ್ಲುಗಳನ್ನು ಪಯೋಗಿಸಿರುವರು. ಕಪ್ಪೆಚೆನ್ನಿಗರಾಯ ಗುಡಿಯ ನವರಂಗ, ನಾಗನಾಯಕ ಮಂಡಪ ರಚಿಸಲ್ಪಟ್ಟವು. ೧೪೧೪ರಲ್ಲಿ ಬೈಚದಂಡನಾಯಕನು ಕಣಶಿಲೆಯ ದೀಪಸ್ತಂಭ ಮತ್ತು ಉಯ್ಯಾಲೆ ಮಂಡಪಗಳನ್ನು ಮಾಡಿಸಿದನು. ಲಕ್ಕಣ್ಣನೆಂಬುವನು ೧೪೮೪ರಲ್ಲಿ ಆಗ್ನೇಯದಲ್ಲಿ ಯಾಗಶಾಲೆ ಕಟ್ಟಿಸಿದನು. ರಂಗಮಂಡಪದ ಪಶ್ಚಿಮದಲ್ಲಿರುವ ಮಂಡಪ, ಅದೇ ಸಾಲಿನಲ್ಲಿರುವ ನರಸಿಂಹ ಮತ್ತು ರಾಮಗುಡಿಗಳನ್ನು ಸುಮಾರು ೧೬–೧೭ನೆಯ ಶತಾಬ್ದದಲ್ಲಿ ಕಟ್ಟಿಸಿದಂತೆ ಕಂಡುಬರುತ್ತದೆ. ಸಾಳ್ವ ಮತ್ತು ತುಳುವ ವಂಶದವರು ಕೇಶವ ದೇವಾಲಯಕ್ಕೆ ಅನೇಕ ದಾನಗಳನ್ನು ಕೊಟ್ಟಿರುವರು. ಕೃಷ್ಣದೇವರಾಯನು ತೆಪ್ಪದ ಕೊಳ ಮತ್ತು ವಿಷ್ಣುಸಮುದ್ರಕ್ಕೆ ಪೂರ್ವದಲ್ಲಿರುವ ಮಂಡಪಗಳನ್ನು ಮಾಡಿಸಿದನು.

ಪಾಳೆಯಗಾರರಲ್ಲಿ ಬೇಲೂರಿನ ವೆಂಕಟಾದ್ರಿನಾಯಕನು ೧೫೫೬ರಲ್ಲಿ ನಾಗನಾಯಕನ ಮಂಡಪದ ಮುಂದಿನ ಗರುಡ ಗುಡಿಯನ್ನು ೧೫೪೦ರಲ್ಲಿ ವಸಂತೋತ್ಸವಕ್ಕಾಗಿ ಉಯ್ಯಾಲೆ ಮಂಡಪ ಮಾಡಿಸಿದನು. ೧೫೪೮ರಲ್ಲಿ ರಂಗನಾಥ ವಿಗ್ರಹಕ್ಕೂ ಯೇಣಿ ನರಸಿಂಹ ವಿಗ್ರಹಕ್ಕೂ ಒರಟಾದ ಗುಡಿಗಳನ್ನು ಮಾಡಿದ್ದರು. ಇವುಗಳನ್ನು ಈಚೆಗೆ ತೆಗೆದುಹಾಕಲಾಯಿತು. ೧೬೨೬ರಲ್ಲಿ ಬೇಲೂರಿನ ಮತ್ತೊಬ್ಬ ವೆಂಕಟಾದ್ರಿಯಕಾಲದಲ್ಲಿ ೨೬ ಅಂಕಣದ ಕೈಸಾಲೆ ಮಂಡಪವನ್ನು ಉತ್ತರ ಪ್ರಾಕಾರದ ಹತ್ತಿರ ಮಾಡಲಾಯಿತು. ಬೇಲೂರಿನ ಹೊನ್ನಾಜಿಯಮ್ಮ ವಿಜಯನಗರದ ಕೊನೆಯ ಚಕ್ರವರ್ತಿಯಾದ ಶ್ರೀರಂಗರಾಯನ ಆಳಿಕೆಯಲ್ಲಿ



ಇಬ್ಬರು ಬೇಡರು ಜಿಂಕೆಯನ್ನು ಸಾಗಿಸುವುದು ಯೋಗಿ

ಬೇಲೂರು ಚೆನ್ನಕೇಶವ ದೇವಾಲಯ

ಕಲ್ಲಿನ ಮಂಚವನ್ನು ೧೬೭೨ರಲ್ಲಿ ದಾನಮಾಡಿದಳು. ೧೭೦೯ರಲ್ಲಿ ಶ್ರೀನಿವಾಸದಾಸನು ಉತ್ತರದಲ್ಲಿ ಸಣ್ಣ ಕಲ್ಯಾಣಮಂಡಪವನ್ನು ಮಾಡಿಸಿದನು. ಮೈಸೂರಿನ ಇಮ್ಮಡಿ ಕೃಷ್ಣರಾಜನ ಕಾಲದಲ್ಲಿ ರಥದ ಮಂಡಪ, ಈಗ ಮುಚ್ಚಿರುವ ಒಂದು ಕಲ್ಯಾಣಿ ಮತ್ತು ಕೇಶವ ದೇವಾಲಯದ ಶಿಖರ ಜೀರ್ಣೋದ್ಧಾರ (೧೭೩೬) ಮಾಡಲಾಯಿತು. ಪುನಃ ಗೋಪುರ ಬಿದ್ದುಹೋಗಿದ್ದು ಹೈದರನ ಅಧಿಕಾರಿಯಾದ ಚನ್ನಯನು ಗೋಪುರವನ್ನು ಕಟ್ಟಿಸಿ ಕಳಶವನ್ನಿಟ್ಟನು. ಹದಿನೆಂಟನೆಯ ಶತಮಾನದಲ್ಲಿ ಕೊಡಗಿನ ಪಾಳೆಯಗಾರನು ಇಟ್ಟಿಗೆ ಗಾರೆಯಿಂದ ದೇವಾಲಯದ ಮೇಲೆ ವಿಗ್ರಹಗಳನ್ನು ಮಾಡಿಸಿದನೆಂದು ಹೇಳಲಾಗಿದೆ.

ಬೇಲೂರಿನ ಚೆನ್ನಕೇಶವದೇವಾಲಯವನ್ನು ಸುಮಾರು ೩೦ ಭಾಗಗಳಾಗಿ ವಿಂಗಡಿಸಿ ವಿಮರ್ಶಿಸಬಹುದು: ೧. ಜಗತಿ ಮತ್ತು ಕೆಳಗಿನ ಸಣ್ಣ ಗೋಪುರಗಳು. ೨. ದ್ವಾರಗಳ ಹತ್ತಿರವಿರುವ ಪಟ್ಟಿಕೆಗಳು ಮತ್ತು ಗೋಪುರಗಳು. ೩. ಗರ್ಭಗೃಹದ ಮೂರು ದೊಡ್ಡ ಗೂಡುಗಳು. ೪. ಆನೆಯಸಾಲು. ೫. ಕೀರ್ತಿಮುಖದ ಸಾಲು ಮತ್ತು ದೇವಾಲಯದ ಹಿಂಭಾಗದ ಸಣ್ಣ ಗೂಡುಗಳು. ೬. ಲತಾಪಟ್ಟಿಕೆ ಮತ್ತು ಅದರಲ್ಲಿರುವ ವಿಗ್ರಹಗಳು. ೭. ಮಣಿಸರದ ಸಾಲು. ೮. ಯಕ್ಷರು ಮತ್ತು ತೋರಣ ವಿಗ್ರಹಗಳು. ೯. ಮೋಹಿನಿ ಪಟ್ಟಿಕೆ. ೧೦. ಜಗತಿಯ ಅಂಚಿನ ವಿಗ್ರಹಗಳು. ೧೧. ಎರಡು ಸಿಂಹಗಳ ಮಧ್ಯೆ ಇರುವ ವಿಗ್ರಹಗಳು, ಗೋಪುರಗಳು. ೧೨. ಕಟಕಟೆ ಮತ್ತು ಚಿತ್ರಫಲಕಗಳು. ೧೩. ಜಾಲಂಧ್ರಗಳು. ೧೪. ದೊಡ್ಡ ವಿಗ್ರಹಗಳ ಸಾಲು. ೧೫. ಸಣ್ಣ ವಿಗ್ರಹಗಳ ಸಾಲು. ೧೬. ಮೇಲ್ಚಾವಣಿಗಳು. ೧೭. ಹಳೆಯ ವಿಮಾನಶಿಖರ. ೧೮. ದೇವಾಲಯದ ಹಿಂಭಾಗದ ಕೆಳಗಿನ ಶಿಖರಗಳು. ೧೯. ಹಿಂಭಾಗದ ಕೀರ್ತಿಮುಖಗಳ ಸಾಲು. ೨೦. ಗೋಡೆಯ ದೊಡ್ಡ ವಿಗ್ರಹಗಳು. ೨೧. ತೋರಣ ಶಿಖರಗಳ ಸಾಲು. ೨೨. ಐದು ದ್ವಾರಗಳು. ೨೩. ನವರಂಗದ ಕಂಬಗಳು. ೨೪. ರಾಮಾಯಣದ ಚಿತ್ರಪಟ್ಟಿಕೆ. ೨೫. ಮಧ್ಯದ ಭುವನೇಶ್ವರಿ. ೨೬. ಇತರ ಭುವನೇಶ್ವರಿ ಮತ್ತು ತೊಲೆಗಳು. ೨೭. ಸುಕನಾಸಿಯ ದ್ವಾರಬಂಧ. ೨೮. ಸುಕನಾಸಿ ಮತ್ತು ಗರ್ಭಗೃಹದ ದ್ವಾರ. ೨೯. ಗರ್ಭ

ಗೃಹ. ೩೦. ಚೆನ್ನಕೇಶವ ಮೂಲವಿಗ್ರಹ. ಇವುಗಳಲ್ಲಿ ಮುಖ್ಯವಾದವು ಗಳ ವರ್ಣನೆಯನ್ನು ಸ್ವಲ್ಪಮಟ್ಟಿಗೆ ಕೆಳಗೆ ಕೊಡಲಾಗಿದೆ :

ಸುಮಾರು ಐದು ಅಡಿ ಎತ್ತರದ ಜಗತಿ ಮೂವತ್ತೆರಡು ಕೋಣ ಗಳುಳ್ಳ ನಕ್ಷತ್ರದಂತಿದೆ. ಶ್ರೀ ಚಕ್ರರೂಪವಾದ ಪೀಠಕ್ಕೆ ಸಪ್ತಮಾತೃಕೆ ಯರು, ಗಣೇಶ, ವೀರಭದ್ರರು ರಕ್ಷಕರಾಗಿರುವಂತೆ ಒಂಬತ್ತು ಸಣ್ಣ ಗುಡಿಗಳಿವೆ. ಇವುಗಳಲ್ಲಿನ ವಿಗ್ರಹಗಳು ಈಚೆಗೆ ಬದಲಾವಣೆಯಾದಂತೆ ಕಂಡುಬರುತ್ತವೆ. ಪ್ರದಕ್ಷಿಣೆಯಾಗಿ ಮಾಹೇಶ್ವರಿ, ಬ್ರಾಹ್ಮಿಗೆ ಬದಲು ತಾಂಡವೇಶ್ವರ, ಮಾಹೇಶ್ವರಿಗೆ ಬದಲು ಬ್ರಾಹ್ಮೀ, ಕೌಮಾರಿ ಸ್ಥಾನದಲ್ಲಿ ಇಂದ್ರಾಣಿ, ವೈಷ್ಣವಿ, ವಾರಾಹಿಸ್ಥಾನದಲ್ಲಿ ಗಣೇಶ, ಇಂದ್ರಾಣಿ ಸ್ಥಾನದಲ್ಲಿ ಮಾಧವ? ಚಾಮುಂಡಿಗೆ ಬದಲಾಗಿ ಆದಿಶಕ್ತಿ ಮತ್ತು ವೀರಭದ್ರ ವಿಗ್ರಹ ಗಳಿವೆ. ಜಗತಿಯ ಪಟ್ಟಿಕೆಗಳಮೇಲೆ ಗಜ ಸಸ್ಯಪ್ರಾಣಿವರ್ಗಗಳಿವೆ. ಪೂರ್ವದಲ್ಲಿ ಎರಡು ಪಕ್ಕಗಳಲ್ಲೂ ಸಳ–ವ್ಯಾಘ್ರ ವಿಗ್ರಹಗಳಿವೆ. ಮುಖ್ಯ ದ್ವಾರದ ಆಗ್ನೇಯದಲ್ಲಿ ಮನ್ಮಥ, ದ್ವಾರಪಾಲನಾದ ಭದ್ರ, ಈಶಾನ್ಯದಲ್ಲಿ ರತಿ ಮತ್ತು ದ್ವಾರಪಾಲ ಸುಭದ್ರ ವಿಗ್ರಹಗಳು ಆಗಮಾನುಸಾರ ಇವೆ. ದೇವಾಲಯದಲ್ಲಿ ಸುಮಾರು ೩,೦೦೦ಕ್ಕೂ ಹೆಚ್ಚಾಗಿ ದೊಡ್ಡ ವಿಗ್ರಹಗಳೇ ಇವೆ. ಪಟ್ಟಿಕೆಗಳಲ್ಲಿರುವ ವಿಗ್ರಹಗಳನ್ನು ಎಣಿಸಿದರೆ ಸುಮಾರು ಹತ್ತು ಸಾವಿರವಾಗುವುವು. ಇವುಗಳಲ್ಲಿ ೪೨ 'ಮದನಕೈ' ವಿಗ್ರಹಗಳು ಪ್ರಸಿದ್ಧವಾಗಿರುವುದರಿಂದ ಅವುಗಳನ್ನು ಕುರಿತು ಸ್ವಲ್ಪ ಹೇಳಲಾಗಿದೆ. ಇವುಗಳಿಗೆ 'ಸಾಲಭಂಜಿಕಾ' ಎಂದು ಹೆಸರು. ಕ್ರಿಸ್ತ ಪೂರ್ವ ೨ನೆಯ ಶತಮಾನದ ಸಾಂಚಿಸ್ತೂಪದ ತೋರಣ ಸ್ತಂಭಗಳಲ್ಲಿಯೇ ಇವು ಕಂಡು ಬಂದು ಅನಂತರ ಅಜಂತ, ಬಾದಾಮಿ, ಎಲ್ಲೋರ ಇತ್ಯಾದಿ ಗುಹಾಲಯ ಗಳಲ್ಲೂ ಇವೆ. ಕನ್ನಡದಲ್ಲಿ 'ಮದನಕೈ' ಎಂಬುದು ಬಹುಶಃ ಮದನಿಕಾ ಎಂಬ ಸಂಸ್ಕೃತ ಪದದ ತಮಿಳು ರೂಪಾಂತರದಿಂದ ಬಂದಿತೆಂದು ಊಹಿಸ ಲಾಗಿದೆ. ಶಿಲ್ಪಿಗಳು ಇವುಗಳನ್ನು 'ಸಾಲಬಂದಿಕೆ', 'ಪುತ್ಥಳಿ' ಎಂದು ಕನ್ನಡ ಶಾಸನಗಳಲ್ಲಿ ಕರೆದಿರುವರು. ಈ ವಿಗ್ರಹಗಳು ಮತ್ತು ಇತರ ಸ್ತ್ರೀವಿಗ್ರಹಗಳು ಕೇವಲ ಲೌಕಿಕ ದೃಷ್ಟಿಯಿಂದ ಸೇರಿಸಲ್ಪಟ್ಟಿಲ್ಲ. ದೇವಾ ಲಯವು ವಿಶ್ವದ ಪ್ರತೀಕ. ಗರ್ಭಗುಡಿಯಲ್ಲಿ ರಹಸ್ಯವಾಗಿ ಅಣುರೂಪ

ದಲ್ಲಿರುವ ಶಕ್ತಿಯು ವಿಕಾಸಗೊಂಡು ಧರ್ಮಾರ್ಥಕಾಮಮೋಕ್ಷಗಳೆಂಬ ಪುರುಷಾರ್ಥಗಳ ಸಾಧನೆಗಾಗಿ ಚರಾಚರ ಪ್ರಪಂಚದ ಎಲ್ಲ ವಸ್ತುಗಳಲ್ಲೂ ಪ್ರತಿಬಿಂಬಿತವಾಗಿರುವುದೆಂಬ ತತ್ತ್ವವನ್ನು ಸೂಚಿಸುವುದಕ್ಕಾಗಿ ನಿರ್ದಿಷ್ಟ ಸ್ಥಳಗಳಲ್ಲಿ ನಿಯಮಿತ ಚಿತ್ರಗಳನ್ನಿಡಬೇಕೆಂದು ಆಗಮಗಳು ವಿಧಿಸಿರುವುವು. ವಾಸ್ತುಪುರುಷನು ಬೆಳೆದು ಪ್ರಾಸಾದ ಪುರುಷನಾಗುವನು. ದೇಹದ ಅಂಗಾಂಗಗಳನ್ನನುಸರಿಸಿ ದೇವಾಲಯದ ತಿರ್ಯಕ್ ವಿಭಾಗಗಳು, ಊರ್ಧ್ವವಿಭಾಗಗಳು ಮಾಡಲ್ಪಟ್ಟಿವೆ. ಸ್ತಂಭಗಳು ಕೂಡ ಭಕ್ತರ ಪ್ರತೀಕಗಳಾದ್ದರಿಂದ ಕಂಬದ ಭಾಗಗಳಿಗೆ ಪಾದ ಜಾನು ಜಂಘಾ ಕಟಿ ಇತ್ಯಾದಿ ಹೆಸರುಗಳನ್ನು ಕೊಟ್ಟಿರುವರು. ಶಿಲ್ಪಶಾಸ್ತ್ರಗಳಲ್ಲಿ ಬ್ರಹ್ಮಕಾಂತ, ವಿಷ್ಣುಕಾಂತ ರುದ್ರಕಾಂತ ಇತ್ಯಾದಿ ಸ್ತಂಭಪ್ರಭೇದಗಳು ಉಕ್ತವಾಗಿವೆ. ಈ ಸ್ತಂಭಪುರುಷನು ವಿಮಾನವನ್ನು ತನ್ನ ತಲೆಯಮೇಲೆ ಧರಿಸಿರುವನು. ಸ್ತಂಭಗಳ ಮೇಲೆ ವಿಮಾನವನ್ನು ಸಂಧಿಸಿರುವ ಈ ಮದನಿಕೆ ವಿಗ್ರಹಗಳು ಮೂಲವಿಗ್ರಹದ ಪ್ರತಿಬಿಂಬಗಳಾಗಿವೆ. ಅದರಲ್ಲೂ ಬೇಲೂರಿನ ಸ್ಥಳ ಪುರಾಣದಂತೆ ಮೋಹಿನೀ ಅವತಾರ ಇಲ್ಲಾದುದರಿಂದ ವಿಷ್ಣುವಿನ ಕನ್ಯಾರೂಪವೇ ಈ ಮದನಿಕೆಗಳಲ್ಲಿ ಕಂಡುಬರುತ್ತವೆ. ಕೇವಲ ಲೌಕಿಕ ದೃಷ್ಟಿಯಿಂದ ಕುತೂಹಲಜನಕವೆಂದು ಕಂಡುಬರುವ ವಿಗ್ರಹಗಳಲ್ಲೂ 'ಮಂಡಲ ರಹಸ್ಯ'ವಿದೆ. ಯುವತಿಯು ತನ್ನ ಸೌಂದರ್ಯವನ್ನೇ ಕನ್ನಡಿಯಲ್ಲಿ ಕಂಡು ಮುಗ್ಧಳಾಗಿರುವಂತೆ ತೋರಿಸಿರುವುದರಲ್ಲಿ ವೇದಾಂತದ ಬಿಂಬ–ಪ್ರತಿಬಿಂಬ ರಹಸ್ಯವಿದೆ. ಕಪಿಯು ಸೀರೆಯನ್ನೆಳೆಯುತ್ತಿರುವುದು, ವೃಶ್ಚಿಕದ ಭಯಕ್ಕಾಗಿ ಸೀರೆಯನ್ನು ತೆಗೆದುಹಾಕುವುದು, ವ್ಯಾಧವೇಷ ಧರಿಸಿದ ಯುವತಿ, ಇತ್ಯಾದಿ ಚಿತ್ರಗಳಲ್ಲಿ ಮನಸ್ಸು ಇಂದ್ರಿಯಗಳನ್ನು ಸಂಯಮಮಾಡುವ ಆವಶ್ಯಕತೆ ಸೂಚಿತವಾಗಿದೆ. ಮನಶ್ಶಾಸ್ತ್ರ ದೃಷ್ಟಿಯಿಂದ ಒಂದೊಂದು ಮದನಿಕೆ ವಿಗ್ರಹದ ವಿಷಯವಾಗಿ ವ್ಯಾಖ್ಯಾನ ಮಾಡಬಹುದು. ಮೋಹಿನೀ ಕಥೆಯಲ್ಲಿ ನೃತ್ಯ ಸಂಗೀತಗಳು ಪ್ರಧಾನವಾದುದರಿಂದ, ವಿಷ್ಣುವರ್ಧನ ಇಮ್ಮಡಿ ವೀರಬಲ್ಲಾಳರ ಶಾಂತಲಾ, ಬಮ್ಮಲಾ, ಪದ್ಮಲಾ ಮುಂತಾದವರೆಲ್ಲರೂ ಸಂಗೀತ ನೃತ್ಯಗಳಲ್ಲಿ ಕುಶಲರಾಗಿದ್ದರೆಂದು ಶಾಸನಗಳಲ್ಲಿ ಹೇಳಿರುವುದರಿಂದ ಈ ವಿಗ್ರಹಗಳು ನೃತ್ಯ

ಸಂಗೀತಗಳ ಆಧ್ಯಾತ್ಮಿಕ ತತ್ತ್ವಗಳನ್ನು ಸೂಚಿಸಲು ನಿರ್ಮಿತವಾದಂತೆ ಕಂಡುಬರುವುದು. ಈ ಪ್ರತಿಯೊಂದು ನೃತ್ಯ ಭಂಗಿ, ಸಂಗೀತವಾದ್ಯ ಗಳನ್ನು ಸೂಕ್ಷ್ಮವಾಗಿ ವಿಮರ್ಶಿಸಬೇಕಾಗಿದೆ.

ಈ ಮದನಿಕೆ ವಿಗ್ರಹಗಳನ್ನೆಲ್ಲ ಸುಮಾರು ಎರಡೂವರೆ ಅಡಿ ಎತ್ತರದ ಬಳಪದ ಕಲ್ಲಿನ ಫಲಕಗಳ ಮೇಲೆ ಮಾಡಿರುವರು. ಪೂರ್ವ ದ್ವಾರದ ದಕ್ಷಿಣದ ಸ್ತಂಭದಿಂದ ಆರಂಭಿಸಿದರೆ ಈ ವಿಗ್ರಹಗಳು ಕಂಡು ಬರುತ್ತವೆ:

(೧) **ಸುರಸುಂದರಿ ಮತ್ತು ದರ್ಪಣ:** ಚೆನ್ನು ಎನಿಸಿದ ಚೆನ್ನ ಕೇಶವನ ಸೌಂದರ್ಯದ ದರ್ಪ ದರ್ಪಣದಲ್ಲಿ ಪ್ರತಿಫಲಿತವಾಗಿ ಪುನಃ ಬಿಂಬವನ್ನು ಸೇರುತ್ತದೆ. ಬಲಗೈಯ ತರ್ಜನಿ ಸ್ವಲ್ಪ ಬಗ್ಗಿ ತಿಲಕವನ್ನಿಟ್ಟು ಕೊಳ್ಳಲು ಪ್ರಯತ್ನಿಸುವಂತಿದೆ. ವಿಶ್ವಸೌಂದರ್ಯದರ್ಪಣ ದೃಶ್ಯಮಾನ ವಾದಂತಿದೆ. ಅವಳ ಪಕ್ಕದಲ್ಲಿ ನಿಂತಿರುವ ಹುಡುಗನು (ಅಥವಾ ಸ್ತ್ರೀ?) ಕಪಿಯನ್ನು ಸೊಂಟದಮೇಲೆ ಕುಳ್ಳಿರಿಸಿಕೊಂಡು ಫಲವನ್ನು ಕೊಡು ತ್ತಿರುವನು. ಚಿತ್ತಚಾಂಚಲ್ಯದ ಪ್ರತೀಕವಾದ ವಾನರವು ಫಲವನ್ನು ಪಡೆಯುತ್ತಿದೆ. ಕಾಮಾಕರ್ಷಿಣೀ ಶಕ್ತಿ.

(೨) **ಶುಕ-ಸುಂದರಿ:** ಇವಳ ಎಡಗೈಯ ಮೇಲೆ ಇರುವ ಶುಕಕ್ಕೆ ಹಣ್ಣನ್ನು ಕೊಟ್ಟು ಮಾತನ್ನು ಕಲಿಸುತ್ತಿರುವಳು. ಮುಂದಿರುವ ಒಬ್ಬ ಹುಡುಗನು ಮಾತುಲುಂಗವನ್ನು ಹಿಡಿದು ಶುಕದಕಡೆ ತೋರಿಸುತ್ತಿರು ವನು. ಬುದ್ಧ್ಯಾಕರ್ಷಿಣೀ ಸರಸ್ವತಿ.

(೩) **ವಸಂತ ಸುಂದರಿ:** ಯುವತಿಯು ಎಡಗೈಯಲ್ಲಿ ವೀಳೆಯದೆಲೆ ಹಿಡಿದು ಬಲಗೈಯಲ್ಲಿ ಜೀರ್ಕೊಳವೆಯಲ್ಲಿ ವಸಂತದ ನೀರನ್ನು ತುಂಬಿ ಪ್ರಿಯನ ಆಗಮನವನ್ನು ನಿರೀಕ್ಷಿಸುತ್ತಿರುವಳು. ಪಕ್ಕದಲ್ಲಿ ಒಬ್ಬನು ಜೀರ್ಕೊಳವೆಯನ್ನು ತುಂಬುತ್ತಿರುವನು; ಮತ್ತೊಬ್ಬನು ದೊಡ್ಡಪಾತ್ರೆಯ ತುಂಬ ವಸಂತದ ನೀರನ್ನು ಕೊಡುತ್ತಿರುವನು. ಅಹಂಕಾರಾಕರ್ಷಿಣಿ. "ರೂವಾರಿ ಚಿಕ್ಕಹಂಪ ಮಾಡಿದ ಪುತ್ಥಳಿ."

(೪) ಸುಂದರಿಯ ಬಲ ತೋಳಿನ ಮೇಲೆ ಶುಕವೂ ಎಡಗೈಯಲ್ಲಿ ವೀಳೆಯದೆಲೆಯೂ ಇವೆ. ಶಬ್ದಾಕರ್ಷಿಣಿ. ಗಿಳಿ ಮತ್ತು ವೀಳೆಯದೆಲೆಗಳು



ಬೇಲೂರಿನ ಚೆನ್ನಕೇಶವ ದೇವಾಲಯದ ಮದನಿಕೆ
ಸುಂದರಿ ಮತ್ತು ದರ್ಪಣ

ವಾಕ್ಕಿನ ಪ್ರತೀಕ. ಭರತಶಾಸ್ತ್ರದಲ್ಲಿ ಹೇಳಿದಂತೆ ಸುಂದರಿಯ ವಸ್ತ್ರವು ಈಗಲೂ ಕೆಂಪು ಬಣ್ಣದಿಂದ ಕೂಡಿದೆ.

(೫) ಈ ಕಂಬದ ಮೇಲಿದ್ದ ಮದನಿಕೆ ಈಗ ಇಲ್ಲ (ಸ್ಪರ್ಶಾಕರ್ಷಿಣಿ ?).

(೬) **ಸುಂದರಿ ಮತ್ತು ಕಪಿ:** ಕಪಿಯು ಯುವತಿಯ ವಸ್ತ್ರವನ್ನು ಎಳೆದುಹಾಕಿ ಹಲ್ಲು ಕಿರಿಯುತ್ತಿದೆ. ಅದನ್ನು ಹೊಡೆಯಲು ಬಲಗೈಯಲ್ಲಿ ಮರದ ರೆಂಬೆಯನ್ನು ಹಿಡಿದಿರುವಳು. ಬಲಗೈ ಸ್ತನಗಳನ್ನು ಮುಚ್ಚಿದೆ. ರೂಪಾಕರ್ಷಿಣಿ. "ಬಳ್ಳಿಗಾವೆ ರೂವಾರಿ ದಾಸೋಜ, ಬಿರುದ ರೂವಾರಿ ಗೊಂದಳ ಬಡಿವ."

(೭) **ಬೇಡಿತಿ:** ಯುವತಿಯು ಎಡಗೈಯಲ್ಲಿ ಬಿಲ್ಲನ್ನು ಹಿಡಿದು, ಬಲಗೈಯಿಂದ ಆಕರ್ಣಾಂತವಾಗಿ ಬಾಣವನ್ನೆಳೆದು ತೋರಣದ ಮೇಲಿರುವ ಎರಡು ಪಕ್ಷಿಗಳ ಕಡೆಗೆ ಹೊಡೆಯುತ್ತಿರುವಳು. ಪಕ್ಕದಲ್ಲಿ ಸೇವಕಿಯು ಪಳಗಿದ ಜಿಂಕೆಯನ್ನೂ ಬಾಣಗಳನ್ನೂ ಹಿಡಿದಿರುವಳು. ರಸಾಕರ್ಷಿಣಿ. "ಬಳ್ಳಿಗಾವೆಯ ರೂವಾರಿ ದಾಸೋಜನ ಪುತ್ರ ಚಾವಣ ಮಾಡಿದ ಪುತ್ಥಳಿ."

(೮) **ಕೇಶಬಂಧ:** ಯುವತಿಯು ಎಡಗೈಯಲ್ಲಿ ಕೇಶಪಾಶ ಹಿಡಿದು, ಎಣ್ಣೆಗಾಗಿ ಬಲಗೈಯನ್ನು ಚಾಚಿರುವಳು. ಅವಳ ಬಲಭಾಗದಲ್ಲಿ ಸೇವಕಿಯು ಎಣ್ಣೆಯ ಪಾತ್ರೆಯನ್ನೂ ಹೂವಿನಹಾರವನ್ನೂ ಹಿಡಿದಿರುವಳು. ಎಡದಲ್ಲಿ ಮತ್ತೊಬ್ಬಳು ಕನ್ನಡಿ ಹಿಡಿದಿರುವಳು. ಗಂಧಾಕರ್ಷಿಣಿ. 'ಬಳ್ಳಿಗಾವೆಯ ರೂವಾರಿ ದಾಸೋಜನ ಬೆಸ.'

(೯) **ಅದ್ಭುತ ನೃತ್ಯ:** ಯುವತಿಯು ಡವಣೆಯನ್ನು ಬಗ್ಗಿದ ಕೋಣದಿಂದ ಹೊಡೆಯುತ್ತಿರುವಳು. ಯುವತಿಯ ಮೇಲ್ಭಾಗವು ಮುಂದಕ್ಕೆ ತಿರುಗಿಕೊಂಡಿದ್ದರೂ ಕೆಳಭಾಗವು ಬಲಕ್ಕೆ ತಿರುಗಿಕೊಂಡಿದೆ. ದೇಹದ ಭಾರ ಬಲಗಾಲಿನ ಮೇಲಿದ್ದು ಎಡಗಾಲನ್ನು ನೃತ್ಯದಲ್ಲಿ ಎತ್ತಿದೆ. ಚಿತ್ತಾಕರ್ಷಿಣಿ.

(೧೦) **ದುರ್ಗಾ ನೃತ್ಯ:** ದುರ್ಗಾ ಎರಡು ಕೈಗಳಲ್ಲಿ ಕಪಾಲ ಮತ್ತು ತ್ರಿಶೂಲದಂತಿರುವ ಖಟ್ವಾಂಗವನ್ನು ಹಿಡಿದಿರುವಳು. ಇಬ್ಬರು

ಮೃದಂಗ ಬಾರಿಸುತ್ತಿರುವರು. ಧೈರ್ಯಾಕರ್ಷಿಣಿ. "ಬಳ್ಳಿಗಾಮೆಯ ರೂವಾರಿ ದಾಸೋಜನು ಮಾಡಿದ ಸಾಲಬಂದಿಕೆ."

(೧೧) **ಡವಣೆ ನೃತ್ಯ**: ಯುವತಿಯು ಡವಣೆಯನ್ನು ಬಾರಿಸುತ್ತ ನೃತ್ಯವನ್ನಾರಂಭಿಸುತ್ತಿರುವಳು. ಸ್ಮೃತ್ಯಾಕರ್ಷಿಣಿ. "ರೂವಾರಿ ಮಲ್ಲಿಯಣ್ಣನ ಪುತ್ಥಳಿ."

(೧೨) **ವೇಣುವಾದನ**: ಯುವಕನು ಕೊಳಲನ್ನು ಬಾರಿಸುತ್ತ ನೃತ್ಯಮಾಡುತ್ತಿರುವನು. ಪಕ್ಕದಲ್ಲಿ ಒಬ್ಬನು ಕೊಳಲನ್ನು ಬಾರಿಸುತ್ತ ಒಬ್ಬಳು ಹಾಡುತ್ತ ತಾಳವನ್ನು ಹಾಕುತ್ತ ಇರುವರು. ನಾಮಾಕರ್ಷಿಣಿ. "ಬಳ್ಳಿಗಾಮೆಯ ದಾಸೋಜನ ಪುತ್ರ ಚಾವಣ ಗೆಯಿದ ಬೆಸ."

(೧೩) **ಗೀತ**: ಯುವತಿಯು ಕೈಯಲ್ಲಿ ತಾಳವನ್ನು ಹಿಡಿದು ಎಡಗಾಲಿನ ಬೆರಳಿನಿಂದ ತಾಳವನ್ನು ಸೂಚಿಸುತ್ತ ಹಾಡಲು ಬಾಯಿ ತೆರೆದಿರುವಳು. ಬಾಯಲ್ಲಿನ ಹಲ್ಲುಗಳು ಕಾಣಿಸುತ್ತವೆ. ಪಕ್ಕದಲ್ಲಿ ಒಬ್ಬನು ಕೊಳಲನ್ನು, ಇಬ್ಬರು ಮೃದಂಗ, ಮತ್ತೊಬ್ಬನು ಡವಣೆಯನ್ನು ಹಿಡಿದಿರುವರು. ಬೀಜಾಕರ್ಷಿಣಿ. (ಶಿಲ್ಪಿ) "ಸ್ವಸ್ತಿ ಶ್ರೀ ಮಹಾಮಂಡಲೇಶ್ವರ ತ್ರಿಭುವನಮಲ್ಲ ತಳಕಾಡುಗೊಂಡ ಭುಜಬಲ ವೀರಗಂಗ ಹೋಸಳದೇವರ ವಿದ್ಯಾವಂತ ರೂವಾರಿ ಪುಲಿಮುಚ್ಚ್ಚರಿಪ ಕುವರ, ಮಾಚಾರಿ ಗಿರಿವಜ್ರದಂಡ."

(೧೪) **ಮೋಹಿನೀ ನೃತ್ಯ**: ಯುವತಿಯು ಬಲಗೈಯನ್ನು ತಲೆಯ ಮೇಲೆ ಎತ್ತಿ, ಎಡಗೈಯನ್ನು ಕಟಿಪ್ರದೇಶದಲ್ಲಿ ಅಂಗೈ ಹೊರಕ್ಕೆ ತೋರುವಂತೆ ಹಿಡಿದಿರುವಳು. ಎಡಗಾಲನ್ನು ಎತ್ತಿರುವಳು. ಎಡಗಡೆ ಒಬ್ಬನು ಮೃದಂಗವನ್ನು ಬಾರಿಸುತ್ತ ತನ್ನ ಎಡಗೈ ಎತ್ತಿಕೊಂಡು ನೃತ್ಯ ಮಾಡುತ್ತಿರುವನು. ಲತಾತೋರಣದ ಮೇಲೆ ಫಲ, ಅದರಮೇಲೆ ನೊಣ, ನೊಣವನ್ನು ತಿನ್ನಲು ಬಂದಿರುವ ಹಲ್ಲಿ ಬಹಳ ನೈಜವಾಗಿ ಚಿತ್ರಿಸಲ್ಪಟ್ಟಿವೆ. ಆತ್ಮಾಕರ್ಷಿಣಿ.

(೧೫) **ರುದ್ರವೀಣಾಧಾರಿ**: ಒಂದು ಕೈಯಲ್ಲಿ ಈಗಿನ ಸಿತಾರದಂತಿರುವ ಎರಡು ಬಿರುಡೆ ಹೊಂದಿರುವ ರುದ್ರವೀಣೆಯನ್ನು ಹಿಡಿದು ಯುವತಿಯು ನೃತ್ಯವನ್ನಾರಂಭಿಸಿರುವಳು. ಪಕ್ಕದಲ್ಲಿ ಮೃದಂಗ ಮತ್ತು ಡವಣೆಯನ್ನು



ಬೇಲೂರಿನ ಚೆನ್ನಕೇಶವ ದೇವಾಲಯದ ಮದನಿಕೆ
ಕೇಶಾಲಂಕಾರ

ಬಾರಿಸುವವರು, ಹಾಡುತ್ತ ತಾಳಹಾಕುವ ಸ್ತ್ರೀಯರು ಇರುವರು. ಅಮೃತಾಕರ್ಷಿಣಿ.

(೧೬) **ಕೇಶಪಾಶ:** ಯುವತಿಯು ಕನ್ನಡಿ ಹಿಡಿದು ಮುಂಗುರುಳನ್ನು ತಿದ್ದಿಕೊಳ್ಳುತ್ತಿರುವಳು. ಪಕ್ಕದಲ್ಲಿ ಸೇವಕಿಯರು ಗಂಧಪುಷ್ಪಗಳನ್ನು ಕೊಡುತ್ತಿರುವರು. ಶರೀರಾಕರ್ಷಿಣಿ, ಗುಪ್ತಯೋಗಿನಿ.

(೧೭) ಯುವತಿಯು ಮಾವಿನಹಣ್ಣನ್ನು ಬಲಗೈಯಿಂದ ಕೀಳು ತ್ತಿರುವಳು. ಶಿಲ್ಪಿ "ರೂವಾರಿ ವಿಭಣ್ಣ?."

(೧೮) **ಪರ್ಣ ಶಬರಿ:** ಬೇಟೆಯಾಡುತ್ತಿರುವ ಸ್ತ್ರೀ ಎಲೆಗಳನ್ನು ವಸ್ತ್ರ ವಾಗಿ ಧರಿಸಿರುವಳು.

(೧೯) ಸ್ತಂಭದಮೇಲೆ ಮದನಿಕೆ ಭಂಗವಾದಂತೆ ತೋರುತ್ತದೆ.

(೨೦) ಪುರುಷನು ಡವಣೆಯನ್ನು ಬಾರಿಸುತ್ತ ನೃತ್ಯ ಮಾಡುತ್ತಿರು ವನು. ಅವನಿಗೆ ಗಡ್ಡ ಮೀಸೆ ತಲೆಯಮೇಲೆ ಟೋಪಿ ಆಭರಣಗಳಿವೆ. ಮದನಿಕೆಗಳಲ್ಲಿರುವ ಮೂರು ಪುರುಷ ವಿಗ್ರಹಗಳಲ್ಲಿ ಇದು ಒಂದು.

ಉತ್ತರ ದಿಕ್ಕಿನಲ್ಲಿ ವಾಯುವ್ಯದಿಂದ ಆರಂಭಿಸಿದರೆ:

(೨೧) ನೃತ್ಯಮಾಡುತ್ತಿರುವ ಯುವತಿ.

(೨೨) ಹಾಡುತ್ತಿರುವ ಸ್ತ್ರೀ.

(೨೩) ಎಡಗೈಯಲ್ಲಿ ಸ್ವರ್ಗ ಹಸ್ತಮುದ್ರೆ ತೋರಿಸುತ್ತ ನೃತ್ಯ ಮಾಡುವ ಯುವತಿ. 'ಮಲ್ಲೋಜ.'

(೨೪) **ಭೈರವಿ:** ಖಟ್ವಾಂಗವನ್ನು ಎಡಗೈಯಲ್ಲಿ ಹಿಡಿದು ನೃತ್ಯ ಮಾಡುತ್ತಿರುವಳು.

(೨೫) **ಪರ್ಣ ಶಬರಿ:** ಎಡಗೈಯಲ್ಲಿ ಬಿಲ್ಲನ್ನು ಹಿಡಿದು ಬಲಗೈಯಲ್ಲಿ ಬಾಣವನ್ನು ಹಿಡಿದು ನರ್ತಿಸುತ್ತಿರುವಳು. ಎಡಕ್ಕೆ ಬಿಲ್ಲನ್ನು ಹಿಡಿದಿರು ವವಳು ಜಿಂಕೆಯನ್ನು ತರುತ್ತಿರುವಳು. ಬಲಗಡೆ ಒಬ್ಬ ಯುವತಿ ಎಡಕಾಲಿಗೆ ಮುಳ್ಳು ಚುಚ್ಚಿ ಕುಳಿತುಕೊಂಡಿರುವಳು. ಮತ್ತೊಬ್ಬಳು? ಸೂಜಿಯಿಂದ ಮುಳ್ಳನ್ನು ತೆಗೆಯುತ್ತಿರುವಳು. ಕುಳಿತಿರುವವಳ ಮುಖದಲ್ಲಿ ನೋವು ಕಂಡುಬರುತ್ತದೆ.

(೨೬) **ಡವಣೆ ನೃತ್ಯ.**

(೨೭) **ಪೂರ್ಣಮೋಹಿನಿ ನೃತ್ಯ :** ಯುವತಿಯ ಭಂಗಿಯು ಬಹಳ ಸುಂದರವಾಗಿದೆ. ವಿಗ್ರಹದ ಬ್ರಹ್ಮಸೂತ್ರವು ತಲೆಯ ಮೇಲಿರುವ ಹಸ್ತದಿಂದ ನಾಸಾಗ್ರ, ವಾಮಸ್ತನ, ಎಡಗೈ ಹೆಬ್ಬೆಟ್ಟು, ಎಡಗಾಲಿನ ಹೆಬ್ಬೆಟ್ಟುಗಳ ಮೂಲಕ ಹೋಗಿದೆ.

(೨೮) **ವೃಶ್ಚಿಕ ಮತ್ತು ಯುವತಿ :** ಸೀರೆಯಲ್ಲಿ ಸೇರಿದ್ದ ವೃಶ್ಚಿಕವನ್ನು ಕೊಡವಿ ಸೀರೆಯನ್ನು ಎಡತೊಡೆ ಮತ್ತು ಹಿಂದೆ ಹಿಡಿದಿರುವಳು. ವೃಶ್ಚಿಕವು ಪೀಠದ ಮೇಲಿದೆ. ಬಲಗಡೆಯಲ್ಲಿ ಒಬ್ಬಳು ಪದ್ಮಫಲಗಳನ್ನು ಹಿಡಿದಿರುವಳು. ಎಡಗಡೆಯಲ್ಲಿ ಮತ್ತೊಬ್ಬಳು ಬಹುಶಃ ಹೂವಿನಮಾಲೆ ಹಿಡಿದಿದ್ದಳು.

(೨೯) ನೃತ್ಯ ಮಾಡುವ ಯುವತಿ ಕೈಗಳಿಂದ ಮುದ್ರೆಗಳನ್ನು ತೋರಿಸುತ್ತಿರುವಳು. ಎಡಕ್ಕೆ ಹಾಡುತ್ತ ನರ್ತಿಸುತ್ತಿರುವ ಸ್ತ್ರೀ ಇರುವಳು. "ದಾಸೋಜನ ಪುತ್ರ ಚಾವ(ಕ)ಣನ ಬೆಸ."

(೩೦) **ದ್ವಿಭುಜ ಶಾರದಾ :** ಎಡಗೈಯಲ್ಲಿ ಪುಸ್ತಕ ಹಿಡಿದು ಬಲಗೈಯ ಉಪದೇಶಮುದ್ರೆಯಿಂದ ವ್ಯಾಖ್ಯಾನ ಮಾಡುತ್ತಿರುವಳು.

(೩೧) **ವ್ಯಜನ ನೃತ್ಯ :** ಲಾವಂಚದ ಬೀಸಣಿಗೆಯನ್ನು ಬಲಗೈಯಲ್ಲೂ ವೀಳೆಯವನ್ನು ಎಡಗೈಯಲ್ಲೂ ಹಿಡಿದು ಯುವತಿಯು ನೃತ್ಯ ಮಾಡುತ್ತಿರುವಳು. ಎಡಗಡೆ ಒಬ್ಬ ಹುಡುಗನು ಕೊಳಲು ಬಾರಿಸುತ್ತಿರುವನು. ಬಲಗಡೆ ಒಬ್ಬಳು ತಾಳ ಹಾಕುತ್ತ ಹಾಡುತ್ತಿರುವಳು.

(೩೨) **ನಾಗವೀಣ (ಗೋಟುವಾದ್ಯ ?) :** ನೃತ್ಯ ಯುವತಿಯು ನೃತ್ಯ ಮಾಡುತ್ತ ಹಿಡಿದಿರುವ ವಾದ್ಯ ಸುಮಾರು ಮೂರು ಅಡಿ ಉದ್ದವಿದ್ದು ಅದರ ಕೆಳಭಾಗದಲ್ಲಿ ಮೆಟ್ಟುಗಳಿವೆ. ಇವುಗಳ ಮೇಲೆ ಕೋಣದಿಂದ ಹೊಡೆದರೆ ಸ್ವರಗಳು ಬರುವುವು. ಇದರ ಮೇಲ್ಭಾಗ ಗಿಣಿಯಂತಿದ್ದು ಹಾವಿನ ಹೆಡೆ ಅದರ ಮೇಲೆ ಇದೆ. ವೀಣೆಯ ದಂಡ ಮತ್ತು ಕೋಣಗಳಿಗೆ ಗೊಂಚಲು ಕಟ್ಟಿದೆ.

(೩೩) ಯುವತಿಯು ಎಡಭುಜದಮೇಲೆ ಸಣ್ಣ ಉಂಗುರವನ್ನು ಹಿಡಿದಿರುವಳು. ಕೈಯಿನ ಪ್ರತಿಯೊಂದು ಬೆರಳೂ ವಿಂಗಡಿಸಲ್ಪಟ್ಟಿದೆ. ಪಕ್ಕದಲ್ಲಿ ಒಬ್ಬಳು ಕನ್ನಡಿಯನ್ನೂ ಮತ್ತೊಬ್ಬಳು ಹೂಮಾಲೆಯನ್ನೂ



ಬೇಲೂರಿನ ಚೆನ್ನಕೇಶವ ದೇವಾಲಯದ ಮದನಿಕೆ
ಸುಂದರಿ ಮತ್ತು ವೃಶ್ಚಿಕ

ಹಿಡಿದಿರುವರು. "ಮಚ್ಚರಿಪ ಬಿರುದ ರೂವಾರಿ ಗಿರಿವಜ್ರದಂಡ ರೂವಾರಿ ಮಯಣ್ಣ."

(೩೪) ಯುವತಿಯು ಕೈಗಳಿಂದಲೆ ಕೊಳಲನ್ನು ಊದುತ್ತಿರುವಂತೆ ತೋರಿಸುತ್ತಿರುವಳು. ಎಡಗಡೆ ಒಂದು ಕಪಿ, ಬಲಗಡೆ ಕೊಳಲನ್ನು ಕೊಡುತ್ತಿರುವ ಸ್ತ್ರೀ ವಿಗ್ರಹಗಳಿವೆ. "ರೂವಾರಿ ಕೆಂಚಮಲ್ಲಿಯಣ್ಣನ ಹಸ್ತಕುಶಲತೆ."

(೩೫) ಯುವತಿಯು ಎಡಗೈಯಲ್ಲಿ ಡಮರುಗವನ್ನೂ ಬಲಗೈಯಲ್ಲಿ ಚಿಟ್ಟಿತಾಳವನ್ನೂ ಹಿಡಿದು ನರ್ತಿಸುತ್ತಿರುವಳು. ಇಬ್ಬರು ಮೃದಂಗ ಬಾರಿಸುತ್ತಿರುವರು. "ರುವಾರಿ ಯ(ಮ)ಲ್ಲಂಣನ ಪುತ್ರ ಮಸದ (?)."

(೩೬) ಯುವತಿಯ ಸೀರೆಯನ್ನು ಕಪಿ ಹಿಡಿದಿದೆ. ಯುವತಿಯು ಮರದ ರೆಂಬೆಯಿಂದ ಅದನ್ನು ಅಟ್ಟುತ್ತಿರುವಳು. ಪಕ್ಕದಲ್ಲಿ ಸ್ತ್ರೀ ಫಲ ಪದ್ಮ ಹಿಡಿದಿರುವಳು.

(೩೭) ಯುವತಿಯು ಬಲಗಾಲಮೇಲೆ ನಿಂತು ಸೇವಿಕೆಯು ಎಡಗಾಲ ಬೆರಳಿಗೆ ಉಂಗುರ ಹಾಕುತ್ತಿರುವಳು. ಯುವತಿಯು ಎಡಗೈಯಿಂದ ಲತೆಯನ್ನು ಹಿಡಿದಿರುವಳು. ಪಕ್ಕದಲ್ಲಿ ಒಬ್ಬಳು ಚಾಮರವನ್ನು ಹಿಡಿದಿರುವಳು.

(೩೮) ಗಡ್ಡವಿರುವ ಮನುಷ್ಯನು ಡವಣೆ ಬಾರಿಸುತ್ತ ನರ್ತಿಸುತ್ತಿರುವನು. ಮದ್ದಳೆಗೂ ಅದರ ಹಗ್ಗಕ್ಕೂ ಮಧ್ಯೆ ಅವನ ಬೆರಳು ಸ್ಪಷ್ಟವಾಗಿ ಕಾಣಿಸುತ್ತದೆ. "ಶ್ರೀಮತು ಪೊಯ್ಸಳ ಬಿಟ್ಟಿದೇವನ ವಿಜಯ ನಾರಾಯಣದೇವರ ಮಂಟಪದ ಸಾಳುಬಂದಿಕೆ ಮಾಡಿದ ಬಿಂನ್ನಣಿ ಶ್ರೀಮತು ತ್ರಿಭುವನಮಲ್ಲದೇವರ ಬಿಂನ್ನಾಣಿ ಇನೋಜನ........ಪುತ್ರ ಚಿಕ್ಕಹ(ಂ)ಪ್ಪ ಮಾಡಿದ. ಮನದ ಮಚ್ಚರಿಪ ರುವಾರಿಗಳ ಗಂಡ."

(೩೯) ಹಾಡುತ್ತಿರುವ ಯುವತಿ ಕೈಗಳಿಂದ ತಾಳಹಾಕುತ್ತಿರುವಳು. ತೆರೆದ ಬಾಯಿಯಲ್ಲಿ ನಾಲಗೆ ಹಲ್ಲುಗಳು ಕಾಣಿಸುತ್ತವೆ. ಮೃದಂಗ ಡವಣೆ ಕೊಳಲು ಬಾರಿಸುವವರು, ಹಾಡುತ್ತಿರುವವಳು ಪಕ್ಕಗಳಲ್ಲಿರುವರು.

(೪೦) **ಲಾಸ್ಯನೃತ್ಯ:** ಯುವತಿಯ ಪಕ್ಕಗಳಲ್ಲಿ ಮೃದಂಗ ಡವಣೆ ಕೊಳಲು ತಾಳಹಿಡಿದವರು ಇರುವರು. ತೋರಣವು ಬಹಳ ಚೆನ್ನಾಗಿದೆ.

ಹೂವಿನ ಮೊಗ್ಗುಗಳು ಲತೆಯಿಂದ ಉದ್ಭವಿಸುತ್ತಿವೆ. ಒಂದು ಹೂವಿನ ಮೇಲೆ ದುಂಬಿಯು ಕುಳಿತು ಮಧುವನ್ನು ಪಾನಮಾಡುತ್ತಿದೆ. ಇದರ ಮೂತಿ, ರೆಕ್ಕೆ, ಕಾಲುಗಳು ಎಲ್ಲವೂ ಸ್ಪಷ್ಟವಾಗಿ ಕಂಡುಬರುತ್ತವೆ. "ಶ್ರೀಮತು ಗದುಗಿನ ತ್ರಿಕೂಟೇಶ್ವರ ದೇವರ ವಿದ್ಯಾಮಂತ ಸುಜನಜನ ಮನೋರಂಜನ ಸರಸ್ವತೀಪದಾಂಭೋಜ ರೂವಾರಿ ಜಗದೇಕೋಜನ ಪುತ್ರ ನಾಗೋಜನ ಹಸ್ತಕೌಶಲ. ಮಂಗಳಮಹಾ."

ನವರಂಗ: ನವರಂಗದಲ್ಲಿ ಗೋಡೆಗಳಲ್ಲಿ ಅಡಗಿರುವ ಕಂಬಗಳಲ್ಲದೆ ೪೨ ಕಂಬಗಳಿವೆ. ಮಧ್ಯದಲ್ಲಿರುವ ನಾಲ್ಕು ಒಂದೇ ರೀತಿಯಲ್ಲಿವೆ. ಮಿಕ್ಕವು ಬೇರೆ ಬೇರೆಯಾಗಿವೆ. ರಂಗಮಂಡಪದ ದಕ್ಷಿಣದಲ್ಲಿ ಎಡಗಡೆಗೆ ಇರುವ ಮೂರನೆಯ ಕಂಬವನ್ನು ಸುತ್ತಲೂ ತಿರುಗಿಸಬಹುದಾಗಿದ್ದಿತು. ಈಗ ಈ ನರಸಿಂಹ ಸ್ತಂಭದ ಮೇಲೆ ಮೇಲ್ಭಾವಣಿ ಕಲ್ಲು ಒಡೆದಿರುವುದರಿಂದ ತಿರುಗಿಸಲು ಸಾಧ್ಯವಿಲ್ಲ. ಶುಕ್ರವಾರದ ಬಾಗಿಲ ಹತ್ತಿರವಿರುವ ಕಂಬ ೩೨ ಕೋಣಗಳನ್ನು ಹೊಂದಿದೆ. ಸುಕನಾಸಿದ್ವಾರದ ಹತ್ತಿರವಿರುವ ಮಧ್ಯ ಅಂಕಣದಲ್ಲಿನ ಆರನೆಯ ಕಂಬ ಹದಿನಾರು ಕೋಣದ ನಕ್ಷತ್ರಾಕಾರವಾಗಿ ಒಂದೊಂದು ಕೋಣದಲ್ಲೂ ಮೂರು ಭಾಗವಾಗಿ ಕಡೆಯಲಾಗಿದೆ. ಕಂಬದ ಮೇಲ್ಭಾಗ ಛತ್ರಾಕಾರವಾಗಿದೆ. ಕಂಬದ ಉದ್ದಕ್ಕೂ ೭ ಅಡಿ ಎತ್ತರ ನಾಲ್ಕು ಅಂಗುಲ ಅಗಲವಿರುವ ಲತಾಪಟ್ಟಿ ನಾಲ್ಕು ದಿಕ್ಕುಗಳಲ್ಲೂ ಕಂಡುಬರುವುದು. ಇದರ ಪೂರ್ವಮುಖದಲ್ಲಿ ಬಹಳ ಸುಂದರವಾದ ಮೋಹಿನೀ ವಿಗ್ರಹವಿದೆ. ಮೋಹಿನಿಯ ಪಾರ್ಶ್ವಗಳಲ್ಲಿ ಮುಕ್ತಹಸ್ತನಾದ ಗರುಡ ಮತ್ತು ಚಾಮರಧಾರಿಣಿಯರಿರುವರು. ತ್ರಿಭಂಗದಲ್ಲಿರುವ ಈ ವಿಗ್ರಹಕ್ಕೆ ಪ್ರಭಾವಳಿ, ಕಿರೀಟ, ಮಕರಕುಂಡಲ, ಭುಜಕೀರ್ತಿ, ಯಜ್ಞೋಪವೀತ, ಹಾರಗಳು, ಕಾಂಚೀದಾಮ, ಮೇಖಲ, ಮಾಲೆ, ರುಳಿ, ಗೊಲಸು, ಕಾಲುಬೆರಳಿನ ಉಂಗುರಗಳು ಇವೆ. ಮೂಗಿಗೆ ಮೂಗುಬಟ್ಟು ಇಲ್ಲ. ಇದರಮೇಲೆ ಮಕರತೋರಣ ಲತಾತೋರಣಗಳಿವೆ. ಬ್ರಹ್ಮ ವಿಷ್ಣು ಶಿವರು ಒಬ್ಬರಮೇಲೆ ಒಬ್ಬರಿರುವರು. ಆಗ್ನೇಯದ ಪಟ್ಟಿಕೆಗಳಲ್ಲಿ ಯಕ್ಷ, ದಶಾವತಾರ ವಿಗ್ರಹಗಳಿವೆ. ದಕ್ಷಿಣ ಮತ್ತು ಉತ್ತರ ಪಟ್ಟಿಕೆಗಳಲ್ಲಿ ಯಾಳಿಗಳು ಸಿಂಹದ ದೇಹ ಮತ್ತು ಮನುಷ್ಯ,



ಬೇಲೂರಿನ ಚೆನ್ನಕೇಶವ ದೇವಾಲಯದ ಮದನಿಕೆ
ನೃತ್ಯ

ನಾಗ, ಗರುಡ, ಮಯೂರ, ಜಿಂಕೆ, ಮೇಷ, ಅಜ, ಗಿಣಿ, ಕಪಿ, ನಾಯಿ, ವೃಷಭ, ಹಂದಿ, ಕುದುರೆ, ಶರಭ, ಇತ್ಯಾದಿ ತಲೆಗಳುಳ್ಳ ವಿಗ್ರಹಗಳಿವೆ. ಸಿಂಹದೇಹ ಮತ್ತು ನರಶಿರವುಳ್ಳ 'ಸ್ಫಿಂಕ್ಸ್' ವಿಗ್ರಹ ಗಮನೀಯವಾಗಿದೆ. ಸ್ತಂಭದ ಕೆಳಭಾಗದಲ್ಲಿ ಎಂಟು ಗೂಡುಗಳಿದ್ದು ವಿಷ್ಣುವಿನ ಅವತಾರಗಳಿವೆ.

ಮಧ್ಯ ಭುವನೇಶ್ವರಿ ದೇವಾಲಯದಲ್ಲೆಲ್ಲ ಅತ್ಯಂತ ಅದ್ಭುತ ಶಿಲ್ಪವನ್ನು ಪ್ರದರ್ಶಿಸುತ್ತದೆ. ಮಧ್ಯದಲ್ಲಿನ ಅಂಕಣ ೧೯ ಅಡಿ ೩ ಅಂಗುಲ ಚತುರಸ್ರವಾಗಿದೆ. ಇದರ ಮಧ್ಯದಲ್ಲಿ ಐದು ಅಂಗುಲ ಎತ್ತರದ ಚಂದ್ರಶಿಲೆ ಇದೆ. ಇಲ್ಲಿನ ಕಲ್ಲುಗಳಿಗೆ ಹೊಳಪು ಕೊಟ್ಟಿರುವುದರಿಂದ ಬೆಳಕು ಪ್ರತಿಬಿಂಬಿಸಿ ಮೇಲಿನ ಭುವನೇಶ್ವರಿಯ ಸೌಂದರ್ಯವನ್ನು ನೋಡಲು ಅವಕಾಶವಾಗಿದೆ. ಮಧ್ಯದ ನಾಲ್ಕು ಕಂಬಗಳು ಒಂದೇ ರೀತಿಯಲ್ಲಿದ್ದು ಇವುಗಳಮೇಲೆ ಅತ್ಯುತ್ತಮವಾದ ಮದನಿಕೆ ವಿಗ್ರಹಗಳಿವೆ.

ಆಗ್ನೇಯದಿಂದ ಆರಂಭಿಸಿದರೆ,

(೪೧) ಮದನಿಕೆ: ಯುವತಿಯು ಲೀಲಾಶುಕವನ್ನು ಎಡವೊಳ ಕೈಮೇಲೆ ಧರಿಸಿ ಅದಕ್ಕೆ ಫಲವನ್ನು ಕೊಡುತ್ತಿರುವಳು. ಗಿಳಿಯು ಅವಳ ಹಾರವನ್ನು ಕೊಕ್ಕಿನಿಂದ ಹಿಡಿದಿದೆ. ಶಿರೋಭಾಗದಲ್ಲಿ ಅನೇಕ ವಿಧವಾದ ಆಭರಣಗಳನ್ನು ಧರಿಸಿರುವಳು. ಬಲತೋಳಿನ ಮೇಲಿರುವ ಬಳೆಯು ಪ್ರತ್ಯೇಕವಾಗಿದ್ದು ಹಿಂದಕ್ಕೂ, ಮುಂದಕ್ಕೂ, ಸುತ್ತಲೂ ಸರಿಯುತ್ತದೆ. ಎರಡು ಪಕ್ಕಗಳಲ್ಲೂ ಚಾಮರಧಾರಿಣಿಯರಿರುವರು. ಮೇಲಿನ ಲತಾತೋರಣದಲ್ಲಿ ನವಿಲು, ಹಣ್ಣು ತಿನ್ನುತ್ತಿರುವ ಕಪಿ ಇವೆ. "ಕುಂತಳದೇಶದ ಬಲ್ಲಿಗಾವೆ ದಾಸೋಜ."

(೪೨) ನೃತ್ಯಮಾಡುವ ಯುವತಿ (ಶಾಂತಲೆ?): ಇವಳ ತಲೆಯ ಮೇಲಿರುವ ಪಟ್ಟಬಂಧದಲ್ಲಿ ಹಿಂದುಮುಂದಕ್ಕೆ ಸರಿಯುವ ಸಣ್ಣ ಉಂಗುರವಿದೆ. ಬೆರಳುಗಳು ಭಂಗವಾಗಿವೆ. ಬಲದಲ್ಲಿ ಮಾರ್ದಂಗಿಕನು, ಎಡದಲ್ಲಿ ಇಬ್ಬರು ತಾಳದವರಿರುವರು. ತೋರಣದಲ್ಲಿ ಕಪಿ ಪಕ್ಷಿಗಳು ಇವೆ. "ಸ್ವಸ್ತಿ ಶ್ರೀಮತು ಬಲಿಗ್ರಾಮದ ಧರ್ಮೇಶ್ವರಪಾದಪಂಕಜಭ್ರಮರ ದಾಸೋಜನ ಪುತ್ರ ಚಾವಣ (ಮಸಣ?) ಗೈದ ಶ್ರೀ ನೃತ್ಯಸರಸ್ವತಿ ಗಣದಾಸಿ. ಮಚ್ಚರಿಪ ರೂವಾರಿ ಸ್ಥಿರ(?) ಭೇರುಂಡ."

(೪೩) ದ್ವಿಭುಜದೇವಿಯ ನೃತ್ಯ: ಪಕ್ಕದಲ್ಲಿ ಮಾರ್ದಂಗಿಕರು, ಕೊಳಲು ಬಾರಿಸುವವನು, ತಾಳ ಹಾಕುವವನು ಇರುವರು.

(೪೪) ಕೇಶಬಂಧ: ಯುವತಿಯು ಕೇಶವನ್ನು ಸುರಳಿ ಸುತ್ತುತ್ತಿರುವಳು. ಬೇರೆ ಬೇರೆ ಕೂದಲನ್ನು ತೋರಿಸಿದೆ. ಮೇಲಿನ ಉತ್ತರೀಯಕ್ಕೆ ಕಮಲದ ಅಲಂಕಾರವಿದೆ. ಸೇವಕಿಯು ಹೂಮಾಲೆಯನ್ನು ಅರ್ಪಿಸುತ್ತಿರುವಳು. ತೋರಣದಲ್ಲಿ ಕಪಿಗಳು ಗಿಳಿಗಳು ಗಂಧರ್ವರು ಇರುವರು. "ಸ್ವಸ್ತಿ ಶ್ರೀಮತು ಬಲ್ಲಿಗ್ರಾಮದ ದಾಸೋಜನ ಬೆಸ."

ಮಧ್ಯದ ನಾಲ್ಕು ಕಂಬಗಳ ನಾಲ್ಕು ಮೂಲೆಗಳಲ್ಲಿ ಸುಖಾಸನದಲ್ಲಿ ಕುಳಿತಿರುವ ಮಾಧವ (ಕೇಶವ?); ಎರಡು ಮಕರ ಮತ್ತು ಪುಷ್ಪಗಳು (ವರಾಹ?); ಅನಂತಶಾಯಿ, ಲಕ್ಷ್ಮೀ, ದಶಾವತಾರಗಳು; ಅಷ್ಟಭುಜ ಕೃಷ್ಣನು ಗೋವರ್ಧನವನ್ನು ಧರಿಸಿರುವುದು ಈ ಫಲಕಗಳಲ್ಲಿವೆ.

ಭುವನೇಶ್ವರಿ: ಇದರಲ್ಲಿ ಹದಿನೇಳು ಪಟ್ಟಿಕೆಗಳಿವೆ. ಸಂಗೀತ ನೃತ್ಯ ಮಲ್ಲಯುದ್ಧ ಕೋಲಾಟ ಭಾಗವತದ ಕಥೆ, ಮಹಾಭಾರತ ಕಥೆ, ವಿಷ್ಣುವಿನ ಅವತಾರಗಳು ಚಿತ್ರಿತವಾಗಿವೆ. ಮಧ್ಯದಲ್ಲಿ ಕಮಲವು ಮಗುಚಿ ಹಾಕಿದಂತೆ ಮೂರು ಅಡಿ ಇರುತ್ತದೆ. ಇದರ ಕರ್ಣಿಕೆಯ ಮೇಲೆ ಕೆಳಗಿನಿಂದ ಕಾಣಿಸುವಂತೆ ದಶಭುಜ ನರಸಿಂಹನು ಪೂರ್ವಕ್ಕೆ ತಲೆಮಾಡಿಕೊಂಡಿರುವಂತೆ ಚಿತ್ರಿಸಿದೆ.

ಮೂಲವಿಗ್ರಹ ಚೆನ್ನಕೇಶವ (ವಿಜಯನಾರಾಯಣ): ಈ ವಿಗ್ರಹವು ಈ ಹೊಯ್ಸಳ ಶಿಲ್ಪದಲ್ಲಿಯೇ ಅತ್ಯಂತ ಸುಂದರವೆಂದು ಹೇಳಬಹುದು. ಇದರ ಧ್ಯಾನಶ್ಲೋಕ:

ಭಜಾಮ್ಯಹಂ ಶ್ರೀವಸುಧಾ ಸಮೇತಂ
ಭಸ್ಮಾಸುರಧ್ವಂಸಕಮಿನ್ದುವಕ್ತ್ರಂ
ಯೋಷಾಕೃತಿಂ ಬಿಭ್ರತಮಂಬುಜಾಕ್ಷಂ
ಶ್ರೀ ಕೇಶವಂ ದಿವ್ಯಮನಂತರೂಪಮ್ ॥

ಆದೌ ಪದ್ಮಭವಾರ್ಚಿತಃ ಕೃತಯುಗೇ ತೇನೈವ ಸಂಸ್ಥಾಪಿತೋ
ದ್ರೋಣಾದ್ಯೈಸ್ತು ಯುಗಾನ್ತಿಮೇ ನರಪತೇಃ ಶ್ರೀ ವಿಷ್ಣುದೇವಸ್ಯ ಚ
ಭಕ್ತ್ಯಾ ಕಾರಿತ ನಿತ್ಯಧಾಮ್ನಿ ನಿಲಯಃ ಶ್ರೀ ಕೇಶವೋಽಭೂತ್ತದಾ
ಭೂಪೈಕುಂಠಮಿದಂ ವಿಭಾತಿ ವಿದುಷಾಂ ವೇಲಾಪುರಂ ಭೂತಲಮ್ ॥

ಸುಮಾರು ಮೂರೂವರೆ ಅಡಿ ಎತ್ತರದ ಪೀಠದಮೇಲೆ ವಿಗ್ರಹ ಒಂಬತ್ತು ಅಡಿ ಎತ್ತರವೂ ಅದರ ಮೇಲೆ ಮಕರತೋರಣ ಲತಾತೋರಣ ದ್ವಾದಶ ಮೂರ್ತಿಗಳ ಸಾಲು ಪ್ರಭಾವಳಿಗಳಿವೆ. ಮೂಲಬೇರದ ನಾಲ್ಕು ಕೈಗಳಲ್ಲಿ ಪದ್ಮ ಶಂಖ ಚಕ್ರ ಗದೆಗಳಿವೆ. ಚೆನ್ನಕೇಶವನ ಮುಖವು ಕಪ್ಪೆ ಚೆನ್ನಿಗರಾಯನ ಮುಖಕ್ಕಿಂತ ಸೌಮ್ಯವಾಗಿ ಸ್ತ್ರೀ ಲಕ್ಷಣಗಳಿಂದ ಕೂಡಿದೆ. ವಕ್ಷದಲ್ಲಿ ಶ್ರೀವತ್ಸ ಅಥವಾ ಲಕ್ಷ್ಮಿ ಕಂಡುಬರುವುದಿಲ್ಲ. ಬಲಗಡೆ ಭೂದೇವಿ ಪಾಶಫಲಗಳನ್ನೂ ಎಡಗಡೆ ಶ್ರೀದೇವಿ ಫಲಪದ್ಮಗಳನ್ನೂ ಹಿಡಿದಿರುವರು (ನೀಳಾ ವಿಗ್ರಹವಿಲ್ಲ). ಇವರ ಪಕ್ಕದಲ್ಲಿ ಚಾಮರಧಾರಿಣಿಯರಿರುವರು. ಕೇಶವನು ಮಣಿಮುಕುಟ, ಮಕರಕುಂಡಲ, ಭುಜಕೀರ್ತಿ, ಉಂಗುರ, ಹಾರ, ಕಟಿಬಂಧ, ಅಂದಿಗೆ, ಕಾಲುಬೆರಳಿಗೆ ಉಂಗುರ, ಇತ್ಯಾದಿ ಆಭರಣಗಳನ್ನು ಧರಿಸಿರುವನು. ಮಕರತೋರಣದ ಮೇಲಿನ ಲತಾ ತೋರಣದಲ್ಲಿ ದಶಾವತಾರಗಳಿವೆ. ಅದರಮೇಲೆ ದ್ವಾದಶಮೂರ್ತಿಗಳಿವೆ. ಪ್ರಭಾವಳಿಯ ಅಂಚಿನಲ್ಲಿ ಅಷ್ಟದಿಕ್ಪಾಲಕರಿರುವರು. ಪೀಠದಮೇಲೆ ಅಂಜಲಿಹಸ್ತನಾದ ಗರುಡನಿರುವನು. ಇಲ್ಲಿಯೇ ವಿಷ್ಣುವರ್ಧನನ ಶಾಸನವಿದೆ :

“ ವಿಷ್ಣುರ್ಜಿಷ್ಣುಮಹೀಪಾಲಃ ಪಾಲಿತಾಖಿಲ ಭೂತಲಃ |
ದೇವದೇವೇಶ ವಿಜಯನಾರಾಯಣ ಮಚೀಕರತ್ ‖ ”

ಉತ್ಸವಕ್ಕಾಗಿ ಈಗ ಉಪಯೋಗಿಸುತ್ತಿರುವ ಕೇಶವ ವಿಗ್ರಹದ ಪೀಠದಲ್ಲಿ ವಿಷ್ವಕ್ಸೇನ ಮತ್ತು ನವನೀತಕೃಷ್ಣ ಇರುವರು.

ಕಪ್ಪೆಚೆನ್ನಿಗ ದೇವಾಲಯ: ಇದನ್ನು ಶಾಂತಲೆಯು ೧೧೧೭ ರಲ್ಲಿಯೇ ನಿರ್ಮಿಸಿದಂತೆ ಶಾಸನಗಳಿಂದ ತಿಳಿದುಬರುತ್ತದೆ. ವಿಜಯನಗರದ ಕಾಲದಲ್ಲಿಯೂ, ಕ್ರಿ.ಶ. ೧೬೪೮ರವರೆಗೂ ಇಲ್ಲಿ ಪೂಜೆ ನಡೆಯುತ್ತಿದ್ದುದರಿಂದ ಪ್ರಚಾರದಲ್ಲಿರುವ “ಜಕಣಾಚಾರಿ--ಡಂಕಣಾಚಾರಿ” ಕಥೆಗೆ ಯಾವ ಆಧಾರವೂ ಇಲ್ಲ. ಈ ದೇವಾಲಯದಲ್ಲಿ ಎರಡು ಗರ್ಭಗುಡಿಗಳಿವೆ. ಪಶ್ಚಿಮ ಗರ್ಭಗುಡಿಯಲ್ಲಿ ಚೆನ್ನಕೇಶವ, ದಕ್ಷಿಣ ಗುಡಿಯಲ್ಲಿ ಈಚೆಗೆ ಇಟ್ಟ ವೇಣುಗೋಪಾಲ ವಿಗ್ರಹಗಳಿವೆ. ಇವನ್ನು ನಕ್ಷತ್ರಾಕಾರದ ಜಗಲಿಯ ಮೇಲೆ ಕಟ್ಟಲಾಗಿದೆ. ಉತ್ತರದ್ವಾರದ ಪಶ್ಚಿಮಕ್ಕೆ ಗೋಡೆಯ ಮೇಲೆ

ಶಾಂತಲೆಯ ಶಾಸನವಿದೆ. ಈ ದೇವಾಲಯದ ತೆರೆದಿದ್ದ ಮಂಡಪವನ್ನು ಇಮ್ಮಡಿ ವೀರಬಲ್ಲಾಳನು ೧೨೦೬ರಲ್ಲಿ ಜಾಲಂಧ್ರಗಳಿಂದ ಮುಚ್ಚಿದನು. ಗರ್ಭಗುಡಿಯ ಹೊರಗೋಡೆಯಲ್ಲಿ ಮೂರು ಸಣ್ಣ ಗುಡಿಗಳಿವೆ. ಪಶ್ಚಿಮದ ಗುಡಿಯಲ್ಲಿ ಷಟ್ಕೋಣದ ಮಧ್ಯೆ ಸುದರ್ಶನ ಚಕ್ರ, ದಕ್ಷಿಣ ಗುಡಿಯಲ್ಲಿ ಗಣೇಶ, ಉತ್ತರ ಗುಡಿಯಲ್ಲಿ ಹಂಸವಾಹನೆಯಾದ ಅಕ್ಷಮಾಲ ಪಾಶ ಅಂಕುಶ ಪುಸ್ತಕ ಹಿಡಿದಿರುವ ಸರಸ್ವತಿ, ಗೂಡಿನಲ್ಲಿ ಗರುಡನ ಮೇಲಿರುವ ವಿಷ್ಣು–ಲಕ್ಷ್ಮೀ ಗಜಪೀಠದ ಮೇಲೆ ಇರುವರು. ವೇಣುಗೋಪಾಲ ಗರ್ಭಗುಡಿಯ ದ್ವಾರದ ಮೇಲೆ ಹಿರಣ್ಯಕಶಿಪು ವಧೆಯನ್ನು ತೋರಿಸಿದೆ. ಚೆನ್ನಕೇಶವ ವಿಗ್ರಹ ಪೀಠದ ಮೇಲೆ ಆರೂವರೆ ಅಡಿ ಎತ್ತರವಿದೆ. ಪ್ರಭಾವಳಿಯಲ್ಲಿ ದಶಾವತಾರ ಅಷ್ಟದಿಕ್ಪಾಲಕರು ಇರುವರು. ಪೀಠದ ಮೇಲೆ ಗರುಡ ಮತ್ತು ಶಾಂತಲೆಯ ಶಾಸನವಿದೆ:

" ಶಾನ್ತಿಕೃತ್ ಸರ್ವಭೂತಾನಾಂ ಪ್ರತಿಷ್ಠಾ ವಿಷ್ಣುಕಾನ್ತಯಾ |
ಚೆನ್ನಕೇಶವದೇವಸ್ಯ ಶಾಂತಿದೇವ್ಯಾಕೃತೋತ್ತಮಾ ||
ಪಟ್ಟ ಮಹಾದೇವಿ."

೨. ಹಳೆಯ ಬೀಡು : ಹಳೆಯ ಬೀಡು ಎಂಬ ಹೆಸರು ಗಂಗ ಚೆಂಗಾಳ್ವ ರಾಷ್ಟ್ರಕೂಟರ ಕಾಲದಲ್ಲಿಯೇ ಪ್ರಸಿದ್ಧವಾಗಿದ್ದಿತು. ರಾಷ್ಟ್ರ ಕೂಟ ಧ್ರುವ ನಿರುಪಮನು ಇಲ್ಲಿ ಕೆರೆಯನ್ನು ಕಟ್ಟಿಸಿದುದರಿಂದ ಧೋರ (ಧ್ರುವ) ಸಮುದ್ರ ಎಂಬ ಹೆಸರು ಬಂದಿತೆಂದು ಊಹಿಸಲಾಗಿದೆ. ಅನಂತರ ಹೊಯ್ಸಳ ವಿನಯಾದಿತ್ಯನು ಸೊಸೆವೂರು (ಅಂಗಡಿ, ಮೂಡಿಗೆರೆ ತಾಲ್ಲೂಕು) ರಾಜಧಾನಿ ಮಾಡಿಕೊಂಡಿದ್ದು, ಚೆಂಗಾಳ್ವರನ್ನು ಸೋಲಿಸಿದ ಮೇಲೆ ಹಳೇಬೀಡಿನಲ್ಲಿ ನೆಲಸಿದನು. ಯಾದವ ವಂಶದವರೆಂದು ಹೇಳಿ ಕೊಂಡ ಹೊಯ್ಸಳರು ಧೋರಸಮುದ್ರವನ್ನು ದ್ವಾರಾವತೀ ಅಥವಾ ದ್ವಾರಕೆಯ ಹೆಸರಿನಲ್ಲಿ ದ್ವಾರಸಮುದ್ರವಾಗಿ ಮಾಡಿದರು. ಹಳೇಬೀಡಿನ ಹತ್ತಿರ ಪುಷ್ಪಗಿರಿ ಎಂಬ ಬೆಟ್ಟದಲ್ಲಿ ಮಲ್ಲಿಕಾರ್ಜುನ ದೇವಾಲಯವಿರುವುದ ರಿಂದ ಶ್ರೀಶೈಲ ಪುಷ್ಪಗಿರಿಯ ಮಲ್ಲಿಕಾರ್ಜುನ ಇಲ್ಲಿಯೂ ಶ್ರೀಗಿರಿ (ಶೃಂಗೇರಿ)ಯಲ್ಲೂ ಹೊಯ್ಸಳರಿಗೆ ಮುಂಚೆಯೇ ನೆಲಸಿದ್ದಂತೆ ಕಂಡು ಬರುವುದು.



ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯ


[ಚಿತ್ರಗಳು : ಮೈಸೂರು ಆರ್ಕಿಯಾಲಜಿ ವಿಭಾಗದ ಕೃಪೆಯಿಂದ]

ಸುಮಾರು ಮುನ್ನೂರು ವರ್ಷ ಹೊಯ್ಸಳ ಸಾಮ್ರಾಜ್ಯಕ್ಕೆ ಮುಖ್ಯ ಪಟ್ಟಣವಾದ ಧೋರಸಮುದ್ರದಲ್ಲಿ ದೇವಾಲಯಗಳನ್ನು ಬಿಟ್ಟರೆ ಮಿಕ್ಕಾವ ಅವಶೇಷಗಳೂ ಸಿಕ್ಕದೆ ಇರುವುದು ಶೋಚನೀಯವಾಗಿದೆ. ಅರಮನೆಯ ನಿವೇಶನ ಎಂದು ಕರೆಯುವ ಪ್ರದೇಶದಲ್ಲಿ ಈಚೆಗೆ ಕೆಲವು ಕುರುಹುಗಳು ಮಾತ್ರ ಸಿಕ್ಕಿವೆ. ಇಲ್ಲಿನ ದೇವಾಲಯಗಳಲ್ಲಿ ಹೊಯ್ಸಳೇಶ್ವರ, ಕೇದಾರೇಶ್ವರ ಮತ್ತು ಪಂಚದೇವಾಲಯಗಳು ಮುಖ್ಯವಾದುವು.

(೧) **ಹೊಯ್ಸಳೇಶ್ವರ:** ಇದು ಹೊಯ್ಸಳ ರೀತಿಯ ದೇವಾಲಯಗಳಲ್ಲೆಲ್ಲ ದೊಡ್ಡದಾಗಿದ್ದರೂ ಅದ್ಭುತವಾದ ಕಲಾಕೌಶಲ್ಯ ಕಂಡುಬರುವುದರಿಂದ ಸುಂದರವಾಗಿಯೂ ಇದೆ. ಇದರ ನಿರ್ಮಾಣ ಕ್ರಿಸ್ತ ಶಕ ೧೧೨೧ಕ್ಕೆ ಸ್ವಲ್ಪ ಹಿಂದೆ ಆಯಿತೆಂದೂ, ದೇವಾಲಯದ ಹೆಸರು ವಿಷ್ಣುವರ್ಧನ ಹೊಯ್ಸಳೇಶ್ವರ ಎಂದೂ, ಕಟ್ಟಿಸಿದವನು ವಿಷ್ಣುವರ್ಧನನ ದಂಡನಾಯಕನಾದ ಕೇತಮಲ್ಲನೆಂದೂ ಒಂದು ಶಾಸನದಿಂದ ತಿಳಿದುಬರುತ್ತದೆ (ಬೇಲೂರು ೧೪೭). ದೇವಾಲಯವನ್ನು ಹದಿನೈದು ಅಡಿ ವಿಶಾಲವಾಗಿರುವ ಎತ್ತರವಾದ ಜಗತಿಯ ಮೇಲೆ ಕಟ್ಟಿದೆ. ಎರಡು ದೊಡ್ಡ ಗರ್ಭಗುಡಿಗಳಲ್ಲಿ ಹೊಯ್ಸಳೇಶ್ವರ ಮತ್ತು ಶಾಂತಲೇಶ್ವರ ಲಿಂಗಗಳಿವೆ. ಮೇಲಿದ್ದ ದೊಡ್ಡ ಶಿಖರಗಳು ಈಗ ಅದೃಶ್ಯವಾಗಿವೆ. ಗರ್ಭಗೃಹದ ದಕ್ಷಿಣ ಪಶ್ಚಿಮ ಮತ್ತು ಉತ್ತರ ಗೋಡೆಗಳಲ್ಲಿರುವ ದೊಡ್ಡ ಗೂಡುಗಳಿಗೆ ಅನುಸಾರವಾಗಿ ಹೊರಗಡೆಯೂ ಎರಡು ಗೋಪುರಗಳುಳ್ಳ ಗೂಡುಗಳಿವೆ. ಪ್ರತಿಯೊಂದು ಗರ್ಭಗುಡಿಯ ಮುಂದೆ ಸುಕನಾಸಿ ನವರಂಗಗಳಿದ್ದು ಎರಡು ನವರಂಗಗಳು ಕೂಡಿಕೊಂಡಿವೆ. ಜಗತಿಯಿಂದ ನವರಂಗಕ್ಕೆ ಪೂರ್ವದಿಂದ ಎರಡು, ಉತ್ತರದಿಂದ ಒಂದು, ದಕ್ಷಿಣದಿಂದ ಒಂದು ದ್ವಾರಗಳಿವೆ. ಮೆಟ್ಟಲುಗಳ ಪಕ್ಕಗಳಲ್ಲಿ ಸಣ್ಣ ಗುಡಿಗಳಿವೆ. ಪ್ರತಿ ಗರ್ಭಗುಡಿಯ ಮುಂದೆ ನಂದಿ ಮಂಡಪ, ನಂದಿ ಇವೆ. ದಕ್ಷಿಣದ ನಂದಿಯ ಹಿಂದೆ ಪಶ್ಚಿಮಾಭಿಮುಖವಾದ ಸೂರ್ಯದೇವಾಲಯವಿದೆ. ಬೇಲೂರು ಕೇಶವ ದೇವಾಲಯವಿದ್ದಂತೆ ಇಲ್ಲಿಯೂ ಮೊದಲು ತೆರೆದ ರಂಗಮಂಡಪವಿದ್ದಿತು. ಆದರೆ ಒಂದನೇ ನರಸಿಂಹನ ಕಾಲದಲ್ಲಿ ಮುಖ್ಯ ಶಿಲ್ಪಿಯಾದ ಕೇದಾರೋಜನಿಗಾಗಿ ಕಾಳಿದಾಸಿ ದಾಮೋಜ ಎಂಬುವರು ಜಾಲಂಧ್ರಗಳನ್ನೂ ಹೊಸ ನಾಲ್ಕು

ದ್ವಾರಗಳನ್ನೂ ಮಾಡಿದರು. ಇಮ್ಮಡಿ ಬಲ್ಲಾಳನ ಕಾಲದಲ್ಲಿ ಈ ದೇವಾಲಯವು ಮತ್ತಷ್ಟು ಬೆಳೆಯಿತು.

ಕೆತ್ತನೆ ಕೆಲಸದಲ್ಲಿ ಪೌರಾಣಿಕ ಕಥೆಗಳ ಪಟ್ಟಿಯು ಗಮನಾರ್ಹವಾಗಿದೆ. ದೇವಾಲಯದ ಹೊರಗಿನ ಗೋಡೆಯ ಸುತ್ತಲೂ ಈ ಪಟ್ಟಿಕೆಯು ಇದ್ದರೂ ಕಥೆಯು ಒಂದೇ ಸರಣಿಯಲ್ಲಿಲ್ಲ. ಕಲ್ಲುಗಳನ್ನು ಜೋಡಿಸಿರುವುದರಲ್ಲಿ ವ್ಯತ್ಯಾಸ ಮಾಡಿರುವರು. ಒಂಬತ್ತು ಅಂಗುಲ ಅಗಲದ ಈ ಪಟ್ಟಿಕೆಯಲ್ಲಿ ವಿಗ್ರಹಗಳು ಸಣ್ಣಸಣ್ಣಗಿವೆ. ಈಶಾನ್ಯದಿಂದ ಆರಂಭಿಸಿದರೆ ಐದಡಿ ಉದ್ದದ ಒಬ್ಬ ಅಧಿಕಾರಿಯ (ಕೇತಮಯ್ಯ ?) ಆಸ್ಥಾನ ಚಿತ್ರವಿದೆ. ಕ್ಷೀರಸಾಗರ ಮಥನ, ಶುಕ್ರ ಕಚದೇವಯಾನಿ ಕಥೆ, ಉಮಾಮಹೇಶ್ವರನ ಆಸ್ಥಾನ, ಬಲಿ ವಾಮನ, ವೀರಭದ್ರ, ಶಿವವಿಗ್ರಹಗಳಿವೆ. ಪೂರ್ವದಲ್ಲಿ ಉಮಾಮಹೇಶ್ವರ, ಕೃಷ್ಣನ ಚರಿತ್ರೆ, ಮಹಾಭಾರತದ ವಿರಾಟಪರ್ವ, ಆಗ್ನೇಯದಲ್ಲಿ ಮಹಾಭಾರತ ಯುದ್ಧದ ಭೀಷ್ಮ ದ್ರೋಣ ಪರ್ವಗಳ ಕಥೆ, ನೈರುತ್ಯದಲ್ಲಿ ಕರ್ಣ ಶಲ್ಯ ಪರ್ವಗಳ ಕಥೆಯಿಂದ ಭಾರತವು ಮುಗಿದಿದೆ. ಅನಂತರ ಪುನಃ ಉಮಾಮಹೇಶ್ವರ, ಅರ್ಜುನನ ಪಾಶುಪತಾಸ್ತ್ರ ಸಂಪಾದನೆ, ಅರಣ್ಯಪರ್ವದ ಸೈಂಧವನ ಕಥೆ, ಭೀಮ–ಭಗದತ್ತ ಯುದ್ಧ, ತಾಂಡವೇಶ್ವರ, ಗಣೇಶ, ಮೋಹಿನಿ, ವಿಷ್ಣು ಶಿವಪಾರ್ವತಿ, ಷಣ್ಮುಖ, ಬ್ರಹ್ಮ, ಇತ್ಯಾದಿ ವಿಗ್ರಹಗಳಿವೆ. ಪಶ್ಚಿಮದ ಗೋಡೆಯಮೇಲೆ ಅನಂತಶಾಯಿ, ಪ್ರಹ್ಲಾದ–ನರಸಿಂಹ, ರಾಮರಾವಣ ಯುದ್ಧ (ಶಿಲ್ಪಿ–ತಾನಗುಂದೂರ ಹರಿದಾಸಿ), ಇಂದ್ರ ಬ್ರಹ್ಮ ಸರಸ್ವತೀ ಧರಣೀವರಾಹ, ಮಹಾಭಾರತದ ಕರ್ಣಾರ್ಜುನ ಯುದ್ಧ, ದುಶ್ಯಾಸನ ವಧ, ಮೋಹಿನೀ–ದಕ್ಷಿಣಾಮೂರ್ತಿ, ಕಾಳೀಪೂಜೆ – ನರಬಲಿ, ರಾಮಾಯಣದ ಕಿಷ್ಕಿಂಧ ಕಾಂಡದ ಕಥೆ, ಖಾಂಡವದಹನ, ತ್ರಿಮೂರ್ತಿ (ಶಿಲ್ಪಿ–ಬೇಲೂರ ಲಕಪ), ಶಾರದಾ, ಮನ್ಮಥ-ರತಿ, ಪುನಃ ಇಂದ್ರಕೀಲ-ಪಾಶುಪತಾಸ್ತ್ರ ಕಥೆ (ಶಿಲ್ಪಿ ಕೇತಣ), ರಾಮಾಯಣದ ಅರಣ್ಯ ಕಾಂಡ ಮತ್ತು ಸುಂದರ ಕಾಂಡದ ಕಥೆ, ಮೋಹಿನೀ-ಭಸ್ಮಾಸುರ, ವಿಷ್ಣುವಿನ ದ್ವಾದಶಮೂರ್ತಿಗಳು, ದ್ವಾದಶಾದಿತ್ಯರು, ಮಹಾಭಾರತದ ಭೀಷ್ಮಾರ್ಜುನ ದ್ರೋಣಾರ್ಜುನ ಯುದ್ಧಗಳು; ಉತ್ತರ ಗರ್ಭಗುಡಿಯ ಪಶ್ಚಿಮದಲ್ಲಿ ಶಿವ-ಮೋಹಿನೀ, ಉಗ್ರನರಸಿಂಹ



ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದ ಮಹಾದ್ವಾರ

(ಹರಿಪ), ಸಪ್ತಮಾತೃಕೆಯರು, ಅಭಿಮನ್ಯು ವಧ, ದುಶ್ಶಾಸನ ವಧ, ಭೀಮ-ಭಗದತ್ತ, ಸಂಶಪ್ತಕ ವಧ, "ಟೆಲಿಸ್ಕೋಪ್" (?) (ಶಿಲ್ಪಿ ಹರಿಪ), ವಿಷ್ಣು ಅವತಾರಗಳು, ಮೋಹಿನಿ, ದಕ್ಷಿಣಾಮೂರ್ತಿ, ಉಮಾ ಮಹೇಶ್ವರನ ಆಸ್ಥಾನ, ತಾಂಡವ ಸರಸ್ವತಿ, ಗಜಾಸುರಮರ್ದನ ಮತ್ತು ನೃತ್ಯಗಣೇಶ, ಪಾರ್ವತಿ ಮತ್ತು ಮುಂಗಸಿ, ಅಶೋಕವೃಕ್ಷದೋಹದ, ಶಿವಪಾರ್ವತಿ ವಿಷ್ಣು ಗಣೇಶರಿರುವ ಆಸ್ಥಾನ, ಇತ್ಯಾದಿ ವಿಗ್ರಹಗಳಿವೆ.

(೨) **ಮಹಾದ್ವಾರಗಳು :** ಒಂದನೇ ನರಸಿಂಹನ ಕಾಲದಲ್ಲಿ ತೆರೆದ ನವರಂಗ ಮಂಡಪವು ಮುಚ್ಚಲ್ಪಟ್ಟು ದಕ್ಷಿಣ, ಆಗ್ನೇಯ, ಈಶಾನ್ಯ ಮತ್ತು ಉತ್ತರದಲ್ಲಿ ನಾಲ್ಕು ಮಹಾದ್ವಾರಗಳನ್ನು ಮಾಡಲಾಯಿತು. ಇವುಗಳಲ್ಲಿ ದಕ್ಷಿಣ ದ್ವಾರ ಅತ್ಯುತ್ತಮವೆಂದು ಹೇಳಬಹುದು. ದ್ವಾರದ ಎರಡು ಪಕ್ಕದಲ್ಲೂ ಆರು ಅಡಿ ಎತ್ತರದ ದ್ವಾರಪಾಲಕ ವಿಗ್ರಹಗಳಿವೆ. ಬಲಗಡೆ ದ್ವಾರಪಾಲಕನು ಡಮರುಗ ಸರ್ಪವನ್ನು ಹಿಡಿದು ಮೂರು ಕಣ್ಣು ಜಟಾ ಮಕುಟ ಹೊಂದಿರುವನು. ಮುಂದಿನ ಎರಡು ಕೈಗಳು ಮುರಿದು ಹೋಗಿವೆ. ಎಡಗಡೆಯ ದ್ವಾರಪಾಲಕನ ಹಿಂದಿನ ಕೈಗಳಲ್ಲಿ ಜ್ವಾಲೆ ಡಮರುಗಗಳಿವೆ. ದ್ವಾರದ ಮೇಲೆ ಹನ್ನೆರಡು ಅಡಿ ಉದ್ದ, ಮೂರು ಅಡಿ ಎತ್ತರವಿರುವ ಕಲ್ಲಿನಮೇಲೆ ಅಷ್ಟಭುಜದ ಅಂಧಕಾಸುರ ಸಂಹಾರ ಮೂರ್ತಿಯು ತಾಂಡವ ಮಾಡುತ್ತಿರುವನು. ಅಂಧಕಾಸುರ, ನಂದಿ ಪರಿವಾರ ದೇವತೆಗಳು ಶಿವನಕಡೆ ನೋಡುತ್ತಿರುವರು. ದೇವರ ತಲೆಯ ಮೇಲೆ ಐದು ಹೆಡೆಗಳ ಸರ್ಪ, ಶಿಖರವಿದೆ. ಬಲ ಮತ್ತು ಎಡಭಾಗಗಳಲ್ಲಿ ಬ್ರಹ್ಮ ವಿಷ್ಣು ವಿಗ್ರಹಗಳಿವೆ. ಯೋಧನನ್ನು ಬಾಯಲ್ಲಿ ಹಿಡಿದಿರುವ ಮಕರ, ಅದರಮೇಲೆ ವರುಣ, ಅದರ ಕಾಲಿನ ಹತ್ತಿರ ವೀರಾಸನದಲ್ಲಿರುವ ಯೋಧರು ಎರಡು ಪಕ್ಕಗಳಲ್ಲೂ ಇರುವರು. ಅಂಚಿನಲ್ಲಿ ಸರ್ಪವನ್ನು ಕಚ್ಚಿಕೊಂಡಿರುವ ಸಿಂಹ ಗಜದೊಡನೆ ಮತ್ತು ಸಳನೊಡನೆ ಹೋರಾಡು ವಂತಿದೆ. ಈ ಮಕರ ತೋರಣದಮೇಲೆ ಸಪ್ತಮಾತೃಕೆಯರು, ನರ್ತಕರು, ಅಷ್ಟದಿಕ್ಪಾಲಕರು ಇರುವರು. "ಸ್ವಸ್ತಿ ಶ್ರೀಮತು ಪ್ರತಾಪ ಹೊಯ್ಸಳ ನಾರಸಿಂಹದೇವನ ರೂವಾರಿ ಕೇದಾರೋಜಂಗೆ ಮಲಪರ ಗಂಡಭೇರುಂಡ ರೂವಾರಿ ಗಿರಿವಜ್ರದಂಡ ರೂವಾರಿ ಕಾಳಿದಾಸಿ ಗೆಯ್ದ ಮಕರತೋರಣ |

ಮಂಗಳಂ ಶ್ರೀ." ಈ ದ್ವಾರದ ಮೂಲಕವಾಗಿಯೇ ಅರಮನೆಯಿಂದ ಚಕ್ರವರ್ತಿಗಳು ಪ್ರಾತಃಕಾಲದಲ್ಲಿ ಪ್ರವೇಶಿಸಿ ಹೊಯ್ಸಳೇಶ್ವರ ಲಿಂಗ ವನ್ನು ದರ್ಶಿಸುತ್ತಿದ್ದರು.

ಆಗ್ನೇಯದ ದ್ವಾರವು ದೇಮೋಜನ ಕೆಲಸ (ಪೂರ್ವದ ಬಾಗಿಲು ವಾಡವ ದೇಮೋಜ ಗೇದ). ದಶಭುಜದ ತಾಂಡವೇಶ್ವರ, ಲತಾತೋರಣ, ಪುಷ್ಪತೋರಣ, ಮಕರತೋರಣಗಳಲ್ಲಿ ಅಷ್ಟದಿಕ್ಪಾಲಕ, ನರಸಿಂಹ, ಸರಸ್ವತಿ, ಬ್ರಹ್ಮ, ಗಣೇಶ, ಪಾರ್ವತಿ, ಭೈರವ, ಇಂದ್ರಾಣಿ, ಕೇಶವ, ಸೂರ್ಯನಾರಾಯಣ, ಇತ್ಯಾದಿ ವಿಗ್ರಹಗಳಿವೆ. ಈಶಾನ್ಯ ಮತ್ತು ಉತ್ತರ ದ್ವಾರಗಳು ಕಲಾದೃಷ್ಟಿಯಿಂದ ಆಗ್ನೇಯ ಮತ್ತು ದಕ್ಷಿಣ ದ್ವಾರಗಳಷ್ಟು ಸಮರ್ಪಕವಾಗಿಲ್ಲ.

(೩) **ಕೇದಾರೇಶ್ವರ ದೇವಾಲಯ**: ಇದು ಸಣ್ಣದಾಗಿದ್ದರೂ ಸೋಮ ನಾಥಪುರದ ಕೇಶವ ದೇವಾಲಯದಂತೆ ಕಲಾದೃಷ್ಟಿಯಿಂದ ಸಮರ್ಪಕವಾ ಗಿದೆ. ಮೊದಲು ಏಕಕೂಟವಾಗಿದ್ದುದನ್ನು, ತ್ರಿಕೂಟವಾಗಿ ಮಾರ್ಪಡಿಸಿ ದಂತೆ ಕಂಡುಬರುತ್ತದೆ. ಕಪ್ಪೆಚೆನ್ನಿಗದೇವಾಲಯದಷ್ಟೆ ಪ್ರಮಾಣದ ಲ್ಲಿದ್ದರೂ ಹೊರಗೋಡೆಗಳಲ್ಲಿ ಅಮೋಘವಾದ ಚಿತ್ರಪಟ್ಟಿಕೆಗಳಿವೆ. ಇದರ ತಲವಿನ್ಯಾಸ ಕೇವಲ ಪೂರ್ವಾಭಿಮುಖವಾಗಿಯೂ ಇಲ್ಲ; ಬೇಲೂರ ಚೆನ್ನಕೇಶವ ಮತ್ತು ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯಗಳಂತೆ ಪೂರ್ವದಿಂದ ೧೮ ಡಿಗ್ರಿ ಈಶಾನ್ಯಕ್ಕೂ ಇಲ್ಲ. ಸುಮಾರು ಹದಿನೈದು ಡಿಗ್ರಿ ಆಗ್ನೇಯಕ್ಕೆ ತಿರುಗಿಕೊಂಡಿದೆ. ಈ ದೇವಾಲಯವನ್ನು ಫರ್ಗುಸನ್, ಪರ್ಸಿ ಬ್ರೌನ್ ಮುಂತಾದವರು ವಿಶೇಷವಾಗಿ ಹೊಗಳಿರುವರು.

(೪) **ಹಳೆಯಬೀಡಿನ ಪ್ರಾಚೀನ ನಿವೇಶನ**: ಈ ನಿವೇಶನಗಳನ್ನು ಶೋಧಿಸಿದರೆ ಹೊಯ್ಸಳರ ಕಾಲದ ನಗರ ನಿರ್ಮಾಣಕ್ರಮ ಕಂಡುಬರು ತ್ತದೆ. ಹೊರಗಿನ ಕೋಟೆಯು ಹೊಯ್ಸಳೇಶ್ವರ ದೇವಾಲಯದಿಂದ ಕೆರೆಯ ಕಟ್ಟೆವರೆಗೆ ದೊಡ್ಡಕಲ್ಲುಗಳಿಂದ ಗಾರೆ ಇಲ್ಲದೆ ಕಟ್ಟಲಾಗಿದ್ದಿತು. ನಗರೇಶ್ವರ ದೇವಾಲಯ ಅದರ ಹತ್ತಿರ ಇರುವ ನಾಲ್ಕು ಗುಡಿಗಳು ಬಹುಶಃ ೧೨ನೆಯ ಶತಾಬ್ದದಲ್ಲಿ ನಿರ್ಮಿತವಾದವು. ಇವುಗಳ ಶಿಲ್ಪವು ಕೇದಾರೇಶ್ವರ ಶಿಲ್ಪ ದಂತೆಯೇ ಸುಂದರವಾಗಿದೆ. ದೇವಾಲಯದ ಗೋಡೆಗಳನ್ನು ಹೊರ



ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯ-ಈಶಾನ್ಯದೃಶ್ಯ

ಭಾಗದಲ್ಲಿ ಚಚ್ಚೌಕವಾದ ದೊಡ್ಡ ಚಪ್ಪಟೆ ಕಲ್ಲುಗಳಿಂದಲೂ, ಒಳ ಗೋಡೆಯನ್ನು ದೊಡ್ಡ ಇಟ್ಟಿಗೆಗಳಿಂದಲೂ ತುಂಬುತ್ತಿದ್ದರು. ಬಹುಶಃ ನಗರೇಶ್ವರ ದೇವಾಲಯದ ಸ್ಥಳ ವ್ಯಾಪಾರದ ಪೇಟೆಯಾಗಿದ್ದಿತು. ಮುಖ್ಯ ರಸ್ತೆಯು ಪಶ್ಚಿಮದಿಂದ ಪೂರ್ವಕ್ಕೆ ಬೇಲೂರು ಬಾಗಿಲಿನಿಂದ ಹೊಯ್ಸಳೇಶ್ವರ ದೇವಾಲಯದವರೆಗೆ ಹೋಗುತ್ತಿದ್ದಿತು. ನಗರೇಶ್ವರಕ್ಕೆ ಪಶ್ಚಿಮದಲ್ಲಿರುವ ರುದ್ರೇಶ್ವರ ತ್ರಿಕೂಟಾಚಲದಲ್ಲಿ ಎರಡು ಲಿಂಗ ವೀರಭದ್ರ ವಿಗ್ರಹಗಳು ಇವೆ. ಇದಕ್ಕೆ ಪಶ್ಚಿಮದಲ್ಲಿ ಬೆಣ್ಣೆಗುಡ್ಡದ ಹತ್ತಿರ ನೆಲಮಾಳಿಗೆ ಇದೆ. ಇದಕ್ಕೆ ಪಶ್ಚಿಮದಲ್ಲಿ ನಡುಗೇರಿಯಿದ್ದಿತು. ಇದರ ಸುತ್ತಲೂ ಮತ್ತೊಂದು ಒಳಕೋಟೆ ಇದ್ದಿತು. ಬೆಣ್ಣೆಗುಡ್ಡದ ಪಶ್ಚಿಮಕ್ಕೆ ಸುಮಾರು ಐವತ್ತು ಅಡಿ ಆಳದ ಕಂದಕ, ದೊಡ್ಡ ಕೋಟೆಯ ಗೋಡೆ ಇದ್ದು, ಇವಕ್ಕೆ ಮುಂದೆ ಮತ್ತೊಂದು ಸಣ್ಣ ಕೋಟೆ ಕಂದಕಗಳಿದ್ದವು. ಈ ಕೋಟೆಯ ಗೋಡೆಯ ಹೊರಭಾಗವನ್ನು ದೊಡ್ಡ ಕಲ್ಲುಗಳಿಂದಲೂ ಒಳಭಾಗವನ್ನು ಮಣ್ಣಿನಿಂದಲೂ ಮಾಡಲಾಗಿದೆ. ಈ ಗೋಡೆಯ ಮೇಲೆ ನೂರು ಗಜಕ್ಕೆ ಒಂದು ಬತೇರಿ ಇದೆ. ಇದರ ನೈರುತ್ಯದಲ್ಲಿ ರಸ್ತೆಯು ಎರಡು ದೊಡ್ಡ ಗೋಡೆಗಳ ಮಧ್ಯೆ ಹೋಗುತ್ತದೆ. ಇದು ಬಹುಶಃ ಬೇಲೂರು ರಸ್ತೆಯಾಗಿದ್ದಿತು. ಮತ್ತೊಂದು ಬಾಗಿಲ ರಸ್ತೆಯು ಕಟ್ಟೆ ಸೋಮನಹಳ್ಳಿ ಕೆರೆಯ ಕಡೆಗೆ ಹೋಗುವುದು. ಪೂರ್ವಕ್ಕೆ ಹೋಗುತ್ತ ನಗರದ ಆಗ್ನೇಯದಲ್ಲಿ ಶೂಲದ ವನವಿದೆ. ಇಲ್ಲಿರುವ ವೀರಗಲ್ಲುಗಳಿಂದ ಈ ಸ್ಥಳವು ಶ್ಮಶಾನವಾಗಿದ್ದಿತೆಂದು ಊಹಿಸಬಹುದು.

(೫) **ಜೈನ ಬಸದಿ:** ಇವುಗಳಿಗೆ ದಕ್ಷಿಣದಲ್ಲಿ ಅನೇಕ ಜೈನ ವಿಗ್ರಹಗಳು ಬಿದ್ದಿವೆ. ಹೊಯ್ಸಳೇಶ್ವರಕ್ಕೆ ದಕ್ಷಿಣದಲ್ಲಿ, ಕೇದಾರೇಶ್ವರಕ್ಕೆ ಪಶ್ಚಿಮದಲ್ಲಿ ಮೂರು ಜೈನ ಬಸದಿಗಳಿವೆ. ಇವುಗಳಲ್ಲಿ ಪಾರ್ಶ್ವನಾಥ ಬಸದಿಯನ್ನು ೧೧೩೩ ರಲ್ಲೂ, ಶಾಂತಿನಾಥ ಬಸದಿಯನ್ನು ೧೧೯೬ರಲ್ಲೂ, ಮಧ್ಯದಲ್ಲಿರುವ ಆದಿನಾಥ ಬಸದಿಯನ್ನು ಬಹುಶಃ ಅದೇ ಸಮಯದಲ್ಲೂ ನಿರ್ಮಿಸಲಾಯಿತು. ವಿಷ್ಣುವರ್ಧನನ ಆಪ್ತ ದಂಡನಾಯಕನಾದ ಗಂಗರಾಜನ ಮಗ ಬೊಪ್ಪನು ತಂದೆಯ ಹೆಸರಿನಲ್ಲಿ ಪಾರ್ಶ್ವನಾಥ ಬಸದಿಯನ್ನು ೧೧೩೩ರಲ್ಲಿ ಕಟ್ಟಿಸಿದನು. ಅದೇ ಸಮಯದಲ್ಲಿ ವಿಷ್ಣುವರ್ಧನನ ಮಗನಾದ ನರಸಿಂಹನು

ಹುಟ್ಟಿದುದರಿಂದ ಬಂಕಾಪುರದಲ್ಲಿದ್ದ ವಿಷ್ಣುವರ್ಧನನು ಅದಕ್ಕೆ ವಿಜಯ ಪಾರ್ಶ್ವನಾಥನೆಂದು ಹೆಸರಿಟ್ಟು ಪ್ರಸಾದವನ್ನು ಸ್ವೀಕರಿಸಿದನು. ಈ ಬಸದಿಯಲ್ಲಿ ಗರ್ಭಗೃಹ ಸುಕನಾಸಿ ನವರಂಗ ಮುಖಮಂಡಪಗಳಿವೆ. ಬಲಿಪೀಠ ೩೨ ದಳದ ಕಮಲದಂತಿದೆ. ಮುಖಮಂಡಪದಲ್ಲಿ ೩೨ ಸ್ತಂಭಗಳು, ಜಗತಿ, ಚಿತ್ರಫಲಕಗಳು ಇವೆ. ನವರಂಗದಲ್ಲಿರುವ ಇಪ್ಪತ್ತುನಾಲ್ಕು ಪೀಠಗಳಮೇಲೆ ಬಹುಶಃ ತೀರ್ಥಂಕರರ ವಿಗ್ರಹಗಳಿದ್ದವು. ನವರಂಗದ ಸ್ತಂಭಗಳು ಮತ್ತು ಭುವನೇಶ್ವರಿ ಬಹಳ ಸುಂದರವಾಗಿವೆ. ಗರ್ಭಗುಡಿಯಲ್ಲಿರುವ ಪಾರ್ಶ್ವನಾಥ ಸುಮಾರು ಹದಿನಾಲ್ಕು ಅಡಿ ಎತ್ತರ ಇದ್ದು ಏಳು ಹೆಡೆಗಳ ಸರ್ಪವನ್ನು ಶಿರದಮೇಲೆ ಹೊಂದಿದೆ. ನಿಂತಿರುವ ಈ ಮೂರ್ತಿ ಪ್ರಸನ್ನವದನವನ್ನು ಹೊಂದಿದೆ. ಅದರ ಹಿಂದೆ ಸರ್ಪದ ಸುರಳಿಸುತ್ತಿದ ದೇಹವಿದೆ. ಪಕ್ಕಗಳಲ್ಲಿ ಸರ್ಪಫಣಾಛತ್ರ ಹೊಂದಿರುವ ಪುರುಷ ಸ್ತ್ರೀ ವಿಗ್ರಹಗಳಿವೆ.

(೬) **ಆದಿನಾಥ ಬಸದಿ:** ಇದು ಚಿಕ್ಕದಾಗಿದ್ದರೂ ಸುಂದರವಾಗಿದೆ. ನವರಂಗದಲ್ಲಿರುವ ಶಾರದಾವಿಗ್ರಹ ಚಂದ್ರಪೀಠದಮೇಲೆ ಅಕ್ಷಮಾಲಾ, ಅಂಕುಶಪಾಶ ಪುಸ್ತಕವನ್ನು ಕೈಗಳಲ್ಲಿ ಹೊಂದಿದೆ. ಮೂಲವಿಗ್ರಹ ಭಂಗವಾಗಿ ಈಗ ಶಾಂತಿನಾಥ ಬಸದಿಯಲ್ಲಿಡಲಾಗಿದೆ. ಈಗ ಒಂದು ಸ್ಥಾನಕ ಮೂರ್ತಿಯಿದೆ. ಈ ಬಸದಿಯನ್ನು ವಿಷ್ಣುವರ್ಧನನ ಕಾಲದಲ್ಲಿ ಕಟ್ಟಲಾಯಿತು (ಬೇಲೂರು ೩೩೫).

(೭) **ಶಾಂತಿನಾಥ ಬಸದಿ:** ಇದು ವಿಜಯನಗರ ಕಾಲದಲ್ಲಿ ಬಹಳ ಮಟ್ಟಿಗೆ ಮಾರ್ಪಾಟುಹೊಂದಿತು. ಮುಂದಿನ ಮಾನಸ್ತಂಭ ೨೦ ಅಡಿ ಎತ್ತರವಿದ್ದು ಮೇಲ್ಭಾಗದಲ್ಲಿ ಯಕ್ಷವಿಗ್ರಹವಿದೆ. ಇಲ್ಲಿನ ಮೂಲವಿಗ್ರಹ ಸುಮಾರು ೧೪ ಅಡಿ ಎತ್ತರವಿದೆ. ನವರಂಗದಲ್ಲಿ ಶಿರೋಭಾಗವಿಲ್ಲದ ಕುಳಿತಿರುವ ಆದಿನಾಥ ವಿಗ್ರಹವಿದೆ.

ಬಸದಿಹಳ್ಳಿಯ ಆಗ್ನೇಯದಲ್ಲಿ ವಿರಕ್ತಮಠದ ಹತ್ತಿರ ಸುಂದರವಾದ ಶಿವಾಲಯವಿದೆ. ಇದರ ಸುಕನಾಸಿ ಮತ್ತು ಗರ್ಭಗುಡಿಗಳು ಮಾತ್ರ ಈಗಲೂ ಇವೆ. ಸುಕನಾಸಿಯ ಮೇಲ್ಛಾವಣಿಯಲ್ಲಿ ಅಂಧಕಾಸುರ ಮರ್ದನ ಅಷ್ಟದಿಕ್ಪಾಲಕ ವಿಗ್ರಹಗಳಿವೆ. ದೇವಾಲಯದ ಹಿಂಭಾಗದಲ್ಲಿ

ರಾಮಾಯಣ ಕಥೆ, ದೊಡ್ಡ ವಿಗ್ರಹಗಳು ಕಂಡುಬರುತ್ತವೆ. ದೋರ ಸಮುದ್ರ ಕೆರೆಯ ಏರಿಯಮೇಲೆ ನಂದಿ ಮುಂತಾದ ಅನೇಕ ವಿಗ್ರಹಗಳು ಬಿದ್ದಿವೆ.

(೮) **ವೀರಭದ್ರ ದೇವಾಲಯ:** ಇದು ಹಳೆಯಬೀಡಿನ ಆಗ್ನೇಯದಲ್ಲಿ ಕೋಟೆಗೋಡೆಯ ಹತ್ತಿರವಿದೆ. ಇದರ ಮುಖಮಂಡಪ ವಿಜಯನಗರ ಕಾಲದ್ದಾಗಿದೆ. ಆದರೆ ಒಳಗಿನ ನವರಂಗ ಸುಕನಾಸಿ ಗರ್ಭಗುಡಿಗಳು ಹೊಯ್ಸಳರ ಕಾಲದಲ್ಲಿ ಮಾಡಿದವುಗಳಾಗಿವೆ. ಗರ್ಭಗುಡಿಯ ಸುತ್ತಲೂ ಆನೆಸಾಲು, ಲತಾಪಟ್ಟಿಕೆ ಸುಮಾರು ಎರಡೂವರೆ ಅಡಿ ಎತ್ತರದ ದೊಡ್ಡ ವಿಗ್ರಹಗಳಿವೆ. ಲಕ್ಷ್ಮೀನಾರಾಯಣ, ನಂದಿವಾಹನ, ಕಾಳೀ, ನೃತ್ಯ ಸರಸ್ವತಿ, ಮೋಹಿನೀ, ಮಹಿಷಮರ್ದನಿ, ಬ್ರಹ್ಮ, ತಾಂಡವೇಶ್ವರ, ನರಸಿಂಹ, ವರಾಹ, ವೇಣುಗೋಪಾಲ, ಉಮಾಮಹೇಶ್ವರ, ಇತ್ಯಾದಿ ಗಳಿವೆ. ಶಿಖರವು ಮೆಟ್ಟಲುಮೆಟ್ಟಲಾಗಿ ಅದರ ಮುಂದೆ ಸಳ-ಹುಲಿ ವಿಗ್ರಹ ವನ್ನು ಹೊಂದಿದೆ. ಹೊರಗಿನ ಮುಖಮಂಡಪ ಮತ್ತಾವುದೋ ದೇವಾಲಯದ ಕಲ್ಲುಗಳಿಂದ ನಿರ್ಮಿತವಾಗಿದೆ. ಇದರ ಭುವನೇಶ್ವರಿಯಲ್ಲಿ ತಾಂಡವೇಶ್ವರನಿರುವನು. ಒಳಗಿನ ಮಂಡಪ ಐದೇ ಅಡಿ ಎತ್ತರವಿದೆ. ಇದರಲ್ಲಿ ಉತ್ತರದಲ್ಲಿರುವ ಗೂಡಿನಲ್ಲಿ ಕತ್ತಿ ಬಾಣ ಧನುಸ್ ಖೇಟ ಹಿಡಿ ದಿರುವ ಸ್ತ್ರೀ ವಿಗ್ರಹವಿದೆ. ಇದರ ಕೆಳಗೆ ಶಾಸನವಿದೆ. ದಕ್ಷಿಣದ ಗೂಡಿನಲ್ಲಿ ಯೋಗಿಯ ವಿಗ್ರಹ ಯೋಗಮುದ್ರೆಯನ್ನು ತೋರಿಸುತ್ತಿದೆ. ಇದರ ಪಕ್ಕದಲ್ಲಿ ಪುರುಷ ಮತ್ತು ಸ್ತ್ರೀಯೋಗಿಗಳು, ಭೃಂಗಿ, ಮೇಲೆ ತಾಂಡವೇಶ್ವರ, ನಂದಿವಾಹನ, ವೀರಭದ್ರ, ದ್ವಿಭುಜದೇವಿ, ನಾಲ್ಕು ಭುಜದ ವೃಷಭ ಮುಖವುಳ್ಳ ನಂದಿಸೋಮ, ಇತ್ಯಾದಿಗಳಿವೆ. ಸುಮಾರು ಹದಿನಾಲ್ಕನೆಯ ಶತಾಬ್ದದ ಅಕ್ಷರಗಳ ಒಂದು ಶಾಸನ ಮೇಲಿನ ಅಂಚಿನಲ್ಲಿ ಕಂಡುಬರುತ್ತದೆ. ("ಶ್ರೀ ಗುರುಲಿಂಗ ಆದಿಲಿಂಗದೇವರ ಕಾರುಂಣ್ಯವ ನಿಸ್ತರವಾಗಿ ಈ ಹಸ್ತಕಲ ಗಣಗಳು ಸಹಿತ ಮುಖ್ಯವಾಗಿ ಇಹ ವೀರೇಶ್ವರ ಲಿಂಗದ ಕಾರುಂಣ್ಯವ ನಿಸ್ತರವಾಗಿ ಇಸ್ವರಿದಯ ಅಂದು ದೇವರ ಮಗ ವಿರಂಣನು ನಿರಸಿದರ್ ಚಲ.") ಗರ್ಭಗುಡಿಯಲ್ಲಿರುವ ವೀರಭದ್ರ ವಿಗ್ರಹ ಆಧುನಿಕ ಹೊಯ್ಸಳ ರೀತಿಯಲ್ಲಿ ಆರು ಅಡಿ ಎತ್ತರ

ವಿದೆ. ಕತ್ತಿ ತ್ರಿಶೂಲ ಡಮರು ಖೇಟ ಹಿಡಿದಿದೆ. ಮೇಲೆ ಪುಷ್ಪತೋರಣ, 'ಮಲ್ಲಾರ' ತೋರಣಗಳಿವೆ. ಇವುಗಳ ಮಧ್ಯದಲ್ಲಿ ಕಪಾಲ, ಕೀರ್ತಿ ಮುಖಗಳಿವೆ. ಮುಂದಿನ ನವರಂಗ ಮಂಡಪದಲ್ಲಿರುವ ನಂದಿ ಸುಮಾರು ಹದಿನೇಳನೆಯ ಶತಮಾನದ್ದಾಗಿದೆ. ಆದ್ದರಿಂದ ವೀರಭದ್ರ ವಿಗ್ರಹ ಮೊದಲಿನ ವಿಗ್ರಹವೇ ಎಂಬುದರಲ್ಲಿ ಸಂಶಯವಿದೆ.

ರಾಘವಾಂಕ, ಕೆರೆಯ ಪದ್ಮರಸರ ಸಂಬಂಧವಾದ ಕಥೆಗಳಲ್ಲಿ ಓರುಗಲ್ಲು ವೀರಭದ್ರನ ವಿಷಯ ಬರುತ್ತದೆ. ಬಹುಶಃ ಹಳೆಯಬೀಡಿನಲ್ಲಿ ಅದರ ಪ್ರತೀಕವನ್ನು ಹದಿಮೂರನೆಯ ಶತಾಬ್ದದ ಅಂತ್ಯದಲ್ಲಿ ಸ್ಥಾಪಿಸಿರಬಹುದು.

ವೀರಭದ್ರ ದೇವಾಲಯದ ಪಕ್ಕದಲ್ಲಿ "ಗೂಡ್ಲೇಶ್ವರ" ದೇವಾಲಯವಿದೆ. ಇದನ್ನು ಈಚೆಗೆ ಹಳೆಯ ಹೊಯ್ಸಳ ದೇವಾಲಯದ ಕಲ್ಲಿನಿಂದ ಕಟ್ಟಲಾಗಿದೆ. ಹಾಗೆಯೇ ಕುಂಬ್ಳೇಶ್ವರ ದೇವಾಲಯವೂ ಈಚೆಗೆ ನಿರ್ಮಿತವಾದುದು.

(೯) **ರಂಗನಾಥ ದೇವಾಲಯ:** ಇದು ಮೊದಲು ಶಿವದೇವಾಲಯವಾಗಿದ್ದಿತು. ಇದರ ಭುವನೇಶ್ವರಿಯಲ್ಲಿರುವ ಶಾಸನಗಳಲ್ಲಿ (ಎ. ಕ. XV. ಬೇಲೂರು ೩೨೫, ೩೨೬) "ದೋರಸಮುದ್ರ ಕೋಟೆಯ ಈಶಾನ್ಯ ಹೊಱಗಣದೇಗು(ಲ) ಶ್ರೀ ಬೊಬ್ಬೇಶ್ವರ" (ಬೋಚೇಶ್ವರ) ಎಂದು ಕರೆಯಲಾಗಿದೆ. ಶಕ ೧೧೯೬ (ಕ್ರಿ. ಶ. ೧೨೭೪) "ರಾಜಗುರು ಚಂದ್ರಭೂಷಣದೇವ ಮತ್ತು ರಾಜಧಾನಿ ದೋರಸಮುದ್ರದ ನೂಱಿಪ್ಪತ್ತು ಸ್ಥಾನಿಕರು ಬೋಚೇಶ್ವರದ ಸೋಮಜೀ ಸತ್ತಮೇಲೆ ಅವನ ಆಸ್ತಿಯಾದ ಬಾಗಡೆಯ ನೊಣಬೇಶ್ವರ ಭೋಗೇಶ್ವರ ಹೊಯ್ಸಳೇಶ್ವರ ಭೂಮಿಯನ್ನು ಮೂರು ಭಾಗಮಾಡಿ ಅವನ ಮಕ್ಕಳಿಗೆ ಹಂಚಿದರು. ಆಂಗಿರಸ ಸಂವತ್ಸರದಲ್ಲಿ ಬೊಬ್ಬೇಶ್ವರ ಸ್ಥಾನಿಕ, ಪಾಠಕ, ನಾಯಕರ ಮಕ್ಕಳು ನಾಗಣ್ಣ, ಸೋಮಗುರುವಿನ ಅಳಿಯ ಮಾಚಗುರು, ಮಗ ಅನಂತಗುರು ಎಲ್ಲರೂ ಸೇರಿ ರಾಮಕೃಷ್ಣ ಪ್ರಭುಗಳ ಮಕ್ಕಳು ದೇವಣ ಪ್ರಭುವಿಗೆ ದಾನ ಕೊಟ್ಟರು. ಶ್ರೀ ರಾಮಕೃಷ್ಣದೇವರ ದೇವಾಲ್ಯ" ಎಂದಿದೆ.

ರಂಗನಾಥ ದೇವಾಲಯದ ಗೋಪುರ ಮೆಟ್ಟಲು ಮೆಟ್ಟಲಾದ

ಪಿರಮಿಡ್ ಆಕಾರದಲ್ಲಿದೆ. ಗರ್ಭಗೃಹ, ಸುಕನಾಸಿ ಮತ್ತು ಮಂಡಪ ಹಳೆಯ ಭಾಗಗಳಾಗಿವೆ. ಮಂಡಪದ ದ್ವಾರಪಾಲಕರು ಶೈವ ದ್ವಾರ ಪಾಲಕರು ಮತ್ತು ಹೊರಗಿನ ನವರಂಗದ ಭುವನೇಶ್ವರಿಯಲ್ಲಿ ತಾಂಡವೇಶ್ವರ, ಅಷ್ಟದಿಕ್ಪಾಲಕರು ಇರುವರು. ಈಗ ಗರ್ಭಗುಡಿಯಲ್ಲಿ ರುವ ಅನಂತಶಾಯಿ ವಿಗ್ರಹವನ್ನು ಆಮೇಲೆ ಸ್ಥಾಪಿಸಿದಂತೆ ಕಂಡು ಬರುವುದು. ಇದು ಹೊಯ್ಸಳ ಕಾಲದ್ದು. ಇದರ ಕುಟ್ಟಿತ ತೋರಣದಲ್ಲಿ ದಶಾವತಾರಗಳಿವೆ. ಅನಂತನ ಮೇಲೆ ಮಲಗಿರುವ ಪದ್ಮನಾಭನ ಪಾದಗಳ ಹತ್ತಿರ ಶ್ರೀದೇವಿ, ಶಿರೋಭಾಗದಲ್ಲಿ ಭೂದೇವಿ, ಹಿಂದೆ ಚಾಮರ ಧಾರಿಣಿ ಇರುವರು. ಮಹಾದ್ವಾರವನ್ನು ಇತರ ದೇವಾಲಯಗಳ ಕಲ್ಲು ಗಳಿಂದ ಕಟ್ಟಿರುವರು. ಆನೆಸಾಲು, ಕುದುರೆಸಾಲು, ಪೌರಾಣಿಕ ಕಥೆಗಳು, ಬ್ರಹ್ಮ, ವಿಷ್ಣು, ಗಣೇಶ, ತಾಂಡವೇಶ್ವರ ವಿಗ್ರಹಗಳು ಇಲ್ಲಿವೆ.

(೧೦) **ಬೆಣ್ಣೆಗುಡ್ಡ :** ಹಳೇಬೀಡಿನಲ್ಲಿ ಸುಮಾರು ೨೫೦ ಅಡಿ ಎತ್ತರ ವಿರುವ, ಉತ್ತರದಿಂದ ದಕ್ಷಿಣಕ್ಕೆ ಹರಡಿರುವ ಬೆಣ್ಣೆಗುಡ್ಡಕ್ಕೆ ನಗರೇಶ್ವರ ರುದ್ರೇಶ್ವರ ದೇವಾಲಯಗಳ ಪಕ್ಕದಲ್ಲಿ ಮಾರ್ಗವಿದೆ. ಇದರಿಂದ ಪಶ್ಚಿಮಕ್ಕೆ ಅಗಲವಾದ ಮಣ್ಣುದಿಣ್ಣೆ ಚಿಕ್ಕ ಬೆಣ್ಣೆಗುಡ್ಡದವರೆಗೆ ಹೋಗಿದೆ. ಬೆಣ್ಣೆಗುಡ್ಡದ ಉತ್ತರದ ಕೊನೆಯಲ್ಲಿ ೩೦ ಅಡಿ ಚಚ್ಚೌಕವಾದ ಜಗತಿ ಇದೆ. ಇದನ್ನು ಪಿರಂಗಿ ಬತೇರಿ ಎಂದು ಕರೆಯುವರು. ಹೊಯ್ಸಳರ ಕಾಲದಲ್ಲಿ ಇದು ಕಾವಲುಗಾರರ ಸ್ಥಳವಾಗಿದ್ದು, ಪಾಳೆಯಗಾರರ ಕಾಲ ದಲ್ಲಿ ಬತೇರಿ(Battery)ಯಾಗಿ ಉಪಯೋಗಿಸಲ್ಪಡುತ್ತಿದ್ದಿತು. ಇದಕ್ಕೆ ಪಶ್ಚಿಮದಲ್ಲಿ ಚಿಕ್ಕ ಬೆಣ್ಣೆಗುಡ್ಡದಿಂದ ಆಚೆ ಕೋಟೆ ಇದ್ದಿತು. ವಾಯವ್ಯ ದಲ್ಲಿ ಸುಮಾರು ಎರಡು ಮೈಲಿ ದೂರದಲ್ಲಿ ನರಸಿಂಹಪುರವಿದೆ. ಇಲ್ಲಿ ಹೊಯ್ಸಳ ಕಾಲದ ಯೋಗನರಸಿಂಹ ದೇವಾಲಯವಿದೆ. ಗರ್ಭಗುಡಿ ಸ್ತಂಭಗಳ ಮಂಡಪ ಹಳೆಯದಾದರೂ ಗೋಪುರವನ್ನು ಕೆಲವು ಶತಮಾನ ಗಳ ಅನಂತರ ಇಟ್ಟಿಗೆಗಳಿಂದ ಕಟ್ಟಿರುವರು. ನರಸಿಂಹಪುರದಿಂದ ಆಚೆ ಘಟ್ಟದ ಹಳ್ಳಿಗುಡ್ಡವು ಬೇಲೂರು ರಸ್ತೆ ಕಡೆ ಇದೆ. ರುದ್ರೇಶ್ವರ ಪಂಚ ಲಿಂಗೇಶ್ವರ ದೇವಾಲಯಗಳ ಉತ್ತರದಲ್ಲಿ ಈಗಿನ ಹಳೇಬೀಡು ಊರು, ಬಿದರೆಕೆರೆ ಇವೆ. ಇವುಗಳ ಮಧ್ಯದಲ್ಲಿ ಹಳೆಯ ಕೋಟೆ ಇದ್ದಿತು.

ಅದಕ್ಕೂ ಸುಮಾರು ಐದು ಮೈಲಿ ಉತ್ತರದಲ್ಲಿ ಬೆಳವಾಡಿಯ ದೇವಾಲಯ ಮತ್ತು ಕೆರೆ ಕಾಣಬರುತ್ತವೆ. ಇಲ್ಲಿಯೇ ಕಳಶಪುರದ ಗುಡ್ಡ ಅದರ ಹಿಂದೆ ಬಾಬಾಬುಡನ್‌ಗಿರಿ ಶಿಖರಗಳು ಕಾಣುತ್ತವೆ.

ಬೆಣ್ಣೆಗುಡ್ಡದ ಈಶಾನ್ಯದಲ್ಲಿ ಹೊಯ್ಸಳೇಶ್ವರ ದೇವಾಲಯವಿದೆ. ಅದರಾಚೆ ಚಟ್ಚಟ್‌ಹಳ್ಳಿ, ಒಂಟಿಮರಡಿ, ಅರಸೀಕೆರೆ ಗುಡ್ಡಗಳ ಶ್ರೇಣಿ, ಮಾಲೆಕಲ್ ತಿರುಪತಿ ಶಿಖರಗಳಿವೆ.

ನೇರವಾಗಿ ಪೂರ್ವದಲ್ಲಿ ಅರಮನೆ ಸುತ್ತಲೂ ಇದ್ದ ಕೋಟೆ ಕಂದಕಗಳಿವೆ. ಅರಮನೆ ಹೊಲ ಎಂದು ಈಗಲೂ ಕರೆಯುವ ಭಾಗದಲ್ಲಿ ಟಂಕಸಾಲೆ, ಹಜಾರದ ಗುಂಡ್ಲು, ಲಾಯದ ಸಲಿಗೆ, ಆನೆಗುಂಡಿ ಎಂಬ ಸ್ಥಳಗಳನ್ನು ಗುರುತಿಸಲಾಗಿದೆ. ಬಹುಶಃ ಅರಮನೆ ಪೂರ್ವಾಭಿಮುಖವಾಗಿದ್ದಿತು. ಅರಮನೆ ಕೋಟೆಯ ಪೂರ್ವದ ಗೋಡೆಯ ಮಧ್ಯದಲ್ಲಿ ಕೇದಾರೇಶ್ವರಕ್ಕೆ ಅಭಿಮುಖವಾಗಿ ದ್ವಾರವಿದ್ದಿತು. ಅರಮನೆ ನಿವೇಶನದಲ್ಲಿ ಈಗಲೂ ದೊಡ್ಡ ದೊಡ್ಡ ಕಲ್ಲುಗಳು ಕಂಡುಬರುತ್ತವೆ. ಅರಮನೆಗೆ ಆಚೆ ಬಸದಿಹಳ್ಳಿ, ಜೈನ ದೇವಾಲಯಗಳು, ಅವುಗಳ ಅನಂತರ ಕೋಟೆ ಮತ್ತು ದೋರಸಮುದ್ರದ ಕೆರೆ ಇವೆ. ಆಗ್ನೇಯದಲ್ಲಿ ಕೆರೆಯ ಮಧ್ಯದಲ್ಲಿ ದ್ವೀಪವಿದೆ. ಬಹುಶಃ ಬಲ್ಲಾಳರ ವಿಹಾರಸ್ಥಾನ ಇಲ್ಲಿದ್ದಿತು. ಅದರಾಚೆ ಶೂಲದ ವನವಿದೆ. ಕೆರೆಯ ಆಚೆ ಹುಲಿಕೆರೆ ಹಳ್ಳಿ ಇದೆ. ಇಲ್ಲಿ ಹೊಯ್ಸಳರ ಕಾಲದ ಸುಂದರವಾದ ಕಲ್ಯಾಣಿ ಇವೆ. ರಾಸಿಗುಡ್ಡ, ಸೀಗೆಗುಡ್ಡ, ಭೈರವನ ಗುಡ್ಡ ದಕ್ಷಿಣಕ್ಕೆ ಇರುವುವು. ಬೆಣ್ಣೆಗುಡ್ಡಕ್ಕೆ ನೇರವಾಗಿ ದಕ್ಷಿಣದಲ್ಲಿ ಪುಷ್ಪಗಿರಿ ಇದೆ. ಇಲ್ಲಿ ಮಲ್ಲಿಕಾರ್ಜುನ ರುದ್ರೇಶ್ವರ ದೇವಾಲಯಗಳಿವೆ.

ವಾಯುವ್ಯದಲ್ಲಿ ಕೋಟೆ, ಅದರಾಚೆ ಕಟ್ಟೆಸೋಮನಹಳ್ಳಿ ಕೆರೆ ಕಂಡುಬರುತ್ತವೆ. ಇಲ್ಲಿ ತೀರ್ಥಮಲ್ಲೇಶ್ವರವಿದೆ. ಕೇತಲಾಪುರ ನೈರುತ್ಯದಲ್ಲಿರುವ ಬೇಲೂರಿಗೂ ಹಳೇಬೀಡಿಗೂ ಮಧ್ಯದಲ್ಲಿದೆ.

ಬೆಣ್ಣೆಗುಡ್ಡದ ದಕ್ಷಿಣದ ಕೊನೆಯಲ್ಲೂ ಎತ್ತರವಾದ ಜಗತಿ ಇದೆ. ಇದರ ಮೇಲೆ ೧೭ನೆಯ ಶತಮಾನದ ಸಣ್ಣ ಹನುಮಂತ ದೇವಾಲಯವಿದೆ. ಇದರ ಪೂರ್ವಭಾಗದಲ್ಲಿ ಬಲ್ಲಾಳನ ನಾಗರಿ ಅಕ್ಷರದ ಶಾಸನದಲ್ಲಿ



ಸೋಮನಾಥಪುರದ ಶ್ರೀ ಕೇಶವ ದೇವಾಲಯ

ಯಗಚಿ ನದಿಯಿಂದ ಬೇಲೂರು ನಗರಕ್ಕೆ ನೀರನ್ನು ತರಲು ಮಾಡಿದ್ದ ವ್ಯವಸ್ಥೆಯು ಕಂಡುಬರುತ್ತದೆ.

ಮಲ್ಲಿಕಾಫರನು ದೋರಸಮುದ್ರಕ್ಕೆ ಮುತ್ತಿಗೆ ಹಾಕಿ ಮುಂದಿನ ಕೋಟೆ, ಕೆಲವು ದೇವಾಲಯಗಳನ್ನು ನಾಶಪಡಿಸಿದನೆಂದೂ ಆಗ ಮೂರನೆಯ ಬಲ್ಲಾಳನು ಶರಣಾಗತನಾದನೆಂದೂ ಅಮೀರ್ ಖುಸ್ರು ತನ್ನ "ಖಜಾಯಿನ್ ಉಲ್ ಫೂಟೂ" ಎಂಬ ಚರಿತ್ರೆಯಲ್ಲಿ ವರ್ಣಿಸಿರುವನು. ಆದರೆ ದೋರಸಮುದ್ರದ ಕೋಟೆಕೊತ್ತಳಗಳ ವರ್ಣನೆ ಸ್ಪಷ್ಟವಾಗಿಲ್ಲ. ಇಲ್ಲಿ ನಡೆದಿರುವ ಭೂಶೋಧನೆ ಕೇವಲ ಇಟ್ಟಿಕೆಗಳನ್ನು ಮಾತ್ರ ಬೆಳಕಿಗೆ ತಂದಿದೆ. ಬೇಲೂರಿನ ವಿಷ್ಣುಸಮುದ್ರ, ಹಳೆಯಬೀಡಿನ ದೋರಸಮುದ್ರ ಕೆರೆಗಳ ಹತ್ತಿರ ಬಹುಶಃ ರಾಜರ ಸ್ನಾನಘಟ್ಟಗಳು ಇದ್ದವು. ಹಳೆಯಬೀಡಿನ ಅರಮನೆ ಹೊಲವನ್ನೂ ಕೋಟೆಯನ್ನೂ ಶಾಸ್ತ್ರೀಯವಾಗಿ ಪರಿಶೋಧಿಸಬೇಕಾಗಿದೆ. ರುದ್ರಭಟ್ಟನು ಜಗನ್ನಾಥವಿಜಯದಲ್ಲಿ ವರ್ಣಿಸಿರುವ ದ್ವಾರಕಾ ನಗರ ಬಹಳಮಟ್ಟಿಗೆ ದೋರಸಮುದ್ರವೇ ಆಗಿದ್ದಿತೆಂದು ಕಂಡುಬರುತ್ತದೆ. ಅಭಿನವಪಂಪ, ಕಂತಿ, ರುದ್ರಭಟ್ಟ, ಜನ್ನ, ಮಲ್ಲಿಕಾರ್ಜುನ, ಕೇಶಿರಾಜ, ರಾಘವಾಂಕ, ಕೆರೆಯ ಪದ್ಮರಸ ಮುಂತಾದ ಮಹಾಕವಿಗಳ ವಾಸಸ್ಥಾನವಾದ ಬೇಲೂರು–ಹಳೆಯಬೀಡು ನಗರಗಳ ಸ್ವರೂಪ ನಮಗಿನ್ನೂ ಸ್ಪಷ್ಟವಾಗಿ ತಿಳಿಯದೆ ಇರುವುದು ಶೋಚನೀಯವಾಗಿದೆ. ಕರ್ಣಾಟಕದ ಚರಿತ್ರೆಯಲ್ಲಿ ಮುಖ್ಯ ರಾಜಧಾನಿಗಳಾದ ತಲಕಾಡು, ಬನವಾಸಿ, ಬಾದಾಮಿ, ಮಲ್ಖೇಡ, ಕಲ್ಯಾಣ, ಹಳೆಯಬೀಡು–ಬೇಲೂರು, ಹಂಪಿ ನಿವೇಶನಗಳಲ್ಲಾದರೂ ಶಾಸ್ತ್ರೀಯ ರೀತಿಯಲ್ಲಿ ಭೂಶೋಧನೆ ಮಾಡುವುದು ಕನ್ನಡಿಗರ ಕರ್ತವ್ಯವಾಗಿದೆ.

೩. **ಸೋಮನಾಥಪುರ :** ಮೈಸೂರಿಗೆ ನೇರವಾಗಿ ೨೪ ಮೈಲಿ ದೂರದಲ್ಲಿ ಪೂರ್ವಕ್ಕೆ ಕಾವೇರೀ ದಡದಲ್ಲಿ ಸೋಮನಾಥಪುರವಿದೆ. ಹೊಯ್ಸಳ ದಂಡನಾಯಕನಾದ ಸೋಮನಾಥನು ಕ್ರಿ. ಶ. ೧೨೬೮ರಲ್ಲಿ ಅಗ್ರಹಾರವನ್ನು ಕಟ್ಟಿಸುವವರೆಗೂ ಇಲ್ಲಿ ಹಳ್ಳಿ ಇರಲಿಲ್ಲ. ಹೊಯ್ಸಳರ ನಗರಗಳಂತೆ ಮಧ್ಯದಲ್ಲಿ ವಿಷ್ಣುದೇವಾಲಯವನ್ನೂ, ಈಶಾನ್ಯದಲ್ಲಿ ಶಿವದೇವಾಲಯವನ್ನೂ ಕಟ್ಟಿಸಿದನು. ಸುಮಾರು ೩ ಫರ್ಲಾಂಗು ಉದ್ದ ೨ ಫರ್ಲಾಂಗು

ಅಗಲವಿರುವ ಈ ಅಗ್ರಹಾರಕ್ಕೆ ಕೋಟೆಯನ್ನು ಕಟ್ಟಿಸಿದನು. ಅಲ್ಲದೆ ಹೊಳೆಯ ಹತ್ತಿರ ಲಕ್ಷ್ಮೀನರಸಿಂಹ, ಪುರಹರ (ತ್ರಿಪುರಾಂತಕ), ನರಸಿಂಹೇಶ್ವರ, ಮುರಹರ, ಯೋಗನಾರಾಯಣ ದೇವಾಲಯಗಳನ್ನೂ ನಿರ್ಮಿಸಿದಂತೆ ಶಾಸನಗಳಿಂದ ತಿಳಿದುಬರುತ್ತದೆ. ಪೋಲಾಳ್ವ ದಂಡನಾಥನು ಮಾಡಿಸಿದ ಹರಿಹರದ ಹರಿಹರೇಶ್ವರ ದೇವಾಲಯಕ್ಕೂ ಸೋಮನಾಥನು ಮಂಡಪ ಶಿಖರಗಳನ್ನು ಕಟ್ಟಿಸಿದನು. 124583

ಸೋಮನಾಥಪುರದ ಕೇಶವ ದೇವಾಲಯದ ವಿಷಯವಾಗಿ ಎಂಟು ಶಾಸನಗಳಿವೆ. ಇವುಗಳಲ್ಲಿ ನಾಲ್ಕು (ಟಿ. ಎನ್. ೯೭, ೯೮, ೯೯, ೧೦೦) ಕೇಶವ ದೇವಾಲಯದ ಮಹಾದ್ವಾರದಲ್ಲಿರುವ ಕಲ್ಲಿನಮೇಲಿವೆ. ಮತ್ತೊಂದು ತುಂಗಭದ್ರಾತೀರದಲ್ಲಿರುವ ಹರಿಹರೇಶ್ವರ ದೇವಾಲಯದ ಮಹಾದ್ವಾರದ ಎಡಭಾಗದಲ್ಲಿದೆ. ಆರನೆಯ ಶಾಸನ ಸೋಮನಾಥ ಪುರದ ಪಂಚಲಿಂಗ ದೇವಾಲಯದ ಆಗ್ನೇಯದಲ್ಲೂ, ಮತ್ತೆರಡು ಕೇಶವ ದೇವಾಲಯದ ಮೋಲ್ಬಾವಣಿಗಳಲ್ಲೂ ಸೇರಿಕೊಂಡಿವೆ (ಟಿ.ಎನ್. ೧೦೧, ೧೦೬, ೧೦೭). ಇವುಗಳಿಂದ ಸೋಮನಾಥನು ಕ್ರಿ. ಶ. ೧೨೬೮ ವಿಭವ ಸಂವತ್ಸರಕ್ಕೆ ಮುಂಚೆ ಸೋಮನಾಥ ದೇವಾಲಯವನ್ನು ಮಾಡಿಸಿದನೆಂದು ೧೨೬೯ರಲ್ಲಿ ಹೊಯ್ಸಳ ಚಕ್ರವರ್ತಿ ಮೂರನೆಯ ನರಸಿಂಹನಿಂದ ಅನುಮತಿ ಪಡೆದು ದೇವಾಲಯಕ್ಕೆ ದಾನಗಳನ್ನು ಮಾಡಿದನೆಂದೂ ತಿಳಿದುಬರುವುದು. ಇತರ ಶಾಸನಗಳಿಂದ ಮೂರನೆಯ ನರಸಿಂಹ ಮುಮ್ಮಡಿ ಬಲ್ಲಾಳ ಮುಂತಾದವರು ಮತ್ತೆ ಕೆಲವು ದಾನಗಳನ್ನು ಮಾಡಿದರೆಂದು ಕಂಡುಬರುತ್ತದೆ. ವಿಜಯನಗರದ ಕಾಲದಲ್ಲಿ ಉಮ್ಮತ್ತೂರು ಶಿವನ ಸಮುದ್ರದ ಪಾಳೆಯಗಾರರು ದೇವಾಲಯವನ್ನು ಜೀರ್ಣೋದ್ಧಾರ ಮಾಡಿದರು. ಕ್ರಿ. ಶ. ೧೪೯೭ರಲ್ಲಿ ಸಾಳುವ ಇಮ್ಮಡಿ ನರಸಿಂಹನು ಆಳುತ್ತಿದ್ದಾಗ ಈಶ್ವರನಾಯಕನ ಮಗನಾದ ನರಸನಾಯಕನ ಅಪ್ಪಣೆಯಂತೆ ಉಮ್ಮತ್ತೂರು ನಂಜರಾಜ ಒಡೆಯನು ಅಗ್ರಹಾರವನ್ನು ಜೀರ್ಣೋದ್ಧಾರ ಮಾಡಿದನು. ಸದಾಶಿವರಾಯನ ಕಾಲದಲ್ಲಿ ಅಳಿಯ ರಾಮರಾಯನ ಮೈದುನನಾದ ಅಹೋಬಲರಾಜನು ಕೆಲವು ಕಂದಾಯಗಳನ್ನು ಬಿಟ್ಟನು. ಹೊರಗಿನ ಕೈಸಾಲೆಯನ್ನು ಕಣಶಿಲೆಯಿಂದ ಬಹುಶಃ



ಸೋಮನಾಥಪುರದ ಶ್ರೀ ಕೇಶವದೇವಾಲಯ
ವೇಣುಗೋಪಾಲ


೧೬ನೆಯ ಶತಮಾನದಲ್ಲಿ ಕಟ್ಟಿಸಿದಂತೆ ಕಂಡುಬರುತ್ತದೆ. ಆದುದರಿಂದ ಈ ದೇವಾಲಯದಲ್ಲಿ ಪೂಜೆ ಹದಿನೇಳನೆಯ ಶತಾಬ್ದದವರೆಗೂ ನಡೆದು ಬಂದಿತೆಂದೂ ಅನಂತರ ವಿಗ್ರಹಗಳು ಭಿನ್ನವಾಗಿ ಪೂಜೆ ನಿಂತುಹೋಯಿತೆಂದೂ ಹೇಳಬಹುದು. ಮಹಮ್ಮದೀಯರಿಂದ ನಾಶವಾಯಿತೆಂಬುದಕ್ಕೆ ಸಾಕಷ್ಟು ಆಧಾರಗಳಿಲ್ಲ. ೧೯೨೪ರಲ್ಲಿ ಮೈಸೂರು ಸರ್ಕಾರ ದೇವಾಲಯವನ್ನು ಜೀರ್ಣೋದ್ಧಾರಮಾಡಿತು. ಈಚೆಗೆ ಇದರ ಸೌಂದರ್ಯವನ್ನು ನೋಡಲು ದೇಶವಿದೇಶಗಳಿಂದ ಬರುವ ಪ್ರೇಕ್ಷಕರಿಗಾಗಿ ಅನುಕೂಲಗಳನ್ನು ಕಲ್ಪಿಸಿರುವರು.

(೧) **ದೇವಾಲಯದ ವಿಭಾಗಗಳು:** ಜಗತಿ ಮತ್ತು ಅದರ ವಿಗ್ರಹಗಳು; ಆನೆ, ಕುದುರೆ, ಲತೆ ಮತ್ತು ಪೌರಾಣಿಕ ಕಥೆಗಳ ಸಾಲು; ಮುಂಭಾಗದ ಸಣ್ಣ ವಿಗ್ರಹಗಳು, ಸಿಂಹ ಮತ್ತು ಗೋಪುರ; ಲತಾಪಟ್ಟಿಕೆ, ಕಟಕಟಿಯ ವಿಗ್ರಹಗಳು, ಜಾಲಂದ್ರ, ಬೋದಿಗೆ, ಮೇಲ್ಗಾವಣಿ, ಮಕರ, ಹಂಸ, ಗೋಡೆಯ ದೊಡ್ಡ ವಿಗ್ರಹಗಳು, ತೋರಣ ಮತ್ತು ಶಿಖರ, ಪಶ್ಚಿಮ, ದಕ್ಷಿಣ ಮತ್ತು ಉತ್ತರ ಗರ್ಭಗುಡಿಗಳ ಗೋಪುರಗಳು, ಪೂರ್ವದ್ವಾರ, ನವರಂಗ, ಕಂಬಗಳು, ಮೇಲ್ಗಾವಣಿ, ಮೂರು ಗರ್ಭಗುಡಿಗಳು, ಪ್ರಾಕಾರದಲ್ಲಿರುವ ಮಂಡಪಗಳು, ದೀಪಸ್ತಂಭ, ಮಹಾದ್ವಾರ.

ದೇವಾಲಯವು ೨೧೮ ಅಡಿ ಉದ್ದ ೧೭೭ ಅಡಿ ಅಗಲದ ಚತುರಸ್ರದ ಅಂಗಳದ ಮಧ್ಯದಲ್ಲಿದೆ. ಸುತ್ತಲೂ ಇರುವ ಪ್ರಾಕಾರ ಮಂಡಪಗಳನ್ನು ಬಿಟ್ಟು ಮಧ್ಯೆ ೧೧೮ ಅಡಿ ಅಗಲ ೧೫೦ ಅಡಿ ಉದ್ದವಿರುವ ಭಾಗದಲ್ಲಿ ಪೂರ್ವಾಭಿಮುಖವಾಗಿದೆ. ತ್ರಿಕೂಟಾಚಲವಾದ ಈ ದೇವಾಲಯ ಸಣ್ಣದಾದರೂ ಕಲಾದೃಷ್ಟಿಯಿಂದ ಅತ್ಯಂತ ಸಮರ್ಪಕವಾಗಿರುವುದರಿಂದ ಜಗತ್ಪ್ರಖ್ಯಾತವಾಗಿದೆ. ದೇವಾಲಯದ ಜಗತಿ ಮೂರು ಅಡಿ ಎತ್ತರವಿದ್ದು ೧೬ ಕೋಣಗಳ ನಕ್ಷತ್ರಾಕಾರವಾಗಿದೆ. ಪೂರ್ವದಿಂದ ಜಗತಿಯ ಮೇಲಕ್ಕೆ ಮೆಟ್ಟಲು ಇದೆ. ಈ ಮೆಟ್ಟಲು ಪಕ್ಕಗಳಲ್ಲಿ ಎರಡು ಸಣ್ಣ ಗುಡಿಗಳಿದ್ದವು. ಜಗತಿಯ ನಕ್ಷತ್ರಾಕಾರದ ಒಂದೊಂದು ಕೋಣದಲ್ಲೂ ಕಲ್ಲಿನ ಪೀಠವಿದೆ. ಇವುಗಳ ಮೇಲೆ ಕಲ್ಲಿನ ಆನೆ ಮತ್ತು ನಾಗವಿಗ್ರಹಗಳು

ಮೊದಲು ಇದ್ದವು. ಒಟ್ಟು ಮೂರು ಗರ್ಭಗುಡಿಗಳ ಸುತ್ತಲೂ ೧೫ ಆನೆಗಳೂ, ೧೪ ದೊಡ್ಡ ನಾಗವಿಗ್ರಹಗಳೂ, ೫೮ ಸಣ್ಣ (ಯಕ್ಷ) ವಿಗ್ರಹಗಳೂ ಇದ್ದವು. ಈಗ ೧೧ ಆನೆಗಳು ಅದೇ ಸ್ಥಳದಲ್ಲಿವೆ. ಒಂದನ್ನು ಜಗತಿಯ ಆಗ್ನೇಯ ಮೂಲೆಯಲ್ಲೂ, ಎರಡನ್ನು ಮಹಾದ್ವಾರದಲ್ಲೂ ನೋಡಬಹುದು. ಮತ್ತೊಂದು ಮುರಿದುಹೋಗಿದೆ. ಈ ಆನೆಗಳನ್ನು ಮಾವುತ ಮತ್ತು ಯೋಧರೊಡನೆ ಇರುವಂತೆ ಕೆತ್ತಿರುವರು. ಇತರ ನಾಗಯಕ್ಷ ವಿಗ್ರಹಗಳಿದ್ದ ಸ್ಥಳಗಳನ್ನು ಮಾತ್ರ ಗುರುತಿಸಬಹುದು. ಬಹುಶಃ ೭೨ ವಿಗ್ರಹಗಳಲ್ಲಿ ಎರಡು ಸಾಲು ನಾಗಯಕ್ಷರಿದ್ದಿರಬೇಕು. ಈಗ ಜಗತಿಯ ಉತ್ತರದಲ್ಲಿ ಮೂರು, ಮುಂದಿನ ಮಂಡಪದ ಹತ್ತಿರ ಎರಡು, ಪ್ರಾಕಾರದ ಈಶಾನ್ಯ ಗೋಡೆಯ ಮೇಲೆ ಯಕ್ಷ, ಆಗ್ನೇಯ ಗೋಡೆಯ ಮೇಲೆ ನಾಗ—ಹೀಗೆ ಏಳು ಮಾತ್ರ ಉಳಿದುಕೊಂಡಿವೆ. ಮತ್ತೊಂದು ನಾಗವನ್ನು ಗೋಡೆಯಲ್ಲಿ ಸೇರಿಸಿರುವರು. ಜಗತಿಗೆ ಒರಗಿಸಿದಂತೆ ಕೆಲವು ವಿಗ್ರಹಗಳಿವೆ. ಇವುಗಳಲ್ಲಿ ಕೆಲವು ಪ್ರಾಕಾರ ಮಂಡಪಗಳಲ್ಲಿದ್ದವು. ಒಂದೆರಡು ಮಾತ್ರ ಜಗತಿಗೆ ಸೇರಿದ್ದವು. ಮತ್ತೆ ಕೆಲವನ್ನು ವಿಜಯನಗರ ಕಾಲದಲ್ಲಿ ಮಾಡಿದಂತೆ ಕಂಡುಬರುತ್ತವೆ. ಈ ವಿಗ್ರಹಗಳೆಲ್ಲ ಮುರಿದು ಹೋಗಿವೆ.

ದೇವಾಲಯದ ಗೋಡೆಯನ್ನು ಪೀಠಿಕೆ, ಮಧ್ಯಭಾಗ ಮತ್ತು ಮೇಲ್ಭಾಗವೆಂದು ವಿಂಗಡಿಸಬಹುದು. ಪೀಠಿಕೆಯ ಕೆಳಪಟ್ಟಿಯಲ್ಲಿ ಆನೆಯ ಸಾಲು ಇದೆ. ಈ ಪಟ್ಟಿಕೆಗಳು ಆರು ಅಥವಾ ಏಳು ಅಂಗುಲ ಮಾತ್ರ ಅಗಲವಾಗಿರುವುದರಿಂದ ವಿಗ್ರಹಗಳು ಸಣ್ಣಗಿವೆ. ಆನೆಗಳಲ್ಲಿ ವೈವಿಧ್ಯವನ್ನು ತೋರಿಸಿದೆ. ಬೇಲೂರು ಕೇಶವ, ಹಳೆಯಬೀಡು ಹೊಯ್ಸಳೇಶ್ವರ ದೇವಾಲಯಗಳ ಆನೆಗಳಿಗೆ ಕವಚಗಳಿಲ್ಲ. ಆದರೆ ಕೇದಾರೇಶ್ವರ, ಸೋಮನಾಥ ದೇವಾಲಯಗಳಲ್ಲಿ ಆನೆಗಳ ಕವಚ ಜೂಲು ಮುಂತಾದುವನ್ನು ತೋರಿಸಲಾಗಿದೆ. ಎರಡನೇ ಪಟ್ಟಿಯಲ್ಲಿ ಅಶ್ವಾರೋಹಕರು ಚಡ್ಡಿ, ಮೊಣಕಾಲುವರೆಗೂ ಪಾದರಕ್ಷೆ ಧರಿಸಿ, ಭರ್ಜಿ, ಕತ್ತಿ ಗುರಾಣಿಗಳನ್ನು ಹಿಡಿದಿರುವರು. ಕೆಲವರ ಮೇಲೆ ಛತ್ರಿ ಇರುವುದರಿಂದ ರಾಜಕುಮಾರರಾಗಿರಬಹುದು. ಮಧ್ಯೆ ಮಧ್ಯೆ ಒಂದು ಅಥವಾ ಎರಡು ರಣಭೇರಿ



ಸೋಮನಾಥಪುರದ ಶ್ರೀ ಕೇಶವ ದೇವಾಲಯ-ಹೊರಗಣ ಕೆತ್ತನೆ ಕೆಲಸ

ಗಳನ್ನೂ ಯೋಧರನ್ನೂ ಬೆನ್ನ ಮೇಲೆ ಧರಿಸಿರುವ ಒಂಟೆಗಳಿವೆ. ಅಲ್ಲಲ್ಲಿ ಇಬ್ಬರು ಯೋಧರು ಅಶ್ವಗಳ ಮೇಲೆ ಕುಳಿತು ಹೊಡೆದಾಡುತ್ತಿರುವರು. ಈ ಕುದುರೆಗಳ ಬಾಲವನ್ನು ಕತ್ತರಿಸಿದಂತೆ ಕಂಡುಬರುತ್ತದೆ. ಈ ಕುದುರೆಗಳ ಕಾಲಿನ ಹತ್ತಿರ ಗುಜ್ಜರು ಕಪಿಗಳು ಇರುವರು. ಕುದುರೆಗಳ ಕಡಿವಾಣ, ಜೀನು ಸ್ಪಷ್ಟವಾಗಿ ಕಂಡುಬರುತ್ತವೆ. ಇದರ ಮೇಲೆ ಲತಾ ಪಟ್ಟಿಕೆಯಲ್ಲಿ ಸಿಂಹಮುಖ, ನವಿಲು, ಇತ್ಯಾದಿಗಳಿವೆ. ಮುಂದಿನ ಪಟ್ಟಿಕೆಯಲ್ಲಿ ಪೌರಾಣಿಕ ಕಥೆಗಳು ಏಳು ಅಂಗುಲ ಅಗಲದಲ್ಲಿ ಚಿತ್ರಿತವಾಗಿವೆ; ರಾಮಾಯಣ, ಎರಡು ಸಲ ಭಾಗವತ, ಅನಂತರ ಮಹಾಭಾರತ ಕಥೆಗಳಿವೆ. ಪೂರ್ವದಿಂದ ಆರಂಭಿಸಿದರೆ ರಾಮಾಯಣದ ಕಥೆ ದಶರಥನ ಆಸ್ಥಾನ, ದಶರಥನು ದೇವತೆಗಳಿಗೆ ಕೈಕೆಯಿಯೊಡನೆ ಸಹಾಯಮಾಡಿದುದು, ಪುತ್ರಕಾಮೇಷ್ಟಿಯಿಂದ ರಾಮ ಸುಗ್ರೀವ ಸಖ್ಯದವರೆಗೆ ನಡೆದಿದೆ. ಅನಂತರ ಭಾಗವತದ ಕಥೆ ಕೃಷ್ಣ ಜನನದಿಂದ ಕಂಸವಧೆಯವರೆಗೂ ಇದೆ. ಮಹಾಭಾರತದ ಕಥೆಯನ್ನು ಚಿತ್ರಿಸಿದವನು ಮಲ್ಲಿತಮ್ಮ. ಧೃತರಾಷ್ಟ್ರನ ಆಸ್ಥಾನ, ಕೌರವ ಪಾಂಡವರ ಜಗಳ, ಲಾಕ್ಷಾಗೃಹದಾಹ, ಇತ್ಯಾದಿಯಾಗಿ ಪಾಂಡವರ ಪಟ್ಟಾಭಿಷೇಕದವರೆಗೂ ಕಥೆ ನಡೆದಿದೆ.

ಇದರ ಮೇಲೆ ದೇವತಾ ವಿಗ್ರಹಗಳು ಗೋಪುರಗಳ ಕೆಳಗೆ ಇವೆ. ಈ ವಿಗ್ರಹಗಳು ಭಂಗವಾಗಿರುವುದರಿಂದ ವಿಗ್ರಹಗಳನ್ನು ಗುರ್ತಿಸುವುದು ಕಷ್ಟ. ಆದರೂ ವಿಷ್ಣುವಿನ ಚತುರ್ವಿಂಶತಿ, ದ್ವಾದಶಮೂರ್ತಿಗಳು, ಶಿವ, ಪಾರ್ವತಿ, ಕುಮಾರ, ನಂದಿಕೇಶ, ಶಾರದಾ, ರತಿಮನ್ಮಥ, ಮಹಿಷಮರ್ದಿನಿ, ಇತ್ಯಾದಿಗಳನ್ನು ನೋಡಬಹುದು. ಅನಂತರ ಕಟಾಂಜನವಿದೆ. ಇದರ ಫಲಕಗಳ ಮೇಲೆ ಪ್ರಹ್ಲಾದನ ಕಥೆ ಚಿತ್ರಿತವಾಗಿದೆ. ಮಕರ ಮತ್ತು ಹಂಸಗಳ ಸಾಲುಗಳಲ್ಲಿ ವೈವಿಧ್ಯ ಕಂಡುಬರುತ್ತದೆ.

ಮೂರು ಗರ್ಭಗುಡಿಗಳ ಹೊರಗೋಡೆಗಳ ಮೇಲೆ ಎರಡು ಅಡಿ ಎತ್ತರದ ದೊಡ್ಡ ವಿಗ್ರಹಗಳು ಪೀಠ ಮತ್ತು ತೋರಣಗಳ ಮಧ್ಯೆ ಇವೆ. ೧೯೪ ವಿಗ್ರಹಗಳನ್ನು ೯೦ ಭಾಗಗಳಾಗಿ ಮಾಡಬಹುದು. ಬೇಲೂರು ಹಳೆಯಬೀಡು ವಿಗ್ರಹಗಳಿಗಿಂತ ಚಿಕ್ಕದಾಗಿರುವುದರಿಂದ ಅಷ್ಟು ಪ್ರಮಾಣವಾಗಿಲ್ಲ. ಪಶ್ಚಿಮದ ವಿಗ್ರಹಗಳು ಒರಟಾಗಿವೆ. ಪೀಠಗಳ ಮೇಲೆ

ಮಲ್ಲಿತಮ್ಮ, ಚೌಡಯ್ಯ, ಬಾಲಯ್ಯ, ಮಸಣಿತಮ್ಮ, ಲೋಹಿತ, ಎಲೆಮಸ್ಟೈಯ್ಯ, ಇತ್ಯಾದಿ ಶಿಲ್ಪಿಗಳ ಹೆಸರುಗಳಿವೆ. ಕೆಲವು ದೇವತೆಗಳಿಗೆ ಆರು ಭುಜಗಳಿವೆ, ಆಗ್ನೇಯದಿಂದ ಆರಂಭಿಸಿದರೆ ವೈಕುಂಠನಾರಾಯಣ, ತಾಂಡವ ಗಣೇಶ, ನೃತ್ಯಸರಸ್ವತಿ, ಷಡ್ಭುಜಕೇಶವ, ಮೊದಲುಗೊಂಡು ಅಷ್ಟಭುಜ ದೇವಿಯವರೆಗೆ ೧೯ಳ ವಿಗ್ರಹಗಳಿವೆ. ಅನೇಕ ವಿಗ್ರಹಗಳನ್ನು ಗುರ್ತಿಸುವುದು ಕಷ್ಟವಾಗಿದೆ. ಈ ವಿಗ್ರಹಗಳ ಮೇಲಿನ ತೋರಣಗಳಲ್ಲಿ ಲತಾಫಲಪುಷ್ಪ, ಕೀರ್ತಿಮುಖ ಬಹಳ ಸೂಕ್ಷ್ಮವಾಗಿ ಚಿತ್ರಿತವಾಗಿವೆ. ಇವುಗಳ ಮೇಲೆ ನಾಲ್ಕು ಅಂಗುಲ ಆಳದ “ಕಾರ್ನಿಸು” ಅದರ ಮೇಲೆ ಕಟಾಂಜನ ಮತ್ತು ವಿಗ್ರಹಗಳ ಗೋಪುರಗಳಿವೆ. ಈ ಗೋಪುರಗಳ ಸೂಕ್ಷ್ಮ ವಿಮರ್ಶೆ ಆವಶ್ಯಕ. ಹದಿನಾರು ಕಿರಣಗಳುಳ್ಳ ನಕ್ಷತ್ರಾಕಾರದ ತಲವಿನ್ಯಾಸಕ್ಕೆ ಅನುಸಾರವಾಗಿ ಮೆಟ್ಟಲು ಮೆಟ್ಟಲಾಗಿ ರಚಿಸಿದಂತೆ ಕಂಡುಬರುವುದು. ಕೆಲವು ಶಿಖರಗಳಿಗೆ ಕಲಶಗಳಿವೆ. ಹೊಯ್ಸಳ ಶಿಖರ ಪ್ರಭೇದಗಳೆಲ್ಲ ಇಲ್ಲಿ ಉದಾಹೃತವಾಗಿವೆ. ಇದೇ ದೇವಾಲಯದ ಶಿಖರಗಳ ಪ್ರತೀಕಗಳು ಕಂಡುಬರುತ್ತವೆ.

(೨) **ಗರ್ಭಗುಡಿಗಳ ಶಿಖರಗಳು:** ಶಿಖರಗಳು ೧೬ ಕೋಣಗಳ ನಕ್ಷತ್ರಾಕಾರದ ವಿನ್ಯಾಸದ ಮೇಲೆ ರಚಿತವಾಗಿವೆ. ಸುಕನಾಸಿಯ ಮೇಲೆ ಮುಂದಕ್ಕೆ ಚಾಚಿಕೊಂಡು ಬಹುಶಃ ಸಳವಿಗ್ರಹ ಹೊಂದಿದ್ದವು. ಒಂದೊಂದು ಶಿಖರಕ್ಕೂ ೧೬ ದಳಗಳಿದ್ದು ಒಂದೊಂದು ದಳಕ್ಕೂ ನಾಲ್ಕು ಉಪಶಿಖರಗಳಿದ್ದರೆ, ಒಟ್ಟು ೬೪ಳ ಉಪಶಿಖರಗಳಿರಬೇಕು. ಮುಂದಕ್ಕೆ ಚಾಚಿಕೊಂಡಿರುವ ಭಾಗ ಮೂರು ಉಪಶಿಖರಗಳನ್ನು ಮುಚ್ಚಿಕೊಂಡಿರುವುದರಿಂದ ಆ ಮೂರು ಶಿಖರಗಳನ್ನೂ ಈ ಮುಂದಿನ ಭಾಗವಲ್ಲಿಟ್ಟಿರುವರು. ಒಂದೊಂದು ಉಪಶಿಖರದಲ್ಲೂ ಐದು ಸಾಲು ವಿಗ್ರಹಗಳಿವೆ. ಮೇಲ್ಭಾವಣಿಯ ಮೇಲೆ ಅಂತಹ ಒಟ್ಟು ೨೦ ಸಾಲುಗಳಿವೆ. ಸಿಂಹಮುಖ, ಕೀರ್ತಿಮುಖ, ಯಕ್ಷ, ಗಂಧರ್ವ, ನರ್ತಕರು, ಇತ್ಯಾದಿಗಳು ಈ ಸಾಲುಗಳಲ್ಲಿವೆ. ಎರಡನೆ ಉಪಶಿಖರಗಳ ಸಾಲಿನ ಕೆಳಗೆ ಪಶ್ಚಿಮ ಗೋಪುರದಲ್ಲಿ ಅಷ್ಟದಿಕ್ಪಾಲಕರಿರುವರು. ಗೋಪುರದ ಮೇಲ್ಭಾಗದಲ್ಲಿ ಮುಗುಚಿಹಾಕಿದ ಪದ್ಮವಿದ್ದು ಅದರಮೇಲೆ ಕಲಶವಿದ್ದಿತು. ದಕ್ಷಿಣ ಗೋಪುರದ ಕೀರ್ತಿ



ಸೋಮನಾಥಪುರದ ಕೇಶವ ದೇವಾಲಯ
ನೃತ್ಯ ಸರಸ್ವತಿ

ಮುಖದಲ್ಲಿ ಅಷ್ಟಭುಜ ವಿಷ್ಣು ವಿಗ್ರಹವಿದೆ. ಉತ್ತರ ಗರ್ಭಗುಡಿಯ ಗೋಪುರ ಮೂರು ಕೀರ್ತಿಮುಖಗಳನ್ನು ಹೊಂದಿದೆ. ಕೆಳಗಿನದರಲ್ಲಿ ಸ್ಥಾನಕ ಕೇಶವ, ಮಧ್ಯದರಲ್ಲಿ ಗೋವರ್ಧನಧಾರಿ, ಮೇಲಿನದರಲ್ಲಿ ನೃತ್ಯ ಮಾಡುತ್ತಿರುವ ಷಡ್ಭುಜವಿಷ್ಣು ವಿಗ್ರಹಗಳಿವೆ. ಈ ಮೂರು ಗೋಪುರ ಗಳ ಸೌಂದರ್ಯದಿಂದ ಈ ದೇವಾಲಯ ಪ್ರಪಂಚ ಪ್ರಖ್ಯಾತಿಯನ್ನು ಪಡೆದಿದೆ.

ಪೂರ್ವದ್ವಾರ ಸಾಮಾನ್ಯವಾಗಿದೆ. ಬಹುಶಃ ಇದರ ಅಲಂಕರಣೆ ಯಾಗಲಿಲ್ಲ. ನವರಂಗ ಒಂಬತ್ತು ಅಂಕಣಗಳನ್ನೂ ಪೂರ್ವದಲ್ಲಿ ಮತ್ತೆ ಮೂರು ಅಂಕಣಗಳನ್ನೂ ಜಗಲಿಗಳನ್ನೂ ಹೊಂದಿದೆ. ಪೂರ್ವದ ಗೋಡೆ ಯಲ್ಲಿ ಬೆಳಕು ಬರಲು ಜಾಲಂಧ್ರಗಳಿವೆ. ಪಶ್ಚಿಮ ಗೋಡೆಯ ಎರಡು ಗೂಡುಗಳಲ್ಲಿ ಬಹುಶಃ ಗಣೇಶ ಮಹಿಷಮರ್ದಿನಿ ವಿಗ್ರಹಗಳಿದ್ದು, ಮೂರು ವಿಗ್ರಹಗಳೊಂದಿಗೆ ವಿಷ್ಣುಪಂಚಾಯತನವಾಗಿದ್ದಿತೆಂದು ಊಹಿಸಲಾಗಿದೆ.

ನವರಂಗದ ಕಂಬಗಳು ಮಧ್ಯದ ನಾಲ್ಕು ವಿನಾ ಮಿಕ್ಕೆಲ್ಲವೂ ಸುಮಾರು ಒಂದೇ ರೀತಿಯಲ್ಲಿವೆ. ಮಧ್ಯದ ನಾಲ್ಕು ಕಂಬಗಳ ಬುಡದಲ್ಲಿ ಯಕ್ಷರು ನಾಲ್ಕು ಮುಖಗಳಲ್ಲೂ ಇರುವರು. ಈ ಕಂಬಗಳ ಮೇಲೆ ಬಹುಶಃ ನಾಲ್ಕು ಮದನಿಕೆ ವಿಗ್ರಹಗಳಿದ್ದವು. ಇವುಗಳ ಪೂರ್ವದಲ್ಲಿರುವ ಎರಡು ಕಂಬಗಳು ೩೨ ಕೋಣಗಳುಳ್ಳ ನಕ್ಷತ್ರಾಕಾರವಾಗಿವೆ.

ನವರಂಗದ ಮೇಲ್ಛಾವಣಿಯಲ್ಲಿ ೧೬ ಅಂಕಣಗಳಿವೆ. ಪ್ರತಿಯೊಂದು ಅಂಕಣವೂ ಬಡಗಿಯ ಕೆಲಸವನ್ನು ಅನುಸರಿಸಿದ ಕೆತ್ತನೆಹೊಂದಿವೆ. ಈ ಭುವನೇಶ್ವರಿಗಳ ಸೌಂದರ್ಯದಿಂದ ಈ ದೇವಾಲಯ ಪ್ರಸಿದ್ಧವಾಗಿದೆ. ಮರದ ತೊಲೆ, ಪಟ್ಟಿ, ಮೊಳೆಗಳನ್ನುಕೂಡ ಕಲ್ಲಿನಲ್ಲಿ ತೋರಿಸಿರುವರು. ಮಧ್ಯದ ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರು, ಅದರ ಮೇಲೆ ೩೨ ಬಗ್ಗಿದ ತೊಲೆಗಳಿಂದ ಮಾಡಿದ ಕಮಾನು, ಅದರ ಮಧ್ಯದಿಂದ ತೂಗಾ ಡುವ ಕಮಲದ ಮೊಗ್ಗು ಇವೆ. ಇತರ ಭುವನೇಶ್ವರಿಗಳಲ್ಲಿ ಹನ್ನೆರಡು ಕಿರಣದ ನಕ್ಷತ್ರ, ವೃತ್ತ, ಶ್ರೀಚಕ್ರ, ೧೬ ಕಿರಣದ ನಕ್ಷತ್ರ, ಇತ್ಯಾದಿ ನಕಾಸೆಗಳಿವೆ. ಪೂರ್ವದ್ವಾರದ ಹತ್ತಿರ ಇರುವ ಭುವನೇಶ್ವರಿ ಅತ್ಯಂತ ಸುಂದರವಾಗಿದೆ. ಕೆಳಗೆ ಅಷ್ಟದಿಕ್ಪಾಲಕರು, ಅವರ ಪರಿವಾರ, ಅದರ

ಮೇಲೆ ನರ್ತಕ ಯಕ್ಷ ವಾದ್ಯಗಾರರು, ಅದರ ಮೇಲೆ ಮೂವ್ವತ್ತೆರಡು ಗೋಪುರಗಳು, ಇವುಗಳ ಮಧ್ಯೆ ಸ್ಥಾನಕ ಶೈವವೈಷ್ಣವ ವಿಗ್ರಹಗಳೂ ಇವೆ. ಇವುಗಳ ಮೇಲೆ ಅರ್ಧ ಕಮಾನುಗಳು ಲಾಳದ ಆಕಾರವಾಗಿವೆ. ಇವು ಮತ್ತು ಒಂದು ಕಂಬದ ಮೇಲೆ ಇರುವ ಯಾಳಿ ಸಾಮಾನ್ಯವಾಗಿ ಹೊಯ್ಸಳ ಶಿಲ್ಪಗಳಲ್ಲಿ ಕಂಡುಬರುವುದಿಲ್ಲ. ಭುವನೇಶ್ವರಿಯಿಂದ ಸುಮಾರು ನಾಲ್ಕು ಅಡಿ ಉದ್ದದ ಕಮಲದ ಮೊಗ್ಗು ಜೋಲಾಡುತ್ತಿದೆ.

ದಕ್ಷಿಣದ ಸುಕನಾಸಿಯ ದ್ವಾರದಲ್ಲಿ ಭದ್ರ, ಸುಭದ್ರ (?) ದ್ವಾರ ಪಾಲಕರಿರುವರು. ದ್ವಾರದ ಮೇಲೆ ವೇಣುಗೋಪಾಲ ಲಕ್ಷ್ಮೀನಾರಾಯಣ ವಿಗ್ರಹಗಳಿವೆ. ಸುಕನಾಸಿಯ ಮೇಲ್ಛಾವಣಿಯಲ್ಲಿ ದಿಕ್ಪಾಲಕ ಗಂಧರ್ವ ರಿರುವರು. ಗರ್ಭಗೃಹದ ದ್ವಾರದಲ್ಲಿ ಜಯವಿಜಯ (?) ದ್ವಾರಪಾಲಕರು, ಈ ದ್ವಾರದ ಮೇಲೆ ಕುಳಿತಿರುವ ವಿಷ್ಣು, ಇದರ ಮೇಲೆ ನೃತ್ಯಮಾಡು ತ್ತಿರುವ ವಿಷ್ಣು ಶಕ್ತಿ ಪಾಶ ಹಿಡಿದಿರುವಂತೆ ಚಿತ್ರಿಸಿದೆ. ದಕ್ಷಿಣ ಗರ್ಭಗುಡಿಯ ಹಿಂದಿನ ಗೋಡೆಯಲ್ಲಿ ಒಂದು ಗೂಡು ಇದೆ. ಸುಮಾರು ಎರಡು ಅಡಿ ಗರುಡಪೀಠದ ಮೇಲೆ ನಾಲ್ಕೂವರೆ ಅಡಿ ವೇಣುಗೋಪಾಲ ಮೂರ್ತಿ ಇದೆ. ಕೃಷ್ಣನು ತ್ರಿಭಂಗದಲ್ಲಿ ನಿಂತು ತಮಾಲವೃಕ್ಷದ ಕೆಳಗೆ ಎರಡು ಕೈಯಿಂದಲೂ ಉದ್ದವಾದ ವೇಣುವನ್ನು ಹಿಡಿದಿರುವನು. ಅವನ ಬೆರಳು ಗಳು ಕೊಳಲಿನ ಮೇಲೆ ಆಡುತ್ತಿವೆ. ಗೋವುಗಳು ತಲೆ ಎತ್ತಿ ಕೇಳುತ್ತಿವೆ. ಕೃಷ್ಣನು ಮಣಿಕಿರೀಟ, ಕರ್ಣಕುಂಡಲ, ಹಾರ, ಮಾಲಿಕೆ, ಉಂಗುರ, ಅಂದಿಗೆ, ಭುಜಕೀರ್ತಿ ಇತ್ಯಾದಿ ಆಭರಣಗಳನ್ನು ಧರಿಸಿರುವನು. ಗೋಪ ಗೋಪಿಯರು ತದೇಕಧ್ಯಾನದಿಂದ ಕೇಳುತ್ತಿರುವರು. ತೋರಣದ ಮೇಲೆ ಋಷಿಗಳು, ದಶಾವತಾರ (ಹೊಯ್ಸಳ ರೀತಿಯಲ್ಲಿದ್ದಂತೆ ಕೃಷ್ಣನ ವಿನಾ) ಇತ್ಯಾದಿ ವಿಗ್ರಹಗಳಿವೆ. ಕೊಳಲು ಮುರಿದುಹೋಗಿದ್ದರೂ ವಿಗ್ರಹವು ಅತ್ಯಂತ ಸುಂದರವಾಗಿದೆ.

ಪಶ್ಚಿಮ ಸುಕನಾಸಿ ದ್ವಾರದ ಮೇಲೆ ಸ್ಥಾನಕ ಕೇಶವ, ಗಜಲಕ್ಷ್ಮೀ, ಅನಂತನ ಮೇಲೆ ಕುಳಿತಿರುವ ವೈಕುಂಠನಾರಾಯಣ ವಿಗ್ರಹಗಳಿವೆ. ಈ ಸುಕನಾಸಿ ಮೇಲ್ಛಾವಣಿಯಲ್ಲಿ ದಿಕ್ಪಾಲಕ ಗಂಧರ್ವರಿರುವರು.

ಪಶ್ಚಿಮ ಗರ್ಭಗುಡಿಯ ದ್ವಾರದ ಮೇಲೆ ಲಕ್ಷ್ಮೀನಾರಾಯಣ,

ಲಕ್ಷ್ಮೀ, ಅದರಮೇಲೆ ಆಸೀನ ವಿಷ್ಣು, ಮೇಲ್ಛಾವಣಿಯಲ್ಲಿ ದಿಕ್ಪಾಲ ಗಂಧರ್ವರು ಇರುವರು. ಗರುಡಪೀಠವಿದ್ದರೂ ವಿಗ್ರಹವು ಅದೃಶ್ಯವಾಗಿದೆ. ಇಲ್ಲಿ ಲಕ್ಷ್ಮೀನಾರಾಯಣ, ಲಕ್ಷ್ಮೀ, ಲಕ್ಷ್ಮಣ (?) ಮತ್ತು ದ್ವಿಭುಜದೇವಿ ವಿಗ್ರಹಗಳನ್ನಿಟ್ಟಿರುವರು.

ಉತ್ತರ ಗರ್ಭಗುಡಿಯ ಸುಕನಾಸಿಯ ದ್ವಾರದಲ್ಲಿ ಭದ್ರ ಸುಭದ್ರ ದ್ವಾರಪಾಲಕರು, ದ್ವಾರದ ಮೇಲೆ ಜನಾರ್ದನ ಲಕ್ಷ್ಮೀನರಸಿಂಹ ವಿಗ್ರಹಗಳಿವೆ. ಗರ್ಭಗುಡಿಯ ದ್ವಾರಬಂಧದ ಮೇಲೆ ಅಕ್ಷಮಾಲ ಚಕ್ರಶಂಖ ಕಳಶ ಹಿಡಿದಿರುವ ಲಕ್ಷ್ಮೀ ವಿಗ್ರಹವಿದೆ. ಅದರ ಮೇಲೆ ಯೋಗ ನಾರಾಯಣನು ಯೋಗಾಸನದಲ್ಲಿರುವನು. ಗರ್ಭಗುಡಿಯಲ್ಲಿ ಗರುಡ ಪೀಠದಮೇಲೆ ನಾಲ್ಕೂವರೆ ಅಡಿ ಎತ್ತರದ ಜನಾರ್ದನ ವಿಗ್ರಹವಿದೆ. ನಾಲ್ಕು ಕೈಗಳಲ್ಲಿ ಪದ್ಮ ಚಕ್ರ ಶಂಖ ಗದೆಗಳಿವೆ. ತೋರಣದ ಮೇಲೆ ದಶಾವತಾರಗಳಿವೆ.

ಪ್ರಕಾರದ ಮಂಡಪಗಳಲ್ಲಿ ೬೪ ವಿಗ್ರಹಗಳಿದ್ದವೆಂದು ಎರಡು ಶಾಸನಗಳಿಂದ (ಟಿ. ಎನ್. ೯೬ ಮತ್ತು ಡಿ. ಎನ್. ೩೬) ತಿಳಿದುಬರುತ್ತದೆ. ದಶಾವತಾರಗಳು, ಮುರಹರನಾರಾಯಣ ಅಥವಾ ಹಂಸನಾರಾಯಣ, ಇತ್ಯಾದಿ ಹನ್ನೆರಡು, ಕೇಶವಾದಿ ದ್ವಾದಶಮೂರ್ತಿಗಳು, ಸಂಕರ್ಷಣ, ಇತ್ಯಾದಿ ಹನ್ನೆರಡು, ವಿಷ್ವಕ್ಸೇನ ಮುಂತಾದ ನಾಲ್ಕು, ಬ್ರಹ್ಮಸೇ ಮೊದಲಾದ ಆರು, ಇಂದ್ರಾದಿ ಅಷ್ಟದಿಕ್ಪಾಲಕರು ಒಟ್ಟು ಅರವತ್ತು ನಾಲ್ಕು ವಿಗ್ರಹಗಳಲ್ಲಿ ಹತ್ತು ಮಾತ್ರ ಭಂಗವಾಗಿ ಜಗತಿಯ ಹತ್ತಿರ ಬಿದ್ದಿವೆ. ಈಗಿರುವ ವಿಗ್ರಹಗಳು ಈಚಿನವು.

ಮಹಾದ್ವಾರದ ಮೇಲೆ ಗೋಪುರವಿರಲಿಲ್ಲ. ಇದರ ಮುಂದಿನ ಮಂಟಪದಲ್ಲಿ ಮೊದಲು ಎರಡು ಕಲ್ಲಿನ ಆನೆಗಳಿದ್ದವು. ಈಗಿರುವ ಆನೆಗಳನ್ನು ಜಗತಿಯಿಂದ ತಂದು ಇಟ್ಟಂತೆ ಕಂಡುಬರುತ್ತದೆ. ಮಹಾ ದ್ವಾರದ ಜಗತಿಯ ಹತ್ತಿರ ದಕ್ಷಿಣದಲ್ಲಿ ಹನ್ನೊಂದು ಅಡಿ ಉದ್ದ ನಾಲ್ಕಡಿ ಅಗಲವಿರುವ ಶಾಸನದ ಕಲ್ಲಿದೆ. ಇದರ ಮೇಲ್ಭಾಗದಲ್ಲಿ ಜನಾರ್ದನ ಕೇಶವ ವೇಣುಗೋಪಾಲ ವಿಗ್ರಹಗಳೂ ಗೋವು, ಚಂದ್ರ, ಗರುಡ, ಸೂರ್ಯ ಇವೆ. ಮಹಾದ್ವಾರದ ಈಶಾನ್ಯದಲ್ಲಿ ಸುಮಾರು ೩೦ ಅಡಿ

ಎತ್ತರದ ದೀಪಸ್ತಂಭ ಇದೆ. ಇದು ಬುಡದಲ್ಲಿ ಚಚ್ಚೌಕವಾಗಿದ್ದು, ಅನಂತರ ಅಷ್ಟಕೋಣವಾಗಿ ಹದಿನಾರು ಮೂಲೆಗಳನ್ನು ಹೊಂದಿದೆ. ಮೇಲ್ಭಾಗದಲ್ಲಿ ಹದಿನಾರು ಅರಗಳುಳ್ಳ ಚಕ್ರ, ಅದರಮೇಲೆ ಚಚ್ಚೌಕ ವಾದ ಪೀಠ, ಕಮಲ ಇದ್ದು ಬಹುಶಃ ಹಬ್ಬಗಳಲ್ಲಿ ದೀಪವನ್ನಿಡುತ್ತಿದ್ದರು.

(೩) ಪಂಚಲಿಂಗೇಶ್ವರ ದೇವಾಲಯ: ಕೇಶವ ದೇವಸ್ಥಾನಕ್ಕೆ ಈಶಾನ್ಯದಲ್ಲಿ ಸೋಮನಾಥನು ಬಿಜ್ಜಲೇಶ್ವರ, ಇತ್ಯಾದಿ ಪಂಚಲಿಂಗ ಶಿವಾಲಯವನ್ನು ೧೨೬೮ರಲ್ಲಿ ಮಾಡಿಸಿದ್ದನು. ಪಂಚಕೂಟ ದೇವಾಲಯ ಗಳಲ್ಲಿ ಇದು ಒಂದಾಗಿದೆ. ಒಂದೊಂದು ಗರ್ಭಗುಡಿಗೂ ಸುಕನಾಸಿ ಗೋಪುರವಿದ್ದು ಎಲ್ಲಕ್ಕೂ ಒಂದೇ ಉದ್ದವಾದ ಕೈಸಾಲೆ ಇದ್ದಿತು.

ಕೇಶವ ದೇವಾಲಯದ ಪೂರ್ವಕ್ಕೆ ಬಹುಶಃ ೧೪ನೆಯ ಶತಮಾನ ದಲ್ಲಿ ಸಣ್ಣ ಉತ್ಸವ ಮಂಟಪವನ್ನು ಕಟ್ಟಿಸಿದಂತೆ ಕಂಡುಬರುತ್ತದೆ. ನೈರುತ್ಯದಲ್ಲಿ ನದಿಯ ದಡದ ಹತ್ತಿರ ಸೋಮನಾಥನೇ ಮಾಡಿಸಿದ ಲಕ್ಷ್ಮೀನಾರಾಯಣ ದೇವಾಲಯವಿದೆ. ಗರ್ಭಗೃಹ, ಸುಕನಾಸಿ, ಒಂಬತ್ತು ಅಂಕಣದ ನವರಂಗ, ಜಗತಿ ಇರುವ ಮುಂಡಪಗಳಿವೆ. ಮೂಲ ವಿಗ್ರಹ ಈಗಿಲ್ಲ. ಹೆಚ್ಚು ಕೆತ್ತನೆ ಕೆಲಸ ಕಂಡುಬರುವುದಿಲ್ಲ. ನವರಂಗದ ಭುವನೇಶ್ವರಿಗಳು, ದಿಕ್ಪಾಲಕ, ಯಕ್ಷ, ಇತ್ಯಾದಿ ವಿಗ್ರಹಗಳನ್ನು ಹೊಂದಿವೆ. ಸೋಮನಾಥನು ಕಟ್ಟಿಸಿದ್ದ ಪುರಹರ, ನರಸಿಂಹೇಶ್ವರ, ಮುರಹರ, ಯೋಗನಾರಾಯಣ ದೇವಾಲಯಗಳು ಅದೃಶ್ಯವಾಗಿವೆ.

ಭಾಗ ೩

ಇತರ ಸಣ್ಣ ಹೊಯ್ಸಳ ದೇವಾಲಯಗಳು

೪. ಬಸ್ರಾಳು : ಮಂಡ್ಯಕ್ಕೆ ಉತ್ತರದಲ್ಲಿರುವ ಬಸ್ರಾಳಿನ ಮಲ್ಲಿಕಾರ್ಜುನ ದೇವಾಲಯವು ಊರಿನ ಈಶಾನ್ಯದಲ್ಲಿದೆ. ಊರಿನ ಮಧ್ಯದಲ್ಲಿ ಹೊಯ್ಸಳರ ಕಾಲದ ನಗರ ನಿರ್ಮಾಣದಂತೆ ವಿಷ್ಣು ದೇವಾಲಯವಿದೆ. ಮಲ್ಲಿಕಾರ್ಜುನ ದೇವಾಲಯವನ್ನು ಇಮ್ಮಡಿ ನರಸಿಂಹನ ದಂಡನಾಯಕನಾದ ಹರಿಹರನು ಸೇವುಣರನ್ನು ಗೆದ್ದು ತನ್ನ ತಾಯಿಯ ಹೆಸರಿನಲ್ಲಿ ಕೆರೆಯನ್ನೂ ತಂದೆಯ ಹೆಸರಿನಲ್ಲಿ ಮಲ್ಲಿಕಾರ್ಜುನ ಲಿಂಗವನ್ನೂ ಸ್ಥಾಪಿಸಿದನು. ಬಸುರಿವಾಳ ಬಹುಶಃ ಅವನ ಹುಟ್ಟೂರು ಆಗಿದ್ದಿತು. ಇಮ್ಮಡಿ ನರಸಿಂಹನು ೧೨೩೪ರಲ್ಲಿ ಕವಿಚಕ್ರವರ್ತಿ ಜನ್ನ ನಿಂದ ರಚಿತವಾದ ಶಾಸನವನ್ನು ಹಾಕಿಸಿರುವನು. ೧೨೩೦ರಲ್ಲಿ ಸೋಮೇಶ್ವರನೂ, ೧೨೬೯ರಲ್ಲಿ ಮೂರನೆಯ ನರಸಿಂಹನೂ ದಾನ ಮಾಡಿರುವರು. ಪಾಳೆಯಗಾರ ಕೆಂಪಬೈರರಸನಾಯಕನು ಸುಮಾರು ೧೬೭೫ ಕ್ಷಯದಲ್ಲಿ ದಾನಕೊಟ್ಟಿರುವನು. ಈ ದೇವಾಲಯದ ಹತ್ತಿರ ಕೋಟೆ ಇದ್ದಿತು. ಇದಕ್ಕೆ ನೈರುತ್ಯದಲ್ಲಿದ್ದ ವಿಷ್ಣುದೇವಾಲಯ ಸಣ್ಣದಾಗಿ ಈಗ ನಾರವಾಗಿದೆ. ಇದರ ಗರ್ಭಗುಡಿಯಲ್ಲಿ ಈಗ ಜನಾರ್ದನ ವಿಗ್ರಹ ವಿದೆ. ಮಲ್ಲಿಕಾರ್ಜುನ ದೇವಾಲಯಕ್ಕೆ ದಕ್ಷಿಣದಲ್ಲಿ ಮತ್ತೊಂದು ಈಶ್ವರ ಗುಡಿ ಇದೆ.

ಈಗಿನ ಮಲ್ಲಿಕಾರ್ಜುನ ದೇವಾಲಯದ ಪೀಠ ಮುಚ್ಚಿಹೋಗಿದೆ. ಆದರೂ ಉತ್ತರ ದಕ್ಷಿಣಗಳಲ್ಲಿ ಜಗತಿಯ ಮೇಲಕ್ಕೆ ಮೆಟ್ಟಲು ಇದ್ದುದನ್ನೂ ಅದರ ಪಕ್ಕಗಳಲ್ಲಿ ಸಣ್ಣ ಗೋಪುರಗಳನ್ನೂ ನೋಡಬಹುದು. ದೇವಾಲಯದ ಗೋಡೆಯ ಮೇಲೆ ಕೋರಮಂಗಲ ಹೊಸಹೊಳಲು ದೇವಾಲಯಗಳಂತೆ ಆರು ಸಾಲು ವಿಗ್ರಹಗಳಿವೆ. ಆನೆ ಕುದುರೆಗಳು ಯುದ್ಧಕ್ಕೆ ಹೋಗುತ್ತಿರುವಂತೆಯೂ, ಕೆಲವರು ರಾವುತರು ಒಬ್ಬ ಪದಾತಿಯ ಮೇಲೆ ದಾಳಿ ಮಾಡುತ್ತಿರುವಂತೆಯೂ, ಮತ್ತೊಬ್ಬ ಕುದುರೆಸವಾರನು ಅವನ ಸಹಾಯಕ್ಕೆ ಬರುತ್ತಿರುವಂತೆಯೂ ಚಿತ್ರಿಸಿರುವುದು ಬಹುಶಃ ಹರಿಹರನು

ಸೇವುಣರೊಡನೆ ಮಾಡಿದ ಯುದ್ಧದ ಸ್ಮಾರಕವಾಗಿದೆ. ಇದರ ಮೇಲೆ ಸಿಂಹಗಳ ಸಾಲು ಇದೆ. ಅನಂತರ ದಕ್ಷಿಣ ದ್ವಾರದಿಂದ ರಾಮಾಯಣದ ಕಥೆ ಮುಖ್ಯ ಗರ್ಭಗುಡಿಯ ಹಿಂಭಾಗದವರೆಗೂ ಹೋಗಿದೆ. ಆಮೇಲೆ ಮಹಾಭಾರತದ ಕಥೆ ಉತ್ತರ ದ್ವಾರದವರೆಗೂ ಚಿತ್ರಿತವಾಗಿದೆ. ಅನಂತರ ಭಾಗವತ ಇತರ ಪುರಾಣಗಳ ಕಥೆಗಳು ಇವೆ. ಅನಂತರ ಮಕರ ಮತ್ತು ಹಂಸಗಳ ಸಾಲು ಇವೆ.

ಗೋಡೆಯ ಮಧ್ಯದಲ್ಲಿ ಸುಮಾರು ಎರಡೂವರೆ ಅಡಿ ಎತ್ತರದ ದೇವತಾವಿಗ್ರಹಗಳಿವೆ. ಇವುಗಳಲ್ಲಿ ಶಿವನು ಚತುರ್ಭುಜಗಳಲ್ಲಿ ತ್ರಿಶೂಲ, ಮೂರು ಹೆಡೆಯ ಸರ್ಪ, ಬೀಸಣಿಗೆ, ಪರಶು ಹಿಡಿದಿರುವುದು ; ಇಪ್ಪತ್ತೆರಡು ಭುಜಗಳ ನರ್ತಿಸುತ್ತಿರುವ ದುರ್ಗಾ ; ಅಂಧಕನಮೇಲೆ ನರ್ತನಮಾಡುವ ಹದಿನಾರು ಭುಜದ ಶಿವ ; ಅಕ್ಷಮಾಲಾ, ತ್ರಿಶೂಲ, ಚಕ್ರ, ಶಂಖ ಹೊಂದಿರುವ ಹರಿಹರ ; ವಿಠ್ಠಲ ಗಮನಾರ್ಹವಾಗಿವೆ. ಬಸರಾಳು ದೇವ ಸ್ಥಾನದ ಮೇಲ್ಛಾವಣಿ ಬಹಳ ಸುಂದರವಾಗಿದೆ. ಮಕರ ಮತ್ತು ಕೀರ್ತಿ ಮುಖಗಳ ಮಧ್ಯೆ ಗೋಪುರಗಳ ಕೆಳಗೆ ಪೂರ್ವದಿಂದ ಆರಂಭಿಸಿ ಗಣೇಶ-ಸರಸ್ವತಿ, ತಾಂಡವಶಿವ, ಅಷ್ಟಭುಜ ವಿಷ್ಣು, ಬ್ರಹ್ಮ–ಸರಸ್ವತಿ, ಲಕ್ಷ್ಮೀ–ನರಸಿಂಹ, ತಾಂಡವೇಶ್ವರ, ಗಜಾಸುರಮರ್ದನ, ಯೋಗನಾರಾಯಣ ಲಕ್ಷ್ಮೀ ವಿಗ್ರಹಗಳಿವೆ. ಶಿಖರವು ಚತುರಸ್ರವಾಗಿದ್ದು ಲತಾಪಟ್ಟಿಕೆ ಯಿಂದ ಅಲಂಕೃತವಾಗಿ ಕಳಶವನ್ನು ಹೊಂದಿದೆ. ಮುಂದಕ್ಕೆ ಚಾಚಿರುವ ಭಾಗದಲ್ಲಿ ತಾಂಡವೇಶ್ವರ ವಿಗ್ರಹ, ಅದರಮೇಲೆ ಸುಂದರವಾದ ಸಳ-ಹುಲಿ ಇವೆ.

ದೇವಾಲಯದ ಮುಂಭಾಗದ ಮಂಡಪಕ್ಕೆ ಉತ್ತರ ದಕ್ಷಿಣಗಳಲ್ಲಿ ಎರಡು ದ್ವಾರಗಳಿವೆ. ಈ ದ್ವಾರಗಳ ಹತ್ತಿರ ಎರಡೆರಡು ಆನೆಗಳಿವೆ. ದಕ್ಷಿಣ ದ್ವಾರದಲ್ಲಿ ಮಾತ್ರ ಒಬ್ಬನೇ ದ್ವಾರಪಾಲಕನಿರುವನು. ಈ ಮಂಡಪದ ಪೂರ್ವಕ್ಕೆ ನಂದಿಮಂಡಪವಿದೆ. ಪಶ್ಚಿಮದಲ್ಲಿ ನವರಂಗಕ್ಕೆ ದಾರಿ ಇದೆ. ನಂದಿಯು ನಾಲ್ಕು ಅಡಿ ಎತ್ತರ ಐದು ಅಡಿ ಉದ್ದವಿದೆ. ಇದರ ಬಲಕೋಡು ಮತ್ತು ಎರಡು ಕಿವಿಗಳು ಹೋಗಿವೆ. ಆದರೂ ಸುಂದರವಾಗಿದೆ.

ನವರಂಗದ್ವಾರದ ಮೇಲೆ ತಾಂಡವೇಶ್ವರ, ಪಕ್ಕಗಳಲ್ಲಿ ಶೈವದ್ವಾರ ಪಾಲಕರು ಇರುವರು. ಗೋಡೆಯಲ್ಲಿ ಜಾಲಂದ್ರವಿದೆ. ನವರಂಗ ತಗ್ಗಾಗಿದ್ದರೂ ಜಗತಿಗಳನ್ನು ಹೊಂದಿದೆ. ಪಶ್ಚಿಮ ಭಾಗದ ನಾಲ್ಕು ಗೂಡುಗಳಲ್ಲಿ ಸರಸ್ವತಿ, ಗಣೇಶ, ಮಹಿಷಮರ್ದನಿ, ಮತ್ತೊಂದು ಸರಸ್ವತಿ ವಿಗ್ರಹಗಳಿವೆ. ಗಣೇಶನ ಗೂಡಿಗೆ ಎದುರಾಗಿ ಸಪ್ತಮಾತೃಕೆಯರಿರುವರು. ನವರಂಗದ ಕಂಬಗಳು ಅಷ್ಟು ಎತ್ತರವಿಲ್ಲದಿದ್ದರೂ ಕಲಾಕೌಶಲ್ಯವನ್ನು ತೋರಿಸುವುವು. ನವರಂಗದ ಹತ್ತು ಅಂಕಣಗಳು ಭುವನೇಶ್ವರಿಗಳನ್ನು ಹೊಂದಿವೆ. ಆದರೆ ಮಧ್ಯದಲ್ಲಿದ್ದ ಅತ್ಯಂತ ಸುಂದರವಾದ ಮೇಲ್ಛಾವಣಿಯನ್ನು ಈಚಿಗೆ ತೆಗೆದುಹಾಕಿ ಬೆಳಕು ಬರುವಂತೆ ಗೋಪುರ ಕಟ್ಟಿರುವರು.

ದಕ್ಷಿಣ ಗರ್ಭಗುಡಿಯಲ್ಲಿ ಬಹುಶಃ ವಿಷ್ಣುವಿಗ್ರಹವಿದ್ದಿತು. ಈಗ ಸೂರ್ಯನಾರಾಯಣ ವಿಗ್ರಹವನ್ನು ಗೋಡೆಗೆ ಒರಗಿಸಿರುವರು. ಉತ್ತರ ಗರ್ಭಗುಡಿಯಲ್ಲೂ ವಿಷ್ಣುವಿಗ್ರಹವಿದ್ದು, ಈಗ ಹೊಯ್ಸಳರ ಕಾಲದ ನಾಗರ ಕಲ್ಲನ್ನು ಇಟ್ಟಿರುವರು. ಪಶ್ಚಿಮ ಗರ್ಭಗುಡಿಯಲ್ಲಿ ಸುಮಾರು ಮುಕ್ಕಾಲು ಅಡಿ ಎತ್ತರದ ಲಿಂಗವಿದೆ. ಉಪ್ಪರಿಗೆ ಅಥವಾ ಮಹಾದ್ವಾರದ ಮೇಲ್ಛಾವಣಿಯಲ್ಲಿ ತಾಂಡವೇಶ್ವರ ಮತ್ತು ಅಷ್ಟದಿಕ್ಪಾಲಕರು ಇರುವರು. ಮುಖಮಂಡಪದಲ್ಲಿ ಎರಡು ರೀತಿಯ ಕಂಬಗಳಿವೆ. ದೇವಾಲಯದ ಪೂರ್ವದಲ್ಲಿ ಸುಮಾರು ೧೨ ಅಡಿ ಎತ್ತರದ ದೀಪಸ್ತಂಭವಿದೆ. ಇದರ ಮೇಲೆ ಒಬ್ಬ ಪುರುಷ ಒಬ್ಬ ಸ್ತ್ರೀ ವಿಗ್ರಹಗಳು ಕೆಳಕ್ಕೆ ದುಮ್ಮಿಕ್ಕಲು ಸಿದ್ಧವಾಗಿರುವಂತೆ ಇವೆ. ಬಹುಶಃ ಇಮ್ಮಡಿ ನರಸಿಂಹ ಅಥವಾ ವೀರಸೋಮೇಶ್ವರನ ಕಾಲದಲ್ಲಿ ಪ್ರಾಣವನ್ನರ್ಪಿಸಿದ 'ಗರುಡ'ರು ಇರಬಹುದು.

೫. ನಾಗಮಂಗಲ : ಪಾಂಡವಪುರಕ್ಕೆ ಸುಮಾರು ೨೪ ಮೈಲಿ ಈಶಾನ್ಯದಲ್ಲಿರುವ ನಾಗಮಂಗಲದ ಸೌಮ್ಯಕೇಶವದೇವಾಲಯ ಸುಮಾರು ನಾಲ್ಕುವರೆ ಅಡಿ ಎತ್ತರದ ಜಗತಿಯ ಮೇಲೆ ಇದೆ. ತ್ರಿಕೂಟಾಚಲವಾದ ಈ ಗುಡಿ ಬಹುಶಃ ವಿಷ್ಣುವರ್ಧನನ ಕಾಲದಲ್ಲಿಯೇ ಆರಂಭವಾಯಿತು. ಇದಕ್ಕೆ ಈಶಾನ್ಯದಲ್ಲಿರುವ ಭುವನೇಶ್ವರ (ಶಂಕರನಾರಾಯಣ) ದೇವಾಲಯವನ್ನು ವಿಷ್ಣುವರ್ಧನನ ರಾಣಿಯಾದ

ಬಮ್ಮಲಾದೇವಿ ೧೧೩೫ರಲ್ಲಿ ಜೀರ್ಣೋದ್ಧಾರ ಮಾಡಿದಳು. ಸೌಮ್ಯ ಕೇಶವನಿಗೆ ಇಮ್ಮಡಿ ವೀರಬಲ್ಲಾಳನು ೧೧೭೧ರಲ್ಲಿ ದಾನಮಾಡಿರುವನು. ವಿಜಯನಗರದ ಸದಾಶಿವರಾಯನ ಕಾಲದಲ್ಲಿ ಕೆಲವರು ಅಧಿಕಾರಿಗಳು ೧೫೪೪ರಲ್ಲಿ ದಾನಕೊಟ್ಟಿರುವರು. ಗರುಡಸ್ತಂಭವನ್ನು ಚನ್ನಪಟ್ಟಣದ ಜಗದೇವರಾಯನು ಸ್ಥಾಪಿಸಿದನು.

ಕೇಶವದೇವಾಲಯದ ನಕ್ಷತ್ರಾಕಾರದ ಜಗತಿ ಐದು ಅಂತಸ್ತುಗಳನ್ನು ಹೊಂದಿದೆ. ಗೋಡೆಯ ಮೇಲೆ ಯಾವ ವಿಗ್ರಹಗಳೂ ಕಂಡುಬರುವುದಿಲ್ಲ. ಶಿಖರ, ಮುಖಮಂಡಪ ಮುಂತಾದುವುಗಳನ್ನೆಲ್ಲ ವಿಜಯನಗರಕಾಲದಲ್ಲಿ ಮಾಡಿದಂತಿವೆ. ನವರಂಗದ ನೈರುತ್ಯಮೂಲೆಯಲ್ಲಿ ಐದು ಹೆಡೆಯ ಆದಿಶೇಷ, ಉತ್ತರದ ಗೋಡೆಯ ಮೇಲೆ ವಿಷ್ವಕ್ಸೇನ ವಿಗ್ರಹಗಳಿವೆ. ನವರಂಗದ ಹೊಯ್ಸಳರ ಕಾಲದ ಸ್ತಂಭಗಳು ೩೨ ಕೋಣಗಳ ನಕ್ಷತ್ರಾಕಾರವಾಗಿವೆ. ಭುವನೇಶ್ವರಿಗಳಲ್ಲಿ ರೇಖಾಚಿತ್ರಗಳಿವೆ. ಮಧ್ಯದ ಭುವನೇಶ್ವರಿಯಲ್ಲಿ ದಿಕ್ಪಾಲಕರೂ, ಪದ್ಮದ ಮಧ್ಯದಿಂದ ಜೋಲಾಡುವ ಮೊಗ್ಗಿನ ಸುತ್ತಲೂ ಸುತ್ತಿಕೊಂಡಿರುವ ಹಾವೂ ಇವೆ. ದಕ್ಷಿಣ ಗರ್ಭಗುಡಿಯ ಗರುಡಸ್ತಂಭದ ಮೇಲೆ ಬಹುಶಃ ವಿಜಯನಗರ ಕಾಲದ ವೇಣುಗೋಪಾಲ ಮತ್ತು ಸ್ತ್ರೀ ವಿಗ್ರಹಗಳಿವೆ. ಉತ್ತರ ಗರ್ಭಗುಡಿಯಲ್ಲಿ ಗರುಡಪೀಠದ ಮೇಲೆ ಅದೇ ವಿಜಯನಗರ ಕಾಲದ ಲಕ್ಷ್ಮೀನರಸಿಂಹ ವಿಗ್ರಹವಿದೆ.

ಮುಖ್ಯ ಗರ್ಭಗುಡಿಯ ಸುಕನಾಸಿ ದ್ವಾರದಲ್ಲಿ ವಿಜಯನಗರ ಕಾಲದ ದ್ವಾರಪಾಲಕರಿರುವರು. ಗರ್ಭಗುಡಿಯಲ್ಲಿ ಎರಡು ಅಡಿ ಎತ್ತರದ ಗರುಡ ಪೀಠದ ಮೇಲೆ ಆರು ಅಡಿ ಎತ್ತರದ ಕೇಶವ ವಿಗ್ರಹವಿದೆ. ಅದರ ಪಕ್ಕದಲ್ಲಿ ಶ್ರೀ ಭೂದೇವಿಯರೂ ಮೇಲೆ ತೋರಣದಲ್ಲಿ ದಶಾವತಾರಗಳೂ ಕಂಡು ಬರುತ್ತವೆ. ಮುಖಮಂಡಪ ಸಾಮಾನ್ಯವಾಗಿದೆ. ಪ್ರಾಕಾರದಲ್ಲಿ ನಾರಾಯಣ, ಶ್ರೀ, ಭೂ, ನೀಳಾ, ಆಳ್ವಾರರು, ಸುದರ್ಶನ, ಹನುಮಂತ ಇವರ ಗುಡಿಗಳು ಬಹುಶಃ ಪಾಳೆಯಗಾರರ ಕಾಲದಲ್ಲಿ ಸ್ಥಾಪಿತವಾದವು. ಮಹಾದ್ವಾರದ ಮೇಲಿನ ಗೋಪುರ ದ್ರಾವಿಡ ರೀತಿಯಲ್ಲಿ ಏಳು ಅಂತಸ್ತು ಹೊಂದಿದೆ. ಅದರ ಮುಂದೆ ಇರುವ ಗರುಡಸ್ತಂಭದ ಮೇಲೆ ಗರುಡ, ಹನುಮಂತ, ಶಂಖ ಚಕ್ರ, ತ್ರಿಪುಂಡ್ರ, ಸಿಂಹಗಳಿವೆ.

ಸೌಮ್ಯಕೇಶವ ದೇವಾಲಯದ ಪಶ್ಚಿಮಕ್ಕೆ ಅರಮನೆಯ ನಿವೇಶನವಿದೆ. ಅದಕ್ಕೆ ಹಿಂದೆ ನರಸಿಂಹದೇವಾಲಯ ಬಹುಶಃ ಹದಿನಾಲ್ಕನೆಯ ಶತಮಾನದ ಹೊಯ್ಸಳ ಕಟ್ಟಡವಾಗಿದೆ. ಗರ್ಭಗುಡಿಯಲ್ಲಿ ಯೋಗ ನರಸಿಂಹ ವಿಗ್ರಹ, ಅದರ ಮುಂದೆ ಸುರುಳಿ ಸುತ್ತಿಕೊಂಡ ನಾಗ ಇವೆಲ್ಲವೂ ಹೊಯ್ಸಳರ ಕಾಲದ ಸುಮಾರಾದ ಕೆಲಸ.

ನಾಗಮಂಗಲದ ಭುವನೇಶ್ವರ ದೇವಾಲಯ ವಿಷ್ಣುವರ್ಧನನ ಕಾಲದಲ್ಲಿ ಬಳಪದ ಕಲ್ಲಿನಿಂದ ನಿರ್ಮಿತವಾದುದು. ಅದರ ನೈರುತ್ಯದಲ್ಲಿರುವ ಶಾಸನದಿಂದ ವಿಷ್ಣುವರ್ಧನನ ರಾಣಿಯಾದ ಬಮ್ಮಲಾದೇವಿ ೧೧೩೫ರಲ್ಲಿ ದಾನಮಾಡಿದಂತೆ ಕಂಡುಬರುತ್ತದೆ. ಅನಂತರ ಸೇರಿಸಿದ ಭಾಗಗಳಲ್ಲಿ ಕಣಶಿಲೆಯನ್ನು ಉಪಯೋಗಿಸಲಾಗಿದೆ. ಮೂಲದೇವಾಲಯದ ಪೀಠವು ಎರಡೇ ಅಂತಸ್ತಾಗಿದ್ದಿತು. ಇದಕ್ಕೆ ದಕ್ಷಿಣದಲ್ಲಿ ಒಂದೇ ದ್ವಾರವಿದ್ದಿತು. ಆಮೇಲೆ ಪೂರ್ವದ ದ್ವಾರವನ್ನು ಸೇರಿಸಿದಂತೆ ಕಂಡುಬರುತ್ತದೆ. ನವರಂಗದಲ್ಲಿ ದುರ್ಗಾ, ಚೋಳ ರೀತಿಯ ನಾರಾಯಣ, ಚಂಡಿಕೇಶ, ಅರ್ಧನಾರೀಶ್ವರ, ಗಣೇಶ, ನಂದಿ, ದುರ್ಗಾ, ಷಣ್ಮುಖ, ಮಹಿಷಮರ್ದಿನೀ, ಎರಡು ಲಿಂಗಗಳೂ ಇವೆ. ಗರ್ಭಗುಡಿಯಲ್ಲಿರುವ ಲಿಂಗವನ್ನು ಶಾಸನದಲ್ಲಿ ಶಂಕರನಾರಾಯಣ ಎಂದು ಕರೆಯಲಾಗಿದೆ. ಸದಾಶಿವ, ಪಾರ್ವತಿ, ಗಣೇಶ ಉತ್ಸವ ವಿಗ್ರಹಗಳು ಲೋಹದಿಂದ ಮಾಡಲ್ಪಟ್ಟಿವೆ. ನಾಗಮಂಗಲ ಹೊಯ್ಸಳರ ಕಾಲದಿಂದಲೂ ಲೋಹಕಾರರಿಗೆ ಪ್ರಸಿದ್ಧವಾಗಿದ್ದಿತು. ಈಗಲೂ ಕೂಡ ಕೆಲವು ಮನೆತನಗಳಲ್ಲಿ ಪುರಾತನ ಶಿಲ್ಪಶಾಸ್ತ್ರಗ್ರಂಥಗಳು ಸಿಕ್ಕುತ್ತವೆ.

೬. **ಅರಸೀಕೆರೆ :** ಚಾಳುಕ್ಯ ಅರಸಿಯ ಹೆಸರಿನಲ್ಲಿ ಕಟ್ಟಿಸಿದ ಕೆರೆಯಿಂದ ಹೆಸರು ಪಡೆದ (ಎ. ಕ. ೫, ಎಕೆ. ೮೭) ಅರಸೀಕೆರೆ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಪ್ರಸಿದ್ಧವಾಗಿದ್ದಿತು. ಕ್ರಿ. ಶ. ೧೨೨೦ರಲ್ಲಿ ಇಮ್ಮಡಿ ನರಸಿಂಹನ ಕಾಲದಲ್ಲಿ ಈಶ್ವರ ದೇವಾಲಯ ನಿರ್ಮಿತವಾಯಿತು. ಇದರ ಜಗತಿಯು ಮುಚ್ಚಿಹೋಗಿದೆ. ಮೂರು ಅಡಿ ಎತ್ತರದ ಪೀಠದ ಮೇಲೆ ಯಕ್ಷ, ಹಂಸ, ಗೋಪುರಗಳ ಸಾಲುಗಳಿವೆ. ಇವುಗಳ ಮೇಲೆ ದೇವಾಲಯದ ಸುತ್ತಲೂ ೧೨೦ ವಿಗ್ರಹಗಳಿವೆ. ಲಕ್ಷ್ಮೀ–ವಿಷ್ಣು, ಸಪ್ತ

ಮಾತೃಕೆಯರು, ಪಾರ್ವತಿ, ಶಿವ, ವಿಷ್ಣುವಿನ ದ್ವಾದಶಮೂರ್ತಿಗಳು, ಸರಸ್ವತಿ, ಶಿವ, ಕೇಶವ, ಲಕ್ಷ್ಮೀ ಗಣನಾರ್ಹವಾಗಿವೆ. ಕೆಲವು ವಿಗ್ರಹಗಳ ಕೆಳಗೆ ಅವುಗಳ ಹೆಸರನ್ನು ಬರೆದಿದೆ. ಮೇಲ್ಚಾವಣಿಯ ಬೋದಿಗೆಯ ಮೇಲೆ ಮಣಿಸರ ಮಕರ ಕೀರ್ತಿಮುಖ ಶಿಖರಗಳಿವೆ. ಶಿಖರವು ೧೬ ಕೋಣಗಳ ನಕ್ಷತ್ರಾಕಾರವಾಗಿದೆ. ಐದು ಅಂತಸ್ತುಗಳಲ್ಲೂ ಕೆತ್ತನೆ ಕೆಲಸವಿದೆ. ಮೇಲೆ ಕಲ್ಲಿನ ಕಳಶವಿದೆ. ಶಿಖರದ ಚಾಚಿದ ಮುಂಭಾಗ ದಲ್ಲಿದ್ದ ಸಳವಿಗ್ರಹ ಹೋಗಿ ಈಚೆಗೆ ಗಾರೆಯ ನಂದಿಯನ್ನು ಇಡಲಾಗಿದೆ. ಇದರ ಮುಂಭಾಗದಲ್ಲಿ ತಾಂಡವೇಶ್ವರ ವಿಗ್ರಹವಿದೆ. ಮಂಡಪದ ಕೆಳಭಾಗ ದಲ್ಲಿ ಯಕ್ಷರ ಸಾಲು ಶಿಖರಗಳು ಇವೆ. ಮಂಡಪದ ಮೇಲೆ ಅಂಡಾಕಾರ ವಾದ ಮೇಲ್ಚಾವಣಿ ಗಾರೆಯಿಂದ ಕಟ್ಟಲಾಗಿದೆ.

ಮಂಡಪದ ಒಳಗೆ ಮಧ್ಯದಲ್ಲಿ ಅಗಲವಾದ ಜಗತಿ, ಅದರ ಸುತ್ತಲೂ ನಾಲ್ಕು ಸ್ತಂಭಗಳು ಇವೆ. ಇವುಗಳ ಹಿಂದೆ ಕಲ್ಲಿನ ಜಗತಿಗಳೂ ೨೪ ಆನೆಗಳ ಸಾಲೂ ಇವೆ. ಕಲ್ಲಿನ 'ಬೆಂಚು'ಗಳ ಹಿಂದೆ ಹೊರಕ್ಕೆ ಬಗ್ಗಿರುವ ಕಟಾಂಜನವಿದೆ. ಹೊರಗಡೆ ಇರುವ ೧೩ ಸ್ತಂಭಗಳು ಗುಂಡಾಗಿವೆ. ಮಧ್ಯದಲ್ಲಿರುವ ಎಂಟು ಸ್ತಂಭಗಳನ್ನು ಹೊಯ್ಸಳ ರೀತಿಯಲ್ಲಿ ಅಲಂಕರಿಸಿರುವರು. ಈ ಸ್ತಂಭಗಳ ಮೇಲಿನ ತೊಲೆಗಳನ್ನು ಅಷ್ಟಕೋಣದಂತೆ ಕಡೆದು ಒಂದೊಂದು ಸಾಲಿನಲ್ಲೂ ಏಳು ವಿಗ್ರಹ ಗಳಂತೆ ಒಟ್ಟು ೫೬ ವಿಗ್ರಹಗಳನ್ನು ಇಟ್ಟಿರುವರು. ಇವುಗಳಲ್ಲಿ ನಂದೀಶ್ವರ, ಕುಬೇರ, ಈಶಾನ, ನರಸಿಂಹ, ಇವುಗಳ ಪಕ್ಕಗಳಲ್ಲಿ ವಿಷ್ಣು, ಶಿವ, ದೇವೀ ವಿಗ್ರಹಗಳನ್ನು ಗುರ್ತಿಸಬಹುದು. ಈ ತೊಲೆಗಳ ಮೇಲೆ ಸಿಂಹಗಳ ಮಧ್ಯೆ ಗೋಪುರಗಳಿವೆ. ಉತ್ತರದ ಒಂದು ಗೋಪುರದಲ್ಲಿ ಕತ್ತಿ ಮತ್ತು ಪಾತ್ರೆ ಹಿಡಿದಿರುವ ದುರ್ಗಾ ವಿಗ್ರಹವಿದೆ. ಇದರ ಮೇಲಿನ ಭುವನೇಶ್ವರಿ ಯಿಂದ ಮೂರೂವರೆ ಅಡಿ ಉದ್ದದ ಕಮಲದ ಕರ್ಣಿಕೆ ಜೋಲಾಡುತ್ತಿದೆ.

ಈ ಮಂಡಪಕ್ಕೂ ನವರಂಗಕ್ಕೂ ಮಧ್ಯದಲ್ಲಿರುವ ಸಣ್ಣಮುಖ ಮಂಡಪದ ಮೇಲ್ಚಾವಣಿಯಲ್ಲಿ ಅಷ್ಟದಿಕ್ಪಾಲಕರು, ನರ್ತಕರು, ಒಂಬತ್ತು ಸಂಗೀತಗಾರರ ಮಧ್ಯದಲ್ಲಿ ತಾಂಡವೇಶ್ವರ ವಿಗ್ರಹಗಳಿವೆ. ನವರಂಗದಲ್ಲಿ ಒಂಬತ್ತು ಅಂಕಣಗಳಿದ್ದು, ಮೂರು ಕಡೆಗಳಲ್ಲೂ ಸುಂದರ

ವಾದ ಗೂಡುಗಳನ್ನು ಹೊಂದಿದೆ. ಈ ಗೂಡುಗಳಲ್ಲಿದ್ದ ವಿಗ್ರಹಗಳು ಈಗ ಅದೃಶ್ಯವಾಗಿವೆ.

ನವರಂಗದ ಸ್ತಂಭಗಳು ಕೆಳಗಡೆ ಯಕ್ಷ, ಅದರಮೇಲೆ ತೋರಣಗಳ ಕೆಳಗೆ ವಿಷ್ಣು, ಶಿವ, ದೇವೀ ವಿಗ್ರಹಗಳನ್ನು ಹೊಂದಿವೆ. ಸ್ತಂಭಗಳ ಮೇಲ್ಭಾಗದಲ್ಲಿ ಸಿಂಹಮುಖಗಳಿವೆ. ನವರಂಗದ ಮಧ್ಯದ ಭುವನೇಶ್ವರಿಯಲ್ಲಿ ಪಶ್ಚಿಮಕ್ಕೆ ಏಕಾದಶರುದ್ರರು, ಪೂರ್ವದಲ್ಲಿ ದ್ವಾದಶಾದಿತ್ಯರು, ಉತ್ತರ ದಕ್ಷಿಣಗಳಲ್ಲಿ ವಿಷ್ಣುವಿನ ೨೪ ಮೂರ್ತಿಗಳು, ಇತರ ಮೇಲ್ಚಾವಣಿಗಳಲ್ಲಿ ರೇಖಾಚಿತ್ರಗಳು ಇವೆ. ನವರಂಗದ ಮಹಿಷಮರ್ದಿನಿ ಮತ್ತು ನಂದಿ ವಿಜಯನಗರ ಕಾಲದ ವಿಗ್ರಹಗಳಾಗಿವೆ.

ಸುಕನಾಸಿಯ ಮೇಲ್ಚಾವಣಿಯಲ್ಲಿ ಎರಡು ಸಾಲು ಚಿತ್ರಪಟ್ಟಿಕೆಗಳಿವೆ. ಕೆಳಗಿನ ಸಾಲಿನಲ್ಲಿ ಒಬ್ಬ ಋಷಿಯು ಪಾಂಡವರಿಗೆ ಪುಸ್ತಕವನ್ನೋದಿ ಪುರಾಣವನ್ನು ಹೇಳುತ್ತಿರುವನು. ಕೃಷ್ಣನು ಹತ್ತಿರ ಇರುವನು. ನರ್ತಕಿ, ದ್ರೋಣಾಚಾರ್ಯನು ಬೋಧಿಸುತ್ತಿರುವುದು, ಪಾಂಡವ ಕೌರವರು ಅಕ್ಷದ್ಯೂತವಾಡುತ್ತಿರುವುದು, ಭೀಮ-ದುಶ್ಯಾಸನ-ದ್ರೌಪದಿ, ಜಿಂಕೆಗಳ ಮುಖಂಡನು ಒಬ್ಬ ಮನುಷ್ಯನೊಡನೆ ಯುದ್ಧಮಾಡಿ ಯಜ್ಞ ಮಾಡುತ್ತಿರುವನು.

ಇದರಮೇಲಿನ ಸಾಲಿನಲ್ಲಿ ಸಮುದ್ರಮಥನ, ಶಿವತಾಂಡವ, ಶಿವ ಪರಿವಾರ, ಕುಳಿತಿರುವ ದೇವತೆ, ವಜ್ರಾಯುಧ ಫಲಹಿಡಿದಿರುವನು, ಭುವನೇಶ್ವರಿಯಲ್ಲಿ ತಾಂಡವೇಶ್ವರ-ಅಷ್ಟದಿಕ್ಪಾಲಕರು ಇರುವರು.

ಗರ್ಭಗುಡಿಯ ದ್ವಾರಬಂಧದಲ್ಲಿ ದ್ವಾರಪಾಲಕರೂ, ಲತಾ ಸಿಂಹಗಳೂ, ಮೇಲೆ ಗಜಲಕ್ಷ್ಮಿ, ಅದರಮೇಲೆ ಶಿವ, ಬಲಭಾಗದಲ್ಲಿ ಗಣೇಶ ಬ್ರಹ್ಮ, ಎಡಭಾಗದಲ್ಲಿ ಷಣ್ಮುಖ ವಿಷ್ಣು ವಿಗ್ರಹಗಳಿವೆ. ಗರ್ಭಗುಡಿಯ ಮೇಲ್ಚಾವಣಿಯಲ್ಲಿ ಅಷ್ಟದಿಕ್ಪಾಲಕರು ನರ್ತಕರು, ಮಧ್ಯದಲ್ಲಿ ತಾಂಡವೇಶ್ವರ ಇವೆ. ಲಿಂಗವು ಸುಮಾರು ಎರಡು ಅಡಿ ಎತ್ತರವಿದೆ.

ಅರಸೀಕೆರೆಯ ಈಶ್ವರದೇವಾಲಯದ ಉತ್ತರದಲ್ಲಿರುವ ಜವಳಿ ದೇವಾಲಯವನ್ನು ಕ್ರಿ. ಶ. ೧೨೨೦ರಲ್ಲಿ ನಿರ್ಮಿಸಲಾಯಿತು. ಎರಡು ಗರ್ಭಗುಡಿಗಳ ದ್ವಾರಗಳು ಮಾತ್ರ ಸ್ವಲ್ಪ ಕೆತ್ತನೆ ಕೆಲಸ ಹೊಂದಿವೆ.

ಮುಂದಿನ ಎರಡು ಮುಖಮಂಡಪಗಳನ್ನು ಸೇರಿಸಿ ಉದ್ದವಾದ ಕೈಸಾಲೆ ಮಾಡಿದೆ. ಈ ದೇವಾಲಯದ ಹಿಂದಿನ ಗೋಡೆ ಕೆಟ್ಟುಹೋಗಿದೆ.

೭. ಅಡಗೂರು : ಹಳೆಯಬೀಡಿಗೆ ನಾಲ್ಕು ಮೈಲಿ ಪೂರ್ವದಲ್ಲಿ 'ವುಡುಗೂರು' ತ್ರಿಕೂಟಾಚಲ ಲಕ್ಷ್ಮೀನಾರಾಯಣ ದೇವಾಲಯವನ್ನು ಹೊಂದಿದೆ. ನಾಲ್ಕು ಅಡಿ ಎತ್ತರದ ಜಗತಿಯ ಮೇಲಿರುವ ಮೂರು ಗರ್ಭಗೃಹ, ಸುಕನಾಸಿ, ನವರಂಗ, ಮುಖಮಂಡಪಗಳಿವೆ. ಮುಖ್ಯ ಗರ್ಭಗುಡಿಯು ಮೇಲಿನ ಶಿಖರ ಕಳಶವನ್ನು ಹೊಂದಿವೆ. ಸುಮಾರು ೧೧ನೆಯ ಶತಮಾನದಲ್ಲಿ (ಬೇಲೂರು ೩೭೬) ಇದು ರಚಿತವಾದಂತೆ ಕಂಡು ಬರುತ್ತದೆ. ಗರ್ಭಗುಡಿಯಲ್ಲಿ ಎರಡಡಿ ಎತ್ತರದ ಪೀಠದಮೇಲೆ ಐದಡಿ ಎತ್ತರದ ಲಕ್ಷ್ಮೀನಾರಾಯಣ ವಿಗ್ರಹವಿದೆ. ನಾರಾಯಣನ ಎಡ ತೊಡೆಯ ಮೇಲೆ ಲಕ್ಷ್ಮಿ ಕುಳಿತಿರುವಳು. ನಾರಾಯಣನು ಶಂಖ ಪದ್ಮ ಗದಾ ಚಕ್ರಗಳನ್ನು ಹಿಡಿದಿರುವನು. ಮುಂದಿನ ಎಡಗೈಯಿಂದ ಲಕ್ಷ್ಮಿಯನ್ನಾಲಿಂಗಿಸುತ್ತಿರುವನು. ದಕ್ಷಿಣ ಗರ್ಭಗುಡಿಯಲ್ಲಿ ಒಂದೂವರೆ ಅಡಿ ಎತ್ತರದ ಪೀಠದ ಮೇಲೆ ಇರುವ ವೇಣುಗೋಪಾಲ ವಿಗ್ರಹ ಬಹುಶಃ ಪಾಳೆಯಗಾರರ ಕಾಲದ್ದಾಗಿದೆ. ಉತ್ತರ ಗರ್ಭಗುಡಿಯಲ್ಲಿ ಹಂಸಪೀಠದ ಮೇಲಿರುವ ಆಸೀನ ಸರಸ್ವತಿ ವಿಗ್ರಹ ಸುಂದರವಾಗಿದೆ. ನಾಲ್ಕು ಕೈಗಳಲ್ಲಿ ಅಕ್ಷಮಾಲಾ, ಅಂಕುಶ, ಪಾಶ, ಪುಸ್ತಕಗಳಿವೆ.

೮. ಆನೆಕನ್ನಂಬಾಡಿ : ಹೊಳೇನರಸೀಪುರಕ್ಕೆ ೧೫ ಮೈಲಿ ದಕ್ಷಿಣ ದಲ್ಲಿರುವ ಆನೆಕನ್ನಂಬಾಡಿಯ ನಾರಾಯಣ ದೇವಾಲಯ ಸುಮಾರು ಕ್ರಿ. ಶ. ೧೧೦೦ರಲ್ಲಿ ನಿರ್ಮಿತವಾಯಿತು. ತ್ರಿಕೂಟಾಚಲವಾದ ಈ ಗುಡಿಯಲ್ಲಿ ಮುಖ್ಯ ಗರ್ಭಗುಡಿ ಮಾತ್ರ ೧೬ ಕೋಣಗಳ ನಕ್ಷತ್ರಾಕಾರದ ಜಗತಿಯ ಮೇಲಿದೆ. ಮಿಕ್ಕೆರಡು ಚತುರಸ್ರಾಕಾರವಾಗಿವೆ. ನವರಂಗದಲ್ಲಿ ದುಂಡಾದ ಕಂಬಗಳಿವೆ. ಮೇಲ್ಛಾವಣಿಗಳು ಚಪ್ಪಟೆಯಾಗಿವೆ. ಪಶ್ಚಿಮ ಗರ್ಭಗುಡಿಯಲ್ಲಿ ಎರಡಡಿ ಎತ್ತರದ ಗರುಡಪೀಠದ ಮೇಲೆ ಕೇಶವ ವಿಗ್ರಹ ಐದಡಿ ಇದೆ. ನಾಲ್ಕು ಕೈಗಳಲ್ಲಿ ಪದ್ಮ, ಶಂಖ, ಚಕ್ರ, ಗದೆಗಳಿವೆ. ಉತ್ತರ ಗರ್ಭಗುಡಿಯಲ್ಲಿ ನರಸಿಂಹನು ಚಕ್ರ ಪದ್ಮ ಗದಾ ಶಂಖಗಳನ್ನೂ ಎಡತೊಡೆಯ ಮೇಲೆ ಲಕ್ಷ್ಮಿಯನ್ನೂ ಹೊಂದಿರುವನು. ದಕ್ಷಿಣ

ಗುಡಿಯಲ್ಲಿ ವೇಣುಗೋಪಾಲ ವಿಗ್ರಹವಿದೆ. ರಂಗಮಂಡಪದಲ್ಲಿ ಮಹಿಷ ಮರ್ದಿನಿ, ವಿಘ್ನೇಶ್ವರ, ವಿಗ್ರಹಗಳಿವೆ.


೯. ಆನೆಕೆರೆ : ಚೆನ್ನರಾಯಪಟ್ಟಣಕ್ಕೆ ಮೂರು ಮೈಲಿ ಪಶ್ಚಿಮದಲ್ಲಿ "ಆನೆಗಳ ಕೆರೆ", "ಕೇಶವಪುರ" ಎಂದು ಶಾಸನದಲ್ಲಿ ಕರೆದಿರುವ ಆನೆಕೆರೆ ಯಲ್ಲಿ ಕ್ರಿ. ಶ. ೧೧೯೧ಕ್ಕೆ ಮುಂಚೆಯೇ ಕಟ್ಟಿದ ಏಕಕೂಟ ಚೆನ್ನಕೇಶವ ದೇವಾಲಯವಿದೆ. ಈಚೆಗೆ ಉತ್ತರ ದಕ್ಷಿಣಗಳಲ್ಲಿ ಎರಡು ಗರ್ಭಗುಡಿ ಗಳನ್ನು ಸೇರಿಸಿದಂತೆ ಕಂಡುಬರುವುದು. ಪಾಳೆಯಗಾರರ ಕಾಲದಲ್ಲಿ ಬೈರಪ್ಪನಾಯಕನೆಂಬುವನು ಹೊರಗಿನ ಪ್ರಾಕಾರವನ್ನು ಶುಭಕೃತ್ ಸಂವತ್ಸರದಲ್ಲಿ ಜೀರ್ಣೋದ್ಧಾರ ಮಾಡಿದನು. ಗರ್ಭಗುಡಿ ನವರಂಗಗಳ ದ್ವಾರದ ಮೇಲೆ ಗಜಲಕ್ಷ್ಮಿ ವಿಗ್ರಹವಿದೆ. ನವರಂಗದ ಮಧ್ಯದಲ್ಲಿರುವ ಭುವನೇಶ್ವರಿಯಿಂದ ಕೆಳಕ್ಕೆ ಜೋಲಾಡುತ್ತಿರುವ ದೊಡ್ಡ ಶಂಖವಿದೆ. ನವರಂಗದ ಕಂಬಗಳು ಹೊಯ್ಸಳ ರೀತಿಯಲ್ಲಿವೆ. ಗರ್ಭಗುಡಿಯಲ್ಲಿ ಆರು ಅಡಿ ಎತ್ತರದ ಕೇಶವ (ಜನಾರ್ದನ) ವಿಗ್ರಹ ಪದ್ಮ ಶಂಖ ಚಕ್ರ ಗದೆಗಳನ್ನು ಹೊಂದಿದ್ದಿತು. ಇದೂ ಕೂಡ ಮುರಿದು ಹೊಸದಾದ ಮತ್ತೊಂದು ವಿಗ್ರಹವನ್ನು ಸ್ಥಾಪಿಸಲಾಗಿದೆ. ಗ್ರಾಮದ ದಕ್ಷಿಣದಲ್ಲಿ ಅವಳಿದೇವಾಲಯಗಳಿವೆ. ವಾಯುವ್ಯದಲ್ಲಿರುವ ಶಂಭುಲಿಂಗದೇವಾಲಯ ಹನ್ನೆರಡನೆಯ ಶತಮಾನದ್ದಾದರೂ ಒರಟಾಗಿದೆ.

೧೦. ದಿಂಡಗೂರು : ಚೆನ್ನರಾಯಪಟ್ಟಣಕ್ಕೆ ಏಳು ಮೈಲಿ ಉತ್ತರ ದಲ್ಲಿರುವ ದಿಂಡಗೂರಿನಲ್ಲಿ ಇಮ್ಮಡಿ ವೀರಬಲ್ಲಾಳನ ಮಂತ್ರಿಯಾದ ಪಂಡಿತ ದಂಡನಾಥನು ಕ್ರಿ. ಶ. ೧೨೦೯ರಲ್ಲಿ ಅಗ್ರಹಾರ ಮಾಡಿ ಅದಕ್ಕೆ ಮಲ್ಲಿಕಾರ್ಜುನಪುರವೆಂದು ಹೆಸರಿಟ್ಟನು. ಕೇಶವ ಮತ್ತು ಮಲ್ಲಿಕಾರ್ಜುನ ದೇವಾಲಯಗಳನ್ನು ಮಾಡಿಸಿದನು. ಎರಡೂ ಒಂದೇ ರೀತಿಯಲ್ಲಿವೆ. ಮೇಲ್ಛಾವಣಿಗಳಲ್ಲಿ ವಿನಾ ಕೆತ್ತನೆ ಕೆಲಸ ಹೆಚ್ಚಾಗಿಲ್ಲ. ಕೇಶವ ದೇವಾಲಯದ ನವರಂಗ ದ್ವಾರದ ಮೇಲೆ ವೇಣುಗೋಪಾಲ, ಗರ್ಭಗೃಹ ದ್ವಾರದ ಮೇಲೆ ಗಜಲಕ್ಷ್ಮಿ ಇವೆ. ಗರುಡಪೀಠದ ಮೇಲೆ ಆರು ಅಡಿ ಎತ್ತರದ ಕೇಶವ ವಿಗ್ರಹ ಪದ್ಮ, ಶಂಖ, ಚಕ್ರ, ಗದೆಗಳನ್ನು ಹೊಂದಿದೆ. ಮಲ್ಲೇಶ್ವರ ದೇವಾಲಯವು ಕೇಶವ ದೇವಾಲಯದ ವಿನ್ಯಾಸವನ್ನೇ

ಅನುಸರಿಸಿದೆ. ಇದಕ್ಕೆ ಕ್ರಿ. ಶ. ೧೬೫೧ರಲ್ಲಿ ದೊಡ್ಡಯ್ಯನೆಂಬುವನು ಮಂಡಪವನ್ನು ಕಟ್ಟಿಸಿದನು. ನವರಂಗದಲ್ಲಿ ನಾಗರಕಲ್ಲು, ಗಣೇಶ, ಇತ್ಯಾದಿ ಈಚಿನ ವಿಗ್ರಹಗಳಿವೆ. ಇವಕ್ಕೆ ಪಶ್ಚಿಮದಲ್ಲಿರುವ ಬಸವೇಶ್ವರ ಗುಡಿ ಈಚಿನದು.

೧೧. ಉಂಡಿಗ ನಾಳ್ : ಅರಸೀಕೆರೆ ತಾಲ್ಲೂಕಿನಲ್ಲಿ ಬೆಟ್ಟಗಳ ಮಧ್ಯದಲ್ಲಿ "ಉಂಡಿಗೆಯ ಹಾಳು" ಹೊಯ್ಸಳ ಕಾಲದಲ್ಲಿ ಪ್ರಸಿದ್ಧ ಪಟ್ಟಣವಾಗಿದ್ದಿತು. ಇಲ್ಲಿನ ಚಾಮುಂಡೇಶ್ವರಿ ದೇವಾಲಯ ತ್ರಿಕೂಟ ವಾಗಿದ್ದು ಶಿವಲಿಂಗ, ಚಾಮುಂಡಿ ಮತ್ತು ಕೇಶವ ವಿಗ್ರಹಗಳನ್ನು ಹೊಂದಿದೆ. ವಿಷ್ಣುವರ್ಧನನು ಬಂಕಾಪುರದಲ್ಲಿದ್ದಾಗ ಮುನಿಜೆಟ್ಟಿ ಎಂಬುವನು ಈ ದೇವಾಲಯವನ್ನು ಕಟ್ಟಿಸಿದನು. ಕ್ರಿ. ಶ. ೧೨೭೬ರಲ್ಲಿ ಇಲ್ಲಿನ 'ನಿಂಬಜಾ' ದೇವಿಗೆ ದಾನವು ಕೊಡಲ್ಪಟ್ಟಿತು. ನವರಂಗದ ಮಧ್ಯದಲ್ಲಿರುವ ನಾಲ್ಕು ಕಂಬಗಳು ಮಾತ್ರ ಹೊಯ್ಸಳ ರೀತಿಯಲ್ಲಿವೆ. ಗಣೇಶ, ಭೈರವ, ಎರಡು ನಂದಿಗಳೂ, ಸಪ್ತಮಾತೃಕೆಯರೂ, ಗೂಡಿನಲ್ಲಿ ಮತ್ತೊಂದು ಗಣೇಶ ನವರಂಗದಲ್ಲಿರುವರು. ನವರಂಗದ ಗೋಡೆಯ ಹತ್ತಿರ ಸುಂದರವಾದ ಮೃದಂಗ ಬಾರಿಸುತ್ತಿರುವ ಮದನಿಕೆ ವಿಗ್ರಹವಿದೆ. ದೇವಾಲಯದ ದಕ್ಷಿಣದಲ್ಲಿ ಉಯ್ಯಾಲೆ ಕಂಬ, ಅದರ ಹತ್ತಿರ ಮೂರು ಅಂಕಣಗಳ ಮಂಡಪ ಇವೆ. ಈ ಮಂಡಪದ ಹಿಂದಿನ ಗರ್ಭಗುಡಿಯಲ್ಲಿ ನವಿಲಿನ ಮೇಲೆ ನಿಂತು ಷಡ್ಭುಜಗಳಲ್ಲಿ ತ್ರಿಮೂರ್ತಿಗಳ ಲಾಂಛನಗಳಾದ ಅಕ್ಷಮಾಲಾ, ತ್ರಿಶೂಲ, ಚಕ್ರ, ಶಂಖ, ಡಮರುಗ, ಕಮಂಡಲು ಹೊಂದಿರುವ ಶಕ್ತಿದೇವತೆ ಇದೆ. ಇದರ ಎರಡು ಪಕ್ಕಗಳಲ್ಲಿ ಜೆಟ್ಟಿಗಳೂ, ಕಂಬಗಳ ಮೇಲೆ ಜೆಟ್ಟಿಗಳೂ ಇರುವರು. ಬಹುಶಃ ಇದೇ ನಿಂಬಜಾ ದೇವಿ ಆಗಿರಬಹುದು.

೧೨. ತಲಕಾಡು : ಪಶ್ಚಿಮ ಗಂಗರ ರಾಜಧಾನಿಯಾಗಿದ್ದ ತಲಕಾಡು ತಳವನಪುರ, ಗಜಾರಣ್ಯಕ್ಷೇತ್ರ, ತಾಳಕಟ ಎಂಬುದಾಗಿ ಪ್ರಸಿದ್ಧವಾಗಿದೆ. ಚೋಳರ ಅಧೀನದಲ್ಲಿದ್ದ ತಲಕಾಡನ್ನು ವಿಷ್ಣು ವರ್ಧನನು ೧೧೧೬ರಲ್ಲಿ ಗೆದ್ದಮೇಲೆ ಕೀರ್ತಿನಾರಾಯಣ ದೇವಾಲಯ ವನ್ನು ಕಟ್ಟಿಸಿದನು. ಇದರ ಪ್ರತಿಷ್ಠೆ ಡಿಸೆಂಬರ್ ೧೧೧೭ರಲ್ಲಿ (ಬೇಲೂರು



ತಲಕಾಡಿನ ಕೀರ್ತಿನಾರಾಯಣ ದೇವಾಲಯದ ತಳವಿನ್ಯಾಸ

ದೇವಾಲಯದ ವರ್ಷವೆ) ನಡೆಯಿತೆಂದು ತಮಿಳು ಶಾಸನದಿಂದ ತಿಳಿದು ಬರುತ್ತದೆ. ಇದಕ್ಕೆ ಮುಂಚೆ ತಲಕಾಡಿನಲ್ಲಿ ರಾಜರಾಜೇಶ್ವರ ದೇವಾಲಯ ವಿದ್ದಿತೆಂದು ಕಂಡುಬರುವುದರಿಂದ ಈಗಿರುವ ವೈದ್ಯೇಶ್ವರವೇ ರಾಜರಾಜೇಶ್ವರವಾಗಿದ್ದಲ್ಲಿ ಬಹುಶಃ ಒಂದನೆಯ ರಾಜರಾಜ ಚೋಳನಿಂದ ನಿರ್ಮಿತವಾಗಿರಬಹುದು. ಮಳವಳ್ಳಿ, ಮಾರೇಹಳ್ಳಿ, ತಡಿಮಾಲಿಂಗಿಗಳಲ್ಲಿ ರಾಜರಾಜನ ಕಾಲದ ವೈಷ್ಣವ ಶೈವದೇವಾಲಯಗಳಿವೆ. ಆದರೆ ಈಗಿನ ವೈದ್ಯೇಶ್ವರ ದೇವಾಲಯ ವಿಜಯನಗರ ಕಾಲದಲ್ಲಿ ಸಂಪೂರ್ಣವಾಗಿ ಮಾರ್ಪಾಟಾದಂತೆ ಕಂಡುಬರುತ್ತದೆ.

ಕೀರ್ತಿನಾರಾಯಣ ದೇವಾಲಯ ಮರಳಿನಿಂದ ಮುಚ್ಚಿಹೋಗಿದ್ದುದನ್ನು ೧೯೧೨ರಲ್ಲಿ ಸ್ವಲ್ಪಮಟ್ಟಿಗೆ ತೆಗೆಸಲಾಯಿತು. ಅನಂತರ ಮರಳು ಪುನಃ ಪೂರ್ವ ದ್ವಾರವನ್ನು ಮುಚ್ಚಿಕೊಂಡಿದೆ. ವಿಷ್ಣುವರ್ಧನನು ಕಣಶಿಲೆಯನ್ನೇ ಉಪಯೋಗಿಸಿರುವನು. ಮಧ್ಯದ ನಾಲ್ಕು ಕಂಬಗಳಿಗೆ ಮಾತ್ರ ಬಳಪದ ಕಲ್ಲನ್ನು ಉಪಯೋಗಿಸಲಾಗಿದೆ. ನಕ್ಷತ್ರಾಕಾರದ ಜಗತಿಯ ಮೇಲೆ ದೇವಾಲಯವಿದೆ. ಜಗತಿಯ ಮೆಟ್ಟಲುಗಳ ಪಕ್ಕಗಳಲ್ಲಿ ಗೋಪುರಗಳಿದ್ದವು. ಉತ್ತರದ ಮೆಟ್ಟಲುಗಳ ಹತ್ತಿರ ಹೊಯ್ಸಳ ಶಿಲ್ಪದಲ್ಲಿ ಅಪೂರ್ವವಾದ ಯಾಳಿಗಳಿವೆ. ಜಗತಿ ನಾಲ್ಕು ಅಡಿ ಎತ್ತರ ಎಂಟು ಅಡಿ ಅಗಲವಿದೆ. ಗೋಡೆಗಳ ಮೇಲೆ ಹೆಚ್ಚು ಕೆತ್ತನೆ ಕೆಲಸವಿಲ್ಲ. ಗೋಪುರಗಳು, ಲತಾಪಟ್ಟಿಕೆ, ಸಿಂಹಲಲಾಟ ತೋರಣಗಳು ಮಾತ್ರ ಕಂಡುಬರುತ್ತವೆ. ಗರ್ಭಗುಡಿಯ ಮೇಲಿನ ಗೋಪುರವನ್ನು ಬಹುಶಃ ವಿಜಯನಗರ ಕಾಲದಲ್ಲಿ ಕಟ್ಟಿದಂತೆ ಕಂಡುಬರುತ್ತದೆ. ನವರಂಗದಲ್ಲಿ ಕಲ್ಲಿನ ಜಗತಿಗಳಿವೆ. ಪಶ್ಚಿಮದ ಅಂಕಣವನ್ನು ಸುಕನಾಸಿಯಾಗಿಯೂ ದಕ್ಷಿಣದ ಅಂಕಣವನ್ನು ಲಕ್ಷ್ಮಿಯ ಗುಡಿಯಾಗಿಯೂ ಮಾರ್ಪಡಿಸಿರುವರು. ಪಶ್ಚಿಮ ಗೋಡೆಯ ಗೂಡಿನಲ್ಲಿದ್ದ ವಿಷ್ವಕ್ಸೇನ ವಿಗ್ರಹ ಈಗ ಅದೃಶ್ಯವಾಗಿದೆ. ನವರಂಗದ ಮುಖ್ಯ ನಾಲ್ಕು ಕಂಬಗಳು ಹೊಯ್ಸಳ ರೀತಿಯಲ್ಲಿವೆ. ಮಿಕ್ಕವು ಎಂಟು ಹದಿನಾರು ಕೋಣಗಳುಳ್ಳ ನಕ್ಷತ್ರಾಕಾರದಲ್ಲಿವೆ. ಸುಮಾರು ಹತ್ತು ಕಂಬಗಳನ್ನು ಅನಂತರ ಸೇರಿಸಿದಂತೆ ಕಂಡುಬರುತ್ತದೆ. ಮೇಲ್ಚಾವಣಿಗಳಲ್ಲಿ ಲತೆ, ಸಿಂಹ, ಆನೆ, ನರ್ತಕಿ, ಋಷಿ, ಇತ್ಯಾದಿ ಕೆತ್ತನೆ ಕೆಲಸವಿದೆ.

ಗೂಡುಗಳಲ್ಲಿದ್ದ ಮೊದಲಿನ ವಿಗ್ರಹಗಳೆಲ್ಲವೂ ಹೋಗಿವೆ. ಉತ್ತರ ಅಂಕಣದಲ್ಲಿ ವಿಜಯನಗರ ಕಾಲದ ಲಕ್ಷ್ಮಿ, ನಾಲ್ಕು ಕೈಗಳಲ್ಲಿ ಅಭಯ ಪದ್ಮ ದಾನ ಮುದ್ರೆ ಹೊಂದಿರುವಳು. ಸುಕನಾಸಿಯಲ್ಲಿ ನರಸಿಂಹ ವಿಗ್ರಹವಿದೆ. ಗರ್ಭಗೃಹದ ದ್ವಾರದ ಮೇಲೆ ಗಜಲಕ್ಷ್ಮಿ ಇದೆ. ಗರ್ಭಗುಡಿಯಲ್ಲಿ ಗರುಡಪೀಠದ ಮೇಲೆ ಸಮಭಂಗದಲ್ಲಿ ನಿಂತಿರುವ ನಾರಾಯಣ ವಿಗ್ರಹ ಹತ್ತು ಅಡಿ ಎತ್ತರವಿದೆ. ಕಿರೀಟವನ್ನು ಬಿಟ್ಟು ಸುಮಾರು ಐದೂವರೆ ಅಡಿ ಎತ್ತರವಿದೆ. ನಾರಾಯಣನು ನಾಲ್ಕು ಕೈಗಳಲ್ಲಿ ಶಂಖ ಪದ್ಮ ಗದಾ ಚಕ್ರಗಳನ್ನು ಹಿಡಿದಿರುವನು. ಪ್ರಭಾವಳಿಯಲ್ಲಿ ದಶಾವತಾರಗಳಿವೆ. ವಿಗ್ರಹವು ಬೇಲೂರಿನದರಷ್ಟು ಸುಂದರವಲ್ಲದಿದ್ದರೂ ಭವ್ಯವಾಗಿದೆ.

ದೇವಾಲಯದ ವಾಯವ್ಯ ಮತ್ತು ನೈರುತ್ಯಗಳಲ್ಲಿ ದೇವಿಯರ ಗುಡಿಗಳಿದ್ದು ೧೯೩೩ನೇ ಇಸವಿವರೆಗೂ ಮರಳಿನಮೇಲೆ ಇವುಗಳ ಶಿಖರಗಳು ಕಂಡುಬರುತ್ತಿದ್ದವು. ಮರಳಿನ ಭಾರದಿಂದ ಕುಸಿದುಹೋಗಿವೆ.

ವೈದ್ಯೇಶ್ವರ ದೇವಾಲಯ ರಾಜರಾಜೇಶ್ವರ ಎಂದು ಚೋಳ ಮತ್ತು ಹೊಯ್ಸಳ ಕಾಲದಲ್ಲಿ ಪ್ರಸಿದ್ಧವಾಗಿದ್ದರೂ ವಿಜಯನಗರದ ಕಾಲದಲ್ಲಿ ಮಾರ್ಪಾಟು ಹೊಂದಿತು. ಬಹುಶಃ ವಿಜಯನಗರದ ಮಾಧವ ಮಂತ್ರಿ ಬದಲಾವಣೆಗಳನ್ನು ಮಾಡಿದಂತೆ ಕಂಡುಬರುತ್ತದೆ. ಹೊರಗಿನ ಗೋಡೆಯ ಮೇಲೆ ಆಗ್ನೇಯಕ್ಕಿರುವ, ಮೊಸಳೆಯ ಬಾಯಲ್ಲಿ ಸಿಕ್ಕಿಕೊಂಡಿರುವ ಕಿರೀಟವುಳ್ಳ ಮನುಷ್ಯನು ಲಿಂಗವನ್ನು ನಮಸ್ಕರಿಸುವಂತಿರುವ ಚಿತ್ರ ಬಹುಶಃ ಶಂಕರಾಚಾರ್ಯರನ್ನು ಸೂಚಿಸುತ್ತದೆ. ಪಾತಾಳೇಶ್ವರ, ಮರಳೇಶ್ವರ, ಗೋಕರ್ಣೇಶ್ವರ ಮತ್ತು ವೈದ್ಯೇಶ್ವರ ಲಿಂಗಗಳು ಹೊಯ್ಸಳರಿಗಿಂತಲೂ ಪುರಾತನವೆಂದು ಕಂಡುಬರುತ್ತವೆ.

೧೩. **ಹರಿಹರ :** ತುಂಗಭದ್ರಾ ತೀರದಲ್ಲಿರುವ ಹರಿಹರೇಶ್ವರ ದೇವಾಲಯ ಕ್ರಿ. ಶ. ೧೧೧೦ಕ್ಕೆ ಹಿಂದೆಯೇ ಇದ್ದಿತು. ಕಲ್ಯಾಣಿ ಚಾಳುಕ್ಯ ಉಚ್ಚಂಗಿಪಾಂಡ್ಯ, ಕಾಲಚೂರ್ಯ ಬಿಜ್ಜಳ, ದೇವಗಿರಿ ಯಾದವ, ಹೊಯ್ಸಳ ಮತ್ತು ವಿಜಯನಗರ ಚಕ್ರವರ್ತಿಗಳು ದಾನಗಳನ್ನು ಕೊಟ್ಟಿರುವರು. ಕ್ರಿ. ಶ. ೧೨೨೪ರ ಮುಂಚೆ ಪೆರ್ಮ್ಮಾಡಿ ಕಟ್ಟಿಸಿದ್ದ ದೇವಾಲಯ ಜೀರ್ಣವಾಗಿದ್ದಿತೆಂದೂ, ಅನಂತರ ಇಮ್ಮಡಿ ನರಸಿಂಹನ ದಂಡನಾಯಕನಾದ

ಪೋಲಾಳ್ವ ದಂಡನಾಥನು ಅದನ್ನು ಜೀರ್ಣೋದ್ಧಾರಮಾಡಿ ೧೧೫ ಚಿನ್ನದ ಕಳಶಗಳನ್ನಿಡಿಸಿದನೆಂದೂ, ಚಕ್ರವರ್ತಿ ನರಸಿಂಹನು ಅನೇಕ ದಾನಗಳನ್ನು ಮಾಡಿದನೆಂದೂ ಶಾಸನ ಹೇಳುತ್ತದೆ. ಪುನಃ ೧೨೬೮ರಲ್ಲಿ ಮೂರನೆ ನರಸಿಂಹನ ದಂಡನಾಯಕ ಸೋಮನಾಥನು ಸೋಮನಾಥಪುರದ ದೇವಾಲಯವನ್ನು ಕಟ್ಟಿಸಿ ಹರಿಹರದೇವಾಲಯದ ಮಹಾದ್ವಾರದ ಗೋಪುರವನ್ನೂ ಕಳಶಗಳನ್ನೂ ಸ್ಥಾಪಿಸಿದನು. ಮುಸ್ಲಿಮ್ ಮರಾಠರ ಕಾಲದಲ್ಲಿ ಮೂಲ ವಿಗ್ರಹ ಭಗ್ನವಾಗಿ ತುಂಗಭದ್ರಾನದಿಯಲ್ಲಿ ಹಾಕಲಾಗಿದ್ದುದನ್ನು ಆಮೇಲೆ ತೆಗೆದು ಜೋಡಿಸಿ ಇಟ್ಟಿರುವರು.

ಬಹುಶಃ ಮೊದಲಿನ ದೇವಾಲಯಕ್ಕೆ ಜಗತಿ ಇದ್ದುದನ್ನು ಈಗ ಕೆಲವು ಕಡೆ ಮಾತ್ರ ನೋಡಬಹುದು. ಗೋಡೆಗಳ ಮೇಲೆ ಐದು ಸಾಲುಗಳು ಚಿತ್ರಪಟ್ಟಿಕೆಗಳಿವೆ. ಎರಡರಲ್ಲಿ ಮಾತ್ರ ದೇವತೆಗಳನ್ನೂ ಹಂಸಗಳನ್ನೂ ಕೆತ್ತಿರುವರು. ಇವುಗಳ ಮೇಲೆ ಶಿಖರಗಳ ಕೆಳಗೆ ಗಣೇಶ, ಗಾಯತ್ರಿ ಮುಂತಾದ ವಿಗ್ರಹಗಳು ಇವೆ. ಮೇಲ್ಛಾವಣಿಯ ಮೇಲೆ ಪಾಳೆಯಗಾರರ ಕಾಲದ ಗೋಪುರವಿದೆ. ದಕ್ಷಿಣ ಮುಖಮಂಡಪದಲ್ಲಿ ದುಂಡಾದ ಸ್ತಂಭಗಳೂ ಕಲ್ಲಿನ ಜಗತಿ ಮೇಲ್ಛಾವಣಿಯಲ್ಲಿ ಒಂಬತ್ತು ಪದ್ಮಗಳೂ ಇವೆ. ಉತ್ತರ ಮಂಡಪವು ಇದೇ ರೀತಿಯಲ್ಲಿದೆ. ಇದಕ್ಕೆ ಉತ್ತರದಲ್ಲಿ ಹೊಯ್ಸಳ ದ್ವಾರವುಳ್ಳ ಕಾಲಭೈರವಗುಡಿ ಇದೆ. ಮುಂದಿನ ಮಂಡಪದ ಗೋಡೆಯ ಮೇಲೆ ಲತಾಪಟ್ಟಿಕೆ, ದೇವತೆಗಳು, ಆನೆ ಕುದುರೆ ಸಾಲು, ಸಣ್ಣ ಕಂಬಗಳ ಮಧ್ಯೆ ವಿಗ್ರಹಗಳು ಸಿಂಹಗಳು, ಇವುಗಳ ಮೇಲೆ ಕಟಾಂಜನದಲ್ಲಿ ದೇವತೆಗಳು, ನರ್ತಕರು, ಲತಾಪಟ್ಟಿಕೆ ಕಂಡುಬರುತ್ತವೆ. ಮಂಡಪದ ಮೇಲ್ಛಾವಣಿ ಸುಮಾರು ನಾಲ್ಕಡಿ ಮುಂದಕ್ಕೆ ಚಾಚಿಕೊಂಡು ಮರದ ತೊಲೆಗಳಂತೆ ಕೆತ್ತಲ್ಪಟ್ಟಿದೆ. ಇದರ ಮೇಲಿನ ಕೈಪಿಡಿ ಗೋಡೆಯಲ್ಲಿ ಸಿಂಹ, ಆನೆ, ಕೀರ್ತಿಮುಖಗಳ ಸಾಲುಗಳಿವೆ.

ಮುಖಮಂಡಪದ ಒಳಗೆ ಹೊಯ್ಸಳ ರೀತಿಯ ೬೦ ಕಂಬಗಳಿವೆ. ಮೇಲ್ಛಾವಣಿಯ ಮಧ್ಯ ಅಂಕಣದಲ್ಲಿ ವಿನಾ ಇತರ ಭುವನೇಶ್ವರಿಗಳಲ್ಲಿ ಪದ್ಮಗಳನ್ನು ಕೆತ್ತಿರುವರು. ನವರಂಗದ ದ್ವಾರಗಳು ಚೆನ್ನಾಗಿ ಅಲಂಕೃತವಾಗಿವೆ. ದ್ವಾರದಮೇಲೆ ಕಮಲದ ಮೊಗ್ಗುಗಳು ಗಜಲಕ್ಷ್ಮಿ ವಿಗ್ರಹ

ವಿದೆ. ನವರಂಗದಲ್ಲಿ ನಾಲ್ಕು ಸುಂದರವಾದ ಕಂಬಗಳಿವೆ. ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರು ಇರುವರು. ಮಧ್ಯದಲ್ಲಿದ್ದ ಹರಿಹರನನ್ನು ಈಗ ವಾಯವ್ಯದಲ್ಲಿರುವ ಒಂದು ಮನೆಯಲ್ಲಿಟ್ಟಿರುವರು. ಸುಕನಾಸಿಯ ದ್ವಾರದಲ್ಲಿ ದ್ವಾರಪಾಲಕರು, ಬಲಗಡೆ ಶಿವ, ಎಡಗಡೆ ಕೇಶವ ವಿಗ್ರಹಗಳು, ಜಾಲಂಧ್ರವೂ ಇವೆ. ಗರ್ಭಗುಡಿಯ ದ್ವಾರವು ಸಾಮಾನ್ಯವಾಗಿದೆ. ಮೂಲವಿಗ್ರಹ ಸುಮಾರು ಆರು ಅಡಿ ಎತ್ತರವಿದೆ. ಹರಿಹರನ ಮುಕುಟ ಬಲ ಭಾಗದಲ್ಲಿ ಜಟಾ, ಎಡ ಭಾಗದಲ್ಲಿ ಮಣಿಮುಕುಟವಾಗಿದೆ. ಬಲಗೈಗಳಲ್ಲಿ ಅಭಯ ತ್ರಿಶೂಲ, ಎಡಗೈಗಳಲ್ಲಿ ಸಂಹಾರಚಕ್ರ ಶಂಖಗಳಿವೆ. ಹಿಂದಿನ ಎರಡು ಕೈಗಳನ್ನು ಎರಡು ಕಂಬಗಳ ಮೇಲಿಟ್ಟಿರುವರು. ಮುಖವು ಅಗಲವಾಗಿ ಚಾಳುಕ್ಯ ರೀತಿಯಲ್ಲಿದೆ. ವಿಗ್ರಹದಲ್ಲಿ ಶಿರ, ಎದೆ, ಎಡತೊಡೆ ಹಳೆಯ ಭಾಗಗಳಾಗಿವೆ. ಬಲ ತೋಳುಗಳು ಎಡ ಭುಜ ಮತ್ತು ತೋಳುಗಳು ಈಚಿನದಾಗಿವೆ. ದೇವರಿಗೆ ಹಾರ, ಯಜ್ಞೋಪವೀತ, ಕಟಿಸೂತ್ರ ಮತ್ತು ಕೌಪೀನಗಳಿವೆ. ಧೋತಿ ಇಲ್ಲ. ಮೊಣಕಾಲವರೆಗೂ ಕಲ್ಲಿನ ಪೆಟ್ಟಿಗೆಯಲ್ಲಿ ಮುಚ್ಚಲಾಗಿದೆ. ಮೂಗು ಮತ್ತು ಮೂತಿಯನ್ನು ಗಾರೆಯಿಂದ ತಿದ್ದಿವೆ. ಭಗ್ನವಾದ ವಿಗ್ರಹದ ಪೂಜೆ ಇಲ್ಲಿಯೇ ಕಂಡುಬರುವುದು. ಲಕ್ಷ್ಮೀ ದೇವಾಲಯ ಅದೇ ಕಾಲದಲ್ಲಿ ಕಟ್ಟಲಾಯಿತು. ಮುಖಮಂಡಪದಲ್ಲಿ ನಾಲ್ಕು ಹೊಯ್ಸಳ ಸ್ತಂಭಗಳಿವೆ. ಮೊದಲಿನ ಲಕ್ಷ್ಮೀ ವಿಗ್ರಹ ಹೋಗಿ ಈಗ ಪೇಶ್ವೆಗಳ ಕಾಲದ ಅಮೃತಶಿಲೆಯ ಮಹಿಷಮರ್ದಿನಿ ವಿಗ್ರಹವಿದೆ. ದಕ್ಷಿಣದಲ್ಲಿ ಪಾರ್ವತೀ ದೇವಾಲಯವಿದ್ದಿತೆಂದು ಹೇಳಲಾಗಿದೆ. ಕಾಲಭೈರವ, ಸಣ್ಣ ಹರಿಹರೇಶ್ವರ, ಒಡಭಾಂಡೇಶ್ವರ ದೇವಾಲಯಗಳು ಪ್ರಾಕಾರದಲ್ಲಿವೆ. ಮಹಾದ್ವಾರದ ಮೇಲೆ ಸೋಮನಾಥನು ಕಟ್ಟಿಸಿದ್ದ ಐದಂತಸ್ತಿನ ಗೋಪುರ ಈಗ ಹೋಗಿದೆ. ಎರಡು ದೀಪಸ್ತಂಭಗಳು ಮರಾಠರ ಕಾಲದ್ದಾಗಿವೆ.

೧೪. ನಂದಿತಾವರೆ : ಹರಿಹರಕ್ಕೆ ಸುಮಾರು ಎಂಟು ಮೈಲಿ ಪೂರ್ವದಲ್ಲಿರುವ ನಂದಿತಾವರೆಯಲ್ಲಿ ಅಮೃತಲಿಂಗ ಮಾಣಿಕೇಶ್ವರ ದೇವಾಲಯವಿದೆ. ಸುಮಾರು ಕ್ರಿ. ಶ. ೧೨೨೦ರಲ್ಲಿ ಮಾಣಿಕಣ್ಣನೆಂಬ ಹೊಯ್ಸಳ ಅಧಿಕಾರಿಯು ಕಟ್ಟಿಸಿದನು. ಗರ್ಭಗೃಹ ಸುಕನಾಸಿ ನವರಂಗ

ಮತ್ತು ಉತ್ತರದಲ್ಲಿ ಒಂದು ಸಣ್ಣ ಗುಡಿ ಎಲ್ಲವನ್ನೂ ಬಳಪದ ಕಲ್ಲಿನಿಂದ ಸುಂದರವಾಗಿ ಕಟ್ಟಲಾಗಿದೆ. ನವರಂಗದ ಮಂಡಪದಲ್ಲಿ ಲಿಂಗ ಮತ್ತು ಬಳಪದ ಕಲ್ಲಿನ ನಂದಿ ಇವೆ. ಗರ್ಭಗೃಹದ ಹೊರಗೋಡೆಯಲ್ಲಿ ಐದು ಪಟ್ಟಿಕೆಗಳು, ಲತೆ, ಸಿಂಹ, ಗಜಗಳನ್ನು ಹೊಂದಿವೆ. ಗೋಡೆಯ ಮೇಲ್ಭಾಗ ದಲ್ಲಿ ಎರಡು ಅಡಿ ಎತ್ತರದ ವಿಗ್ರಹಗಳು ಲಕ್ಷಣವಾಗಿವೆ. ಆಗ್ನೇಯ ದಿಂದ ಇಂದ್ರ, ಭೈರವೀ, ಭೈರವ, ಬ್ರಹ್ಮ, ಗಣೇಶ, ರತಿಮನ್ಮಥ, ಚಾಮರ ಧಾರಿಣಿ, ರಾಮ ಲಕ್ಷ್ಮಣ ಹನುಮಂತ, ಹರಿಹರ(?), ಪಶ್ಚಿಮ ಗೋಡೆಯ ಮೇಲೆ ನಂದಿ ಮತ್ತು ಮುಂಗಸಿ ಹತ್ತಿರ ಅರ್ಧನಾರೀಶ್ವರ, ಮೋಹಿನಿ, ದಕ್ಷಿಣಾಮೂರ್ತಿ, ನಂದಿ ಮತ್ತು ಗರುಡ ಮಧ್ಯದಲ್ಲಿ ಹರಿಹರ, ಉತ್ತರ ಗೋಡೆಯಲ್ಲಿ ಶಿವ, ಅರ್ಜುನ, ಭೀಮ (?), ಭೈರವೀ, ಭಿಲ್ಲೀಪಾರ್ವತಿ, ದಕ್ಷಿಣಾಮೂರ್ತಿ, ದ್ವಿಭುಜದ ವಿಗ್ರಹ (ಮಾಣಿಕಣ್ಣ ?), ಶಿವ ದುರ್ಗಾ ವಿಗ್ರಹಗಳು ಗಮನಾರ್ಹವಾಗಿವೆ.

ನವರಂಗದಲ್ಲಿ ನಾಲ್ಕು ಹೊಯ್ಸಳ ರೀತಿಯ ಕಂಬಗಳು ಇವೆ. ಭುವನೇಶ್ವರಿಯಲ್ಲಿ ಬ್ರಹ್ಮ ವಿಷ್ಣುಗಳ ಮಧ್ಯದಲ್ಲಿ ಅಂಧಕಸಂಹಾರಮೂರ್ತಿ ಅಷ್ಟದಿಕ್ಪಾಲಕರು ಯೋಧರು ನರ್ತಕರು ಕಂಡುಬರುವರು. ನವರಂಗ ದಲ್ಲಿ ಹಂಸವಾಹನೆಯಾದ ಸರಸ್ವತಿ, ಸಪ್ತಮಾತೃಕಾ, ಗಣಪತಿ, ಅಷ್ಟಭುಜ ಮಹಿಷಮರ್ದಿನಿ, ನವಿಲಿನ ಮೇಲೆ ಷಣ್ಮುಖ, ಉಮಾ ಮಹೇಶ್ವರ, ನಿಂತಿರುವ ಪುರುಷ ಮತ್ತು ಸ್ತ್ರೀವಿಗ್ರಹಗಳೂ ಏಳು ಮತ್ತು ಐದು ಹೆಡೆಗಳ ಸರ್ಪಗಳು ಸುತ್ತಿಕೊಂಡಿರುವ ನಾಗ–ನಾಗಿಣಿ, ಸಣ್ಣ ನಂದಿ ಮುಖ್ಯವಾಗಿವೆ. ಉತ್ತರ ಗರ್ಭಗುಡಿಯಲ್ಲಿ ಜಾಲಂಧ್ರ ಉಳ್ಳ ಬಾಗಿಲು ಇದೆ. ಪದ್ಮಪೀಠದ ಮೇಲೆ ನಿಂತಿರುವ ಐದು ಅಡಿ ಎತ್ತರದ ಕೇಶವ ಪದ್ಮ ಶಂಖ ಚಕ್ರ ಗದೆಯನ್ನು ಹಿಡಿದಿರುವನು. ಬಲಗಡೆ ಭೂದೇವಿ ಗರುಡ ಚಾಮರಧಾರಿಣಿ, ಎಡಗಡೆ ಲಕ್ಷ್ಮೀ, ಚಾಮರ ಧಾರಿಣಿ, ಕೈಯೆತ್ತಿಕೊಂಡಿರುವ ಪ್ರಹ್ಲಾದ ಮತ್ತು ಒಂದು ಗಜ ಇವೆ. ಭೂದೇವಿ ಹೂಮಾಲೆ ಕಳಶವನ್ನೂ ಲಕ್ಷ್ಮೀ ಫಲಪದ್ಮಗಳನ್ನೂ ಹಿಡಿದಿರುವರು. ಸಿಂಹಲಲಾಟವುಳ್ಳ ತೋರಣದ ಮೇಲೆ ದಶಾವತಾರ ಗಳಿವೆ. ಸುಕನಾಸಿ ದ್ವಾರದಲ್ಲಿ ಶೈವದ್ವಾರಪಾಲಕರು ಇರುವರು.

ಜಾಲಂದ್ರ ಬಾಗಿಲೂ ಅದರ ಮೇಲೆ ಗಜಲಕ್ಷ್ಮಿ ತಾಂಡವೇಶ್ವರ ಬ್ರಹ್ಮ ವಿಷ್ಣುಗಳೂ ಅದರ ಮೇಲಿನ ತೊಲೆಯಲ್ಲಿ ಮಾಣಿಕಣ್ಣನ ಶಾಸನವೂ ಕಂಡುಬರುತ್ತವೆ. ಗರ್ಭಗುಡಿಯಲ್ಲಿ ಸಣ್ಣ ಲಿಂಗವಿದೆ. ಇದಕ್ಕೆ ಅಭಿಮುಖ ವಾಗಿ ಹೊಯ್ಸಳ ಕಾಲದ ನಂದಿಯನ್ನು ಈಚೆಗೆ ಕಟ್ಟಿದ ಮಂಡಪದಲ್ಲಿಡ ಲಾಗಿದೆ. ಸುತ್ತಮುತ್ತಲೂ ಸಳ ಮುಂತಾದ ವಿಗ್ರಹಗಳು ಭಿನ್ನವಾಗಿ ಬಿದ್ದಿವೆ.

೧೫. ನಂದಿಗುಡಿ : ಹರಿಹರಕ್ಕೆ ನೈರುತ್ಯದಲ್ಲಿ ಹದಿಮೂರು ಮೈಲಿ ದೂರದಲ್ಲಿ ತುಂಗಭದ್ರಾನದಿಯ ಬಲದಡದ ಮೇಲೆ ನಂದಿಗುಡಿಯ ಈಶ್ವರ ದೇವಾಲಯವಿದೆ. ಅದರ ಮುಂದೆ ಕ್ರಿ. ಶ. ೯೩೦ರ ವೀರಕಲ್ಲಿನಲ್ಲಿ ರಾಷ್ಟ್ರಕೂಟ ಸುವರ್ಣವರ್ಷನ ಕಾಲದ ಒಬ್ಬ ಗಂಗನ ಪರಾಕ್ರಮ ವರ್ಣಿಸಲ್ಪಟ್ಟಿದೆ. ಬಹುಶಃ ೧೦ನೆಯ ಶತಮಾನದಲ್ಲಿ ಈ ಸ್ಥಳ ಪ್ರಸಿದ್ಧ ವಾಗಿದ್ದಿತು. ಆದರೆ ಗುಡಿಯ ಹೊರಭಾಗವನ್ನೆಲ್ಲ ಈಚೆಗೆ ಕಟ್ಟಿರುವ ಕಟ್ಟಡಗಳಿಂದ ಮುಚ್ಚಲಾಗಿದೆ. ಗರ್ಭಗುಡಿಯ ದ್ವಾರದ ಮೇಲೆ ಗಜಲಕ್ಷ್ಮಿ, ಒಳಗಡೆ ಕೋಣಾಕಾರದ ಶಿರೋಭಾಗವುಳ್ಳ ಲಿಂಗ ಇವೆ. ಸುಕನಾಸಿ ದ್ವಾರವು ಜಾಲಂದ್ರ, ವಿದ್ಯಾಧರ ವಿಗ್ರಹ ಮತ್ತು ಶೈವದ್ವಾರ ಪಾಲಕರನ್ನು ಹೊಂದಿದೆ. ದ್ವಾರದಮೇಲೆ ಏಳು ಅಡಿ ಉದ್ದದ ಫಲಕದಲ್ಲಿ ತೋರಣ ಗಜಾಸುರಮರ್ದನ ಬ್ರಹ್ಮ ವಿಷ್ಣು ದೇವಿಯರು ನಾಲ್ಕು ಕಾಲಿನ ಮಕರ ಸಿಂಹ ಮನುಷ್ಯಮುಖದ ಸಿಂಹ ಕೆತ್ತಲಾಗಿದೆ. ಆರು ಅಡಿ ಎತ್ತರದ ಇಬ್ಬರು ಶೈವದ್ವಾರಪಾಲಕರು ಅಭಯ ತ್ರಿಶೂಲಡಮರು ಗದೆಗಳನ್ನು ಹಿಡಿದಿರುವರು. ನವರಂಗದಲ್ಲಿ ಎರಡು ಸಪ್ತಮಾತೃಕಾ ಫಲಕ, ಎರಡು ಗಣೇಶ, ಮಹಿಷಮರ್ದಿನಿ, ಆಸೀನಳಾದ ದುರ್ಗಾ ವಿಗ್ರಹಗಳಿವೆ. ನವರಂಗದ ಕಂಬಗಳು ಚಾಳುಕ್ಯ ರೀತಿಯಲ್ಲಿವೆ. ನವರಂಗದಲ್ಲಿ ಲಿಂಗಕ್ಕೆ ಅಭಿಮುಖವಾಗಿ ಎಂಟು ಅಡಿ ಉದ್ದ, ಆರು ಅಡಿ ಎತ್ತರದ ಭವ್ಯವಾದ ನಂದಿ ಇದೆ. ಇದಕ್ಕೆ ಹಿಂದೆ ಇರುವ ಸಣ್ಣ ಗುಡಿಯಲ್ಲಿ ಸುಂದರವಾದ ಸೂರ್ಯನ ವಿಗ್ರಹವಿದೆ. ಎರಡು ಕೈಗಳಲ್ಲಿ ಪದ್ಮಗಳಿವೆ. ಛಾಯಾದೇವಿಯರು ಪಾದಗಳ ಹತ್ತಿರ ಇರುವರು. ಕಿರೀಟವು ಉದ್ದ ವಾಗಿದೆ. ತೋರಣದಲ್ಲಿ ಎರಡು ಕಾಲಿನ ನವಿಲು ಬಾಲವುಳ್ಳ ಮಕರ ಮತ್ತು ಯಕ್ಷ ನಾಗರು ಇರುವರು.

೧೬. ಆನೆಕೊಂಡ : ದಾವಣಗೆರೆಗೆ ಒಂದು ಮೈಲಿ ಈಶಾನ್ಯದಲ್ಲಿ ಆನೆಕೊಂಡವೆಂಬ ಪುರಾತನ ನಿವೇಶನವಿದೆ. ಗಂಗ ಉಚ್ಚಂಗಿಪಾಂಡ್ಯ ಚಾಳುಕ್ಯ ಹೊಯ್ಸಳರ ಕಾಲದ ಅನೇಕ ಶಾಸನಗಳಿವೆ. ಇಲ್ಲಿರುವ ಈಶ್ವರ ದೇವಾಲಯ ಸುಮಾರು ಹನ್ನೊಂದನೆಯ ಶತಮಾನದಲ್ಲಿಯೇ ಇದ್ದಿತು. ಹನ್ನೆರಡನೆಯ ಶತಾಬ್ದದಲ್ಲಿ ಉಚ್ಚಂಗಿ ಪಾಂಡ್ಯರು ದೇವಾಲಯದ ಕೆಲವು ಭಾಗಗಳನ್ನು ಸೇರಿಸಿದಂತೆ ಕಂಡುಬರುವುದು. ನೆಲವು ಎದ್ದಿರುವುದರಿಂದ ಹಿಂಭಾಗವು ಮುಚ್ಚಿಹೋಗಿದೆ. ಜಗತಿಯೂ ಕಾಣಿಸುವುದಿಲ್ಲ. ಗೋಡೆಯ ಕೆಳಭಾಗದಲ್ಲಿ ಕೀರ್ತಿಮುಖ, ಯಕ್ಷ, ಸಿಂಹ, ಲತಾ ಸಾಲುಗಳಿವೆ. ಮೇಲ್ಭಾಗದಲ್ಲಿ ಕಟಾಂಜನ ಸ್ವಲ್ಪ ಮುಂದಕ್ಕೆ ಚಾಚಿಕೊಂಡಿದೆ. ಇದರ ಮೇಲೆ ದ್ವಾರಪಾಲ, ಗಣೇಶ, ಋಷಿಗಳು, ಯೋಧರು, ನರ್ತಕರು, ರತಿಮನ್ಮಥ, ಭೇತಾಳ, ಕಾಮಕೇಳಿ, ಉತ್ತರದಲ್ಲಿ ಬೇಟೆಗಾರರು ಕುಮಾರ ಇತ್ಯಾದಿ ವಿಗ್ರಹಗಳಿವೆ.

ನವರಂಗದಲ್ಲಿ ಕಲ್ಲಿನ ಜಗತಿ, ಸರಸ್ವತಿ ವಿಗ್ರಹಗಳು, ಅರ್ಜುನ, ಚಾಳುಕ್ಯ ರೀತಿಯ ಕಂಬಗಳು ಇವೆ. ಕಂಬಗಳ ಕೆಳಭಾಗದಲ್ಲಿ ತೋರಣ ಗಳು, ಅವುಗಳಲ್ಲಿ ಭೈರವ ಮೋಹಿನಿ ಸರಸ್ವತಿ ಕಾಳೀ ಬ್ರಹ್ಮ ರತಿ ಮನ್ಮಥ ವಿಷ್ಣು (ಗದಾ ಪದ್ಮ ಶಂಖ ಚಕ್ರಹಸ್ತ) ಮಹಿಷಮರ್ದಿನೀ ನರಸಿಂಹ ವಿಗ್ರಹಗಳಿವೆ. ಕೆಲವು ಕಂಬಗಳ ಮೇಲ್ಭಾಗದಲ್ಲಿ ೩೨ ಕೋಣ ಗಳುಳ್ಳ ನಕ್ಷತ್ರಾಕಾರವಿದೆ. ಮುಖಮಂಡಪದ ಮೇಲ್ಛಾವಣಿಯಲ್ಲಿ ಅಷ್ಟದಿಕ್ಪಾಲಕರಿರುವರು. ಮಧ್ಯದ ಭುವನೇಶ್ವರಿಯಲ್ಲಿ ಬ್ರಹ್ಮ ವಿಷ್ಣು ಮಧ್ಯದಲ್ಲಿ ಗಜಾಸುರ ಸಂಹಾರಮೂರ್ತಿ ಇದೆ. ಅದರ ಕೆಳಗಿನ ಪಟ್ಟಿಕೆ ಗಳಲ್ಲಿ ಶಿವ ಭೇತಾಳಗಣಗಳು, ದ್ವಾದಶಾದಿತ್ಯರು, ಏಕಾದಶರುದ್ರರು, ಯೋಗನರಸಿಂಹ, ದಕ್ಷಿಣಾಮೂರ್ತಿ-ಮೋಹಿನಿ ನಂದಿಕೇಶ, ರಾಮ ಲಕ್ಷ್ಮಣ ಹನುಮಂತ ವಿಗ್ರಹಗಳಿವೆ.

ಉತ್ತರ ಗರ್ಭಗುಡಿಯ ದ್ವಾರ ಗಜಲಕ್ಷ್ಮಿಯನ್ನು ಹೊಂದಿದೆ. ಆದರೆ ಒಳಗೆ ವಿಗ್ರಹವಿಲ್ಲ. ಪಶ್ಚಿಮದ ಗರ್ಭಗುಡಿಯ ದ್ವಾರದ ಮೇಲೆ ಜಾಲಂಧ್ರ ಮತ್ತು ಬ್ರಹ್ಮ ವಿಷ್ಣುಗಳ ನಡುವೆ ಶಿವ ಇವೆ. ಒಳಗೆ ಒಂದು ಲಿಂಗ (?) ಸುಕನಾಸಿಯಲ್ಲಿ ಮತ್ತೊಂದು ಲಿಂಗ ಇವೆ. ದಕ್ಷಿಣದ ಮುಖ

ಮುಂಡಪವನ್ನು ಮುಚ್ಚಲಾಗಿದೆ. ದೇವಾಲಯದ ಪೂರ್ವಕ್ಕೆ ನಂದಿ, ಅದರ ಹಿಂದೆ ಭಗ್ನವಾದ ವಿಷ್ಣು ವಿಗ್ರಹಗಳಿವೆ. ಸುಮಾರು ನಾಲ್ಕೂವರೆ ಅಡಿ ಎತ್ತರದ ವಿಷ್ಣುವಿನ ಪಕ್ಕಗಳಲ್ಲಿ ಶ್ರೀ ಮತ್ತು ಭೂದೇವಿಯರಿರುವರು. ಈ ವಿಗ್ರಹ ಬಹುಶಃ ಉತ್ತರ ಗರ್ಭಗುಡಿಯಲ್ಲಿದ್ದಿತು.

೧೭. ಹೊನ್ನಾಳಿ : ಗಂಗವಂಶದ ಯಡೆತೊರೆಯ ಪೆರ್ಮಾಡಿ ಎಂಬುವನು ಚಾಳುಕ್ಯ ತ್ರೈಲೋಕ್ಯಮಲ್ಲ ಸೋಮೇಶ್ವರನ ಕಾಲದಲ್ಲಿ ಹೊನ್ನಾಳಿಯನ್ನಾಳುತ್ತಿದ್ದನು. ಸೋಮೇಶ್ವರನ ಪಟ್ಟಮಹಿಷಿಯಾದ ಹೊಯ್ಸಳದೇವಿಯು (ಬಹುಶಃ ನೃಪಕಾಮನ ಮಗಳು) ಮಲ್ಲಿಕೇಶ್ವರ ತೀರ್ಥವೆನಿಸಿದ ಹೊನ್ನಾಳಿಯಲ್ಲಿ ಮಲ್ಲಿಕಾರ್ಜುನೇಶ್ವರ ದೇವಾಲಯವನ್ನು ಕ್ರಿ. ಶ. ೧೦೫೫ರಲ್ಲಿ ಕಟ್ಟಿಸಿದಳು. ದೇವಾಲಯವು ಸಾಮಾನ್ಯವಾಗಿದ್ದರೂ ಗರ್ಭಗುಡಿಯಲ್ಲಿರುವ ಸಣ್ಣ ಲಿಂಗ, ನವರಂಗದಲ್ಲಿರುವ ವೀಣಾಧಾರಿ ವೀರಭದ್ರ, ಗಣೇಶ, ಭೈರವ, ಸೂರ್ಯ, ನಂದಿ ವಿಗ್ರಹಗಳೂ ಮಧ್ಯದ ನಾಲ್ಕು ಕಂಬಗಳೂ ಗಮನಾರ್ಹವಾಗಿವೆ.

೧೮. ಕುರುವದ ಗಡ್ಡೆ : ಶಿವಮೊಗ್ಗೆಗೆ ಏಳು ಮೈಲಿ ದೂರದಲ್ಲಿ ತುಂಗಾನದಿಯಲ್ಲಿ ದ್ವೀಪವಾಗಿರುವ ಕುರುವದ ಗಡ್ಡೆಯಲ್ಲಿ ಪುರಾತನ ದೇವಾಲಯವಿದೆ. ಕುರುವದ ಗಡ್ಡೆಯನ್ನು ರಾಮೇಶ್ವರ ಎಂದೂ ಕರೆಯುಲಾಗಿದೆ. ರಾಷ್ಟ್ರಕೂಟ ಚಾಳುಕ್ಯ ಹೊಯ್ಸಳ ಯಾದವರ ಶಾಸನಗಳು ಹೇರಳವಾಗಿವೆ. ಗರ್ಭಗುಡಿ ಸುಕನಾಸಿಗಳು ಹಳೆಯ ಭಾಗಗಳು ಶಿಲ್ಪದೃಷ್ಟಿಯಿಂದ ಅಷ್ಟು ಪ್ರಧಾನವಲ್ಲದಿದ್ದರೂ ನವರಂಗದಲ್ಲಿರುವ ನಾಗ-ನಾಗಿಣಿ, ಶೈವಯೋಗಿಗಳು, ಸೂರ್ಯ, ವೀರಭದ್ರ, ಗಣೇಶ, ದುರ್ಗಾ, ಮಹಿಷ ಮರ್ದಿನಿ ವಿಗ್ರಹಗಳು ಗಮನಾರ್ಹವಾಗಿವೆ. ನವರಂಗದ ಪೂರ್ವಕ್ಕಿರುವ ಮಂಡಪದಲ್ಲಿ ನಂದಿ, ಭೈರವ, ನಾಲ್ಕು ಸ್ತಂಭಗಳು ಹೊಯ್ಸಳ-ಚಾಳುಕ್ಯರ ಕಾಲದ್ದಾಗಿವೆ. ವಿಜಯನಗರದವರೂ ಪಾಳೆಯಗಾರರೂ ಮರಾಠರೂ ದೇವಾಲಯಕ್ಕೆ ಕೆಲವು ಭಾಗಗಳನ್ನು ಸೇರಿಸಿರುವರು. ಚಾಳುಕ್ಯ ವಿಕ್ರಮ ಶಕೆಯ ೩೭ನೇ ವರ್ಷದ ಶಾಸನವಿದೆ.

೧೯. ಚನ್ನಗಿರಿ : ಇಲ್ಲಿನ ಕೇತೇಶ್ವರ (ಕಲ್ಲೇಶ್ವರ) ದೇವಾಲಯವನ್ನು ಕ್ರಿ. ಶ. ೧೧೪೦ರಲ್ಲಿ ಜೀರ್ಣೋದ್ಧಾರ ಮಾಡಿದಂತೆ ಕಂಡುಬರುವುದ

ರಿಂದ ಅದಕ್ಕೆ ಮುಂಚೆಯೇ ಪ್ರಸಿದ್ಧವಾಗಿದ್ದಿತು. ಪಶ್ಚಿಮದಲ್ಲಿರುವ ಗರ್ಭಗುಡಿಯಲ್ಲಿ ಕೇತೇಶ್ವರಲಿಂಗವಿದೆ. ಇದು ಭಿನ್ನವಾಗಿರುವುದರಿಂದ ಲೋಹದ ಪಟ್ಟಿಯಿಂದ ಬಂಧಿಸಲಾಗಿದೆ. ಉತ್ತರ ಗರ್ಭಗುಡಿಯಲ್ಲಿ ನಾಲ್ಕಡಿ ಎತ್ತರದ ಕೇಶವ ವಿಗ್ರಹವಿದೆ. ಇದರ ಪ್ರಭಾವಳಿಯಲ್ಲಿ ದಶಾವತಾರಗಳಿವೆ. ನವರಂಗದಲ್ಲಿರುವ ನಾಲ್ಕು ಕಂಬಗಳು ಸುಂದರವಾಗಿವೆ.

ಚನ್ನಗಿರಿಗೆ ಪೂರ್ವದಲ್ಲಿ ಮಣ್ಣಿಂದ ಮುಚ್ಚಿಹೋಗಿರುವ ಕಲ್ಲುಮಠ ಎಂದು ಈಗ ಕರೆಯಲಾದ ಚಾಳುಕ್ಯ ದೇವಾಲಯವಿದೆ. ಕೇತೇಶ್ವರದಂತೆಯೇ ಇದು ಬಹುಶಃ ಹೊಯ್ಸಳ ಕಾಲದ್ದೆಂದು ಬಳಪದಕಲ್ಲಿನ ಕಂಬಗಳಿಂದ ಊಹಿಸಬಹುದು. ಮೂಲವಿಗ್ರಹಗಳೆಲ್ಲ ಅದೃಶ್ಯವಾಗಿವೆ.

೨೦. ಅರಳೆಗುಪ್ಪೆ: ಬಾಣಸಂದ್ರಕ್ಕೆ ಮೂರುವರೆ ಮೈಲಿ ಪಶ್ಚಿಮದಲ್ಲಿ "ಅಲರಿಗುಪ್ಪೆ"(ಅರಳಗುಪ್ಪೆ)ಯಲ್ಲಿ ಏಕಕೂಟ ಕೇಶವದೇವಾಲಯವಿದೆ. ಇದು ಸುಮಾರು ೧೩ನೆಯ ಶತಮಾನದಲ್ಲಿ ನಿರ್ಮಿತವಾಯಿತು. ನಾಲ್ಕಡಿ ಎತ್ತರದ ನಕ್ಷತ್ರಾಕಾರದ ಜಗತಿಯ ಮೇಲೆ ಗರ್ಭಗುಡಿ ಇದೆ. ಜಗತಿಗೆ ಪೂರ್ವದಿಂದ ಮೆಟ್ಟಲುಗಳು, ಅವುಗಳ ಪಕ್ಕಗಳಲ್ಲಿ ಶಿಖರಗಳು ಇವೆ. ನಕ್ಷತ್ರದ ಕೋಣಗಳ ಮೇಲೆ ಆನೆಗಳಿದ್ದವು, ಗೋಡೆಯ ಕೆಳಭಾಗದಲ್ಲಿ ಆರು ಚಿತ್ರಪಟ್ಟಿಕೆಗಳಿವೆ. ಆನೆ, ಕುದುರೆ, ಲತಾಸಾಲುಗಳ ಮೇಲೆ ಪೌರಾಣಿಕ ಕಥೆಗಳ ಚಿತ್ರಗಳಿವೆ. ನವರಂಗದ ದ್ವಾರಕ್ಕೆ ದಕ್ಷಿಣದಲ್ಲಿ ಪೂರ್ವದಗೋಡೆಯ ಮೇಲೆ ರಾಮಾಯಣದ ಕಥೆ ಆರಂಭವಾಗಿ ಸುಕನಾಸಿ ಉತ್ತರದಲ್ಲಿ ಮುಗಿಯುತ್ತದೆ. ಅನಂತರ ಭಾಗವತದ ಕಥೆ ಕೃಷ್ಣನ ಬಾಲಲೀಲೆಯವರೆಗೂ ಕಂಡುಬರುತ್ತದೆ. ಈ ಸಾಲಿನ ಮೇಲೆ ಮಕರಗಳು ಅವುಗಳ ಮೇಲೆ ಹಂಸಗಳೂ ಇವೆ. ಮುಂಭಾಗದಲ್ಲಿ ಶಿಖರಗಳ ಕೆಳಗೆ ಯಕ್ಷ ಸಿಂಹಗಳಿವೆ. ಗೋಡೆಯ ಮಧ್ಯಭಾಗದಲ್ಲಿ ಕಟಾಂಜನ, ಜಾಲಂದ್ರ ಗಾಯಕ ನರ್ತಕವಿಗ್ರಹಗಳಿವೆ. ದೊಡ್ಡ ವಿಗ್ರಹಗಳು ಲತಾತೋರಣಗಳ ಕೆಳಗೆ ಹೊಸಹೊಳಲು, ನುಗ್ಗಿಹಳ್ಳಿ, ಸೋಮನಾಥಪುರ ವಿಗ್ರಹಗಳಂತೆ ಸುಂದರವಾಗಿವೆ. ಶಿಲ್ಪಿಯ ಹೆಸರು ಕೆಲವು ಕಡೆ ಕಂಡುಬರುತ್ತದೆ. ಆಗ್ನೇಯದಿಂದ ಅಮರನಾರಾಯಣ, ಲಕ್ಷ್ಮಿ, ನೃತ್ಯಗಣೇಶ, ಮುಳ್ಳು ತೆಗೆಯುತ್ತಿರುವ ಮೋಹಿನಿ, ಷಡ್ಭುಜ ಸರಸ್ವತಿ, ಅಕ್ಷಮಾಲಾ

ಚಕ್ರ ಶಂಖ ದಂಡ (?) ಹಿಡಿದಿರುವ ಹರಿಹರ (?)—ಶಿಲ್ಪಿ 'ಹೊನ್ನೋಜ' ವಿಷ್ಣು, ವೇಣುಗೋಪಾಲ, ಕೃಷ್ಣ, ಲಕ್ಷ್ಮೀನರಸಿಂಹ, ಷಡ್ಭುಜರಾಮ (? ಬಾಣ ಚಕ್ರ, ಪದ್ಮ ಶಂಖ ಮುಸಲ ಧನು), ಷಡ್ಭುಜವಿಷ್ಣು, ಯೋಗನಾರಾಯಣ, ಉಗ್ರನರಸಿಂಹ, ಇತ್ಯಾದಿ ಹೆಚ್ಚಾಗಿ ವೈಷ್ಣವ ವಿಗ್ರಹಗಳಿವೆ. ಇವುಗಳ ಮೇಲೆ ಶಿಖರಗಳೂ ದೇವೀ ವಿಗ್ರಹಗಳೂ ನವರಂಗದ ಗೋಡೆಯ ಉತ್ತರ ದಕ್ಷಿಣದಲ್ಲಿವೆ. ಮೇಲ್ಛಾವಣಿಯ ಬೋದಿಗೆ ಮತ್ತು ಕೈಪಿಡಿ ಗೋಡೆಯಮೇಲೆ ಲತಾ, ಮಕರ, ಕೀರ್ತಿ ಮುಖ, ಯಕ್ಷರ ಸಾಲುಗಳಿವೆ. ಪೂರ್ವದಲ್ಲಿ ಷಡ್ಭುಜ ನೃತ್ಯಲಕ್ಷ್ಮಿ, ದಕ್ಷಿಣದಲ್ಲಿ ಷಡ್ಭುಜವಿಷ್ಣು, ಉತ್ತರದಲ್ಲಿ ಯೋಗಲಕ್ಷ್ಮೀ ವಿಗ್ರಹಗಳಿವೆ.

ನಾಲ್ಕು ಅಂತಸ್ತಿನ ಶಿಖರಕ್ಕೆ ಕಳಶವಿಲ್ಲ. ಇದರ ಮುಂಭಾಗದಲ್ಲಿದ್ದ ಸಳವಿಗ್ರಹ ಹೋಗಿದೆ. ನವರಂಗದ ಪಶ್ಚಿಮ ಗೋಡೆಯ ಗೂಡುಗಳಲ್ಲಿ ದಕ್ಷಿಣಕ್ಕೆ ಗಣೇಶ, ಉತ್ತರಕ್ಕೆ ಮಹಿಷಮರ್ದಿನಿ ವಿಗ್ರಹಗಳಿವೆ. ಆರು ಅಡಿ ಎತ್ತರದ ಭಗ್ನವಾದ ಕೇಶವ ವಿಗ್ರಹ ಬಹುಶಃ ಮೂಲವಿಗ್ರಹ ವಾಗಿದ್ದಿತು. ನವರಂಗದ ಕಂಬಗಳಲ್ಲಿ ಮಧ್ಯದ ನಾಲ್ಕು ಮತ್ತು ಪೂರ್ವದ ಎರಡು ಚೆನ್ನಾಗಿ ಅಲಂಕೃತವಾಗಿ ಮೇಲೆ ಸಿಂಹಗಳನ್ನು ಹೊಂದಿವೆ; ಮಿಕ್ಕೆರಡು ಗಾಯಕರನ್ನು ಹೊಂದಿವೆ. ಭುವನೇಶ್ವರಿಯಲ್ಲಿ ಅಷ್ಟಕೋಣ, ಯಕ್ಷರ ಸಾಲು ಮಧ್ಯದಿಂದ ಜೋಲಾಡುವ ಹೂವಿನ ಮೊಗ್ಗು ಇವೆ. ಇತರ ಅಂಕಣಗಳ ಮೇಲ್ಛಾವಣಿಗಳಲ್ಲಿ ರೇಖಾಚಿತ್ರಗಳೂ ಪದ್ಮಗಳೂ ಇವೆ.

ಸುಕನಾಸಿ ದ್ವಾರದಲ್ಲಿ ಜಾಲಂಧ್ರ, ದ್ವಾರಪಾಲಕರು, ಮೇಲೆ ಅಮರ ನಾರಾಯಣ, ಶಿಖರಗಳು, ಸಿಂಹಗಳು ಇವೆ. ಗರ್ಭಗುಡಿಯ ದ್ವಾರದ ಮೇಲೆ ಲಕ್ಷ್ಮೀನಾರಾಯಣ, ಪಕ್ಕದಲ್ಲಿ ದ್ವಾರಪಾಲಕರು ಇರುವರು. ಮೇಲ್ಛಾವಣಿಯಲ್ಲಿ ಪದ್ಮಗಳನ್ನು ಕೆತ್ತಿರುವರು. ಗರುಡಪೀಠದ ಮೇಲೆ ಹೊಯ್ಸಳ ಕಾಲದ ಸಣ್ಣ ಕೇಶವ ವಿಗ್ರಹವಿದೆ. ತೋರಣದಲ್ಲಿ ದಶಾವತಾರ ಗಳನ್ನು ಕೆತ್ತಿರುವರು. ಆದರೆ ಪೀಠದ ಮೇಲೆ ಹಾಕಿರುವ ಗುರುತಿನಿಂದ ಬಹುಶಃ ಈಗ ನವರಂಗದಲ್ಲಿರುವ ದೊಡ್ಡ ಕೇಶವ ವಿಗ್ರಹ ಮೊದಲು ಇಲ್ಲಿದ್ದಿತೆಂದು ಊಹಿಸಬಹುದು.

ಕೇಶವ ದೇವಾಲಯಕ್ಕೆ ಈಶಾನ್ಯದಲ್ಲಿ ಪಂಚಲಿಂಗಗಳ ಗುಡಿಗಳಿವೆ. ಇವುಗಳಲ್ಲಿ ಕಲ್ಲೇಶ್ವರ ಬಹುಶಃ ಪಲ್ಲವರ ಕಾಲದಿಂದ ಇದ್ದಿತು. ನವರಂಗದ ಜಾಲಂದ್ರಗಳಲ್ಲಿ ಸಿಂಹವಾಹನವುಳ್ಳ ಇಬ್ಬರು ಲತಾಪಟ್ಟಿಕೆ ನರ್ತಕ ಗಾಯಕರು ಇರುವರು. ನವರಂಗದ ದ್ವಾರದಲ್ಲಿ ಶೈವದ್ವಾರಪಾಲಕರು, ಯಕ್ಷರು, ಮೇಲೆ ಗಜಲಕ್ಷ್ಮಿ, ಯಕ್ಷರು, ಲಾಳದ ಆಕಾರದ ಕೀರ್ತಿಮುಖ ಇವೆ. ಮಧ್ಯದ ಕಂಬಗಳು ಚಾಳುಕ್ಯ ರೀತಿಯಲ್ಲಿವೆ. ಸುಕನಾಸಿಯ ಕಂಬಗಳು ಅಷ್ಟಕೋಣ ಮತ್ತು ಹದಿನಾರು ಮೂಲೆಗಳನ್ನು ಹೊಂದಿವೆ. ಮಧ್ಯದ ಭುವನೇಶ್ವರಿಯಲ್ಲಿ ಒಂಬತ್ತು ವಿಭಾಗಗಳಿವೆ. ಸಂದಿಗಳಲ್ಲಿ ನಾಲ್ವರು ಗಂಧರ್ವರು ಹೂಮಾಲೆಗಳನ್ನು ಹಿಡಿದಿರುವರು. ಎಂಟು ದಿಕ್ಪಾಲಕರ ವಿಗ್ರಹಗಳು ಬಹಳ ಸುಂದರವಾಗಿವೆ. ಮಧ್ಯದಲ್ಲಿರುವ ತಾಣ್ಡವೇಶ್ವರ ವಿಗ್ರಹ ಅಪೂರ್ವವಾಗಿದೆ. ಶಿವನ ಸುತ್ತಲೂ ಇರುವ ಗಾಯಕರಲ್ಲಿ ಮೂರು ಕಂಬಗಳ ಮೇಲೆ ಚರ್ಮವನ್ನು ಹೊದಿಸಿ ಮದ್ದಳೆ ಬಾರಿಸುತ್ತಿರುವುದು, ಸರ್ಪದ ಮೇಲೆ (?) ಕುಳಿತು ಕೊಳಲನ್ನೂದುತ್ತಿರುವುದು ಗಮನಾರ್ಹವಾಗಿದೆ. ಅಪಸ್ಮಾರನ ಬೆನ್ನಮೇಲೆ ನೃತ್ಯ ಮಾಡುತ್ತಿರುವ ಶಿವನು ಹಿಂದಿನ ಕೈಗಳಲ್ಲಿ ಎರಡು ತ್ರಿಶೂಲಗಳನ್ನು ಹಿಡಿದು ಅಭಯ ಗಜದಂಡ ಹಸ್ತ ಹೊಂದಿರುವನು. ಶಿವನ ಬಲಭಾಗದಲ್ಲಿ ಕೊಳಲನ್ನೂದುತ್ತಿರುವವನು ಸರ್ಪದ ಮೇಲೆ ಇರುವನು. ಬಹುಶಃ ಈ ಸರ್ಪ ಅಪಸ್ಮಾರನ ಬಾಯಿಂದ ಬಂದುದು. ಎಡಭಾಗದಲ್ಲಿ ಒಬ್ಬನು ಕುಳಿತುಕೊಂಡು ಮೃದಂಗವನ್ನು ಬಾರಿಸುತ್ತಿರುವನು. ಇವನ ಹಿಂದೆ ತಾಳಹಾಕುತ್ತಿರುವ ವಿಗ್ರಹವಿದೆ. ಗರ್ಭಗುಡಿಯಲ್ಲಿ ಯೋನಿಪೀಠದ ಮೇಲೆ ಚಪ್ಪಟೆ ತಲೆಯುಳ್ಳ ದೊಡ್ಡ ಲಿಂಗವಿದೆ. ಉತ್ತರ ಮತ್ತು ಪೂರ್ವದಲ್ಲಿರುವ ಗುಡಿಗಳು ಈಚಿನವಾಗಿವೆ. ನವರಂಗದಲ್ಲಿ ನಂದಿ, ಕೇಶವ, ಸೂರ್ಯ ವಿಗ್ರಹಗಳಿವೆ. ದಕ್ಷಿಣದ ಗುಡಿಯಲ್ಲಿ ಸುಂದರವಾದ ರಾಷ್ಟ್ರಕೂಟ ಚಾಳುಕ್ಯ ಕಾಲದ ಉಮಾಮಹೇಶ್ವರ ವಿಗ್ರಹವಿದೆ. ದ್ವಿಭುಜ ಶಿವನು ಲಲಿತಾಸನದಲ್ಲಿ ಕುಳಿತಿರುವನು. ಅವನ ಪಕ್ಕದಲ್ಲಿ ದೇವಿಯು ಕುಳಿತಿರುವಳು. ಮೇಲ್ಭಾಗದಲ್ಲಿ ಇಬ್ಬರು ಗಂಧರ್ವರು, ಪೀಠದಲ್ಲಿ ನಂದಿ ಇರುವರು. ಇದರ ಶಿಲ್ಪ ಅಜಂತ ರೀತಿಯನ್ನು ಹೋಲುವುದು. ಶಿವನು ಬಲಗೈಯಲ್ಲಿ ಉಪದೇಶಮುದ್ರೆಯನ್ನು ಹೊಂದಿ ಎಡಗೈಯಿಂದ ದೇವಿಯನ್ನಾಲಿಂಗಿಸುತ್ತಿರುವನು.

ಈ ಕಲ್ಲೇಶ್ವರ ದೇವಾಲಯದ ಬಲದಲ್ಲಿ ಎರಡು, ಎಡದಲ್ಲಿ ಎರಡು ಚಾಳುಕ್ಯ ರೀತಿಯ ಶಿವಾಲಯಗಳಿವೆ. ಇವುಗಳಲ್ಲಿ ಮೂರು ಮಾತ್ರ ಭದ್ರವಾಗಿವೆ. ಬಹುಶಃ ಈ ಐದು ದೇವಾಲಯಗಳನ್ನು ಉತ್ತರದಿಂದ ದಕ್ಷಿಣಕ್ಕೆ ನೂರು ಗಜ, ಪೂರ್ವದಿಂದ ಪಶ್ಚಿಮಕ್ಕೆ ಐವತ್ತು ಗಜ, ವಿಸ್ತಾರವಾದ ಕಣಶಿಲೆಯ ಜಗತಿಯ ಮೇಲೆ ಕಟ್ಟಿದ್ದರು. ಇದರ ಸುತ್ತಲೂ ಕೆರೆ ಇದ್ದಿತು. ಗಂಗರ ಕಾಲದಿಂದಲೂ ಈ ಸ್ಥಳ ಪ್ರಸಿದ್ಧವಾಗಿದ್ದಿತು.

೨೧. ಚಿಕ್ಕಹನಸೋಗೆ : ಕುಂಡಕುಂದಾನ್ವಯದ ದೇಶೀಗಣ ಪುಸ್ತಕಗಚ್ಛದ ಹನಸೋಗೆಬಳಿಯು ಗಂಗರ ಕಾಲದಿಂದ ಪ್ರಸಿದ್ಧವಾಗಿದ್ದಿತು. ಚೆಂಗಾಳ್ವರು ಹನ್ನೊಂದನೆಯ ಶತಮಾನದಿಂದ ಹದಿನಾರನೆಯ ಶತಾಬ್ದದವರೆಗೆ ಇಲ್ಲಿ ಆಳುತ್ತಿದ್ದರು. ಶ್ರೀರಾಮನಿಂದ ಪ್ರತಿಷ್ಠಿತವಾದುದೆಂದು ಹೇಳುವ ಆದಿನಾಥ ಬಸದಿಯನ್ನು ಹನ್ನೊಂದನೆಯ ಶತಮಾನದಲ್ಲಿ ಚೋಳರ ಅಧೀನದಲ್ಲಿದ್ದ ವೀರರಾಜೇಂದ್ರ ನನ್ನಿ ಚೆಂಗಾಳ್ವನು ರಾಜೇಂದ್ರಚೋಳ ಜಿನಾಲಯವನ್ನು ಕಟ್ಟಿಸಿದನು. ಚಾಳುಕ್ಯ ರೀತಿಯಲ್ಲಿರುವ ಈ ತ್ರಿಕೂಟಾಚಲವನ್ನು ಕಣಶಿಲೆಯಿಂದ ಕಟ್ಟಿದ್ದರೂ ವಿಗ್ರಹಗಳೂ ದ್ವಾರಗಳೂ ಬಳಪದ ಕಲ್ಲಿನವಾಗಿವೆ. ಪಶ್ಚಿಮದಲ್ಲಿ ಆದಿನಾಥ, ದಕ್ಷಿಣದಲ್ಲಿ ಶಾಂತಿನಾಥ, ಉತ್ತರದಲ್ಲಿ ಚಂದ್ರ(ನೇಮಿ)ನಾಥ ಗುಡಿಗಳಿವೆ. ದ್ವಾರಗಳು ಬೆಳಗಾಮಿಯ ತ್ರಿಪುರಾಂತಕ ದೇವಾಲಯದಲ್ಲಿದ್ದಂತೆ ಇವೆ. ಚಂದ್ರನಾಥ ಗುಡಿಯ ದ್ವಾರಬಂಧದಮೇಲೆ ಯಕ್ಷ ಸಿಂಹ, ಇತ್ಯಾದಿ ಐದು ಪಟ್ಟಿಕೆಗಳಿವೆ. ದ್ವಾರದ ಮೇಲೆ ಗಜಲಕ್ಷ್ಮಿ, ಕನ್ನಡ ಶಾಸನ, ಹಂಸಗಳು, ಕೀರ್ತಿಮುಖ ಇವೆ. ಚಾಮರಧಾರಿಣಿ ಯಕ್ಷ ಯಕ್ಷಿಣಿಯರ ಭಗ್ನವಿಗ್ರಹಗಳು ನವರಂಗದಲ್ಲಿವೆ. ನೇಮಿನಾಥ ವಿಗ್ರಹದ ಮೇಲೆ ಮುಕ್ಕೊಡೆ ಭಗ್ನವಾಗಿದೆ. ಆದಿನಾಥ ಶಾಂತಿನಾಥ ವಿಗ್ರಹಗಳಿಗೆ ಲತಾತೋರಣ ಸಿಂಹಪೀಠಗಳಿವೆ. ಹೊಯ್ಸಳರ ಕಾಲದಲ್ಲಿ ಇಲ್ಲಿ ವೈಷ್ಣವ ದೇವಾಲಯ ಇದ್ದಿತೆಂದು ಹತ್ತಿರ ಬಿದ್ದಿರುವ ದ್ವಾರಪಾಲಕ ವಿಗ್ರಹಗಳಿಂದ ಊಹಿಸಬಹುದು. ಕೆರೆಯ ಹತ್ತಿರ ಹನ್ನೆರಡನೆಯ ಶತಮಾನದ ವೀರಗಲ್ಲುಗಳಿವೆ.

೨೨. ಬಸವಾಪಟ್ಣ : ರುದ್ರಪಟ್ಣಕ್ಕೆ ಎದುರಾಗಿ ಕಾವೇರಿಯ

ಎಡದಡದಲ್ಲಿ ಹೊಯ್ಸಳ ರಾಮನಾಥ ಮೂರನೆಯ ನರಸಿಂಹರ ಕಾಲದ ಶೈವ ವೈಷ್ಣವ ದೇವಾಲಯಗಳಿವೆ. ರಾಮನಾಥನ ಶಾಸನ ಶಾಂತೀಶ್ವರ ದೇವಾಲಯದ ಹತ್ತಿರವಿದೆ. ಅದಕ್ಕೆ ಉತ್ತರದಲ್ಲಿ ಶಾಸನದಲ್ಲಿ ಉಕ್ತವಾದ ಆಂಜನೇಯ, ಹನುಮಂತೇಶ್ವರ (ಪ್ರಣತಾರ್ತಿಹರ) ದೇವಾಲಯವಿದೆ. ಇದರ ಹತ್ತಿರ ಕ್ರಿ. ಶ. ೧೨೮೧ ಮತ್ತು ೧೨೮೬ನೇ ವರ್ಷದ ಹೊಯ್ಸಳ ಶಾಸನಗಳಿವೆ. ಊರಿನ ಮಧ್ಯದಲ್ಲಿ ಹೊಯ್ಸಳ ಕಾಲದ ಲಕ್ಷ್ಮೀಕಾಂತ ದೇವಾಲಯದಲ್ಲಿ ಲಕ್ಷ್ಮೀನಾರಾಯಣನಿರುವನು. ಶಾಂತೀಶ್ವರ ದೇವಾಲಯಕ್ಕೆ ದಕ್ಷಿಣದಲ್ಲಿ ಷಡ್ಭಾವರಹಿತೇಶ್ವರ ಗುಡಿಯಲ್ಲಿ ಬಹುಶಃ ಗಂಗರ ಕಾಲದ ಅಂಡಾಕಾರ ಲಿಂಗವಿದೆ.

೨೩. ರಾಮನಾಥಪುರ : ನಕ್ಷತ್ರಾಕಾರದ ಗರ್ಭಗುಡಿ, ಸಣ್ಣ ಸುಕನಾಸಿ, ಒಂಬತ್ತು ಅಂಕಣದ ನವರಂಗವನ್ನು ಹೊಯ್ಸಳ ಕಾಲದಲ್ಲಿ ಬಳಪದ ಕಲ್ಲಿನಿಂದ ಮಾಡಿರುವರು. ಉತ್ತರ ದಕ್ಷಿಣ ಗೋಡೆಗಳಲ್ಲಿ ಸಣ್ಣ ಗೂಡುಗಳಿವೆ. ಹೊಯ್ಸಳ ಶಿಖರದ ಮುಂಭಾಗದಲ್ಲಿ ಸಳ–ವ್ಯಾಘ್ರ ವಿಗ್ರಹವಿದೆ. ನವರಂಗದಲ್ಲಿ ಹೊಯ್ಸಳ ಸ್ತಂಭಗಳೂ ಭುವನೇಶ್ವರಿಗಳಲ್ಲಿ ಕಮಲಗಳೂ ಇವೆ. ಸುಕನಾಸಿ ದ್ವಾರದಲ್ಲಿ ಜಾಲಂದ್ರ, ಮೇಲೆ ಉಮಾ ಮಹೇಶ್ವರ ಮತ್ತು ಗಣೇಶ ಮಕರಗಳು ಇವೆ. ಗರ್ಭಗೃಹದ ದ್ವಾರದ ಮೇಲೆ ತಾಂಡವೇಶ್ವರ, ಗರ್ಭಗುಡಿಯಲ್ಲಿ ಸಣ್ಣ ಲಿಂಗ ಇವೆ. ನವರಂಗದಲ್ಲಿ ಗಣಪತಿ, ಮಹಿಷಮರ್ದಿನಿ, ಭೈರವ, ಕೇಶವ, ಸೂರ್ಯ ವಿಗ್ರಹಗಳೂ ತಾಂಡವೇಶ್ವರ ಸದಾಶಿವ ಉತ್ಸವ ವಿಗ್ರಹಗಳೂ ಇವೆ. ದೇವಾಲಯದ ನೈರುತ್ಯದಲ್ಲಿ ಹೊಯ್ಸಳ ಕಾಲದ ವೇಣುಗೋಪಾಲ ವಿಗ್ರಹವಿದೆ. ವಿಜಯನಗರ ಮತ್ತು ಪಾಳೆಯಗಾರರ ಕಾಲದಲ್ಲಿ ಮುಂದಿನ ಮತ್ತು ಸುತ್ತುಮುತ್ತಿನ ಮಂಡಪಗಳನ್ನು ಸೇರಿಸಲಾಯಿತು. ಅಗಸ್ತ್ಯೇಶ್ವರ ದೇವಾಲಯದಿಂದ ಕಾವೇರಿ ಮಧ್ಯದಲ್ಲಿರುವ ಗೋಗರ್ಭಕ್ಕೆ ಹೋಗುವ ದಾರಿಯಲ್ಲಿ ಮೆಟ್ಟಲುಗಳ ಮೇಲೆ ಕನ್ನಡ ಶಾಸನಗಳಿವೆ.

ರಾಮನಾಥಪುರಕ್ಕೆ ಎದುರಾಗಿ ಕಾವೇರಿಯ ಬಲದಡದಲ್ಲಿ ಮಲ್ಲರಾಜಪಟ್ಟಣದ ಲಕ್ಷ್ಮೀಶ್ವರ ದೇವಾಲಯ ಬಹುಶಃ ಹೊಯ್ಸಳ ಸೋಮೇಶ್ವರನ ಕಾಲದ್ದಾಗಿದೆ. ನವರಂಗದಲ್ಲಿ ನಾಲ್ಕು ಹೊಯ್ಸಳ

ರೀತಿಯ ಕಂಬಗಳಿವೆ. ಹೊರಗೋಡೆಯ ಮೇಲ್ಛಾವಣಿಯ ಕೆಳಗೆ ಇರುವ ಕಮಾನುಗಳಲ್ಲಿ ಗೋವು, ವೇಣುಗೋಪಾಲ, ರಾಮಲಕ್ಷ್ಮಣ ಸೀತೆಯರಿಗೆ ಹನುಮಂತನು ಬಾಳೆಯ ಗೊಂಚಲನ್ನು ಕೊಡುತ್ತಿರುವುದು, ನೃತ್ಯ ಗಣಪತಿ, ವ್ಯಾಘ್ರಪಾದ, ಕಿರಾತಾರ್ಜುನೀಯ, ಹುಲಿ ಮತ್ತು ವಿಮಾನುಗಳ ಮೇಲೆ ಮನುಷ್ಯರು, ರಾಮನ ಸಹಾಯಕ್ಕಾಗಿ ಸೀತೆ ಲಕ್ಷ್ಮಣನನ್ನು ಕಳುಹಿಸುವುದು, ಲಿಂಗ, ಕಪಿ–ಸರ್ಪ, ಆನೆ, ನರ್ತಕ–ನರ್ತಕಿಯರು ಇತ್ಯಾದಿ ವಿಗ್ರಹಗಳಿವೆ.

೨೪. **ಅರಕೆಲ್ಗೂಡು :** ಲಕ್ಷ್ಮೀನರಸಿಂಹದೇವಾಲಯದ ಮೂಲ ಭಾಗ ಬಹುಶಃ ಗಂಗ ಕದಂಬರ ಕಾಲದ್ದಾಗಿದ್ದು ಹೊಯ್ಸಳರ ಕಾಲದಲ್ಲಿ ಮಾರ್ಪಾಟು ಹೊಂದಿತು. ಇಲ್ಲಿನ ಅಮೃತೇಶ್ವರ ದೇವಾಲಯವು ಸಮ ಕಾಲೀನವೆಂದು ಹೇಳಬಹುದು.

೨೫. **ಶಂಭುನಾಥಪುರ :** ಅರಕಲ್ಗೂಡಿಗೆ ಎರಡು ಮೈಲಿ ಉತ್ತರ ದಲ್ಲಿರುವ ಶಂಭುನಾಥಪುರದ ಶಂಭುನಾಥೇಶ್ವರ ಕ್ರಿ. ಶ. ೧೨೫೦ರಲ್ಲಿ ಹೊಯ್ಸಳರಿಂದ ದ್ರಾವಿಡ ರೀತಿಯಲ್ಲಿ ಕಟ್ಟಲಾಗಿದೆ. ಪಾಳೆಯಗಾರರ ಕಾಲದಲ್ಲಿ ಶಿಖರ, ಹೊರಗಿನ ನವರಂಗ ಮುಂತಾದುವನ್ನು ಸೇರಿಸಿರುವರು.

೨೬. **ಗೊರೂರು :** ಗೊರವೂರು, ಶತರುದ್ರೀಯಪುರ ಎಂದು ಪ್ರಸಿದ್ಧವಾದ ಗೊರೂರಿನಲ್ಲಿ ಕ್ರಿ. ಶ. ೧೧೬೮ರಲ್ಲಿ ವಿಜಯಾದಿತ್ಯ ಹೆಗ್ಗಡೆ ತ್ರಿಕೂಟೇಶ್ವರ ದೇವಾಲಯವನ್ನು ಕಟ್ಟಿಸಿ, ವಿಜಯಾದಿತ್ಯಪುರವೆಂದು ಹೆಸರಿಟ್ಟನು. ಜಗತಿಯ ಮೇಲೆ ಮೂರು ಗರ್ಭಗೃಹಗಳು, ಸುಕನಾಸಿ, ಒಂಬತ್ತಂಕಣಗಳ ನವರಂಗ, ಒಂದಂಕಣದ ಮುಖಮಂಡಪ ಇವೆ. ಗೋಡೆಗಳ ಮೇಲೆ ವಿಗ್ರಹಗಳಿಲ್ಲ. ಶಿಖರಗಳು ಮೆಟ್ಟಲು ಮೆಟ್ಟಲಾಗಿವೆ. ಇವುಗಳ ಮುಂಭಾಗದಲ್ಲಿದ್ದ ಸಳವಿಗ್ರಹಗಳು ಹೋಗಿವೆ. ನವರಂಗದ ಸ್ತಂಭಗಳು ಗುಂಡಾಗಿ ಹೊಯ್ಸಳ ರೀತಿಯಲ್ಲಿವೆ. ನವರಂಗದ ದ್ವಾರದಲ್ಲಿ ಶೈವದ್ವಾರಪಾಲಕರು, ಮೇಲೆ ಎರಡು ಮಕರಗಳ ಮಧ್ಯದಲ್ಲಿ ತಾಂಡವೇಶ್ವರ ಇವೆ. ನವರಂಗದಲ್ಲಿ ಗಣೇಶ, ಮಹಿಷಮರ್ದಿನಿ, ಸೂರ್ಯ, ಸಪ್ತಮಾತೃಕ ವಿಗ್ರಹಗಳಿವೆ. ಗರ್ಭಗೃಹದ ದ್ವಾರದ ಮೇಲೆ ಲಕ್ಷ್ಮೀವಿಗ್ರಹವಿದೆ. ಮೂರು ಗರ್ಭಗುಡಿಗಳ ಲಿಂಗಗಳು ವೃತ್ತಶಿರೋಭಾಗ ಹೊಂದಿವೆ.

ಇದಕ್ಕೆ ಈಶಾನ್ಯದಲ್ಲಿ ಹೊಯ್ಸಳಕಲ್ಲುಗಳಿಂದ ಕಟ್ಟಿರುವ ಏಕಕೂಟ ಕೈಲಾಸೇಶ್ವರ ಗುಡಿಯಲ್ಲಿ ಉಮಾಮಹೇಶ್ವರ, ಗಣೇಶ, ಪಾರ್ವತಿ, ಕುಮಾರ, ಕೇಶವ ವಿಗ್ರಹಗಳಿವೆ.

ವಾಸುದೇವ ದೇವಸ್ಥಾನವೂ ತ್ರಿಕೂಟಾಚಲವಾಗಿದೆ. ಆದರೆ ಗರ್ಭಗುಡಿ ಮಾತ್ರ ಬಳಪದಕಲ್ಲಿನಿಂದ ಕಟ್ಟಿರುವುದರಿಂದ ಹಳೆಯ ಭಾಗವಾಗಿರಬಹುದು. ಕ್ರಿ. ಶ. ೧೫೪೬ರಲ್ಲಿ ದೇವಾಲಯವನ್ನೆಲ್ಲ ಜೀರ್ಣೋದ್ಧಾರಮಾಡಿದಂತೆ ಕಂಡುಬರುವುದು. ಬಹುಶಃ ಮೂರು ಗರ್ಭಗುಡಿಗಳಲ್ಲಿ ವಾಸುದೇವ, ಯೋಗನರಸಿಂಹ, ವೇಣುಗೋಪಾಲ ವಿಗ್ರಹಗಳಿದ್ದವು. ನದಿಯ ಹತ್ತಿರ ಇರುವ ನರಸಿಂಹ ದೇವಾಲಯವನ್ನು ಕ್ರಿ. ಶ. ೧೫೪೬ರಲ್ಲಿ ಕಟ್ಟಿದಂತೆ ಒಂದು ಶಾಸನದಿಂದ ತಿಳಿದುಬರುತ್ತದೆ.

೨೭. ಮರಳೆ : ಚಿಕ್ಕಮಗಳೂರಿಗೆ ಆಗ್ನೇಯದಲ್ಲಿ ಒಂಬತ್ತು ಮೈಲಿ ದೂರದಲ್ಲಿ ಮರಳೆ ಗ್ರಾಮವಿದೆ. ಮೊಸಳೆಯಲ್ಲಿದ್ದಂತೆ ಇಲ್ಲಿ ಅವಳಿ ದೇವಾಲಯಗಳಿವೆ. ಕ್ರಿ. ಶ. ೧೧೩೦ರಲ್ಲಿ ರಾಯಣ್ಣ ದಂಡನಾಥನು ಕೇಶವ ದೇವಾಲಯಗಳನ್ನು ಕಟ್ಟಿಸಿ, ವಿಷ್ಣುವರ್ಧನನಿಂದ ಅವುಗಳಿಗೆ ದಾನಗಳನ್ನು ಪಡೆದನು. ಬಹುಶಃ ಸಿದ್ಧೇಶ್ವರ ಅಥವಾ ಕಲಿದೇವಗುಡಿ ಅದೇ ರಾಯಣ್ಣನಿಂದ ವಿಷ್ಣುವರ್ಧನನ ಮಗನಾದ ನರಸಿಂಹನ ಕಾಲದಲ್ಲಿ ಪೂರ್ತಿಮಾಡಲ್ಪಟ್ಟಿತು. ಕೇಶವ ದೇವಾಲಯವು ಸ್ವಲ್ಪ ದೊಡ್ಡದಾಗಿದೆ. ಇದರ ಜಗತಿಗೆ ನಾಲ್ಕು ಪಟ್ಟಿಗಳಿವೆ. ಗರ್ಭಗೃಹ ನವರಂಗಗಳು ಚತುರಸ್ರಾಕಾರವಾಗಿವೆ. ಗೋಡೆಗಳ ಮೇಲ್ಭಾಗಗಳಲ್ಲಿ ಶಿಖರಗಳು, ಉತ್ತರ ದಕ್ಷಿಣದ ಗೂಡುಗಳಲ್ಲಿ ವಿಷ್ಣು (ಗದಾ ಚಕ್ರ ಶಂಖ ಪದ್ಮ) ಮತ್ತು ಕೇಶವ ವಿಗ್ರಹಗಳಿವೆ. ಗರ್ಭಗೃಹದ ಗೋಡೆಯ ಮೇಲೆ ಮೂರು ಗೂಡುಗಳಿವೆ. ದಕ್ಷಿಣದ ಗೂಡು ಸಿಂಹದ ಸಾಲನ್ನೂ ಮಣಿಕೆತ್ತನೆಯನ್ನೂ ಹೊಂದಿದೆ. ಮೇಲಿನ ಶಿಖರ ಈಚಿನ ಕಾಲದ್ದಾಗಿದೆ. ಮುಖಮಂಡಪದ ದ್ವಾರದಲ್ಲಿ ಕಮಲಗಳನ್ನು ಹಿಡಿದಿರುವ ಎರಡು ಅಲಂಕೃತವಾದ ಆನೆಗಳಿವೆ. ಎರಡು ಸ್ತಂಭಗಳು ೩೨ ಕೋಣಗಳುಳ್ಳ ಸುಂದರವಾದ ಹೊಯ್ಸಳ ರೀತಿಯಲ್ಲಿವೆ. ಮಂಡಪದಲ್ಲಿ ಕಲ್ಲಿನ ಜಗತಿಗಳಿವೆ. ಮೇಲ್ಛಾವಣಿಯ ಮಧ್ಯದ ಭುವನೇಶ್ವರಿಯಲ್ಲಿ ಲಕ್ಷ್ಮೀನಾರಾಯಣ, ದಿಕ್ಪಾಲಕರು, ಕೆಳಗಣ

ತೊಲೆಗಳ ಮೇಲೆ ವಿಷ್ಣುವಿನ ಚತುರ್ವಿಂಶತಿ ರೂಪಗಳು, ನರ್ತಕರು ಇರುವರು. ನವರಂಗದ ದ್ವಾರದ ಮೇಲೆ ಗಜಗಳ ಮಧ್ಯದಲ್ಲಿ ಲಕ್ಷ್ಮೀ ನಾರಾಯಣ, ಕುಳಿತಿರುವ ಎರಡು ವಿಷ್ಣುಮೂರ್ತಿಗಳೂ ಇವೆ. ನವರಂಗದ ನಾಲ್ಕು ಕಂಬಗಳ ಮೇಲೆ ಯಕ್ಷರು ಮದನಿಕೆ ವಿಗ್ರಹಗಳು ಇದ್ದವು. ಹದಿನಾರು ಮದನಿಕೆ ವಿಗ್ರಹಗಳಲ್ಲಿ ಐದು ಮಾತ್ರ ಕಂಡುಬರುತ್ತವೆ. ಬಹುಶಃ ಬೇಲೂರಿನ ಶಿಲ್ಪಿಗಳೇ ಇವುಗಳನ್ನೂ ಮಾಡಿರಬಹುದು. ಆಗ್ನೇಯದ ಕಂಬದಮೇಲೆ ಗಿಳಿಯನ್ನು ಹಿಡಿದ ಯುವತಿ, ಕೊಳಲನ್ನು ಬಾರಿಸುತ್ತ ನರ್ತಿಸುತ್ತಿರುವ ಹುಡುಗ; ವಾಯವ್ಯ ಕಂಬದ ಮೇಲೆ ತ್ರಿಭಂಗದಲ್ಲಿ ನಿಂತು ಅಭಿನಯ ಮಾಡುತ್ತಿರುವ ಯುವತಿ; ಆಗ್ನೇಯ ಕಂಬದಮೇಲೆ ನೃತ್ಯಮಾಡುತ್ತಿರುವ ಇಬ್ಬರು ಯುವತಿಯರು ಇರುವರು. ರಂಗಮಂಡಪದ ಭುವನೇಶ್ವರಿಯಲ್ಲಿ ಲಕ್ಷ್ಮೀನಾರಾಯಣ ಅಷ್ಟ ದಿಕ್ಪಾಲಕರು ನರ್ತಕಿಯರು ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳೂ ಇವೆ. ಸುಕನಾಸಿ ದ್ವಾರದ ಮೇಲೆ ಎರಡು ಮಕರಗಳ ಮಧ್ಯದಲ್ಲಿ ಲಕ್ಷ್ಮೀ ನಾರಾಯಣ, ಇಬ್ಬರು ದೇವಿಯರೂ ಇರುವರು. ಇಬ್ಬರು ದ್ವಾರಪಾಲಕರು ಪಕ್ಕದಲ್ಲಿರುವರು. ಇದರ ಮೇಲ್ಛಾವಣಿಯಲ್ಲಿ ಚೆನ್ನಾಗಿರುವ ಲಕ್ಷ್ಮೀ ನಾರಾಯಣ ವಿಗ್ರಹವಿದೆ. ಗರ್ಭಗೃಹದ ದ್ವಾರದ ಮೇಲೆ ನಾರಾಯಣ ಕೇಶವರ ಮಧ್ಯದಲ್ಲಿ ಉಗ್ರನರಸಿಂಹ ಗರುಡ ಪ್ರಹ್ಲಾದರಿರುವರು. ಗರ್ಭ ಗುಡಿಯ ಗರುಡಪೀಠದ ಮೇಲೆ ರೆಕ್ಕೆಗಳನ್ನು ತೆರೆದ ಅಂಜಲಿಹಸ್ತನಾದ ಗರುಡವಿಗ್ರಹ ತೋರಣದ ಕೆಳಗೆ ಇದೆ. ಕೇಶವ ವಿಗ್ರಹ ಸುಮಾರು ಆರು ಅಡಿ ಎತ್ತರವಿದೆ. ಮುಖವು ಸ್ವಲ್ಪ ಭಂಗವಾಗಿದ್ದರೂ ಬೇಲೂರು ವಿಜಯನಾರಾಯಣನಂತೆ ಇದೆ. ಪಾಶ ಕಳಶ ಹಿಡಿದ ಭೂದೇವಿ, ಕಳಶ ಪದ್ಮ ಹಿಡಿದ ಶ್ರೀದೇವಿಯರು ಪಕ್ಕದಲ್ಲಿರುವರು. ತೋರಣದಲ್ಲಿ ದಶಾವತಾರಗಳಿವೆ. ಮತ್ಸ್ಯ, ಕೂರ್ಮಗಳು ನೈಜರೂಪದಲ್ಲಿವೆ. ಬುದ್ಧನು ಯೋಗಾಸನದಲ್ಲಿರುವನು. ಕಲ್ಕಿ ಕತ್ತಿ ಹಿಡಿದು ಅಶ್ವಾರೂಢನಾಗಿರುವನು.

ಸಿದ್ಧೇಶ್ವರ ದೇವಾಲಯವು ಕೇಶವ ದೇವಾಲಯದಂತೆಯೇ ತಲ ವಿನ್ಯಾಸಹೊಂದಿದೆ. ಗೋಡೆಗಳ ಮೇಲೆ ಹೆಚ್ಚು ವಿಗ್ರಹಗಳಿವೆ. ಪೂರ್ವದಲ್ಲಿ ವಿದ್ಯಾಗಣಪತಿ, ವಿಜಯನಗರ ಕಾಲದ ಚತುರ್ಭುಜ ರಾಮ; ದಕ್ಷಿಣದಲ್ಲಿ

ಮಹಿಷಮರ್ದಿನಿ, ಸರಸ್ವತಿ, ಕ್ರಿ. ಶ. ೧೧೧೦ನೆಯ ವೀರಗಲ್ಲು, ವೀರಭದ್ರ, ಬ್ರಹ್ಮ, ರತಿ-ಮನ್ಮಥ, ಎಂಟು ಕುದುರೆಗಳ ಸೂರ್ಯ, ಭೈರವ-ಭೈರವೀ, ಪಶ್ಚಿಮ ಗೋಡೆಯಲ್ಲಿ ಷಣ್ಮುಖ, ತಾಂಡವೇಶ್ವರ, ಅಕ್ಷಮಾಲ ತ್ರಿಶೂಲ ದರ್ಪಣ ಫಲ ಹಿಡಿದ ಪಾರ್ವತಿ; ಉತ್ತರ ಗೋಡೆಯಲ್ಲಿ ಬ್ರಹ್ಮ, ನರಸಿಂಹ, ಧರಣೀವರಾಹ, ಪಾರ್ವತೀ, ವಾಮನ-ಬಲಿ, ಗಜಾಸುರ ಸಂಹಾರ, ಗಜೇಂದ್ರಮೋಕ್ಷ, ವಿಷ್ಣು, ಪದ್ಮ ಶಂಖ ಚಕ್ರ ಗದೆ ಹಿಡಿದ ಕೇಶವ; ಪೂರ್ವ ಗೋಡೆಯ ಎಡಭಾಗದಲ್ಲಿ ಭೈರವ-ಭೈರವೀ ವಿಗ್ರಹ ಗಳಿವೆ. ಶಿಖರವು ಈಚಿನ ಕಾಲದ್ದಾಗಿದೆ. ಮುಖಮಂಡಪದ ದ್ವಾರದ ಮೇಲೆ ಗಣೇಶ ಸರಸ್ವತಿಯರ ಮಧ್ಯದಲ್ಲಿ ಉಮಾಮಹೇಶ್ವರ ವಿಗ್ರಹವು, ಮೇಲ್ಛಾವಣಿಯಲ್ಲಿ ಅಷ್ಟದಿಕ್ಪಾಲಕರು, ತಾಂಡವೇಶ್ವರ ಇವೆ. ನವರಂಗದ ಮೇಲ್ಛಾವಣಿಗಳಲ್ಲಿ ದಿಕ್ಪಾಲಕರು ಇರುವರು. ತೊಲೆಗಳ ಮೇಲೆ ಪೂರ್ವ ದಿಂದ ನರ್ತಕಿಯರು, ಕಪಿ-ಯುವತಿ, ದಕ್ಷಿಣದಲ್ಲಿ ಕ್ಷೀರಸಾಗರಮಥನ, ಬಹುಶಃ ಹೊಯ್ಸಳ ನರಸಿಂಹ ಮತ್ತು ಅವನ ರಾಣಿಯ ದರ್ಬಾರು, ಮಲ್ಲಯುದ್ಧ, ಡೊಂಬರು; ಪಶ್ಚಿಮದಲ್ಲಿ ಇಬ್ಬರು ನರ್ತಕಿಯರು; ಉತ್ತರದಲ್ಲಿ ಉಮಾಮಹೇಶ್ವರ, ನೃತ್ಯಮಾಡುತ್ತಿರುವ ಯಕ್ಷ, ಕಿರಾತ-ಅರ್ಜುನ ವಿಗ್ರಹಗಳಿವೆ. ಈ ಸಾಲಿನ ಮೇಲೆ ನರ್ತಕರು ಶಿವ, ಗಣೇಶ, ದೇವೀ ವಿಗ್ರಹಗಳಿವೆ. ಅದರಮೇಲೆ ಹನ್ನೆರಡು ದೇವಿಯರಿರುವರು. ಭುವನೇಶ್ವರಿ ಯಲ್ಲಿ ಎಂಟು ದಿಕ್ಪಾಲಕರು, ಮಧ್ಯದಲ್ಲಿ ತಾಂಡವೇಶ್ವರ ಇರುವರು. ಸುಕನಾಸಿಯಲ್ಲಿ ವಿದ್ಯಾಗಣಪತಿ, ಇತ್ಯಾದಿ ವಿಗ್ರಹಗಳು, ಮೇಲ್ಛಾವಣಿ ಯಲ್ಲಿ ಪದ್ಮಗಳ ಮಧ್ಯದಲ್ಲಿ ತಾಂಡವೇಶ್ವರ ಇರುವರು. ಗರ್ಭಗೃಹದ ದ್ವಾರದ ಮೇಲೆ ಗಜಲಕ್ಷ್ಮಿ ಇದೆ. ಸಿದ್ಧೇಶ್ವರ (ಕಲಿದೇವ) ಲಿಂಗವು ಪುರಾತನವಾದುದು.

ಗ್ರಾಮದ ಉತ್ತರದಲ್ಲಿ ಕಮಠೇಶ್ವರ ಭೈರವ ದೇವಾಲಯುಗಳಿವೆ. ವೀರಕಲ್ಲುಗಳು, ಮಾಸ್ತಿ ಕಲ್ಲುಗಳು (ಮೂರುಕೈಮಾಸ್ತಿ), ಉಯ್ಯಾಲೆ ಕಂಬ ಗಳು, ಕಾಳಮ್ಮದೇವಾಲಯ ಬಹುಶಃ ಪಾಳೆಯಗಾರರ ಕಾಲದ್ದಾಗಿವೆ.

೨೮. **ಖಾಂಡ್ಯ:** ಭದ್ರಾ ನದಿಯ ಬಲದಡದಲ್ಲಿ ಬಾಳೆಹೊನ್ನೂರಿಗೆ ಆರು ಮೈಲಿ ಪೂರ್ವದಲ್ಲಿರುವ ಖಾಂಡ್ಯದಲ್ಲಿ ಇಮ್ಮಡಿ ವೀರಬಲ್ಲಾಳನ

ಕಾಲವಲ್ಲಿ ಮಾರ್ಕಂಡೇಶ್ವರ, ಜನಾರ್ದನ ಮತ್ತು ಬೀರೇದೇವರುಗಳ ಗುಡಿಗಳಿದ್ದವು. ಮಾರ್ಕಂಡೇಶ್ವರ ದೇವಾಲಯದ ಗರ್ಭಗುಡಿಯಲ್ಲಿರುವ ಜೀರ್ಣವಾದ ಲಿಂಗ ಸುಕನಾಸಿ ಪ್ರದಕ್ಷಿಣೆ ನವರಂಗಗಳು ಹಳೆಯ ಭಾಗಗಳು. ಮುಂದಿನ ಮೆಟ್ಟಲುಗಳ ಹತ್ತಿರ ಇರುವ ಎರಡು ಆನೆಗಳು ಚಾಳುಕ್ಯ ರೀತಿಯಲ್ಲಿವೆ. ನವರಂಗದ ಕಂಬಗಳು ಕಣಶಿಲೆಯಿಂದ ಮಾಡಿದ್ದಾಗಿವೆ. ಬಹುಶಃ ಕೆಳದಿ ಪಾಳೆಯಗಾರರ ಕಾಲದಲ್ಲಿ ಇವು ಸೇರಿಸಲ್ಪಟ್ಟವು. ಜನಾರ್ದನ ದೇವಾಲಯದಲ್ಲಿರುವ ವಿಗ್ರಹ ಭಗ್ನವಾಗಿದೆ. ಇದು ಜನಾರ್ದನನಲ್ಲದೆ, ಬಿನ್ನಮಂಗಲದ ಪಶ್ಚಿಮ ಗೋಡೆಯ ಮೇಲೆ ಮತ್ತು ತಳಕಾಡಿನಲ್ಲಿರುವಂತೆ ಹಳೇರೀತಿಯ ವೆಂಕಟೇಶ ವಿಗ್ರಹವಾಗಿದೆ. ದೀರ್ಘವಾದ ಕಿರೀಟ, ಹಿಂದೆ ಜಡೆಗಳು, ಹಿಂದಿನ ಬಲಗೈಯಲ್ಲಿ ಪ್ರಯೋಗ ಚಕ್ರ, ಎಡಗೈಯ ಎರಡು ಬೆರಳುಗಳಲ್ಲಿ ಶಂಖ, ಎಡ ಮುಂದಿನ ಕೈ ಕಟಿ ಹಸ್ತ, ಬಲ ಮುಂದಿನ ಕೈ ಬಹುಃ ದಾನಮುದ್ರೆ ಹೊಂದಿದೆ. ಆದರೆ ಫಾಲಾಕ್ಷವಿಲ್ಲ. ಬಹುಶಃ ಚೋಳರ ಕಾಲದ ವಿಗ್ರಹ ಇರಬಹುದು. ಇದರ ಪಾದಗಳ ಹತ್ತಿರ ಕಲ್ಲಿನ ಪೆಟ್ಟಿಗೆ ಇದೆ. ಅಗಸ್ತ್ಯನು ಭದ್ರಾ ನದಿಯಲ್ಲಿ ಸ್ನಾನಮಾಡುತ್ತಿದ್ದಾಗ ಆವನ ಪೆಟ್ಟಿಗೆಯಲ್ಲಿದ್ದ ಸಾಲಗ್ರಾಮದಿಂದ "ಜನಾರ್ದನ" ಉದ್ಭವಿಸಿತೆಂದು ಹೇಳಲಾಗಿದೆ. ನದಿಯ ಹತ್ತಿರ ಗರುಡ ಪೀಠದ ಮೇಲೆ ನಾಲ್ಕು ಅಡಿ ಎತ್ತರದ ಯೋಗನರಸಿಂಹ ವಿಗ್ರಹ ಬಹುಶಃ ಹೊಯ್ಸಳರ ಕಾಲದ್ದಾಗಿದೆ. ಇಲ್ಲಿರುವ ಎರಡು ಶಾಸನಗಳಲ್ಲಿ ಕ್ರಿ. ಶ. ೧೧೮೦, ೧೧೮೬ರಲ್ಲಿ ವೀರಬಲ್ಲಾಳನು ಮಾರ್ಕಂಡೇಶ್ವರನಿಗೆ ದಾನ ಮಾಡಿದಂತೆ ಹೇಳಿದೆ.

೨೯. ಹುಮ್ಚ : ತೀರ್ಥಹಳ್ಳಿಗೆ ೨೨ ಮೈಲಿ ಉತ್ತರದಲ್ಲಿರುವ ಹುಮ್ಚ ಪೊಂಬುಚ್ಚಪುರ, ಕನಕಪುರ ಎಂದು ಸುಮಾರು ಎಂಟನೆಯ ಶತಮಾನದಿಂದ ಪ್ರಸಿದ್ಧವಾಗಿದೆ. ಇದು ಸಾಂತರರ ರಾಜಧಾನಿಯಾಗಿದ್ದಿತು. ಮಠದ ಆವರಣದಲ್ಲಿರುವ ಪಾರ್ಶ್ವನಾಥ ಪದ್ಮಾವತೀ ಗುಡಿಗಳನ್ನು ಜಿನದತ್ತರಾಯನು ಸ್ಥಾಪಿಸಿದನೆಂದು ಹೇಳಲಾಗಿದೆ. ಪದ್ಮಾವತಿ ಚತುರ್ಭುಜಗಳಲ್ಲಿ ಅಭಯ ಅಂಕುಶ ಪಾಶ ಪುಸ್ತಕ ಹಿಡಿದಿರುವಳು. ಇವೆರಡಲ್ಲದೆ ಗ್ರಾಮದಲ್ಲಿ ಮೂರು ಬಸದಿಗಳಿವೆ. ಇವುಗಳಲ್ಲಿ ಪಂಚಕೂಟ ಬಸದಿ

ಮುಖ್ಯವಾದುದು. ಒಂದೇ ಸಾಲಿನಲ್ಲಿ ಐದು ಗರ್ಭಗುಡಿಗಳು, ಒಂದೇ ನವರಂಗ ಮುಖಮಂಡಪಗಳಿವೆ. ಇದರ ಎದುರಿಗಿರುವ ಮಾನಸ್ತಂಭ ಭವ್ಯವಾಗಿದೆ. ಮೂರು ಅಂತಸ್ತಿನ ಎತ್ತರವಾದ ಜಗತಿಯ ಮೇಲೆ ಸ್ತಂಭವಿದೆ. ಜಗತಿಯ ಕೆಳಭಾಗದಲ್ಲಿ ಎಂಟು ದಿಗ್ಗಜಗಳಿವೆ. ಇವುಗಳ ಮೇಲೆ ಅಷ್ಟದಿಕ್ಪಾಲಕರಿರುವರು. ಸ್ತಂಭವು ಚತುರಸ್ರ, ಅಷ್ಟಕೋಣ, ಅದರ ಮೇಲೆ ವೃತ್ತಾಕಾರವಾಗಿದೆ. ಅದರ ಮೇಲಿರುವ ಗೋಪುರದಲ್ಲಿ ನಾಲ್ಕು ದಿಕ್ಕುಗಳಿಗೂ ಅಭಿಮುಖವಾಗಿ ನಾಲ್ಕು ಕುಳಿತಿರುವ ವಿಗ್ರಹಗಳಿವೆ. ಬಸದಿಯ ದಕ್ಷಿಣದಲ್ಲಿರುವ ಗುಡಿಯಲ್ಲಿ ಬಾಹುಬಲಿ, ಉತ್ತರ ಗುಡಿಯಲ್ಲಿ ಪಾರ್ಶ್ವನಾಥ ವಿಗ್ರಹಗಳು ಬಹುಶಃ ಕ್ರಿ. ಶ. ೧೦೭೭ಕ್ಕೆ ಮುಂಚೆಯೇ ನಿರ್ಮಿತವಾಗಿದ್ದವು. ಕ್ರಿ. ಶ. ೯೫೦ರ ಶಾಸನದಲ್ಲಿ ಅದಕ್ಕೂ ಹಿಂದೆ ಕ್ರಿ. ಶ. ೮೭೮ರಲ್ಲಿ ನಿರ್ಮಿತವಾದ ಪಾಳಿಯಕ್ಕ ಬಸದಿಯ ಹೆಸರಿದೆ. ಪಂಚಕೂಟ ಬಸದಿಯನ್ನು ಕ್ರಿ. ಶ. ೧೦೭೭ರಲ್ಲಿ ಚಟ್ಟಲದೇವಿಯು ಉರ್ವೀತಿಲಕ ಎಂಬುದಾಗಿ ನಿರ್ಮಿಸಿದಳು. ತೋರಣ ಮತ್ತು ಮಾನ ಸ್ತಂಭ ಅದೇ ಕಾಲದ್ದಾಗಿವೆ. ಈ ಬಸದಿಯ ಉತ್ತರ ಪಟ್ಟಸಾಲೆಯನ್ನು ೧೧೪೭ರಲ್ಲಿ ಮಾಡಲಾಯಿತು. ಈಗ ಪಂಚಕೂಟ ಬಸದಿಯಲ್ಲಿ ಚಂದ್ರ (ನೇಮಿ)ನಾಥ, ಶಾಂತಿನಾಥ, ಪಾರ್ಶ್ವನಾಥ ವಿಗ್ರಹಗಳು ಮಾತ್ರ ಇವೆ. ನವರಂಗದಲ್ಲಿ ಜ್ವಾಲಾಮಾಲಿನಿ, ಯಕ್ಷ ಯಕ್ಷಿಣಿ ವಿಗ್ರಹಗಳಿವೆ. ಮಠದ ತೋಟದಲ್ಲಿ ಹತ್ತನೆಯ ಶತಮಾನದ ಚಂದ್ರಪ್ರಭ ಬಸದಿ ಇದೆ. ಹತ್ತಿರ ಇರುವ ಗುಡ್ಡದ ಮೇಲೆ ಇರುವ ಬಾಹುಬಲಿ ಬಸದಿಯನ್ನು ಕ್ರಿ. ಶ. ೮೯೮ರಲ್ಲಿ ವಿಕ್ರಮಾದಿತ್ಯ ಸಾಂತರನು ಕಟ್ಟಿಸಿದನು.

ಪಾರ್ಶ್ವನಾಥ ಬಸದಿಯ ಅಂಗಳದಲ್ಲಿ ಪದ್ಮಾವತೀ ಬಸದಿ ಇದೆ. ಪಾರ್ಶ್ವನಾಥ ಬಸದಿಯ ಮುಂದಿರುವ ನಾಲ್ಕು ಸ್ತಂಭಗಳ ಮಂಡಪ ಬಹಳ ಪುರಾತನವಾದುದು. ಅಂಗಳದಲ್ಲಿ ದ್ವಾರಪಾಲಕ, ಸಿಂಹ, ಇತ್ಯಾದಿ ಹಳೆಯ ವಿಗ್ರಹಗಳು ಬಿದ್ದಿವೆ. ಪಂಚಕೂಟ ಬಸದಿಯ ಮುಖಮಂಡಪದ ಕಂಬಗಳು, ಯಕ್ಷಿ, ಪದ್ಮಾವತಿ, ಕೂಷ್ಮಾಂಡಿನಿ ವಿಗ್ರಹಗಳು ಹೊಯ್ಸಳ ಚಾಳುಕ್ಯರ ಕಾಲದ್ದಾಗಿವೆ. ಈಚೆಗೆ ಕಣಶಿಲೆಯಿಂದ ದೇವಾಲಯವನ್ನೆಲ್ಲ ಜೀರ್ಣೋದ್ಧಾರ ಮಾಡಿರುವರು.

೩೦. **ಅಂಗಡಿ :** ಮೂಡಿಗೆರೆ ತಾಲ್ಲೂಕಿನಲ್ಲಿ ಇರುವ ಅಂಗಡಿ ಹೊಯ್ಸಳರ ಜನ್ಮಸ್ಥಳವಾದ ಸೊಸೆವೂರು (ಶಶಕಪುರ) ಎಂದೂ, ಅಲ್ಲಿರುವ ವಾಸಂತಿಕಾದೇವೀ ಪ್ರಸಾದದಿಂದ ಹೊಯ್ಸಳರು ರಾಜ್ಯಪಡೆದರೆಂದೂ ಶಾಸನಗಳಿಂದ ತಿಳಿದುಬರುತ್ತದೆ. ಈಗಿರುವ ವಾಸಂತಿಕಾ ದೇವಾಲಯ ಈಚೆಗೆ ಮಂಗಳೂರು ಹೆಂಚು ಹಾಕಿ ಕಟ್ಟಿದುದಾಗಿದೆ. ಇದರಲ್ಲಿ ಗಾರೆಯಿಂದ ಮಾಡಿದ ಏಳು ದೇವಿಯರ ದೊಡ್ಡ ವಿಗ್ರಹಗಳಿವೆ. ಒಂದಕ್ಕೆ ಮೂರು ತಲೆ (ಬ್ರಾಹ್ಮೀ ?), ಮತ್ತೊಂದಕ್ಕೆ ನಾಲ್ಕು ಕೈಗಳು (ಮಾಹೇಶ್ವರಿ) ಇವೆ. ಕುಮಾರಿಯ ಪೀಠದಲ್ಲಿ ಷಣ್ಮುಖನಿರುವನು. ವೈಷ್ಣವಿಯು ಹಿಂದಿನ ಕೈಗಳಲ್ಲಿ ಶಂಖ ಚಕ್ರ ಏಳು ಹೆಡೆ ಸರ್ಪದ ಛತ್ರವನ್ನು ಹೊಂದಿರುವಳು. ಇದನ್ನೇ ವಾಸಂತಿಕಾ ಎಂದು ಕರೆಯುವರು. ಪ್ರತಿ ದೇವತೆಯ ಪೀಠದಲ್ಲಿ ರಾಕ್ಷಸನ ತಲೆ ಇದೆ. ಮತ್ತು ದೇವಿಯರು ತೊಡೆಯಮೇಲೆ ಸರ್ಪವನ್ನು ಹೊಂದಿರುವರು. ಸ್ತನಬಂಧ, ಕುಪ್ಪಸ, ಕುಂಡಲ, ಕಿರೀಟಗಳನ್ನು ಪಡೆದಿರುವರು. ಇಂತಹ ದೊಡ್ಡ ಗಾರೆಯ ಸಪ್ತಮಾತೃಕೆಯರು ಕೋಲಾರದ ಕೋಲಾರಮ್ಮ ಮತ್ತು ಬೇಲೂರಿನ ಸೆಟ್ಟಿಗೆರೆ ದೇವಾಲಯ ಗಳಲ್ಲಿ ಬಹುಶಃ ಚೋಳರ ಕಾಲದಿಂದ ಇರುವರು.

ಈಚೆಗೆ ಸಿಕ್ಕಿರುವ ವಾಸಂತಿಕಾ ಎಂದು ಹೇಳುವ ವಿಗ್ರಹವು ಚಾಮುಂಡಿಯಂತಿದೆ.

ಅಂಗಡಿಯಲ್ಲಿ ಮಕರ ಜಿನಾಲಯ ಮಾಣಿಕ ಪೊಯ್ಸಳಾಚಾರಿ ಕಟ್ಟಿದ ಒಂದು ಜಿನಾಲಯ ಕ್ರಿ. ಶ. ೧೦೫೪ಕ್ಕೆ ಮುಂಚೆ ಇದ್ದವೆಂದು ಶಾಸನಗಳಿಂದ ತಿಳಿದುಬರುತ್ತದೆ (ಮೂಡಿಗೆರೆ ೯, ೧೩). ನೇಮಿನಾಥ ಬಸದಿಯಲ್ಲಿ ಇಬ್ಬರು ಚಾಮರಧಾರಿಣಿಯರು, ಅಷ್ಟದಿಕ್ಪಾಲಕರು, ಯಕ್ಷ ಯಕ್ಷಿಣಿಯರು ಹೊಯ್ಸಳ ವಿಗ್ರಹಗಳಾಗಿವೆ. ಯಕ್ಷಿಣಿ ಬಲಕೈಯಲ್ಲಿ ಹೂಗಳನ್ನು ಹಿಡಿದು ಎಡಕೈಯನ್ನು ಬಾಲಕನ ತಲೆಯಮೇಲೆ ಇಟ್ಟಿರು ವಳು. ಗರ್ಭಗುಡಿಯಲ್ಲಿ ಮೂರು ಸ್ಥಾನಕ ವಿಗ್ರಹಗಳಿವೆ. ಶಾಂತಿನಾಥ ಬಸದಿಯಲ್ಲಿ ಕುಳಿತಿರುವ ದೊಡ್ಡ ವಿಗ್ರಹವಿದೆ. ಇಲ್ಲಿದ್ದ ಕೇಶವ, ಶಿವ, ವೀರಭದ್ರ ದೇವಾಲಯಗಳು ನಾಶವಾಗಿವೆ. ವಿಷ್ಣು ವಿಗ್ರಹ ಮಾತ್ರ ಉಳಿದುಕೊಂಡಿದೆ.

೩೧. **ಹಾಳೆಬೇಲೂರು :** ಸಕಲೇಶಪುರಕ್ಕೆ ನಾಲ್ಕು ಮೈಲಿ ಆಗ್ನೇಯದಲ್ಲಿ "ಹಾರುವ ಬೆಲುಹೂರು" ಎಂದು ಶಾಸನದಲ್ಲಿ ಕರೆದಿರುವ ಹಾಳೆಬೇಲೂರಿನಲ್ಲಿ ಚಾಳುಕ್ಯ–ಹೊಯ್ಸಳರ ಕಾಲದ ಕೇಶವದೇವಾಲಯ ವಿದ್ದಿತು (ಮಂಜರಾಬಾದು ೧೮). ಗರ್ಭಗೃಹದ ದ್ವಾರ, ಗದಾ ಶಂಖಚಕ್ರ ಪದ್ಮಹಿಡಿದಿರುವ ವಾಸುದೇವ ವಿಗ್ರಹ ಹೊಯ್ಸಳ ಕಾಲದ್ದಾಗಿವೆ. ಶಾಸನದ ಕಲ್ಲಿನಮೇಲೆ ಕೇಶವ, ಎರಡು ಕೈಯುಳ್ಳ ತ್ರಿಭಂಗದಲ್ಲಿ ನಿಂತಿರುವ ಮನುಷ್ಯ ಮತ್ತು ಗೋವು ಕರು ಇವೆ.

೩೨. **ಮಳಲಿ :** ಇಲ್ಲಿ ಕೆರೆಯಹತ್ತಿರ ಬಳಪದಕಲ್ಲಿನ ಎರಡು ದೇವಾಲಯಗಳಿವೆ. ದೊಡ್ಡ ದೇವಾಲಯವನ್ನು ಬಹುಶಃ ಹದಿಮೂರನೆಯ ಶತಾಬ್ದದಲ್ಲಿ ಕಟ್ಟಲಾಯಿತು. ನವರಂಗ ಶಿಖರಗಳು ಹೋಗಿವೆ. ಜಗತಿಯ ಮೆಟ್ಟಲು ಹತ್ತಿರ ಎರಡು ಆನೆಗಳಿವೆ. ಸುಕನಾಸಿ ದ್ವಾರದಲ್ಲಿ ಜಾಲಂದ್ರ, ವೈಷ್ಣವ ದ್ವಾರಪಾಲಕರು, ಅಷ್ಟಕೋಣದ ಸಣ್ಣ ಕಂಬಗಳಿವೆ. ದ್ವಾರ ಮತ್ತು ಕಂಬಗಳ ಮೇಲೆ ವೇಣುಗೋಪಾಲ, ಕಾಳಿಂಗಮರ್ದನ, ಗೋವರ್ಧನಧಾರಿ, ಉಗ್ರನರಸಿಂಹ ವಿಗ್ರಹಗಳಿವೆ. ಗರ್ಭಗುಡಿ ದ್ವಾರದ ಮೇಲೆ ಗೋಪಾಲಕೃಷ್ಣನಿರುವನು. ಗರುಡಪೀಠದ ಮೇಲೆ ಈಗ ಲಿಂಗವಿದೆ. ವಾಸುದೇವ ಗಣೇಶ ವಿಗ್ರಹಗಳು ಗರ್ಭಗುಡಿಯಲ್ಲಿವೆ.

೩೩. **ಅಗ್ರಹಾರ ಬೆಳ್ಗುಳಿ :** ಚೆನ್ನರಾಯಪಟ್ಟಣ ತಾಲ್ಲೂಕಿನ ಅಗ್ರಹಾರ ಬೆಳ್ಗುಳಿಗೆ ವೆಳುಗುಳಿ ಪಂಜಾಡಿಯ ಬೆಳ್ಗಲಿ ಎಂಬ ಹೆಸರುಗಳಿದ್ದವು. ಕ್ರಿ. ಶ. ೧೨೧೦ರಲ್ಲಿ ಕೇಶಿರಾಜನು ಇದನ್ನು ಅಗ್ರಹಾರವಾಗಿ ಮಾಡಿ ಕೇಶವ–ಈಶ್ವರ (ಬೆಟ್ಟೇಶ್ವರ) ದೇವಾಲಯವನ್ನು ಕಟ್ಟಿಸಿ, ಕೇಶವ ಪುರವೆಂಬ ಹೆಸರಿಟ್ಟಿದ್ದನು. ದೇವಾಲಯವು ದಕ್ಷಿಣಾಭಿಮುಖವಾಗಿ ಪೂರ್ವಕ್ಕೂ ಪಶ್ಚಿಮಕ್ಕೂ ವಿಸ್ತರಿಸಿದೆ. ದಕ್ಷಿಣದಲ್ಲಿ ನವರಂಗ, ಪಶ್ಚಿಮದಲ್ಲಿ ಈಶ್ವರಗುಡಿ, ಉತ್ತರದಲ್ಲಿ ಕೇಶವ ಗರ್ಭಗೃಹ, ಪೂರ್ವದಲ್ಲಿ ಮುಖ ಮಂಡಪ ಹೊಂದಿದೆ. ಮುಖಮಂಡಪದ ಉತ್ತರ ಭಾಗದಲ್ಲಿ ಒಂದು ಉತ್ಸವ ವಿಗ್ರಹಗಳ ಗುಡಿ, ಪೂರ್ವದಲ್ಲಿ ಈಶ್ವರನ ಎದುರಿಗೆ ದೊಡ್ಡ ನಂದಿ ಇವೆ. ನವರಂಗದ ಕಂಬಗಳು ಸುಂದರವಾಗಿವೆ. ನವರಂಗದ ಎರಡು ಪಕ್ಕಗಳಲ್ಲಿ ಜಗತಿ ಕಟಾಂಜನಗಳಿವೆ. ಶಿಖರಗಳು ಗಾರೆ ಇಟ್ಟಿಗೆಗಳಿಂದ

ಕಟ್ಟಿದ ಈಚಿನದಾಗಿವೆ. ಕೇಶವ ವಿಗ್ರಹ ಎರಡಡಿ ಎತ್ತರದ ಗರುಡ ಪೀಠದ ಮೇಲೆ ಐದಡಿ ಎತ್ತರವಿದೆ. ಪದ್ಮ ಶಂಖ ಚಕ್ರ ಗದೆಗಳನ್ನು ಹಿಡಿದಿದೆ. ನವರಂಗದಲ್ಲಿ ಮಯೂರವಾಹನನಾದ ಷಣ್ಮುಖ, ಕತ್ತಿ ತ್ರಿಶೂಲ ಡಮರುಗ ಕಪಾಲ ಹಿಡಿದಿರುವ ಆಸೀನನಾದ ಭೈರವ (ಕಪಾಲದ ಕೆಳಗೆ ರಾಕ್ಷಸನ ತಲೆ) ಇವೆ. ಕತ್ತಿ ಪಾಶ ಅಂಕುಶ ಕಪಾಲ ಹಿಡಿದಿರುವ ದುರ್ಗಾಪೀಠವಲ್ಲಿ ಸಿಂಹ, ಅಕ್ಷಮಾಲಾ ಅಂಕುಶಪಾಶ ಪುಸ್ತಕಗಳನ್ನು ಹೊಂದಿರುವ ಸರಸ್ವತಿ, ದಂತ ಅಂಕುಶ ಕಮಲ (ಪಾಶ ?) ಫಲ ಹೊಂದಿರುವ ಗಣೇಶ ವಿಗ್ರಹಗಳಿವೆ. ನಂದಿಯು ದೊಡ್ಡದಾಗಿ ಸಾಲಂಕೃತ ವಾಗಿದೆ. ನವರಂಗದ ಪೂರ್ವದ್ವಾರದಲ್ಲಿ "ಶ್ರೀಮತು ಪ್ರತಾಪ ಚಕ್ರವರ್ತಿ ಹೊಯ್ಸಳ ವೀರಸೋಮೇಶ್ವರ" ಎಂಬ ಶಾಸನವಿದೆ. ಹಳ್ಳಿಯಲ್ಲಿ ಸೋಮೇಶ್ವರ ದೇವಾಲಯವಿದೆ. ೧೧೫೪ರಲ್ಲಿ ಸೋಮರಾಸಿ ಎಂಬುವನು ಇದನ್ನು ಕಟ್ಟಿಸಿದನು. ಶಿಲ್ಪ ಸಾಧಾರಣವಾಗಿದೆ. ಅಮೃತೇಶ್ವರ ದೇವಾಲಯವನ್ನು ೧೧೩೪ರಲ್ಲಿ ಕಟ್ಟಲಾಯಿತು. ಮೂಲಸ್ಥಾನ ಗಂಗೇಶ್ವರ ಎಂಬ ಹೆಸರಿದ್ದಿತು.

೩೪. **ದೇವನೂರು :** ಬಾಣಾವರಕ್ಕೆ ಐದು ಮೈಲಿ ಉತ್ತರದಲ್ಲಿ ರುವ ದೇವನೂರು ಲಕ್ಷ್ಮೀಶನ ಜನ್ಮಸ್ಥಳ. ಇಲ್ಲಿರುವ ರಾಮೇಶ್ವರ ಮತ್ತು ಸಿದ್ಧೇಶ್ವರ ದೇವಾಲಯಗಳು ಹೊಯ್ಸಳ ರೀತಿಯಲ್ಲಿವೆ. ಸಿದ್ಧೇಶ್ವರ ದೇವಸ್ಥಾನದ ನವರಂಗದಲ್ಲಿರುವ ಕ್ರಿ. ಶ. ೧೬೩೪ನೆಯ ಶಾಸನದಲ್ಲಿ ದೇವನೂರನ್ನು ಲಕ್ಷ್ಮೀನಾರಾಯಣಪುರವೆಂದು ಕರೆದಿದೆ. ಇದರ ಹತ್ತಿರ ಸೂರ್ಯನಾರಾಯಣ, ಸಪ್ತಮಾತೃಕಾ, ಗಣೇಶ, ದಕ್ಷಿಣಾಮೂರ್ತಿ, ಕುಮಾರ, ಮಹಿಷಮರ್ದಿನಿ, ಇತ್ಯಾದಿ ವಿಗ್ರಹಗಳಿವೆ. ಇಲ್ಲಿರುವ ಲಿಂಗವನ್ನು, ನರ್ಮದೆಯಿಂದ ಜಗನ್ನಾಥ ವಿಜಯವನ್ನು ಬರೆದ ರುದ್ರ ಭಟ್ಟನು ತಂದು, ಪ್ರತಿಷ್ಠಿಸಿದನೆಂದು ಹೇಳಲಾಗಿದೆ. ಅವನ ವಂಶೀಯರು ವಾಶಿಷ್ಠಗೋತ್ರದವರು ಈಗಲೂ ಪುರೋಹಿತರಾಗಿರುವರು. ಇಲ್ಲಿ ಒಂದು ಜೈನ ಬಸದಿ, ಇತರ ದೇವಾಲಯಗಳು ಇದ್ದವು. ಲಕ್ಷ್ಮೀಕಾಂತದೇವಾಲಯ ೧೭ನೆಯ ಶತಮಾನದ ದ್ರಾವಿಡ ರೀತಿಯಲ್ಲಿದೆ. ಆದರೆ ಲಕ್ಷ್ಮೀಕಾಂತ ವಿಗ್ರಹ ಹೊಯ್ಸಳ ರೀತಿಯಲ್ಲಿದೆ. ನಾಲ್ಕು ಕೈಗಳಲ್ಲಿ ಶಂಖಚಕ್ರಗದಾ

ಪದ್ಮಗಳನ್ನು ಹಿಡಿದು ಲಕ್ಷ್ಮಿಯನ್ನು ಎಡತೊಡೆಯ ಮೇಲೆ ಹೊಂದಿರುವನು. ಪ್ರಭಾವಳಿಯಲ್ಲಿ ದಶಾವತಾರಗಳಿವೆ. ಹೊಯ್ಸಳ ಶಿಲ್ಪದ ರೀತಿಯಲ್ಲಿ ಕೃಷ್ಣನು ಇಲ್ಲ; ಬಲರಾಮ ಬುದ್ಧರಿರುವರು. ನವರಂಗದ ಉತ್ತರ ಭಾಗದಲ್ಲಿ ಜಗತಿಯಮೇಲೆ ಹನ್ನೊಂದು ಆಳ್ವಾರರ ವಿಗ್ರಹಗಳಿವೆ. ಒಂದನ್ನು ಲಕ್ಷ್ಮೀಕಾಂತ ಹೆಬ್ಬಾರ ಅಥವಾ ಲಕ್ಷ್ಮೀಶ ಎಂದು ಕರೆಯುವರು.

೩೫. **ತೊಣ್ಣೂರು:** ನಾಗಮಂಗಲಕ್ಕೆ ಪಶ್ಚಿಮದಲ್ಲಿ ತೊಂಡನೂರು (ತೊಣ್ಣೂರು) ಹೊಯ್ಸಳರ ಕಾಲದಲ್ಲಿ ಪ್ರಸಿದ್ಧವಾಗಿದ್ದಿತು. ಹಳೆಯ ನಗರದ ಈಶಾನ್ಯದಲ್ಲಿರುವ ಕೈಲಾಸೇಶ್ವರ ಮತ್ತು ಕೃಷ್ಣಸ್ವಾಮಿ ದೇವಾಲಯಗಳು ಒಂದನೇ ನರಸಿಂಹ(ಕ್ರಿ. ಶ. ೧೧೫೮)ನ ಕಾಲದಲ್ಲಿ ನಿರ್ಮಿತವಾದವು. ಕೈಲಾಸೇಶ್ವರ ದೇವಾಲಯದಲ್ಲಿ ಎರಡೂವರೆ ಅಡಿ ಎತ್ತರದ ಲಿಂಗವಿದೆ. ನವರಂಗದ ಪಶ್ಚಿಮ ಭಾಗದಲ್ಲಿ ಆರು ದುಂಡಾದ ಕಂಬಗಳು, ಪೂರ್ವ ಭಾಗದಲ್ಲಿ ನಾಲ್ಕು ಹದಿನಾರು ಮೂಲೆಗಳ ಕಂಬಗಳು ಇವೆ. ಪೂರ್ವದ ಮುಖಮಂಡಪದಲ್ಲಿ ಎರಡು ಅಷ್ಟಕೋಣ ಸ್ತಂಭಗಳಿವೆ. ಹೊರಗಿನ ಗೋಡೆಯ ಮೇಲೆ ಹೊಯ್ಸಳರ ಕಾಲದ ಅನೇಕ ಕನ್ನಡ ತಮಿಳು–ಗ್ರಂಥ ಶಾಸನಗಳಿವೆ.

ಹಳೆಯ ಊರಿನ ಮಧ್ಯದಲ್ಲಿ ಕೃಷ್ಣದೇವಾಲಯವನ್ನು ಕಾರ್ಗುಡಿಯ ಕೂತ್ತಾಡಿ ದಂಡನಾಯಕನು ೧೧೫೮ರಲ್ಲಿ "ವಿತ್ತಿರುಂದ ಪೆರುಮಾಳ್" ಎಂದು ನಿರ್ಮಿಸಿದನು. ದೇವಾಲಯದ ಗರ್ಭಗೃಹ ಸುಕನಾಸಿ ರಂಗಮಂಡಪಗಳನ್ನು ಕಣಶಿಲೆಯಿಂದ ಕಟ್ಟಿರುವರು. ಹೊರಗಿನ ಗೋಡೆಗಳ ಮೇಲೆ ಕೀರ್ತಿಮುಖ ಮಕರಗಳ ಸಾಲುಗಳಿವೆ. ವಿಮಾನವನ್ನು ಚೋಳ ರೀತಿಯಲ್ಲಿ ದೊಡ್ಡ ಇಟ್ಟಿಗೆಗಳಿಂದ ಕಟ್ಟಿರುವರು. ಗರ್ಭಗೃಹದಲ್ಲಿ ಮೂರು ವಿಗ್ರಹಗಳಿವೆ. ಸುಖಾಸನದಲ್ಲಿ ಕುಳಿತಿರುವ ವಿಷ್ಣು ಅಭಯ ಚಕ್ರಶಂಖ ಹಿಡಿದು ಮತ್ತೊಂದು ಕೈಯನ್ನು ತೊಡೆಯಮೇಲಿಟ್ಟಿರುವನು. ತಲೆ ದೊಡ್ಡದಾಗಿದೆ. ಬಹುಶಃ ಅಲಂಕೃತನಾಗಿ ಕುಳಿತಿರುವ ಬಾಲಕೃಷ್ಣನನ್ನು ತೋರಿಸಲು ಶಿಲ್ಪಿಯು ಯತ್ನಿಸಿರುವನು. ಇದರ ಎರಡು ಪಕ್ಕಗಳಲ್ಲೂ ದೇವಿಯರಿರುವರು.

ಇಮ್ಮಡಿ ಬಲ್ಲಾಳನ ಕಾಲದಲ್ಲಿ (೧೧೭೫–೧೯೯೧) ದೊಡ್ಡ ನವ

ರಂಗವನ್ನು, ಮುಖಮಂಡಪವನ್ನು, ಪ್ರಾಕಾರ ಮಹಾದ್ವಾರಗಳನ್ನು ಸೇರಿಸಲಾಯಿತು. ಈಶಾನ್ಯದ ವಾಹನ ಮಂಡಪವು ೧೨ನೆಯ ಶತಮಾನ ದಲ್ಲಿಯೇ ರಚಿತವಾಯಿತು. ದೇವಾಲಯದ ಹೊರಗಡೆ ಪೂರ್ವದಲ್ಲಿ ವಸಂತಮಂಡಪ, ಮಾಸ್ತಿಕಲ್, ೧೮ಅಡಿ ಎತ್ತರದ ಚೆನ್ನಾಗಿ ಅಲಂಕರಿಸಿ ರುವ ದ್ವಾರ ಇವೆ. ಉತ್ಸವ ವಿಗ್ರಹಗಳು ಬಹುಶಃ ವಿಜಯನಗರ ಕಾಲದ್ದಾಗಿವೆ.

ಲಕ್ಷ್ಮೀನಾರಾಯಣ ದೇವಾಲಯ ಬಹುಶಃ ತೊಣ್ಣೂರಿನ ಅತ್ಯಂತ ಪ್ರಾಚೀನ ದೇವಾಲಯ. ವಿಷ್ಣುವರ್ಧನನ ಕಾಲದಲ್ಲಿ ಸುರಿಗೆಯ ನಾಗಯ್ಯ ಎಂಬ ಅಧಿಕಾರಿಯು ಕಟ್ಟಿಸಿದನೆಂದು ಲಕ್ಷ್ಮೀಗುಡಿಯ ಎದುರು ಕಂಬದ ಮೇಲಿರುವ ಶಾಸನದಿಂದ ತಿಳಿದುಬರುವುದು. ಗರ್ಭಗುಡಿಯಲ್ಲಿ ಗರುಡಪೀಠದ ಮೇಲೆ ಆರು ಅಡಿ ಎತ್ತರದ ನಾರಾಯಣ ವಿಗ್ರಹ ವಿದೆ. ಗರ್ಭಗುಡಿಯ ಮೇಲ್ಛಾವಣಿ ಮಧ್ಯದಲ್ಲಿ ಪದ್ಮ, ಮೂಲೆಗಳಲ್ಲಿ ಸಿಂಹಲಲಾಟಗಳು ಇವೆ. ಸುಕನಾಸಿ ದ್ವಾರದಮೇಲೆ ಗಜಲಕ್ಷ್ಮಿ ಇದೆ. ನವರಂಗದ ಬಳಪದಕಲ್ಲಿನ ಕಂಬಗಳು ಬೇಲೂರಿನ ಕಂಬಗಳಂತೆ ಸುಂದರವಾಗಿವೆ. ಮೇಲ್ಛಾವಣಿಯಲ್ಲಿ ಅಷ್ಟದಿಕ್ಪಾಲಕರು, ಮಧ್ಯ ದಲ್ಲಿ ಪದ್ಮ ಸಿಂಹಲಲಾಟಗಳಿವೆ. ಹೊರಗೋಡೆಗಳನ್ನು ಕಣಶಿಲೆಯಲ್ಲಿ ಕಟ್ಟಿದ್ದರೂ ಬೇಲೂರು ರೀತಿಯಲ್ಲಿವೆ. ವಿಜಯನಗರ ಕಾಲದಲ್ಲಿ ವಿಮಾನದ ಮೇಲಿರುವ ಇಟ್ಟಿಗೆಯ ಗೋಪುರ, ದೊಡ್ಡ ಮುಖಮಂಡಪದ ಐವತ್ತು ಸ್ತಂಭಗಳ ಶಾಲೆ, ಮಹಾದ್ವಾರ, ಕೋಟೆಯಂತಿರುವ ಪ್ರಾಕಾರದ ಗೋಡೆ ನಿರ್ಮಿತವಾದವು. ಪಾಳೆಯಗಾರರ ಕಾಲದಲ್ಲಿ ನಲವತ್ತು ಸ್ತಂಭ ಗಳ ಪಾತಾಳಾಂಕಣ ರಚಿತವಾಯಿತು. ಹೊರಗಿನ ಪ್ರಾಕಾರದ ದಕ್ಷಿಣ ಗೋಡೆಯ ಹತ್ತಿರ ಲಕ್ಷ್ಮೀ ದೇವಾಲಯದ ಗರ್ಭಗುಡಿ ರಂಗಮಂಡಪ ಗಳು ವಿಷ್ಣುವರ್ಧನನ ಕಾಲದಲ್ಲೇ ನಿರ್ಮಿತವಾದವು. ಮಹಾದ್ವಾರದ ಮುಂದೆ ಕಣಶಿಲೆಯ ಹದಿನಾರು ಮೂಲೆಗಳ ಗರುಡಸ್ತಂಭವಿದೆ.

ನಾರಾಯಣ ದೇವಾಲಯಕ್ಕೆ ಉತ್ತರದಲ್ಲಿ ಗುಡ್ಡದ ಮೇಲೆ ಹನ್ನೆರಡನೆಯ ಶತಮಾನದ ನರಸಿಂಹ ದೇವಸ್ಥಾನವಿದೆ. ಗರ್ಭಗೃಹದಲ್ಲಿ ಯೋಗನರಸಿಂಹ ವಿಗ್ರಹವಿದೆ. ಯೋಗಪಟ್ಟವನ್ನು ಮೊಣಕಾಲುಗಳ

ಮೇಲೆ ಕಟ್ಟಿ ಪದ್ಮಪೀಠದ ಮೇಲೆ ನರಸಿಂಹನು ಬಾಯ್ತೆರೆದು ಕುಳಿತಿರುವನು. ನವರಂಗದಲ್ಲಿ ಅನೇಕ ಕಣಶಿಲೆಯ ಕಂಬಗಳಿವೆ. ಇದರ ಆಗ್ನೇಯ ಮೂಲೆಯಲ್ಲಿ ಪಾಕಶಾಲೆ, ಈಶಾನ್ಯದಲ್ಲಿ ಶ್ರೀ ರಾಮಾನುಜರ ವಿಗ್ರಹ ಇವೆ. ಶ್ರೀ ರಾಮಾನುಜರ ವಿಗ್ರಹವನ್ನು ಗಾರೆಯಿಂದ ಮಾಡಿರುವರು. ಶ್ರೀ ರಾಮಾನುಜರು ಪದ್ಮಾಸನದಲ್ಲಿ ಕುಳಿತು ದಂಡವನ್ನು ಹಿಡಿದಿರುವರು. ತಲೆಯ ಮೇಲೆ ಏಳು ಹೆಡೆಯ ಆದಿಶೇಷನಿರುವನು. ಈ ವಿಗ್ರಹ ರಾಮಾನುಜರ ಸಮಕಾಲೀನ ಎಂದು ನಂಬಿಕೆ ಇದ್ದರೂ ಈಚಿನದೆಂದು ಕಂಡುಬರುತ್ತದೆ.

'ಮೋತೀ ತಲಾಬ್' ಎಂಬ ಕೊಳವನ್ನು ರಾಮಾನುಜರ ಆಜ್ಞೆಯ ಮೇಲೆ ಕಟ್ಟಲಾಯಿತೆಂದು ನಂಬಿಕೆ ಇದೆ. ಚಾಳುಕ್ಯ-ಹೊಯ್ಸಳ ಕಾಲದ ಶಾಸನಗಳು, ವಿಗ್ರಹಗಳು ಮೆಟ್ಟಲುಗಳಲ್ಲಿ ಕಂಡುಬರುತ್ತವೆ. ಗಜೇಂದ್ರ ಮೋಕ್ಷ, ಸಳ, ಇತ್ಯಾದಿ ವಿಗ್ರಹಗಳನ್ನು ನೋಡಬಹುದು. ಟೀಪು ಹೊಯ್ಸಳ ಕಾಲದ ಕೆರೆಯನ್ನು ಪುನಃ ಜೀರ್ಣೋದ್ಧಾರ ಮಾಡಿದಂತೆ ಕಂಡುಬರುತ್ತದೆ.

೩೬. ಬೆಳ್ಳೂರು: ಬೆಳ್ಳೂರಿನ ಮಾಧವರಾಯ ದೇವಾಲಯವನ್ನು ಕ್ರಿ. ಶ. ೧೧೧೭ರಲ್ಲಿ ಕಟ್ಟಿದಂತೆ ಶಾಸನಗಳಿಂದ ತಿಳಿದುಬರುತ್ತದೆ. ತ್ರಿಕೂಟಾಚಲವಾದ ಈ ದೇವಾಲಯ ನಕ್ಷತ್ರಾಕಾರದ ಜಗತಿಯ ಮೇಲಿದೆ. ಜಗತಿಯ ಮೇಲಾಗಲಿ ಗೋಡೆಯ ಭಾಗದಲ್ಲಾಗಲಿ ಕೆತ್ತನೆ ಕೆಲಸವಿಲ್ಲ. ಗರ್ಭಗುಡಿ ನಕ್ಷತ್ರಾಕಾರವಾಗಿ ದಕ್ಷಿಣ ಪಶ್ಚಿಮ ಉತ್ತರದಲ್ಲಿ ಗೂಡುಗಳನ್ನು ಹೊಂದಿದೆ. ಗರ್ಭಗುಡಿಯ ಮೇಲಿನ ಶಿಖರ ನಾಲ್ಕು ಅಂತಸ್ತುಗಳಲ್ಲಿದೆ. ಇದರ ಮುಂದೆ ಸಳ ವಿಗ್ರಹವಿಲ್ಲ. ದಕ್ಷಿಣ ಗರ್ಭ ಗುಡಿಯಲ್ಲಿ ಐದಡಿ ಎತ್ತರದ ವೇಣುಗೋಪಾಲ ವಿಗ್ರಹವೂ, ಉತ್ತರದಲ್ಲಿ ಜನಾರ್ದನ (ವರದರಾಜ?) ವಿಗ್ರಹವೂ ಇವೆ. ಪಶ್ಚಿಮದ ಗರ್ಭಗುಡಿಯ ಸುಕನಾಸಿಯಲ್ಲಿ ಮರದ ಮಂಡಪವಿದೆ. ಇದರಲ್ಲಿ ಉತ್ಸವ ವಿಗ್ರಹ ಗಳನ್ನಿಟ್ಟಿರುವರು. ಗರ್ಭಗುಡಿಯಲ್ಲಿರುವ ಪೀಠದ ಮೇಲೆ ಐದಡಿ ಎತ್ತರದ ಮಾಧವನು ಗದಾಚಕ್ರಶಂಖಪದ್ಮಗಳನ್ನು ಹಿಡಿದಿರುವನು. ಪ್ರಭಾವಳಿ ಯಲ್ಲಿ ದೇವಿಯರೂ ದಶಾವತಾರಗಳೂ ಇವೆ. ಮುಖಮಂಡಪದಲ್ಲಿ

ಬಳಪದಕಲ್ಲಿನ ದುಂಡಾದ ಕಂಬಗಳಿವೆ. ಇದರ ಉತ್ತರ ದಕ್ಷಿಣದಲ್ಲಿ ಇಟ್ಟಿಗೆಗಳಿಂದ ಕಟ್ಟಿದ ಗುಡಿಗಳಲ್ಲಿ ಗೋಪಾಲ, ಲಕ್ಷ್ಮೀನಾರಾಯಣ ವಿಗ್ರಹಗಳಿವೆ. ಇವುಗಳನ್ನು ಮೂಲೆಸಿಂಗೇಶ್ವರ ದೇವಾಲಯದಿಂದ ತಂದಿರುವರು. ಗೋಪಾಲ ವಿಗ್ರಹ ಬಹಳ ಸುಂದರವಾಗಿದೆ. ಲಕ್ಷ್ಮೀ ನಾರಾಯಣ ವಿಗ್ರಹದ ಚಕ್ರ ಮುರಿದುಹೋಗಿದೆ. ಉತ್ತರ ಗರ್ಭಗುಡಿಯ ಜನಾರ್ದನ ವಿಗ್ರಹದ ತೋರಣದಲ್ಲಿ ದಶಾವತಾರಗಳಿವೆ. ಇದರ ಅಡಿಯಲ್ಲಿ ನಮ್ಮಾಳ್ವಾರ್, ರಾಮಾನುಜ ಮತ್ತು ಜೀಯರ್ ಕಲ್ಲಿನ ವಿಗ್ರಹಗಳನ್ನಿಟ್ಟಿರುವರು.

ಬೆಳ್ಳೂರಿನ ಗಂಗಾವಿಶ್ವೇಶ್ವರದೇವಾಲಯ ಕ್ರಿ. ಶ. ೧೬೬೯ರಲ್ಲಿ ನಿರ್ಮಿತವಾಯಿತು. ಆದರೆ ಹೊಯ್ಸಳ ಕಾಲದ ಮೂಲೆಸಿಂಗೇಶ್ವರದೇವಾಲಯದ ಸುಂದರವಾದ ಗಣೇಶ, ಭೈರವ, ನಂದಿ ಈ ದೇವಾಲಯದಲ್ಲಿವೆ.

ಮಾಧವರಾಯ ದೇವಾಲಯದ ಈಶಾನ್ಯದಲ್ಲಿ ಬಹಳ ಪ್ರಾಚೀನವಾದ ಗೌರೇಶ್ವರ ಗುಡಿಯಿರುವುದು. ಇದರ ಮುಖಮಂಡಪದಲ್ಲಿ ಕಣಶಿಲೆಯ ದುಂಡು ಕಂಬಗಳಿವೆ. ಗರ್ಭಗುಡಿ ನವರಂಗಗಳನ್ನು ಬಳಪದಕಲ್ಲಿನಿಂದ ಮಾಡಿರುವರು. ನವರಂಗದ ಹೊರಗೋಡೆಯ ಮೇಲೆ ಹೆಚ್ಚು ಕೆತ್ತನೆ ಕೆಲಸವಿಲ್ಲ. ಮೆಟ್ಟಲು ಮೆಟ್ಟಲಾದ ಶಿಖರದ ಪೂರ್ವದಲ್ಲಿ ಸುಂದರವಾದ ಸಳನ ವಿಗ್ರಹವಿದೆ. ನವರಂಗದಲ್ಲಿ ಗಣೇಶ,ವೀರಭದ್ರ, ನಂದಿ ಇಟ್ಟಿರುವರು. ಸುಕನಾಸಿ ದ್ವಾರದಲ್ಲಿ ಜಾಲಂಧ್ರವಿದೆ. ಗರ್ಭಗುಡಿಯಲ್ಲಿ ವೃತ್ತ ಶಿರೋಭಾಗವುಳ್ಳ ಲಿಂಗವಿದೆ. ನವರಂಗದ ಈಶಾನ್ಯದಲ್ಲಿ ವೀರಬಲ್ಲಾಳನ ಶಾಸನವಿದೆ.

ಮೂಲೆಸಿಂಗೇಶ್ವರ ಬಳಪದಕಲ್ಲಿನಿಂದ ಕಟ್ಟಿದ ತ್ರಿಕೂಟಾಚಲ ಹೊಯ್ಸಳ ದೇವಾಲಯ. ಇದರ ಮೂರು ಗರ್ಭಗುಡಿಗಳಲ್ಲಿ ವೇಣುಗೋಪಾಲ, ಲಿಂಗ ಮತ್ತು ಲಕ್ಷ್ಮೀನಾರಾಯಣ ವಿಗ್ರಹಗಳಿದ್ದವು. ಮೂರು ಗೋಪುರಗಳು ಮೆಟ್ಟಲುಮೆಟ್ಟಲಾಗಿವೆ. ನವರಂಗದಲ್ಲಿ ನಾಲ್ಕು ಅಲಂಕೃತವಾದ ಕಂಬಗಳೂ, ಒಂಬತ್ತು ಅಂಕಣಗಳ ಮೇಲ್ಛಾವಣಿಗಳೂ ಹೊಯ್ಸಳ ರೀತಿಯಲ್ಲಿವೆ. ಪೂರ್ವದಲ್ಲಿ-ಮುಖಮಂಡಪವೂ ದಕ್ಷಿಣದಲ್ಲಿ ಮೂರು ಶಾಸನಕಲ್ಲುಗಳೂ ಇವೆ.

ಊರಿನ ಪೂರ್ವದ್ವಾರದ ಹತ್ತಿರ ಕ್ರಿ. ಶ. ೧೬೮೦ರಲ್ಲಿ ಕಟ್ಟಿದ ಕಣ ಶಿಲೆಯ ವಿಮಲನಾಥ ಬಸದಿಯು ಇದೆ. ಹೊಯ್ಸಳ ಕಾಲದ ಸಣ್ಣ ವೀರಭದ್ರ ದೇವಾಲಯದಲ್ಲಿ ಮೂರು ಅಡಿ ಎತ್ತರದ ವೀರಭದ್ರ ಕತ್ತಿ, ಬಾಣ, ಧನುಸ್, ಖೇಟ ಹಿಡಿದಿದೆ. ಬಲದಲ್ಲಿ ದಕ್ಷಬ್ರಹ್ಮ, ಎಡದಲ್ಲಿ ಕತ್ತಿ ಗುರಾಣಿ ಹಿಡಿದ ದುರ್ಗಾವಿಗ್ರಹಗಳಿವೆ. ಇದರ ಮುಂದೆ ಬಳಪದಕಲ್ಲಿನ ಶಾಸನಸ್ತಂಭವಿದೆ. ಬೆಳ್ಳೂರಿಗೆ ಆಗ್ನೇಯದಲ್ಲಿ ನಾಗಮಂಗಲ ರಸ್ತೆಯ ಹತ್ತಿರ ಕಲ್ಲೇಶ್ವರ ದೇವಾಲಯದಲ್ಲಿ ಲಿಂಗ, ಗಣೇಶ, ನಂದಿ, ಷಣ್ಮುಖ ವಿಗ್ರಹಗಳಿವೆ. ಇದಕ್ಕೆ ಉತ್ತರದಲ್ಲಿ ಪಾರ್ವತಿ ಗುಡಿಯಲ್ಲಿ ಪಾರ್ವತಿ ಅಭಯಪಾಶ ಅಂಕುಶದಾನ ಹಸ್ತಗಳನ್ನು ಹೊಂದಿರುವಳು. ಕುಚಬಂಧ ಸೀರೆಗಳಿಂದ ಹದಿನಾಲ್ಕ ನೆಯ ಶತಮಾನದ ವಿಗ್ರಹವೆಂದು ಹೇಳಬಹುದು. ಇದರ ಎದುರಿಗೆ ವೀರಗಲ್ಲು, ಮಾಸ್ತಿಗಲ್ಲುಗಳಿವೆ.

ಕೋಟೆಯ ನೈರುತ್ಯಮೂಲೆಯಲ್ಲಿ ಈಗ ವೆಂಕಟೇಶ ದೇವಾಲಯ ವೆಂದು ಕರೆಯುತ್ತಿರುವ ಮಹಾದೇವೇಶ್ವರ ಗುಡಿಯು ಇದೆ. ಇದರ ಮುಂದಿನ ದೀಪಸ್ತಂಭದ ಮೇಲೆ ಕ್ರಿ. ಶ. ೧೫೪೯ನೆಯ ಶಾಸನವಿದೆ. ಮಾಧವರಾಯ ದೇವಸ್ಥಾನದ ಪೂರ್ವದಲ್ಲಿ ಕಾರುಗಲ್ಲು ಇದೆ. ಜಗತಿಯ ಮೇಲೆ ಎರಡು ಚಪ್ಪಟೆ ಕಲ್ಲುಗಳು ನಿಂತಿವೆ. ಇವುಗಳ ಮಧ್ಯದಲ್ಲಿ ಮತ್ತೊಂದು ಚಚ್ಚೌಕವಾದ ಸಣ್ಣ ಕಲ್ಲು ಇದೆ. ಕಾರುಹಬ್ಬದಲ್ಲಿ (ಜ್ಯೇಷ್ಠ ಪೌರ್ಣಮಿ) ಇಲ್ಲಿ ಮಂಡಪ ಕಟ್ಟಿ ಬ್ರಹ್ಮದೇವನನ್ನು ಪೂಜಿಸುವರು. ಕರುಗಳ ರೋಗಗಳು ನಿವಾರಣೆಯಾಗುವುದೆಂದು ಜನರಲ್ಲಿ ನಂಬಿಕೆ ಇದೆ.

೩೭. ಅಘಲಯ : ಶ್ರವಣಬೆಳಗೊಳಕ್ಕೆ ಐದು ಮೈಲಿ ಆಗ್ನೇಯ ದಲ್ಲಿ ಸಂತೆಬಾಚಹಳ್ಳಿಗೆ ಐದು ಮೈಲಿ ಪಶ್ಚಿಮದಲ್ಲಿ ಅಘಲಯವಿದೆ. ಇಲ್ಲಿನ ಲಕ್ಷ್ಮೀನಾರಾಯಣ ದೇವಾಲಯ ೧೭ನೆಯ ಶತಮಾನದ ಕಟ್ಟಡ. ಮಲ್ಲೇಶ್ವರ ಗುಡಿಯನ್ನು ೧೨೩೦ರಲ್ಲಿ ಕಟ್ಟಿದಂತೆ ಕಂಡುಬರುತ್ತದೆ. ಇದು ತ್ರಿಕೂಟಾಚಲವಾದರೂ ಮೂರು ಗರ್ಭಗುಡಿಗಳು ಒಂದೇ ಸಾಲಿ ನಲ್ಲಿವೆ. ನವರಂಗ ೧೦೦ ಅಡಿ ಉದ್ದ, ೨೫ ಅಡಿ ಅಗಲವಿದೆ. ಇದರ ಮುಂದೆ ಮಂಡಪ ಎರಡಂಕಣವಿದೆ. ಪೂರ್ವದಲ್ಲಿ ಒಂದೇ ದ್ವಾರವಿರುವುದು. ದೇವಾಲಯವು ಬಹುಶಃ ಆಧುನಿಕವಾದ ಎತ್ತರದ ಜಗತಿಯ ಮೇಲಿದೆ.

ಹೊರಗೋಡೆಯನ್ನು ಸಣ್ಣ ಕಂಬಗಳು ಐದು ಭಾಗಗಳನ್ನಾಗಿ ಮಾಡಿವೆ. ಎರಡು ಭಾಗಗಳಲ್ಲಿ ಜಾಲಂಧ್ರಗಳಿವೆ. ಮೇಲಿನ ಗೋಡೆಯ ಬುಡದಲ್ಲಿ ವಿಗ್ರಹಗಳಿವೆ. ಪೂರ್ವ ದ್ವಾರದಿಂದ ದಕ್ಷಿಣದವರೆಗೆ ಗರುಡನ ಮೇಲೆ ಮತ್ಸ್ಯ, ಕೂರ್ಮ, ವರಾಹ ವಿಗ್ರಹಗಳೂ ಮತ್ತು ತೋರಣಗಳ ಕೆಳಗೂ ಅವು ಇವೆ. ಪೂರ್ವದ್ವಾರದಿಂದ ಉತ್ತರಕ್ಕೆ ಕಲ್ಕಿ, ಬುದ್ಧ, ಬಲರಾಮ, ಷಡ್ಭುಜಲಕ್ಷ್ಮೀ (ಅಕ್ಷಮಾಲಾ, ಚಕ್ರ, ಪದ್ಮ, ಪಾಶ, ಶಂಖ–ಫಲ), ಧನುರ್ಬಾಣ ಧರಿಸಿದ ಶ್ರೀರಾಮ, ಪರಶು ಫಲ ಹಿಡಿದ ಪರಶುರಾಮ, ವಿಷ್ಣು, ಗರುಡನಮೇಲೆ ಕೃಷ್ಣ ಸತ್ಯಭಾಮಾ, ಸ್ಥಾನಕವಿಷ್ಣು, ಇಂದ್ರ–ಶಚೀ (ಪಾರಿಜಾತಾಪಹರಣ ಕಥೆ), ವಿಷ್ಣು, ಉಗ್ರನರಸಿಂಹ, ವಿಷ್ಣು, ನಿಂತಿರುವ ವಿಠ್ಠಲ–ಇದರಮೇಲೆ ಶಂಖಚಕ್ರ, ವಿಷ್ಣು; ಉತ್ತರ ಗೋಡೆಯ ಮೂಲೆಯಲ್ಲಿ ವಿಷ್ಣು, ಖಾಲಿ ಗೂಡು; ಉತ್ತರ ಗೋಡೆಯ ಮೇಲೆ ನರ್ತಿಸುತ್ತಿರುವ ಪಾರ್ವತಿ (ಅಕ್ಷಮಾಲಾ ಅಂಕುಶ ಸ್ವರ್ಗಹಸ್ತ ಫಲ) ಭೈರವ–ಭೈರವೀ ವಿಗ್ರಹಗಳಿವೆ.

ಮುಖಮಂಡಪದಲ್ಲಿ ಬಳಪದಕಲ್ಲಿನ ಕಂಬಗಳಿವೆ. ನವರಂಗದ ದ್ವಾರದ ದ್ವಾರಪಾಲಕ ವಿಗ್ರಹಗಳು ಹೋಗಿವೆ. ಪೂರ್ವದ ಗೋಡೆಯ ಹತ್ತಿರ ಬಳಪದಕಲ್ಲಿನ ಜಗತಿಗಳಿವೆ. ಸುಮಾರು ೩೦ ಕಂಬಗಳಿವೆ. ಪ್ರತಿಯೊಂದು ಗರ್ಭಗುಡಿ ಮುಂದೆ ಆರು ಅಂಗುಲ ಎತ್ತರದ ಜಗತಿ ಇದೆ. ಇಲ್ಲಿ ನಂದಿಗಳಿವೆ. ಮೇಲ್ಛಾವಣಿಗಳಲ್ಲಿ ಪದ್ಮಗಳಿವೆ. ನವರಂಗದ ಪಶ್ಚಿಮ ಗೋಡೆಯಲ್ಲಿ ಏಳು ಗೂಡುಗಳಿವೆ. ಇವುಗಳಲ್ಲಿ ಆಗ್ನೇಯದಿಂದ ನಾಗರೂ, ಸೂರ್ಯ, ನಾಗ, ಸಪ್ತಮಾತೃಕ–ವೀರಭದ್ರ ; ಪಶ್ಚಿಮ ಗೋಡೆಯಲ್ಲಿ ಗಣೇಶ, ಮಹಿಷಮರ್ದಿನಿ, ಉಮಾಮಹೇಶ್ವರ; ಉತ್ತರ ಗೋಡೆಯಲ್ಲಿ ಏಳುಹೆಡೆ ಸರ್ಪದ ಕೆಳಗೆ ಸೂರ್ಯ, ಮಯೂರದ ಮೇಲೆ ಷಣ್ಮುಖ, ಕೇಶವ; ಈಶಾನ್ಯದ ಮೂಲೆಯಲ್ಲಿ ಎರಡು ಗಣೇಶ ವಿಗ್ರಹಗಳಿವೆ.

ಮೂರು ಗರ್ಭಗುಡಿಗಳ ಸುಕನಾಸಿ ನವರಂಗ ದ್ವಾರಗಳಲ್ಲಿ ದ್ವಾರಪಾಲಕರು, ದ್ವಾರಗಳ ಮೇಲೆ ಉಮಾಮಹೇಶ್ವರ ವಿಗ್ರಹಗಳು ಇವೆ. ಇವುಗಳಮೇಲೆ ಕುಳಿತಿರುವ ಪಾರ್ವತಿ, ನರ್ತಕರು ಇರುವರು. ಗರ್ಭಗುಡಿ ದ್ವಾರಗಳಮೇಲೆ ಗಜಲಕ್ಷ್ಮಿ, ತಾಂಡವೇಶ್ವರ ಇರುವರು. ಗರ್ಭಗುಡಿಗಳಲ್ಲಿ

ಮೂರು ವೃತ್ತಶಿರವುಳ್ಳ ಕಪ್ಪು ಲಿಂಗಗಳಿವೆ. ಈ ದೇವಾಲಯದ ಶಾಸನ ಸಿಕ್ಕಿಲ್ಲವಾದ್ದರಿಂದ ಲಿಂಗಗಳ ಹೆಸರುಗಳನ್ನು ತಿಳಿಯಲು ಸಾಧ್ಯವಿಲ್ಲ.

೩೮. **ಮಲಗೂರು:** ಇಲ್ಲಿನ ಮಲ್ಲೇಶ್ವರ ದೇವಾಲಯ ಸಾಮಾನ್ಯ ಹೊಯ್ಸಳ ದೇವಾಲಯವಾಗಿದೆ. ಇದಕ್ಕೆ ದಕ್ಷಿಣದಲ್ಲಿರುವ ಹರಿಹರ ದೇವಾಲಯವನ್ನು ವಿಷ್ಣುವರ್ಧನನ ರಾಣಿಯಾದ ಶಾಂತಲೆಯ ಭಾವನಾದ ಬಲೆಯನಾಯಕನು ಕಟ್ಟಿಸಿದನೆಂದು ಹರಿಹರವಿಗ್ರಹದ ಗರುಡ–ನಂದಿಪೀಠ ದಲ್ಲಿರುವ ಕನ್ನಡ ಶಾಸನದಿಂದ ತಿಳಿದುಬರುತ್ತದೆ. ಆದರೂ ದೇವಾಲಯ ಸಾಮಾನ್ಯವಾಗಿದೆ. ನವರಂಗದಲ್ಲಿ ಎರಡು ಅಷ್ಟಕೋಣಗಳ ಸ್ತಂಭಗಳೂ, ಸುಕನಾಸಿದ್ವಾರದಲ್ಲಿ ಜಾಲಂಧ್ರವೂ ಇವೆ. ಐದಡಿ ಎತ್ತರದ ಹರಿಹರ ವಿಗ್ರಹವು ಆಗ್ನೇಯದಲ್ಲಿ ನಂದಿ, ಪೂರ್ವದಲ್ಲಿ ಗರುಡ ಇರುವ ಪೀಠದ ಮೇಲಿದೆ. ಹರಿಹರನಿಗೆ ಅಕ್ಷಮಾಲಾ, ತ್ರಿಶೂಲ, ಚಕ್ರ ಶಂಖಗಳು ಕೈಗಳಲ್ಲೂ, ಬಲಗಿವಿಯಲ್ಲಿ ನಾಗಕುಂಡಲ, ಎಡಗಿವಿಯಲ್ಲಿ ಮಕರ ಕುಂಡಲವೂ ಇವೆ. ಪಕ್ಕಗಳಲ್ಲಿ ದೇವಿಯರಿರುವರು. ತೋರಣದಲ್ಲಿ ಬಲಗಡೆ ಏಕಾದಶರುದ್ರರೂ, ಎಡಭಾಗದಲ್ಲಿ ದಶಾವತಾರಗಳೂ, ಮೇಲೆ ಸಿಂಹಲಲಾಟವೂ ಇವೆ.

ಈ ದೇವಾಲಯಕ್ಕೆ ಉತ್ತರದಲ್ಲಿ ಪಾಳೆಯಗಾರರ ಕಾಲದ ವೀರಭದ್ರ ದೇವಾಲಯವಿದೆ. ಇದರ ಆಗ್ನೇಯದಲ್ಲಿರುವ ಕಲ್ಲೇಶ್ವರ ಹಳೆಯದಾದರೂ ಸಾಮಾನ್ಯವಾಗಿದೆ.

೩೯. **ಸಂತೇಬಾಚಹಳ್ಳಿ:** ಕೃಷ್ಣರಾಜಪೇಟೆಗೆ ಹದಿನಾಲ್ಕು ಮೈಲಿ ವಾಯುವ್ಯದಲ್ಲಿರುವ ಸಂತೆಬಾಚಹಳ್ಳಿಯಲ್ಲಿ ಐದು ದೇವಾಲಯಗಳಿವೆ. ಮಹಾಲಿಂಗೇಶ್ವರ ದೇವಾಲಯ ಅತ್ಯಂತ ಪ್ರಾಚೀನವಾದುದು. ಗರ್ಭಗೃಹ ಸುಕನಾಸಿ ನವರಂಗ ಮಾತ್ರ ಉಳಿದಿವೆ. ಪೀಠದಲ್ಲಿ ಐದು ಸಾಲುಗಳಲ್ಲಿ ಒಂದು ಮಾತ್ರ ಅಲಂಕೃತವಾಗಿದೆ. ಮಿಕ್ಕವುಗಳಲ್ಲಿ ತಾಂಡವೇಶ್ವರ ಮುಂತಾದ ವಿಗ್ರಹಗಳು ಅರ್ಧ ಮಾತ್ರ ಮುಗಿದಿದೆ. ಸೋಮಸೂತ್ರದ ಸಿಂಹಮುಖದಿಂದ ಬಂದ ಜಲವು ಪದ್ಮಾಸನದಲ್ಲಿ ಕುಳಿತಿರುವ ಕಿರೀಟ ಧಾರಿಯಾದ, ಇಬ್ಬರು ಚಾಮರಧಾರಿಣಿಯರನ್ನು ಹೊಂದಿರುವ ವಿಗ್ರಹದ ತಲೆಯಮೇಲೆ ಬೀಳುತ್ತದೆ. ಶಿಖರದಲ್ಲಿ ಮೂರು ಗೋಪುರಗಳ ಸಾಲುಗಳು

ಇವೆ. ಈ ಗೋಪುರಗಳಲ್ಲಿ ಕೀರ್ತಿಮುಖಗಳೂ ವಿಗ್ರಹಗಳೂ ಇವೆ. ದಕ್ಷಿಣದಲ್ಲಿ ಉಗ್ರನರಸಿಂಹ, ವೇಣುಗೋಪಾಲ, ಭೀಮ–ಭಗದತ್ತನ ಆನೆ, ತ್ರಿಪುರಸಂಹಾರ; ಪಶ್ಚಿಮದಲ್ಲಿ ತಾಂಡವೇಶ್ವರ, ಸಳ–ಸಿಂಹ, ಮೋಹಿನಿ–ಕಪಿ; ಉತ್ತರದಲ್ಲಿ ಕಪಿಗಳು ಭೈರವ ಕಾಲಭೈರವ ಇತ್ಯಾದಿಗಳಿವೆ. ನವರಂಗದಲ್ಲಿ ಸುಂದರವಾದ ಹೊಯ್ಸಳ ಸ್ತಂಭಗಳಿವೆ. ಮೇಲ್ಚಾವಣಿಗಳಲ್ಲಿ ರೇಖಾಚಿತ್ರ ಪದ್ಮಕೋಶಗಳೂ ಇವೆ. ನವರಂಗದ ನಾಲ್ಕು ಗೂಡುಗಳಲ್ಲಿ ಎರಡೂವರೆ ಅಡಿ ಎತ್ತರದ ವಿಗ್ರಹಗಳಿದ್ದವು. ಈಗ ಭಗ್ನವಾದ ಮೂರು ಮಾತ್ರ ಇವೆ. ನಿಂತಿರುವ ಬ್ರಹ್ಮ, ಉಮಾ ಮಹೇಶ್ವರ, ನಿಂತಿರುವ ವಿಷ್ಣು, ನವರಂಗದಲ್ಲಿ ಆರು ಅಡಿ ಉದ್ದದ ನಂದಿ ಇದ್ದಿತೆಂದು ಹೇಳಲಾಗಿದೆ. ಸುಕನಾಸಿಯ ದ್ವಾರದಲ್ಲಿ ಶೈವದ್ವಾರಪಾಲಕರೂ, ನರ್ತಕರೂ, ಜಾಲಂದ್ರವೂ ಇವೆ. ಸುಕನಾಸಿಯ ಮೇಲ್ಚಾವಣಿಯಲ್ಲಿ ಅಷ್ಟದಿಕ್ಪಾಲಕರು, ನೃತ್ಯಮಾಡುತ್ತಿರುವ ಶಿವ ಮತ್ತು ಗಣೇಶ, ಕುಮಾರ, ಆದಿತ್ಯರು ಇರುವರು. ಗರ್ಭಗೃಹದ ದ್ವಾರಬಂಧಗಳ ಮೇಲೆ ದ್ವಾರಪಾಲಕರು, ಮೇಲ್ಗಡೆ ಗಜಲಕ್ಷ್ಮಿ, ಐದು ವಿಧ ಗೋಪುರಗಳಿವೆ. ಗರ್ಭಗೃಹದ ಮೇಲ್ಚಾವಣಿಯ ಮೂಲೆಗಳಲ್ಲಿ ಸಿಂಹಗಳೂ ಮಧ್ಯದಲ್ಲಿ ಪದ್ಮವೂ ಇವೆ. ಲಿಂಗವು ಕಪ್ಪು ಕಲ್ಲಿನದಾಗಿದೆ.

ಇಲ್ಲಿರುವ ಆಂಜನೇಯ, ನಾರಾಯಣ, ವೀರಭದ್ರ ಮತ್ತು ಮಾಸ್ತಮ್ಮ ದೇವಾಲಯಗಳು ವಿಜಯನಗರ ಅಥವಾ ಪಾಳೆಯಗಾರರ ಕಾಲದ್ದಾಗಿವೆ.

೪೦. ಕಂಬದಹಳ್ಳಿ: ನಾಗಮಂಗಲ ತಾಲ್ಲೂಕಿನಲ್ಲಿರುವ ಕಂಬದಹಳ್ಳಿ ಬಿಂಡಿಗನವಲೆಗೆ ಒಂದು ಮೈಲಿ ದಕ್ಷಿಣದಲ್ಲಿದ್ದರೂ ಬಿಂಡಿಗನವಲೆಯ ಭಾಗವಾಗಿದ್ದಿತೆಂದು ಶಾಸನಗಳಿಂದ ತಿಳಿದುಬರುತ್ತದೆ. ಇಲ್ಲಿರುವ ಪಂಚಕೂಟ ಬಸದಿಯ ಮುಂದಿರುವ ಮಾನಸ್ತಂಭದಿಂದ ಕಂಬದಹಳ್ಳಿ ಎಂಬ ಹೆಸರು ಬಂದಿತು.

ಕಂಬದಹಳ್ಳಿಯಲ್ಲಿ ಅತ್ಯಂತ ಪ್ರಾಚೀನವಾದ ಭಾಗವು ಉತ್ತರಾಭಿಮುಖವಾದ ತ್ರಿಕೂಟಾಚಲ ಆದಿನಾಥ ಬಸದಿ. ಇದರಲ್ಲಿ ಪಲ್ಲವ ಶಿಲ್ಪದ ಪ್ರಭಾವ ಕಂಡುಬರುವುದು. ದೇವಾಲಯದ ಕೆಳಭಾಗ ಅಷ್ಟಕೋಣಾ

ಕಾರವಾಗಿದೆ. ಗೋಡೆಯ ಮೇಲೆ ಯಕ್ಷ ಜಿನ ಲತಾಪಟ್ಟಿಕೆಗಳಿವೆ. ಗೂಡುಗಳಿಗೆ ಪುಷ್ಪ ಅಥವಾ ಮಕರತೋರಣಗಳಿವೆ. ಗಂಧರ್ವ, ಯಾಳಿ, ಮುಕ್ಕೊಡೆ, ಮಕರ, ಯಕ್ಷರು ಈ ತೋರಣಗಳಲ್ಲಿರುವರು. ಈ ಗೂಡುಗಳಲ್ಲಿ ಬಹುಶಃ ೨೪ ತೀರ್ಥಂಕರರ ವಿಗ್ರಹಗಳಿದ್ದಿರಬಹುದು. ಮೇಲ್ಛಾವಣಿಗಳು ಬಗ್ಗಿ ಲಾಳದ ಆಕಾರದ ಕಮಾನುಗಳಿಂದ ಅಲಂಕೃತವಾಗಿವೆ. ಕೈಪಿಡಿ ಗೋಡೆಯ ಮೇಲೆ ಸಿಂಹಮುಖದ ಮಿಾನು ನೀರ್ಗುದುರೆಗಳಿವೆ.

ಮೂರು ಶಿಖರಗಳನ್ನು ಕಣಶಿಲೆಯಿಂದ ಕಟ್ಟಿರುವರು. ಮೊದಲಿನ ಪಟ್ಟಿಕೆಯಲ್ಲಿ ಗೋಪುರಗಳಿವೆ. ಇದರಮೇಲೆ ಹಂಸಗಳ ಸಾಲು ಲಾಳದಂತಿರುವ ಕಮಾನುಗಳು, ಸಿಂಹ–ಮತ್ಸ್ಯಗಳು, ಮೂಲೆಗಳಲ್ಲಿ ಪಲ್ಲವ ಸಿಂಹದಂತಿರುವ ಮುಂದಿನ ಒಂದು ಕಾಲನ್ನು ಎತ್ತಿಕೊಂಡ ಸಿಂಹಗಳೂ ಇವೆ. ಈ ಮೂರು ಶಿಖರಗಳು ಮೂರು ವಿಧವಾಗಿವೆ. ಪೂರ್ವದ ಶಿಖರ ಗುಂಡಾಗಿ, ಉತ್ತರ ಶಿಖರ ಚತುರಸ್ರವಾಗಿ, ಪಶ್ಚಿಮದ ಶಿಖರ ಅಷ್ಟಾಸ್ರವಾಗಿ ಇವೆ. ಇವುಗಳ ಮೇಲೆ ಲತಾಪಟ್ಟಿಕೆ, ಪೀಠದ ಮೇಲಿರುವ ಲಾಳದ ಆಕಾರ ಕಮಾನುಗಳಿವೆ. ಇವು ತಾಜ್‌ಮಹಲಿನ ಬುದ್ಬುದಾಕಾರದ ಶಿಖರದಂತಿವೆ. ತಾಜ್‌ಮಹಲಿಗೆ ೨೦೦ ವರ್ಷ ಹಿಂದೆಯೇ ಇಂತಹ ಶಿಖರ ಕರ್ಣಾಟಕದಲ್ಲಿ ಕಂಡುಬರುವುದು ಗಮನಾರ್ಹವಾಗಿದೆ. ಈ ಶಿಖರಗಳ ಕೆಳಗೆ ಗ್ರೀವ ಅಥವಾ ಕಂಠ ವೃತ್ತಾಕಾರವಾಗಿದೆ. ಶಿಖರದ ಮೇಲೆ ಮಗುಚಿಹಾಕಿದ ಪದ್ಮವಿದೆ. ಆದರೆ ಕಳಶಗಳಿಲ್ಲ. ಪಲ್ಲವ ಶಿಖರಗಳಿಗೆ ಹೋಲಿಕೆ ಇರುವುದರಿಂದ ಸುಮಾರು ಒಂಬತ್ತು–ಹತ್ತನೆಯ ಶತಮಾನದ ಕಟ್ಟಡಗಳೆಂದು ಊಹಿಸಬಹುದು. ನಂದಿಯ ಭೋಗನಂದಿ, ಶ್ರವಣಬೆಳಗೊಳದ ಚಾಮುಂಡರಾಯ ಬಸದಿ, ನರಸಮಂಗಲದ ರಾಮನಾಥ ಶಿಖರಗಳನ್ನೂ ಹೋಲುವುದು.

ಈ ತ್ರಿಕೂಟಾಚಲದ ನವರಂಗದಲ್ಲಿ ಹೆಚ್ಚು ಕೆತ್ತನೆ ಕೆಲಸವಿಲ್ಲ. ಸ್ತಂಭಗಳು ಸಾಮಾನ್ಯವಾಗಿವೆ. ಮೇಲ್ಛಾವಣಿಯ ಕಲ್ಲುಗಳು ಮಧ್ಯದಿಂದ ಹರಡಿಕೊಂಡಂತಿವೆ. ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರು, ಬಲಗೈಯಲ್ಲಿ ಶಂಖ, ಎಡಗೈಯಲ್ಲಿ ದಂಡ ಹಿಡಿದಿರುವ ಐದು ಹೆಡೆ ಹಾವಿನ ಕೆಳಗಿರುವ ಧರಣೇಂದ್ರ, ಯಕ್ಷ ಚಾಮರಧಾರಿಣಿಯರು ಇರುವರು. ಸುಕನಾಸಿಯ

ಕಂಬಗಳು ಅಷ್ಟಕೋಣ ಅಥವಾ ಚತುರಸ್ರಾಕಾರವಾಗಿ ಮೇಲೆ ಕುಂಭವನ್ನು ಹೊಂದಿವೆ. ದಕ್ಷಿಣ ಗರ್ಭಗುಡಿಯಲ್ಲಿ ಸಿಂಹಪೀಠದ ಮೇಲೆ ಕುಳಿತಿರುವ ಬಳಪದಕಲ್ಲಿನ ಆದಿನಾಥವಿಗ್ರಹವಿದೆ. ಪಕ್ಕದಲ್ಲಿ ಕಣಶಿಲೆಯ ಚಾಮರಧಾರಿಣಿಯರಿರುವರು. ಬಹುಶಃ ನವರಂಗದ ನೈರುತ್ಯ ಮೂಲೆಯಲ್ಲಿಟ್ಟಿರುವ ವಿಗ್ರಹ ಮೂಲವಿಗ್ರಹವಾಗಿದ್ದು, ಈಗಿನದನ್ನು ೧೧೬೭ರಲ್ಲಿ ಗಂಗವಂಶದ ಪಾರ್ಶ್ವದೇವನು ಸ್ಥಾಪಿಸಿದ್ದಿರಬೇಕು. ದಕ್ಷಿಣ ಸುಕನಾಸಿಯಲ್ಲಿ ಏಳು ಹೆಡೆ ಹಾವಿನ ಛತ್ರವುಳ್ಳ ಆರು ಅಡಿ ಎತ್ತರದ ಎರಡು ಪಾರ್ಶ್ವನಾಥ ವಿಗ್ರಹಗಳಿವೆ. ಬಹುಶಃ ಪಾರ್ಶ್ವದೇವನು ಹೊಯ್ಸಳ ಕಾಲದಲ್ಲಿ ಎರಡು ಸ್ತಂಭಗಳನ್ನು ಯಕ್ಷಯಕ್ಷಿಣಿಯರನ್ನು ಸ್ಥಾಪಿಸಿದನು. ಯಕ್ಷಿಣಿಯ ವಿಗ್ರಹ ಸುಂದರವಾಗಿದೆ. ಪೂರ್ವ ಗರ್ಭಗುಡಿಯಲ್ಲಿ ಸಿಂಹಪೀಠದಮೇಲೆ ಕುಳಿತಿರುವ ನೇಮಿನಾಥ, ಇಬ್ಬರು ಚಾಮರ ಧರಿಸಿರುವ ಪುರುಷರೂ ಇರುವರು. ಯಕ್ಷಯಕ್ಷಿಣಿಯರು ಸುಕನಾಸಿಯಲ್ಲಿರುವರು. ಪಶ್ಚಿಮ ಗರ್ಭಗುಡಿಯಲ್ಲಿ ಕಣಶಿಲೆಯ ಕುಳಿತಿರುವ ಶಾಂತಿನಾಥ ವಿಗ್ರಹವಿದೆ. ಇದರ ಸುಕನಾಸಿಯಲ್ಲಿ ಎರಡು ಯಕ್ಷರ ವಿಗ್ರಹಗಳಿವೆ. ನವರಂಗದ ಆಗ್ನೇಯ ಮೂಲೆಯಲ್ಲಿರುವ ಯಕ್ಷಯಕ್ಷಿಣಿಯರು ಶಾಂತಿನಾಥ ಗರ್ಭಗೃಹಕ್ಕೆ ಸೇರಿದವರಾಗಿರಬೇಕು. ಮುಖಮುಂಡಪದ ಮುಂದಿರುವ ಅಷ್ಟಕೋಣ ಪೀಠದಮೇಲೆ ಅಷ್ಟದಿಕ್ಪಾಲಕರಿರುವರು.

ಈ ತ್ರಿಕೂಟಾಚಲದ ಹತ್ತು ಅಡಿ ದೂರದಲ್ಲಿ ಎದುರೆದುರಾಗಿರುವ ಎರಡು ದೇವಾಲಯಗಳಿವೆ. ಎಂಟು ಮೂಲೆಯ ಪೀಠದ ಮೇಲೆ ಪೂರ್ವ ದೇವಾಲಯವೂ, ವೃತ್ತಪೀಠದ ಮೇಲೆ ಪಶ್ಚಿಮದ ದೇವಾಲಯವೂ ಇವೆ. ಗೋಡೆಗಳ ಗೂಡುಗಳ ಮೇಲಿನ ತೋರಣಗಳು ಪುಷ್ಪಾಕಾರವಾಗಿವೆ. ಈ ಎರಡು ದೇವಾಲಯಗಳನ್ನೂ ಮಂಡಪದಿಂದ ಕೂಡಿಸಿರುವರು. ಈ ಐದು ದೇವಾಲಯಗಳು ಆವನಿ ದೇವಾಲಯಗಳನ್ನು ಹೋಲುತ್ತವೆ.

ಪಶ್ಚಿಮ ಗುಡಿಯೊಳಗಿನ ನವರಂಗದ್ವಾರದ ಮೇಲೆ ಪುಷ್ಪಪಟ್ಟಿಕೆ ಇದೆ. ಕಂಬಗಳು ಅಷ್ಟಕೋಣಾಕಾರವಾಗಿವೆ. ಮಧ್ಯದ ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕ ಧರಣೇಂದ್ರ ಯಕ್ಷರಿರುವರು. ಸುಕನಾಸಿಯಲ್ಲಿ ಯಕ್ಷಯಕ್ಷಿಣಿಯರಿಲ್ಲ. ಗರ್ಭಗುಡಿಯಲ್ಲಿ ಆಸೀನನಾದ ತೀರ್ಥಂಕರ, ಇಬ್ಬರು ಚಾಮರ ಧರಿಸಿದ ಪುರುಷರು ಇರುವರು.

ಪೂರ್ವದ ಗುಡಿಯ ಕಂಬಗಳು ವೃತ್ತಾಕಾರವಾಗಿವೆ. ಗರ್ಭ ಗುಡಿಯಲ್ಲಿ ಕುಳಿತಿರುವ ಜಿನ, ಪುರುಷಚಾಮರಧಾರಕರು ಇರುವರು. ಮುಖಮಂಡಪದ ಹತ್ತಿರ ಕಾಲುಮುರಿದ ಪಾರ್ಶ್ವನಾಥ ವಿಗ್ರಹ, ಪಶ್ಚಿಮ ದಲ್ಲಿ ಬಳಪದಕಲ್ಲಿನ ಗಜ ಇವೆ. ಉತ್ತರದಲ್ಲಿ ಕಣಶಿಲೆಯ ದ್ವಾರವಿದೆ. ಇದರ ಗೂಡುಗಳಲ್ಲಿ ಸ್ಥಾನಕ ಜಿನಮೂರ್ತಿಗಳೂ ಹೂವಿನ ತೋರಣಗಳೂ ಹಂಸಗಳ ಸಾಲೂ ಇವೆ. ಈ ಪಂಚಕೂಟ ಬಸದಿಯು ಕೊಂಡಕುಂದಾ ನ್ವಯ ಮೂಲಸಂಘ ದೇಶಿಗಣ ಪುಸ್ತಕಗಚ್ಛಕ್ಕೆ ಸೇರಿದ್ದಿತು.

ಶಾಂತಿನಾಥ ಬಸದಿ, ಪಂಚಕೂಟ ಬಸದಿಯ ಉತ್ತರದಲ್ಲಿ ಎದುರೆದು ರಾಗಿರುವ ಎರಡು ದೇವಾಲಯಗಳಿವೆ. ಪೀಠವು ಎತ್ತರವಾಗಿ ದುಂಡಾದ ಕಾರ್ನಿೀಸು ಹೊಂದಿದೆ. ಆನೆ ಕುದುರೆ ಯಾಳಿ ಸಿಂಹಗಳ ಸಾಲು ಮತ್ತಾವ ಹೊಯ್ಸಳ ಶಿಲ್ಪದಲ್ಲೂ ಇಲ್ಲದಷ್ಟು ಸುಂದರವಾಗಿದೆ. ಉತ್ತರ ದ್ವಾರದಿಂದ ಆರಂಭಿಸಿ ಪ್ರದಕ್ಷಿಣೆಯಾಗಿ ಉತ್ತರಮುಖದಲ್ಲಿ–ಟಗರುಕೊಂಬುಳ್ಳ ಸಿಂಹ ಯಾಳಿಯೊಡನೆ ಯುದ್ಧಮಾಡುತ್ತಿರುವುದು ; ಸಿಂಹಗಳು ಮಕರಗಳು ; ಆನೆ ಯುದ್ಧ ; ಪೂರ್ವಮುಖದಲ್ಲಿ – ಕುದುರೆಸವಾರರು, ಸಿಂಹಗಳು ; ದಕ್ಷಿಣದಲ್ಲಿ–ಆನೆಯಮೇಲೆ ಎರಡು ಸಿಂಹಗಳು ಬೀಳುತ್ತಿರುವುದು ; ಇಬ್ಬರು ರಾಜಪುರುಷರು ಮತ್ತು ಪರಿವಾರ ; ಆನೆಗಳ ಕಾಳಗ ; ಕುದುರೆ ಸಿಪಾಯಿಗಳು; ಸಿಂಹ, ಮಕರ, ಆನೆಗಳು; ಪಶ್ಚಿಮ ಮುಖದಲ್ಲಿ–ಯುದ್ಧ, ಗಂಡು-ಹೆಣ್ಣು ಕುದುರೆಗಳು, ಅಶ್ವದಳದ ಯುದ್ಧ, ಆನೆ ಕುದುರೆ ಸವಾರ ನನ್ನು ಎಳೆಯುತ್ತಿರುವುದು ; ಉತ್ತರದಲ್ಲಿ ಆನೆಯ ಮೇಲೆ ಕುಳಿತು ಸಿಂಹವನ್ನು ಬೇಟೆಯಾಡುವುದು, ಎರಡು ಗೂಳಿಗಳೂ, ಎರಡು ಕುದುರೆ ಗಳೂ, ಎರಡು ಯಾಳಿಗಳೂ ಇವೆ.

ಎರಡು ದೇವಾಲಯಗಳ ಮಧ್ಯೆ ಜಗತಿ ಇದೆ. ಪಶ್ಚಿಮ ಗುಡಿಯ ಮೇಲ್ಭಾಗವನ್ನು ಕಣಶಿಲೆಯಿಂದಲೂ ಇತರ ಗೋಡೆಗಳನ್ನು ೧೧×೬×೨ ಅಂಗುಲ ಪ್ರಮಾಣದ ಇಟ್ಟಿಗೆಗಳಿಂದಲೂ ಕಟ್ಟಿರುವರು.

ಉತ್ತರದ ನವರಂಗದ ದ್ವಾರದಮೇಲೆ ಗಂಗರಾಜನ ಮಗನಾದ ಬೊಪ್ಪನ ಶಾಸನವಿದೆ. “ ದ್ರೋಹಘರಟ್ಟ ದಣ್ಣನಾಯಕ ಗಂಗರಾಜನ ಮಗ ಬೊಪ್ಪ ದೇವರಿಗೆ ರೂವಾರಿ ದ್ರೋಹಘರಟ್ಟಾಚಾರಿ ಕನ್ನೆವಸದಿಯಂ

ಮಾಡಿದ || ಮಂಗಳ ಮಹಾಶ್ರೀ." ಬೊಪ್ಪನು ಹಳೆಯಬೀಡಿನ ವಿಜಯ ಪಾರ್ಶ್ವಬಸದಿ(ಆದಿನಾಥ?)ಯನ್ನು ೧೧೩೩ರಲ್ಲಿ ಮಾಡಿಸಿದನು. ಕಂಬದ ಹಳ್ಳಿಯ ಬಸದಿಯನ್ನು ಕನ್ನೆ(ಮೊದಲ) ಬಸದಿ ಎಂದು ಕರೆದಿರುವುದರಿಂದ ಸುಮಾರು ೧೧೩೦ರಲ್ಲಿ ಮಾಡಿಸಿರಬಹುದು. ದ್ರೋಹಘರಟ್ಟ ಎಂಬುದು ಗಂಗರಾಜನ ಬಿರುದಾಗಿದ್ದಿತು. ಅವನ ಶಿಲ್ಪಿಗೂ ದ್ರೋಹಘರಟ್ಟಾಚಾರಿ ಎಂಬ ಬಿರುದು ಬಂದಿರಬಹುದು. ನವರಂಗದ ದ್ವಾರದ ಕಂಬಗಳ ಮೇಲೆ ಲತಾಪಟ್ಟಿಕೆಗಳಿವೆ.

ಪಶ್ಚಿಮದ ಗುಡಿ ಶಾಂತಿನಾಥ ಬಸದಿ ೨೦ ಚದರಡಿಯ ಗರ್ಭ ಗೃಹದ ಮೇಲ್ಛಾವಣಿಯಲ್ಲಿ ಪದ್ಮಗಳೂ, ನಾಲ್ಕು ಅಷ್ಟಕೋಣ ಸ್ತಂಭಗಳೂ ಇವೆ. ಅಷ್ಟಕೋಣದ ಪೀಠದಲ್ಲಿ ದಿಕ್ಪಾಲಕರಿರುವರು. ಪೀಠದ ಮೇಲೆ ಸುಮಾರು ಹತ್ತು ಅಡಿ ಎತ್ತರದ ಸುಂದರವಾದ ಶಾಂತಿನಾಥ ವಿಗ್ರಹ ನಿಂತಿದೆ. ಇದಕ್ಕೆ ಆಮೇಲೆ ಸೇರಿಸಿದ ಒಂಬತ್ತಂಕಣಗಳ ನವರಂಗದಲ್ಲಿ ನಾಲ್ಕು ಹೊಯ್ಸಳ ರೀತಿಯ ಬಳಪದಕಲ್ಲಿನ ಕಂಬಗಳಿವೆ. ನವರಂಗದ ಆಗ್ನೇಯ ಮೂಲೆಯಲ್ಲಿ ಪದ್ಮ ಪರಶು ಅಕ್ಷಮಾಲಾ ಫಲ ಹಿಡಿದ ಯಕ್ಷವಿಗ್ರಹ ಮಗುಚಿಹಾಕಿದ ವೃಷಭಪೀಠದ ಹತ್ತಿರ ಇದೆ. ದಕ್ಷಿಣದಲ್ಲಿ ದೊಡ್ಡದಾದ ಬಳಪದಕಲ್ಲಿನ ನೇಮಿನಾಥ ಆಸೀನಮೂರ್ತಿ ಇದೆ. ತಲೆಯ ಹಿಂದೆ ಪ್ರಭಾವಳಿ, ಹಿಂದುಗಡೆ ಇಬ್ಬರು ಚಾಮರಧರರು ಇರುವರು. ಧ್ಯಾನಾಸನದಲ್ಲಿ ಕುಳಿತ ಜಿನ, ಅದರ ಹಿಂದೆ ಲತಾತೋರಣ ದಲ್ಲಿ ನರ್ತಿಸುತ್ತಿರುವ ಯಕ್ಷರು ಇರುವರು. ಗರುಡಪೀಠದಮೇಲೆ ಅಭಯ ಚಕ್ರಪದ್ಮ ಹಿಡಿದಿರುವ ಯಕ್ಷಿ (ಪದ್ಮಾವತಿ ?) ಚೋಳ ವಿಗ್ರಹಗಳಂತೆ ಬಹಳ ಸುಂದರವಾಗಿದೆ.

ಗರ್ಭಗುಡಿಯ ತೊಲೆಯ ಮೇಲೆ ವೀರರಾಜೇಂದ್ರನ ಶಾಸನವಿದೆ. ಆಗ್ನೇಯ ಸ್ತಂಭದಮೇಲೆ ಹದಿನಾಲ್ಕನೆಯ ಶತಮಾನದ ಶಾಸನವಿದೆ. ಮೊದಲಿನ ಸುಕನಾಸಿದ್ವಾರದ ಹತ್ತಿರ ಅಷ್ಟಕೋಣ ಪೀಠ, ಎರಡು ದ್ವಾರಪಾಲ ವಿಗ್ರಹಗಳೂ ಇವೆ. ದ್ವಾರಪಾಲಕರು ಈಗ ನವರಂಗದ್ವಾರದ ಪೂರ್ವದಲ್ಲಿರುವರು. ಇವುಗಳಲ್ಲಿ ದಕ್ಷಿಣ ದ್ವಾರಪಾಲಕನು ಅಭಯ, ಸರ್ಪ, ಘಂಟಾ–ತ್ರಿಶೂಲ ಎತ್ತಿದ ಕೈ, ತ್ರಿಶೂಲ, ಗದಾ ಹಿಡಿದು ಮೈಯನ್ನು

ಚೋಳರೀತಿಯಲ್ಲಿ (ಕಿತ್ತೂರು) ತಿರುಗಿಸಿಕೊಂಡಿರುವನು. ಉತ್ತರದ ದ್ವಾರಪಾಲಕನು ಹಿಂದಿನ ಕೈಗಳಲ್ಲಿ ತ್ರಿಶೂಲ, ಸರ್ಪ, ಮುಂದಿನ ಕೈಯನ್ನು ಗದೆಯ ಮೇಲೆ ಹೊಂದಿ ಬಲಗಾಲನ್ನು ಎಡಗಾಲ ಹಿಂದೆ ಇಟ್ಟುಕೊಂಡಿರುವನು. ಎರಡಕ್ಕೂ ದೀರ್ಘಕೇಶ, ಕಿರೀಟ, ಕಿವಿಗಳಲ್ಲಿ ಓಲೆ ಇವೆ. ಇವುಗಳ ಮಧ್ಯದಲ್ಲಿರುವ ದ್ವಾರದಮೇಲೆ ಮನ್ಮಥ ರತಿಗಳಿರುವರು.

ಇದಕ್ಕೆ ಪೂರ್ವದಲ್ಲಿ ಮತ್ತೊಂದು ಬಸದಿ ಇದೆ. ಇದರ ನವರಂಗ ದಲ್ಲಿ ಹಳೆಯ ರೀತಿಯ ಸ್ತಂಭಗಳಿವೆ. ಇದರ ಹಿಂಭಾಗದ ಗೋಡೆಯನ್ನು ತೆಗೆದು ಪೂರ್ವ ದ್ವಾರ ಮಾಡಿರುವರು. ನವರಂಗದ ಮಧ್ಯದಲ್ಲಿರುವ ಭುವನೇಶ್ವರಿ ಸುಂದರವಾಗಿದೆ. ಅಷ್ಟದಿಕ್ಪಾಲಕರು, ತೊಲೆಗಳು ಸಂಧಿಸು ವಲ್ಲಿ ನಾಲ್ವರು ಗಂಧರ್ವರು ಪುಷ್ಪಮಾಲೆಗಳನ್ನು ಹಿಡಿದಿರುವರು (ಅರಳಗುಪ್ಪೆ ಕಲ್ಲೇಶ್ವರ ದೇವಾಲಯದಂತೆ). ಮಧ್ಯ ಫಲಕದಲ್ಲಿ ಯಕ್ಷ ಯಕ್ಷಿ ಗಂಧರ್ವರ ನಡುವೆ ಸಿಂಹಪೀಠ, ಅದರ ಹಿಂದೆ ಗಜಗಳು ಇವೆ. ಸಿಂಹಪೀಠದ ಮೇಲೆ ಪ್ರಭಾವಳಿ ಮುಕ್ಕೊಡೆ ಹೊಂದಿರುವ ಜಿನ ವಿಗ್ರಹವಿದೆ. ಜಿನನಿಗೆ ಬುದ್ಧನಿಗಿರುವಂತೆ ಊರ್ಣಕೇಶವಿದೆ.

ಪಂಚಕೂಟ ಬಸದಿಯ ಉತ್ತರದಲ್ಲಿ ಎತ್ತರವಾದ ಜಗತಿಯ ಮೇಲೆ ಅಷ್ಟದಿಕ್ಪಾಲಕರಿರುವ ಅಷ್ಟಕೋಣ ಪೀಠವಿದೆ. ಇದರ ಮೇಲೆ ಬಳಪದ ಕಲ್ಲಿನ ಮಾನಸ್ತಂಭವಿದೆ. ಚತುರಸ್ರ, ಅಷ್ಟಾಸ್ರ, ಷೋಡಶಾಸ್ರ, ವೃತ್ತ, ಕಮಲಮಣಿ ಲತಾಪಟ್ಟಿಕೆಗಳೂ, ಚಕ್ರ, ಚತುರಸ್ರ, ಇದರಮೇಲೆ ಬ್ರಹ್ಮ ಯಕ್ಷನು ಪೂರ್ವಾಭಿಮುಖವಾಗಿ ಆಸೀನನಾಗಿರುವನು. ಈ ಕಂಬ ದಿಂದಲೇ ಈ ಊರಿಗೆ ಕಂಬದಹಳ್ಳಿ ಎಂಬ ಹೆಸರುಬಂದಿದೆ.

೪೧. ಬಿಂಡಿಗನವಲೆ: ನಗರೇಶ್ವರ ದೇವಾಲಯ ಸಾಮಾನ್ಯ ವಾಗಿದೆ. ಗರ್ಭಗೃಹದ ಲಿಂಗ, ನವರಂಗದ ಬಳಪದ ಕಲ್ಲಿನ ನಾಲ್ಕು ಕಂಬಗಳು ಪ್ರಾಚೀನವಾದವು. ಕೇಶವ ದೇವಸ್ಥಾನ ವಿಜಯನಗರ ಕಾಲದ್ದಾಗಿ ಕಂಡುಬರುತ್ತದೆ. ಗರ್ಭಗೃಹದ ದ್ವಾರ ಹೊಯ್ಸಳ ಕಾಲದ್ದು. ಬಹುಶಃ ಹೊಯ್ಸಳರ ಅಂತ್ಯದಶೆಯಲ್ಲಿ ನಿರ್ಮಿತವಾಯಿತು.

೪೨. ನಾಗಲಾಪುರ: ಮಾಯಿಸಂದ್ರಕ್ಕೆ ಐದು ಮೈಲಿ ದಕ್ಷಿಣದಲ್ಲಿರುವ

ನಾಗಲಾಪುರ ಹದಿಮೂರನೆಯ ಶತಮಾನದ ಉತ್ತರ ಭಾಗದಲ್ಲಿ ಪ್ರಸಿದ್ಧವಾದ ಅಗ್ರಹಾರವಾಗಿದ್ದಿತು. ಇಲ್ಲಿನ ಚನ್ನಕೇಶವ ಮತ್ತು ಕೇದಾರೇಶ್ವರ ದೇವಾಲಯಗಳು ಈಗ ಖಿಲವಾಗಿದ್ದರೂ ಸುಂದರವಾಗಿವೆ.

ಹಳೆಯ ಅಗ್ರಹಾರದ ಮಧ್ಯದಲ್ಲಿ ಚೆನ್ನಕೇಶವ ದೇವಾಲಯವು ನಕ್ಷತ್ರಾಕಾರದ ಜಗತಿಯ ಮೇಲಿದೆ. ಪೀಠಪೆಮೇಲೆ ಆರು ಸಾಲು ಚಿತ್ರಪಟ್ಟಿಕೆಗಳಿವೆ. ಆನೆ, ಕುದುರೆಸವಾರರು, ಲತೆ, ಪೌರಾಣಿಕ ಕಥೆಗಳಿಗಾಗಿ ಖಾಲಿಯಾದ ಪಟ್ಟಿ ಮಕರ ಹಂಸಗಳು ಸೋಮನಾಥಪುರದಂತೆ ಇವೆ. ಹೊರಗಿನ ನವರಂಗದ ಗೋಡೆಯು ಆಗ್ನೇಯ ಈಶಾನ್ಯ ಮೂಲೆಗಳಲ್ಲಿ ಮಾತ್ರ ಈಗ ಕಂಡುಬರುವುದು. ಗೋಡೆಯ ಮೇಲೆ ಗೂಡುಗಳಲ್ಲಿ ಶಿಖರಗಳ ಕೆಳಗೆ ವಿಗ್ರಹಗಳಿವೆ. ನವರಂಗದ ಆಗ್ನೇಯ ಮೂಲೆಯಲ್ಲಿ ನೃತ್ಯಗಣೇಶ, ಅಮರನಾರಾಯಣ–ಗರುಡ, ಸ್ಥಾನಕವಿಷ್ಣು. ಸುಕನಾಸಿ, ದಕ್ಷಿಣದಲ್ಲಿ ಪದ್ಮ ಗದಾ ಶಂಖ ಚಕ್ರ ಧರಿಸಿದ ವಿಷ್ಣು, ಹಣ್ಣಿಗಾಗಿ ಕಾದಾಡುವ ಎರಡು ಕಪಿಗಳು, ಗೋವರ್ಧನಧಾರಿ, ಯೋಗನಾರಾಯಣ, ಇಂದ್ರ–ಐರಾವತ, ಗರುಡನಮೇಲೆ ಕೃಷ್ಣ ಸತ್ಯಭಾಮಾ, ನಿಂತಿರುವ ವಿಷ್ಣು, ನೃತ್ಯಮಾಡುವ ಅಷ್ಟಭುಜದೇವಿ, ಪದ್ಮಚಕ್ರಗದಾಶಂಖ ಹಿಡಿದ ವಿಷ್ಣು ಮತ್ತು ಪತ್ನಿಯರು, ನೃತ್ಯಸರಸ್ವತಿ, ಶ್ಮಶ್ರುಧರಿಸಿದ ಬ್ರಹ್ಮ, ಗದಾಚಕ್ರಪದ್ಮ ಶಂಖ ಧರಿಸಿದ ವಿಷ್ಣು, ಮೋಹಿನಿ–ಕಪಿ, ಅಕ್ಷಮಾಲಾ ಚಕ್ರಶಂಖ ಪುಸ್ತಕ ಹಿಡಿದ ಹಯಗ್ರೀವ, ವಿಷ್ಣು (ಪದ್ಮಶಂಖಗದಾಚಕ್ರ), ಕತ್ತಿ ತ್ರಿಶೂಲ ಡಮರು ಪಾತ್ರೆ ಹಿಡಿದು ದೈತ್ಯನನ್ನು ತುಳಿಯುತ್ತ ಕುಳಿತಿರುವ ದುರ್ಗಾ, ವಿಷ್ಣು (ಗದಾಶಂಖಚಕ್ರಪದ್ಮ), ಯೋಗ ನಾರಾಯಣ (ಹಿಂದಿನ ಕೈಗಳಲ್ಲಿ ಶಂಖ ಚಕ್ರ ಹಿಡಿದು ಮುಂದಿನ ಕೈಗಳನ್ನು ಒಂದರಮೇಲೊಂದು ಇಟ್ಟುಕೊಂಡು ಪದ್ಮಾಸನದಲ್ಲಿ ಕುಳಿತಿರುವನು), ವಿಷ್ಣು (ಶಂಖ ಚಕ್ರ ಗದಾಪದ್ಮ), ಉಗ್ರನರಸಿಂಹ, ಸ್ಥಾನಕ ವಿಷ್ಣು, ಸರಸ್ವತಿ (ಆಸೀನ ಅಕ್ಷಮಾಲಾ ಅಂಕುಶ ಪಾಶ ಪುಸ್ತಕ), ಸ್ಥಾನಕ ವಿಷ್ಣು, ಧರಣೀವರಾಹ, ಗರುಡನಮೇಲೆ ಲಕ್ಷ್ಮೀ–ನಾರಾಯಣ, ವೇಣುಗೋಪಾಲ ಮತ್ತು ಗರುಡ, ಪದ್ಮ ಗದಾ ಶಂಖ ಚಕ್ರ ಹಿಡಿದ ಸ್ಥಾನಕವಿಷ್ಣು ಮತ್ತು ದೇವಿ, ಕೆಳಗೆ ಬಿದ್ದಿರುವ ನರಸಿಂಹ, ಸ್ಥಾನಕ ವಿಷ್ಣು (ಭಗ್ನ ಪದ್ಮ ಚಕ್ರ ಶಂಖ).

ಈಶಾನ್ಯದ ಮೂಲೆಯಲ್ಲಿ–ನೃತ್ಯಮೋಹಿನಿ, ದ್ವಿಭುಜ ವಿಷ್ಣು (ಧನ್ವಂತರಿ ?), ಮೇಲೆ ಚಕ್ರ ಶಂಖ, ಹಣದ ಚೀಲಗಳನ್ನು ಹಿಡಿದು ನಿಂತಿರುವ ವಿಠಲ ಮತ್ತು ದೇವಿಯರು, ನಿಲುವಂಗಿ ಹಾಕಿಕೊಂಡಿರುವ ದಕ್ಷಿಣಾಮೂರ್ತಿ ವಿಗ್ರಹಗಳಿವೆ.

ನವರಂಗದಲ್ಲಿರುವ ನಾಲ್ಕು ಸುಂದರವಾದ ಕಂಬಗಳ ಮೇಲೆ ಕೆತ್ತನೆ ಕೆಲಸ ಚೆನ್ನಾಗಿದೆ. ಬೋದಿಗೆ ಮೇಲೆ ಸಿಂಹಮುಖಗಳೂ, ಸಿಂಹಗಳ ವೀರರೂ ಇರುವರು. ಇದರ ಮೇಲೆ ಬಹುಶಃ ಮದನಿಕೆ ವಿಗ್ರಹ ಗಳಿದ್ದವು. ಮೇಲ್ಛಾವಣಿಗಳಲ್ಲಿ ರೇಖಾಚಿತ್ರಗಳಿವೆ. ಮಧ್ಯದ ಭುವನೇಶ್ವರಿ ಯಲ್ಲಿ ಮೂಲೆಗಳಲ್ಲಿ ಅಷ್ಟದಿಕ್ಪಾಲಕರೂ, ಮಧ್ಯದಲ್ಲಿ ತೂಗಾಡುವ ಕಮಲದ ಮೊಗ್ಗು ಇವೆ. ಪಶ್ಚಿಮದ ಗೋಡೆಯಲ್ಲಿ ಎರಡು ಶಿಖರ ಸಹಿತವಾದ ಗೂಡುಗಳಿವೆ. ಈಗ ಅವು ಖಾಲಿಯಾಗಿವೆ.

ಸುಕನಾಸಿ ದ್ವಾರದಲ್ಲಿ ಜಾಲಂದ್ರ, ದ್ವಾರಪಾಲಕ, ಮೇಲೆ ಅಮರ ನಾರಾಯಣ, ಅದರಮೇಲೆ ನೃತ್ಯಮಾಡುವ ವಿಷ್ಣು ವಿಗ್ರಹಗಳಿವೆ. ಸುಕ ನಾಸಿಯ ಮೇಲ್ಛಾವಣಿಯಲ್ಲಿ ಅಷ್ಟದಿಕ್ಪಾಲಕರು, ಪದ್ಮವೂ ಇವೆ. ಗರ್ಭ ಗುಡಿಯಲ್ಲಿ ಅಂತಹ ಮೇಲ್ಛಾವಣಿಯ ಕೆಳಗೆ ಮೊದಲು ಚೆನ್ನಕೇಶವ ವಿಗ್ರಹವಿದ್ದಿತು. ಈಗ ವಿಜಯನಗರ ಕಾಲದ ಐದಡಿ ಎತ್ತರದ ವೆಂಕಟೇಶ ವಿಗ್ರಹವಿದೆ. ಪ್ರಭಾವಳಿಯಲ್ಲಿ ಲತಾಪಟ್ಟಿಕೆ, ಪಕ್ಕಗಳಲ್ಲಿ ದೇವಿಯರು ಇರುವರು. ವೆಂಕಟೇಶನು ದಾನ ಚಕ್ರ ಶಂಖ ಕಟಿಹಸ್ತನಾಗಿರುವನು.

ಕೇದಾರೇಶ್ವರ ದೇವಾಲಯ ಚೆನ್ನಕೇಶವ ದೇವಸ್ಥಾನಕ್ಕೆ ಈಶಾನ್ಯ ದಲ್ಲಿದೆ. ಇದರ ವಿಗ್ರಹಗಳು ಆ ದೇವಾಲಯದ ವಿಗ್ರಹಗಳಿಗಿಂತಲೂ ಚೆನ್ನಾಗಿವೆ. ನಕ್ಷತ್ರಾಕಾರದ ಜಗತಿಯ ಮೇಲೆ ಹದಿನಾರು ಕೋಣಗಳ ನಕ್ಷತ್ರದಂತೆ ಗರ್ಭಗುಡಿ ಇದೆ. ಪೂರ್ವದಲ್ಲಿ ದ್ವಾರವಿದೆ. ಮುಖಮಂಡಪ ಹೋಗಿದೆ. ನವರಂಗದ ಗೋಡೆಯ ಪೀಠದಲ್ಲಿ ಆರು ಚಿತ್ರಪಟ್ಟಿಕೆಗಳ ಸಾಲುಗಳಲ್ಲಿ ಆನೆ, ಅಶ್ವಾರೋಹಕರು, ಲತೆ, ಖಾಲಿ, ಮಕರ, ಹಂಸ ಗಳಿವೆ. ಗೂಡುಗಳಲ್ಲಿ ಲತಾಪೀಠಗಳಮೇಲೆ ವಿಗ್ರಹಗಳಿವೆ. ಪೂರ್ವದಿಂದ ಪ್ರದಕ್ಷಿಣ ರೀತಿಯಲ್ಲಿ ದಕ್ಷಿಣ ಗೋಡೆ–ಅರ್ಜುನ ಮತ್ಸ್ಯಯಂತ್ರ, ಆನೆಯಾಳಿ, ಗಜಾಸುರ ಮರ್ದನ, ವಿಷ್ಣು, ಶಿವಪಾರ್ವತಿ, ಬ್ರಹ್ಮ-

ಪತ್ನಿ, ಎರಡು ಕಪಿಗಳು, ತ್ರಿಶೂಲ ಡಮರು ಹಿಡಿದ ಸದಾಶಿವ, ಪಕ್ಕದಲ್ಲಿ ಬ್ರಹ್ಮ ವಿಷ್ಣು, ಮಹಿಷದ ಮೇಲೆ ಯಮ, ಶಿವ (ಪರಶು ಹರಿಣ), ಭಿಕ್ಷಾಟನ ಮೂರ್ತಿ (ಜಿಂಕೆ ಡಮರುಗ ದಂಡ ಪಾತ್ರ) ಮತ್ತು ದೇವಿ, ತ್ರಿಪಾದ ಭೃಂಗಿ, ಭೈರವ–ಭೈರವಿ, ತ್ರಿಪುರಾರಿ (? ಬಾಣ ಪರಶು, ಜಿಂಕೆ, ಪಾತ್ರೆ) ಮತ್ತು ದೇವಿ, ಆಸೀನದುರ್ಗಾ (ಕತ್ತಿ ತ್ರಿಶೂಲ ಡಮರು ಪಾತ್ರ ಮತ್ತು ಕಪಾಲ), ಸ್ಥಾನಕ ಶಿವ (ತ್ರಿಶೂಲ ಕಮಲ ಅಂಕುಶ ?).

ಪಶ್ಚಿಮ ಗೋಡೆ–ನಿರ್ಋತಿ, ಗಣಪತಿ–ಮೂಷಕ, ಮಹಿಷಮರ್ದಿನಿ, ಸುಖಾಸನದಲ್ಲಿ ದೇವ, ತಾಂಡವಶಿವ, ಸಂಧ್ಯಾತಾಂಡವ ?, ಆಸೀನಶಿವ (ರುಂಡಮಾಲಾ, ಕತ್ತಿ ತ್ರಿಶೂಲ ಡಮರು ಪಾತ್ರೆ), ಮಕರದ ಮೇಲೆ ವರುಣ, ಉಮಾಮಹೇಶ್ವರ.

ಉತ್ತರಗೋಡೆ-ಭಿಕ್ಷಾಟನಮೂರ್ತಿ, ಷಣ್ಮುಖ, ದ್ವಿಭುಜಶಿವ (ಪರಶು ಹರಿಣ), ಕುಬೇರ, ಸರಸ್ವತಿ, ಕಪಾಲಿ ಶಿವ, ಸ್ಥಾನಕಶಿವ (ಡಮರು ಅಗ್ನಿ), ನಗ್ನಮೋಹಿನಿ–ಸರ್ಪ, ಈಶಾನ, ಶಿವ, ಪಾರ್ವತಿ (ಅಕ್ಷಮಾಲಾ ತ್ರಿಶೂಲ ಪಾಶ ಫಲ), ತ್ರಿಭಂಗದಲ್ಲಿ ತ್ರಿಪುರಾರಿ (ಅಕ್ಷಮಾಲಾ, ಬಾಣ, ಧನುಸ್ ತರ್ಜನೀ), ಕುಬೇರ, ಭೈರವ–ನಾಯಿ, ನೃತ್ಯದುರ್ಗಾ.

ಈಶಾನ್ಯದ ಮೂಲೆ–ನಂದಿಯ ಮೇಲೆ ಉಮಾಮಹೇಶ್ವರ.

ಪೂರ್ವದ ಗೋಡೆ–ಮನ್ಮಥ.

ಅನೇಕ ವಿಗ್ರಹಗಳು ಕೆಳಗೆ ಬಿದ್ದಿವೆ. ಪೂರ್ವದಲ್ಲಿ ಇಂದ್ರನ ವಿಗ್ರಹ ಬಿದ್ದಿದೆ. ನವರಂಗದ ಮೇಲ್ಚಾವಣಿ ಕಂಬಗಳು ಕೇಶವದೇವಾಲಯ ದಲ್ಲಿದ್ದಂತೆ ಇವೆ. ನವರಂಗದಲ್ಲಿ ಪೂರ್ವದಿಂದ ಈ ವಿಗ್ರಹಗಳಿವೆ: ಸಪ್ತ ಮಾತೃಕಾ ವೀರಭದ್ರ ಗಣಪತಿ, ದಕ್ಷಿಣ ಗೂಡಿನಲ್ಲಿ ಗಣಪತಿ, ಉತ್ತರ ಗೂಡಿನಲ್ಲಿ ಸುಂದರವಾದ ಮಹಿಷಮರ್ದಿನಿ, ಷಣ್ಮುಖ, ಕೇಶವ, ಸೂರ್ಯನಾರಾಯಣ (ಅಭಯ ಪದ್ಮ, ಪದ್ಮ ದಾನ), ನಂದಿ.

ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರು, ಯಕ್ಷ ಯಕ್ಷಿಣಿಯರು, ಕಮಲ ಇವೆ. ನವರಂಗದ ಉತ್ತರ ಗೋಡೆಯ ಮೇಲೆ ಈಚೆಗೆ ವೇಣು ಗೋಪಾಲ, ಛತ್ರಿಹಿಡಿದ ಹನುಮಂತನನ್ನು ಬರೆದು ಕೆಳಗೆ " ಶೀಬಿ ನರಸುಮ್ಹುಸ್ವಾಮಿ " ಎಂದು ಬರೆದಿದೆ.

ಸುಕನಾಸಿ ದ್ವಾರದಲ್ಲಿ ಜಾಲಂದ್ರ ದ್ವಾರಪಾಲಕರು, ಉಮಾ ಮಹೇಶ್ವರ, ಅದರಮೇಲೆ ತಾಂಡವೇಶ್ವರ, ದಿಕ್ಪಾಲಕರು ಇರುವರು. ಗರ್ಭ ಗೃಹದ ದ್ವಾರದಲ್ಲಿ ಕೆಳಗೆ ತಾಂಡವೇಶ್ವರ ಅದರಮೇಲೆ ಸಿಂಹಮುಖ ಇವೆ. ದೊಡ್ಡ ಪಾಣಿಪೀಠದಮೇಲೆ ಹಳೆಯಬೀಡಿನ ಕೇದಾರೇಶ್ವರ ಲಿಂಗ ದಂತಿರುವ ಕೋಣಶಿರೋಭಾಗವುಳ್ಳ ಲಿಂಗವಿದೆ.

೪೩. ನೊಣವಿನಕೆರೆ: ತಿಪಟೂರಿಗೆ ಆಗ್ನೇಯದಲ್ಲಿ ಎಂಟು ಮೈಲಿ ದೂರವಿರುವ "ನೊಣಬನಕೆರೆ" ನೊಳಂಬರ ಕಾಲದಲ್ಲಿ ಪ್ರಸಿದ್ಧ ಪಟ್ಟಣವಾಗಿದ್ದಿತು. ಪಂಚಲಿಂಗ ದೇವಾಲಯಗಳಾದ ನೊಣಬೇಶ್ವರ, ಶಾಂತೇಶ್ವರ, ಗರಿಗೇಶ್ವರ, ಚೋಳೇಶ್ವರ ಮತ್ತು ಕಲ್ಲೇಶ್ವರ ನೊಳಂಬರ ಕಾಲಕ್ಕೆ ಸೇರಿವೆ. ವೇಣುಗೋಪಾಲ ದೇವಾಲಯ ಹೊಯ್ಸಳ ಕಾಲಕ್ಕೂ ಬೇಟೇಶ್ವರ ವಿಜಯನಗರ ಕಾಲಕ್ಕೂ ಸೇರಿವೆ. ತರೀಕೆರೆ ರಸ್ತೆ ಹತ್ತಿರ ನೊಣಬೇಶ್ವರ ಮತ್ತು ಗರಿಗೇಶ್ವರ ಅಕ್ಕಪಕ್ಕಗಳಲ್ಲಿವೆ. ನೊಣಬೇಶ್ವರ ಗುಡಿ ಯನ್ನು ಮೊದಲು ಕಣಶಿಲೆಯಿಂದ ಕಟ್ಟಿದ್ದು, ಇತ್ತೀಚೆಗೆ ಇಟ್ಟಿಗೆಗಳಿಂದ ಕಟ್ಟಲಾಗಿದೆ. ಸಣ್ಣ ಗರ್ಭಗುಡಿಯಲ್ಲಿ ಚಪ್ಪಟೆ ತಲೆಯುಳ್ಳ ಲಿಂಗವಿದೆ. ಸುಕನಾಸಿಯ ಎರಡು ಕಂಬಗಳು, ನವರಂಗದ ನಾಲ್ಕು ಕಂಬಗಳು, ಚತುರಸ್ರ ಅಷ್ಟಕೋಣ ಕುಂಭಾಕಾರ, ಕಂಠದಮೇಲೆ ಚಕ್ರಗಳನ್ನು ಹೊಂದಿವೆ. ನವರಂಗದ ಮೇಲ್ಚಾವಣಿಯಲ್ಲಿ ಒಂಬತ್ತು ಫಲಕಗಳೂ ಮಧ್ಯದಲ್ಲಿ ಪದ್ಮವೂ ಇವೆ. ನವರಂಗದ ದ್ವಾರದಮೇಲೆ ಲಾಳದ ಆಕಾರದ ಕೀರ್ತಿಮುಖಗಳು, ಲತಾಪಟ್ಟಿಕೆ, ಮೇಲೆ ನಾಲ್ಕು ಅಂತಹ ಕೀರ್ತಿ ಮುಖಗಳೂ ಇವೆ. ಪಕ್ಕದಲ್ಲಿರುವ ಗರಿಗೇಶ್ವರವು ಇದೇ ರೀತಿಯಲ್ಲಿದೆ. ಸುಕನಾಸಿಯ ಪೂರ್ವದ ಮೂಲೆಯಲ್ಲಿರುವ ಸಣ್ಣ ಕಂಬಗಳು ಚತುರಸ್ರ ವಾಗಿದ್ದು ವೃತ್ತ ಪದ್ಮಗಳನ್ನು ಹೊಂದಿವೆ. ಈ ದೇವಾಲಯಗಳ ಮಧ್ಯೆ ಇರುವ ಜಗತಿಯ ಮೇಲೆ ಸಪ್ತಮಾತೃಕಾ ಮಹೇಶ್ವರಿ ವೈಷ್ಣವೀ ಬ್ರಾಹ್ಮೀ ಶಿವ ಕಪಾಲೀ ಮತ್ತು ಸರ್ಪಛತ್ರ, ಆಗ್ನೇಯದಲ್ಲಿರುವ ಹೊಲದಲ್ಲಿ ಚಾಮುಂಡಾ ಇಂದ್ರಾಣೀ? ಕೌಮಾರೀ ವಾರಾಹೀ, ಎರಡು ನಂದಿ, ಭೈರವ ವಿಗ್ರಹಗಳಿವೆ. ಗರಿಗೇಶ್ವರದ ಹಿಂದೆ ಶಾಂತೀಶ್ವರ ಸಾಧಾರಣ ವಾಗಿದೆ. ಆದರೆ ನವರಂಗದ ಕಂಬಗಳು ಹೆಚ್ಚು ಅಲಂಕೃತವಾಗಿವೆ.

ಇಲ್ಲಿರುವ ನಂದಿಗೆ ಉದ್ದವಾದ ಗಂಟೆಗಳ ಸರ, ಪದ್ಮವುಳ್ಳ ಪಟ್ಟಿ ಇವೆ. ನೊಣವಿನಕೆರೆಯ ಕೋಡಿಯ ಹತ್ತಿರ ಇರುವ ಕಲ್ಲೇಶ್ವರ ಸಣ್ಣ ಗರ್ಭ ಗುಡಿಯಲ್ಲಿ ಲಿಂಗ, ಸುಕನಾಸಿ ನವರಂಗಗಳನ್ನು ಹೊಂದಿದೆ. ನವರಂಗದ ಕಂಬ ಅಷ್ಟಾಸ್ರವಾಗಿವೆ. ಚೋಳರ ಕಾಲದಲ್ಲಿ ಬಹುಶಃ ೧೩×೭×೭ ೧/೨ ಅಂಗುಲ ಪ್ರಮಾಣದ ಇಟ್ಟಿಗೆಗಳಿಂದ ಗೋಡೆಯನ್ನು ಕಟ್ಟಿದ್ದರು. ಹನ್ನೊಂದನೆಯ ಶತಮಾನದ ಆದಿಭಾಗದಲ್ಲಿ ರಚಿತವಾಗಿರಬೇಕು. ಊರಿನ ಮಧ್ಯದಲ್ಲಿ ಗೋಪಾಲಸ್ವಾಮಿ ದೇವಾಲಯಕ್ಕೆ ದಕ್ಷಿಣದಲ್ಲಿ ಚೋಳೇಶ್ವರ ದೇವಾಲಯ ಕಣಶಿಲೆಯಿಂದ ಹನ್ನೊಂದನೆಯ ಶತಮಾನ ದಲ್ಲಿ ನಿರ್ಮಿತವಾಯಿತು.

ಹೊಯ್ಸಳರ ಕಾಲದ ಗೋಪಾಲಸ್ವಾಮಿ ದೇವಾಲಯವು ತ್ರಿಕೂಟಾಚಲವಾಗಿದೆ. ಒಳಗಿನ ನವರಂಗ, ಪಶ್ಚಿಮದ ಸುಕನಾಸಿ, ಮೂರು ಗರ್ಭಗುಡಿಗಳು, ಗೋಪುರವಿಲ್ಲದ ಮಹಾದ್ವಾರ ಹೊಯ್ಸಳರ ಕಾಲಕ್ಕೆ ಸೇರಿವೆ. ಕಣಶಿಲೆಯ ಗೋಪುರ, ಮುಖಮಂಡಪ ಆರು ಕಂಬಗಳ ಹೊರಗಿನ ನವರಂಗ ಬಹುಶಃ ವಿಜಯನಗರ ಕಾಲದಲ್ಲಿ ಸೇರಿಸಲ್ಪಟ್ಟವು. ದಕ್ಷಿಣ ಗರ್ಭಗುಡಿಯಲ್ಲಿ ವೇಣುಗೋಪಾಲ, ಉತ್ತರದಲ್ಲಿ ಯೋಗ ನರಸಿಂಹ, ಪಶ್ಚಿಮದಲ್ಲಿ ಜನಾರ್ದನ ವಿಗ್ರಹಗಳು ಹೊಯ್ಸಳ ಕೆಲಸ ವಾಗಿವೆ. ಜನಾರ್ದನನು ಪದ್ಮವನ್ನು ಮುಂದಿನ ಬಲಗೈಯಲ್ಲಿ ಹಿಡಿದಿರು ವನು. ನವರಂಗದಲ್ಲಿ ವಿಜಯನಗರ ಕಾಲದ ವಿಷ್ವಕ್ಸೇನ ಆಳ್ವಾರರ ವಿಗ್ರಹಗಳಿವೆ. ಜನಾರ್ದನ ಮತ್ತು ದೇವಿಯರ ಉತ್ಸವ ವಿಗ್ರಹಗಳು ವಿಜಯನಗರ ಕಾಲದ ಬಹಳ ಸುಂದರ ಮೂರ್ತಿಗಳಾಗಿವೆ. ಜನಾರ್ದನನ ಹಣೆಯಲ್ಲಿ ವೀರರೇಖೆ ಇದೆ.

ಬ್ಯಾಟರಾಯ ದೇವಸ್ಥಾನವನ್ನು ಕೋನೇರಿ ಐಯಂಗಾರ್ ಎಂಬು ವನು ಸುಮಾರು ನಾನೂರು ವರ್ಷಗಳ ಹಿಂದೆ ಕಟ್ಟಿಸಿದನು. ಇವನ ವಿಗ್ರಹ ನವರಂಗದ ಒಂದು ಕಂಬದ ಮೇಲಿದೆ. ಕುಲಾವಿ ನಿಲುವಂಗಿ ಧರಿಸಿರು ವನು. ಇತರ ಕಂಬಗಳ ಮೇಲೆ ವೆಂಕಟೇಶ ವಿಗ್ರಹದ ಕೆಳಗೆ ಭಕ್ತ ವಿಗ್ರಹ ಗಳನ್ನು ಕೃಷ್ಣದೇವರಾಯ ಮುಂತಾದ ವಿಜಯನಗರ ರಾಜರಾಣಿಯರೆಂದು ಕರೆಯುವರು. ಗರ್ಭಗೃಹದಲ್ಲಿ ಸುಂದರವಾದ ವೆಂಕಟೇಶ ವಿಗ್ರಹವಿದೆ.

೪೪. ತಂಡಗ : ನೊಣವಿನಕೆರೆಗೆ ಆಗ್ನೇಯದಲ್ಲಿ ಐದು ಮೈಲಿ ದೂರದಲ್ಲಿರುವ ತಂಡಗವನ್ನು ಶಾಸನಗಳಲ್ಲಿ ಶಂಕರನಾರಾಯಣಪುರ ವೆಂದು ಕರೆಯಲಾಗಿದೆ. ಹೊಯ್ಸಳನಗರ ವಿನ್ಯಾಸದಂತೆ ಊರಿನ ಮಧ್ಯ ದಲ್ಲಿ ಚೆನ್ನಕೇಶವ, ಆಗ್ನೇಯದಲ್ಲಿ ಮೂಲಸ್ಥಾನೇಶ್ವರ (ಮಲ್ಲೇಶ್ವರ) ದೇವಾಲಯಗಳಿವೆ. ತಂಡಗದಲ್ಲಿ ಶಾಲಿವಾಹನನು ಹುಟ್ಟಿದನೆಂದು ಐತಿಹ್ಯವಿದೆ.

ಚೆನ್ನಕೇಶವ ದೇವಾಲಯವು ೧೪ನೆಯ ಶತಮಾನದ ಹೊಯ್ಸಳ ಕಟ್ಟಡವಾಗಿದೆ. ನಕ್ಷತ್ರಾಕಾರದ ಜಗತಿ ಇಲ್ಲ. ಪೀಠದಲ್ಲಿ ಐದು ಪಟ್ಟಿಕೆ ಗಳು ಸಾಮಾನ್ಯವಾಗಿವೆ. ಗೋಡೆಯ ಮೇಲೆ ಸಣ್ಣ ಕಂಬಗಳೂ ಗೋಪುರ ಗಳೂ ಇವೆ. ಗರ್ಭಗುಡಿಯ ಮೇಲೆ ಕಲ್ಲಿನ ವಿಮಾನ ಮೂರು ಮೆಟ್ಟಿ ಲಾಗಿದೆ. ಹಳೆಯ ಕೈಪಿಡಿಗೋಡೆಯ ಮೇಲೆ ಕೀರ್ತಿಮುಖಗಳು ಲತಾ ಪಟ್ಟಿಕೆಗಳು ಇವೆ. ನೈರುತ್ಯ ದಿಕ್ಕಿನಲ್ಲಿ ಭಗ್ನವಾದ ಐದಡಿ ಎತ್ತರದ ಕೇಶವ ವಿಗ್ರಹವಿದೆ. ಗರ್ಭಗುಡಿಯ ಗೋಡೆಗಳಲ್ಲಿ ಸ್ಥಾನಕ ವಿಷ್ಣು, ಉಗ್ರನರಸಿಂಹ, ಬ್ರಹ್ಮ, ಉಮಾಮಹೇಶ್ವರ ವಿಗ್ರಹಗಳಿವೆ. ಸೋಮ ಸೂತ್ರಕ್ಕೆ ಸಿಂಹಮುಖವಿದೆ. ಹೊರಗಿನ ಕಲ್ಲುಗಳ ಮೇಲೆ ೧೪ನೆಯ ಶತಾಬ್ದದ ಕನ್ನಡ ಅಕ್ಷರಗಳು ಕಲ್ಲುಗಳ ಸ್ಥಳವನ್ನು ಸೂಚಿಸುವುವು. (೪ ವ. ೫ ವ=ವಾಯವ್ಯ) ಮತ್ತೆಲ್ಲಿಯೋ ಈ ಕಲ್ಲುಗಳನ್ನು ತಯಾರಿಸಿ ಇಲ್ಲಿಗೆ ಸಾಗಿಸಿ ಜೋಡಿಸಿರುವರು. ಮುಖಮಂಡಪದಲ್ಲಿ ಎರಡು ಬಳಪದ ಕಲ್ಲಿನ ಹೊಯ್ಸಳ ಸ್ತಂಭಗಳೂ ಮೇಲ್ಛಾವಣಿಯಲ್ಲಿ ಕಮಲವೂ ಇವೆ. ನೆಲದಮೇಲೆ ನಾಲ್ಕೂವರೆ ಅಡಿ ಉದ್ದದ ಭಕ್ತವಿಗ್ರಹವಿದೆ. ಬಹುಶಃ ದೇವಾಲಯವನ್ನು ಕಟ್ಟಿಸಿದ ನಾಯಕನಾಗಿರಬಹುದು. ಕೈಗಳನ್ನು ತಲೆಯ ಮೇಲಕ್ಕೆ ಚಾಚಿಕೊಂಡು, ಧೋತಿ, ಕಟಿವಸ್ತ್ರ, ಕಾಲಿನ ಅಂದಿಗೆ, ಕಂಕಣ, ಭುಜಕೀರ್ತಿ, ಇತ್ಯಾದಿಗಳನ್ನು ಧರಿಸಿರುವನು.

ನವರಂಗ ದ್ವಾರದ ಮೇಲೆ ನಳ ಸಂವತ್ಸರದ ಒಂದು ಶಾಸನವಿದೆ. ಹೊಯ್ಸಳ ಅಕ್ಷರಗಳಾದುದರಿಂದ ಬಹುಶಃ ಕ್ರಿ. ಶ. ೧೩೧೬ ಆಗಿರ ಬಹುದು (ಕ್ರಿ. ಶ. ೧೫೩೬ ಎಂದು ಎಪಿಗ್ರಾಫಿಯ ಕರ್ಣಾಟಕದಲ್ಲಿ ಹೇಳಿರುವುದು ಬಹಳ ಆಧುನಿಕ). ನವರಂಗದಲ್ಲಿ ಹೊಯ್ಸಳ ರೀತಿಯ

ಸ್ತಂಭಗಳಿವೆ. ಮೇಲ್ಚಾವಣಿಗಳಲ್ಲಿ ಪದ್ಮವನ್ನು ಕೆತ್ತಿರುವರು. ಮಧ್ಯದ ಭುವನೇಶ್ವರಿಯಲ್ಲಿ ಲತಾಪಟ್ಟಿಕೆಗಳೂ ಸಿಂಹಮುಖಗಳೂ ಇವೆ. ನವರಂಗದ ಪಶ್ಚಿಮ ಗೋಡೆಯಲ್ಲಿ ಎರಡು ಗೂಡುಗಳು ವಿಗ್ರಹಗಳಿಲ್ಲದೆ ಇವೆ. ಸುಕನಾಸಿ ದ್ವಾರದಲ್ಲಿ ಜಾಲಂದ್ರ, ಮೇಲೆ ಗಜಲಕ್ಷ್ಮೀ ವಿಗ್ರಹ ಇವೆ. ಮೇಲ್ಚಾವಣಿಯಲ್ಲಿ ಬೆಳಕು ಬರಲು ರಂಧ್ರಗಳಿವೆ. ಗರ್ಭಗುಡಿಯಲ್ಲಿ ಗರುಡಪೀಠದ ಮೇಲೆ ಐದಡಿ ಎತ್ತರದ ಕೇಶವ ವಿಗ್ರಹವಿದೆ.

ಚೆನ್ನಕೇಶವ ದೇವಾಲಯಕ್ಕೆ ಆಗ್ನೇಯದಲ್ಲಿ ಇದಕ್ಕಿಂತ ಹಳೆಯದಾದ ಮಲ್ಲೇಶ್ವರ ದೇವಾಲಯ ನೊಣವಿನಕೆರೆಯ ನೊಣಬೇಶ್ವರ ಗುಡಿಯಂತೆ ಇದೆ. ಆದರೆ ಸುಕನಾಸಿ ಬಾಗಿಲು ಮುಚ್ಚಿದೆ. ನವರಂಗದ ಬಾಗಿಲು ಅಷ್ಟು ಅಲಂಕೃತವಾಗಿಲ್ಲ. ಸ್ತಂಭಗಳಲ್ಲಿ ಚಕ್ರಾಕಾರದ ಪಟ್ಟಿಕೆಗಳಿವೆ. ಭುವನೇಶ್ವರಿಯ ಏಕಶಿಲೆಯಲ್ಲಿ ಪದ್ಮವಿದೆ. ಬಹುಶಃ ಕ್ರಿ. ಶ. ೧೦೦೦ದಲ್ಲಿ ನಿರ್ಮಿತವಾಗಿರಬಹುದು. ನವರಂಗದಲ್ಲಿ ಗಣೇಶ ಮತ್ತು ಆಸೀನ ಪಾರ್ವತಿ ವಿಗ್ರಹಗಳು, ಸುಕನಾಸಿಯಲ್ಲಿ ನಂದಿ, ನವರಂಗ ದ್ವಾರದ ಮುಂದೆ ಮತ್ತೊಂದು ನಂದಿ, ದೇವಾಲಯದ ಮುಂದೆ ಭೈರವ, ವೀರಭದ್ರ, ಇಂದ್ರಾಣೀ, ಕೌಮಾರೀ, ಮಾಹೇಶ್ವರಿ (ಸಪ್ತಮಾತೃಕಾ) ವಿಗ್ರಹಗಳಿವೆ. ದ್ವಾರದಲ್ಲಿರುವ ಎರಡು ಶಾಸನಗಳು ಇಮ್ಮಡಿ ವೀರ ಬಲ್ಲಾಳನ ಕಾಲದ ವೀರಗಲ್ಲುಗಳಾಗಿವೆ. ಮೂರನೆಯ ವೀರಗಲ್ಲು ಹೊಯ್ಸಳ ವಿಷ್ಣುವರ್ಧನನ ಕಾಲದ್ದಾಗಿದೆ.

೪೫. ಹುಲಿಕೆಲ್ : ತಂಡಗಕ್ಕೆ ಎರಡು ಮೈಲಿ ದಕ್ಷಿಣದಲ್ಲಿರುವ ಹುಲಿಕಲ್ಲಿನಲ್ಲಿ ಹೊಯ್ಸಳ ಕಾಲದ ಸಂಗಮೇಶ್ವರ (ಹಂಸೇಶ್ವರ) ದೇವಾಲಯವಿದೆ. ಮುಂಚೆ ಇದ್ದ ಕಮಠೇಶ್ವರ ದೇವಾಲಯದ ಕಲ್ಲುಗಳಿಂದ ಇದನ್ನು ಕಟ್ಟಿದಂತೆ ಹೇಳಿದೆ. ಬಹುಶಃ ಗರ್ಭಗುಡಿ ಚೋಳ ಅಥವಾ ಗಂಗರ ಕಾಲದ್ದಾಗಿದೆ. ನವರಂಗದ ನಾಲ್ಕು ಕಂಬಗಳು ತಗ್ಗಾಗಿ ಹದಿನಾರು ಮೂಲೆಗಳನ್ನು ಹೊಂದಿವೆ. ನವರಂಗದಲ್ಲಿ ಏಳು ಹೆಡೆಯ ನಾಗ, ಸಪ್ತಮಾತೃಕಾ, ಚಪ್ಪಟೆ ತಲೆಯುಳ್ಳ ಲಿಂಗ ಮತ್ತು ಪೀಠ (ಬಹುಶಃ ಕಮಠೇಶ್ವರ), ಐದಡಿ ಎತ್ತರದ ಹೊಯ್ಸಳ ಕಾಲದ ವೇಣುಗೋಪಾಲ, ಸೂರ್ಯ, ಜನಾರ್ದನ ವಿಗ್ರಹಗಳಿವೆ.

ಸಂಗಮೇಶ್ವರ ಗುಡಿಗೆ ಉತ್ತರದಲ್ಲಿ ಮಲ್ಲೇಶ್ವರ (ಕಲ್ಲೇಶ್ವರ) ದೇವಾಲಯವಿದೆ. ಸಣ್ಣದಾದರೂ ಹೊಯ್ಸಳ ರೀತಿಗೆ ಉದಾಹರಣೆಯಾಗಿದೆ. ಹೊರಗಿನ ಗೋಡೆ ಮತ್ತು ಶಿಖರಗಳಿಗೆ ಪಕ್ಕದ ಕಾಲುವೆಯ ಮಣ್ಣು ಒತ್ತಿಕೊಟ್ಟಿರುವುದರಿಂದ ಭದ್ರವಾಗಿವೆ. ನವರಂಗದ ಮೇಲ್ಛಾವಣಿಯಲ್ಲಿ ಪದ್ಮಗಳಿವೆ. ಮಧ್ಯದ ಭುವನೇಶ್ವರಿಯನ್ನು ಮೂಲೆ ಕಲ್ಲುಗಳಿಂದ ಮೇಲಕ್ಕೆ ಎತ್ತರಿಸಿರುವರು. ನವರಂಗದ ಹಿಂಭಾಗದಲ್ಲಿ ಎರಡು ಗೂಡುಗಳಿವೆ. ಈಚಿನ ಗಣಪತಿ ಭೈರವ ವಿಗ್ರಹಗಳನ್ನಿಟ್ಟಿರುವರು. ನವರಂಗದ ನೈರುತ್ಯ ಮೂಲೆಯಲ್ಲಿ ಷಣ್ಮುಖ, ಮಾಧವ (ಗದಾಚಕ್ರ ಶಂಖಪದ್ಮ), ನಾಗರಕಲ್ಲುಗಳು, ನಂದಿ, ನವರಂಗದಲ್ಲಿವೆ. ಗರ್ಭಗುಡಿಯ ಲಿಂಗ ಸವೆದುಹೋದಂತಿದೆ. ದೇವಾಲಯದ ಆಗ್ನೇಯದಲ್ಲಿ ಒಂದು ಹೊಯ್ಸಳ ಶಾಸನ ಸಿಕ್ಕಿದೆ.

೪೬. ವಿಘ್ನಸಂತೆ : ನೊಣವಿನಕೆರೆಗೆ ಆಗ್ನೇಯದಲ್ಲಿ ಎರಡು ಮೈಲಿ ದೂರದಲ್ಲಿರುವ ವಿಘ್ನಸಂತೆಗೆ ಇಗಣಸಂತೆ ಎಂಬ ಹೆಸರಿದ್ದಿತು. ಇಲ್ಲಿ ನಾಲ್ಕು ದೇವಾಲಯಗಳಿವೆ. ತ್ರಿಕೂಟಾಚಲವಾದ ಲಕ್ಷ್ಮೀನರಸಿಂಹ ದೇವಾಲಯವನ್ನು ಕ್ರಿ. ಶ. ೧೨೮೬ರಲ್ಲಿ ಮೂರನೆಯ ನರಸಿಂಹನು ಆಳುತ್ತಿದ್ದಾಗ ಮೂವರು ಸಹೋದರರು ಕಟ್ಟಿಸಿದರು. ನಕ್ಷತ್ರಾಕಾರದ ಜಗತಿಯ ಮೇಲೆ ಮೂರು ಗರ್ಭಗುಡಿಗಳಿವೆ. ಪಶ್ಚಿಮ ಗರ್ಭಗುಡಿಗೆ ಮಾತ್ರ ಸುಕನಾಸಿ ಶಿಖರಗಳಿವೆ. ನವರಂಗದಲ್ಲಿ ನಾಲ್ಕು ಕಂಬಗಳು, ಮುಂದಿನ ಮುಖಮಂಡಪದಲ್ಲಿ ಕಟಾಂಜನ ಜಗತಿಗಳಿವೆ. ಅದಕ್ಕೆ ಮುಂದೆ ಉಪ್ಪರಿಗೆ ಅಥವಾ ಮಹಾದ್ವಾರದ ತಳಪಾಯ ಮಾತ್ರ ಇದೆ. ಹೊರಗೋಡೆಯ ಕೆಳಭಾಗದಲ್ಲಿ ಐದು ಸಾಲುಗಳಿವೆ. ಲತೆ, ಕುಂಭ, ಮಕರ, ಪುಷ್ಪಪಟ್ಟಿಕೆಗಳಿವೆ. ಮೇಲ್ಭಾಗದಲ್ಲಿ ಗೋಡೆಯನ್ನು ಸಣ್ಣ ಕಂಬಗಳಿಂದ ವಿಭಾಗಮಾಡಿ ಅಂತರದಲ್ಲಿ ದೊಡ್ಡ ಪದ್ಮಗಳಿವೆ. ಕಾರ್ನೀಸಿನಲ್ಲಿ ಚೈತ್ಯಕಮಾನು ಕುಂಭ ಮಕರ ಗೋಪುರ ಕೀರ್ತಿಮುಖ ಸಿಂಹಲಲಾಟಗಳ ಸಾಲುಗಳಿವೆ. ಇದರ ಮೇಲಿರುವ ಗೂಡುಗಳಲ್ಲಿ ಯಕ್ಷರು, ಈಶಾನ್ಯದಲ್ಲಿ ಭೈರವ, ಲಕ್ಷ್ಮೀನಾರಾಯಣ ಮತ್ತು ಪೂರ್ವದಲ್ಲಿ ನರಸಿಂಹ ವಿಗ್ರಹಗಳಿವೆ.

ಶಿಖರವು ಚಿತ್ರಪಟ್ಟಿಕೆಗಳಿಂದ ಬಹಳ ಸುಂದರವಾಗಿದೆ. ನಾಲ್ಕು ಸಾಲು ಗೋಪುರಗಳು ಒಂದರಮೇಲೊಂದಿವೆ. ಮುಂಭಾಗ ಸುಕನಾಸಿಯ ಮೇಲೆ ಚಾಚಿಕೊಂಡು ಕೀರ್ತಿಮುಖ ಗರುಡವಿಗ್ರಹ ಹೊಂದಿದೆ. ಶಿಖರದ ಪೂರ್ವಮುಖದಲ್ಲಿ ಉಗ್ರನರಸಿಂಹ, ಗೋವರ್ಧನಧಾರಿ, ನೃತ್ಯಪಾರ್ವತಿ, ನಾರಾಯಣ; ದಕ್ಷಿಣದಲ್ಲಿ ಯೋಗನರಸಿಂಹ, ವಾಮನ, ತಾಂಡವಶಿವ; ಪಶ್ಚಿಮದಲ್ಲಿ ಕಾಳಿಂಗಮರ್ದನ, ವೇಣುಗೋಪಾಲ, ನೃತ್ಯಲಕ್ಷ್ಮೀ, ಸ್ಥಾನಕವಿಷ್ಣು (ಚಕ್ರ ಗದಾ ಪದ್ಮ ಶಂಖ) ವಿಗ್ರಹಗಳು, ಪಶ್ಚಿಮ ಗರ್ಭಗುಡಿಯ ಹಿಂದೆ ಅಮರನಾರಾಯಣ ಮಂಟಪದ ಪಶ್ಚಿಮದಲ್ಲಿ ಮಹಿಷಮರ್ದಿನಿ ಇವೆ.

ಮುಖಮಂಟಪದಲ್ಲಿ ಎರಡು ಹೊಯ್ಸಳ ಸ್ತಂಭಗಳು ಅದ್ಭುತ ಕೆಲಸವನ್ನು ತೋರಿಸುವುವು. ಸ್ತಂಭಗಳ ಶೀರ್ಷದಲ್ಲಿ ಸಿಂಹಮುಖಗಳಿವೆ. ಮೂಲೆಗಳಲ್ಲಿ ಆನೆಗಳ ಮೇಲೆ ಸಿಂಹಗಳು ಎದ್ದು ನಿಂತಿವೆ. ಮುಖಮಂಡಪದ ಮೇಲ್ಛಾವಣಿಯಲ್ಲಿ ಅಷ್ಟದಿಕ್ಪಾಲಕರು ಸಿಂಹಮಯೂರ ಗಂಧರ್ವಗರುಡ ಇತ್ಯಾದಿಗಳು, ಇವುಗಳಮೇಲೆ ಶಿಖರಗಳು, ವೃತ್ತಗಳು, ಮಧ್ಯದಲ್ಲಿ ಕಮಲದ ಮೊಗ್ಗು ಇವೆ. ಕೈಪಿಡಿಗೋಡೆಯ ಮೇಲೆ ನೃತ್ಯಗಣೇಶ ವಿಗ್ರಹವಿದೆ.

ನವರಂಗದ ನಾಲ್ಕು ಕಂಬಗಳು ಮತ್ತು ತೊಲೆಗಳು ಲತಾಪಟ್ಟಿಕೆಗಳಿಂದ ಅಲಂಕೃತವಾಗಿವೆ. ಮೇಲ್ಛಾವಣಿಯ ಅಂಕಣಗಳು ಸಿಂಹಮುಖ ಪದ್ಮಗಳನ್ನು ಹೊಂದಿವೆ. ಮಧ್ಯದ ಭುವನೇಶ್ವರಿಯಲ್ಲಿಯೂ ಮೂಲೆಕಲ್ಲುಗಳ ಮೇಲೂ ದಿಕ್ಪಾಲಕರು, ಯೋಧರು ಇರುವರು. ನವರಂಗದ ದಕ್ಷಿಣ ಗೋಡೆಯಲ್ಲಿ ಸುಂದರವಾದ ವಿದ್ಯಾಗಣಪತಿ, ಮಹಿಷಮರ್ದಿನಿ ವಿಗ್ರಹಗಳಿವೆ. ಮಹಿಷಮರ್ದಿನಿ ಎಡಗಾಲಿನ ಮೇಲೆ ನಿಂತು ಬಲಗಾಲಿನಿಂದ ಮಹಿಷವನ್ನು ತುಳಿಯುತ್ತ ರಾಕ್ಷಸನನ್ನು ಶೂಲದಿಂದ ತಿವಿಯುತ್ತಿರುವಳು. ಅವಳ ಕೈಗಳಲ್ಲಿ ರಾಕ್ಷಸನನ್ನು ತಿವಿಯುತ್ತಿರುವ ಶೂಲ, ಪ್ರಯೋಗಚಕ್ರ, ಬತ್ತಳಿಕೆಯಿಂದ ತೆಗೆದ ಬಾಣ, ತ್ರಿಶೂಲಶಿಖರ ಉಳ್ಳ ಘಂಟಾ, ಖೇಟ, ಧನುಸ್ ಮತ್ತು ರಾಕ್ಷಸನ ಕೇಶ ಇವೆ. ದಕ್ಷಿಣ ಗರ್ಭಗುಡಿಯ ದ್ವಾರದಲ್ಲಿ ದ್ವಾರಪಾಲಕರು, ಮೇಲೆ ವೇಣುಗೋಪಾಲ

ವಿಗ್ರಹಗಳಿವೆ. ಗರ್ಭಗುಡಿಯಲ್ಲಿ ಗರುಡಪೀಠದ ಮೇಲೆ ಐದು ಅಡಿ ಎತ್ತರದ ತ್ರಿಭಂಗದಲ್ಲಿ ನಿಂತಿರುವ ವೇಣುಗೋಪಾಲ ವಿಗ್ರಹವಿದೆ. ವೇಣುಗೋಪಾಲನು ಬಲತೊಡೆಯನ್ನು ಎಡಗಾಲ ಮೇಲಕ್ಕೆ ತಂದು ಎರಡು ಕೈಗಳಿಂದ ಕೊಳಲನ್ನು ಬಾರಿಸುತ್ತಿರುವನು. ಮೇಲೆ ತಮಾಲ ವೃಕ್ಷವಿದೆ. ತೋರಣದಮೇಲೆ ದೇವಿಯರು ಚಾಮರಧಾರಿಣಿಯರಿರುವರು. ಗೋಪಗೋಪಿಯರು ಗೋವುಗಳು ಋಷಿ ದೇವತೆಗಳು ಗಾನವನ್ನು ಕೇಳು ತ್ತಿರುವರು. ವೇಣುಗೋಪಾಲನ ಬಲದಲ್ಲಿ ಚಕ್ರ ಗದಾ, ಎಡದಲ್ಲಿ ಶಂಖ ಪದ್ಮಗಳನ್ನು ಕೆತ್ತಿರುವರು. ತೋರಣದ ಅಂಚಿನಲ್ಲಿ ದಶಾವತಾರಗಳಿವೆ.


ಉತ್ತರ ಗರ್ಭಗುಡಿಯ ದ್ವಾರದಮೇಲೆ ಯೋಗನರಸಿಂಹ, ಅದರ ಮೇಲೆ ಲಕ್ಷ್ಮೀನರಸಿಂಹ, ಪ್ರಹ್ಲಾದ, ಕಮಂಡಲು, ಆನೆ ತೋರಣಗಳಿವೆ. ಲಕ್ಷ್ಮೀನರಸಿಂಹನು ಸುಖಾಸನದಲ್ಲಿ ಕುಳಿತು ಚಕ್ರ ಪದ್ಮ ಗದಾಶಂಖ ಗಳನ್ನು ಹಿಡಿದಿರುವನು. ಲಕ್ಷ್ಮಿಯು ಎಡತೊಡೆಯ ಮೇಲಿರುವಳು. ಬಹುಶಃ ಈ ಲಕ್ಷ್ಮೀನರಸಿಂಹ ವಿಗ್ರಹದಿಂದ ಅಥವಾ ಹೊಯ್ಸಳ ನರಸಿಂಹ ನಿಂದ ಈ ದೇವಾಲಯಕ್ಕೆ ಹೆಸರು ಬಂದಿತು.

ಪಶ್ಚಿಮ ಗರ್ಭಗುಡಿಯ ಮುಂದೆ ಮಾತ್ರ ಸುಕನಾಸಿ ಇದೆ. ಸುಕನಾಸಿಯ ದ್ವಾರದಮೇಲೆ ಲಕ್ಷ್ಮೀ–ನಾರಾಯಣ ವಿಗ್ರಹವಿದೆ. ಗರ್ಭ ಗುಡಿಯ ದ್ವಾರದ ಮೇಲೆ ಗಜಲಕ್ಷ್ಮಿ ಇದೆ. ಗರ್ಭಗುಡಿಯಲ್ಲಿ ಸುಮಾರು ಐದಡಿ ಎತ್ತರದ ಕೇಶವ ವಿಗ್ರಹ ಬಹುಶಃ ಉತ್ತಮ ದಶತಾಲದಲ್ಲಿ ಮಾಡಿರುವುದರಿಂದ ತೆಳುವಾಗಿ ಉದ್ದವಾಗಿ ಕಂಡುಬರುತ್ತದೆ. ಮುಖದಲ್ಲಿ ಸೌಂದರ್ಯ ಗಾಂಭೀರ್ಯಗಳಿವೆ. ಪಕ್ಕಗಳಲ್ಲಿ ದೇವಿಯರು, ತೋರಣದಲ್ಲಿ ಲತಾಪಟ್ಟಿಕೆ ಸಿಂಹಮುಖ ಮತ್ತು ದಶಾವತಾರಗಳು ಕಂಡುಬರುವುವು. ಮುಖಮಂಡಪಕ್ಕೂ ಮಹಾದ್ವಾರಕ್ಕೂ ಮಧ್ಯದಲ್ಲಿ ಎರಡು ನೀಲಿಕಲ್ಲಿನ ಆನೆಗಳು ಯೋಧರು ಇರುವರು.

ಲಕ್ಷ್ಮೀನರಸಿಂಹ ದೇವಾಲಯಕ್ಕೆ ಆಗ್ನೇಯದಲ್ಲಿ ಕಾಲುವೆ ಹತ್ತಿರ ಬಳಪದಕಲ್ಲಿನ ಬಾಲಲಿಂಗೇಶ್ವರ ಗುಡಿ ಇದೆ. ಇದು ತ್ರಿಕೂಟಾಚಲ ವಾಗಿದ್ದರೂ ಕೆತ್ತನೆ ಕೆಲಸ ಸಾಮಾನ್ಯವಾಗಿದೆ. ಶಿಖರವು ಪಿರಮಿಡ್ ಆಕಾರದಲ್ಲಿ ಏಳು ಮೆಟ್ಟಲುಗಳನ್ನು ಹೊಂದಿದೆ. ಒಂದೊಂದು ಮುಖ

ದಲ್ಲೂ ಕೀರ್ತಿಮುಖ ಶೈವವಿಗ್ರಹಗಳಿವೆ. ಸುಕನಾಸಿಯ ಮೇಲೆ ಚಾಚಿಕೊಂಡಿರುವ ಭಾಗದಲ್ಲಿ ಸಳ-ಹುಲಿ ವಿಗ್ರಹ ಸುಂದರವಾಗಿದೆ. ಗರ್ಭಗುಡಿಯಲ್ಲಿ ಸಣ್ಣ ಲಿಂಗವಿದೆ. ಸುಕನಾಸಿಯ ಮೇಲ್ಛಾವಣಿಯಲ್ಲಿ ಪದ್ಮವನ್ನು ಕೆತ್ತಿರುವರು. ನವರಂಗದಲ್ಲಿ ಸಾಲು ದುಂಡಾದ ಕಂಬಗಳಿವೆ. ಮತ್ತೆರಡು ಗರ್ಭಗುಡಿಗಳು ಉತ್ತರ ದಕ್ಷಿಣದಲ್ಲಿವೆ. ಇವುಗಳ ಮೂಲವಿಗ್ರಹಗಳು ಹೋಗಿವೆ. ಈಗ ಉತ್ತರ ಗರ್ಭಗುಡಿಯಲ್ಲಿ ಗಣೇಶ, ಎರಡು ವೀರಭದ್ರ, ಕೇಶವ, ನಾಗರಕಲ್ಲುಗಳು ಇವೆ. ವಿಜಯನಗರ ಕಾಲದಲ್ಲಿ ಕಂಬಗಳನ್ನು ಸೇರಿಸಿ ಮತ್ತೊಂದು ನವರಂಗವನ್ನು ಮಾಡಿದಂತೆ ಕಂಡುಬರುತ್ತದೆ. ವಿಷ್ಣುಸಂತೆಯ ಭೈರವ (ಬೋರೆದೇವ) ಗುಡಿಯಲ್ಲಿರುವ, ಶವಾಸನದಮೇಲೆ ಕತ್ತಿ, ಡಮರು, ತ್ರಿಶೂಲ, ಪಾತ್ರೆ ಹಿಡಿದು ಕುಳಿತಿರುವ ಉಮಾಮಹೇಶ್ವರ, ಒಂದೂವರೆ ಅಡಿ ಎತ್ತರವಿರುವ ಭೈರವ ವಿಗ್ರಹಗಳು ಈ ದೇವಾಲಯದ ಮುಂದೆ ತಮ್ಮ ತಲೆಗಳನ್ನು ಕಡಿದು ಅರ್ಪಿಸುತ್ತಿರುವ ಮನುಷ್ಯರ ವೀರಕಲ್ಲುಗಳು, ಬನಶಂಕರಿ ದೇವಾಲಯದಲ್ಲಿರುವ ದೇವೀ ವಿಗ್ರಹ ಹೊಯ್ಸಳ ಕಾಲದ್ದಾಗಿದೆ. ಈ ದೇವಿಯು ಸುಖಾಸನದಲ್ಲಿ ಶವದಮೇಲೆ ಕುಳಿತು ಎಂಟು ಕೈಗಳಲ್ಲಿ ಕತ್ತಿ, ಅಕ್ಷಮಾಲೆ, ಸರ್ಪ, ತ್ರಿಶೂಲ, ಖೇಟ, ಡಮರು ಹಿಡಿದಿರುವಳು. ಆದರೆ ವಿಗ್ರಹವು ಭಗ್ನವಾಗಿದೆ.

೪೭. **ನುಗ್ಗಿಹಳ್ಳಿ:** ಚೆನ್ನರಾಯಪಟ್ಟಣಕ್ಕೆ ಹನ್ನೆರಡು ಮೈಲಿ ಈಶಾನ್ಯದಲ್ಲಿರುವ ನುಗ್ಗಿಹಳ್ಳಿ ಪ್ರಾಚೀನ ಪಟ್ಟಣವಾಗಿದೆ. ಶಾಸನದಲ್ಲಿ (ಚೆ. ರಾ. ಪಟ್ಣ ೨೩೮) ಹೊಯ್ಸಳ ಸೋಮೇಶ್ವರನ ದಂಡನಾಯಕನಾದ ಬೊಮ್ಮಣ್ಣನು ನುಗ್ಗಿಹಳ್ಳಿಯನ್ನು ಸೋಮನಾಥಪುರವೆಂಬ ಅಗ್ರಹಾರವನ್ನಾಗಿಮಾಡಿ ಶಕ ೧೧೬೮ ಪರಾಭವ (ಕ್ರಿ. ಶ. ೧೨೪೬) ಮತ್ತು ವಿಜಯ ಸಂವತ್ಸರಗಳಲ್ಲಿ ಕೇಶವ, ನರಸಿಂಹ, ಗೋಪಾಲ ವಿಗ್ರಹಗಳನ್ನೂ, ಕೀಲಕ (ಕ್ರಿ. ಶ. ೧೨೪೯) ಸಂವತ್ಸರದಲ್ಲಿ ಸದಾಶಿವನನ್ನೂ ಪ್ರತಿಷ್ಠಿಸಿದನು. ಅದಕ್ಕೂ ಮುಂಚೆ ಚೋಳರ ಕಾಲದಲ್ಲಿ ನುಗ್ಗಿಹಳ್ಳಿಗೆ ಒಂದು ಮೈಲಿ ಉತ್ತರದಲ್ಲಿರುವ ೧೫೦ ಅಡಿ ಎತ್ತರದ ಗುಡ್ಡದಮೇಲೆ ಜಯಂಗೊಂಡೇಶ್ವರ ದೇವಾಲಯವಿದ್ದಿತು. ಇಲ್ಲಿರುವ ವಿಷ್ಣುವರ್ಧನನ ಶಾಸನದಿಂದ ಕ್ರಿ. ಶ. ೧೧೨೧ರಲ್ಲಿ ವಿಷ್ಣುವರ್ಧನನು ಜಯಂಗೊಂಡೇಶ್ವರ



ನುಗ್ಗಿಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯ

ಲಿಂಗಕ್ಕೆ ದಾನಮಾಡಿದಂತೆ ತಿಳಿದುಬರುತ್ತದೆ (ಚಿ. ರಾ. ಪಟ್ಣ ೨೬೦). ಈ ಗುಡಿಯನ್ನು ಕಣಶಿಲೆಯಿಂದ ಕಟ್ಟಿರುವರು. ಎರಡು ಗರ್ಭಗುಡಿಗಳ ಮೇಲೆ ಮೆಟ್ಟಿಲುಮೆಟ್ಟಿಲಾದ ಇಟ್ಟಿಗೆಗಳ ಶಿಖರಗಳಿವೆ. ಈ ಇಟ್ಟಿಗೆಗಳು ೧೦×೭×೨ ಅಂಗುಲ ಪ್ರಮಾಣದಲ್ಲಿರುವುದರಿಂದ ಹೊಯ್ಸಳ ಕಾಲದ್ದಾಗಿವೆ. ಉತ್ತರ ಗರ್ಭಗುಡಿಯಲ್ಲಿ ಸಣ್ಣ ಲಿಂಗ ಅದರ ಮುಂದಿನ ಸುಕನಾಸಿಯಲ್ಲಿ ನಂದಿ ಇವೆ. ದಕ್ಷಿಣ ಗರ್ಭಗುಡಿಯಲ್ಲಿ ತಗ್ಗಾದ ಪೀಠದ ಮೇಲೆ ಮೂರು ಅಡಿ ಎತ್ತರದ ವೀರಭದ್ರ ವಿಗ್ರಹವಿದೆ. ವೀರಭದ್ರನು ಕತ್ತಿ ತ್ರಿಶೂಲ ಡಮರುಗ ಗುರಾಣಿ ಹಿಡಿದಿರುವನು. ಲತಾತೋರಣವಿದೆ. ನವರಂಗದ ದ್ವಾರದಮೇಲೆ ಪದ್ಮ, ರುದ್ರಾಕ್ಷಸರ, ಲತಾಪಟ್ಟಿಕೆಗಳಿವೆ. ನವರಂಗದಲ್ಲಿ ಎಂಟು ದುಂಡಾದ ಕಂಬಗಳು, ಮೇಲ್ಛಾವಣಿಗಳಲ್ಲಿ ಪದ್ಮಗಳು ಇವೆ. ನವರಂಗದಲ್ಲಿ ನಾಗರು, ಶಿರವಿಲ್ಲದ ಕಪಾಲಿಶಿವ, ಭೇತಾಳ ನಾಯಿ ವಿಗ್ರಹವಿದೆ. ನವರಂಗದ್ವಾರದ ಪೂರ್ವದಲ್ಲಿ ಚತುರಸ್ರವಾದ ಕಂಬದಮೇಲೆ ಬಳಪದ ಕಲ್ಲಿನ ನಂದಿ ಇದೆ. ದೇವಾಲಯದ ಈಶಾನ್ಯದಲ್ಲಿರುವ ಕಣಶಿಲೆಯ ಗುಡಿಯಲ್ಲಿ ಭಕ್ತದಂಪತಿಗಳ ವಿಗ್ರಹಗಳಿವೆ. ಪುರುಷನು ಕುಲ್ಲಾವಿ ಹಾರ, ಯಜ್ಞೋಪವೀತ, ಮೊಣಕಾಲವರೆಗೂ ಧೋತಿ, ಅಂದಿಗೆ ಕಂಕಣ ಮರದ ಪಾದುಕೆಗಳನ್ನು ಧರಿಸಿ ಬಲಗೈಯಲ್ಲಿ ಎತ್ತಿದ ಕಠಾರಿಯನ್ನು ಹಿಡಿದು ಎಡಗೈಯನ್ನು ಪತ್ನಿಯ ಭುಜದ ಮೇಲಿಟ್ಟಿರುವನು. ಪತ್ನಿಯು ಓಲೆ, ಸರ, ನಡುವಿನಿಂದ ಕೆಳಕ್ಕೆ ಸೀರೆ, ಕಂಕಣ, ಅಂದಿಗೆ, ಮರದ ಪಾದುಕೆಗಳನ್ನು ಧರಿಸಿರುವಳು. ಬಲಗೈಯಲ್ಲಿ ಕಮಲ ಮತ್ತು ಎಡಗೈ ಮುರಿದುಹೋಗಿದೆ. ಕೇಶದಲ್ಲಿ ಧಮ್ಮಿಲ್ಲ ಪುಷ್ಪಪಟ್ಟಿಕೆ ಇದೆ. ಬಹುಶಃ ವಿಜಯನಗರ ಕಾಲದ ಪಾಳೆಯಗಾರನ ವಿಗ್ರಹವಿರಬಹುದು.

ನುಗ್ಗಿಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯ ಸೋಮನಾಥಪುರ ದೇವಾಲಯಕ್ಕಿಂತ ೨೦ ವರ್ಷ ಮುಂಚೆ ರಚಿತವಾಯಿತು. ವಿಜಯನಗರ ಕಾಲದಲ್ಲಿ ಕಣಶಿಲೆಯ ಈಗಿನ ನವರಂಗವನ್ನು ಮುಖಮಂಡಪದ ಮುಂದೆ ಕಟ್ಟಿದರು. ಅದರ ಮುಂದಿನ ಹಜಾರ ಮತ್ತು ಪಾತಾಳಾಂಕಣಗಳನ್ನು ಸುಮಾರು ೧೭೦೦ರಲ್ಲಿ ಸೇರಿಸಲಾಯಿತು. ದಕ್ಷಿಣ ಮತ್ತು ಉತ್ತರದ

ಇಟ್ಟಿಗೆ ಗೋಪುರಗಳನ್ನು ಈಚೆಗೆ ಕಟ್ಟಿದಂತೆ ಕಂಡುಬರುವುದು. ಮುಖ್ಯ ದೇವರು ಕೇಶವನಾದರೂ ಲಕ್ಷ್ಮೀನರಸಿಂಹ ದೇವಾಲಯವೆಂಬ ಹೆಸರು ಬಂದಿದೆ.

ಮೂಲ ಹೊಯ್ಸಳ ದೇವಾಲಯಕ್ಕೆ ಉಪ್ಪರಿಗೆ ಅಥವಾ ಮಹಾ ದ್ವಾರವಿದ್ದಿತು. ಬೆಳವಾಡಿ, ಇತ್ಯಾದಿ ದೇವಸ್ಥಾನಗಳಲ್ಲಿದ್ದಂತೆ ಮಹಾ ದ್ವಾರದಲ್ಲಿ ಎರಡು ಆನೆಗಳಿದ್ದವು. ಈಗ ಇವು ಹಜಾರದ ಮುಂದಿವೆ. ಈ ಗಜಗಳ ಸೊಂಡಿಲ ಪಕ್ಕಗಳಲ್ಲಿ ಇಬ್ಬರು ಕುದುರೆ ಸವಾರರು ದೌಡಾಯಿಸುತ್ತಿರುವರು. ಅಂಗಳದ ಪಶ್ಚಿಮ ಭಾಗದಲ್ಲಿ ನಾಲ್ಕಡಿ ಎತ್ತರದ ಜಗತಿಯ ಮೇಲೆ ದೇವಾಲಯವಿದೆ. ಜಗತಿಯು ಗರ್ಭಗುಡಿ ಮುಖಮಂಡಪಗಳ ವಿನ್ಯಾಸವನ್ನೇ ಅನುಸರಿಸಿದೆ. ಆದರೆ ಇದರ ಆಧಾರವಾಗಿ ಆನೆಗಳು ವಿಗ್ರಹಗಳು ಇಲ್ಲ. ಗೋಡೆಯ ಕೆಳಭಾಗದಲ್ಲಿ ಚಿತ್ರಪಟ್ಟಿಕೆಗಳ ಸಾಲುಗಳಿವೆ. ಕೆಳಗಿನ ಸಾಲಿನಲ್ಲಿ ಆನೆಗಳಿವೆ. ಆನೆಗಳ ಮೇಲೆ ಸಣ್ಣ ಮಾವುತರಿರುವರು. ಕೆಲವು ಆನೆಗಳಿಗೆ ಅಂಗರಕ್ಷೆಗಳಿವೆ. ಮೂಲೆಗಳಲ್ಲಿ ಎರಡು ಆನೆಗಳಿಗೆ ಒಂದೇ ತಲೆ ಇದೆ. ಈ ಸಾಲಿನ ಮೇಲೆ ಕುದುರೆ ಸವಾರರು ಯುದ್ಧಮಾಡುತ್ತ ಓಡುತ್ತಿರುವರು. ಇದರ ಮೇಲೆ ಲತೆ ಸಿಂಹಮುಖ ಕಪಿ ಪಕ್ಷಿ ಜಿಂಕೆ ಇತ್ಯಾದಿಗಳಿವೆ. ಇದರ ಮೇಲಿನ ಪಟ್ಟಿಯಲ್ಲಿ ಪೌರಾಣಿಕ ಕಥೆಗಳು ಚಿತ್ರಿತವಾಗಿವೆ. ಉತ್ತರ ಗರ್ಭಗುಡಿಯಿಂದ ಭಾಗವತದ ಕಥೆ ಆರಂಭವಾಗಿದೆ: ಶಕಟ ಗೋಪರು ಕೃಷ್ಣನಿಗೆ ಬೆಣ್ಣೆ ಮೊಸರು ಕೊಡುವುದು, ಕೃಷ್ಣನು ಬಾಯ್ತೆರೆದು ಯಶೋದೆಗೆ ವಿಶ್ವವನ್ನು ತೋರಿಸುವುದು, ಯಶೋದೆಯು ಕೃಷ್ಣನನ್ನು ದಂಡಿಸುವುದು, ಗೋಪರು ಇಂದ್ರ ಮತ್ತು ದಿಕ್ಪಾಲರೊಡನೆ ಯುದ್ಧಮಾಡುವುದು, ರಾಜನು ಬಾಲಕೃಷ್ಣನಿಗೆ ನಮಸ್ಕರಿಸುವುದು, ತೊಟ್ಟಿಲಿನಲ್ಲಿ ಕೃಷ್ಣ, ಪೂತನೀಸಂಹಾರ, ಶಕಟಾಸುರಭಂಜನ, ಯಮಳಾರ್ಜುನ, ನವನೀತ ಕೃಷ್ಣ ಮತ್ತು ಬೆಕ್ಕು, ನವನೀತವನ್ನು ಕದಿಯುವುದು, ಗೋಪಿಯರು ಕೃಷ್ಣನನ್ನು ಶಿಕ್ಷಿಸುವುದು. ಗಾಡಿಗಳಿಂದ ಮತ್ತು ಮನುಷ್ಯರು ಹೊತ್ತ ಅಡ್ಡೆಗಳ ಮಡಕೆಗಳಿಂದ ಬೆಣ್ಣೆ ಕದಿಯುವುದು, ರಾಧೆಯೊಡನೆ ಪ್ರೀತಿಸುವುದು, ಗೋಪರು, ವೇಣುಗಾನ. ದಕ್ಷಿಣ ಗೂಡು—ಕಾಳಿಂಗಮರ್ದನ, ಗೋಪರ ನೃತ್ಯ, ಗೋವರ್ಧನ ಧಾರಣ, ಇಂದ್ರನು ಶರಣಾಗತನಾಗುವುದು.

ಪಶ್ಚಿಮ ಗೂಡು–ವೇಣುಗಾನ ಮತ್ತು ಗೋಪಿಯರ ನೃತ್ಯ, ಕೃಷ್ಣನು ಗೋಪಿಯರಿಗೆ ತತ್ತ್ವೋಪದೇಶ ಮಾಡುವುದು, ರಾಸಕ್ರೀಡಾ, ಇಬ್ಬರು ಗೋಪಿಯರ ನಡುವೆ ಒಬ್ಬ ಕೃಷ್ಣ, ಗೋಪೀ ವಸ್ತ್ರಾಪಹರಣ, ಧೇನುಕಾಸುರಭಂಜನ, ಗರ್ದಭಾಸುರ, ಕೃಷ್ಣನ ಮೆರವಣಿಗೆ, ಕೃಷ್ಣನು ಒಬ್ಬ ರಾಕ್ಷಸನನ್ನು ಕೊಲ್ಲುವುದು, ಬಲರಾಮ ಕೃಷ್ಣರ ಮೆರವಣಿಗೆ, ಯಶೋದೆ–ಕೃಷ್ಣ, ಮರಕ್ಕೆ ಕಟ್ಟಿದ ತೊಟ್ಟಿಲು, ಯಶೋದೆ ಕೃಷ್ಣ ಬಲರಾಮರು ಕರುವಿನೊಡನೆ ಆಡುವುದು, ಹಾಲು ಕರೆಯುವುದು, ಬೆಣ್ಣೆ ಕೇಳುವುದು, ಇತ್ಯಾದಿ, ಅಕ್ರೂರನು ಕೃಷ್ಣ ಬಲರಾಮರೊಡನೆ ಬಂಡಿಯಲ್ಲಿ ಮಧುರೆಗೆ ಹೋಗುವುದು, ಗೋಪರು ಅವರೊಡನೆ ಬೆಣ್ಣೆ ಹೊತ್ತುಕೊಂಡು ಹೋಗುವುದು, ಯಮುನೆಯಲ್ಲಿ ಕೃಷ್ಣನು ಅಕ್ರೂರನಿಗೆ ವಿಶ್ವರೂಪವನ್ನು ತೋರಿಸುವುದು, ಮಂಡಪದಲ್ಲಿ ಆಯುಧಪೂಜೆ, ಕೃಷ್ಣ–ಕುಬ್ಜೆ, ಕೃಷ್ಣನು ರಾಕ್ಷಸರನ್ನು ಸಂಹರಿಸುವುದು, ಕೃಷ್ಣನ ಆಗಮನವನ್ನು ಕಂಸನಿಗೆ ತಿಳಿಸುವುದು, ಮಲ್ಲರಿಗೆ ಕೃಷ್ಣನನ್ನು ಕೊಲ್ಲಲು ಕಂಸನು ಆಜ್ಞೆ ಮಾಡುವುದು, ಆನೆಯನ್ನು ಸಂಹರಿಸುವುದು, ಮಲ್ಲಯುದ್ಧ, ಕಂಸನ ಆಶ್ಚರ್ಯ, ಕಂಸವಧೆ.

ಈ ಪಟ್ಟಿಕೆಯ ಮೇಲೆ ಮಕರಗಳ ಸಾಲು, ಅದರಮೇಲೆ ಹಂಸಗಳ ಸಾಲು ಇವೆ.

ಗೋಡೆಯ ಮಧ್ಯಭಾಗದಲ್ಲಿ ಪೀಠ ತೋರಣಗಳ ಮಧ್ಯದಲ್ಲಿ ಮೂರು ಅಡಿ ಮೂರಂಗುಲ ಎತ್ತರದ ವಿಗ್ರಹಗಳಿವೆ. ಪೀಠಗಳಮೇಲೆ ಪದ್ಮ, ಗರುಡ, ಸಿಂಹ, ಕೀರ್ತಿಮುಖ ಮುಂತಾದುವು ಚೆನ್ನಾಗಿ ಚಿತ್ರಿತವಾಗಿವೆ. ಲತಾತೋರಣಗಳಲ್ಲಿ ವೈವಿಧ್ಯವಿದೆ. ವಿಗ್ರಹಗಳು ನವತಾಲದಲ್ಲಿರುವುವು. ಅಂಗಗಳು ಕುಳ್ಳಾಗಿ ದಪ್ಪವಾಗಿವೆ. ಗುಡಿಯ ದಕ್ಷಿಣ ಭಾಗದ ವಿಗ್ರಹಗಳನ್ನು ನಂದಿಯ ಬಾಚೋಜನು, ಉತ್ತರ ಭಾಗದ ವಿಗ್ರಹಗಳನ್ನು ಮಲ್ಲಿತಮ್ಮನು ಮಾಡಿರುವರು. ಇವರ ಹೆಸರುಗಳು ಕಂಡುಬರುತ್ತವೆ.

ಮುಖ್ಯ ವಿಗ್ರಹಗಳು : ಕಲ್ಪವೃಕ್ಷ, ಮೋಹಿನಿ–ದಕ್ಷಿಣಾಮೂರ್ತಿ, ಕೇಶವ, ಪದ್ಮದಮೇಲೆ ಸ್ಥಾನಕಬ್ರಹ್ಮ–ಚಾಮರಧಾರಿಣಿ, ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳು–ಕನ್ನಡದಲ್ಲಿ ಹೆಸರುಗಳಿವೆ. ನಗ್ನಮೋಹಿನಿ–ದಕ್ಷಿಣಾಮೂರ್ತಿ (ದಕ್ಷಿಣಾಮೂರ್ತಿ ಕುಲಾವಿ ನಿಲುವಂಗಿ, ಪಾದುಕೆಗಳನ್ನು ಧರಿಸಿ ದಂಡಚಕ್ರಗಳನ್ನು ಹಿಡಿದಿರುವನು).

ಡೋಳೋತ್ಸವ–ಎರಡು ಬಾಳೆ (ತಾಳೆ ?) ಗಿಡಗಳ ಮಧ್ಯದಲ್ಲಿರುವ ತೊಲೆಗೆ ಉಯ್ಯಾಲೆಯನ್ನು ಹಾಕಿ ಕೃಷ್ಣ ಮತ್ತು ದೇವಿ ಉಯ್ಯಾಲೆ ಆಡುತ್ತಿರುವರು. ಮರಗಳಿಂದ ಹಣ್ಣಿನ ಗೊಂಚಲು ತೂಗಾಡುತ್ತಿದೆ. ತೋರಣದಲ್ಲಿ ಕಪಿಗಳಿವೆ; ರತಿ ಮನ್ಮಥ–ಇವರ ಬಲದಲ್ಲಿ ಅಶ್ವಮುಖನಾದ ಸಂಗೀತಗಾರನು ಹಡಪವನ್ನು ಹಿಡಿದಿರುವನು; ಮಾಧವ–ಲಕ್ಷ್ಮೀ, ತಾಂಡವಗಣೇಶ–ಅಷ್ಟಭುಜಗಳಲ್ಲಿ ದಂತ, ಚಕ್ರ, ಪರಶು, ಸ್ವರ್ಗಹಸ್ತ, ಶಂಖ, ಪದ್ಮ, ಲಂಬಹಸ್ತ ಅಪೂಪ ಹಿಡಿದಿರುವನು. ಎಡದಲ್ಲಿ ದೇವಿ ಹೂವು ಮತ್ತು ಪಾತ್ರೆ ಹಿಡಿದಿರುವಳು. ಮೂಷಕ ಮತ್ತು ಗಾಯನವಾದ್ಯಗಳು ಕೆಳಗಿವೆ.

ಅಮರನಾರಾಯಣ ಅಥವಾ ಪರವಾಸುದೇವ ಅನಂತಾಸನದಲ್ಲಿ ಕುಳಿತಿರುವನು. ಕೆಳಗೆ ಗರುಡ ಪ್ರಹ್ಲಾದ ದೇವತೆಗಳೂ ಎಡಗಡೆ ದೇವಿ ಕಳಶ ಚಾಮರ ಹಿಡಿದಿರುವಳು. ಪೀಠದಲ್ಲಿ ಕನ್ನಡ ಶಾಸನ— "ಶ್ರೀ ಆದಿಮೂರ್ತಿ ದೇವರನು ನಂದಿಯ ಬೈಚೋಜ ಮಾಡಿದ ಕಂಡಿರೆ" (ಣೆ ?). "

ಗೋವಿಂದ–ದೇವಿ, ಯೋಗನರಸಿಂಹ–ಇಬ್ಬರು ದೇವಿಯರು, ಗರುಡ–ಪ್ರಹ್ಲಾದ, ವಿಷ್ಣು–ದೇವೀ, ಸುಖಾಸನದಲ್ಲಿ ಕುಳಿತ ವರದರಾಜ (ಅಭಯ ಚಕ್ರ ಶಂಖ ದಾನ), ಕೆಳಗೆ "ಅಲ್ವಾಳ್ ಪೆರುಮಾಳ್," ಹರಿಹರ, ಮಧುಸೂದನ–ದೇವಿ (ಪಾಶ–ಕಳಶ), ತ್ರಿವಿಕ್ರಮ–ಗಂಗಾ–ವಾಮನ–ಬಲಿ–ಶುಕ್ರ, ತ್ರಿವಿಕ್ರಮ, ಎಡದಲ್ಲಿ ನಾಗಕನ್ಯೆ ಹಾರವನ್ನು ಹಿಡಿದಿರುವಳು; ಭೈರವ–ಭೇತಾಳ, ಎಲುಬು ಕಂಡುಬರುವ ದುರ್ಗ ನರ್ತಿಸುವುದು–ಭೇತಾಳ; ವಾಮನ, ಶ್ರೀಧರ, ಫಲಕ್ಕೆ ಕಾದಾಡುವ ಎರಡು ಕಪಿ, ಗೋವರ್ಧನಧಾರಿ–ತೋರಣದಲ್ಲಿ ಕಪಿಗಳು, ಎಡದಲ್ಲಿ ಯುವತಿಯು ತನ್ನ ಕಿವಿ ಓಲೆಯನ್ನು ಕನ್ನಡಿಯಲ್ಲಿ ನೋಡುತ್ತಿರುವಳು (ಮೋಹಿನಿ ಅಥವಾ ಲಕ್ಷ್ಮೀ). ಕನ್ನಡ ಶಾಸನ—"ಹ (ಹಿ ?)ರಿ ಬಿರಿದ ರೂವಾರಿ ಗಿರವಜ್ರದಂಡವಿರಿದ ಪ್ರಸಾದಿ ಮಸ್ತಕ ಶೂಲ ರೂವರಿ (ದಿನಂ)ಇಯ ಬೈಚೋಜ ಮಾಡಿದ ರೂವಾರ ಶ್ರೀ ಶ್ರೀ ಶ್ರೀ.'' ಉಗ್ರನರಸಿಂಹ-ಗರುಡ, ಲಕ್ಷ್ಮೀ-ಪ್ರಹ್ಲಾದ; ಹೃಷೀಕೇಶ–"ರಿಷಿಕೇಸ."

ದಕ್ಷಿಣ ವಿಗ್ರಹಗಳು ಸಣ್ಣಗಿವೆ–ವರಾಹ, ದೇವಿಯರು, ಶಾಸನ "ಲೋಕರತಿ ಜಕೆ ಒಂದು." ಸುಖಾಸನದಲ್ಲಿ ದುರ್ಗಾ, ಆಸೀನ ನರಸಿಂಹ, ಸ್ಥಾನಕ ಪದ್ಮನಾಭ, ವೇಣುಗೋಪಾಲ, ಸೂರ್ಯ-ಋಷಿಗಳು, ಪರಿವಾರ-ಛಾಯಾದೇವಿಯರು, ಅರುಣನು ಸಪ್ತಾಶ್ವಗಳನ್ನು ಓಡಿಸುತ್ತಿರುವುದು, ಪಾದಗಳು ಕಾಣಿಸುತ್ತವೆ; ದಾಮೋದರ.

ಪಶ್ಚಿಮದ ಗೂಡುಗಳು–ನಾರಾಯಣ ದೇವಿಯರು; ಗೂಡಿನ ಒಳಗೆ ಹರಿಹರ (ಅಕ್ಷಮಾಲಾ ತ್ರಿಶೂಲ ಚಕ್ರ ಪಾತ್ರ) ಚಂಡಿಕೇಶ; ಆಸೀನ ದೇವಿಯರು–ಪಾರ್ವತಿ (ಅಕ್ಷಮಾಲಾ ತ್ರಿಶೂಲ ಫಲ–ಶಾಸನ "ರೂವಾರಿ ಮಲ್ಲಿತಮ್ಮನ ಬಾವ(?) ಬಾಗಿಯ ರೂವಾರಿ"), ಲಕ್ಷ್ಮೀ (ಅಕ್ಷಮಾಲಾ ಚಕ್ರ ಶಂಖ ಗದಾ); ಸರಸ್ವತೀ (ಅಕ್ಷಮಾಲಾ ದಂಡ ಅಂಕುಶ ಕಳಶ); ಸಂಕರ್ಷಣ, "ಸಂಕರುಸನ" ಪಾರಿಜಾತಾಪಹರಣ–ಇಂದ್ರಶಚೀ. "ಮಲ್ಲಿತಮ್ಮ" ಗರುಡನ ಮೇಲೆ ಕೃಷ್ಣ ಸತ್ಯಭಾಮೆ (ಕಶ್ಯಪ ವಿನತೆಯರಲ್ಲ. ಗರುಡನ ಕೈಯಲ್ಲಿ ಪಾರಿಜಾತವಿದೆ); ವಾಸುದೇವ.

ಉತ್ತರದ ಗೂಡು–ಯೋಗನಾರಾಯಣ, ಎಡಗಡೆ ಲಕ್ಷ್ಮೀ (ಪದ್ಮ ಅಂಕುಶ ಪಾಶ ಪದ್ಮ, "ಲಕ್ಷ್ಮೀ"); ಬಲಗಡೆ ಭೂಮಿ (ಪದ್ಮ ಅಂಕುಶ ಪಾಶ ಕಳಶ); ಗೂಡಿನ ಒಳಗೆ ಶಾರದಾ, ಕುಳಿತಿರುವ ಹಯಗ್ರೀವ (ಯೋಗಮುದ್ರಾ ಅಕ್ಷಮಾಲಾ ಪುಸ್ತಕ ಫಲ); ಎಡಗಡೆ ಸರಸ್ವತಿ, ಬಲಗಡೆ ಗಣೇಶ, ಪ್ರದ್ಯುಮ್ನ, ಧರಣೀ-ವರಾಹ, ವೇಣುಗೋಪಾಲ (ಮಲ್ಲಿತಮ್ಮ ಬೈಚೋಜನ ವಿಗ್ರಹದೊಡನೆ ಹೋಲಿಸಿ); ಗರುಡ, ಅನಿರುದ್ಧ–ನೃತ್ಯ ಮಾಡುತ್ತಿರುವ ಉಷಾ ಎರಡು ಕೈಗಳಲ್ಲೂ ಜಡೆಗಳನ್ನು ಹಿಡಿದಿರುವಳು (ಹೊಸಹೊಳಲಿನಲ್ಲೂ ಅನಿರುದ್ಧನೊಡನೆ ಉಷೆ ಇರುವಳು); ಹಲಾಯುಧ, ಪುರುಷೋತ್ತಮ, ಅಷ್ಟಭುಜಲಕ್ಷ್ಮಿ (ಅಭಯ ಪದ್ಮ ಚಕ್ರ ಸ್ವರ್ಗಹಸ್ತ ಶಂಖ ಫಲ ಲಂಬಹಸ್ತ ದಾನ, ಎಡಗಡೆ ಮೃದಂಗ ಬಲಗಡೆ ಡವಣೆ ಬಾರಿಸುವವರು), ಮಹಿಷಮರ್ದಿನಿ (ಮಲ್ಲಿತಮ್ಮ "ದುರ್ಗೀ"); ಮೋಹಿನಿ ಸರ್ಪ ಹಿಡಿದು ನೃತ್ಯಮಾಡುತ್ತಿರುವಳು; ಅಧೋಕ್ಷಜ; ಕಾಳಿಂಗ ಮರ್ದನ–ನಾಗಿಣಿಯರು; ಸ್ಥಾನಕ ನರಸಿಂಹ; ಅರ್ಜುನ–ಮತ್ಸ್ಯಯಂತ್ರ ತೈಲಪಾತ್ರೆ, ಹೂಮಾಲೆ ಹಿಡಿದ ದ್ರೌಪದೀ; ಸಮಭಂಗದಲ್ಲಿ ನಿಂತ ದೇವೀ

(ಫಲ ಗದಾ ಖೇಟ ಪಾತ್ರೆ–ಮೋಹಿನೀ ?) ಮತ್ತು ಬಲದಲ್ಲಿ ದಕ್ಷಿಣಾ ಮೂರ್ತಿ; ಮೋಹಿನೀ–ಕಪಿ, ಅಚ್ಯುತ, ಪರಶುರಾಮ, ಸುಖಾಸನದಲ್ಲಿ ಲಕ್ಷ್ಮೀನಾರಾಯಣ, ಜನಾರ್ದನ, ತಾಯಿ ಮಗು, ಅಷ್ಟಭುಜ ಶಾರದಾ ನೃತ್ಯ (ಅಕ್ಷಮಾಲಾ ಫಲ ಅಂಕುಶ ಸ್ವರ್ಗಹಸ್ತ ಪಾಶ ಪದ್ಮ ಲಂಬಹಸ್ತ ಪುಸ್ತಕ); ರಾಕ್ಷಸನಮೇಲೆ ಹಯಗ್ರೀವ (ಅಷ್ಟ ಭುಜ ಗಳಲ್ಲಿ ಬಾಣ ಗದಾ ಚಕ್ರ ಕತ್ತಿ ಶಂಖ ಖೇಟ ಧನು ಪದ್ಮ), ಬಲದಲ್ಲಿ ಯುವತಿಯು ಉದ್ದವಾದ ಬಾಲವುಳ್ಳ ಪಕ್ಷಿಯನ್ನು ಬಲಗೈಮೇಲೆ ಹೊಂದಿರುವಳು; ಉಪೇಂದ್ರ; ಕೋದಂಡರಾಮ ಲಕ್ಷ್ಮಣ ಹನುಮಂತ ಸೀತಾ; ಹರಿ; ಪದ್ಮಾಸನದಲ್ಲಿ ದ್ವಿಭುಜ ವಿಷ್ಣು–ಬಲಗೈಯಲ್ಲಿ ಮೋದಕ ಪಾತ್ರೆ, ಎಡಗೈಯಲ್ಲಿ ಕಳಶ, ಹಿಂದೆ ಬಲದಲ್ಲಿ ಚಕ್ರ, ಎಡದಲ್ಲಿ ಶಂಖ, ತೋರಣದಲ್ಲಿ ದಶಾವತಾರ, ಪೀಠದಲ್ಲಿ ಗರುಡ-"ಮಲ್ಲಿತಮ್ಮ" ಶ್ರೀಕೃಷ್ಣ; ಕಾಮಧೇನು, ಛತ್ರ, ಇಬ್ಬರು ದೇವಿಯರು ಪೀಠದಲ್ಲಿ ಐದು ಸಾಲು–ಗಜ ಅಶ್ವ ನಾಗ ಕಳಶ ಗೋಪುರಗಳು-ಅಪೂರ್ವವಾದ ವಿಗ್ರಹ. ಈ ದೊಡ್ಡ ವಿಗ್ರಹಗಳ ಮೇಲೆ ಮೇಲ್ಚಾವಣಿಯ ಬೋದಿಗೆಗಳು ಕೀರ್ತಿಮುಖಗಳಿಂದ ಅಲಂಕೃತವಾಗಿವೆ. ಬಹುಶಃ ಇಲ್ಲಿನವರೆಗೆ ಕೆಳಗಿನ ಅಂತಸ್ತು ಇದ್ದಿತು. ಕಲ್ಲಿನಿಂದ ಕಟ್ಟಿಸಿದ ಗೋಡೆಯನ್ನು ಎತ್ತರಿಸಿದಂತೆ ಕಂಡುಬರುತ್ತದೆ. ಈ ಕಾರ್ನೀಸು ಮೇಲೆ ಗೋಪುರಗಳಲ್ಲಿ ಅನೇಕ ಸಣ್ಣ ವಿಗ್ರಹಗಳಿವೆ. ಇವುಗಳಲ್ಲಿ ಸೂರ್ಯ-ಛಾಯಾ, ನೃತ್ಯಲಕ್ಷ್ಮಿ, ದಶಾವತಾರಗಳು, ಸಮುದ್ರ ಮಥನ, ಅನಂತಶಾಯಿ ವಿಗ್ರಹಗಳೂ ಗಮನಾರ್ಹವಾಗಿವೆ. ಈ ವಿಗ್ರಹಗಳ ಮೇಲೆ ಶಿಖರಗಳ ಸಾಲು ಇದೆ. ಮೇಲ್ಚಾವಣಿಯ ಬೋದಿಗೆ ಮೇಲೆ ಕೀರ್ತಿ ಮುಖ, ಸಿಂಹ, ನರ್ತಕ ಕಪಿ, ಹಂಸ, ಇತ್ಯಾದಿ ವಿಗ್ರಹಗಳಿವೆ. ಇದರ ಮೇಲೆ ನಾಲ್ಕಡಿ ಎತ್ತರದ ಕೈಪಿಡಿ ಗೋಡೆ ಇದೆ. ಇಲ್ಲಿನ ಕಂಬ ಶಿಖರಗಳಲ್ಲಿ ಯಕ್ಷರು ವಿಷ್ಣುವಿನ ಸ್ಥಾನಕ ರೂಪಗಳೂ ಇವೆ.

ದಕ್ಷಿಣ ಮತ್ತು ಉತ್ತರ ಗೋಪುರಗಳನ್ನು ಇಟ್ಟಿಗೆ ಗಾರೆಯಿಂದ ಇತ್ತೀಚೆಗೆ ಕಟ್ಟಿರುವರು. ಇವುಗಳ ಭಾರದಿಂದ ಗೋಡೆಗಳು ಬಗ್ಗಿವೆ. ಮುಖ್ಯ ಗೋಪುರ ಬಳಪದಕಲ್ಲಿನಿಂದ ಕಟ್ಟಿದ ಮೂರು ಅಂತಸ್ತಿನದಾಗಿದೆ. ಇದರ ಮೇಲೆ ಆಮಲಕ ಕಳಶಗಳಿವೆ. ಸುಕನಾಸಿ ಮೇಲೆ ಚಾಚಿರುವ

ಭಾಗದಲ್ಲಿ ಕೀರ್ತಿಮುಖ ಗರುಡ ಇವೆ. ಕೀರ್ತಿಮುಖದ ಕೆಳಗೆ ನಾಲ್ಕು ಭುಜದ ಯಕ್ಷ ವಿಗ್ರಹವಿದ್ದಿತು. ಸಳ–ವ್ಯಾಘ್ರ ವಿಗ್ರಹ ಅದೃಶ್ಯವಾಗಿದೆ. ಪಾತಾಳಾಂಕಣ ಹಜಾರ ಹೊರಗಿನ ನವರಂಗಗಳು ವಿಜಯನಗರ ಕಾಲದ ಕಟ್ಟಡಗಳು. ಮುಖಮಂಡಪ ಹೊಯ್ಸಳ ಕಾಲದ್ದು. ಇಲ್ಲಿ ನಾಲ್ಕು ದುಂಡಾದ ಕಂಬಗಳಿವೆ. ಭುವನೇಶ್ವರಿಯಲ್ಲಿ ವಿಗ್ರಹಗಳೂ ಸಿಂಹಗಳೂ ಇವೆ. ನವರಂಗದ್ವಾರದ ಮೇಲೆ ಸರಸ್ವತಿ ವೀಣೆಯನ್ನು ಬಾರಿಸುತ್ತಿರುವಳು. ಗಜಲಕ್ಷ್ಮಿ ಇಲ್ಲ. ನವರಂಗದ ಪಶ್ಚಿಮ ಗೋಡೆಯ ಹತ್ತಿರ ಗಣೇಶ ಮಹಿಷಮರ್ದಿನಿ ವಿಗ್ರಹಗಳಿವೆ. ನವರಂಗದ ನಾಲ್ಕು ಕಂಬಗಳು ದುಂಡಾಗಿವೆ. ಒಂಬತ್ತು ಅಂಕಣಗಳ ಮೇಲ್ಛಾವಣಿಗಳಲ್ಲಿ ರೇಖಾಚಿತ್ರಗಳಿವೆ. ಐದನೆ ಮತ್ತು ಎಂಟನೆಯ ಮೇಲ್ಛಾವಣಿಗಳಲ್ಲಿ ಮಾತ್ರ ಯಕ್ಷರು ಅಷ್ಟದಿಕ್ಪಾಲಕರು ಇರುವರು. ಮಧ್ಯದ ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರು, ಸಿಂಹಗಳ ಸಾಲು, ನಕ್ಷತ್ರಾಕಾರದ ಮತ್ತು ವೃತ್ತಪಟ್ಟಿಕೆಗಳೂ ಇವೆ.

ದಕ್ಷಿಣ ಗರ್ಭಗುಡಿಗೆ ಸುಕನಾಸಿ ಇಲ್ಲ. ದ್ವಾರದಮೇಲೆ ಅಮರನಾರಾಯಣ ವಿಗ್ರಹವಿದೆ. ಒಳಗೆ ಗರುಡಪೀಠದ ಮೇಲೆ ಸುಂದರವಾದ ವೇಣುಗೋಪಾಲ ವಿಗ್ರಹವಿದೆ. ಮೇಲ್ಛಾವಣಿಯಲ್ಲಿ ಪದ್ಮ ಕೆತ್ತಿದೆ.

ಉತ್ತರ ಗರ್ಭಗುಡಿ ದ್ವಾರದಮೇಲೆ ಲಕ್ಷ್ಮೀನರಸಿಂಹ, ಅದರಮೇಲೆ ಮಕರಗಳ ಮಧ್ಯದಲ್ಲಿ ಯೋಗನರಸಿಂಹ ವಿಗ್ರಹಗಳಿವೆ. ಗರುಡಪೀಠದ ಮೇಲೆ ಸುಖಾಸನದಲ್ಲಿ ಲಕ್ಷ್ಮೀನರಸಿಂಹನು ಕುಳಿತಿರುವನು.

ಪಶ್ಚಿಮದ ಸುಕನಾಸಿ ದ್ವಾರದಮೇಲೆ ಲಕ್ಷ್ಮಿ, ಅದರ ಮೇಲೆ ಎರಡು ಹಂಸಗಳ ಮಧ್ಯದಲ್ಲಿ ಒಂದು ವಿಗ್ರಹವೂ ಇವೆ. ಗರ್ಭಗುಡಿಯ ದ್ವಾರದಮೇಲೆ ಲಕ್ಷ್ಮೀನಾರಾಯಣ ಕೇಶವ ವಿಗ್ರಹಗಳಿವೆ. ಗರುಡ ಪೀಠದ ಮೇಲೆ ನಾಲ್ಕೂವರೆ ಅಡಿ ಎತ್ತರದ ಕೇಶವಮೂರ್ತಿ ಇದೆ. ಮೂರು ಗರ್ಭಗುಡಿಗಳ ವಿಗ್ರಹಗಳ ತೋರಣಗಳ ಮೇಲೆ ದಶಾವತಾರಗಳಿವೆ. ಮಹಾದ್ವಾರ ಅಥವಾ ಉಪ್ಪರಿಗೆ ಹೊಯ್ಸಳರ ಕಾಲದ ದುಂಡಾದ ಸ್ತಂಭಗಳನ್ನು ಹೊಂದಿದೆ.

ಕೇಶವ ದೇವಾಲಯಕ್ಕೆ ಈಶಾನ್ಯದಲ್ಲಿ ೧೨೪೯ರಲ್ಲಿ ನಿರ್ಮಿಸಿದ ಸದಾಶಿವ ದೇವಾಲಯವಿದೆ. ಮಹಾದ್ವಾರ, ಸ್ತಂಭಗಳು, ಪಾತಾಳಾಂಕಣ,

ಮುಖಮಂಡಪ, ಹೊರಗಿನ ನವರಂಗ, ಪಾರ್ವತಿ ಗುಡಿಗಳನ್ನು ವಿಜಯ ನಗರ ಪಾಳೆಯಗಾರರ ಕಾಲದಲ್ಲಿ ಸೇರಿಸಿರುವರು.

ನವರಂಗದ ಪಶ್ಚಿಮ ಭಾಗದಲ್ಲಿ ಒಂದು ಅಂಕಣ, ಎರಡು ಸ್ತಂಭಗಳು–ಸಣ್ಣ ಮುಖಮಂಡಪದಲ್ಲಿ ಅಷ್ಟಕೋಣ ನಕ್ಷತ್ರಾಕಾರ ವಿನ್ಯಾಸದಲ್ಲಿವೆ. ಗರ್ಭಗುಡಿಯನ್ನು ಇದೇ ವಿನ್ಯಾಸದಲ್ಲಿ ಕಟ್ಟಿದೆ. ಈ ದೇವಾಲಯದಲ್ಲಿ ಮಾತ್ರ ಈ ವಿನ್ಯಾಸ ಕಂಡುಬರುತ್ತದೆ. ಈ ಮುಖ ಮಂಡಪದ ಮೇಲ್ಛಾವಣಿಯಲ್ಲಿ ದಿಕ್ಪಾಲಕರೂ ವೃತ್ತಗಳೂ ಇವೆ.

ನವರಂಗದ ದ್ವಾರಗಳು ದಕ್ಷಿಣ ಮತ್ತು ಪೂರ್ವಾಭಿಮುಖಗಳಾಗಿವೆ. ಬಹುಶಃ ದಕ್ಷಿಣದಲ್ಲಿ ಮುಖ್ಯ ದ್ವಾರವಿದ್ದಿತು. ನವರಂಗದ್ವಾರದ ಮೇಲೆ ನಂದಿವಾಹನ ವಿಗ್ರಹವಿದೆ. ನವರಂಗದಲ್ಲಿ ನಾಲ್ಕು ದುಂಡಾದ ಕಂಬಗಳೂ ಒಂಬತ್ತು ಮೇಲ್ಛಾವಣಿ ಭಾಗಗಳೂ ಇವೆ. ಪೂರ್ವದಿಂದ ಪ್ರದಕ್ಷಿಣೆಯಾಗಿ ಈ ಮೇಲ್ಛಾವಣಿಗಳಲ್ಲಿ ತಾಂಡವೇಶ್ವರ–ದಿಕ್ಪಾಲಕರು; ದಿಕ್ಪಾಲಕರು ಮತ್ತು ೧೬ ಕೋಣದ ನಕ್ಷತ್ರಾಕಾರ–ವೃತ್ತಗಳು; ತಪ್ಪಾಗಿ ಕೆತ್ತಿರುವ ದಿಕ್ಪಾಲಕ ವಿಗ್ರಹಗಳು (ದಕ್ಷಿಣದಲ್ಲಿ ಇಂದ್ರ); ದಿಕ್ಪಾಲರು; ಚಪ್ಪಟೆ; ಚತುರಸ್ರ ತೊಲೆಗಳು; ದಿಕ್ಪಾಲಕರು; ವೃತ್ತಗಳು; ದಿಕ್ಪಾಲಕರು ವೃತ್ತಾಕಾರದ ತೊಲೆಗಳೂ ಇವೆ. ನವರಂಗದಲ್ಲಿ ಆಗ್ನೇಯದಿಂದ ದ್ವಿಭುಜಸೂರ್ಯ–ಛಾಯಾದೇವಿಯರೂ, ಸಪ್ತಮಾತೃಕಾ, ವೀರಭದ್ರ, ಗಣೇಶ (ಚಾಮುಂಡಿಗೆ ಬದಲು ಮುಂಗಸಿಯ ಮೇಲೆ ದುರ್ಗ) ಮಹಿಷ ಮರ್ದಿನಿ, ನವಿಲಿನ ಮೇಲೆ ಕುಮಾರ, ಸ್ಥಾನಕ ಕೇಶವ, ಸುಖಾಸನದಲ್ಲಿ ಕುಳಿತಿರುವ ವೀರಭದ್ರ (ಕತ್ತಿ ತ್ರಿಶೂಲ ಡಮರು ಪಾತ್ರೆ) ಮತ್ತು ಎರಡು ನಾಗರಕಲ್ಲುಗಳೂ ಇವೆ. ನವರಂಗದ ಮಧ್ಯದಲ್ಲಿ ಸದಾಶಿವ (ಅಭಯ, ಪರಶು, ಶೂಲ, ದಾನ), ಗಣೇಶ–ಪಾರ್ವತಿ ಉತ್ಸವವಿಗ್ರಹಗಳಿವೆ. ಸದಾಶಿವ ವಿಗ್ರಹದ ಕೆಳಗೆ ಕನ್ನಡ ಅಕ್ಷರದಲ್ಲಿ 'ಗೋಪಾಲ' ಎಂದಿದೆ. ಸುಕನಾಸಿ ದ್ವಾರದಮೇಲೆ ನೃತ್ಯಗಣೇಶ, ಅದರ ಮೇಲೆ ಶಾರದಾಮೂರ್ತಿ ಗಳಿವೆ. ಗರ್ಭಗುಡಿ ದ್ವಾರದಮೇಲೆ ಲಕ್ಷ್ಮಿ, ಅದರಮೇಲೆ ಪಾರ್ವತಿ ಇವೆ. ಗರ್ಭಗುಡಿಯಲ್ಲಿ ಬಳಪದಕಲ್ಲಿನ ಪಾಣಿಪೀಠಲಿಂಗ ಮೂರು ಅಡಿ ಎತ್ತರವಿದೆ.

ಈ ದೇವಾಲಯಕ್ಕೆ ಇದ್ದ ಜಗತಿಯನ್ನು ಸ್ವಲ್ಪ ಮಾತ್ರ ನೋಡಬಹುದು. ದೇವಾಲಯ ಪೂರ್ವದಿಂದ ಪಶ್ಚಿಮಕ್ಕೆ ಇದ್ದು, ಮುಖ್ಯ ದ್ವಾರ ದಕ್ಷಿಣದಲ್ಲಿದ್ದಿತು. ದ್ವಾರಗಳಲ್ಲಿ ಜಾಲಂದ್ರವಿದೆ. ಮೇಲ್ಛಾವಣಿಗಳಲ್ಲಿ ಒಂಬತ್ತು ಪದ್ಮಗಳಿವೆ. ಬಸರಾಳು, ಅರಸೀಕೆರೆ ದೇವಾಲಯಗಳಂತೆ ಪೂರ್ವದ್ವಾರದ ಮುಂದೆ ಒಂದು ಮಂಡಪವಿದೆ. ಇದರ ದ್ವಾರಗಳು ಉತ್ತರ ದಕ್ಷಿಣಗಳಲ್ಲಿವೆ. ದ್ವಾರಗಳಲ್ಲಿ ಜಾಲಂದ್ರವಿದೆ. ಮೇಲ್ಛಾವಣಿಗಳಲ್ಲಿ ಒಂಬತ್ತು ಪದ್ಮಗಳಿವೆ. ಇದಕ್ಕೆ ಪೂರ್ವದಲ್ಲಿ ಪಶ್ಚಿಮಾಭಿಮುಖವಾದ ನಂದಿ ಮಂಡಪವಿದೆ. ಇದರ ದ್ವಾರದಲ್ಲಿ ಜಾಲಂದ್ರ, ಮೇಲೆ ಮಕರಗಳ ಮಧ್ಯದಲ್ಲಿ ಸಿಂಹಲಲಾಟ, ಗೋಡೆಗಳಲ್ಲಿ ಜಾಲಂದ್ರಗಳೂ ಇವೆ. ಸುಂದರವಾದ ನಾಲ್ಕಡಿ ಎತ್ತರದ ನಂದಿ ಇಲ್ಲಿದೆ.

ಈ ದೇವಾಲಯದ ಗರ್ಭಗುಡಿಯ ವಿನ್ಯಾಸ ಅಪೂರ್ವವಾಗಿದೆ. ಅಷ್ಟಕೋಣದ ಮೂಲೆಗಳಲ್ಲಿ ನಕ್ಷತ್ರಗಳು, ಅಷ್ಟಮುಖ ಸ್ತಂಭಗಳು ಅಷ್ಟಕೋಣದ ಪ್ರತಿಯೊಂದು ಮುಖದಮೇಲೂ ಇವೆ. ಇನ್ನೆಲ್ಲಿಯೂ ಈ ವಿನ್ಯಾಸ ಕಂಡುಬರುವುದಿಲ್ಲ. ಬಳಪದಕಲ್ಲಿನ ಶಿಖರವೂ ಬಗ್ಗಿದ ರೇಖೆಯಂತಿದೆ. ಇದರಮೇಲೆ ಅಷ್ಟಾಸ್ರವಾದ ಆಮಲಕವಿದೆ. ಪ್ರತಿಯೊಂದು ಮುಖದ ಮೇಲೆ ಗೋಪುರಗಳೂ ಲತಾಪಟ್ಟಿಕೆಗಳೂ ಇವೆ. ಗೋಡೆಗಳು ಚತುರಸ್ರಾಕಾರವಾಗಿವೆ. ಉತ್ತರ ಗೋಡೆಯಲ್ಲಿ ಮಾತ್ರ ಗೋಪುರದ ಕೆಳಗೆ ಕುಳಿತಿರುವ ಬ್ರಹ್ಮ (?) ವಿಗ್ರಹವಿದೆ. ಸುಕನಾಸಿಯ ಮೇಲೆ ಚಾಚಿರುವ ಭಾಗದಲ್ಲಿ ಸಳ–ವ್ಯಾಘ್ರ ವಿಗ್ರಹವಿದೆ. ದೇವಾಲಯದ ಗೋಡೆ ಮತ್ತು ಮೇಲ್ಛಾವಣಿ ದ್ವಿಗುಣಿತವಾಗಿವೆ. ನಂದಿಗುಡಿಯ ಮೇಲ್ಭಾಗದಲ್ಲಿ ಬಳಪದಕಲ್ಲಿನ ಕೈಪಿಡಿಗೋಡೆ ಇದೆ. ಈ ದೇವಾಲಯದ ತಲವಿನ್ಯಾಸ ಮತ್ತು ಶಿಖರದ ಆಕಾರ ಗಮನಾರ್ಹವಾಗಿವೆ.

ಭಾಗ ೪

ಇತರ ಸಣ್ಣ ಹೊಯ್ಸಳ ದೇವಾಲಯಗಳು

(ಮುಂದುವರೆದುದು)

೪೮. ಚೆನ್ನರಾಯಪಟ್ಟಣ : ಹೊಯ್ಸಳರ ಕಾಲದಲ್ಲಿ ಚೆನ್ನರಾಯ ಪಟ್ಟಣಕ್ಕೆ ಕೊಳತೂರು ಎಂಬ ಹೆಸರಿದ್ದಿತು. ಕ್ರಿ. ಶ. ೧೫೦೦ರವರೆಗೂ ಇದೇ ಹೆಸರು ಕಂಡುಬರುತ್ತದೆ. ಅನಂತರ ಬಹುಶಃ ವಿಜಯನಗರದ ಅಧಿಕಾರಿಯಾದ ಚೆನ್ನರಾಯನೆಂಬುವನಿಂದ ಇದಕ್ಕೆ ಈಗಿನ ಹೆಸರು ಬಂದಿರಬಹುದು. ಹೊಯ್ಸಳರ ಕಾಲದಲ್ಲಿ ಅಮೃತಯ್ಯ ದಂಡನಾಯಕನು ಚೆನ್ನಕೇಶವ ಮತ್ತು ಅಮೃತನಾಥ ದೇವಾಲಯಗಳನ್ನು ಕಟ್ಟಿಸಿ, ಅಗ್ರಹಾರಕ್ಕೆ ಅಮೃತನಾಥಪುರವೆಂಬ ಹೆಸರಿಟ್ಟಿದ್ದನು. ಚೆನ್ನಕೇಶವ ದೇವಾಲಯ ಬಳಪದಕಲ್ಲಿನಿಂದ ಕಟ್ಟಿದ್ದರೂ ಸಾಮಾನ್ಯವಾಗಿದೆ. ಹೊರಗಿನ ಜಗತಿ ಗೋಡೆಗಳು, ಕೈಪಿಡಿ ಗೋಡೆಯ ಶಿಖರಗಳು, ಬಳಪದ ಕಲ್ಲಿನ ಗೋಪುರ ಅಲಂಕೃತವಾಗಿಲ್ಲ. ಮುಖಮಂಡಪದಲ್ಲಿ ಎರಡು ದುಂಡಾದ ಸ್ತಂಭಗಳಿವೆ. ವಿಜಯನಗರ ಕಾಲದಲ್ಲಿ ಇದಕ್ಕೆ ಮತ್ತೊಂದು ಮುಖಮಂಡಪ, ಮಹಾದ್ವಾರ, ಗೋಪುರ ಸೇರಿಸಿರುವರು. ನವರಂಗದ ಮೇಲ್ಛಾವಣಿಗಳಲ್ಲಿ ರೇಖಾಚಿತ್ರಗಳಿವೆ. ಭುವನೇಶ್ವರಿಯಲ್ಲಿ ದಿಕ್ಪಾಲಕರೂ ಮಧ್ಯದಲ್ಲಿ ಜೋಲಾಡುವ ಶಂಖವೂ ಇವೆ. ನವರಂಗದ ಸ್ತಂಭಗಳು ಘಂಟಾಕಾರವಾಗಿವೆ. ಸುಕನಾಸಿಯ ಮೇಲ್ಛಾವಣಿಯಲ್ಲಿ ಪದ್ಮವಿದೆ. ಗರ್ಭಗೃಹದಲ್ಲಿ ಸಾಮಾನ್ಯವಾದ ಚೆನ್ನಕೇಶವ ವಿಗ್ರಹವಿದೆ.

ಇದಕ್ಕೆ ಆಗ್ನೇಯದಲ್ಲಿ ವಿಜಯನಗರ ಕಾಲದ ಚಂದ್ರಶೇಖರ (ರಾಮೇಶ್ವರ) ದೇವಾಲಯವಿದೆ. ಊರಿನ ಉತ್ತರ ಕೋಟೆಯ ದ್ವಾರದ ಹತ್ತಿರ ಕಲ್ಯಾಣಿ ಇದೆ. ಇದರ ಪಶ್ಚಿಮದಲ್ಲಿರುವ ಗುಡಿಗಳಲ್ಲಿ ಗಣೇಶ, ನಾಗ, ಲಕ್ಷ್ಮೀನಾರಾಯಣ, ಪಾರ್ವತಿ, ಹೊಯ್ಸಳ ಸಿಂಹಪೀಠದ ಮೇಲೆ ಒಂದು ಸಣ್ಣ ವಿಗ್ರಹ, ಚಂದ್ರ, ಗರುಡನ ಮೇಲೆ ವಿಷ್ಣು, ಪಾರ್ವತಿ, ಕೋದಂಡರಾಮ, ವಾಮನ, ಅರ್ಜುನನ ತಪಸ್ಸು, ನರಸಿಂಹ, ಶಿವಲಿಂಗ,

ಷಣ್ಮುಖ, ನಂದಿ ವಿಗ್ರಹಗಳಿವೆ. ಊರಿನ ಈಶಾನ್ಯದಲ್ಲಿ ಕೆರೆಯ ಹತ್ತಿರ ಬಳಪದಕಲ್ಲಿನ ಸಾತೇಶ್ವರ ದೇವಾಲಯ ಸುಮಾರು ೧೧೮೨ರಲ್ಲಿ ನಿರ್ಮಿತ ವಾಯಿತು. ನವರಂಗದ ದುಂಡು ಕಂಬಗಳು, ದ್ವಾರದ ಜಾಲಂದ್ರ ಹೊಯ್ಸಳ ಕೆಲಸವಾಗಿದೆ. ಗರ್ಭಗುಡಿಯ ಲಿಂಗವನ್ನು ಶಾಂತಲೇಶ್ವರ ಎಂದೂ, ದಂಡನಾಯಕ ಮಾಚಯ್ಯನ ಹೆಂಡಿತಿಯಾದ ಸಾತವ್ವೆಯ ಹೆಸರಿನಲ್ಲಿ ಪ್ರತಿಷ್ಠಿತವಾಯಿತೆಂದೂ ದೇವಾಲಯದ ಆಗ್ನೇಯದಲ್ಲಿರುವ ಶಾಸನದಿಂದ ತಿಳಿದುಬರುತ್ತದೆ. ನವರಂಗದಲ್ಲಿ ಗಣೇಶ, ನಂದಿ, ಕೇಶವ ವಿಗ್ರಹಗಳಿವೆ. ದ್ವಾರದ ಮುಂದೆ ಇರುವ ಬಳಪದಕಲ್ಲಿನ ಮೇಲೆ ಶಿವನ ಪಾದಗಳು, ಸರ್ಪಗಳು, ತಲೆ ಇಲ್ಲದ ಮನುಷ್ಯರು, ಪ್ರಾಣಿಗಳು ಚಿತ್ರಿತ ವಾಗಿದೆ. ಊರಿನ ಆಗ್ನೇಯದಲ್ಲಿ ಹೊಯ್ಸಳ ಕಾಲದ ಬಳಪದಕಲ್ಲಿನ ಗದ್ದೆರಾಮೇಶ್ವರ ಗುಡಿ ಇದೆ. ಮೆಟ್ಟಲು ಮೆಟ್ಟಲಾದ ಗೋಪುರ, ಅದರ ಮೇಲೆ ಆಮಲಕ ಮತ್ತು ಕಲಶ, ಇದರ ಮುಂದೆ ಸಳವಿಗ್ರಹ, ಬಳಪದ ಕಲ್ಲಿನ ಗೋಡೆಗಳು ಹೊಯ್ಸಳ ಶಿಲ್ಪವನ್ನು ಸೂಚಿಸುತ್ತವೆ. ಹಳೆಯ ನವರಂಗ, ಸುಕನಾಸಿ ಮತ್ತು ಗರ್ಭಗುಡಿಗಳು ಚಿಕ್ಕದಾಗಿದ್ದವು. ನವರಂಗದ ಸ್ತಂಭಗಳು ಸಾಮಾನ್ಯವಾಗಿವೆ. ಮೇಲ್ಛಾವಣಿಯಲ್ಲಿ ಪದ್ಮವಿದೆ. ನವರಂಗದಲ್ಲಿ ಪಾಳೆಯಗಾರರ ಕಾಲದ ನಂದಿ ಗಣೇಶ ಷಣ್ಮುಖ ಜನಾರ್ದನ ಸೂರ್ಯರ ವಿಗ್ರಹಗಳನ್ನಿಟ್ಟಿರುವರು. ಸುಕನಾಸಿ ದ್ವಾರದಲ್ಲಿ ಜಾಲಂದ್ರವಿದೆ. ಗರ್ಭಗುಡಿಯ ಲಿಂಗವು ಸಣ್ಣದಾಗಿದೆ. ಹದಿನೇಳನೆಯ ಶತಮಾನದಲ್ಲಿ ಕಣಶಿಲೆಯ ಮುಖಮಂಡಪವನ್ನು ನಿರ್ಮಿಸಲಾಯಿತು. ಒಂದು ಕಂಬದಮೇಲೆ ಕೊಕ್ಕುಗಳಲ್ಲಿ ಆನೆಗಳನ್ನು ಹಿಡಿದಿರುವ ಗಂಡಭೇರುಂಡ ಚಿತ್ರಿತವಾಗಿದೆ. ದೇವಾಲಯದ ಮುಂದಿನ ಅಂಗಳದಲ್ಲಿ ಬಳಪದಕಲ್ಲಿನ ಸ್ತಂಭದ ಮೇಲೆ ದ್ವಿಮುಖದ ನಂದಿ ಇದೆ. ಈಚೆಗೆ ಗಾರೆಯ ನಂದಿಗಳನ್ನು ಸೇರಿಸಿರುವರು.

೪೯. ಹಿರಿಸಾವೆ : ಇಲ್ಲಿ ಹದಿನಾಲ್ಕನೆಯ ಶತಮಾನದ ಹೊಯ್ಸಳ-ದ್ರಾವಿಡ ರೀತಿಯ ಕೇಶವ ದೇವಾಲಯವಿದೆ. ಗರುಡಪೀಠದ ಮೇಲೆ ಐದಡಿ ಎತ್ತರದ ಕೇಶವ ವಿಗ್ರಹವಿದೆ. ಗರ್ಭಗುಡಿ ಸುಕನಾಸಿ ದ್ವಾರಗಳು ಬಳಪದಕಲ್ಲಿನ ಹೊಯ್ಸಳ ಕೆಲಸ. ಸುಕನಾಸಿ ದ್ವಾರದಲ್ಲಿ ಜಾಲಂದ್ರ ಗಳಿವೆ.

೫೦. **ಗ್ರಾಮ :** ಇಲ್ಲಿನ ಚೆನ್ನಕೇಶವ ಗುಡಿಯ ಹೊರಗೋಡೆ, ನವರಂಗದ ಒಂದು ಕಂಬಮಾತ್ರ ಹೊಯ್ಸಳ ಕಾಲದ್ದಾಗಿವೆ. ಧರ್ಮೇಶ್ವರ ದೇವಾಲಯದ ನವರಂಗ, ಸ್ತಂಭಗಳು, ಭುವನೇಶ್ವರಿ, ಪೂರ್ವದ್ವಾರ ಹೊಯ್ಸಳ ಕೆಲಸವಾಗಿವೆ. ಶಾಂತಿನಾಥ ಬಸದಿಯಲ್ಲಿ ಮೂರು ಅಡಿ ಎತ್ತರದ ಸ್ಥಾನಕ ಶಾಂತಿನಾಥ ವಿಗ್ರಹವನ್ನು ಸುಮತಿ ಭಟ್ಟಾರಕರು ಸ್ಥಾಪಿಸಿದರೆಂದು ಪೀಠದ ಮೇಲಿರುವ ಶಾಸನದಿಂದ ತಿಳಿದುಬರುತ್ತದೆ. ಇದರ ಸುಕನಾಸಿ ದ್ವಾರದಲ್ಲಿ ಜಾಲಂದ್ರದ ಮೇಲೆ ಶಾಂತಿನಾಥ ವಿಗ್ರಹ ಇದೆ. ವೀರಭದ್ರ ದೇವಾಲಯದ ಗರ್ಭಗೃಹ, ಸುಕನಾಸಿ, ನವರಂಗಗಳು ಹೊಯ್ಸಳ ಕಾಲದ್ದಾಗಿವೆ. ನವರಂಗದ ನಾಲ್ಕು ಸ್ತಂಭಗಳು ಘಂಟಾಕಾರ ವಾಗಿವೆ. ಭುವನೇಶ್ವರಿಯಲ್ಲಿ ದಿಕ್ಪಾಲಕರು, ನರ್ತಕರು ಇವುಗಳ ಮೇಲೆ ಒಂಬತ್ತು ಫಲಕಗಳೂ ಇವೆ. ಮಧ್ಯ ಫಲಕದಲ್ಲಿ ತಾಂಡವೇಶ್ವರ, ಪಶ್ಚಿಮದಲ್ಲಿ ಕುಮಾರ, ಪೂರ್ವದಲ್ಲಿ ನೃತ್ಯಗಣಪತಿ, ಉತ್ತರದಲ್ಲಿ ಬ್ರಹ್ಮ, ದಕ್ಷಿಣದಲ್ಲಿ ವಿಷ್ಣು ಇರುವರು. ಸುಕನಾಸಿ ಗರ್ಭಗುಡಿಗಳಲ್ಲಿ ವೀರಭದ್ರ ನಂದಿ ಇತ್ಯಾದಿ ವಿಗ್ರಹಗಳಿವೆ. ಮೂಲವಿಗ್ರಹವಾದ ವೀರಭದ್ರ ವಿಜಯನಗರದ ಕಾಲದ್ದೆಂದು ಕಂಡುಬರುತ್ತದೆ. ನವರಂಗದ ಮುಂದಿನ ಮಂಡಪದಲ್ಲಿ ನವರಂಗದಲ್ಲಿದ್ದ ಮಹಿಷಮರ್ದಿನಿಗಾಗಿ ಒಂದು ಗುಡಿಯನ್ನು ಕಟ್ಟಿರುವರು.

ಗ್ರಾಮ ಅಥವಾ ಶಾಂತಿಗ್ರಾಮದಲ್ಲಿ ಶಿವ ವಿಷ್ಣು ಜಿನ ದೇವಾಲಯ ಗಳೆಲ್ಲ ಇದ್ದವು. ಈಚೆಗೆ ಇವುಗಳನ್ನೆಲ್ಲ ಜೀರ್ಣೋದ್ಧಾರ ಮಾಡಲಾಗಿದೆ.

೫೧. **ಹೊಸಹೊಳಲು :** ಹೊಸಹೊಳಲಿನ ಲಕ್ಷ್ಮೀನಾರಾಯಣ ದೇವಾಲಯದ ನಿರ್ಮಾಣ ಕಾಲವನ್ನು ನಿರ್ಧರಿಸಲು ಶಾಸನಾಧಾರಗಳು ಸಿಕ್ಕಿಲ್ಲ. ಬಹುಶಃ ಹದಿಮೂರನೆಯ ಶತಾಬ್ದದ ಮಧ್ಯಭಾಗದಲ್ಲಿ ರಚಿತವಾಗಿರಬೇಕೆಂದು ಊಹಿಸಬಹುದು. ಬಹಳ ಕಾಲದವರೆಗೂ ದೇವಾಲಯವು ಇದೇ ಹೊಯ್ಸಳ ರೀತಿಯಲ್ಲಿದ್ದು, ಇತ್ತೀಚೆಗೆ ಕಣಶಿಲೆಯ ಮಂಡಪವನ್ನು ರಚಿಸಿರುವರು. ೧೯೫೩ರಲ್ಲಿ ವೇಣುಗೋಪಾಲ ಲಕ್ಷ್ಮೀ ವಿಗ್ರಹಗಳ ಪ್ರತಿಷ್ಠೆಯು ವೈಖಾನಸಾಗಮ ರೀತಿಯಲ್ಲಿ ನಡೆಯಿತು. ಹೊಯ್ಸಳ ಅಗ್ರಹಾರವಾದ ಹೊಸಹೊಳಲಿನಲ್ಲಿ ಮಧ್ಯದಲ್ಲಿ ಲಕ್ಷ್ಮೀ

ನಾರಾಯಣ, ಈಶಾನ್ಯದಲ್ಲಿ ಹರಿಹರೇಶ್ವರ ದೇವಾಲಯುಗಳು, ಸುತ್ತಲೂ ಕೋಟೆ ಇದ್ದಂತೆ ಕಂಡಬರುತ್ತದೆ. ಈಗ ಅಗ್ರಹಾರವು ಅದೃಶ್ಯವಾಗಿದೆ.

ಲಕ್ಷ್ಮೀನಾರಾಯಣ ಗುಡಿಯು ತ್ರಿಕೂಟಾಚಲವಾಗಿದೆ. ನಾಲ್ಕೂವರೆ ಅಡಿ ಎತ್ತರದ ಜಗತಿಯ ಮೇಲೆ ನಕ್ಷತ್ರಾಕಾರವಾಗಿ ಗರ್ಭಗುಡಿಯು ಇದೆ. ನವರಂಗಕ್ಕೆ ಪೂರ್ವದಲ್ಲಿ ಜಗತಿ, ದ್ವಾರಗಳಿವೆ. ಉತ್ತರ ಮತ್ತು ದಕ್ಷಿಣ ಗರ್ಭಗುಡಿಗಳು ಚತುರಸ್ರವಾಗಿವೆ. ಮಧ್ಯದ ಗರ್ಭಗುಡಿ ಹದಿನಾರು ಕೋಣದ ನಕ್ಷತ್ರವಿನ್ಯಾಸವಾಗಿ ಉತ್ತರ ದಕ್ಷಿಣ ಪಶ್ಚಿಮಗಳಲ್ಲಿ ಗೂಡುಗಳನ್ನು ಹೊಂದಿದೆ. ಇದಕ್ಕೆ ಮಾತ್ರ ಸುಕನಾಸಿ ಶಿಖರಗಳಿವೆ. ಇದು ನುಗ್ಗಿಹಳ್ಳಿ ಸೋಮನಾಥಪುರ ದೇವಾಲಯಗಳ ಸಮಕಾಲೀನವೆಂದು ಹೇಳಬಹುದು.

ಜಗತಿಗೆ ಆಧಾರವಾಗಿ ಆನೆಗಳಿದ್ದವು. ಈಗ ಐದು ಮಾತ್ರ ಆನೆಗಳಿವೆ. ಹೊರಗೋಡೆಯ ಕೆಳಭಾಗಗಳಲ್ಲಿ ಚಿತ್ರಪಟ್ಟಿಕೆಗಳಿವೆ. ಮೊದಲು ಆನೆಗಳ ಸಾಲು ಮನುಷ್ಯ ಯಕ್ಷರು ಇರುವರು. ಇದರಮೇಲೆ ಅಶ್ವಗಳು ಅಂಗರಕ್ಷೆಗಳನ್ನು ಹೊಂದಿವೆ. ಅನಂತರ ಲತಾಪಟ್ಟಿಕೆ ದೇವಾಲಯದ ಸುತ್ತಲೂ ಇದೆ. ಇದರ ಮೇಲೆ ಪೌರಾಣಿಕ ಕಥೆಗಳ ಪಟ್ಟಿಕೆಯಲ್ಲಿ ಸಮುದ್ರಮಥನ, ದಕ್ಷಿಣದಲ್ಲಿ ರಾಮಾಯಣ, ಪಶ್ಚಿಮದಲ್ಲಿ ಮಹಾಭಾರತ, ಉತ್ತರದಲ್ಲಿ ಭಾಗವತ ಚಿತ್ರಿತವಾಗಿವೆ. ಈ ವಿಗ್ರಹಗಳಲ್ಲಿ ಕೆಳಗಿನವು ಮುಖ್ಯವಾದುವು :

ವರಾಹ–ರಾಕ್ಷಸರು, ಗರುಡ–ದೇವತೆಗಳು, ಗರುಡನು ಅಮೃತ ಕಳಶವನ್ನು ತರುವುದು, ದಿಕ್ಪಾಲಕರು, ಸಮುದ್ರಮಥನ, ಹಿರಣ್ಯಕಶಿಪು–ಪ್ರಹ್ಲಾದ, ಪ್ರಹ್ಲಾದನಿಗೆ ಹಿಂಸೆ-ವಿಷ್ಣುವಿನ ವಿಶ್ವರೂಪ, ಹಿರಣ್ಯಕಶಿಪು ಸಂಹಾರ, ಕುಮಾರಸ್ವಾಮಿಯು ದೇವಸೇನೆಯನ್ನು ಕಳುಹಿಸುವುದು, ಶಿವಗಣಗಳು ರಾಕ್ಷಸರನ್ನು ಸೋಲಿಸುವುದು (ಅಂಧಕಾಸುರ ?), ಶಿವನು ಗಜಾಸುರನನ್ನು ಸಂಹರಿಸುವುದು.

ರಾಮಾಯಣ-ದಶರಥ, ರಾಣಿಯರು, ಪುತ್ರಕಾಮೇಷ್ಟಿ, ಅಹಲ್ಯಾ ವಿಮೋಚನ (ಸೀತೆಯ ಜನನ ?), ರಾಮಲಕ್ಷ್ಮಣರು ಜನಕನ ಬಳಿಗೆ ಹೋಗುವುದು, ಸೀತಾಕಲ್ಯಾಣ, ಪರಶುರಾಮನ ಗರ್ವಭಂಗ, ರಾಮನ

ಯೌವರಾಜ್ಯಕ್ಕೆ ಪ್ರಯತ್ನ, ರಾಮ ಲಕ್ಷ್ಮಣ ಸೀತೆಯರು ಅರಣ್ಯಕ್ಕೆ ಹೋಗುವುದು, ಕಬಂಧ ಖರದೂಷಣ ಸಂಹಾರ, ಶೂರ್ಪನಖಿಯ ನಾಸಿಕಾಛೇದ, ರಾಮ-ಸುವರ್ಣಮೃಗ, ರಾವಣನು ಋಷಿಯ ವೇಷದಲ್ಲಿ ಸೀತೆಯನ್ನಪಹರಿಸುವುದು, ಜಟಾಯು ಮರಣ, ರಾಕ್ಷಸಸಂಹಾರ, ರಾಮ-ಹನುಮಂತ ಸಮಾಗಮ, ವಾಲಿ-ಸುಗ್ರೀವ ಯುದ್ಧ, ಸಪ್ತತಾಳಛೇದನ, ವಾಲಿಸಂಹಾರ, ಸುಗ್ರೀವನ ಪಟ್ಟಾಭಿಷೇಕ, ಹನುಮಂತನು ರಾಮನ ಮುದ್ರಿಕೆಯನ್ನು ತೆಗೆದುಕೊಳ್ಳುವುದು, ಸ್ವಯಂಪ್ರಭೆಯ ಗುಹೆಯಿಂದ ಕಪಿಗಳನ್ನು ಬಿಡಿಸಿ ಹನುಮಂತನು ಸಮುದ್ರವನ್ನು ಸೇರುವುದು, ಸಮುದ್ರ ಲಂಘನ, ಲಂಕಿಣಿ ಸೀತೆಯರನ್ನು ನೋಡುವುದು, ರಾಕ್ಷಸರೊಡನೆ ಯುದ್ಧ, ಇಂದ್ರಜಿತ್ತಿಗೆ ಸೆರೆಯಾಗುವುದು, ರಾವಣನೊಡನೆ ಭೇಟಿ, ಲಂಕಾದಹನ, ಸೇತುಬಂಧನ, ಯುದ್ಧಾರಂಭ, ರಾವಣನ ಸೈನ್ಯ, ಲಕ್ಷ್ಮಣನ ಮೂರ್ಛೆ, ಹನುಮಂತನು ಸಂಜೀವವನ್ನು ತರುವುದು, ಲಕ್ಷ್ಮಣನ ಯುದ್ಧ, ಇಂದ್ರಜಿತ್ತು ಯಜ್ಞಮಾಡುವುದು, ಇಂದ್ರಜಿತ್ಸಂಹಾರ, ರಾಮ-ರಾವಣ ಯುದ್ಧ, ರಾವಣಸಂಹಾರ, ವಿಭೀಷಣಪಟ್ಟಾಭಿಷೇಕ, ಸೀತೆಯ ಅಗ್ನಿ ಪರೀಕ್ಷೆ, ರಾಮನು ರಾಮೇಶ್ವರಲಿಂಗವನ್ನು ಪ್ರತಿಷ್ಠಿಸಿದುದು, ಸೀತಾ ರಾಮರು ಪುಷ್ಪಕವಿಮಾನದಲ್ಲಿ ಹಿಂದಿರುಗುವುದು.

ಮಹಾಭಾರತ–ಭೀಮನು ಕೌರವರನ್ನು ಮರದಿಂದ ಉರುಳಿಸುವುದು, ಅಕ್ಷದ್ಯೂತ, ದ್ರೌಪದಿ ವಸ್ತ್ರಾಪಹರಣ, ಕೃಷ್ಣ–ಪಾಂಡವರು, ಇಬ್ಬರು ವೀರರ ಯುದ್ಧ, ಕಿರಾತಾರ್ಜುನೀಯ, ಪಾಶುಪತಾಸ್ತ್ರದಾನ, ವಿರಾಟನಗರದಲ್ಲಿ ಭೀಮನು ಮಲ್ಲರನ್ನೂ ಗಜವನ್ನೂ ಗೆಲ್ಲುವುದು, ಕೀಚಕ ವಧೆ, ವಿರಾಟನ ಗೋವುಗಳನ್ನು ಅರ್ಜುನನು ರಕ್ಷಿಸುವುದು, ಯುದ್ಧ, ದುಶ್ಶಾಸನ ಸಂಹಾರ, ಭೀಮ–ಭಗದತ್ತನ ಆನೆ, ಅರ್ಜುನನು ಸಂಶಪ್ತಕರ ಕೈಗಳನ್ನು ಬಾಯಿಗೆ ಬಾಣದಿಂದ ಕೂಡಿಸುವುದು, ಯೋಗಿಯ ಶಿರಚ್ಛೇದ (ಭೂರಿಶ್ರವ ?), ಸೈಂಧವನ ತಲೆ ಹಾರಿ ತಂದೆಯ ಕೈಯಲ್ಲಿ ಬೀಳುವುದು, ದ್ರೋಣನ ಶಸ್ತ್ರಸಂನ್ಯಾಸ ಮತ್ತು ಧೃಷ್ಟದ್ಯುಮ್ನನಿಂದ ಶಿರಚ್ಛೇದ, ಚಕ್ರವ್ಯೂಹ (ಇದನ್ನು ಈಗ ಗರ್ಭಿಣಿಯರು ಪೂಜಿಸುವರು), ಅಭಿಮನ್ಯು ವಧೆ, ಕರ್ಣನ ಪಟ್ಟಾಭಿಷೇಕ, ಕರ್ಣಾರ್ಜುನರ ಕಾಳಗ, ಭೀಮನು

ಕೌರವರನ್ನು ಸಂಹರಿಸುವುದು, ದುರ್ಯೋಧನನು ವೈಶಂಪಾಯನ ಸರೋವರದಿಂದ ಬರುವುದು, ಗದಾಯುದ್ಧ, ಅಶ್ವತ್ಥಾಮನ ಪ್ರತಿಜ್ಞೆ, ಕೃಷ್ಣನು ಪಾಂಡವರನ್ನು ರಕ್ಷಿಸುವುದು, ಉಪಪಾಂಡವ ವಧೆ, ಅವರ ತಲೆಗಳನ್ನು ಅಶ್ವತ್ಥಾಮನು ದುರ್ಯೋಧನನಿಗೆ ತೋರಿಸುವನು, ಅರ್ಜುನ–ಅಶ್ವತ್ಥಾಮ ಯುದ್ಧ, ಕೃಷ್ಣನು ಚಕ್ರದಿಂದ ಉತ್ತರಾಕುಮಾರನನ್ನು ರಕ್ಷಿಸುವುದು, ಪಾಂಡವರು ವೃಕ್ಷವನ್ನು ಪೂಜಿಸುವುದು, ಭೀಷ್ಮನಿರ್ಯಾಣ, ಯುಧಿಷ್ಠಿರನ ಪಟ್ಟಾಭಿಷೇಕ.

ರಾಜನ ದರ್ಬಾರು (ಬಹುಶಃ ಹೊಯ್ಸಳ ರಾಜ. ಬೇಲೂರು ಹಳೆಯಬೀಡುಗಳಲ್ಲಿದ್ದಂತೆ).

ಈ ಪೌರಾಣಿಕ ಕಥೆಗಳ ಸಾಲಿನಮೇಲೆ ಮಕರಗಳೂ, ಅದರ ಮೇಲೆ ಹಂಸಗಳೂ, ಮೂಲೆಗಳಲ್ಲಿ ಸಿಂಹಗಳೂ ಇವೆ.

ಗರ್ಭಗುಡಿಗಳ ಪೂರ್ವಗೋಡೆಯ ಮೇಲೆ ಯಕ್ಷ–ಯಕ್ಷಿಣಿಯರು, ಗೋಪುರಗಳು, ಮಧ್ಯದಲ್ಲಿ ಸಿಂಹಗಳು, ಸಳ-ಸಿಂಹ ವಿಗ್ರಹಗಳೂ ಇವೆ. ಕಟಾಂಜನದಮೇಲೆ ಮೂರು ಅಂಗುಲ ಅಗಲದ ಲತಾಪಟ್ಟಿಕೆ ಇದೆ. ನವರಂಗದ್ವಾರದ ಎಡ ಮತ್ತು ಬಲದಲ್ಲಿ ಮುಂದಕ್ಕೆ ಬಂದಿರುವ ಕಟಾಂಜನವಿದೆ. ಇದರಮೇಲೆ ಭಾಗವತ ಕಥೆ ಚಿತ್ರಿತವಾಗಿದೆ.

ಪಾಕಶಾಲೆಯ ಆಗ್ನೇಯದಿಂದ—

ಸಿಂಹ, ಮನುಷ್ಯನು ಒನಕೆ ಒರಳುಕಲ್ಲಿನೊಡನೆ ಅಂಜಲಿಹಸ್ತನಾಗಿ ಜಿಂಕೆಗೆ ನಮಸ್ಕರಿಸುತ್ತಿರುವನು, ಸೆರೆಮನೆಯಲ್ಲಿ ಕೃಷ್ಣನು ತಾಯಿತಂದೆಗಳಿಗೆ ವಿಶ್ವರೂಪ ತೋರಿಸುವುದು, ವಾಸುದೇವನು ಕೃಷ್ಣನನ್ನು ಎತ್ತಿಕೊಂಡು ಯಮುನೆಯನ್ನು ದಾಟಿ ಗೋಪಿಯ ಮಗಳಾದ ದುರ್ಗಿಯ ಸ್ಥಾನದಲ್ಲಿಡುವುದು, ಬಾಲಕೃಷ್ಣ, ಪೂತನಾ ಸಂಹಾರ, ಅಶ್ವವನ್ನು ಸಂಹರಿಸುವುದು, ಗಾರ್ದಭ ಸಂಹಾರ, ಧೇನುಕ, ಬಕಾಸುರ ಸಂಹಾರ, ದುರ್ಗಿಯು ಮಹಿಷಾಸುರನನ್ನು ಸಂಹರಿಸುವುದು, ಪುನಃ ಬಕಾಸುರ, ಸಿಂಹಗಳು, ಕೃಷ್ಣ-ರಾಕ್ಷಸ, ಕುಬ್ಜೆ, ಅಕ್ರೂರನು ಕೃಷ್ಣಬಲರಾಮರನ್ನು ಕರೆದುಕೊಂಡುಹೋಗುವುದು, ಕೃಷ್ಣನು ಅಕ್ರೂರನಿಗೆ ವಿಶ್ವರೂಪ ತೋರಿಸುವುದು, ಕಂಸನ ಗಜವನ್ನು ಕೊಲ್ಲುವುದು, ಚಾಣೂರನೊಡನೆ ಮಲ್ಲಯುದ್ಧ, ಕಂಸವಧ.

ಈಶಾನ್ಯದ ಕಟಾಂಜನ–ಕಾಮಶಾಸ್ತ್ರ ರತಿಬಂಧಗಳು, ಮತ್ಸ್ಯ, ಕೂರ್ಮ, ನೃವರಾಹ, ಮೂಲೆಯ ಸಿಂಹಗಳು, ನರಸಿಂಹ, ವಾಮನ, ಪರಶುರಾಮ, ಶ್ರೀರಾಮ, ಬಲರಾಮ, ಬುದ್ಧ, ದರ್ಬಾರಿನಲ್ಲಿ ರಾಜ (?), ಸಿಂಹಗಳು.

ಈ ಕಟಾಂಜನದ ಮೇಲೆ ಗೋಡೆಗಳಲ್ಲಿ ಜಾಲಂಧ್ರಗಳಿವೆ. ಇದರ ಮೇಲೆ ಮೇಲ್ಛಾವಣಿಯ ಬೋದಿಗೆ ಕೀರ್ತಿಮುಖಗಳಿಂದ ಅಲಂಕೃತ ವಾಗಿವೆ. ಗೋಡೆಗಳಮೇಲೆ ಪೀಠ ತೋರಣಗಳ ಮಧ್ಯದಲ್ಲಿ ಎರಡೂವರೆ ಅಡಿ ಎತ್ತರದ ದೊಡ್ಡ ವಿಗ್ರಹಗಳಿವೆ. ಪೀಠಗಳ ಮೇಲೆ ಲತಾಪಟ್ಟಿಕೆ ಸಿಂಹಮುಖ ಗರುಡಗಳಿವೆ. ತೋರಣಗಳು ಲತಾತೋರಣಗಳಾಗಿವೆ. ವಿಗ್ರಹಗಳು ಸೋಮನಾಥಪುರದಂತೆ ಸುಂದರವಾಗಿವೆ. ಇವುಗಳಲ್ಲಿ ಮುಖ್ಯವಾದವು :

ಪರವಾಸುದೇವ ಅಥವಾ ಅಮರನಾರಾಯಣ ಅನಂತನ ಮೇಲೆ ಸುಖಾಸನದಲ್ಲಿ ಕುಳಿತಿರುವನು, ಸ್ಥಾನಕ ಕೇಶವ ದೇವಿ ದರ್ಪಣವನ್ನು ನೋಡಿಕೊಳ್ಳುತ್ತಿರುವುದು, ನೃತ್ಯಸರಸ್ವತಿ ಮಾರ್ದಂಗಿಕ, ಶ್ಮಶ್ರುಧಾರಿ ಯಾದ ಸ್ಥಾನಕಬ್ರಹ್ಮ (ಅಕ್ಷಮಾಲಾ, ಪಾಶ (?), ಸ್ರುಕ್ ಸ್ರುವ, ಕಲಶ, ನಾರಾಯಣ, ಸುಖಾಸನದಲ್ಲಿ ಲಕ್ಷ್ಮೀನಾರಾಯಣ, ಮಾಧವ ಮೋಹಿನಿ, ಸ್ಥಾನಕ ಲಕ್ಷ್ಮಿ (ಪದ್ಮ ಚಕ್ರ ಶಂಖ ಕಲಶ), ನರ್ತಿಸುವ ಪಾರ್ವತಿ (ಷಡ್ಭುಜಗಳಲ್ಲಿ ಅಕ್ಷಮಾಲಾ ಅಂಕುಶ ಸ್ವರ್ಗಹಸ್ತ ಪಾಶ ಲಂಬಹಸ್ತ ಫಲ), ಗಣೇಶ ಮತ್ತು ಕುಮಾರ, ಗೋವಿಂದ, ಆಸೀನ ಲಕ್ಷ್ಮೀನಾರಾಯಣ, ವಿಷ್ಣು, ಮಧುಸೂದನ, ಪಾರಿಜಾತಹರಣ– ಇಂದ್ರ, ಶಚೀ, ಗರುಡನ ಮೇಲೆ ಸತ್ಯಭಾಮಾ ಕೃಷ್ಣ, ತ್ರಿವಿಕ್ರಮ, ವಾಮನ, ಗೋವರ್ಧನಧಾರಿ, ಪದ್ಮಾಸನದಲ್ಲಿ ಕುಳಿತ ದ್ವಿಭುಜವಿಷ್ಣು ಅಪೂಪಪಾತ್ರ ಕಳಶ ಹಿಡಿದಿರುವನು. ಹಿಂದೆ ಚಕ್ರ ಶಂಖಗಳಿವೆ (ಧನ್ವಂತರಿ ?), ನರ್ತಿಸುವ ಮೋಹಿನಿ ಮತ್ತು ದಕ್ಷಿಣಾಮೂರ್ತಿ (ಕುಲ್ಲಾವಿ ನಿಲುವಂಗಿ, ಅಂಕುಶ ಪಾತ್ರ ಚಕ್ರ ಧರಿಸಿರುವನು), ಶ್ರೀಧರ ಮತ್ತು ಗರುಡ.

ದಕ್ಷಿಣದ ಗೂಡು, ಇದು ಮೊದಲಿನ ದೇವಸ್ಥಾನದ ಭಾಗ

ವಾಗಿದ್ದರೂ ಇಲ್ಲಿ ಪೌರಾಣಿಕ ಕಥಾಪಟ್ಟಿಯಮೇಲೆ ಮಕರ ಹಂಸಗಳ ಸಾಲುಗಳಿಲ್ಲ. ಇವಕ್ಕೆ ಬದಲಾಗಿ ದೊಡ್ಡ ವಿಗ್ರಹಗಳಿವೆ. ಮಧ್ಯದ ಗೂಡು ಎರಡು ಅಂತಸ್ತು ಇದ್ದು ಮೇಲೆ ಶಿಖರವನ್ನು ಹೊಂದಿದೆ.—ದ್ವಿಭುಜ ಪಾಂಡುರಂಗನು ಪೂರ್ವಾಭಿಮುಖನಾಗಿ ಕೈಗಳನ್ನು ಕಟಿಯ ಮೇಲಿಟ್ಟುಕೊಂಡು ಕೈಗಳಲ್ಲಿ ಪದ್ಮ ಶಂಖ ಹಿಡಿದಿರುವನು. ಅಪೂರ್ವ ವಾದ ವಿಗ್ರಹ. ಖಾಲಿ ಗೂಡು, ಯೋಗನರಸಿಂಹ ಕೋದಂಡರಾಮ ಲಕ್ಷ್ಮಣ, ಹೃಷೀಕೇಶ, ಪದ್ಮನಾಭ, ವೇಣುಗೋಪಾಲ, ನೃತ್ಯಶಾರದಾ (ಆರು ಕೈಯಲ್ಲಿ ಅಕ್ಷಮಾಲಾ ಮುದ್ರೆ ಅಂಕುಶ ಸ್ವರ್ಗಹಸ್ತ ಪಾಶ ಪುಸ್ತಕ), ದಾಮೋದರ.

ಪಶ್ಚಿಮ ಗೂಡು—ಆಸೀನ ಪಾರ್ವತಿ, ಖಾಲಿ, ಸ್ಥಾನಕಬ್ರಹ್ಮ ಶಾರದಾ, ಸಂಕರ್ಷಣ, ಶಾರದಾ, ಭೈರವ (ಕತ್ತಿ ಚಕ್ರ ತ್ರಿಶೂಲ ಡಮರುಗ ಶಂಖ ಪಾತ್ರ ಮತ್ತು ಕಪಾಲ), ವಾಸುದೇವ.

ಉತ್ತರ ಗೂಡು, ಆಸೀನ ಪಾರ್ವತಿ, ಖಾಲಿ, ಖಾಲಿ, ನೃತ್ಯಗಣಪತಿ ಪ್ರದ್ಯುಮ್ನ, ವೇಣುಗೋಪಾಲ, ನೃತ್ಯಲಕ್ಷ್ಮಿ (ಅಷ್ಟಭುಜಗಳಲ್ಲಿ ಅಭಯ, ಪದ್ಮ ಚಕ್ರ ಸ್ವರ್ಗಹಸ್ತ ಶಂಖ ಲಂಬಹಸ್ತ ಫಲ ದಾನ) ಇದರ ಬಲಗಡೆ ಮೂಲೆಯಲ್ಲಿ ಎರಡು ಕಪಿಗಳು ಫಲಕ್ಕಾಗಿ ಕಾದಾಡುತ್ತಿವೆ; ಅನಿರುದ್ಧ, ಪುರುಷೋತ್ತಮ, ಸಿಂಹಪೀಠದ ಮೇಲೆ ಮಹಿಷಮರ್ದಿನಿ, ಯೋಗ ನಾರಾಯಣ (ಪದ್ಮಾಸನದಲ್ಲಿ ಕುಳಿತು ಮುಂದಿನ ಎರಡು ಕೈಗಳನ್ನು ಒಂದರಮೇಲೊಂದು ಇಟ್ಟು, ಹಿಂದಿನ ಕೈಗಳಲ್ಲಿ ಶಂಖ ಚಕ್ರ ಹೊಂದಿರು ವನು), ಅಧೋಕ್ಷಜ, ಸ್ಥಾನಕ ನರಸಿಂಹ, ಅಚ್ಯುತ, ಸುಖಾಸನದಲ್ಲಿ ಲಕ್ಷ್ಮೀನಾರಾಯಣ, ಜನಾರ್ದನ, ಕಾಳಿಂಗಮರ್ದನ ಮೋಹಿನೀ—ಕಪಿ ಪೀಠದಮೇಲೆ ಯಮುನಾ, ದುರ್ಗಾ (ವೈಷ್ಣವೀ.), ಅಷ್ಟಭುಜಗಳಲ್ಲಿ ಕತ್ತಿ ಬಾಣ ತ್ರಿಶೂಲ ಚಕ್ರ ಶಂಖ ಡಮರುಗ ಪಾತ್ರ ಕಪಾಲ, ಪಕ್ಕಗಳಲ್ಲಿ ಭೇತಾಳಗಳು, ಉಪೇಂದ್ರ (? ಶಂಖ ಗದಾ ಪದ್ಮ ಚಕ್ರ. ಇವು ಕೃಷ್ಣನ ಚಿಹ್ನೆಗಳು. ಉಪೇಂದ್ರನಿಗೆ ಶಂಖ ಗದಾ ಚಕ್ರ ಪದ್ಮಗಳಿರಬೇಕು), ಸುಖಾಸನದಲ್ಲಿ ಲಕ್ಷ್ಮೀನಾರಾಯಣ, ಹರಿ ಎಡದಲ್ಲಿ ಯುವತಿ—ದರ್ಪಣ ಬಲದಲ್ಲಿ ಯುವತಿ—ಶುಕ; ಬಲಿ—ವಾಮನ; ತ್ರಿವಿಕ್ರಮ (ಒಂದು

ಕಾಲನ್ನು ಬ್ರಹ್ಮಲೋಕಕ್ಕೆ ಎತ್ತಿರುವನು, ಅದರಿಂದ ಉದ್ಭವವಾದ ಗಂಗೆಯು ಒಬ್ಬ ಯೋಗಿಯ (ಶಿವ?) ತಲೆಯಮೇಲೆ ಬೀಳುತ್ತದೆ); ಚತುರ್ಭುಜ ಕೃಷ್ಣ–ಸ್ಥಾನಕ; ಸುಖಾಸನದಲ್ಲಿ ಲಕ್ಷ್ಮೀನರಸಿಂಹ–ಪ್ರಹ್ಲಾದ.

ಈ ದೊಡ್ಡ ವಿಗ್ರಹಗಳ ಮೇಲೆ ಕೀರ್ತಿಮುಖಗಳ ಸಾಲು ಇರುವ ಕಾರ್ನಿಸು, ಗೋಪುರ ಕಳಶಗಳು, ಯಕ್ಷ–ಯಕ್ಷಿಣಿ, ರತಿಬಂಧ, ಇತ್ಯಾದಿಗಳಿವೆ. ಈ ಗೋಪುರಗಳ ಮೇಲೆ ಮೇಲ್ಛಾವಣಿ ಕೈಪಿಡಿ ಗೋಡೆಗಳಿವೆ. ಕೈಪಿಡಿ ಗೋಡೆಯ ಮೇಲೆ ಕೀರ್ತಿಮುಖ ಯಕ್ಷ–ಯಕ್ಷಿಣಿ ಶಿಖರಗಳ ಸಾಲುಗಳಿವೆ.

ಮುಖ್ಯ ಗೋಪುರವು ಟೊಳ್ಳಾಗಿದೆ. ಪೂರ್ವದಿಂದ ಪ್ರವೇಶಿಸಬಹುದು. ನವರಂಗದಮೇಲೂ ಎರಡು ಚಾವಣಿಗಳಿವೆ. ಮುಖ್ಯ ಗೋಪುರ ಗರ್ಭಗುಡಿಯ ಮೇಲೆ ಹದಿನಾರು ಕೋಣ ನಕ್ಷತ್ರದಂತಿದೆ. ಉತ್ತರ ದಕ್ಷಿಣ ಪಶ್ಚಿಮಗಳಲ್ಲಿ ಅಂತಸ್ತುಗಳ ಮೇಲೆ ಸಣ್ಣ ವಿಗ್ರಹಗಳಿವೆ. ದಕ್ಷಿಣದಲ್ಲಿ ತಾಂಡವಕೃಷ್ಣ, ಸೂರ್ಯ; ಪಶ್ಚಿಮದಲ್ಲಿ ನೃತ್ಯಲಕ್ಷ್ಮೀ ಮತ್ತು ಆಸೀನಲಕ್ಷ್ಮೀ.

ಸುಕನಾಸಿಯ ಮೇಲೆ ಚಾಚಿರುವ ಭಾಗದಲ್ಲಿ ದಕ್ಷಿಣಕ್ಕೆ–ಸಳ ಎರಡು ಸಿಂಹಗಳು, ಲಕ್ಷ್ಮೀನಾರಾಯಣ, ಕಾಳಿಂಗಮರ್ದನ, ಉತ್ತರದಲ್ಲಿ ನರ್ತಕರು ಲಕ್ಷ್ಮೀನಾರಾಯಣ ಅಮರನಾರಾಯಣ, ಪೂರ್ವದಲ್ಲಿ ಷಡ್ಭುಜ ನೃತ್ಯಮಾಡುವ ಕೃಷ್ಣ (ಅಭಯ ಶಂಖ ಸ್ವರ್ಗಹಸ್ತ ಚಕ್ರ ಲಂಬಹಸ್ತ ದಾನ), ಇದರ ಕೆಳಗೆ ಸುಖಾಸನದಲ್ಲಿರುವ ಲಕ್ಷ್ಮೀನಾರಾಯಣ ಹಯಗ್ರೀವ.

ಮುಖಮಂಡಪ ಈಚಿನದು. ನವರಂಗದ ದ್ವಾರದಮೇಲೆ ವಿಷ್ಣು, ಸಳ (?), ನರ್ತಕರು ಸಿಂಹ ಗಜ, ಇದರಮೇಲೆ ತಾಂಡವ ಕೃಷ್ಣ(?) ಇವೆ. ನವರಂಗದಲ್ಲಿ ಒಂಬತ್ತಂಕಣಗಳೂ, ಪೂರ್ವದ್ವಾರದ ಹತ್ತಿರ ಮತ್ತೊಂದು ಅಂಕಣವೂ, ಕಲ್ಲಿನ ಜಗತಿಗಳೂ ಇವೆ. ಸ್ತಂಭಗಳು, ಮೇಲ್ಛಾವಣಿಗಳು ಚೆನ್ನಾಗಿವೆ. ನವರಂಗದ ಪಶ್ಚಿಮ ಗೋಡೆಯಲ್ಲಿ ಎರಡು ಗೂಡುಗಳ ಮೇಲೆ ಐದು ಶಿಖರಗಳಿವೆ. ದಕ್ಷಿಣ ಗೂಡಿನಲ್ಲಿ ಗಣಪತಿ (ದಂತ ಅಂಕುಶ

ಪಾಶ ಅಪೂಪ), ಉತ್ತರ ಗೂಡಿನಲ್ಲಿ ಮಹಿಷಮರ್ದಿನಿ ಇವೆ. ನವರಂಗ ಮಧ್ಯದ ಕಂಬಗಳು ದುಂಡಾಗಿವೆ. ದ್ವಾರದ ಹತ್ತಿರ ಇರುವ ಕಂಬಗಳು ೧೬ ಅಥವಾ ೬ಳ ಕೋಣಗಳನ್ನು ಹೊಂದಿವೆ. ಕಂಬಗಳ ಮೇಲ್ಭಾಗದಲ್ಲಿ ನೃತ್ಯಮಾಡುತ್ತಿರುವ ಸ್ತ್ರೀವಿಗ್ರಹಗಳಿವೆ. ಒಂದು ಕಡೆ ಕಾಳಿಂಗ ಮರ್ದನವಿದೆ. ನೈರ್ಋತ್ಯಕಂಬದ ಮೇಲಿನ ಲತಾಪಟ್ಟಿಕೆಯಲ್ಲಿ ಕಪಿ ಇದೆ. ಮೂಲೆಗಳಲ್ಲಿ ಗಜ ಸಿಂಹಗಳಿವೆ. ಭುವನೇಶ್ವರಿಗಳೆಲ್ಲ ರೇಖಾಚಿತ್ರಗಳಿಂದ ಅಲಂಕೃತವಾಗಿವೆ. ದ್ವಾರದ ಹತ್ತಿರವಿರುವ ಭುವನೇಶ್ವರಿಯಲ್ಲಿ ಅಷ್ಟ ದಿಕ್ಪಾಲಕರು ಸಿಂಹಗಳು ಶಿಖರಗಳು ಯಕ್ಷರು, ಮೇಲಿನಿಂದ ತೂಗಾಡುವ ಮೊಗ್ಗಿನ ಮೇಲೆ ಹಂಸ ಇವೆ. ಹಾಗೆಯೇ ಹತ್ತನೆಯ ಭುವನೇಶ್ವರಿಯ ಮಧ್ಯದ ಮೊಗ್ಗಿನಮೇಲೆ ಕಾಳಿಂಗಮರ್ದನವಿದೆ.

ದಕ್ಷಿಣ ಗರ್ಭಗುಡಿಯ ದ್ವಾರದಲ್ಲಿ ದ್ವಾರಪಾಲಕರು, ಮೇಲೆ ವೇಣುಗೋಪಾಲ, ಸಳ, ನರ್ತಕರು ಇರುವರು. ಇದರ ಮೇಲೆ ಏಳು ಶಿಖರಗಳೂ ಸಿಂಹಗಳೂ ಇವೆ. ಗರ್ಭಗುಡಿಯಲ್ಲಿದ್ದ ವೇಣುಗೋಪಾಲ ವಿಗ್ರಹವನ್ನು ಕನ್ನಂಬಾಡಿಗೆ ಕಳುಹಿಸಿದರೆಂದು ಹೇಳಲಾಗಿದೆ. ಈಗ ಜನಾರ್ದನ ಮತ್ತು ದೇವಿಯರ ಲೋಹದ ಉತ್ಸವ ವಿಗ್ರಹಗಳಿವೆ.

ಪಶ್ಚಿಮ ಸುಕನಾಸಿ ದ್ವಾರದ ಮೇಲೆ ನಾರಾಯಣನಿರುವನು. ಗರ್ಭಗುಡಿಯ ದ್ವಾರದಮೇಲೆ ಅರ್ಧ ಕೆತ್ತಿದ ವಿಗ್ರಹವಿದೆ. ಒಳಗೆ ಗರುಡ ಪೀಠದ ಮೇಲೆ ನಾಲ್ಕೂವರೆ ಅಡಿ ಎತ್ತರದ ನಾರಾಯಣನು ಶಂಖ ಪದ್ಮ ಗದಾ ಚಕ್ರ ಹಿಡಿದಿರುವನು. ತೋರಣದಲ್ಲಿ ದಶಾವತಾರಗಳಿವೆ. ಈ ಗರ್ಭಗುಡಿಗೆ ಸೇರಿದಂತೆ ಉತ್ತರ ದಕ್ಷಿಣ ಪಶ್ಚಿಮಗಳಲ್ಲಿ ಸಣ್ಣ ಗುಡಿಗಳಿವೆ.

ಉತ್ತರ ಗರ್ಭಗುಡಿಯ ದ್ವಾರದಮೇಲೆ ಲಕ್ಷ್ಮೀನರಸಿಂಹ ವಿಗ್ರಹವಿದೆ. ಒಳಗಿರುವ ಲಕ್ಷ್ಮೀನರಸಿಂಹ ವಿಗ್ರಹ ಸುಂದರವಾಗಿದೆ. ಪ್ರಭಾವಳಿಯ ಮೇಲೆ ದಶಾವತಾರಗಳಿವೆ.

ಬಸದಿ : ಲಕ್ಷ್ಮೀನಾರಾಯಣ ದೇವಾಲಯದ ಈಶಾನ್ಯದಲ್ಲಿ ಕ್ರಿ. ಶ. ೧೧೧೮ರಲ್ಲಿ ನಿರ್ಮಿತವಾದ ಬಳಪದಕಲ್ಲಿನ ಬಸದಿ ಇದೆ. ಗರ್ಭಗುಡಿಯಲ್ಲಿ ಮೂರು ಪಾರ್ಶ್ವನಾಥ ವಿಗ್ರಹಗಳೂ ಅನಂತನಾಥ ಮತ್ತೊಬ್ಬ ತೀರ್ಥಂಕರ ವಿಗ್ರಹಗಳೂ ಇವೆ. ಈಚೆಗೆ ಸೇರಿಸಿರುವ ನವರಂಗದಲ್ಲಿ ಹಳೆಯ ಧರಣೇಂದ್ರ ಪದ್ಮಾವತಿ ವಿಗ್ರಹಗಳಿವೆ.

ಹರಿಹರೇಶ್ವರ ದೇವಾಲಯ ಬಹುಶಃ ಲಕ್ಷ್ಮೀನಾರಾಯಣ ದೇವಾಲಯದ ಕಾಲದಲ್ಲಿಯೇ ನಿರ್ಮಿತವಾಯಿತು. ಈಗ ಸಂಪೂರ್ಣವಾಗಿ ಬಿದ್ದುಹೋಗಿದೆ. ಇಲ್ಲಿದ್ದ ಹರಿಹರ ವಿಗ್ರಹ ಎರಡು ಕೈಗಳಲ್ಲೂ ತ್ರಿಶೂಲ ಶಂಖಗಳನ್ನು ಹೊಂದಿದೆ. ಮಿಕ್ಕೆರಡು ಕೈಗಳು ಮುರಿದುಹೋಗಿವೆ. ಇದಕ್ಕೆ ಆಗ್ನೇಯದಲ್ಲಿ ಒಕ್ಕರಣೆ ಕೊಳವಿದೆ. ಊರಿನ ಸುತ್ತಲೂ ಏಳು ಕೋಟೆಗಳಿದ್ದವೆಂದು ಹೇಳುವರು. ಈಗಲೂ ದೊಡ್ಡ ಕಲ್ಲುಗಳಿಂದ ಕಟ್ಟಿದ ಗೋಡೆಯು ಕಂಡುಬರುತ್ತದೆ.

೫೨. ಗೋವಿಂದನಹಳ್ಳಿ : ಕಿಕ್ಕೇರಿಗೆ ವಾಯವ್ಯದಲ್ಲಿ ನಾಲ್ಕು ಮೈಲಿ ದೂರದಲ್ಲಿ ಗೋವಿಂದನಹಳ್ಳಿ ಇದೆ. ಮಂದಗೆರೆ ರೈಲು ನಿಲ್ದಾಣದಿಂದ ಹೇಮಾವತಿಯನ್ನು ದಾಟಿ ಹೋಗಬಹುದು. ಗೋವಿಂದನಹಳ್ಳಿಯಲ್ಲಿರುವ ಪಂಚಲಿಂಗೇಶ್ವರ ದೇವಾಲಯ ಮೊದಲು ಚತುಷ್ಕೂಟವಾಗಿದ್ದು, ಅನಂತರ ಒಂದು ಗರ್ಭಗುಡಿಯನ್ನು ಸೇರಿಸಿ ಪಂಚಕೂಟವಾದಂತಿದೆ. ಗರ್ಭಗುಡಿಗಳೆಲ್ಲ ಒಂದೇ ಸಾಲಿನಲ್ಲಿವೆ. ಗರ್ಭಗುಡಿಗಳ ಮುಂದೆ ಸುಕನಾಸಿಗಳಿವೆ. ಇವುಗಳ ಮುಂದೆ ನಾಲ್ಕು ನವರಂಗಗಳು ಅಂತರಾಳಗಳಿಂದ ಸಂಬಂಧಹೊಂದಿವೆ. ಐದನೆಯ ನವರಂಗವನ್ನು ಅಂತರಾಳವಿಲ್ಲದೆ ನಾಲ್ಕನೆಯದಕ್ಕೆ ಸೇರಿಸಿರುವರು. ಹೀಗೆ ಸುಮಾರು ೧೨೦ ಅಡಿ ಉದ್ದದ ಶಾಲೆಯು ಏರ್ಪಟ್ಟಿದೆ. ಎರಡನೆಯ ಮತ್ತು ಮೂರನೆಯ ಗರ್ಭಗುಡಿಗಳ ಮುಂದೆ ಮಾತ್ರ ದ್ವಾರಗಳಿವೆ. ಈ ದ್ವಾರಗಳ ಮುಂದಿರುವ ಮುಖಮಂಡಪಗಳಲ್ಲಿ ನಂದಿಗಳಿವೆ. ಈ ನಂದಿಗಳ ಎರಡು ಪಕ್ಕಗಳಲ್ಲೂ ಮೆಟ್ಟಿಲುಗಳಿವೆ. ನವರಂಗದ ದ್ವಾರದ ದ್ವಾರಪಾಲಕರ ಪೀಠಗಳಮೇಲೆ "ರೂವಾರಿ ಮಲ್ಲಿತಮ್ಮ" ಎಂದಿರುವುದರಿಂದ ನುಗ್ಗಿಹಳ್ಳಿ ಸೋಮನಾಥಪುರ ಗುಡಿಗಳ ಕಾಲದಲ್ಲಿ ರಚಿತವಾಗಿರಬೇಕು (೧೨೪೯–೧೨೬೮). ಬಹುಶಃ ಈ ಪ್ರಸಿದ್ಧ ಶಿಲ್ಪಿಯು ಯುವಕನಾಗಿದ್ದಾಗ ನಿರ್ಮಿತವಾಯಿತು. ಮೊದಲ ಮತ್ತು ಎರಡನೆಯ ಗರ್ಭಗುಡಿಗಳ ಮಧ್ಯದ ಅಂತರಾಳದಲ್ಲಿರುವ ಹೊಯ್ಸಳ ಸೋಮೇಶ್ವರನ ಕಾಲದಲ್ಲಿ ಇಬ್ಬರು ಹೊಯ್ಸಳ ದಂಡನಾಯಕರು ೧೨೩೭ರಲ್ಲಿ ದಾನಮಾಡಿರುವರು.

ದೊಡ್ಡಗದ್ದವಳ್ಳಿ ಗುಡಿಯು ಚತುಷ್ಕೂಟವಾಗಿದ್ದರೂ ಗರ್ಭಗುಡಿ

ಗಳನ್ನು ಒಂದೇ ಸಾಲಿನಲ್ಲಿಟ್ಟಿರುವುದಿಲ್ಲ. ಗೋವಿಂದನಹಳ್ಳಿಯಲ್ಲಿ ಮೊದಲು ನಾಲ್ಕು ಗರ್ಭಗುಡಿಗಳು (ಸೋಮನಾಥಪುರದ ಪಂಚಲಿಂಗದ ಐದು ಗರ್ಭಗುಡಿಗಳಿರುವಂತೆ) ಒಂದೇ ಸಾಲಿನಲ್ಲಿದ್ದವೆಂದು, ಅನಂತರ ಐದನೆಯ ಗರ್ಭಗುಡಿಯನ್ನು ಸೇರಿಸಲಾಯಿತೆಂದು ಅಂತರಾಳಗಳಿಂದಲೂ, ನಂದಿ ಮೆಟ್ಟಲುಗಳಿಂದಲೂ, ಮೇಲ್ಛಾವಣಿಗಳಿಂದಲೂ, ಕಂಬಗಳಿಂದಲೂ ಸ್ಪಷ್ಟ ವಾಗಿದೆ. ನಾಲ್ಕು ಗುಡಿಗಳ ನವರಂಗ ಭಾಗದಲ್ಲಿ ಕಂಬಗಳು ಮೂರು ಅಡಿವರೆಗೂ ಚತುರಸ್ರವಾಗಿದ್ದು ಅನಂತರ ದುಂಡಾಗಿವೆ. ಆದರೆ ನಾಲ್ಕು ಮತ್ತು ಐದನೆಯ ನವರಂಗಗಳ ಮಧ್ಯದಲ್ಲಿರುವ ಕಂಬಗಳು ಎರಡು ಅರ್ಧ ಕಂಬಗಳಾಗಿವೆ. ಮತ್ತು ಐದನೆಯ ಗುಡಿಯು ಮುಂಭಾಗದ ಗೋಡೆಯ ಮೇಲೆ ಇತರ ಗುಡಿಗಳ ಗೋಡೆಗಳ ಮೇಲಿದ್ದಂತೆ ವಿಗ್ರಹ ಗಳಿಲ್ಲ. ಇತರ ಗರ್ಭಗುಡಿ ಗೋಡೆಗಳ ಮೇಲೂ ವಿಗ್ರಹಗಳನ್ನು ಕೆತ್ತದೆ ಹಾಗೆಯೇ ಬಿಟ್ಟಿದೆ.

ಹೊರಗಿನ ಗೋಡೆಯನ್ನು ಫಲಕಗಳಾಗಿ ವಿಂಗಡಿಸಿ, ಒಂದೊಂದು ಫಲಕದಲ್ಲಿ ಗೋಪುರಗಳೂ ವಿಗ್ರಹಗಳೂ ಇವೆ. ಇವನ್ನು ಬಿಟ್ಟರೆ ಮಿಕ್ಕಾವ ಕೆತ್ತನೆ ಕೆಲಸವೂ ಇಲ್ಲ. ದೇವಾಲಯಕ್ಕೆ ಜಗತಿ ಇರಲಿಲ್ಲ ಅಡಿಪಾಯದಿಂದ ಸುಮಾರು ಮೂರೂ ಮುಕ್ಕಾಲಡಿವರೆಗೂ ಕಾರ್ನಿಸು ಗಳು ಮಾತ್ರ ಇವೆ. ಪೂರ್ವದಲ್ಲಿ ನವರಂಗಕ್ಕೆ ಜಾಲಂದ್ರವುಳ್ಳ ತೆರೆ ಗೋಡೆ ಇರುವುದರಿಂದ ಬೆಳಕು ಬರುತ್ತದೆ.

ಹೊರಗಿನ ಗೋಡೆಯ ಮೇಲಿರುವ ಕೆಲವು ವಿಗ್ರಹಗಳು ಸುಮಾರು ಒಂದಡಿ ಎತ್ತರ ಇವೆ. ಪೂರ್ವದ ಗೋಡೆಯ ದಕ್ಷಿಣ ಕೊನೆಯಲ್ಲಿ ಗಣಪತಿ, ಉತ್ತರ ಕೊನೆಯಲ್ಲಿ ಮಹಿಷಮರ್ದಿನಿ ವಿಗ್ರಹಗಳಿವೆ. ಗಣಪತಿ ಮತ್ತು ಮೊದಲನೆಯ ಮುಖಮಂಡಪಕ್ಕೆ ಮಧ್ಯದಲ್ಲಿ ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲಿ ಹನ್ನೆರಡಿವೆ. ಹಾಗೆಯೇ ಎರಡನೆ ಮುಖ ಮಂಡಪ ಮಹಿಷಮರ್ದಿನಿಗಳ ಮಧ್ಯದಲ್ಲಿ ಹನ್ನೆರಡನ್ನು ಮಾಡಲು ಯತ್ನಿಸಿ ಒಂಬತ್ತು ಮಾತ್ರ ಪೂರ್ತಿಯಾಗಿವೆ. ಗರ್ಭಗುಡಿಗಳ ಮಧ್ಯದಲ್ಲಿ ಗೂಡುಗಳೂ ಚಾಮರಧಾರಿಣಿಯರೂ, ದಕ್ಷಿಣ ಗೋಡೆಯ ಹೊರಗಣ ಮಧ್ಯದಲ್ಲಿ ಗೂಡೂ ಇವೆ. ಈಗ ಈ ಗೂಡುಗಳೆಲ್ಲ ಖಾಲಿಯಾಗಿವೆ.

ದಕ್ಷಿಣ ಗೋಡೆಯಿಂದ ಆರಂಭಿಸಿದರೆ ಪ್ರದಕ್ಷಿಣಾಕಾರವಾಗಿ : ಮೊದಲು ಗರ್ಭಗುಡಿ-ದಕ್ಷಿಣ ಗೋಡೆ-ಪರವಾಸುದೇವ, ಸ್ಥಾನಕಪಾರ್ವತೀ (ಪದ್ಮ ಪಾಶ ಅಂಕುಶ ಫಲ), ಇಂದ್ರ-ಶಚೀ, ಗರುಡನಮೇಲೆ ಕೃಷ್ಣ-ಸತ್ಯಭಾಮೆ, ಬಲಿ-ವಾಮನ, ತ್ರಿವಿಕ್ರಮ, ಕಾಳಿಂಗಮರ್ದನ, ಸ್ಥಾನಕ ಚತುರ್ಭುಜದೇವಿ (ಪಾರ್ವತಿ ?), ಹಿರಣ್ಯಕಶಿಪು ಸಂಹಾರ, ಪ್ರಹ್ಲಾದ, ಪುರುಷ ಸ್ತ್ರೀವಿಗ್ರಹಗಳು, ಗರುಡ-ಲಕ್ಷ್ಮಿ, ನಾರದ.

ಪಶ್ಚಿಮ ಮತ್ತು ಉತ್ತರ ಗೋಡೆಗಳು—ತಾಂಡವೇಶ್ವರ ಎಡದಲ್ಲಿ ಗಣಪತಿ ಬ್ರಹ್ಮ, ಬಲದಲ್ಲಿ ಕುಮಾರ ವಿಷ್ಣು, ಸುಖಾಸನದಲ್ಲಿ ಲಕ್ಷ್ಮೀ ನಾರಾಯಣ, ಎಡದಲ್ಲಿ ನೃತ್ಯಪಾರ್ವತೀ, ವೇಣುಗೋಪಾಲ, ಬಲದಲ್ಲಿ ಶಾರದಾ, ಮಹಿಷಮರ್ದಿನಿ.

ಎರಡನೆಯ ಗರ್ಭಗುಡಿ—ದಕ್ಷಿಣ ಗೋಡೆ-ಭೈರವ, ದುರ್ಗಾ, ರಾವಣನು ಕೈಲಾಸವನ್ನೆತ್ತುತ್ತಿರುವುದು, ನೃತ್ಯಗಣಪತಿ, ನೃತ್ಯಸರಸ್ವತಿ.

ಪಶ್ಚಿಮ ಗೋಡೆ—ಗೋವರ್ಧನಧಾರಿ, ರಾಮ ಲಕ್ಷ್ಮಣ ಹನುಮಂತ ಮತ್ತು ಪರಿವಾರ.

ಉತ್ತರ ಗೋಡೆ—ಎರಡು ಕಪಿಗಳು, ಆಸೀನದುರ್ಗಾ, ಮಾರ್ದಂಗಿಕ ಮತ್ತು ನರ್ತಕಿ.

ಮೂರನೆಯ ಗರ್ಭಗುಡಿ—ದಕ್ಷಿಣ ಗೋಡೆ-ಹರಿಹರ, ಪರವಾಸು ದೇವ ಮತ್ತು ದೇವಿಯರು, ಲಕ್ಷ್ಮೀನರಸಿಂಹ.

ಪಶ್ಚಿಮ ಗೋಡೆ—ಯೋಗನರಸಿಂಹ, ವೇಣುಗೋಪಾಲ, ಉಮಾ ಮಹೇಶ್ವರ, ಚಾಮರ ಧಾರಿಣಿ, ನಾರಾಯಣ.

ಉತ್ತರ ಗೋಡೆ—ನೃತ್ಯಸರಸ್ವತಿ, ನರ್ತಕಿ, ಭೂವರಾಹ, ಕತ್ತಿ ಗುರಾಣಿ ಹಿಡಿದ ವೀರ, ಗರುಡ.

ನಾಲ್ಕನೆಯ ಗರ್ಭಗುಡಿ—ದಕ್ಷಿಣ ಗೋಡೆ—ಕಟಿಹಸ್ತನಾದ ವಿಠ್ಠಲನು ಎರಡು ಸಣ್ಣ ಚೀಲಗಳನ್ನು ಹಿಡಿದಿರುವನು. ವೇಣು ಗೋಪಾಲ, ಮಹಿಷಮರ್ದಿನಿ, ಕಾಳಿಯಮರ್ದನ, ಮತ್ಸ್ಯಯಂತ್ರ ಭೇದನ.

ಪಶ್ಚಿಮ ಗೋಡೆ—ಸ್ತ್ರೀ, ಹರಿಹರ ಪೀಠದಮೇಲೆ ನಂದಿ ಗರುಡ,

ಗಜಾಸುರ ಸಂಹಾರ, ಉಮಾಮಹೇಶ್ವರ, ಗಣಪತಿ—ಕುಮಾರರ ಮಧ್ಯೆ ಸ್ಥಾನಕ ಪಾರ್ವತಿ.

ಉತ್ತರದಗೋಡೆ—ಸ್ತ್ರೀ, ಬ್ರಹ್ಮ, ನಂದಿಯಮೇಲೆ ಉಮಾ ಮಹೇಶ್ವರ, ಕೇಶವ, ಮೋಹಿನೀ–ಕಪಿ.

ಐದನೆಯ ಗರ್ಭಗುಡಿ—ದಕ್ಷಿಣದ ಗೋಡೆ-ಹಿರಣ್ಯಕಶಿಪು ವಧ, ಪ್ರಹ್ಲಾದ ಕುಲ್ಲಾವಿ ನಿಲುವಂಗಿ ದಂಡ ಧರಿಸಿರುವ ದಕ್ಷಿಣಾಮೂರ್ತಿ.

ಪಶ್ಚಿಮ ಗೋಡೆ–ಮೋಹಿನಿ.

ಉತ್ತರ ಗೋಡೆ–ಕಾಲಭೈರವ, ತಾಂಡವೇಶ್ವರ, ಯೋಗ ನಾರಾಯಣ.

ಪೂರ್ವದ ಗೋಡೆ—ದಕ್ಷಿಣ ಭಾಗ–ಸಂಕರ್ಷಣ, ಗರುಡ, ವಾಸು ದೇವ, ಹೂವನ್ನು ತೆಗೆದುಕೊಳ್ಳುತ್ತಿರುವ ಸ್ತ್ರೀ, ಪ್ರದ್ಯುಮ್ನ, ಅನಿರುದ್ಧ, ಪುರುಷೋತ್ತಮ, ಮಾರ್ದಂಗಿಕ, ಅಧೋಕ್ಷಜ, ಸ್ಥಾನಕ ನರಸಿಂಹ, ಮಾರ್ದಂಗಿಕ ಸ್ತ್ರೀ–ಶುಕ, ಹರಿ, ವಿಷ್ಣುವಿನ ಮೂರು ರೂಪಗಳು (ಅಪೂರ್ಣ), ಕೃಷ್ಣ, ಸ್ತ್ರೀ–ದರ್ಪಣ, ಮಹಿಷಮರ್ದಿನಿ.

ಆಗ್ನೇಯ ದ್ವಾರದಿಂದ ಉತ್ತರದ ಕಡೆಗೆ–ವಿಷ್ಣುವಿನ ದಶಾವತಾರ ಗಳು, ಮತ್ಸ್ಯ, ಕೂರ್ಮ, ನರವರಾಹ, ಸ್ತ್ರೀ–ಕೇಶಪಾಶ, ಸ್ಥಾನಕ ನರಸಿಂಹ, ವಾಮನ, ಪರಶುರಾಮ, ಶ್ರೀರಾಮ, ಪುಷ್ಪಾಪಚಯ, ಹಲಾಯುಧ, ಆಸೀನಬುದ್ಧ, ಕುದುರೆಯಮೇಲೆ ಕಲ್ಕಿ.

ದಕ್ಷಿಣದಲ್ಲಿ ಉತ್ತರದ ಕಡೆಯಿಂದ–(ಮಧ್ಯೆ ಗರುಡರು), ಗಣೇಶ, ಸ್ತ್ರೀ–ದರ್ಪಣ, ಕೇಶವ, ನಾರಾಯಣ, ಸ್ತ್ರೀ–ಶುಕ್ರಮಾಧವ ಗೋವಿಂದ, ವಿಷ್ಣು, ಸ್ತ್ರೀ–ದರ್ಪಣ, ಮಧುಸೂದನ, ತ್ರಿವಿಕ್ರಮ, ಪುಷ್ಪಾಪಚಯ, ವಾಮನ, ಶ್ರೀಧರ, ಹೃಷೀಕೇಶ. ಮಗುವನ್ನು ಸೊಂಟದಲ್ಲಿಟ್ಟುಕೊಂಡಿ ರುವ ಸ್ತ್ರೀ, ಪದ್ಮನಾಭ ದಾಮೋದರ. ಇವುಗಳ ಹೆಸರುಗಳನ್ನು ಪೀಠಗಳಲ್ಲಿ ಬರೆದಿದೆ.

ದೇವಾಲಯದಲ್ಲೆಲ್ಲ ಹದಿನೇಳು ಗೂಡುಗಳಿವೆ. ಹದಿಮೂರು ಒಳಗಡೆ ನಾಲ್ಕು ಹೊರಗೆ ಇವೆ. ಒಳಗಿನ ಗೂಡುಗಳಲ್ಲಿ ಒಂದೊಂದು ಸುಕನಾಸಿ ದ್ವಾರದ ಪಕ್ಕಗಳಲ್ಲೂ ಎರಡು, ಉತ್ತರ ದಕ್ಷಿಣ ಗೋಡೆಗಳ ಮಧ್ಯದಲ್ಲಿ

ಒಂದೊಂದು, ಎರಡು ಮತ್ತು ಮೂರನೆ ಗರ್ಭಗುಡಿಗಳ ಮಧ್ಯದಲ್ಲಿ ದೊಡ್ಡ ಗೂಡು ಇವೆ. ಉತ್ತರ ಗೋಡೆಯಲ್ಲಿ ಒಂದು ಗೂಡು ಇದೆ. ನವರಂಗದ ಗೂಡುಗಳಲ್ಲಿರುವ ವಿಗ್ರಹಗಳು ಆಗ್ನೇಯದಿಂದ ಪ್ರದಕ್ಷಿಣವಾಗಿ :

ಮೊದಲನೆ ಗರ್ಭಗುಡಿಯ ನಂದಿ, ೧ನೆಯ ಗೂಡು—ಹಂಸಪೀಠದ ಮೇಲೆ ಈಚಿನ ಭೈರವ (ಬಹುಶಃ ಶಾರದಾ ಇದ್ದಿರಬೇಕು). ಸಪ್ತ ಮಾತೃಕಾ, ೨ ಗಣೇಶ, ೩ ಸಿಂಹಪೀಠದ ಮೇಲೆ ಮಹಿಷಮರ್ದಿನಿ, ೪ ಶಾರದಾ, ಕೆಳಗೆ ನಾಗ ಗಣೇಶ, ೫ ಮಹಿಷಮರ್ದಿನಿ, ೬ (ಮಧ್ಯ) ಉಮಾಮಹೇಶ್ವರ, ೭ ಗಣೇಶ, ೮ ಮಹಿಷಮರ್ದಿನಿ, ಕೆಳಗೆ ಸಪ್ತ ಮಾತೃಕಾ ನಾಗ, ೯ ಗಣೇಶ, ೧೦ ಮಹಿಷಮರ್ದಿನಿ, ೧೧ ಗಣೇಶ—ಶಾರದಾ ೧೨ ಮಹಿಷಮರ್ದಿನಿ ೧೩ ಸುಬ್ರಹ್ಮಣ್ಯ.

ಭೈರವ, ಮಹಿಷಮರ್ದಿನಿ, ನಾಲ್ಕನೆ, ಗರ್ಭಗುಡಿಯ ನಂದಿ, ಐದನೆಯ ಗರ್ಭಗುಡಿಯ ನಂದಿ, ಈಶಾನ್ಯದ ದ್ವಾರದಲ್ಲಿ ಸೂರ್ಯನ ಪೀಠ ಬಿದ್ದಿದೆ. ಮುಖಮಂಡಪದ ದ್ವಾರಗಳಲ್ಲಿ ಶೈವದ್ವಾರಪಾಲಕರಿರುವರು. ಸುಮಾರು ನಾಲ್ಕೂವರೆ ಅಡಿ ಎತ್ತರವಿರುವ ಈ ದ್ವಾರಪಾಲಕರನ್ನು ರೂವಾರಿ ಮಲ್ಲಿತಮ್ಮನು ಮಾಡಿದನು. ಮಂಡಪದ ದ್ವಾರಗಳ ಮೇಲೆ ತಾಂಡವೇಶ್ವರ ಇದೆ. ಸುಕನಾಸಿ ದ್ವಾರಗಳು ಹೊಯ್ಸಳ ರೀತಿಯಲ್ಲಿ ಅಲಂಕೃತವಾಗಿವೆ. ಒಂದು ಸುಕನಾಸಿ ದ್ವಾರದಲ್ಲಿ ದ್ವಾರಪಾಲಕರು, ಜಾಲಂದ್ರ ಮುಂದಕ್ಕೆ ಚಾಚಿರುವ ಛಜ್ಜ, ದ್ವಾರದಮೇಲೆ ಉಮಾ ಮಹೇಶ್ವರ, ಅದರ ಮೇಲೆ ಮಕರಗಳ ಮಧ್ಯದಲ್ಲಿ ತಾಂಡವೇಶ್ವರ ನಂದಿ ಪರಿವಾರದೇವತೆಗಳಿರುವರು. ಮೇಲ್ಛಾವಣಿಗಳು ಮೂರು ವಿಧವಾಗಿವೆ. ಆಳವಾಗಿ ಮಧ್ಯದಲ್ಲಿ ಕಮಲದ ಮೊಗ್ಗನ್ನು ಹೊಂದಿವೆ. ಮತ್ತೆ ಕೆಲವು ಮೇಲ್ಛಾವಣಿಗಳು ಚಪ್ಪಟೆಯಾಗಿವೆ. ಹೆಚ್ಚು ಅಲಂಕಾರಗಳಿಲ್ಲ.

ಈ ಪಂಚಲಿಂಗ ದೇವಾಲಯದ ನೈರುತ್ಯದಲ್ಲಿ ಒಂದು ಸಣ್ಣ ಹೊಯ್ಸಳ ಕಾಲದ ವೇಣುಗೋಪಾಲ ದೇವಾಲಯವಿದೆ. ಉತ್ತರದಲ್ಲಿ ಒಂದು ಶೈವ ದೇವಾಲಯವು, ಅದಕ್ಕೆ ಆಗ್ನೇಯದಲ್ಲಿ ಸಣ್ಣ ಗುಡಿಯು ಇವೆ. ಬಹುಶಃ ಹಿಂದೆ ಇದ್ದ ಕೋಟೆಯ ದ್ವಾರವಿಲ್ಲಿದ್ದಿತು.

೫೩. ಹೊಳೇನರಸೀಪುರ : ಇಲ್ಲಿನ ತ್ರಿಕೂಟಾಚಲ ಲಕ್ಷ್ಮೀ

ನರಸಿಂಹ ದೇವಾಲಯದಲ್ಲಿ ಒಳಗಿನ ನವರಂಗ ಮೂರು ಗರ್ಭಗುಡಿಗಳು ಮಾತ್ರ ಹೊಯ್ಸಳ ಕಾಲದ್ದಾಗಿವೆ. ಇವನ್ನು ಕಣಶಿಲೆಯಿಂದ ಕಟ್ಟಿರುವುದರಿಂದ ಬಹುಶಃ ೧೪ನೆಯ ಶತಮಾನದ್ದಾಗಿರಬೇಕು. ವಿಜಯನಗರ ಕಾಲದಲ್ಲಿ ಹೊರಗಿನ ನವರಂಗ, ದ್ವಾರಪಾಲಕರನ್ನೂ, ಪಾಳೆಯಗಾರರ ಕಾಲದಲ್ಲಿ ಮೂರು ಗೋಪುರ, ಪಾತಾಳಾಂಕಣ, ಮಹಾದ್ವಾರ, ಆಳ್ವಾರರ ಗುಡಿ, ಇತ್ಯಾದಿಯನ್ನು ಸೇರಿಸಿರುವರು. ವೆಂಕಟಪ್ಪನಾಯಕನ ವಿಗ್ರಹ ಒಳಗಿನ ನವರಂಗದಲ್ಲಿದೆ. ಹೊರಗಿನ ನವರಂಗದಲ್ಲಿ ಪೆರುಮಾಳೆ ದಂಡ ನಾಯಕನ ಶಾಸನದ ಕಲ್ಲು, ನಾಲ್ಕು ದುಂಡಾದ ಬಳಪದಕಲ್ಲಿನ ಹೊಯ್ಸಳ ಸ್ತಂಭಗಳು ಸೇರಿಸಲ್ಪಟ್ಟಿವೆ. ಜಗತಿಯು ಸಾಮಾನ್ಯವಾಗಿದೆ. ಮೇಲ್ಛಾವಣಿಯ ಬೋದಿಗೆಯಲ್ಲಿ ಮಾತ್ರ ಗಂಗರ ಕಾಲದ ಸೂಚನೆಗಳಿವೆ. ಸುಕನಾಸಿಗಳಲ್ಲಿ ಜಾಲಂದ್ರಗಳಿವೆ. ನವರಂಗದ ಮಧ್ಯದಲ್ಲಿ ಬಳಪದಕಲ್ಲಿನ ಭುವನೇಶ್ವರಿ ಇದೆ. ಗರ್ಭಗುಡಿಗಳಲ್ಲಿ ಹೊಯ್ಸಳ ವಿಗ್ರಹಗಳಿವೆ. ದಕ್ಷಿಣ ಗರ್ಭಗುಡಿಯಲ್ಲಿ ಗೋಪಾಲಕೃಷ್ಣ, ಉತ್ತರದಲ್ಲಿ ಲಕ್ಷ್ಮೀ ನರಸಿಂಹ, ಪಶ್ಚಿಮದಲ್ಲಿ ಶಂಖ ಪದ್ಮ ಗದಾ ಚಕ್ರಧರಿಸಿರುವ ನಾರಾಯಣ ವಿಗ್ರಹಗಳಿವೆ. ಒಳಗಿನ ನವರಂಗದಲ್ಲಿ ವೆಂಕಟಪ್ಪನಾಯಕನ ವಿಗ್ರಹ, ಹೊಯ್ಸಳ ಗಣೇಶ, ಆಸೀನವಿಷ್ವಕ್ಸೇನ, ದುರ್ಗಾವಿಗ್ರಹಗಳಿವೆ. ತಾಮ್ರದ ಉತ್ಸವ ವಿಗ್ರಹಗಳು ಈಚಿನದಾದರೂ ಚೆನ್ನಾಗಿವೆ. ರಾಮಾನುಜ, ಆಳ್ವಾರರೂ ಆಂಡಾಳ್ ಗರುಡ ಗುಡಿಗಳು ಹೊರಗಡೆ ಇವೆ.

೫೪. ಮೊಸಳೆ: ಹಾಸನದ ದಕ್ಷಿಣಕ್ಕೆ ಎಂಟು ಮೈಲಿಯಲ್ಲಿ ದೊಡ್ಡ ಕೆರೆ ಇದೆ. ಇದರ ನೈರುತ್ಯದಲ್ಲಿ ಎತ್ತರವಾದ ಗುಟ್ಟದಮೇಲೆ ಮೊಸಳೆ ಗ್ರಾಮವಿದೆ. ಇಲ್ಲಿ ಮರಳೆಯಲ್ಲಿದ್ದಂತೆ ಅವಳಿ ದೇವಾಲಯಗಳಿವೆ. ಎರಡು ದೇವಾಲಯಗಳು ಪ್ರತ್ಯೇಕವಾಗಿದ್ದರೂ ಒಂದೇ ರೀತಿಯ ತಲವಿನ್ಯಾಸ, ಗರ್ಭಗುಡಿ, ಸುಕನಾಸಿ, ರಂಗಮಂಡಪ, ಶಿಖರಗಳನ್ನು ಹೊಂದಿ ಪೂರ್ವಾಭಿಮುಖಗಳಾಗಿವೆ. ಆದರೆ ಎರಡೂ ಸಮರೇಖೆಗಳಲ್ಲಿಲ್ಲದೆ ಐದು ಡಿಗ್ರಿ ಪೂರ್ವದ ಕಡೆಗೆ ಬಗ್ಗಿವೆ. ಎರಡು ದೇವಾಲಯಗಳು ಬಳಪದಕಲ್ಲಿನಿಂದ ಸುಂದರವಾಗಿ ನಿರ್ಮಿತವಾಗಿವೆ. ವಿಗ್ರಹಗಳ ಕೆಳಗೆ ಹೆಸರುಗಳಿದ್ದರೂ ಯಾವ ಶಾಸನವೂ ಸಿಕ್ಕಿಲ್ಲವಾದ್ದರಿಂದ ಕಾಲನಿರ್ಣಯ

ಮಾಡುವುದು ಕಷ್ಟವಾಗಿದೆ. ಪಾಳೆಯಗಾರ ಎರೆ ಕೃಷ್ಣಪ್ಪನಾಯಕನ ೧೫೭೮ ವರ್ಷದ ಶಾಸನ ಈ ದೇವಾಲಯಗಳಿಗೆ ಕೊಟ್ಟಿರುವುದನ್ನು ಸೂಚಿಸುತ್ತದೆ. ಬಹುಶಃ ಸೋಮನಾಥಪುರ ನುಗ್ಗಿಹಳ್ಳಿ ಗುಡಿಗಳ ಸಮಕಾಲೀನವೆಂದು ಊಹಿಸಬಹುದು. ನಾಗಣ್ಣ ದಂಡನಾಯಕ ನೆಂಬುವನು ನಿರ್ಮಿಸಿರಬಹುದು.

ನಾಗೇಶ್ವರ ದೇವಾಲಯ : ಕಣಶಿಲೆಯ ಜಗತಿಯ ಮೇಲೆ ಈ ಗುಡಿ ಇದೆ. ಗೋಡೆಯ ಕೆಳಭಾಗದಲ್ಲಿ ನಾಲ್ಕೂವರೆ ಅಡಿ ಎತ್ತರದವರೆಗೆ ಐದು ಪಟ್ಟಿಕೆಗಳಿವೆ. ಮೇಲಿನ ಎರಡು ಪಟ್ಟಿಕೆಗಳನ್ನು ಪೂರ್ತಿಯಾಗಿ ಅಲಂಕರಿಸಿಲ್ಲ. ಮೇಲಿನ ಗೋಡೆಯನ್ನು ವಿಗ್ರಹಗಳಿಂದ ಅಲಂಕರಿ ಸಿರುವರು. ನವರಂಗ ಗೋಡೆಯ ಮಧ್ಯದಲ್ಲಿ ಗೂಡುಗಳಿವೆ. ಇವು ಈಗ ಖಾಲಿಯಾಗಿವೆ. ಗೂಡುಗಳ ಮೇಲೆ ನಾಲ್ಕು ಚಾವಣಿಗಳ ಶಿಖರ ವಿದೆ. ಗೋಡೆಯನ್ನು ಫಲಕಗಳಾಗಿ ವಿಂಗಡಿಸಿ ಎರಡಡಿ ಎತ್ತರದ ವಿಗ್ರಹಗಳನ್ನು ಅನೇಕ ವಿಧಗಳಾದ ತೋರಣ ಶಿಖರಗಳ ಕೆಳಗೆ ಇಟ್ಟಿರು ವರು. ನಾಗೇಶ್ವರ ದೇವಾಲಯದ ವಿಗ್ರಹಗಳ ಕೆಳಗೆ ಹೆಸರುಗಳನ್ನು ಬರೆದಿರುವುದರಿಂದ ಶೈವ ಶಾಕ್ತ ವಿಗ್ರಹಗಳ ಲಕ್ಷಣಗಳನ್ನು ತಿಳಿಯಲು ಅನುಕೂಲವಾಗಿದೆ. ಆದರೆ ಕೆಲವು ಸವೆದುಹೋಗಿ ಭಂಗವಾಗಿರು ವುದರಿಂದ ಲಕ್ಷಣಗಳನ್ನು ತಿಳಿಯಲು ಕಷ್ಟವಾಗಿದೆ. ಮುಖಮಂಡಪದ ದಕ್ಷಿಣದಿಂದ ಪ್ರದಕ್ಷಿಣೆಯಾಗಿ ಈ ವಿಗ್ರಹಗಳಿವೆ :

ಪೂರ್ವ—ಆಸೀನ ಅಷ್ಟಭುಜದೇವಿ–ಸರ್ಪ, ಸ್ಥಾನಕ ದುರ್ಗಾ, ಸ್ಥಾನಕ ಶಿವ (ಎರಡು ಕೈಗಳಲ್ಲಿ ಸರ್ಪ ತ್ರಿಶೂಲ. ಎರಡು ಹೋಗಿವೆ). ಕೆಳಗೆ "ನಂನ್ಮ"; ದಕ್ಷಿಣ–ಸ್ಥಾನಕ ಶಿವ (ಭಗ್ನ, ಡಮರು, ತ್ರಿಶೂಲ, ಅರ್ಧಚಂದ್ರಹಸ್ತ), "ದಕ್ಷಿಣ ದೇ(ದಿ)ಪಾತಾಳಕ"; ದೇವಿ, ಅಷ್ಟಭುಜ ದೇವಿ ಮಹಿಷ, ಮೂರು ಶಾಕ್ತದೇವತೆಗಳು (ಭಂಗ), ದಕ್ಷಿಣ ಗೂಡಿನ ಹತ್ತಿರ ಸಳವಿಗ್ರಹಗಳು, ದೇವೀ ಮತ್ತು ಗಜ "ಶ್ರಿಯಾದೇವಿ"; ದೇವಿ-ಗರುಡ. "ಲಕ್ಷ್ಮಿದೇವಿ", ಪರಿಚಾರಿಕೆಯರು, ಆಸೀನಕುಮಾರ ಮಯೂರ, ಕಳಶ ; ಸ್ಥಾನಕ ಗೌರೀ (ಅಕ್ಷಮಾಲಾ ಪಾಶ ಸರ್ಪ ಪದ್ಮ) "ಗೌರಿ"; ಆಸೀನ ಮಾಹೇಶ್ವರೀ (ಅಕ್ಷಮಾಲಾ ಪಾಶ ಡಮರುಗ

ದಾನ) ನಂದಿ, "ಮಹೇಸ್ವರಿ"; ಆಸೀನದೇವಿ (ಚಿನ್ಮುದ್ರಾ ಪದ್ಮ ಪದ್ಮ ಅಭಯ) ಕೆಳಗೆ ಸರ್ಪ; ಸ್ಥಾನಕ ಮನೋಹರಿ (ಅಭಯ ಶೂಲ ಖಟ್ವಾಂಗ ಕಲಶ), "ಮನೋಹರಿ"; ಆಸೀನ ಅಷ್ಟಭುಜದೇವಿ ಬಲದಲ್ಲಿ ಕಳಶ ಎಡದಲ್ಲಿ ಸಿಂಹ (ದುರ್ಗಾ?) ವೈಷ್ಣವೀ (ಭಗ್ನ), ಅಂಜಲಿಹಸ್ತನಾದ ಪುರುಷ, ಭಗ್ನ, ಭಗ್ನ, ದುರ್ಗಾ, ಬಲದಲ್ಲಿ ಭಕ್ತ ಎಡದಲ್ಲಿ ಸಿಂಹ, ಸ್ಥಾನಕ ದುರ್ಗಾ (ಕತ್ತಿ ಶೂಲ ಪಾಶ ಪಾತ್ರ), ಶಿವವಜ್ರಭೂತ ಸ್ಥಾನಕಮೂರ್ತಿ, "ವಜ್ರಭೂತ"; ಮೂರು ಸ್ತ್ರೀ ವಿಗ್ರಹಗಳು, ತ್ರಿಮುಖ ಶ್ಮಶ್ರುಧಾರಿಯಾದ ಬ್ರಹ್ಮ, "ಬ್ರಹ್ಮ"; ಸ್ಥಾನಕ ತ್ರಿಮುಖ ಸರಸ್ವತಿ, ಚಾಮರಧಾರಿಣಿ, ಸ್ಥಾನಕ ಶಾರದಾ (ಚಿನ್ಮುದ್ರಾ ತ್ರಿಶೂಲ ಡಮರು ಪುಸ್ತಕ), ಭಗ್ನವಾದ ಚಿತ್ರಸೇನ, "ಚಿತ್ರಸೇನ."

ಪಶ್ಚಿಮ—ಸ್ಥಾನಕ ಮಹಾಕಣ್ಮ (ಕತ್ತಿ, ಡಮರು, ಭಗ್ನ ಭಗ್ನ), "ಮಹಾ ಕಂಣ್ಮ", ಸ್ಥಾನಕ ದೇವಿ (ಭಗ್ನ, ಪಾಶ ಅಂಕುಶ ಫಲ), ಸೇವಿಕೆ, ಆಸೀನ ದುರ್ಗಾ (ಅಕ್ಷಮಾಲಾ ಡಮರು ತ್ರಿಶೂಲ ದಾನ), ಆಸೀನ ಸದಾಶಿವ-ಮೂರು ಮುಖಗಳು ಸಾಲಾಗಿ, ಮೇಲೆ ಒಂದು, ಕಿರೀಟದ ಮೇಲೆ ಸರ್ಪ, ಹತ್ತು ಭುಜ (ಹಿಂದೆ ಒಂದು ತಲೆ?), "ಸದಾಶಿವಮೂರ್ತಿ", ಆಸೀನ ಲಕ್ಷ್ಮೀ–ಗಜ, ಪರಿಚಾರಿಕೆ, ಖಾಲಿ, ಸ್ಥಾನಕ ಗಂಭೀರಶಿವ (ಗದಾ–ಶೂಲ ಡಮರು ಅಭಯ).

ಉತ್ತರ—ಹರಿಹರ (ಡಮರು ಚಕ್ರ ಭಗ್ನ ಭಗ್ನ), ದೇವಿ; ಸುಖಾಸನದಲ್ಲಿ ಕುಳಿತಿರುವ ನಾರಾಯಣ ("ನಾರಾಯಣ"), ಶ್ರೀ ("ಶ್ರಿಯಾದೇವಿ"), ಚಾಮರಧಾರಣಿ, ಭೂ ("ಭೂಮಿದೇವಿ"), ಚಾಮರಧಾರಿಣಿ; ಸ್ಥಾನಕ ವೈಷ್ಣವೀ (ಪದ್ಮ ಚಕ್ರ ಶಂಖ ಫಲ); ಚಿತ್ರಧರ (ಶಿವ–ಭಗ್ನ ತ್ರಿಶೂಲ ಡಮರು ಅಭಯ) "ಚಿತ್ರಧರ"; ದೇವಿ, ಆಸೀನ ಪಾರ್ವತಿ (ಭಗ್ನ ಅಂಕುಶ ಪಾಶ ಫಲ), ದೇವಿ, ಅಂಜಲಿ ಹಸ್ತನಾಗಿ ಮೊಳಕಾಲೂರಿ ಕುಳಿತಿರುವ ಗರುಡ.

ಪಶ್ಚಿಮ—ಸ್ಥಾನಕ ದುರ್ಗಾ (ಪಾತ್ರ ಘಂಟಾ ಭಗ್ನ ಭಗ್ನ), ಆಸೀನ ಚಕ್ರೇಶ್ವರೀ (ಷಡ್ಭುಜ-ಚಿನ್ಮುದ್ರಾ?, ಭಗ್ನ, ಚಕ್ರ, ಭಗ್ನ ಭಗ್ನ), ಸ್ಥಾನಕ ದುರ್ಗಾ (ಫಲಶೂಲ ಡಮರುಗ ಪದ್ಮ), ಆಸೀನ ಶಿವ (ಅಕ್ಷಮಾಲಾ ತ್ರಿಶೂಲ ಡಮರುಗ ಭಗ್ನ).

ಉತ್ತರ—ತ್ರಿಶಿರದ ಆಸೀನ ದೇವಿ (ಅಕ್ಷಮಾಲಾ ಭಗ್ನ ಭಗ್ನ ಪಾಶ ?), ಆಸೀನ ದುರ್ಗಾ (ಅಕ್ಷಮಾಲಾ ತ್ರಿಶೂಲ ಡಮರು ಪಾತ್ರ), ಆಸೀನ ದೇವಿ (ಅಕ್ಷಮಾಲಾ ಗದಾ ಶೂಲ ಫಲ), ವೈಷ್ಣವೀ (ಶಂಖ ಪದ್ಮ ಗದಾ ಚಕ್ರ), ಸ್ಥಾನಕ ಶಿವ (ಅಭಯ ತ್ರಿಶೂಲ ಫಲ), ಬಲಗೈಯಲ್ಲಿ ಗದೆ ಹಿಡಿದ ಪರಿಚಾರಕ, ಚಾಮರಧಾರಿಣಿ, ಉತ್ತರ ಗೂಡು—ಸ್ವವಿಗ್ರಹಗಳು, ಪರಿಚಾರಿಕೆ, ಅಭಯ ಗದಾಹಸ್ತನಾದ ಪರಿಚಾರಕ, ದೇವೀ (ಅಕ್ಷಮಾಲಾ ಡಮರು, ಭಗ್ನ ಭಗ್ನ), ವರಾಹ, ಪದ್ಮಾಸನದಲ್ಲಿ ದೇವಿ (ವಜ್ರ ಅಂಕುಶ ಪಾಶ ಫಲ), ಆಸೀನ ದೇವಿ (ವಜ್ರ ತ್ರಿಶೂಲ ಭಗ್ನ ಪಾತ್ರ), ಸ್ಥಾನಕ ದೇವಿ (ಭಗ್ನ).

ಪೂರ್ವ—ಮಹಾಕಾಲ (ಶಿವ-ಅಕ್ಷಮಾಲಾ ಡಮರು ತ್ರಿಶೂಲ ಫಲ), "ಮಹಾಕಾಲ"; ಮೂರು ಭಗ್ನವಿಗ್ರಹಗಳು.

ದಕ್ಷಿಣದ ಗೋಡೆ—ಶ್ರೀದೇವಿ ಮೇಲೆ ಲತಾಪಟ್ಟಿಕೆ, ವಜ್ರಭೂತದ ಮೇಲೆ ಔತ್ತರೇಯ ಗೋಪುರ, ಸದಾಶಿವಮೂರ್ತಿಯ ಮೇಲೆ ಎಂಟು ಅಂತಸ್ತಿನ ಶಿಖರ, ಚಿತ್ರಧರದ ಮೇಲೆ ಔತ್ತರೇಯ ಗೋಪುರ ಕಂಡುಬರುತ್ತವೆ. ಗೋಡೆಯಮೇಲೆ ಮೇಲ್ಚಾವಣಿ ಬೋದಿಗೆಯನ್ನು ಕಪಿಗಳೇ ಮುಂತಾದವಿಗ್ರಹಗಳಿಂದ ಅಲಂಕರಿಸಿರುವರು. ಕೈಪಿಡಿ ಗೋಡೆಯ ಮೇಲೆ ನಾಲ್ಕು ಸಾಲುಗಳಲ್ಲಿ ಹಂಸ ಸಳ ಮಕರ ಸಿಂಹ ರತಿಬಂಧ ನರ್ತಕ ಇತ್ಯಾದಿ ವಿಗ್ರಹಗಳು, ಮೇಲಿನ ಸಾಲಿನಲ್ಲಿ ಅಪೂರ್ವವಾದ ವೈಷ್ಣವಶಾಕ್ತ ವಿಗ್ರಹಗಳಿವೆ. ತಾಂಡವೇಶ್ವರ, ಗಜಾಸುರಮರ್ದನ, ಗಣೇಶ, ಯೋಗನರಸಿಂಹ, ಇತ್ಯಾದಿಗಳನ್ನು ಗುರ್ತಿಸಬಹುದು.

ಶಿಖರವು ಚತುರಸ್ರವಾದ ನಾಲ್ಕು ಪಟ್ಟಿಕೆಗಳನ್ನು ಹೊಂದಿದೆ. ಪಟ್ಟಿಕೆಯ ಮಧ್ಯದಲ್ಲಿ ಶೈವವಿಗ್ರಹಗಳಿವೆ. ಮೇಲೆ ಅಲಂಕೃತವಾದ ಕಳಶವಿದೆ. ಸುಕನಾಸಿ ಮೇಲೆ ಚಾಚಿರುವ ಭಾಗದಲ್ಲಿ ಸುಂದರವಾದ ಸಳ ವಿಗ್ರಹವಿದೆ. ಪೂರ್ವದ ಫಲಕದಲ್ಲಿ ತಾಂಡವೇಶ್ವರನಿರುವನು. ಮುಂದಿನ ಮುಖಮಂಡಪ ಶಿಥಿಲವಾಗಿದೆ. ಇದರ ಪೀಠದಲ್ಲಿ ಯೋಧರು, ರತಿಬಂಧ, ಕೀರ್ತಿಮುಖ, ಲತಾ, ಬಾಗಿರುವ ಕಟಾಂಜನದ ಮೇಲೆ ಗಾಯಕನರ್ತಕ ವಿಗ್ರಹಗಳೂ ಇವೆ. ಎರಡು ದುಂಡಾದ ಕಂಬಗಳಿವೆ. ಮೇಲ್ಚಾವಣಿಯಲ್ಲಿ

ಅಷ್ಟದಿಕ್ಪಾಲಕರು, ತಾಂಡವೇಶ್ವರ, ನರ್ತಕರು ಇರುವರು. ಕಲ್ಲಿನ ಜಗತಿಗಳು ಒಳಗೆ ಇವೆ.

ನವರಂಗ ದ್ವಾರಗಳಲ್ಲಿ ದ್ವಾರಪಾಲಕರು ಚಾಮರಧಾರಿಣಿಯರು ಲತಾಪಟ್ಟಿಕೆಗಳಿವೆ. ದ್ವಾರದಮೇಲೆ ಉಮಾಮಹೇಶ್ವರ ಇದೆ. ನವರಂಗದ ಒಂಬತ್ತು ಅಂಕಣಗಳ ಮೇಲ್ಛಾವಣಿಗಳಲ್ಲಿ ರೇಖಾಚಿತ್ರಗಳು, ಮಧ್ಯದ ಭುವನೇಶ್ವರಿಯಲ್ಲಿ ಶೈವ ವಿಗ್ರಹಗಳು ಗಾಯಕರು ನರ್ತಕರು ಸಳ ಕಮಲದಳಗಳು ಇವೆ. ನವರಂಗದ ಪಶ್ಚಿಮ ಭಾಗದಲ್ಲಿ ಅಲಂಕೃತವಾದ ಆರು ಗೂಡುಗಳಲ್ಲಿ ಈ ವಿಗ್ರಹಗಳಿವೆ: ಸಪ್ತಮಾತೃಕೆಯರು ವೀಣಾ ವೀರಭದ್ರ ಗಣೇಶ; ಆಸೀನ ಶಾರದಾ (ಅಕ್ಷಮಾಲಾ ಅಂಕುಶ ಪಾಶ ಪುಸ್ತಕ); ಮಹಿಷಮರ್ದಿನಿ (ಅಷ್ಟಭುಜಗಳಲ್ಲಿ ಕತ್ತಿ ತ್ರಿಶೂಲ ಚಕ್ರ ಬಾಣ ಶಂಖ:ಗುರಾಣಿ ಪಾತ್ರ ರಾಕ್ಷಸನ ಕೇಶವನ್ನು ಹಿಡಿದಿರುವುದು) ; ಲಿಂಗ (ಬಹುಶಃ ಹಿಂದೆ ಸೂರ್ಯ ಇದ್ದಿತು) ; ಸ್ಥಾನಕ ಕೇಶವ ನವರಂಗದ ಮಧ್ಯದಲ್ಲಿ ನಂದಿ ಇದೆ.

ಸುಕನಾಸಿ ದ್ವಾರದಲ್ಲಿ ಜಾಲಂಧ್ರ, ಕೆಳಗೆ ಮನ್ಮಥ-ರತಿ, ಮೇಲೆ ಉಮಾಮಹೇಶ್ವರ ಇವೆ. ಸುಕನಾಸಿಯ ಮೇಲ್ಛಾವಣಿಯಲ್ಲಿ ಒಂಬತ್ತು ಪದ್ಮಗಳ ನಡುವೆ ತಾಂಡವ ಗಣೇಶ ಇದೆ.

ಗರ್ಭಗುಡಿ ದ್ವಾರದಮೇಲೆ ಗಜಲಕ್ಷ್ಮಿ, ಒಳಗೆ ಚಪ್ಪಟೆ ತಲೆಯುಳ್ಳ ಲಿಂಗ ಇವೆ.

ಚೆನ್ನಕೇಶವ ದೇವಾಲಯವು ನಾಗೇಶ್ವರದಂತೆಯೇ ಇದೆ. ಗೋಡೆಗಳ ಮೇಲೆ ಪೂರ್ವದ್ವಾರದ ಈಶಾನ್ಯ ಮೂಲೆಯಿಂದ ಈ ವಿಗ್ರಹಗಳಿವೆ: ರತಿ–ಮನ್ಮಥ, ಗರುಡ, ಕೇಶವ, ಸಂಕರ್ಷಣ, ಹೂಮಾಲೆ ಹಿಡಿದ ಭೂದೇವಿ, ಧರಣೀವರಾಹ, ಕಾಳಿಂಗಮರ್ದನ, ಹೂಮಾಲೆ ಹಿಡಿದ ಸ್ತ್ರೀ (ರಾಧೆ?), ವೇಣುಗೋಪಾಲ, ಚಾಮರಧಾರಿಣಿ, ಖಾಲಿ ಗೂಡು, ಎರಡು ಪಕ್ಕಗಳಲ್ಲಿ ಗಜವನ್ನು ಸಂಹರಿಸುವ ಸಿಂಹಗಳು, ಚಾಮರಧಾರಿಣಿ, ಹೂವನ್ನು ಹಿಡಿದಿರುವ ಪ್ರಹ್ಲಾದ, ಉಗ್ರನರಸಿಂಹ, ಗರುಡ, ಜನಾರ್ದನ, ಚಾಮರಧಾರಿಣಿ, ಆಸೀನ ಮಾಧವ (ಗದೆ ಭಗ್ನವಾಗಿದೆ), ಆಸೀನ ಕೃಷ್ಣ (ಶಂಖ ಗದಾ ಪದ್ಮ ಚಕ್ರ), ಚಾಮರಧಾರಿಣಿ, ಗೋವರ್ಧನಧಾರಿ,

ಸ್ಥಾನಕ ವಿಷ್ಣು (?), ಗರುಡ, ದಕ್ಷಿಣಾಮೂರ್ತಿ ನೃತ್ಯಮೋಹಿನಿ, ಸ್ಥಾನಕ ವಿಷ್ಣು, ಗರುಡ, ಲಕ್ಷ್ಮೀ, ಯೋಗನರಸಿಂಹ ಶ್ರೀ ಮತ್ತು ಪರಿಚಾರಿಕೆ. ಭೂ ಮತ್ತು ಪರಿಚಾರಿಕೆ, ಹಿಂತಿರುಗಿ ಹಲ್ಲುಕಿರಿಯುತ್ತಿರುವ ಹನುಮಂತ, ಸ್ಥಾನಕ ಅನಿರುದ್ಧ, ಸ್ಥಾನಕ ಮಾಧವ, ಗರುಡ; ವಿಷ್ಣು ಇಬ್ಬರು ದೇವಿಯರು ಇಬ್ಬರು ಪರಿಚಾರಿಕೆಯರು; ಗರುಡ, ಆಸೀನ ಮಾಧವ, ಆಸೀನ ಶ್ರೀಧರ, ಗರುಡ, ನಾರಾಯಣ, ದೇವಿಯರು, ಪರಿಚಾರಿಕೆಯರು, ಖಾಲಿ, ಸ್ಥಾನಕ ಮಾಧವ; ಆಸೀನ ಗೋವಿಂದ, ಪರಿಚಾರಕರು, ಗರುಡ, ಸಂಕರ್ಷಣ, ಪರಿಚಾರಕರು, ತ್ರಿವಿಕ್ರಮ, ಬಲಿ–ವಾಮನ, ಗರುಡ, ಆಸೀನ ಹರಿ, ದಕ್ಷಿಣಾಮೂರ್ತಿ–ಮೋಹಿನಿ; ಸ್ಥಾನಕ ಅಚ್ಯುತ; ಉತ್ತರ ಗೂಡು, ಪರಿಚಾರಿಕೆಯರು; ಮೂರು ವಿಗ್ರಹಗಳು (ಭಗ್ನ), ಆಸೀನ ಪಾರ್ವತಿ, ಬ್ರಹ್ಮ, ಆಸೀನ ಲಕ್ಷ್ಮೀನಾರಾಯಣ, ಜನಾರ್ದನ, ಲಕ್ಷ್ಮೀ, ಕಾಳಿಂಗಮರ್ದನ, ವಾಮನ.

ಮೇಲ್ಛಾವಣಿಯ ಬೋದಿಗೆಯ ಕೈಪಿಡಿ ಗೋಡೆಗಳಲ್ಲಿ ವೈಷ್ಣವ ವಿಗ್ರಹಗಳೂ ಕೆಲವು ಶೈವವಿಗ್ರಹಗಳೂ ಇವೆ. ಶಿಖರದಲ್ಲಿಯೂ ವೈಷ್ಣವ ವಿಗ್ರಹಗಳಿವೆ. ಮುಖಮಂಡಪದ ಮೇಲ್ಛಾವಣಿಯಲ್ಲಿ ಅಷ್ಟಕೋಣದ ಮಧ್ಯದಲ್ಲಿ ವೃತ್ತವಿದೆ. ನವರಂಗದ ದ್ವಾರ ಅಪೂರ್ಣವಾಗಿದೆ. ನವರಂಗದಲ್ಲಿನ ಗೂಡುಗಳ ಗೋಪುರಗಳು ಮೂರು ಅಥವಾ ಐದು ಇವೆ. ಇವುಗಳಲ್ಲಿ ಲಕ್ಷ್ಮೀನಾರಾಯಣ, ಆಸೀನ ಅನಿರುದ್ಧ, ಆಸೀನ ಸರಸ್ವತಿ, ಗಣೇಶ, ಸ್ಥಾನಕ ಲಕ್ಷ್ಮೀ (ಪದ್ಮ ಚಕ್ರ ಶಂಖ ಫಲ), ಆಸೀನ ಲಕ್ಷ್ಮೀ (ಪಾಶ ಶಂಖ ಚಕ್ರ ಕಲಶ), ಯೋಗನರಸಿಂಹ ವಿಗ್ರಹಗಳಿವೆ.

ನವರಂಗದ ಭುವನೇಶ್ವರಿಗಳಲ್ಲಿ ರೇಖಾಚಿತ್ರಗಳೂ, ಮಧ್ಯದಲ್ಲಿ ಲಾಳ ಆಕಾರದ ಕಮಾನುಗಳೂ ಪದ್ಮ ತೂಗಾಡುವ ಕರ್ಣಿಕೆಯೂ ಇವೆ. ಸುಕನಾಸಿ ದ್ವಾರದಲ್ಲಿ ಜಾಲಂದ್ರ, ದ್ವಾರಪಾಲಕರ ಬದಲು ಶಂಖ ಊದುತ್ತಿರುವ ಬಾಲಕರು, ಚಾಮರಧಾರಿಣಿಯರು ಇರುವರು. ದ್ವಾರದಮೇಲೆ ಆಸೀನ ತ್ರಿವಿಕ್ರಮ (?), ಸುಕನಾಸಿಯ ಮೇಲ್ಛಾವಣಿಯಲ್ಲಿ ನರ್ತಕರ ಮಧ್ಯದಲ್ಲಿ ಉಗ್ರನರಸಿಂಹ ಇವೆ. ಗರ್ಭಗುಡಿಯ ಭುವನೇಶ್ವರಿಯಲ್ಲಿ ಪದ್ಮವಿದೆ. ಗರುಡಪೀಠದ ಮೇಲೆ ಆರು ಅಡಿ ಎತ್ತರದ ಕೇಶವವಿಗ್ರಹವಿದೆ. ಪಕ್ಕದಲ್ಲಿ ದೇವಿಯರು, ತೋರಣದಲ್ಲಿ ದಶಾವತಾರಗಳೂ ಇವೆ.

೫೫. **ಕೋರವಂಗಲ :** ಹಾಸನಕ್ಕೆ ಆರು ಮೈಲಿ ಉತ್ತರದಲ್ಲಿರುವ ಕೋರವಂಗಲದಲ್ಲಿ ಹೊಯ್ಸಳ ಕಾಲದ ಮೂರು ಗುಡಿಗಳಿವೆ. ಬೂಚೇಶ್ವರ (ಭೂತನಾಥೇಶ್ವರ) ದೇವಾಲಯವು ದೊಡ್ಡದಾಗಿಯೂ ಅತ್ಯಂತ ಸುಂದರವಾಗಿಯೂ, ಈಚಿನ ಸೇರ್ಪಡೆಗಳಿಲ್ಲದೆ ಮೊದಲಿದ್ದಂತೆಯೇ ಇರುವುದರಿಂದ ಹೊಯ್ಸಳ ವಾಸ್ತುಶಿಲ್ಪಕ್ಕೆ ಉತ್ತಮ ಉದಾಹರಣೆಯಾಗಿದೆ. ಗುಡಿಯ ಆಗ್ನೇಯದಲ್ಲಿರುವ ಶಾಸನ(ಹಾಸನ ೭೧, ಎ.ಕ. ೫)ದಂತೆ ಒಂದನೇ ನರಸಿಂಹನ ಬ್ರಾಹ್ಮಣ ದಂಡನಾಯಕನಾಗಿದ್ದ ಬೂಚಿರಾಜನು ಇಮ್ಮಡಿ ವೀರಬಲ್ಲಾಳನ ಪಟ್ಟಾಭಿಷೇಕದ ಸ್ಮಾರಕವಾಗಿ ಕ್ರಿ. ಶ. ೧೧೭೩ರಲ್ಲಿ ಇದರ ಪ್ರತಿಷ್ಠೆ ನಡೆಸಿದನು. ಬೂಚಿರಾಜನ ಮನೆತನದವರು ಇಲ್ಲಿರುವ ಇತರ ದೇವಾಲಯಗಳನ್ನು ಕಟ್ಟಿಸಿದರು. ಈಶಾನ್ಯದಲ್ಲಿರುವ ಭೈರವ ಸೂರ್ಯದೇವಾಲಯಗಳು ಇದೇ ಕಾಲದಲ್ಲಿ ನಿರ್ಮಿತವಾದುವು.

ಬೂಚೇಶ್ವರ ದೇವಾಲಯವು ಎತ್ತರದಲ್ಲಿರುವುದರಿಂದ ಬಹುಶಃ ಜಗತಿಯ ಮೇಲಿದೆ. ಇದರ ಹೊರಗೋಡೆಯ ಕೆಳಭಾಗದಲ್ಲಿ ಐದು ಚಿತ್ರಪಟ್ಟಿಕೆಗಳು ಮೊಸಳೆಯಲ್ಲಿದ್ದಂತೆ ಇವೆ. ಗರ್ಭಗುಡಿ, ಸುಕನಾಸಿಗಳು ಚತುರಸ್ರವಾಗಿವೆ. ನವರಂಗ ಮುಖಮಂಡಪಗಳು ದೀರ್ಘ ಚತುರಸ್ರವಾಗಿವೆ. ಮುಖಮಂಡಪಕ್ಕೆ ಪೂರ್ವದಲ್ಲಿ ಸೂರ್ಯನ ಗುಡಿ ಇದೆ.

ಹೊರಗೋಡೆಯ ಮಧ್ಯದಲ್ಲಿ ಶಿಖರಗಳ ಕೆಳಗೆ ಒಂದೂವರೆ ಅಡಿ ಎತ್ತರದ ವಿಗ್ರಹಗಳಿವೆ. ನವರಂಗ ದ್ವಾರದಿಂದ ಪ್ರದಕ್ಷಿಣೆಯಾಗಿ–

ಪೂರ್ವ–ಸ್ಥಾನಕ ಸರಸ್ವತಿ (ಅಕ್ಷಮಾಲಾ ಅಂಕುಶ ಪಾಶ ಪುಸ್ತಕ), ನೃತ್ಯಗಣಪತಿ–ಮೂಷಕ, ಅರ್ಜುನ ಮತ್ಸ್ಯಯಂತ್ರ, ಸ್ಥಾನಕ ಪಾರ್ವತಿ (ಡಮರು ತ್ರಿಶೂಲ ಅಂಕುಶ ಪಾಶ)

ದಕ್ಷಿಣ–ಭೈರವ, ಹಿರಣ್ಯಕಶಿಪು ಪ್ರಹ್ಲಾದನನ್ನು ಹಿಂಸಿಸಲು ಆಜ್ಞೆ ಮಾಡುವನು, ಕನ್ನಡ ಶಾಸನ "ಪುದ್ರೊಜ (ಕ ?)"; ಪ್ರಹ್ಲಾದನನ್ನು ಅಗ್ನಿ, ಆನೆ, ಸರ್ಪ, ಬಂಧನಗಳಿಂದ ಹಿಂಸಿಸುವುದು, ಸ್ತಂಭದಿಂದ ನರಸಿಂಹ, ಉಗ್ರನರಸಿಂಹ ಲಕ್ಷ್ಮೀ ಪ್ರಹ್ಲಾದ; ಗಾಯಕರು, ಭೈರವ, ಕಾಪಾಲಿಕ, ಪದ್ಮ ಕಲಶ ಹಿಡಿದ ದೇವಿ, ನೃತ್ಯಗಜಾಸುರಮರ್ದನ.

ಪಶ್ಚಿಮ–ಶ್ವೇತವರಾಹ–ರಾಕ್ಷಸ, ಸ್ಥಾನಕ ಲಕ್ಷ್ಮೀ, ಸೂರ್ಯ, ನೃತ್ಯಮೋಹಿನೀ–ಕಪಿ.

ದಕ್ಷಿಣ-ತ್ರಿವಿಕ್ರಮ ಶ್ರೀ ಭೂ; ಕೋದಂಡರಾಮ ಲಕ್ಷ್ಮಣ ಹನುಮಂತ; ಆಸೀನ ಉಮಾಮಹೇಶ್ವರ, ಬಲದಲ್ಲಿ ಬ್ರಹ್ಮ-ಸರಸ್ವತಿ, ಎಡದಲ್ಲಿ ಕೇಶವ; ಕತ್ತಿ ಕಲಶ ಹಿಡಿದ ದುರ್ಗಾ, ಸ್ಥಾನಕ ದಕ್ಷಿಣಾಮೂರ್ತಿ (ಅಕ್ಷಮಾಲಾ ಪಾಶ ಫಲ ಪುಸ್ತಕ).

ಪಶ್ಚಿಮ-ಸ್ಥಾನಕ ದೇವದೇವಿ (ಮನ್ಮಥ-ರತಿ ?), ಚುಂಬನ, ಧರಣೀವರಾಹ ದೇವಿಯರು; ದಕ್ಷಿಣಾಮೂರ್ತಿ (ನಿಲುವಂಗಿ ಚಕ್ರ), ಸ್ಥಾನಕ ದೇವ, ಸ್ಥಾನಕಶಿವ (ಅಕ್ಷಮಾಲಾ ತ್ರಿಶೂಲ ಡಮರುಗ ಫಲ), ಸ್ಥಾನಕ ದೇವ (ಶಿವ ?), ಸ್ಥಾನಕ ಸರಸ್ವತಿ (ಫಲ ಅಕ್ಷಮಾಲಾ ಕಲಶ ಪುಸ್ತಕ), ಸ್ಥಾನಕ ಸರಸ್ವತೀ (ಎರಡು ಕೈಗಳಲ್ಲಿ ವೀಣೆ, ಅಕ್ಷಮಾಲಾ ಪುಸ್ತಕ), ತಾಂಡವೇಶ್ವರ ದೇವೀ ಮಾರ್ದಂಗಿಕ, ಭಗ್ನ, ದೇವಿ (ಬಲಗೈಯಲ್ಲಿ ಡಮರು ಎಡಗೈಯಲ್ಲಿ ಪಾತ್ರೆ), ಸ್ತ್ರೀ ಎಡಗೈಮೇಲೆ ಶುಕ ಬಲಗೈಯಲ್ಲಿ ಹಣ್ಣು ಹಿಡಿದಿರುವಳು; ನಗ್ನಕಾಲೀ ಕಾಪಾಲಿಕಾ; ಪ್ರದ್ಯುಮ್ನ-ಲಕ್ಷ್ಮೀ.

ಉತ್ತರ-ಅನಂತಶಯನ (ನಾಭಿಯಿಂದ ಬ್ರಹ್ಮ), ಕಾಳಿಂಗಮರ್ದನ, ವೇಣುಗೋಪಾಲ, ನವನೀತ ಕೃಷ್ಣ, ನಾಗ-ನಾಗಿಣಿ, ಬಲಿ-ವಾಮನ, ತ್ರಿವಿಕ್ರಮ (ಬಲಗಾಲಿನಿಂದ ಗಂಗೆ), ಕೈಲಾಸವನ್ನೆತ್ತುವ ರಾವಣ. ನೃತ್ಯ ಮೋಹಿನಿ-ದಕ್ಷಿಣಾಮೂರ್ತಿ, ಭೈರವ, ಗೋವರ್ಧನಧಾರಿ, ಗರುಡ, ಲಕ್ಷ್ಮೀ, ನಂದಿವಾಹನದ ಮೇಲೆ ಉಮಾಮಹೇಶ್ವರ.

ಪೂರ್ವ-ಭೈರವ, ಬಲಗೈಯಲ್ಲಿ ಗದೆಹಿಡಿದ ವೀರಭೈರವ, ಷಣ್ಮುಖ, ಪೀಠದ ಮೇಲೆ ನವಿಲು, ಮಹಿಷಮರ್ದಿನಿ.

ಪೂರ್ವದಲ್ಲಿರುವ ಸೂರ್ಯನ ಗುಡಿಯ ಉತ್ತರ ಗೋಡೆ-ಸ್ಥಾನಕ ದೇವೀ ಪದ್ಮಹಿಡಿದಿರುವಳು. ಮೋಹಿನೀ-ಕಪಿ, ಸರಸ್ವತಿ (ಭಗ್ನ), ಸ್ಥಾನಕ ಶಿವ (ಭಗ್ನ), ಸ್ತ್ರೀ-ಶುಕ, ನೃತ್ಯದುರ್ಗಾ, ಗಾಯಕರು, ತಾಳ ಹಾಕುವ ಸ್ತ್ರೀ, ಸ್ಥಾನಕ ಚಂದ್ರ; ಪೂರ್ವದ ಗೋಡೆ-ಸ್ಥಾನಕ ಸೂರ್ಯ, ಚಾಮರಧಾರಿಣಿ, ನೃತ್ಯಗಣೇಶ, ಗಾಯಕರು, ದೇವಿ (ಪದ್ಮ ಫಲ), ಸೂರ್ಯ; ದಕ್ಷಿಣ ಗೋಡೆ-ಸೂರ್ಯ ಸಪ್ತಾಶ್ವಗಳು, ಮನ್ಮಥ, ಗಜೇಂದ್ರ ಮೋಕ್ಷ (ನೀರಿನಲ್ಲಿ ಮುಳುಗಿರುವ ಯೋಗಿ, ಅವನಮೇಲೆ ಮೊಸಳೆ

ಆನೆಯ ಹಿಂದಿನ ಕಾಲನ್ನು ಹಿಡಿದುಕೊಂಡಿದೆ. ಆನೆ ಸೊಂಡಲಿನಿಂದ ವಿಷ್ಣುವಿಗೆ ಕಮಲವನ್ನು ಕೊಡುತ್ತಿದೆ. ಮೇಲೆ ಗರುಡನ ಮೇಲಿರುವ ವಿಷ್ಣು ಚಕ್ರದಿಂದ ಮೊಸಳೆಯನ್ನು ಹೊಡೆದು ಮೊಸಳೆಯಲ್ಲಿದ್ದ ದೇವತೆಯನ್ನು ಬಿಡಿಸುತ್ತಿರುವನು). ಸುಖಾಸನದಲ್ಲಿ ಉಮಾಮಹೇಶ್ವರ, ಪರಿಚಾರಕರು, ಸಂಹಾರಶ್ರೇಣಿ–ಜಿಂಕೆಯನ್ನು ಹೆಬ್ಬಾವು ಅರ್ಧ ನುಂಗಿದೆ. ಹೆಬ್ಬಾವನ್ನು ಆನೆ ಸೊಂಡಲಿನಿಂದ ಹಿಡಿದಿದೆ. ಆನೆಯಮೇಲೆ ಸಿಂಹ ಹಾರಿದೆ. ಸಿಂಹವನ್ನು ಶರಭ ಹಿಡಿದುಕೊಂಡಿದೆ. ಶರಭವನ್ನು ಗಂಡಭೇರುಂಡ ಎತ್ತಿಕೊಂಡು ಹೋಗುತ್ತಿದೆ. ಕೆಳಗೆ ಒಬ್ಬ ಸಂನ್ಯಾಸಿ ಮತ್ತು ಬಾಲಕನು ಆಶ್ಚರ್ಯದಿಂದ ತಲೆಯೆತ್ತಿ ನೋಡುತ್ತಿರುವರು (ಬೇಲೂರಿನ ಸಂಹಾರಶ್ರೇಣಿಯೊಡನೆ ಹೋಲಿಸಿ). ದ್ವಿಭುಜದೇವಿ, ಪರಿಚಾರಿಕೆಯರು, ಮೋಹಿನೀ–ದಕ್ಷಿಣಾಮೂರ್ತಿ.

ದೇವಾಲಯದ ಸುತ್ತಲೂ ಸುಮಾರು ಒಂದೂವರೆ ಅಡಿ ಮುಂದಕ್ಕೆ ಚಾಚಿಕೊಂಡಿರುವ ಬೋದಿಗೆ ಇದೆ. ಇದರ ಕೆಳಭಾಗ ಕಮಾನಿನಂತಿದೆ. ಕೈಪಿಡಿ ಗೋಡೆಯು ಸಿಂಹ ಸಳ ಮಕರ ರಾಜರ ದರ್ಬಾರುಗಳಿಂದಲೂ, ಈ ಸಾಲಿನಮೇಲೆ ಕೀರ್ತಿಮುಖ ತೋರಣ ಯಕ್ಷ ಭೈರವ ಮೋಹಿನಿ ಇತ್ಯಾದಿ ವಿಗ್ರಹಗಳಿಂದಲೂ ಅಲಂಕೃತವಾಗಿದೆ. ಇವುಗಳಲ್ಲಿ ದಕ್ಷಿಣದ ಯೋಗನರಸಿಂಹ ಉತ್ತರದ ಉಮಾಮಹೇಶ್ವರ ಗಮನಾರ್ಹವಾಗಿವೆ.

ಬಳಪದಕಲ್ಲಿನ ಗೋಪುರ ನಾಲ್ಕು ಮೆಟ್ಟಲುಗಳಲ್ಲಿ ಅನೇಕ ವಿಗ್ರಹಗಳನ್ನು ಹೊಂದಿದೆ. ಉತ್ತರ ಫಲಕದಲ್ಲಿ ಐರಾವತದ ಮೇಲೆ ಇಂದ್ರನಿರುವನು. ಸುಕನಾಸಿಯ ಮೇಲೆ ಚಾಚಿರುವ ಭಾಗದಲ್ಲಿ ಸಳ ವಿಗ್ರಹ, ಪೂರ್ವ ಫಲಕದಲ್ಲಿ ತಾಂಡವೇಶ್ವರ ಇವೆ.

ಮುಖಮಂಡಪದ ಕೆಳಭಾಗದ ಚಿತ್ರಪಟ್ಟಿಕೆಗಳಲ್ಲಿ ಶಿಖರಗಳು, ಯಕ್ಷ, ಲತಾತೋರಣ, ಸಿಂಹ, ವಿಗ್ರಹಗಳು, ನರ್ತಕ, ಗಾಯಕರು, ದೇವ ದೇವಿಯರು ಇವೆ. ಮುಂದಕ್ಕೆ ಬಾಗಿರುವ ಕಟಾಂಜನವಿದೆ. ಮುಖಮಂಡಪದ ದ್ವಾರಗಳಲ್ಲಿ ಬಳಪದಕಲ್ಲಿನ ಆನೆ, ದ್ವಾರಪಾಲ, ಚಾಮರಧಾರಿಣಿ ಇರುವುದು. ದ್ವಾರಪಾಲರ ಹಿಂದೆ ಲತಾಪಟ್ಟಿಕೆ ಇದೆ. ಉತ್ತರ ದ್ವಾರದ ಆನೆಗಳು ಅದೃಶ್ಯವಾಗಿವೆ. ಮುಖಮಂಡಪದಲ್ಲಿ ಒಂಬತ್ತಂಕಣ

ಗಳಿವೆ. ಸುತ್ತಲೂ ಕಲ್ಲಿನ ಜಗತಿ ಕಟಾಂಜನಗಳಿವೆ. ಪೂರ್ವದ ಅಂಕಣ ಸೂರ್ಯಗುಡಿಯ ಸುಕನಾಸಿಯಾಗಿದೆ. ಪಶ್ಚಿಮದ ಅಂಕಣ ಮುಖ್ಯ ದೇವಾಲಯದ ಮಂಡಪವಾಗಿದೆ. ಸ್ತಂಭಗಳು ದುಂಡಾಗಿ ಘಂಟಾಕಾರ ವಾಗಿವೆ. ಉತ್ತರ ದಕ್ಷಿಣ ದ್ವಾರಗಳಲ್ಲಿ ಮಾತ್ರ ನಕ್ಷತ್ರಾಕಾರದ ಕಂಬ ಗಳಿವೆ.

ಮೇಲ್ಛಾವಣಿಗಳ ಮೂಲೆಗಳಲ್ಲಿ ಸಿಂಹಮುಖಗಳು ಇವೆ. ಭುವ ನೇಶ್ವರಿಗಳಲ್ಲಿ ರೇಖಾಚಿತ್ರಗಳು, ಮಧ್ಯದಲ್ಲಿ ಮೂರು ನವಕೋಣಗಳು, ತೂಗು ಕಮಲ ಇವೆ. ಮುಖಮಂಡಪದ ಮೇಲ್ಛಾವಣಿಯಲ್ಲಿ ಚೈತ್ಯ ಕಮಾನುಗಳಿವೆ.

ಸೂರ್ಯದೇವಾಲಯವು ಮೂಲ ಭಾಗಕ್ಕೆ ಸೇರಿದುದು. ದ್ವಾರ ಪಾಲಕರು ಕಮಲಗಳನ್ನೆ ಅಲ್ಲದೆ ಬಲಗೈಯಲ್ಲಿ ಧನುರ್ಬಾಣ, ಎಡ ಗೈಯಲ್ಲಿ ಅಂಕುಶ ಮುಸಲ ಧರಿಸಿರುವುದು ಅಪೂರ್ವವಾಗಿದೆ. ಸೂರ್ಯನ ದ್ವಾರಪಾಲಕರಿಗೆ ಈ ಲಕ್ಷಣಗಳು ಇನ್ನೆಲ್ಲಿಯೂ ಇಲ್ಲ. ಭುವನೇಶ್ವರಿಯಲ್ಲಿ ಹಂಸವಿದೆ. ಸೂರ್ಯವಿಗ್ರಹ ಆರು ಅಡಿ ಎತ್ತರವಿದೆ. ಪೀಠದಮೇಲೆ ಅರುಣ ಸಪ್ತಾಶ್ವಗಳಿವೆ. ಸೂರ್ಯನ ಎರಡು ಕೈಗಳಲ್ಲಿ ಕಮಲಗಳಿವೆ; ಎರಡು ಪಕ್ಕಗಳಲ್ಲಿ ಛಾಯಾದೇವಿಯರು ಬಾಣಗಳನ್ನು ಬಿಡುತ್ತಿರುವರು. ತೋರಣದ ಮೇಲೆ ದ್ವಾದಶಾದಿತ್ಯರಿರುವರು.

ನವರಂಗದ ದ್ವಾರದಲ್ಲಿ ಶೈವ ದ್ವಾರಪಾಲಕರೂ ಲತಾಪಟ್ಟಿಕೆಗಳೂ, ದ್ವಾರಬಂಧದಮೇಲೆ ಗಜಲಕ್ಷ್ಮೀ ಐದು ಗೋಪುರಗಳೂ ಇವೆ. ಒಂಬತ್ತು ಅಂಕಣಗಳ ನವರಂಗದಲ್ಲಿ ಆರು ಗೂಡುಗಳಿವೆ. ಉತ್ತರದ ಮೂರು ಗೂಡುಗಳು ಖಾಲಿಯಾಗಿವೆ. ದಕ್ಷಿಣದ ಗೂಡುಗಳಲ್ಲಿ—ಸಪ್ತಮಾತೃಕೆ ಯರು, ವಾಹನ, ತೋರಣ, ಬಲದಲ್ಲಿ ವೀರಭದ್ರ, ಎಡಗಡೆ ಗಣೇಶ; ಆಸೀನ ಸರಸ್ವತಿ (ಅಕ್ಷಮಾಲಾ, ಅಂಕುಶ, ಪಾಶ, ಪುಸ್ತಕ); ಗಣೇಶ;

ನವರಂಗದ ನಾಲ್ಕು ಕಂಬಗಳು ದುಂಡಾಗಿ ಘಂಟಾಕಾರವಾಗಿವೆ. ಭುವನೇಶ್ವರಿಗಳಲ್ಲಿ ರೇಖಾಚಿತ್ರಗಳು, ಮಧ್ಯದಲ್ಲಿ ಅಷ್ಟದಿಕ್ಪಾಲಕರೂ ಅಷ್ಟಕೋಣಗಳೂ ಇವೆ. ಸುಕನಾಸಿ ಮೇಲ್ಛಾವಣಿಗಳಲ್ಲಿ ಪದ್ಮಗಳಿವೆ.

ಪೂರ್ವದಲ್ಲಿ ತೆರೆದಿದೆ. ಗರ್ಭಗೃಹದ್ವಾರ ನವರಂಗ ದ್ವಾರದಂತಿದೆ. ಚಪ್ಪಟೆ ತಲೆಯ ಕಪ್ಪಾದ ಮೂರು ಅಡಿ ಎತ್ತರದ ಲಿಂಗವಿದೆ.

ಕೋರವಂಗಲ ಬೂಚೇಶ್ವರ ಮೊಸಳೆ ದೇವಾಲಯದಂತೆಯೇ ಇರುವುದರಿಂದ ಒಬ್ಬನೇ ಶಿಲ್ಪಿಯು ಕಾರಣನೆಂದು ಹೇಳಬಹುದು.

ಅಂಗಳದ ಈಶಾನ್ಯ ಭಾಗದಲ್ಲಿರುವ ಭೈರವಗುಡಿಯು ಇದೇ ಕಾಲದ್ದಾಗಿದೆ. ಐದೂವರೆ ಅಡಿ ಎತ್ತರದ ಭೈರವ ವಿಗ್ರಹ ಕತ್ತಿ ತ್ರಿಶೂಲ ಡಮರು ಪಾತ್ರೆ-ಮುಂಡ ಹಿಡಿದು ರುಂಡವನ್ನು ತುಳಿಯುತ್ತಿದೆ. ಪಕ್ಕದಲ್ಲಿ ಬೇತಾಳಗಳು, ನಾಯಿ ಇವೆ.

ಕೋರವಂಗಲದ ನಾಗೇಶ್ವರ ಗೋವಿಂದೇಶ್ವರ ದೇವಾಲಯಗಳು ಅವಳಿ ದೇವಾಲಯಗಳಂತಿವೆ. ಎರಡು ಮುಖಮಂಡಪಗಳಲ್ಲಿ ದ್ವಾರಗಳು ಒಳಗೆ ಅಂತರಾಳ ಇವೆ. ಅಂಗಳದಲ್ಲಿ ಈ ಎರಡು ದೇವಾಲಯಗಳು ಇವೆ. ಎರಡಕ್ಕೂ ಗರ್ಭಗೃಹ ಸುಕನಾಸಿ ನವರಂಗಗಳಿವೆ. ಆದರೆ ನಾಗೇಶ್ವರಕ್ಕೆ ಮುಖಮಂಡಪದ ಬದಲು ಹತ್ತು ಅಡಿ ಪೂರ್ವದಲ್ಲಿ ಶಿಖರಗಳು, ಇಪ್ಪತ್ತುನಾಲ್ಕು ಕಂಬಗಳು ಇರುವ ಮಂಡಪವಿದೆ. ಗೋವಿಂದೇಶ್ವರ ನಾಗೇಶ್ವರಕ್ಕೆ ಉತ್ತರದಲ್ಲಿದೆ. ಇದರ ಮುಖಮಂಡಪಕ್ಕೆ ಉತ್ತರ ದಕ್ಷಿಣಗಳಲ್ಲಿ ದ್ವಾರಗಳಿವೆ. ಮುಖಮಂಡಪದ ಪೂರ್ವದಲ್ಲಿ ಒಂದು ಸಣ್ಣ (ಸೂರ್ಯ?) ಗುಡಿ ಇದೆ. ಈ ಗುಡಿಯ ಸುಕನಾಸಿ ದ್ವಾರ ಜಾಲಂಧ್ರಗಳೊಡನೆ ಬಹಳ ಸುಂದರವಾಗಿದೆ. ಗೋವಿಂದೇಶ್ವರ ಮುಖ ಮಂಡಪದ ಭುವನೇಶ್ವರಿಯಲ್ಲಿ ಅಷ್ಟಕೋಣಗಳಿವೆ. ಹೊರಗಿನ ಗೋಡೆಯ ಮೇಲೆ ಶಿಖರಗಳಿವೆ.


೫೬. **ಹಾರ್ನಹಳ್ಳಿ:** ಹಾಸನ–ಅರಸೀಕೆರೆ ರಸ್ತೆಯಲ್ಲಿ ಅರಸೀಕೆರೆಗೆ ಐದು ಮೈಲಿ ದಕ್ಷಿಣದಲ್ಲಿ "ಹಾರುವನ ಹಳ್ಳಿ" ಇದೆ. ಇಲ್ಲಿ ೧೩ ಮತ್ತು ೧೭ ನೆಯ ಶತಾಬ್ದದ ಕೋಟೆಗೋಡೆಗಳಿವೆ. ಇಲ್ಲಿರುವ ದೇವಾಲಯಗಳಲ್ಲಿ ಹಳೆಯಊರಿನ ಮಧ್ಯದಲ್ಲಿರುವ ಕೇಶವ, ಈಶಾನ್ಯದಲ್ಲಿರುವ ಸೋಮೇಶ್ವರ ದೇವಾಲಯಗಳು ಬಹಳ ಸುಂದರವಾಗಿವೆ. ಲಕ್ಷ್ಮೀನರಸಿಂಹ ದೇವಾಲಯ ದಲ್ಲಿರುವ ಶಾಸನದಲ್ಲಿ "ಪೆದ್ದ....ಹೆಗ್ಗಡೆ, ಸೋವಣ್ಣ ಮತ್ತು ಕೇಸಣ್ಣ" ಎಂಬ ಮೂವರು ಸಹೋದರರು ತಮ್ಮ ತಂದೆಯಾದ ಸಿಂದಿಗೆ ಮಠದ

ಸ್ವಾಮಿಯ ಅನುಮತಿಯಿಂದ ಹಾರುವನಹಳ್ಳಿ ಮಹಾಜನರು ಕೊಟ್ಟ ನಿವೇಶನದಲ್ಲಿ ದೇವಾಲಯವನ್ನು ೧೨೩೮ರಲ್ಲಿ ರಚಿಸಿದರೆಂದೂ, ಇಮ್ಮಡಿ ನರಸಿಂಹ ಬಲ್ಲಾಳನು ದಾನಗಳನ್ನು ಮಾಡಿದನೆಂದೂ ಹೇಳಿದೆ. ಊರಿಗೆ ಹಿರಿಯ ಸೋಮನಾಥಪುರವೆಂಬ ಹೆಸರನ್ನು ಕೊಡಲಾಯಿತು. ಮೂವತ್ತು ವರ್ಷಗಳ ಅನಂತರ ನವರಂಗದ ತೊಲೆಗಳಮೇಲೆ ಮತ್ತೊಂದು ಶಾಸನ ಬರೆಯಲಾಯಿತು. ವಿಜಯನಗರ ಕಾಲದಲ್ಲಿ ವಾಯವ್ಯದ ಲಕ್ಷ್ಮೀ ದೇವಾಲಯ ರಚಿತವಾಯಿತು. ಇದರ ತಳಪಾಯ ಮಾತ್ರ ಇದೆ.

ಸಾಧಾರಣವಾದ ಬಳಪದಕಲ್ಲಿನ ಉಪ್ಪರಿಗೆ ಅಥವಾ ಮಹಾದ್ವಾರದ ಮೂಲಕ ಅಂಗಳಕ್ಕೆ ಹೋಗಬಹುದು. ಪಶ್ಚಿಮದಲ್ಲಿ ನಾಲ್ಕಡಿ ಎತ್ತರದ ಜಗತಿಯಮೇಲೆ ಕೇಶವ (ಲಕ್ಷ್ಮೀನಾರಾಯಣ) ದೇವಾಲಯ ತ್ರಿಕೂಟವಾಗಿದೆ. ಜಗತಿಯು ನಕ್ಷತ್ರಾಕಾರವಾಗಿದೆ. ಮುಖ್ಯ ಗರ್ಭಗುಡಿಗೆ ಮಾತ್ರ ಸುಕನಾಸಿ ಇದೆ. ಮಿಕ್ಕ ಎರಡಕ್ಕೂ ನವರಂಗದಿಂದಲೇ ದ್ವಾರಗಳಿವೆ. ನವರಂಗಕ್ಕೆ ಪೂರ್ವದಲ್ಲಿ ಒಂದು ಮಂಡಪವಿದೆ. ಈ ಭಾಗವನ್ನು ಕಲ್ಲಿನ ಜಾಲಂಧ್ರದಿಂದ ಮುಚ್ಚಿದೆ. ಮುಖ್ಯ ಗರ್ಭಗೃಹ ಹದಿನಾರು ಕೋಣದ ನಕ್ಷತ್ರಾಕಾರವಾಗಿದೆ. ಹೊರಗೋಡೆಯಲ್ಲಿ ಮೂರು ದೊಡ್ಡ ಎರಡಂತಸ್ತಿನ ಗೂಡುಗಳಿವೆ. ಮುಖ್ಯ ಗರ್ಭಗುಡಿಗೆ ಮಾತ್ರ ಶಿಖರವಿದೆ. ನವರಂಗದ್ವಾರದ ಮುಂದೆ ಮುಖಮಂಡಪವಿಲ್ಲ.

ನಾಲ್ಕಡಿ ಎತ್ತರದ ಜಗತಿಯಲ್ಲಿ ಐದು ಕಾರ್ನಿಸುಗಳಿವೆ. ಉತ್ತರ ದಕ್ಷಿಣ ಪೂರ್ವಗಳಲ್ಲಿ ಮೆಟ್ಟಲುಗಳಿವೆ. ಈ ಮೆಟ್ಟಲುಗಳ ಪಕ್ಕಗಳಲ್ಲಿ ಬೇಲೂರು, ಹಳೆಯಬೀಡುಗಳಲ್ಲಿದ್ದಂತೆ ಗೋಪುರಗಳಿವೆ. ನವರಂಗ ದ್ವಾರದ ಇರ್ಕಡೆಗಳಲ್ಲೂ ಎರಡು ಗೋಪುರಗಳಿವೆ. ಹೀಗೆ ಎಂಟು ಗೋಪುರಗಳಿವೆ. ಈ ಗೋಪುರಗಳ ಕೆಳಗಿನ ಗೋಡೆಗಳಲ್ಲಿ ವಿಗ್ರಹಗಳಿವೆ.

ಜಗತಿಯ ಮೇಲಿನ ಗೋಡೆಯ ಕೆಳಭಾಗದಲ್ಲಿ ನಾಲ್ಕೂವರೆ ಅಡಿವರೆಗೆ ಐದು ಚಿತ್ರಪಟ್ಟಿಕೆಗಳಿವೆ: (೧) ಆನೆಗಳು, ಮಧ್ಯದಲ್ಲಿ ತೋರಣಗಳ ಕೆಳಗೆ ಯಕ್ಷಯಕ್ಷಿಣಿಯರು. ಆನೆಗಳು ಅಲಂಕೃತವಾಗಿ ಮಾವುತರನ್ನು ಧರಿಸಿ ಸೊಂಡಿಲಿನಿಂದ ಇತರ ಆನೆಗಳನ್ನು ಹಿಡಿದು ಆಡುತ್ತ ಇವೆ.



ಹಾರನಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯ
ಭುವನೇಶ್ವರಿ

ಮೂಲೆಗಳಲ್ಲಿ ಎರಡಾನೆಗಳಿಗೆ ಒಂದೇ ತಲೆ ಇದೆ. ಈಶಾನ್ಯದಲ್ಲಿ ಕಾಡಾನೆಗಳಿವೆ. (೨) ಅಶ್ವದಳ ಮತ್ತು ಒಂಟೆಗಳ ಮೇಲೆ ಭೇರಿ ಬಾರಿಸುವವರು. (೩) ಲತಾಪಟ್ಟಿಕೆಯ ಮಧ್ಯದಲ್ಲಿ ಪಕ್ಷಿಗಳು, ಕಪಿಗಳು, ಬೇಟೆಗಾರರು, ನರ್ತಕರು, ರತಿಬಂಧ ಮೂಲೆಗಳಲ್ಲಿ ಸಿಂಹಮುಖಗಳು. (೪) ಪೌರಾಣಿಕ ಕಥೆಗಳ ಸಾಲು ಖಾಲಿಯಾಗಿದೆ. (೫) ಮಕರಗಳು. (೬) ಹಂಸಗಳು, ಮಧ್ಯಮಧ್ಯದಲ್ಲಿ ತೋರಣಗಳ ಮೇಲೆ ಗರುಡ, ಇತ್ಯಾದಿ ವಾಹನಗಳು.

ಗೋಡೆಯ ಮಧ್ಯಭಾಗವನ್ನು ಕಾರ್ನಿಸಿನಿಂದ ಎರಡು ಭಾಗ ಮಾಡಿರುವರು. ಕಾರ್ನಿಸಿನ ಮೇಲೆ ಸುಮಾರು ಒಂದಡಿ ಎತ್ತರದ ಗೋಪುರಗಳಿವೆ. ಕೆಳಗೆ ಎರಡಡಿ ಎತ್ತರದ ವಿಗ್ರಹಗಳಿವೆ. ಇವುಗಳ ಪೀಠಗಳಲ್ಲಿ ಕೀರ್ತಿಮುಖಗಳೂ, ಮೇಲೆ ಲತಾತೋರಣಗಳೂ ಇವೆ. ಉತ್ತರ ಮುಖದ ವಿಗ್ರಹಗಳ ಕೆಳಗೆ ಮಲ್ಲಿತಮ್ಮನ ಹೆಸರು ಕಂಡುಬರುತ್ತದೆ. ನುಗ್ಗಿಹಳ್ಳಿ, ಹೊಸಹೊಳಲು, ಸೋಮನಾಥಪುರಗಳ ಕಾಲದಲ್ಲಿಯೇ ಇದೂ ರಚಿತವಾಗಿರಬೇಕು. ದಕ್ಷಿಣ ಗೋಡೆಯ ವಿಗ್ರಹಗಳ ಕೆಳಗೆ ಪಿರಿಯಣ್ಣ ಹೆಗ್ಗಡೆ ಎಂಬ ಹೆಸರು ಬಹುಶಃ ಶಾಸನದಲ್ಲಿ ಹೇಳಿರುವ ಪೆದ್ದಣ್ಣ ಹೆಗ್ಗಡೆಯ ಕನ್ನಡ ಹೆಸರಾಗಿರಬಹುದು (ಬಬ್ಬೂರು ಕಮ್ಮೆ?). ವಿಗ್ರಹಗಳು ನುಗ್ಗಿಹಳ್ಳಿ, ಸೋಮನಾಥಪುರ ವಿಗ್ರಹಗಳಂತೆಯೇ ಇವೆ. ಪೂರ್ವದ್ವಾರದ ದಕ್ಷಿಣದಿಂದ ಪ್ರದಕ್ಷಿಣೆಯಾಗಿ ಈ ವಿಗ್ರಹಗಳಿವೆ:

ಪೂರ್ವ: ಹನುಮಂತ. "ಬಣ", ಧರಣೀವರಾಹ, ಹಿರಣ್ಯಾಕ್ಷ, ಲಕ್ಷ್ಮೀ. "ಬನ", ದಕ್ಷಿಣಾಮೂರ್ತಿ–ನೃತ್ಯಮೋಹಿನಿ; ಕೇಶವ–ಲಕ್ಷ್ಮೀ; ನೃತ್ಯಸರಸ್ವತಿ ;

ದಕ್ಷಿಣ ಗರ್ಭಗುಡಿಯ ಹಿಂದೆ–ವೈಕುಂಠನಾರಾಯಣ, ಗರುಡ, ನಾರಾಯಣ–ಲಕ್ಷ್ಮೀ ; ಆಸೀನ ಲಕ್ಷ್ಮೀನಾರಾಯಣ (ಇದರ ವಸ್ತ್ರದ ಅಂಚು ಗಮನಾರ್ಹವಾಗಿದೆ. ಕೆಳಗೆ ಪೆರಿಯಾಂಡ ಹೆಗ್ಗಡೆಯ ಹೆಸರಿದೆ. ಅದರ ಕೆಳಗೆ ನಂದಿನಾಗರಿ ಅಕ್ಷರಗಳಲ್ಲಿ "ಷಣ್ಮುಖದಾಸ" ಎಂದಿದೆ), ಪರಿಚಾರಿಕೆಯರು, ಮಾಧವ–ಲಕ್ಷ್ಮಿ, "ಬೊಳ", ಬೇತಾಳ ನೃತ್ಯ ಮಾರ್ದಂಗಿಕ:

ದಕ್ಷಿಣ ಗರ್ಭಗುಡಿಯ ಪಶ್ಚಿಮದಲ್ಲಿ–ಭೈರವ, ದಕ್ಷಿಣಾಮೂರ್ತಿ,

ಗೋವಿಂದ, ಬಲದಲ್ಲಿ ಲಕ್ಷ್ಮೀ, ಇಬ್ಬರು ದೇವಿಯರು, ಇಬ್ಬರು ಪರಿಚಾರಿಕೆಯರ ಮಧ್ಯದಲ್ಲಿ ಕಾಳಿಂಗಮರ್ದನ, "ಪೆರಿಯಾಂಡ ಹೆಗ್ಗಡೆ"; ರತಿ-ಮನ್ಮಥ.

ನವರಂಗದ ನೈರುತ್ಯ ಮೂಲೆ-ಪಾಂಡುರಂಗ (ದ್ವಿಭುಜ-ಬಲದಲ್ಲಿ ಶಂಖ, ಎಡಗೈಯಲ್ಲಿ ಕಳಶ?), ಭಕ್ತ, ರುಕುಮಾಯಿ; ವಿಷ್ಣು-ಲಕ್ಷ್ಮೀ, ದುರ್ಗಾ, ಪರಿಚಾರಿಕೆ; ಮಹಿಷಮರ್ದಿನೀ(ಇದರ ಮೇಲೆ ನರಸಿಂಹನ ಗುಡಿ ಇದೆ), ಮಧುಸೂದನ-ಲಕ್ಷ್ಮೀ, ತ್ರಿವಿಕ್ರಮ-ಗರುಡ, ಎರಡು ಕಪಿ ಫಲ.

ಸುಕನಾಸಿಯ ದಕ್ಷಿಣದಲ್ಲಿ-ಉಗ್ರನರಸಿಂಹ ಹಿರಣ್ಯಕಶಿಪು ಪ್ರಹ್ಲಾದ ಹರಿಹರ (ಅಕ್ಷಮಾಲಾ ತ್ರಿಶೂಲ ಚಕ್ರ ಶಂಖ); ಗೋವರ್ಧನಧಾರಿ, ಹೂಮಾಲೆ ಧರಿಸಿದವಳು; ಪರಿಚಾರಿಕೆಯರು; ವಾಮನ, ಶ್ರೀಧರ, ಸೇವಿಕೆ.

ದಕ್ಷಿಣ ಗೂಡು ಎರಡಂತಸ್ತು ಶಿಖರ ಹೊಂದಿದೆ. ಬಹುಶಃ ಗೋಡೆಗೆ ಒತ್ತುಕೊಡಲು ಕಟ್ಟಿದಂತಿದೆ. ವಿಗ್ರಹಗಳಿಲ್ಲ.

ಮುಖ್ಯ ಗರ್ಭಗುಡಿಯ ನೈರುತ್ಯ-ಪದ್ಮನಾಭ-ಲಕ್ಷ್ಮೀ ಗರುಡ, ಗಣೇಶ ನೃತ್ಯ ಡವಣೆ ಬಾರಿಸುವವನು; ನೃತ್ಯಪಾರ್ವತಿ ಗಾಯಕರು; ದಾಮೋದರ, ಲಕ್ಷ್ಮೀ, ಇಬ್ಬರು ದೇವಿಯರು.

ಪಶ್ಚಿಮದ ಗೂಡು ದಕ್ಷಿಣ ಗೂಡಿನಂತೆಯೇ ಇದೆ. ಸಂಕರ್ಷಣ-ಲಕ್ಷ್ಮೀ, "ಮಲ್ಲಿತಮ್ಮ", ವಾಸುದೇವ-ಲಕ್ಷ್ಮೀ, ಗರುಡ, ಲಕ್ಷ್ಮೀ ಷಡ್ಭುಜನೃತ್ಯಸರಸ್ವತೀ ವೀಣೆಯನ್ನು ಬಾರಿಸುತ್ತಿರುವಳು; ಸ್ಥಾನಕ ಬ್ರಹ್ಮ (ಅಕ್ಷಮಾಲಾ ಸ್ರುಕ್‌ಸ್ರುವ ಪಾಶ ಕಳಶ)—ಮಧ್ಯಮುಖದಲ್ಲಿ ಶ್ಮಶ್ರುವಿದೆ. ಲಕ್ಷ್ಮೀ? ಪ್ರದ್ಯುಮ್ನ-ಲಕ್ಷ್ಮೀ, ಗರುಡ; "ಮಲ್ಲಿತಮ್ಮ." ಅನಿರುದ್ಧ-ಲಕ್ಷ್ಮೀ "ಮಲ್ಲಿತಮ್ಮ."

ಸುಕನಾಸಿಯ ಉತ್ತರದಲ್ಲಿ-ಪುರುಷೋತ್ತಮ-ಲಕ್ಷ್ಮೀ, ಅಧೋಕ್ಷಜ-ಲಕ್ಷ್ಮೀ, ಗರುಡ, ಲಕ್ಷ್ಮೀ ಪದ್ಮಕಳಶ ಹಿಡಿದಿರುವಳು. "ಮಲ್ಲಿತಮ್ಮ." ಗೋವರ್ಧನಧಾರಿ-ಪುಷ್ಪಧಾರಿಣಿ. "ಮಲ್ಲಿತಮ್ಮ." ಹರಿಹರ (ಅಕ್ಷಮಾಲಾ ತ್ರಿಶೂಲ ಚಕ್ರ ಶಂಖ), ವೇಣುಗೋಪಾಲ, ಸೇವಕರು ಗರುಡ; ಕೋದಂಡರಾಮ, ಶ್ರೀರಾಮ.

ನವರಂಗದ ವಾಯುವ್ಯ ಮೂಲೆ-ನರಸಿಂಹ, (ಸ್ಥಾನಕ) ಲಕ್ಷ್ಮೀ

"ಮಲ್ಲಿತಮ್ಮ." ಅಚ್ಯುತ–ಲಕ್ಷ್ಮೀ, ಬಲಿ, ವಾಮನ, ಬಲಗಾಲನ್ನೆತ್ತಿದ ತ್ರಿವಿಕ್ರಮ–ಗರುಡ, ಮಹಿಷಮರ್ದಿನಿ, ಫಲ ಪದ್ಮ ಹಿಡಿದ ದೇವಿ, ಅರ್ಜುನ–ಮತ್ಸ್ಯಯಂತ್ರ, ಜನಾರ್ದನ ಲಕ್ಷ್ಮೀ, ಚಾಮರಧಾರಿಣಿ, "ಮಲ್ಲಿತಮ್ಮ". ಇಬ್ಬರು ದೇವಿಯರು.

ಉತ್ತರ ಗರ್ಭಗುಡಿಯ ಪಶ್ಚಿಮದಲ್ಲಿ–ಚಾಮರಧಾರಿಣಿ, ಲಕ್ಷ್ಮೀ ನಾರಾಯಣ—ದೇವಿ (ಪದ್ಮ-ಕಳಶ), ಚಾಮರಧಾರಿಣಿ, ಬಲರಾಮ. ಎಡ ಮೊಣಕೈಮೇಲೆ ಶುಕ, ಬಲಗೈಯಲ್ಲಿ ಫಲ ಹಿಡಿದ ಸ್ತ್ರೀ; ಉಪೇಂದ್ರ ಬಲದಲ್ಲಿ ಲಕ್ಷ್ಮೀ; ಷಡ್ಭುಜ ನೃತ್ಯಲಕ್ಷ್ಮೀ (ಅಕ್ಷಮಾಲಾ ಗಜಹಸ್ತ ಶಂಖ ಸ್ವರ್ಗಹಸ್ತ ಚಕ್ರ ಫಲ).

ಉತ್ತರ ಗರ್ಭಗುಡಿಯ ಉತ್ತರದಲ್ಲಿ–ಷಡ್ಭುಜ ನೃತ್ಯಕೇಶವ (ಪದ್ಮ ಗಜಹಸ್ತ ಶಂಖ ಸ್ವರ್ಗಹಸ್ತ ಚಕ್ರ ಗದಾ); ಹರಿ ಸೇವಿಕೆ, ಮೋಹಿನೀ–ಸರ್ಪ, ಸೇವಿಕೆ, ದೇವೀ ಲಕ್ಷ್ಮೀ ವರಾಹ ದೇವಿ ಸೇವಿಕೆ. "ಮಲ್ಲಿತಮ್ಮ." ಕೃಷ್ಣ–ಮೂವರು ದೇವಿಯರು, ಅಪೂರ್ಣ.

ಉತ್ತರ ಗರ್ಭಗುಡಿಯ ಪೂರ್ವ–ಯೋಗನರಸಿಂಹ, ಗರುಡ, ನಾರಾಯಣ, ಲಕ್ಷ್ಮೀ, ಸೇವಿಕೆ, "ಮಲ್ಲಿತಮ್ಮ". ಸೇವಿಕೆ, ಭೂ ಲಕ್ಷ್ಮೀ ನರಸಿಂಹ, ರತಿ–ಮನ್ಮಥ.

ಶಾಲೆಯ ಮುಂಭಾಗದಲ್ಲಿ ಪೀಠದಮೇಲೆ ಶಿಖರಗಳು, ಅವುಗಳ ಕೆಳಗೆ ಅಪೂರ್ಣವಾದ ವಿಗ್ರಹಗಳು, ಇವುಗಳ ಮೇಲೆ ಮುಂದಕ್ಕೆ ಚಾಗಿರುವ ಕಟಾಂಜನದಲ್ಲಿ ಕೆಲವು ರತಿಬಂಧಗಳು, ಕಟಾಂಜನದ ಮೇಲೆ ಕಲ್ಲಿನ ಜಾಲಂಧ್ರಗಳು ಇವೆ. ಮೇಲ್ಛಾವಣಿಯ ಬೋದಿಗೆಗಳ ಕೆಳಭಾಗ ದಲ್ಲಿ ಮರಗೆಲಸದಂತೆ ತೊಲೆಗಳಿವೆ. ಮೇಲ್ಛಾವಣಿಗಳು ಎರಡಿವೆ. ಕೈಪಿಡಿ ಗೋಡೆಯಮೇಲೆ ಶಿಖರಗಳಿವೆ.

ಗೋಪುರವು ನಾಲ್ಕಂತಸ್ತಿನಲ್ಲಿದೆ. ನಕ್ಷತ್ರಾಕಾರವಾಗಿರುವುದರಿಂದ ಹೆಚ್ಚು ಅಲಂಕಾರಗಳಿಲ್ಲದಿದ್ದರೂ ಸುಂದರವಾಗಿದೆ. ಹಿಂದಿದ್ದ ಕಲ್ಲಿನ ಕಳಶಕ್ಕೆ ಬದಲು ಈಗ ಲೋಹದ ಕಳಶವಿದೆ. ಸುಕನಾಸಿ ಮೇಲೆ ಚಾಚಿರುವ ಭಾಗದಲ್ಲಿದ್ದ ಸಳ ಮತ್ತು ವಿಗ್ರಹ ಫಲಕ ಈಗ ಹೋಗಿವೆ.

ನವರಂಗದಲ್ಲಿ ಪೂರ್ವಕ್ಕೆ ಒಂದು ಅಂಕಣ ಹೆಚ್ಚಾಗಿಯೂ, ಪೂರ್ವ

ಗೋಡೆಯ ಹತ್ತಿರ ಕಲ್ಲಿನ ಜಗತಿಗಳು, ಇದರ ಹಿಂದೆ ಜಾಲಂಧ್ರಗಳಿವೆ. ನಕ್ಷತ್ರಾಕಾರದ ಆರು ಸ್ತಂಭಗಳು ಮುಂಭಾಗದಲ್ಲಿವೆ. ನವರಂಗದ ಪಶ್ಚಿಮ ಭಾಗದಲ್ಲಿ ನಾಲ್ಕು ಗೂಡುಗಳಿವೆ. ಇವುಗಳ ಶಿಖರಗಳು ಬೇರೆ ಬೇರೆ ವಿಧವಾಗಿವೆ. ಎರಡು ನಕ್ಷತ್ರಾಕಾರವಾಗಿದ್ದು ನಕ್ಷತ್ರದ ಕೊನೆಯು ಬಾಗಿಲಮೇಲೆ ಚಾಚಿಕೊಂಡಿದೆ. ಈ ಗೂಡುಗಳಲ್ಲಿ ಆಸೀನ ಸರಸ್ವತಿ (ಅಕ್ಷಮಾಲಾ ಅಂಕುಶ ಪಾಶ ಪುಸ್ತಕ), ಗಣೇಶ, ಸ್ಥಾನಕ ಲಕ್ಷ್ಮೀ (ಅಭಯ ಶಂಖ ಚಕ್ರ ಕಳಶ), ಪೀಠದಲ್ಲಿ ಗಜ, ಭೂದೇವಿ (ಪದ್ಮ ಶಂಖ ಚಕ್ರ ಫಲ), ಪೀಠದಲ್ಲಿ ಕೂರ್ಮ ಆದಿಶೇಷ ವಿಗ್ರಹಗಳಿವೆ.

ನವರಂಗದ ಮಧ್ಯದಲ್ಲಿರುವ ನಾಲ್ಕು ಕಂಬಗಳು ದುಂಡಾಗಿವೆ. ಇವಕ್ಕೆ ಪೂರ್ವದಲ್ಲಿರುವ ಆರು ನಕ್ಷತ್ರಾಕಾರ ಕಂಬಗಳಲ್ಲಿ ೮, ೧೬, ೩೨, ೬೪ ಕೋಣಗಳಿವೆ. ಪೂರ್ವದ ಎರಡು ಕಂಬಗಳ ನಕ್ಷತ್ರ ಕೋಣಗಳ ಮಧ್ಯಗಳಲ್ಲಿ ನರ್ತಕ ಗಾಯಕ ವಿಗ್ರಹಗಳು ಬಹಳ ಸುಂದರವಾಗಿವೆ.

ಹತ್ತು ಭುವನೇಶ್ವರಿಗಳಲ್ಲಿ ಪೂರ್ವದ ಭುವನೇಶ್ವರಿ ಎರಡು ಸಾಲು ಶಿಖರಗಳನ್ನೂ ಯಕ್ಷರನ್ನೂ ಅವುಗಳ ಪಕ್ಕದಲ್ಲಿ ಸಿಂಹ, ವಿಷ್ಣುವಿನ ಅವತಾರಗಳನ್ನೂ ಹೊಂದಿದೆ. ಇವುಗಳ ಮೇಲೆ ಮೂರು ವೃತ್ತಗಳು, ಮಧ್ಯದಿಂದ ಜೋಲಾಡುವ ಕರ್ಣಿಕೆಯ ಕೆಳಭಾಗದಲ್ಲಿ ಕಾಳಿಂಗಮರ್ದನ ಇವೆ. ಮಿಕ್ಕ ಭುವನೇಶ್ವರಿಗಳಲ್ಲಿ ರೇಖಾಚಿತ್ರಗಳು, ಮಧ್ಯ ಭುವನೇಶ್ವರಿಯ ಕರ್ಣಿಕೆಯ ಮೇಲೆ ಸ್ಥಾನಕ ವಿಷ್ಣು ವಿಗ್ರಹವೂ ಇವೆ.

ಗರ್ಭಗುಡಿಗಳು: ದಕ್ಷಿಣ ಗುಡಿ ದ್ವಾರದಲ್ಲಿ ದ್ವಾರಪಾಲಕರೂ ದ್ವಾರದಮೇಲೆ ಐದು ಶಿಖರಗಳೂ ಸಿಂಹಗಳೂ ಇವೆ. ಮೇಲ್ಚಾವಣಿಯಲ್ಲಿ ವೇಣುಗೋಪಾಲ ವಿಷ್ಣುವಿನ (?) ಎಂಟು ಮೂರ್ತಿಗಳು ಇವೆ. ಈ ಎಂಟು ವಿಗ್ರಹಗಳು ಅಂಜಲಿಹಸ್ತ ಶಂಖಚಕ್ರಗಳನ್ನೂ ಪಕ್ಕದಲ್ಲಿ ದೇವಿಯರನ್ನೂ ಹೊಂದಿವೆ. ಒಳಗೆ ಗರುಡಪೀಠದ ಮೇಲೆ ಸುಂದರವಾದ ಸೋಮನಾಥಪುರದಲ್ಲಿರುವಂತಹ ವೇಣುಗೋಪಾಲ ವಿಗ್ರಹವಿದೆ.

ಉತ್ತರ ಗರ್ಭಗುಡಿಯ ದ್ವಾರದಮೇಲೆ ಆಸೀನ ಲಕ್ಷ್ಮೀನರಸಿಂಹ ಪ್ರಹ್ಲಾದ ಗರುಡ ಪರಿವಾರದವರು, ಲತಾತೋರಣದಲ್ಲಿ ದಶಾವತಾರಗಳು ಬಹಳ ಚೆನ್ನಾಗಿವೆ. ಮೇಲ್ಚಾವಣಿಯಲ್ಲಿ ಯೋಗನರಸಿಂಹ ಇದ್ದರೂ

ಒಳಗೆ ಗರುಡಪೀಠದ ಮೇಲೆ ಲಕ್ಷ್ಮೀನರಸಿಂಹ ವಿಗ್ರಹವಿದೆ. ಪೀಠದ ಮೇಲೆ ಗರುಡತೋರಣದಲ್ಲಿ ದಶಾವತಾರಗಳು ಕಂಡುಬರುತ್ತವೆ.

ಮುಖ್ಯ ಗರ್ಭಗುಡಿಯ ಮುಂದಿನ ಸುಕನಾಸಿ ದ್ವಾರದಲ್ಲಿ ಸಣ್ಣ ದ್ವಾರಪಾಲಕರು (ಭದ್ರ ಸುಭದ್ರ) ಜಾಲಂಧ್ರ ಇವೆ. ಈಗ ಇಲ್ಲಿ ಕೇಶವ ಮತ್ತು ದೇವಿಯರ ಉತ್ಸವ ವಿಗ್ರಹಗಳಿವೆ. ಗರ್ಭಗುಡಿಯ ದ್ವಾರವು ಬಹಳ ಸುಂದರವಾಗಿದೆ. ದ್ವಾರಬಂಧದ ಮೇಲೆ ನರ್ತನ ಮಾಡುವ ಷಡ್ಭುಜಲಕ್ಷ್ಮೀ (ಪದ್ಮ ಅಂಕುಶ ಸ್ವರ್ಗಹಸ್ತ ಶಂಖ ಲಂಬಹಸ್ತ ಕಲಶ), ಗಾಯಕರು ಇರುವರು. ಮೂರಂಗುಲ ಮಾತ್ರ ಇದ್ದರೂ ಈ ವಿಗ್ರಹಗಳು ಜೀವಂತವಾಗಿವೆ. ಗರ್ಭಗೃಹದಲ್ಲಿ ಗೋಪುರಗಳುಳ್ಳ ಮೂರು ಗೂಡುಗಳು, ಮೇಲ್ಚಾವಣಿಯಲ್ಲಿ ಪದ್ಮ ಇವೆ. ಗರುಡಪೀಠದ ಮೇಲಿರುವ ಕೇಶವ ವಿಗ್ರಹ ಅಷ್ಟು ಚೆನ್ನಾಗಿಲ್ಲ. ತೋರಣದಲ್ಲಿ ದಶಾವತಾರಗಳಿವೆ. ಬಹುಶಃ ವಿಜಯನಗರ ಕಾಲದಲ್ಲಿ ಹೊಯ್ಸಳ ವಿಗ್ರಹಕ್ಕೆ ಬದಲಾಗಿ ಇದನ್ನು ಇಡಲಾಯಿತು. ಕೇಶವ ಮೂಲವಿಗ್ರಹವಾದರೂ ಹೊಳೇನರಸೀಪುರ ಭದ್ರಾವತಿಗಳಂತೆ ಈ ದೇವಾಲಯಕ್ಕೆ ಲಕ್ಷ್ಮೀನರಸಿಂಹ ದೇವಾಲಯ ವೆಂಬ ಹೆಸರು ಬಂದಿದೆ.

ಇದರ ಆಗ್ನೇಯದಲ್ಲಿ ಒಂದಂಕಣದ ಹೊಯ್ಸಳ ಕಾಲದ ಗುಡಿ ಯಲ್ಲಿ ದೊಡ್ಡದಾದ ಲಕ್ಷ್ಮೀನರಸಿಂಹ ವಿಗ್ರಹವಿದೆ.

ಸೋಮೇಶ್ವರ ದೇವಾಲಯವು ಕೇಶವ ದೇವಾಲಯಕ್ಕೆ ಈಶಾನ್ಯ ದಲ್ಲಿದೆ. ನವರಂಗದ ತೊಲೆಯ ಮೇಲೆ ಒಂದು ಶಾಸನವಿದೆ. ಬಹುಶಃ ಕೇಶವ ದೇವಾಲಯದ ಕಾಲದಲ್ಲಿಯೇ ಇದು ರಚಿತವಾಗಿರಬಹುದು. ಸೋಮೇಶ್ವರ ದೇವಾಲಯದಿಂದಲೇ ಈ ಗ್ರಾಮಕ್ಕೆ ಹಿರಿಯ ಸೋಮನಾಥ ಪುರವೆಂಬ ಹೆಸರು ಬಂದಿತು. ಕೇಶವ ದೇವಾಲಯ ತ್ರಿಕೂಟವಾಗಿ ಒಂದೇ ದ್ವಾರ ಹೊಂದಿದೆ. ಸೋಮೇಶ್ವರಕ್ಕೆ ಒಂದೇ ಗರ್ಭಗುಡಿ, ಮೂರು ದ್ವಾರಗಳಿವೆ. ಆದ್ದರಿಂದ ಏಕಕೂಟವಾಗಿದೆ. ನಕ್ಷತ್ರಾಕಾರದ ತಲ ವಿನ್ಯಾಸದ ಮೇಲೆ ಜಗತಿ ಗರ್ಭಗುಡಿಗಳಿವೆ. ಗರ್ಭಗುಡಿಯ ಮುಂದೆ ಸುಕನಾಸಿ ನವರಂಗಗಳಿವೆ. ನವರಂಗಕ್ಕೆ ಮೂರು ದ್ವಾರಗಳಿದ್ದು ಒಂದನ್ನು ಈಗ ಮುಚ್ಚಿರುವರು. ನವರಂಗದಲ್ಲಿ ಆರು ಗೂಡುಗಳಿವೆ.

ಎತ್ತರವಾದ ಜಗತಿಗೆ ಐದು ನಕ್ಷತ್ರಾಕಾರದ ಕಾರ್ನಿಸುಗಳಿವೆ. ಪೂರ್ವ ದಕ್ಷಿಣ ಉತ್ತರಗಳಲ್ಲಿರುವ ಮೆಟ್ಟಿಲುಗಳ ಪಕ್ಕಗಳಲ್ಲಿ ಗೋಪುರ ಸಹಿತವಾದ ಗೂಡುಗಳಿವೆ. ನವರಂಗದ ಮೂರು ದ್ವಾರಗಳಿಗೂ ಹೀಗೆಯೇ ಗೂಡುಗಳಿದ್ದು, ಒಟ್ಟು ಹನ್ನೆರಡು ಇದ್ದವು. ಈಗ ಕೆಲವು ಹೋಗಿವೆ. ಗೋಡೆಯ ಪೀಠಿಕೆಯಲ್ಲಿ ಐದು ಸಾಲು ಚಿತ್ರಪಟ್ಟಿಕೆಗಳಿವೆ. ಆನೆಗಳು ಅಶ್ವಾರೋಹಕರು ಮಕರ ಹಂಸಗಳು ಮಾತ್ರ ಕಂಡು ಬರುತ್ತವೆ. ಪೌರಾಣಿಕ ಕಥೆಗಳ ಪಟ್ಟಿಕೆ ಖಾಲಿಯಾಗಿದೆ. ಕಟಾಂಜನ ಮತ್ತು ಜಾಲಂದ್ರಗಳು ಸಾಧಾರಣವಾಗಿವೆ. ಹೊರಗೋಡೆಯನ್ನು ಬೋದಿಗೆಯಂತಹ ಕಾರ್ನಿಸಿನಿಂದ ಎರಡು ಭಾಗ ಮಾಡಿರುವರು. ಮೇಲ್ಭಾಗದಲ್ಲಿ ಈ ದೇವಾಲಯದಲ್ಲಿ ಮಾತ್ರ ಲತಾಪಟ್ಟಿಕೆ, ಮೂಲೆಗಳಲ್ಲಿ ಸಿಂಹಮುಖಗಳು ಇವೆ. ಇದರ ಮೇಲೆ ಶಿಖರಗಳಿಲ್ಲ. ಕೆಳಗಿನ ಭಾಗದಲ್ಲಿ ಲತೆ ಅಥವಾ ಸಿಂಹಮುಖ ಪೀಠಿಕೆಗಳ ಮೇಲೆ ಲತಾತೋರಣಗಳ ಕೆಳಗೆ ವಿಗ್ರಹಗಳಿವೆ. ದಕ್ಷಿಣ ದ್ವಾರದ ಪಶ್ಚಿಮದಿಂದ ಪ್ರದಕ್ಷಿಣವಾಗಿ ಈ ವಿಗ್ರಹಗಳಿವೆ :

ತಾಂಡವ ಗಣೇಶ, ಸುಖಾಸನದಲ್ಲಿ ಉಮಾಮಹೇಶ್ವರ, ಸ್ಥಾನಕ ಚಂದ್ರಶೇಖರ (ಅಭಯ ಪರಶು ಹರಿಣ ಪಾತ್ರ), ಇಬ್ಬರು ದೇವಿಯರು, ಮೋಹಿನಿ, ಸ್ಥಾನಕ ಶಿವ (ಅಕ್ಷಮಾಲಾ ತ್ರಿಶೂಲ ಢಮರುಗ ಪಾತ್ರ), ಇಬ್ಬರು ದೇವಿಯರು.

ನವರಂಗದ ನೈರುತ್ಯ ಮೂಲೆ-ನೃತ್ಯಸರಸ್ವತಿ (ಅಕ್ಷಮಾಲಾ ಅಂಕುಶ ಪಾಶ ಪುಸ್ತಕ), ಮೃದಂಗದವನು, ಪರಿಚಾರಿಕೆ ; ಪಾರಿಜಾತ ಹರಣ–ಗರುಡನಮೇಲೆ ಕೃಷ್ಣ ಸತ್ಯಭಾಮಾ. ಗರುಡನ ಎಡಗೈಯಲ್ಲಿ ಪಾರಿಜಾತ ಬಲಗೈಯಲ್ಲಿ ವಜ್ರಾಯುಧ; ಧರಣೀವರಾಹ, ಪುಷ್ಪಾಪಚಯ –ಯುವತಿಯು ಮೇಲಿನ ಲತೆಯಿಂದ ಹೂವನ್ನು ಕೀಳುತ್ತಿರುವುದು. ಹರಿಹರ (ಅಕ್ಷಮಾಲಾ ತ್ರಿಶೂಲ ಚಕ್ರ ಶಂಖ), ಇಬ್ಬರು ದೇವಿಯರು, ಬಲದಲ್ಲಿ ಮತ್ತೊಂದು ದೊಡ್ಡ ದೇವಿ.

ಸುಕನಾಸಿಯ ದಕ್ಷಿಣ–ಉಗ್ರನರಸಿಂಹ ಲಕ್ಷ್ಮೀ, ಪೀಠದಲ್ಲಿ ಪ್ರಹ್ಲಾದ ಗರುಡ, ಹರಿಹರ–ದೇವೀ, ಷಡ್ಭುಜ ನೃತ್ಯಸರಸ್ವತಿ (ವೀಣೆ,

ಅಕ್ಷಮಾಲಾ ಅಂಕುಶ ಸ್ಪರ್ಗಹಸ್ತ ಪಾಶ ವೀಣಾ), ಇಬ್ಬರು ಪರಿಚಾರಿಕೆಯರು, ನೃತ್ಯಪಾರ್ವತಿ, ಸ್ಥಾನಕ ಶಿವ.

ಎರಡಂತಸ್ತಿನ ದಕ್ಷಿಣದ ಗೂಡು–ಸ್ಥಾನಕ ಚತುರ್ಭುಜ ಲಕ್ಷ್ಮೀ (ಅಕ್ಷಮಾಲಾ ಚಕ್ರ ಶಂಖ ಫಲ), ನೃತ್ಯಚತುರ್ಭುಜ ದುರ್ಗಾ (ಕತ್ತಿ ತ್ರಿಶೂಲ ಡಮರು ಪಾತ್ರ), ಬಲದಲ್ಲಿ ಇಬ್ಬರು ಪರಿಚಾರಿಕೆಯರು, ಷಡ್ಭುಜ ನೃತ್ಯಶಿವ (ಡಮರು ಕತ್ತಿ ಸ್ಪರ್ಗಹಸ್ತ ಗುರಾಣಿ ಲಂಬ ಹಸ್ತ, ಖಟ್ವಾಂಗ ಮತ್ತು ಪಾತ್ರೆ), ಪರಿಚಾರಿಕೆ, ನೃತ್ಯಶಿವ ರಾಕ್ಷಸನನ್ನು ತುಳಿದು ತ್ರಿಶೂಲದಿಂದ ಆಕಾಶಕ್ಕೆ ಎತ್ತಿರುವನು. (ಜಲಂಧರ? ಅಥವಾ ಅಂಧಕಾಸುರ). ಬಲದಲ್ಲಿ ಮೂವರು ಗಾಯಕರು, ಭೈರವ, ಸ್ಥಾನಕ ಶಿವ (ಅಕ್ಷಮಾಲಾ ತ್ರಿಶೂಲ ಡಮರುಗ ಫಲ).

ಪಶ್ಚಿಮದ ಗೂಡು ದಕ್ಷಿಣ ಗೂಡಿನಂತಿದೆ. ಗರ್ಭಗುಡಿಯ ನೈರುತ್ಯ-ಸ್ಥಾನಕ ಪಾರ್ವತಿ, ಗಣೇಶ ಮತ್ತು ಕುಮಾರ, ಹನುಮಂತ, ಷಡ್ಭುಜ ತಾಂಡವೇಶ್ವರ (ಮೊದಲ ಕೈಯಲ್ಲಿ ಕತ್ತಿ), ತಾಂಡವೇಶ್ವರ (ಮೊದಲ ಕೈಯಲ್ಲಿ ಅಕ್ಷಮಾಲೆ), ಗರುಡ, ಕಾಳಿಂಗಮರ್ದನ ನಾಗಿಣೀ.

ಉತ್ತರದ ಗೂಡು ಇತರ ಗೂಡುಗಳಂತಿದೆ. ಸುಕನಾಸಿ ಉತ್ತರ ದಲ್ಲಿ-ಸ್ಥಾನಕ ಪಾರ್ವತಿ, ಸ್ಥಾನಕ ಶಿವ (ಭಗ್ನ ತ್ರಿಶೂಲ ಡಮರುಗ ಫಲ), ಬಲದಲ್ಲಿ ಇಬ್ಬರು ಪರಿಚಾರಿಕೆಯರು, ದೇವಿ (ದಾನಹಸ್ತ ಪಾಶ), ತ್ರಿಮುಖ ಶ್ಮಶ್ರುರಹಿತ ಸ್ಥಾನಕ ದೇವ (ಅಕ್ಷಮಾಲಾ ಅಂಕುಶ ಪಾಶ ಕಳಶ–ಬ್ರಹ್ಮಾ?), ಹರಿಹರ, ಹೂವನ್ನರ್ಪಿಸುತ್ತಿರುವ ದೇವಿ, ರಾವಣನು ಕೈಲಾಸವನ್ನೆತ್ತುತ್ತಿರುವುದು, ದೇವಿ (ಪದ್ಮ ಫಲ), ಹಲಸಿನಹಣ್ಣಿಗಾಗಿ ಕಾದಾಡುವ ಎರಡು ಕಪಿಗಳು.

ನವರಂಗದ ವಾಯುವ್ಯ ಮೂಲೆ–ಗೋವರ್ಧನಧಾರಿ, ಇಬ್ಬರು ಪರಿಚಾರಿಕೆಯರು, ಸ್ಥಾನಕ ನಾರಾಯಣ, ಬಲದಲ್ಲಿ ಪುರುಷ, ಎಡದಲ್ಲಿ ಸ್ತ್ರೀ, ಮೋಹಿನಿ-ಎಡಗೈಮೇಲೆ ಶುಕ, ಬಲಗೈಯಿಂದ ಹಣ್ಣನ್ನು ಕೀಳುತ್ತಿರುವಳು, ವೇಣುಗೋಪಾಲ, ಭೈರವ ಶವದಮೇಲೆ ನೃತ್ಯ ಮಾಡುತ್ತಿರುವುದು, ಮಹಿಷಮರ್ದಿನಿ, ನಿಂತಿರುವ ಪುರುಷ ಸ್ತ್ರೀ ಪರಿಚಾರಕರು.

ಉತ್ತರ ದ್ವಾರದ ಪಶ್ಚಿಮದಲ್ಲಿ–ಸ್ಥಾನಕ ಶಿವ (ಮೊದಲ ಕೈಯಲ್ಲಿ ಅಕ್ಷಮಾಲಾ), ಕೋದಂಡರಾಮ ಲಕ್ಷ್ಮಣ ಹನುಮಂತ ಸೀತಾ, ಸ್ಥಾನಕ ಶಿವ (ಅಕ್ಷಮಾಲಾ), ಪುಷ್ಪವನ್ನರ್ಪಿಸುತ್ತಿರುವ ಸ್ತ್ರೀ, ಷಡ್ಭುಜ ತಾಂಡವೇಶ್ವರ (ಅಭಯ ಕತ್ತಿ ತ್ರಿಶೂಲ ಡಮರು ಪಾತ್ರ ಲಂಬಹಸ್ತ), ಎಡದಲ್ಲಿ ಸ್ತ್ರೀ. ಕನ್ನಡ ಅಕ್ಷರ "ಬೋ", ನಂದಿಯ ಮೇಲೆ ಉಮಾ ಮಹೇಶ್ವರ.

ಮೇಲ್ಛಾವಣಿಯ ಬೋದಿಗೆ ಮರಗೆಲಸದಂತೆ ತೊಲೆಗಳನ್ನು ಹೊಂದಿದೆ. ಕೈಪಿಡಿ ಗೋಡೆಯ ಮೇಲೆ ಶಿಖರಗಳಿವೆ. ಈಚೆಗೆ ದಕ್ಷಿಣ ದ್ವಾರದ ಮೇಲೆ ಗಾರೆಯ ನಂದಿಯನ್ನಿಟ್ಟಿರುವರು. ದಕ್ಷಿಣ ಮತ್ತು ಪೂರ್ವದ ಕೈಪಿಡಿ ಗೋಡೆಯಲ್ಲಿ ತಾಂಡವೇಶ್ವರ ವಿಗ್ರಹಗಳಿವೆ.

ಶಿಖರವು ಬಳಪದಕಲ್ಲಿನ ನಾಲ್ಕಂತಸ್ತುಗಳನ್ನು ಹೊಂದಿದೆ. ಈ ಅಂತಸ್ತುಗಳ ಮೇಲೆ ಕೀರ್ತಿಮುಖ, ಯಕ್ಷ, ತಾಂಡವೇಶ್ವರ ಇತ್ಯಾದಿ ವಿಗ್ರಹಗಳಿವೆ. ಸುಕನಾಸಿ ಮೇಲೆ ಚಾಚಿಕೊಂಡ ಭಾಗದಲ್ಲಿ ಕೆತ್ತನೆ ಕೆಲಸ ಚೆನ್ನಾಗಿದೆ. ಆದರೆ ಸಳ ವಿಗ್ರಹ ಹೋಗಿದೆ. ಮುಂದಿನ ತಾಂಡವೇಶ್ವರ ಫಲಕವಿದೆ. ಶಿಖರದ ಮೇಲ್ಭಾಗವನ್ನು ಗಾರೆಯಿಂದ ಈಚೆಗೆ ಮಾಡಿರುವರು.

ನವರಂಗದಲ್ಲಿ ಹನ್ನೆರಡು ಅಂಕಣಗಳಿವೆ. ಪೂರ್ವದಲ್ಲಿ ಕಲ್ಲಿನ ಜಗತಿಗಳಿವೆ. ಇವುಗಳ ಹಿಂದೆ ಗೋಡೆಯಲ್ಲಿ ಜಾಲಂಧ್ರಗಳಿವೆ. ಮೂರು ದ್ವಾರಗಳಲ್ಲಿ ಉತ್ತರ ದ್ವಾರವನ್ನು ಈಚೆಗೆ ಮುಚ್ಚಿರುವರು ಮತ್ತು ಒಂದು ಸಾಮಾನ್ಯ ವೀರಭದ್ರ ವಿಗ್ರಹವನ್ನಿಟ್ಟಿರುವರು. ನವರಂಗದ ಮಧ್ಯದಲ್ಲಿ ನಂದಿ ಇದೆ. ನವರಂಗದ ಮೂರು ದ್ವಾರಗಳಮೇಲೂ ತಾಂಡವೇಶ್ವರ ವಿಗ್ರಹಗಳಿವೆ. ನವರಂಗದ ಪಶ್ಚಿಮ ಗೋಡೆಗಳಲ್ಲಿ ಆರು ಗೂಡುಗಳಿವೆ. ಗೂಡುಗಳ ಮೇಲೆ ಮೂರು ಅಥವಾ ಐದಂತಸ್ತಿನ ಶಿಖರಗಳಿವೆ. ಈ ಗೂಡುಗಳಲ್ಲಿ ದಕ್ಷಿಣದಿಂದ–ಸಪ್ತಮಾತೃಕೆಯರು, ವೀರಭದ್ರ, ಗಣೇಶ, ವಾಹನ ತೋರಣಗಳು ; ಸರಸ್ವತೀ, ಗಣೇಶ, ಮಹಿಷಮರ್ದಿನೀ, ಮಯೂರದ ಮೇಲೆ ಷಣ್ಮುಖ ಮತ್ತು ಕೇಶವ (ಭಗ್ನ) ವಿಗ್ರಹಗಳಿವೆ. ನವರಂಗದ ಮಧ್ಯದಲ್ಲಿರುವ ನಾಲ್ಕು ಕಂಬಗಳು ದುಂಡಾಗಿ ಘಂಟಾಕಾರ

ವಾಗಿವೆ. ಮಿಕ್ಕ ಆರು ಕಂಬಗಳಲ್ಲಿ ನಾಲ್ಕು ಹದಿನಾರು ಕೋಣ ನಕ್ಷತ್ರ ದಂತಿವೆ. ಪೂರ್ವದ್ವಾರದ ಹತ್ತಿರ ಇರುವ ಎರಡು ಬುಡದಲ್ಲಿ ರಾವಣನು ಕೈಲಾಸವನ್ನೆತ್ತುವುದು, ಗೋವರ್ಧನಧಾರಿ, ವೇಣುಗೋಪಾಲ, ಇತ್ಯಾದಿ ವಿಗ್ರಹಗಳನ್ನು ಹೊಂದಿ ಬೇಲೂರಿನ ನರಸಿಂಹ ಸ್ತಂಭವನ್ನು ಹೋಲುತ್ತವೆ.

ನವರಂಗದಲ್ಲಿ ಹನ್ನೆರಡು ಭುವನೇಶ್ವರಿಗಳಿವೆ. ಪೂರ್ವ ದ್ವಾರದ ಹತ್ತಿರ ಇರುವ ಭುವನೇಶ್ವರಿಯಲ್ಲಿ ನಿಂತಿರುವ ಸೂರ್ಯ ಅಥವಾ ಕುಳಿತಿರುವ ಉಮಾಮಹೇಶ್ವರ, ನರ್ತಕ ಗಾಯಕರು, ಇದರ ಮೇಲೆ ಮೂರು ವೃತ್ತಗಳು, ಮಧ್ಯದಲ್ಲಿ ಚತುರಸ್ರ ಅಷ್ಟಾಸ್ರ ಅಷ್ಟಕೋಣ ನಕ್ಷತ್ರಗಳಿವೆ. ದಕ್ಷಿಣ ದ್ವಾರದ ಹತ್ತಿರ ದಿಕ್ಪಾಲಕರು, ಇತರ ಭುವನೇಶ್ವರಿಗಳಲ್ಲಿ ರೇಖಾಚಿತ್ರಗಳು, ಮಧ್ಯದಲ್ಲಿ ಅಷ್ಟದಿಕ್ಪಾಲಕರು, ಹದಿನಾರು ಕೋಣದ ನಕ್ಷತ್ರ ವೃತ್ತ ಅಷ್ಟಕೋಣ ನಕ್ಷತ್ರ ಇವೆ. ಕರ್ಣಿಕೆಯಲ್ಲಿ ತಾಂಡವೇಶ್ವರ ಇದೆ.

ಸುಕನಾಸಿ ದ್ವಾರದಮೇಲೆ ಉಮಾಮಹೇಶ್ವರ, ಜಾಲಂದ್ರ, ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರು ಇರುವರು. ಗರ್ಭಗುಡಿಯ ದ್ವಾರವು ಬಹಳ ಸುಂದರವಾಗಿದೆ. ದ್ವಾರಪಾಲಕ ಲತಾ ಸಿಂಹ ಇತ್ಯಾದಿಗಳು, ಮೇಲೆ ತಾಂಡವೇಶ್ವರ ದ್ವಾರದಮೇಲೆ ಇವೆ. ಗರ್ಭಗುಡಿಯ ಒಳಗೆ ಮೂರು ಶಿಖರಗಳುಳ್ಳ ಗೂಡುಗಳು, ಭುವನೇಶ್ವರಿಯಲ್ಲಿ ಪದ್ಮ ಇವೆ. ಲಿಂಗವು ಸಣ್ಣದಾಗಿ ವೃತ್ತಶಿರವಾಗಿ ದೊಡ್ಡ ಪಾಣಿಪೀಠನಮೇಲೆ ಇದೆ.

೫೭. **ಹುಲ್ಲೇಕೆರೆ:** ರೈಲ್ವೆ ನಿಲ್ದಾಣವಾದ “ಹರ್ನಹಳ್ಳಿ” ರೋಡಿಗೆ ಆರು ಮೈಲಿ ದಕ್ಷಿಣದಲ್ಲಿ ಚಿಕ್ಕ ಹಳ್ಳಿಯಾದ ಹುಲ್ಲೇಕೆರೆ ಇದೆ. ಇದರ ಪಶ್ಚಿಮದಲ್ಲಿ ಹೊಯ್ಸಳ ಕಾಲದ ಬಳಪದಕಲ್ಲಿನ ಸುಂದರವಾದ ದೇವಾಲಯವಿದೆ. ದೇವಾಲಯದ ಆಗ್ನೇಯದಲ್ಲಿರುವ ಶಾಸನದಿಂದ ಹೊಯ್ಸಳ ಒಂದನೆಯ ನರಸಿಂಹನ ಸರ್ವಾಧಿಕಾರಿ ಹೆಗ್ಗಡೆ ಮಹಾದಂಡನಾಯಕನಾದ ಬೂಚಿರಾಜನು ಚಕ್ರವರ್ತಿಯಿಂದ ಹುಲ್ಲೆಯ ಕೆರೆಯನ್ನು ಪಡೆದು, ಸೋಮನಾಥಪುರವೆಂಬ ಅಗ್ರಹಾರವನ್ನು ಮಾಡಿ ಕೇಶವ ದೇವಾಲಯವನ್ನು ಕ್ರಿ. ಶ. ೧೧೬೩ರಲ್ಲಿ ಕಟ್ಟಿಸಿದನೆಂದು ತಿಳಿದು ಬರುವುದು.

ಕೋರವಂಗಲ ಬೂಚೇಶ್ವರದಂತೆಯೇ ಇಲ್ಲಿಯೂ ಜಗತಿ ಇಲ್ಲ. ದೇವಾಲಯವು ಪೂರ್ವ-ಪಶ್ಚಿಮ ೧೦೦ ಅಡಿ, ಉತ್ತರ ದಕ್ಷಿಣ ೬೫ ಅಡಿ ಅಂಗಳದಲ್ಲಿದೆ. ಗರ್ಭಗೃಹ ಶಿಖರ ಸುಕನಾಸಿ ನವರಂಗ ಅಂಗಳದ ಮಂಡಪಗಳು ಉಪ್ಪರಿಗೆ (ಮಹಾದ್ವಾರ) ಎಲ್ಲ ಭಾಗಗಳು ಇವೆ. ಗರ್ಭ ಗೃಹ ನವರಂಗಗಳು ಚತುರಸ್ರವಾಗಿಯೂ ಅಂಗಳವು ದೀರ್ಘಚತುರಸ್ರ ವಾಗಿಯೂ ಇವೆ. ದ್ವಾರದ ಮುಂದೆ ಹಿಂದೆ ಇರುವ ಮಂಡಪಗಳು ಚತುರಸ್ರವಾಗಿವೆ. ತಲವಿನ್ಯಾಸದ ಮೇಲೆ ಜಗತಿ ಇಲ್ಲದೆ ದೇವಾಲಯದ ಗೋಡೆ ಎದ್ದಿದೆ. ಐದು ಚಿತ್ರಪಟ್ಟಿಕೆಗಳು ಇವೆ. ನಾಲ್ಕನೆಯದರಲ್ಲಿ ಮಕರಸಿಂಹಮುಖಗಳಿಂದ ಲತೆಯು ಹೊರಡುತ್ತದೆ. ಗೋಡೆಗಳಮೇಲೆ ಲತಾತೋರಣಗಳು, ಸಿಂಹಮುಖಗಳು, ಶಿಖರಗಳಿವೆ. ವಿಗ್ರಹಗಳು ಸುಮಾರು ಹದಿನೈದಂಗುಲ ಎತ್ತರ ಇವೆ. ಇವುಗಳಲ್ಲಿ ಕೆಲವು ಬಹಳ ಸುಂದರವಾಗಿ ಹಳೆಯಬೀಡು ವಿಗ್ರಹಗಳನ್ನು ಹೋಲುತ್ತವೆ. ಇವುಗಳ ಕೆಳಗೆ ಹೆಸರುಗಳಿವೆ.

ನವರಂಗ ದ್ವಾರದ ದಕ್ಷಿಣದಿಂದ ಪ್ರದಕ್ಷಿಣೆಯಾಗಿ—ಕೇಶವ, ನಾರಾಯಣ "ಶ್ರೀ ನಾರಾಯಣ", ಮಾಧವ "ಶ್ರೀ ಮಾಧವ", ಗೋವಿಂದ, ಇಬ್ಬರು ದೇವಿಯರು, ಇಬ್ಬರು ಪರಿಚಾರಿಕೆಯರು, ಹೆಸರು ಹೋಗಿದೆ. ವಿಷ್ಣು "ಶ್ರೀ ವಿಷ್ಣುದೇವ."

ನವರಂಗದ ಪಶ್ಚಿಮ—ಮಧುಸೂದನ (ಚಕ್ರ ಶಂಖ ಪದ್ಮ ಗದಾ) ಶಾಸನವಿಲ್ಲ; ತ್ರಿವಿಕ್ರಮ, ಬಲಗಡೆ ವೀಳೆಯ ಅಥವಾ ಹಣ್ಣು ಕೊಡು ತ್ತಿರುವ ಸ್ತ್ರೀ, "ಶ್ರೀ ತ್ರಿವಿಕ್ರಮ."

ಗರ್ಭಗೃಹದ ದಕ್ಷಿಣ—ವಾಮನ "ಶ್ರೀ ವಾಮನ"; ಶ್ರೀಧರ "ಶ್ರೀಧರದೇವರು", ಹೃಷೀಕೇಶ "ಶ್ರೀ ಹೃಷೀಕೇಶ", ಪದ್ಮನಾಭ "ಶ್ರೀ ಪದ್ಮನಾಭ".

ಗರ್ಭಗೃಹದ ಪಶ್ಚಿಮ—ದಾಮೋದರ "ಶ್ರೀದ್ದಾಮೋದರ", ಧರಣೀವರಾಹ (ಭಗ್ನ), ಸಂಕರ್ಷಣ "ಶ್ರೀ ಸಂಕರುಷಣ."

ಗರ್ಭಗೃಹದ ಉತ್ತರ—ವಾಸುದೇವ "ಶ್ರೀ ವಾಸುದೇವ", ಪ್ರದ್ಯುಮ್ನ "ಶ್ರೀ ಪ್ರದ್ಯುಮ್ನ", ಅನಿರುದ್ಧ "ಶ್ರೀ ಅನಿರುದ್ಧ", ಪುರು

ಷೋತ್ತಮ, ಇಬ್ಬರು ಚಾಮರಧಾರಿಣಿಯರು, “ಶ್ರೀ ಪುರುಷೋತ್ತಮ”, ಅಧೋಕ್ಷಜ “ಶ್ರೀ ಅಧೋಕ್ಷಜ.”

ನವರಂಗದ ಪಶ್ಚಿಮ–ನರಸಿಂಹ (ಹೆಸರಿಲ್ಲ).

ನವರಂಗದ ಉತ್ತರ–ಅಚ್ಯುತ “ಶ್ರೀ ಅಚ್ಯು”(ತ), ಜನಾರ್ದನ, ಪರಿಚಾರಿಕೆಯರು (ಭಗ್ನ), ಉಪೇಂದ್ರ “ಶ್ರೀ ಉಪೇಂದ್ರ.”

ಪೂರ್ವ–ಹರಿ “ಶ್ರೀಹರಿಹ”(ರ?), ಕೃಷ್ಣ.

ಮೇಲ್ಚಾವಣಿಯ ಬೋದಿಗೆಯಲ್ಲಿ ಹೆಚ್ಚಾಗಿ ಕೆತ್ತನೆ ಇಲ್ಲ. ದಕ್ಷಿಣ ದಲ್ಲಿ ಮಾತ್ರ ಮಣಿಸರ ಕೀರ್ತಿಮುಖಗಳನ್ನು ಸ್ವಲ್ಪ ಕೊರೆದಿರುವರು. ಕೈಪಿಡಿ ಗೋಡೆಯಲ್ಲಿ ಮೂರು ಸಾಲುಗಳಿವೆ. ಶಿಖರಗಳು, ಸಿಂಹ ಮಕರ ಮುಖಗಳು, ಯಕ್ಷಯಕ್ಷಿಣಿಯರು ಇವೆ. ಪೂರ್ವ ದಕ್ಷಿಣ ಉತ್ತರದಲ್ಲಿ ಮಾತ್ರ ಮಧ್ಯದಲ್ಲಿ ಕಾಳಿಂಗಮರ್ದನ ಉಗ್ರನರಸಿಂಹ ಹರಿಹರ ವಿಗ್ರಹ ಗಳಿವೆ.

ಬಳಪದಕಲ್ಲಿನ ಶಿಖರದಲ್ಲಿ ಮೂರು ಅಂತಸ್ತುಗಳಿವೆ. ಶಿಖರಗಳ ಮಧ್ಯದಲ್ಲಿ ವಿಗ್ರಹಗಳು ಇವೆ. ದಕ್ಷಿಣದಲ್ಲಿ ತ್ರಿವಿಕ್ರಮ, ಕಾಳಿಂಗಮರ್ದನ, ಲಕ್ಷ್ಮೀನಾರಾಯಣ, ಹರಿಹರ, ಪಶ್ಚಿಮದಲ್ಲಿ ಬಲಿ–ವಾಮನ, ಯೋಗ ನರಸಿಂಹ, ಗೋವರ್ಧನಧಾರಿ, ಕೇಶವ, ಉತ್ತರದಲ್ಲಿ ವೇಣುಗೋಪಾಲ, ಲಕ್ಷ್ಮೀನಾರಾಯಣ, ಸ್ಥಾನಕ ವಿಷ್ಣು, ವಿಷ್ಣು (?).

ಶಿಖರದ ಕೊನೆಯಲ್ಲಿ ಅಲಂಕೃತವಾದ ಕಲ್ಲಿನ ಕಲಶವಿದೆ. ಸುಕನಾಸಿ ಮೇಲೆ ಚಾಚಿಕೊಂಡಿರುವ ಭಾಗದಲ್ಲಿ ಕೆತ್ತನೆ ಕೆಲಸವೂ ಸುಂದರವಾದ ಸಳವಿಗ್ರಹವೂ ಇವೆ. ಇದರ ಪೂರ್ವ ಮುಖದಲ್ಲಿ ಕೀರ್ತಿಮುಖ ಕೇಶವ ವಿಗ್ರಹಗಳಿವೆ.

ಮುಖಮಂಡಪದ ಮೆಟ್ಟಲುಗಳ ಪಕ್ಕಗಳಲ್ಲಿ ಎರಡು ಸುಂದರವಾದ ಗಜಗಳು, ಕಾಲಿನ ಹತ್ತಿರ ಪದಾತಿಗಳು ಇವೆ. ಇದರ ಗೋಡೆಯ ಪೀಠಿಕೆ ಯಲ್ಲಿ ಮೂರು ಕಾರ್ನೀಸುಗಳ ಸ್ತಂಭಗಳು ಇವೆ. ಸ್ತಂಭಗಳ ಮಧ್ಯದಲ್ಲಿ ರತಿ–ಮನ್ಮಥ, ನರ್ತಕ ಗಾಯಕರಿರುವರು. ಇದರಮೇಲೆ ಶಿಖರಗಳು, ಬೌದ್ಧರ ತ್ರಿರತ್ನ ಚಿಹ್ನೆಯಂತೆ ಇವೆ. ಶಿಖರಗಳ ಮಧ್ಯದಲ್ಲಿ ಸಿಂಹಗಳಿವೆ. ಬಾಗಿರುವ ಕಟಾಂಜನದ ಮೇಲೆ ನರ್ತಕ, ಗಾಯಕ, ಮಿಥುನ,

ಮೋಹಿನೀ–ಕಪಿ, ಇತ್ಯಾದಿಗಳಿವೆ. ಉತ್ತರ ಕಟಾಂಜನದಲ್ಲಿ ವಿಗ್ರಹಗಳ ಮಧ್ಯದಲ್ಲಿ ಜಾಲಂಧ್ರವಿದೆ. ಮುಖಮಂಡಪದ ಎರಡು ಕಡೆಗಳಲ್ಲೂ ಜಗತಿಗಳೂ ಸ್ತಂಭಗಳೂ ಇವೆ. ಮೇಲ್ಚಾವಣಿಯಲ್ಲಿ ಅಷ್ಟದಿಕ್ಪಾಲಕರು, ವಿಷ್ಣುವಿನ ದ್ವಾದಶಮೂರ್ತಿಗಳು, ಪರಿಚಾರಿಕೆಯರು ಅಷ್ಟಾಸ್ರಗಳಲ್ಲಿರುವರು. ಮಧ್ಯದಲ್ಲಿ ಪದ್ಮಗಳು ಗಾಯಕರು, ಕರ್ಣಿಕೆಯ ಮೇಲೆ ನೃತ್ಯಲಕ್ಷ್ಮೀ ಇವೆ.

ನವರಂಗದ ದ್ವಾರ ಸಾಧಾರಣವಾಗಿದೆ. ಇಬ್ಬರು ದ್ವಾರಪಾಲಕರಿರುವರು. ದ್ವಾರದಮೇಲೆ ವಿಗ್ರಹಗಳಿಲ್ಲ. ನವರಂಗದಲ್ಲಿ ಒಂಬತ್ತಂಕಣಗಳು, ಮಧ್ಯದಲ್ಲಿ ಸ್ವಲ್ಪ ಎತ್ತರಿಸಿರುವ ಜಗತಿ ಇವೆ. ಮಧ್ಯದ ನಾಲ್ಕು ಕಂಬಗಳು ದುಂಡಾಗಿ ಘಂಟಾಕಾರವಾಗಿವೆ. ವಾಯುವ್ಯ ಸ್ತಂಭದ ಪೀಠದಲ್ಲಿ ತೋರಣದ ಕೆಳಗೆ ಇಬ್ಬರು ನರ್ತಕರಿರುವರು. ಭುವನೇಶ್ವರಿಗಳಲ್ಲಿ ರೇಖಾಚಿತ್ರಗಳಿವೆ. ಪೂರ್ವದಿಂದ ಮೂರನೆಯ ಭುವನೇಶ್ವರಿಯಲ್ಲಿ ಒಬ್ಬ ಅಧಿಕಾರಿ (ಬೂಚಿರಾಜ ?), ನರ್ತಕ ಗಾಯಕರಿರುವರು. ಮಧ್ಯದ ಭುವನೇಶ್ವರಿಯಲ್ಲಿ ಪದ್ಮ, ಅದರ ಕರ್ಣಿಕೆಯಲ್ಲಿ ಕಾಳಿಂಗಮರ್ದನ ಇವೆ. ಸುಕನಾಸಿಗೆ ಬೇರೆ ದ್ವಾರವಿಲ್ಲ. ಮೇಲ್ಚಾವಣಿಯಲ್ಲಿ ಪದ್ಮಗಳಿವೆ. ಗರ್ಭಗೃಹ ದ್ವಾರದಲ್ಲಿ ದ್ವಾರಪಾಲಕರು, ಮೇಲೆ ಗಜಲಕ್ಷ್ಮಿ ಇವೆ. ಗರ್ಭಗೃಹದ ಮೇಲ್ಚಾವಣಿಯಲ್ಲಿ ಪದ್ಮಗಳಿವೆ. ಗರುಡಪೀಠದ ಮೇಲಿರುವ ಕೇಶವ ವಿಗ್ರಹವು ಆರು ಅಡಿ ಎತ್ತರವಿದೆ. ಕಿರೀಟವು ಕೋಣಾಕಾರವಾಗಿದೆ. ಆದರೂ ಸಾಮಾನ್ಯ ಹೊಯ್ಸಳ ವಿಗ್ರಹವೆಂದು ಹೇಳಬಹುದು. ಪಕ್ಕಗಳಲ್ಲಿ ದೇವಿಯರು, ಪ್ರಭಾವಳಿಯಲ್ಲಿ ದಶಾವತಾರಗಳಿವೆ.

ಅಂಗಳದಲ್ಲಿರುವ ಮಂಡಪಗಳ ಕಂಬಗಳು ದುಂಡಾಗಿವೆ. ದ್ವಾರದ ಪಶ್ಚಿಮದ ಅಂಕಣದ ಮುಂದೆ ನಾಲ್ಕು ಸ್ತಂಭಗಳ ಮುಖಮಂಡಪವೊಂದಿದೆ. ಇದರ ಮೇಲ್ಚಾವಣಿಯಲ್ಲಿ ಶ್ರೀಚಕ್ರದ ಮಧ್ಯೆ ಕಮಲವಿದೆ. ಇದಕ್ಕೆ ಪೂರ್ವದಲ್ಲಿ ದ್ವಾರದ ಹತ್ತಿರ ಇರುವ ಮಂಡಪದಲ್ಲಿ ಮೇಲ್ಚಾವಣಿ ದೇವಾಲಯ ಮುಖಮಂಡಪದ ಮೇಲ್ಚಾವಣಿಯಂತೆಯೇ ಇದೆ.

ಮಹಾದ್ವಾರ ಅಥವಾ ಉಪ್ಪರಿಗೆ ಮುಂದಿರುವ ಮುಖಮಂಡಪ ದೇವಾಲಯದ ಮುಖಮಂಡಪದಂತಿದೆ. ಆದರೆ ಆನೆಗಳು, ವಿಗ್ರಹಗಳು

ಇಲ್ಲ. ದ್ವಾರವು ಸಾಮಾನ್ಯವಾಗಿದೆ. ಪೂರ್ವದ ಮೇಲ್ಚಾವಣಿಯಲ್ಲಿ ಅಷ್ಟ ದಿಕ್ಪಾಲಕರೂ ಮೂರು ಅಷ್ಟಕೋಣಗಳೂ ಇವೆ. ಹುಲ್ಲೆಕೆರೆಯ ಕೇಶವ ದೇವಾಲಯದಲ್ಲಿ ವೈಖಾನಸಾಗಮ ರೀತಿಯಲ್ಲಿ ಅರ್ಚನೆ ನಡೆಯು ತ್ತಿದ್ದಿತು.

೫೮. **ಜಾವಗಲ್ಲು :** ಬಾಣಾವರ ನಿಲ್ದಾಣಕ್ಕೆ ಒಂಬತ್ತು ಮೈಲಿ ದೂರದಲ್ಲಿ ಹಳೆಯಬೀಡು ರಸ್ತೆಯಲ್ಲಿರುವ ಜಾವಗಲ್ಲು ಕೆಲವು ಹಳೆಯ ದೇವಾಲಯಗಳನ್ನು ಹೊಂದಿದೆ. ಇವುಗಳಲ್ಲಿ ಹದಿಮೂರನೆಯ ಶತಾಬ್ದದ ಮಧ್ಯಭಾಗದಲ್ಲಿ ಕಟ್ಟದ ಲಕ್ಷ್ಮೀನರಸಿಂಹ ದೇವಾಲಯ ಮುಖ್ಯವಾಗಿದೆ. ಮುಖಮಂಡಪ ಗೋಪುರ ಲಕ್ಷ್ಮೀ ಗುಡಿಗಳನ್ನು ಈಚೆಗೆ ಸೇರಿಸಿರುವರು. ಬಳಪದಕಲ್ಲಿನ ತ್ರಿಕೂಟ ದೇವಾಲಯಕ್ಕೆ ಏಕ ಶಿಖರವಿದೆ. ಶಿಲ್ಪಿಯಾದ ಮಲ್ಲಿತಮ್ಮನೇ ಇಲ್ಲಿಯೂ ಕೆಲಸಮಾಡಿರುವುದರಿಂದ ಹಾರ್ನಹಳ್ಳಿ, ನುಗ್ಗಿ ಹಳ್ಳಿ, ಸೋಮನಾಥಪುರ ಗುಡಿಗಳ ಕಾಲದಲ್ಲಿ (೧೨೫೦–೬೦) ಜಾವಗಲ್ಲು ದೇವಾಲಯ ರಚಿತವಾಗಿರಬೇಕು. ಗುಡಿಯ ವಾಯವ್ಯದಲ್ಲಿರುವ ಮಂಡಪದ ಮೇಲ್ಚಾವಣಿಯಲ್ಲಿ ಕ್ರಿ. ಶ. ೧೫೧೫ರ ಶಾಸನಕಲ್ಲು ಸೇರಿ ಕೊಂಡಿದೆ. ಮುಖಮಂಡಪದ ಉತ್ತರದಲ್ಲಿ ಬಿದ್ದಿರುವ ಒಂದು ಕಲ್ಲು ಶಾಸನವಾಗಿರಬಹುದು.

ನಕ್ಷತ್ರಾಕಾರದ ಜಗತಿಯಲ್ಲಿ ಐದು ಸಾಲುಗಳಿವೆ. ಗೋಡೆಯ ಪೀಠ ಭಾಗದಲ್ಲಿ ಆರು ಚಿತ್ರಪಟ್ಟಿಕೆಗಳಿವೆ. ಆನೆ, ಅಶ್ವ, ಲತಾ, ಪೌರಾಣಿಕ, ಮಕರ–ಸಿಂಹ, ಹಂಸ. ಪೌರಾಣಿಕ ಪಟ್ಟಿಕೆಯಲ್ಲಿ ಆಗ್ನೇಯದಿಂದ ಕೆಲವು ಚಿತ್ರಗಳನ್ನು ಗುರ್ತಿಸಬಹುದು: ಯುದ್ಧರಥಗಳು, ಅಷ್ಟ ದಿಕ್ಪಾಲಕರ ಸಾಲು, ಸಮುದ್ರ ಮಥನ, ಅಮೃತಪಾನ, ತ್ರಿಪುರಸಂಹಾರ, ಸೇನಾನಿಯಾದ ಕುಮಾರ, ಗಜಾಸುರ ಸಂಹಾರ, ರಾಮಾಯಣ–ರಾಮ ಲಕ್ಷ್ಮಣ ವಿಶ್ವಾಮಿತ್ರ, ವಿಶ್ವಾಮಿತ್ರನ ಯಜ್ಞ, ಮಾರೀಚ ಮುಂತಾದವ ರನ್ನು ರಾಮನು ಓಡಿಸುವುದು, ಅಹಲ್ಯಾಶಾಪಮೋಚನ, ಶಿವಧನುರ್ಭಂಗ ಸೀತಾಕಲ್ಯಾಣ, ಪರುಶುರಾಮ ಗರ್ವಭಂಗ, ವಿರಾಧನು (?) ಸೀತೆಯನ್ನು ಹಿಂಸಿಸುವುದು, ರಾಮನಿಂದ ಕೊಲ್ಲಲ್ಪಡುವುದು; ಶೂರ್ಪನಖೀ ನಾಸಿಕಾ ಛೇದ, ಕಬಂಧವಧ, ಸೀತಾಪಹರಣ, ರಾವಣ-ಜಟಾಯು, ರಾಮ–

ಸುಗ್ರೀವ, ಸಪ್ತತಾಲ, ವಾಲಿಸಂಹಾರ, ಸುಗ್ರೀವ ಪಟ್ಟಾಭಿಷೇಕ, ರಾಮನು ಹನುಮಂತನನ್ನು ಸೀತಾನ್ವೇಷಣೆಗಾಗಿ ಕಳುಹಿಸುವುದು, ಸ್ವಯಂಪ್ರಭೆಯ ಗುಹೆ, ಕಪಿಗಳು ಸಮುದ್ರತೀರವನ್ನು ಸೇರುವುದು, ಹನುಮಂತನು ದೂರದರ್ಶಿಯಂತ್ರ(Telescope)ದಿಂದ ಲಂಕೆಯನ್ನು ನೋಡುವುದು, ಸಮುದ್ರಲಂಘನ, ರಾವಣನ ಅರಮನೆಯನ್ನು ಹುಡುಕುವುದು, ಸೇತುಬಂಧನ, ವಾನರ ಸೇನೆಯೊಡನೆ ರಾಮಲಕ್ಷ್ಮಣರು ಯುದ್ಧಕ್ಕೆ ಹೊರಡುವುದು, ಯುದ್ಧ, ಇಂದ್ರಜಿದ್ವಧ, ರಾವಣ–ರಾಮ ಯುದ್ಧ (ರಾಮನ ಧ್ವಜದಲ್ಲಿ ಹಂಸವಿದೆ), ರಾವಣವಧ, ರಾಮನ ವಿಜಯೋತ್ಸವ, ಪುಷ್ಪಕವಿಮಾನದಲ್ಲಿ ರಾಮಲಕ್ಷ್ಮಣ ಸೀತಾ, ರಾಮನ ಆಗಮನ–ವಿಶ್ವರೂಪ ದರ್ಶನ, ಹನುಮಂತನು ಭರತನಿಗೆ ಸುದ್ದಿಯನ್ನು ತಿಳಿಸುವುದು, ರಾಮಪಟ್ಟಾಭಿಷೇಕ. ಉತ್ತರ ಗರ್ಭಗುಡಿಯ ಪೂರ್ವದಲ್ಲಿ ಕಿರಾತಾರ್ಜುನೀಯ–ಅರ್ಜುನನು ವರಾಹವನ್ನು ಸಂಹರಿಸಿ ಶಿವನೊಡನೆ ಯುದ್ಧಮಾಡಿ ಪಾಶುಪತ ಪಡೆಯುವನು. ನವರಂಗದ ಈಶಾನ್ಯದಲ್ಲಿ ಅಷ್ಟದಿಕ್ಪಾಲಕರು ನರಸಿಂಹನನ್ನು ನೋಡಲು ಬರುತ್ತಿರುವರು. ಮುಖಮಂಡಪದ ಉತ್ತರದಲ್ಲಿ ಪೂರ್ವದಿಂದ ಹಿರಣ್ಯಕಶಿಪು–ಪ್ರಹ್ಲಾದ, ಪ್ರಹ್ಲಾದನ ಹಿಂಸೆ, ಹಿರಣ್ಯಕಶಿಪು, ಸ್ತಂಭದಲ್ಲಿ ನರಸಿಂಹನು ಅವತರಿಸಿ ಹಿರಣ್ಯಕಶಿಪುವನ್ನು ಸಂಹರಿಸುವುದು.

ಮುಖಮಂಡಪದ ಸುತ್ತಲೂ ಪೌರಾಣಿಕ ಪಟ್ಟಿಕೆಯ ಮೇಲೆ ಶಿಖರಗಳಿವೆ. ಅದರ ಮೇಲೆ ಕಟಾಂಜನದ ಫಲಕಗಳಲ್ಲಿ ನರ್ತಕ, ಗಾಯಕ, ರತಿಬಂಧ ವಿಗ್ರಹಗಳಿವೆ. ಉತ್ತರ ಕಟಾಂಜನದ ಮೇಲೆ ದರ್ಬಾರಿನಲ್ಲಿ ಕುಳಿತಿರುವ ಒಬ್ಬ ಅಧಿಕಾರಿ ಇರುವನು. ಬಹುಶಃ ದೇವಾಲಯವನ್ನು ಕಟ್ಟಿಸಿದವನಾಗಿರಬಹುದು.

ಗೋಡೆಯನ್ನು ಹಾರ್ನಹಳ್ಳಿಯಲ್ಲಿದ್ದಂತೆ ಪಟ್ಟಿಕೆಯಿಂದ ಎರಡು ಭಾಗ ಮಾಡಿರುವರು. ಈ ಪಟ್ಟಿಕೆಯ ಮೇಲೆ ಕೀರ್ತಿಮುಖ, ಲತಾ, ಮಣಿಸಾಲು ಇವೆ. ಗೋಡೆಯ ಮೇಲ್ಭಾಗದಲ್ಲಿ ಶಿಖರಗಳಲ್ಲಿ ಯಕ್ಷರು, ದೇವತೆಗಳು ಇರುವರು. ಕೆಳಭಾಗದಲ್ಲಿ ಎರಡಡಿ ಎತ್ತರದ ೧೪೦ ವಿಗ್ರಹಗಳಿವೆ. ಅನೇಕವನ್ನು ಮಲ್ಲಿತಮ್ಮ, ಚಿಕ್ಕಮಲ್ಲಿತಮ್ಮರು ಮಾಡಿರುವರು.

ಪೂರ್ವದಿಂದ ಪ್ರದಕ್ಷಿಣೆಯಾಗಿ ಎರಡು ವಿಗ್ರಹಗಳು ಮಂಡಪದಲ್ಲಿವೆ. ನವರಂಗದ ಈಶಾನ್ಯದಿಂದ ಕೇಶವ, ಪರಶುರಾಮ, ಲಕ್ಷ್ಮೀನರಸಿಂಹ "ಮಲಿತಂಮ"; ಕಾಳಿಂಗಮರ್ದನ, ತಾಳಧಾರಿಣಿ, ನಾರಾಯಣ, ಪದ್ಮ ಫಲ ಹಿಡಿದ ಸ್ತ್ರೀ, ಹರಿಹರ (ಅಕ್ಷಮಾಲಾ ತ್ರಿಶೂಲ ಚಕ್ರ ಶಂಖ), ಪದ್ಮ ಫಲದ ಸ್ತ್ರೀ, ಧರಣೀವರಾಹ, ಇಬ್ಬರು ದೇವಿಯರು, ಗರುಡ, "ಮಲ್ಲಿ ತಂಮ"; ಮಾಧವ ಇಬ್ಬರು ದೇವಿಯರು, ಬಲಿ–ವಾಮನ.

ದಕ್ಷಿಣ ಗರ್ಭಗುಡಿಯ ದಕ್ಷಿಣ—ಕಾಲನ್ನೆತ್ತಿರುವ ತ್ರಿವಿಕ್ರಮ, ಪುಷ್ಪಧಾರಿಣಿ, ಗೋವರ್ಧನಧಾರಿ, ಪದ್ಮ ಫಲದ ಸ್ತ್ರೀ, ಲಕ್ಷ್ಮೀನಾರಾಯಣ, ಇಬ್ಬರು ದೇವಿಯರು, ಗೋವಿಂದ, ವಿಷ್ಣು, ಶಿಲ್ಪಿ "ಪಮಾಯನ"; ಮೋಹಿನಿ, ತಾಂಡವ ಸರಸ್ವತಿ.

ದಕ್ಷಿಣ ಗರ್ಭಗುಡಿಯ ಪಶ್ಚಿಮ—ಶ್ಮಶ್ರುಧಾರಿ ಬ್ರಹ್ಮ, ಮಧುಸೂದನ, ಇಬ್ಬರು ದೇವಿಯರು "ಮಲಿತಂಮ", ಲಕ್ಷ್ಮೀನಾರಾಯಣ, ಇಬ್ಬರು ಚಾಮರಧಾರಿಣಿಯರು, ಪದ್ಮಫಲದ ಸ್ತ್ರೀ, ಸ್ತ್ರೀ ಶುಕ ಮತ್ತು ಫಲ.

ನವರಂಗದ ನೈರುತ್ಯ—ಮೋಹಿನಿ-ಕಪಿ, ವಾಮನ ಇಬ್ಬರು ದೇವಿಯರು, ಐರಾವತದಮೇಲಿನ ಇಂದ್ರ-ಶಚೀ ಕೃಷ್ಣ-ಸತ್ಯಭಾಮೆಯರೊಡನೆ ಯುದ್ಧಮಾಡುವರು; ವಾಮನ ದೇವಿ "ಮಲ್ಲಿತಂಮ", ಶ್ರೀಧರ, ಇಬ್ಬರು ಪರಿಚಾರಕರು, "ಶ್ರೀಧರ ದೇವರು-ಮಲ್ಲಿತಂಮ", ದಕ್ಷಿಣದ ಪಕ್ಕದಲ್ಲಿ

ಹ ೯ ಸಿ ೨ ಟಹ ೬	ರೊ ೨ ಪಾ ೧	ಇದರ ಎರಡು ಪಕ್ಕಗಳಲ್ಲಿ ಇಬ್ಬರು ಪರಿಚಾರಿಕೆಯರು,

ಗರುಡ.

ಮುಖ್ಯ ಗರ್ಭಗುಡಿಯ ದಕ್ಷಿಣದಲ್ಲಿ–ಉಗ್ರನರಸಿಂಹ, ಪ್ರಹ್ಲಾದ, ವೇಣುಗೋಪಾಲ ಚಾಮರಧಾರಿಣಿ, ಹಲಾಯುಧ, ಹೃಷೀಕೇಶ, ಬಲದಲ್ಲಿ ಲಕ್ಷ್ಮೀ, ವೈಕುಂಠನಾರಾಯಣ, ಇಬ್ಬರು ಚಾಮರಧಾರಿಣಿಯರು, ಕೆಳಗೆ "ಸನಮಾದ (ಸಣ್ಣಮಾದ) ಬಡಗಿ ಮಲ್ಲೈಯನ ಮಗ ಕೈಯ ಮಾಡಿದ." ಸುಮಾರು ಹದಿನಾರನೆಯ ಶತಮಾನದ ಅಕ್ಷರ. ಬಹುಶಃ ಸಣ್ಣಮಾದನು

ಮುರಿದ ಎಡಗೈಯನ್ನು ಸರಿಪಡಿಸಿರಬಹುದು. ಪದ್ಮನಾಭ, ಇಬ್ಬರು ದೇವಿಯರು, ನೃತ್ಯಲಕ್ಷ್ಮೀ (ಅಷ್ಟಭುಜ–ಪಾಶ, ಲಂಬಹಸ್ತ, ಪದ್ಮ, ಅಂಕುಶ, ಸ್ವರ್ಗ, ಪಾಶ, ಫಲ, ಕಲಶ), ಕೆಳಗೆ ಮೃದಂಗದವರು, "ಮಲಿತಂಮ ಲಕ್ಷುಮಿ ದೇವಿ."

ಮುಖ್ಯ ಗರ್ಭಗುಡಿ ಪಶ್ಚಿಮ--ಯೋಗನಾರಾಯಣ, ದಾಮೋದರ ದೇವಿಯರು, "ದಾಮೋದರ ದೇವರು ಮಲ್ಲಿತಂಮ", ಲಕ್ಷ್ಮೀನಾರಾಯಣ, ದೇವಿಯರು. ಲಕ್ಷ್ಮಿಯ ಕೆಳಗೆ ಗಜ, ಸಂಕರ್ಷಣ ದೇವಿಯರು, ಆಸೀನ ಲಕ್ಷ್ಮೀ (ಅಭಯ ಶಂಖ ಚಕ್ರ ಕಲಶ).

ಗರ್ಭಗುಡಿ ಸುಕನಾಸಿಯ ಉತ್ತರದಲ್ಲಿ–ದಶಭುಜ ನೃತ್ಯಸರಸ್ವತಿ [ಲಂಬ ಹಸ್ತ ಪದ್ಮ ಭಗ್ನ ಅಂಕುಶ ಚಿನ್ಮುದ್ರಾ ಪಾಶ ಭಗ್ನ ರತ್ನ (?) ಫಲ], ವಾಸುದೇವ ಎಡದಲ್ಲಿ ಲಕ್ಷ್ಮಿ, "ವಾಸುದೇವ", ಸ್ತ್ರೀ ಶುಕ ಫಲ, ಕೋದಂಡರಾಮ ಲಕ್ಷ್ಮಣ ಸೀತಾ ಹನುಮಂತ, ಪ್ರದ್ಯುಮ್ನ ಇಬ್ಬರು ದೇವಿಯರು, ಆಸೀನ ಸರಸ್ವತಿ (ಅಕ್ಷಮಾಲಾ ಅಂಕುಶ ಪಾಶ ಪುಸ್ತಕ), ಉಗ್ರನರಸಿಂಹ, ಇಬ್ಬರು ದೇವಿಯರು, ಗರುಡ.

ನವರಂಗದ ವಾಯವ್ಯ–ಅನಿರುದ್ಧ ದೇವಿ, ಪ್ರದ್ಯುಮ್ನ ದೇವಿ, ಪುರುಷೋತ್ತಮ, ಷಡ್ಭುಜ ನೃತ್ಯಪಾರ್ವತಿ (ಅಕ್ಷಮಾಲಾ ಲಂಬ ಅಂಕುಶ ಸ್ವರ್ಗ ಹಸ್ತ ಪಾಶ ಫಲ), ಬಲದಲ್ಲಿ ಗಣೇಶ ಎಡದಲ್ಲಿ ಷಣ್ಮುಖ, ಪೀಠದಲ್ಲಿ ಹಲ್ಲಿ "ಚಿಕಮಲಿ ತಂಮ", ಮಹಿಷಮರ್ದಿನಿ "ಚಿಕಮಲಿ ತಂಮ", ಅಧೋಕ್ಷಜ ದೇವಿ, ಸ್ತ್ರೀ ಶುಕ ಫಲ, ಮೋಹಿನೀ–ಸರ್ಪ.

ದಕ್ಷಿಣ ಗರ್ಭಗುಡಿಯ ಪಶ್ಚಿಮ–ಲಕ್ಷ್ಮೀನಾರಾಯಣ ದೇವಿಯರು, ಸ್ಥಾನಕ ನರಸಿಂಹ, ದೇವಿಯರು, ನೃತ್ಯ ವೈಷ್ಣವೀ (?)–ಅಷ್ಟಭುಜಗಳಲ್ಲಿ ಅಕ್ಷಮಾಲಾ ಲಂಬ ಕತ್ತಿ ಶಂಖ ಸ್ವರ್ಗ ಹಸ್ತ ಚಕ್ರ ಗುರಾಣಿ ಕಲಶ.

ಉತ್ತರ ಗರ್ಭಗುಡಿಯ ಉತ್ತರ–ಸ್ಥಾನಕ ಷಡ್ಭುಜ ಭೈರವಿ (ಕತ್ತಿ ತ್ರಿಶೂಲ ಬಾಣ ಡಮರು ಪಾತ್ರ ಪಾತ್ರ ?), ಭೇತಾಳಗಳು, ನಾಯಿ, ನರ್ತಿಸುತ್ತ ತಾಳಹಾಕುತ್ತಿರುವ ಸ್ತ್ರೀ, ಅಚ್ಯುತ ಬಲದಲ್ಲಿ ದೇವಿ, ಲಕ್ಷ್ಮೀನಾರಾಯಣ ದೇವಿಯರು, ಜನಾರ್ದನ, ದೇವಿಯರು, ಯೋಗ ನರಸಿಂಹ.

ಉತ್ತರ ಗೋಡೆಯ. ಪೂರ್ವ–ವೇಣುಗೋಪಾಲ, ದಕ್ಷಿಣಾಮೂರ್ತಿ (ನಿಲುವಂಗಿ, ಕುಲ್ಲಾವಿ, ದಂಡ, ಪಾತ್ರ), ಉಪೇಂದ್ರ ದೇವಿ, ಲಕ್ಷ್ಮೀ ನಾರಾಯಣ ದೇವಿಯರು, ಪದ್ಮಫಲ ಹಿಡಿದ ಸ್ತ್ರೀ.

ನವರಂಗದ ಈಶಾನ್ಯ–ಸ್ಥಾನಕ ಲಕ್ಷ್ಮೀ (ಪದ್ಮ ಚಕ್ರ ಶಂಖ ಕಲಶ) ಕೆಳಗಿನ ಶಾಸನ ಹೋಗಿದೆ. ಉಪೇಂದ್ರ ದೇವಿಯರು, ತಾಂಡವ ಗಣೇಶ ಪೀಠದಲ್ಲಿ ಮೂಷಕ "ಚಿಕಮಲಿತಂಮ", ಆಸೀನ ಸರಸ್ವತಿ, ಹರಿ ದೇವಿ. ಮಂಡಪದೊಳಗೆ ಕೃಷ್ಣ.

ಮೇಲ್ಛಾವಣಿಯ ಬೋದಿಗೆಗಳಲ್ಲಿ ಮಣಿಸರ ಕೀರ್ತಿಮುಖಗಳಿವೆ. ಎರಡು ಮೇಲ್ಛಾವಣಿಗಳ ಅಂಚಿನಲ್ಲಿ ಕೈಪಿಡಿಗೋಡೆ ಶಿಖರಗಳಿಂದ ಅಲಂಕೃತವಾಗಿದೆ. ಇದರಮೇಲೆ ಈಚೆಗೆ ತಗ್ಗಾದ ಇಟ್ಟಿಗೆ ಗೋಡೆಯನ್ನು ಕಟ್ಟಿರುವರು. ಶಿಖರವು ಮೂರು ಅಂತಸ್ತುಗಳಲ್ಲಿ ಸಣ್ಣ ಗೋಪುರಗಳನ್ನು ಹೊಂದಿದೆ. ಇದರಮೇಲೆ ಇಟ್ಟಿಗೆಯಿಂದ ಶಿಖಾಂತವನ್ನೂ ಲೋಹದ ಕಳಶವನ್ನೂ ಈಚೆಗೆ ಸೇರಿಸಿರುವರು. ಸುಕನಾಸಿಯಮೇಲೆ ಬಂದಿರುವ ಭಾಗವನ್ನು ಗಾರೆಯಿಂದ ಮುಚ್ಚಿ ಸುಣ್ಣ ಬಳಿದಿರುವರು.

ಹಳೆಯ ಮುಖಮಂಡಪದಲ್ಲಿ ಕಲ್ಲಿನ ಜಗತಿಗಳು, ದುಂಡು ಸ್ತಂಭಗಳು ಇವೆ. ಮೇಲ್ಛಾವಣಿ ನುಗ್ಗಿಹಳ್ಳಿಯಂತಿದೆ. ಭುವನೇಶ್ವರಿಯಲ್ಲಿ ಅಷ್ಟ ದಿಕ್ಪಾಲಕರು, ಸಿಂಹಗಳ ತೊಲೆಗಳು ಇವೆ. ಮುಖಮಂಡಪದ ದ್ವಾರ ಪಾಲಕ ವಿಗ್ರಹಗಳು ಪಾಳೆಯಗಾರರ ಕಾಲದ್ದಾಗಿವೆ.

ನವರಂಗ ದ್ವಾರದಲ್ಲಿ ದ್ವಾರಪಾಲಕರು, ಮೇಲೆ ಕಾಳಿಂಗಮರ್ದನ ಇವೆ. ನವರಂಗದ ಒಳಗೆ ಸ್ತಂಭಗಳು ದುಂಡಾಗಿವೆ. ಮೇಲ್ಛಾವಣಿಗಳಲ್ಲಿ ರೇಖಾಚಿತ್ರಗಳಿವೆ. ಎರಡನೆಯ ಭುವನೇಶ್ವರಿಯ ಪದ್ಮದ ಕರ್ಣಿಕೆಯಲ್ಲಿ ಅಗ್ನಿವಿಗ್ರಹವಿದೆ. ಪಶ್ಚಿಮ ಗೋಡೆಯಲ್ಲಿರುವ ಎರಡು ಗೂಡುಗಳಲ್ಲಿ ಗಣೇಶ ಚಾಮುಂಡಾವಿಗ್ರಹಗಳಿವೆ.

ದಕ್ಷಿಣ ಗರ್ಭಗುಡಿಯಲ್ಲಿ ಆರು ಅಡಿ ಎತ್ತರದ ವೇಣುಗೋಪಾಲ, ಉತ್ತರ ಗರ್ಭಗುಡಿಯಲ್ಲಿ ಗರುಡಪೀಠದ ಮೇಲೆ ಲಕ್ಷ್ಮೀನರಸಿಂಹ ವಿಗ್ರಹಗಳಿವೆ.

ಮುಖ್ಯ ಗರ್ಭಗುಡಿಯ ಸುಕನಾಸಿ ದ್ವಾರದಲ್ಲಿ ಜಾಲಂಧ್ರ,

ಮೇಲ್ಚಾವಣಿಯಲ್ಲಿ ಒಂಬತ್ತು ಪದ್ಮಗಳು ಇವೆ. ಈ ಸುಕನಾಸಿಯಲ್ಲಿ ವಾಹನಗಳನ್ನು ನವರಂಗದಲ್ಲಿ ಉತ್ಸವಮೂರ್ತಿಯನ್ನು ಇಟ್ಟಿರುವರು. ಗರ್ಭಗುಡಿಯ ದ್ವಾರದಲ್ಲಿ ದ್ವಾರಪಾಲಕರು, ಮೇಲೆ ಗಜಲಕ್ಷ್ಮಿ ಇದೆ. ಮೇಲ್ಚಾವಣಿ ಒಂದೇ ಕಲ್ಲಿನಲ್ಲಿ ಕೊರೆದ ಪದ್ಮವಾಗಿದೆ. ಗರುಡಪೀಠದ ಮೇಲೆ ಪದ್ಮ ಚಕ್ರ ಗದಾ ಶಂಖ ಹಿಡಿದಿರುವ ಶ್ರೀಧರ ವಿಗ್ರಹವಿದೆ. ಶ್ರೀಧರ ಮುಖ್ಯದೇವತೆಯಾಗಿರುವುದು ಇನ್ನೆಲ್ಲಿಯೂ ಕಂಡುಬರುವುದಿಲ್ಲ.

ಪಾಳೆಯಗಾರರ ಕಾಲದ ಒಂದು ಮಂಡಪವನ್ನು ಮುಖಮಂಡಪದ ಮುಂದೆ ಸೇರಿಸಿರುವರು. ಇಲ್ಲಿನ ಮೂರು ಗರ್ಭಗುಡಿಗಳಲ್ಲಿ ಎರಡು ಖಾಲಿಯಾಗಿವೆ. ಮೂರನೆಯದರಲ್ಲಿ ಈಚೆಗೆ ವಿಷ್ಣುವಿಗ್ರಹವಿದೆ. ಇಲ್ಲಿ ಆರು ಅಡಿ ಎತ್ತರದ ಮರದ ಕಂಬವಿದೆ. ಲಕ್ಷ್ಮೀನರಸಿಂಹ ವಿಗ್ರಹ ಹಾವಿನ ಹುತ್ತದಲ್ಲಿದ್ದಿತೆಂದೂ ಅದರ ಮೇಲೆ ಬೆಳೆದಿದ್ದ ತುಳಸೀಗಿಡದ ಸ್ತಂಭವೆಂದೂ ಹೇಳುವರು. ಸ್ತಂಭದಮೇಲೆ ಕೆತ್ತನೆ ಕೆಲಸವಿದೆ.

ಮಹಾದ್ವಾರವು ವಿಜಯನಗರ ಕಾಲದ್ದಾಗಿದೆ. ಇದರ ಮೇಲಿನ ಗೋಪುರ ಹೋಗಿದೆ. ದಕ್ಷಿಣದಲ್ಲಿ ವಿಜಯನಗರ ಕಾಲದ ಲಕ್ಷ್ಮೀಗುಡಿ ಇದೆ. ಆದರೆ ನವರಂಗಕ್ಕೆ ಹೊಯ್ಸಳ ದೇವಾಲಯದ ನಾಲ್ಕು ಕಂಬಗಳನ್ನುಪಯೋಗಿಸಿರುವರು. ಈ ಕಂಬಗಳು ಘಂಟಾಕಾರವಾಗಿ ೧೬, ೩೨ ಕೋಣ ನಕ್ಷತ್ರಗಳನ್ನು ಹೊಂದಿವೆ. ವಾಯುವ್ಯದಲ್ಲಿರುವ ಎರಡು ಮಂಡಪದಲ್ಲಿ ಕ್ರಿ. ಶ. ೧೫೧೫ನೆಯ ಶಾಸನವಿದೆ. ಮಹಾದ್ವಾರದ ಮುಂದೆ ಎರಡು ಬಳಪದಕಲ್ಲಿನ ಆನೆಗಳನ್ನು ತಂದಿಟ್ಟಿರುವರು.

ನರಸಿಂಹ ದೇವಾಲಯದ ಉತ್ತರದಲ್ಲಿ ಹೊಯ್ಸಳ ಕಾಲದ ಗಂಗಾಧರೇಶ್ವರ ಗುಡಿಯಿದೆ. ಗರ್ಭಗುಡಿಯಲ್ಲಿ ಬಳಪದಕಲ್ಲಿನ ಲಿಂಗ, ಸುಕನಾಸಿ, ದ್ವಾರದಲ್ಲಿ ಜಾಲಂದ್ರ, ಮುಖಮಂಡಪ, ಉತ್ತರ ದಕ್ಷಿಣಗಳಲ್ಲಿ ದ್ವಾರಗಳೂ ಇವೆ. ಇದಕ್ಕೆ ಪಶ್ಚಿಮದಲ್ಲಿ ಬಿದ್ದುಹೋಗಿರುವ ಈಶ್ವರನ ಗುಡಿ ಇದೆ. ಗರ್ಭಗುಡಿ ಸುಕನಾಸಿಗಳು ಪೂರ್ತಿ ಬಿದ್ದುಹೋಗಿವೆ. ನವರಂಗದ ದಕ್ಷಿಣದಲ್ಲಿ ೬೪ ಕೋಣಗಳ ನಕ್ಷತ್ರಾಕಾರದ ಸ್ತಂಭಗಳು ಮಂಡಪದಲ್ಲಿವೆ. ಮಂಡಪದ ಪಕ್ಕದಲ್ಲಿ ಸುಂದರವಾದ ಬಳಪದ ಕಲ್ಲಿನ ಆನೆ ಇದೆ.

ನರಸಿಂಹ ದೇವಾಲಯಕ್ಕೆ ವಾಯುವ್ಯದಲ್ಲಿ ಒಂದು ಜೈನ ಬಸದಿ ಇದೆ. ಗೋಡೆಗಳು ಸಾಮಾನ್ಯವಾಗಿವೆ. ಮುಂದಿನ ದ್ವಾರವು ಅಲಂಕೃತವಾಗಿದೆ. ಹೊರಗಿನ ಗೋಡೆಗಳ ಮೇಲ್ಭಾಗದಲ್ಲಿ ಜನರು ನರ್ತಕ ಗಾಯಕರ ವಿಗ್ರಹಗಳಿವೆ. ಬಹುಶಃ ಈ ದೇವಾಲಯವನ್ನು ಹಳೆಯ ಬಸದಿಯ ಕಲ್ಲುಗಳಿಂದ ಕಟ್ಟಿರಬಹುದು.

೫೯. ಬೆಳವಾಡಿ : ಹಳೆಯಬೀಡಿಗೆ ಉತ್ತರದಲ್ಲಿ ಬಾಣಾವರ–ಚಿಕ್ಕಮಗಳೂರು ರಸ್ತೆಯಲ್ಲಿ ಬೆಳವಾಡಿ ಇದೆ. ಶೃಂಗೇರಿ ಜಹಗೀರಿಗೆ ಸೇರಿಕೊಂಡಿತ್ತು. ಇಲ್ಲಿನ ವೀರನಾರಾಯಣ ದೇವಾಲಯದ ಆಗ್ನೇಯ ಮೂಲೆಯಲ್ಲಿ ಗೋಪಾಲಕೃಷ್ಣ ಗುಡಿಯ ಬಲಗಡೆಗೆ ಒಂದು ದೊಡ್ಡ ಶಾಸನವಿದೆ. ಈಚೆಗೆ ಇದು ಬಿದ್ದು ಎರಡು ಹೋಳಾಗಿದೆ. ಮೇಲ್ಭಾಗದಲ್ಲಿ ಯೋಗನರಸಿಂಹ, ನಾರಾಯಣ, ವೇಣುಗೋಪಾಲ ವಿಗ್ರಹಗಳಿವೆ. ಮತ್ತೊಂದು ಹೊಯ್ಸಳ ಶಾಸನ ಪಕ್ಕದಲ್ಲಿದೆ. ಇದರಲ್ಲಿ ಶಕ ೧೧೨೮ (ಕ್ರಿ. ಶ. ೧೨೦೬)ರಲ್ಲಿ ವೀರನಾರಾಯಣ ಪೂಜೆಗೆ ಭೂದಾನ ಮಾಡಿದಂತೆ ಹೇಳಿರುವುದರಿಂದ ಅದಕ್ಕೆ ಮುಂಚೆಯೇ ದೇವಾಲಯವಿದ್ದಿರಬೇಕು.

ದೇವಾಲಯವು ತ್ರಿಕೂಟಾಚಲವೆಂದು ಹೇಳಬಹುದಾದರೂ ಪಶ್ಚಿಮ ಭಾಗವನ್ನು ಮೊದಲು ರಚಿಸಿ, ಅನಂತರ ಪೂರ್ವ ಭಾಗವನ್ನು ಸೇರಿಸಿದಂತೆ ಕಂಡುಬರುವುದು. ಪಶ್ಚಿಮ ಭಾಗದಲ್ಲಿ ಗರ್ಭಗೃಹ, ಸುಕನಾಸಿ, ನವರಂಗ, ಮುಖಮಂಡಪಗಳಿವೆ. ಈ ಭಾಗಗಳು ಅಂಗಳದ ಮಧ್ಯದಲ್ಲಿ ಪೀಠದಮೇಲಿವೆ. ಪೀಠದ ಪೂರ್ವ ಭಾಗದಲ್ಲಿ ಅಂತರಾಳವಿದ್ದು ಅದು ದೇವಾಲಯವನ್ನೆಲ್ಲ ಆವರಿಸಿಕೊಂಡಿದ್ದಿತೆಂದು ಕಂಡುಬರುವುದು. ಇದರ ಪೂರ್ವದಲ್ಲಿ ಮತ್ತೊಂದು ಭಾಗಕ್ಕೆ ಹೋಗುವ ದ್ವಾರವಿದೆ. ಪೂರ್ವ ಭಾಗದಲ್ಲಿ ದೊಡ್ಡ ಸಭಾಮಂಡಪ, ಉತ್ತರ ದಕ್ಷಿಣಗಳಲ್ಲಿ ಸುಕನಾಸಿ ಗರ್ಭಗೃಹಗಳಿವೆ. ಈ ಗರ್ಭಗೃಹಗಳಲ್ಲಿ ಗೋಪಾಲಕೃಷ್ಣ ಯೋಗ ನರಸಿಂಹ ವಿಗ್ರಹಗಳಿವೆ. ಈ ಗರ್ಭಗುಡಿಗಳ ಗೋಡೆಗಳಲ್ಲಿ ಮಾತ್ರ ವಿಗ್ರಹಗಳಿವೆ. ವೀರನಾರಾಯಣ ಗರ್ಭಗುಡಿಯ ಗೋಡೆಯ ಮೇಲೆ ಹೆಚ್ಚು ಅಲಂಕಾರಗಳಿಲ್ಲ. ಈ ಸಭಾಮಂಡಪದ ಪೂರ್ವದಲ್ಲಿ ಉಪ್ಪರಿಗೆ ಅಥವಾ ಮಹಾದ್ವಾರವಿದೆ. ಮೊದಲು ಇದರ ಮೂಲಕ ಪ್ರವೇಶವಿದ್ದಿತು.

ವೀರನಾರಾಯಣ ಗುಡಿಗೆ ಬೇರೆ ಜಗತಿ ಇಲ್ಲ. ಗೋಡೆಯ ಪೀಠಿಕೆಯಲ್ಲಿ ಆರು ಪಟ್ಟಿಕೆಗಳಿವೆ. ನಾಲ್ಕು ಐದನೇ ಸಾಲುಗಳಲ್ಲಿ ಕೀರ್ತಿಮುಖ ಮಕರಗಳಿಗಾಗಿ ಕೆತ್ತನೆ ಇದೆ. ಗೋಡೆಯ ಮೇಲೆ ಅಲಂಕಾರಗಳಿಲ್ಲ. ಮೇಲ್ಚಾವಣಿಯ ಬೋದಿಗೆಗಳು ಮಣಿಸಾಲುಗಳಿಂದ ಅಲಂಕೃತವಾಗಿವೆ. ಕೈಪಿಡಿ ಗೋಡೆಯ ಮೇಲೆ ಇತರ ಗರ್ಭಗುಡಿಗಳ ಕೈಪಿಡಿ ಗೋಡೆಗಳಂತೆಯೇ ಮಕರ ತೋರಣ ವಿಗ್ರಹಗಳಿವೆ. ಈ ಕೈಪಿಡಿ ಗೋಡೆ ದೇವಾಲಯದ ಸುತ್ತಲೂ ಇದೆ.

ಬಳಪದಕಲ್ಲಿನ ಶಿಖರವು ಮೂರು ಅಂತಸ್ತಿನದಾಗಿ ಒಂದು ದೊಡ್ಡ ಕಲಶವನ್ನು ಹೊಂದಿದೆ. ಮುಂದೆ ಚಾಚಿಕೊಂಡಿದ್ದ ಭಾಗದಲ್ಲಿದ್ದ ಸಳ ವಿಗ್ರಹಗಳು ಹೋಗಿವೆ. ಪಶ್ಚಿಮ ಶಿಖರದ ಮುಂದೆ ಕೀರ್ತಿಮುಖದಲ್ಲಿ ಸ್ಥಾನಕ ವಿಷ್ಣು ವಿಗ್ರಹವಿದೆ. ಪಶ್ಚಿಮ ಶಿಖರದಮೇಲೆ ವೇಣುಗೋಪಾಲ, ಕಾಳಿಂಗಮರ್ದನ, ವಿಷ್ಣುವಿನ ಪ್ರಭೇದಗಳು, ಯಕ್ಷಯಕ್ಷಿಣಿಯರಿರುವರು.

ನವರಂಗ ದ್ವಾರದಲ್ಲಿ ದ್ವಾರಪಾಲಕರು, ಮೇಲೆ ಗಜಲಕ್ಷ್ಮಿ ಇವೆ. ಇದರ ಗೋಡೆಗಳು ಮೊದಲು ಸುತ್ತಲೂ ಮುಚ್ಚಿಕೊಂಡಿದ್ದು ಈಚೆಗೆ ಒಂದು ಕಿಟಕಿಯನ್ನಿಟ್ಟಿರುವರು. ನವರಂಗದಲ್ಲಿ ಗೂಡುಗಳಿಲ್ಲ. ಸ್ತಂಭಗಳು ಸಾಮಾನ್ಯವಾಗಿವೆ. ನವರಂಗಕ್ಕೆ ಎರಡು ಮೇಲ್ಚಾವಣಿಗಳಿದ್ದವು. ಕೆಳಗಿನ ಸ್ತಂಭಗಳ ಮೇಲೆ ಸಣ್ಣ ಸ್ತಂಭಗಳನ್ನಿಟ್ಟು ಎರಡನೆ ಮೇಲ್ಚಾವಣಿಯನ್ನು ಮಾಡಿರುವರು. ಎರಡು ಚಾವಣಿಗಳಿಗೂ ಮಧ್ಯದಲ್ಲಿರುವ ಅಂತರದಲ್ಲಿ ಭಂಡಾರವನ್ನು ಇಡುತ್ತಿದ್ದರು. ಭುವನೇಶ್ವರಿಗಳಲ್ಲಿ ರೇಖಾ ಚಿತ್ರಗಳಿವೆ. ಮಧ್ಯದ ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರು ಸಿಂಹ-ಸಳ, ಇತ್ಯಾದಿ ವಿಗ್ರಹಗಳೂ, ಮಧ್ಯದಲ್ಲಿ ಕರ್ಣಿಕೆ ಇವೆ.

ಸುಕನಾಸಿ ಮೊದಲು ತೆರದಿದ್ದಿತು. ಈಚೆಗೆ ಒಂದು ಗೋಡೆಯನ್ನು ಕಟ್ಟಿರುವರು. ಮೇಲ್ಚಾವಣಿಯಲ್ಲಿ ಅಷ್ಟಕೋಣ ವೃತ್ತಗಳಿವೆ. ಗರ್ಭಗೃಹದ್ವಾರದ ಕೆತ್ತನೆ ಕೆಲಸ ಮುಚ್ಚಿಹೋಗಿದೆ. ಮೇಲ್ಚಾವಣಿಯಲ್ಲಿ ಹದಿನಾರು ಹೂವುಗಳಿವೆ. ಗರುಡ ಪೀಠದಮೇಲೆ ಸುಮಾರು ಆರೂವರೆ ಅಡಿ ಎತ್ತರದ ವೀರನಾರಾಯಣ ವಿಗ್ರಹ ಸುಂದರವಾಗಿ ಅಲಂಕೃತವಾಗಿದೆ. ಶಂಖ (ಭಗ್ನ) ಪದ್ಮ ಗದಾ ಚಕ್ರ (ಭಗ್ನ) ನಾಲ್ಕು ಕೈಗಳಲ್ಲಿವೆ. ಪಕ್ಕದಲ್ಲಿ ದೇವಿಯರು, ತೋರಣದಲ್ಲಿ ದಶಾವತಾರ ಇವೆ.

ಮುಖಮಂಡಪದ ಗೋಡೆಯಲ್ಲಿ ಐದು ಪಟ್ಟಿಕೆಗಳು ಇವೆ. ನಾಲ್ಕು ಮತ್ತು ಐದನೆ ಪಟ್ಟಿಕೆ ಮಧ್ಯದಲ್ಲಿ ಕಂಬಗಳು ಪುಷ್ಪಗಳು ಇವೆ. ಇದರ ಮೇಲ್ಛಾವಣಿಯ ಬೋದಿಗೆ ಮತ್ತು ಬಗ್ಗಿರುವ ಕಟಾಂಜನದ ಮೇಲೆ ಕೆತ್ತನೆ ಕೆಲಸವಿಲ್ಲ. ಮಂಡಪದಲ್ಲಿ ಗೋಡೆಯ ಹತ್ತಿರ ಜಗತಿ ಪುಷ್ಪಗಳಿಂದ ಅಲಂಕೃತವಾಗಿದೆ. ಇಪ್ಪತ್ತೆರಡು ಕಂಬಗಳಲ್ಲಿ ಇಪ್ಪತ್ತು ದುಂಡಾಗಿವೆ. ಪೂರ್ವದಲ್ಲಿರುವ ಎರಡು ಮೂವತ್ತೆರಡು ಕೋಣದ ನಕ್ಷತ್ರಾಕಾರವಾಗಿವೆ. ಈ ಮಂಡಪದ ಪೂರ್ವದಲ್ಲಿ ಒಂದು ಅಂಕಣ ಅಂತರಾಳದೊಡನೆ ಸಂಬಂಧವಾಗಿದ್ದು, ಉತ್ತರ ದಕ್ಷಿಣಗಳಲ್ಲಿ ಮೆಟ್ಟಿಲುಗಳನ್ನು ಹೊಂದಿದ್ದಿತು. ಇದನ್ನು ಈಗ ಮುಚ್ಚಲಾಗಿದೆ. ಮೇಲ್ಛಾವಣಿಗಳಲ್ಲಿ ರೇಖಾಚಿತ್ರಗಳಿವೆ. ಮಧ್ಯದ ಭುವನೇಶ್ವರಿ ಮೂರು ವೃತ್ತಗಳು ನಾಗ ಅಥವಾ ತ್ರಿದಳ ಚಿಹ್ನೆಯು ಇವೆ.

ಇದಕ್ಕೆ ಪೂರ್ವದಲ್ಲಿ ಐದಂಕಣಗಳು ಸಣ್ಣ ದುಂಡಾದ ಕಂಬಗಳು ಇವೆ. ಇದರ ಸುತ್ತಲೂ ಬಳಪದಕಲ್ಲಿನ ತಳಪಾಯವಿರುವುದರಿಂದ ಬಹುಶಃ ಒಂದು ಅಂತರಾಳವಿದ್ದು ಅಂಗಳವನ್ನೆಲ್ಲ ಬಳಸಿಕೊಂಡಿದ್ದಿತು.

ದೇವಾಲಯದ ಪೂರ್ವದ ಭಾಗಕ್ಕೂ ಪಶ್ಚಿಮದ ಭಾಗಕ್ಕೂ ಮಧ್ಯದಲ್ಲಿ ಒಂದು ಬಾಗಿಲು ಇದೆ. ಈ ಬಾಗಿಲ ಪಕ್ಕಗಳಲ್ಲಿ ನಾಲ್ಕು ದಂತಗಳುಳ್ಳ ಎರಡು ಗಜಗಳಿವೆ.

ಪೂರ್ವ ಭಾಗದ ದೇವಾಲಯದ ಪೀಠಿಕೆಯಲ್ಲಿ ಮಂಡಪದ ಸುತ್ತಲೂ ನಾಲ್ಕು ಗರ್ಭಗುಡಿಯ ಸುತ್ತಲೂ ಆರು ಚಿತ್ರಪಟ್ಟಿಕೆಗಳಿವೆ. ಆದರೆ ಹೆಚ್ಚಾಗಿ ಕೆತ್ತನೆ ಕೆಲಸ ಮಾಡಿಲ್ಲ. ಮಂಡಪದ ನಾಲ್ಕು ಪಟ್ಟಿಕೆಗಳ ಮೇಲೆ ಶಿಖರಗಳು ಸಿಂಹ ಸಳ ಯಕ್ಷ ಯಕ್ಷಿಣಿ ವಿಗ್ರಹಗಳಿವೆ. ಇವುಗಳ ಮೇಲೆ ಬಾಗಿರುವ ಕಟಾಂಜನದಲ್ಲಿ ಕಂಬಗಳ ಮಧ್ಯದಲ್ಲಿ ಆಗ್ನೇಯದಿಂದ ಈ ವಿಗ್ರಹಗಳಿವೆ.

ಭೀಮ–ನಾಗರಾಜ ಯುದ್ಧ; ಸುಭದ್ರೆಯನ್ನು ಅಪಹರಿಸಿದ ಅರ್ಜುನನನ್ನು ಬಲರಾಮನು ಅಟ್ಟಿಕೊಂಡು ಬರುವುದು; ಪರಶುರಾಮನು ತಾಯಿಯ ಶಿರಚ್ಛೇದ ಮಾಡುವುದು; ವೇಣುಗೋಪಾಲ, ಧೇನುಕಾಸುರ ಸಂಹಾರ, ಗರ್ದಭಾಸುರ ಸಂಹಾರ.

ಮೂಲೆಯಲ್ಲಿ ಹಯಾಸುರ ಸಂಹಾರ, ಗೋವರ್ಧನಧಾರಿ, ಅರ್ಜುನನು ಸ್ನಾನಮಾಡುತ್ತಿದ್ದಾಗ ಕೃಷ್ಣನು ಅಭಿಮನ್ಯು ವಧೆಯ ವೃತ್ತಾಂತವನ್ನು ತಿಳಿಸುವುದು.

ಮೂಲೆ–ಕಾಳಿಂಗಮರ್ದನ, ಎರಡು ಕಪಿಗಳು, ಮೋಹಿನಿ-ಕಪಿ, ಮೋಹಿನಿ-ಭಸ್ಮಾಸುರ, ಮಿಥುನ, ನರ್ತಕ ಗಾಯಕರು. ಉತ್ತರ ಕಟಾಂಜನದಲ್ಲಿ ವಿಗ್ರಹಗಳಿಲ್ಲ.

ಗರ್ಭಗುಡಿಗಳ ಗೋಡೆಯನ್ನು ಕಾರ್ನಿಸಿನಿಂದ ಎರಡು ಭಾಗ ಮಾಡಿರುವರು, ಮೇಲ್ಭಾಗದಲ್ಲಿ ಶಿಖರಗಳಿವೆ. ಕೆಳಭಾಗದಲ್ಲಿ ಲತಾ ತೋರಣಗಳ ಕೆಳಗೆ ಸುಮಾರು ಎರಡೂವರೆ ಅಡಿ ಎತ್ತರದ ವಿಗ್ರಹಗಳಿವೆ. ಇವುಗಳ ಪೀಠದಮೇಲೆ ಪುಷ್ಪಲತೆಗಳಿವೆ. ಈ ವಿಗ್ರಹಗಳು ಸೋಮನಾಥ ಪುರದ ವಿಗ್ರಹಗಳಂತೆ ದಪ್ಪವಾಗಿ ಕುಳ್ಳಾಗಿ ಮುಖಗಳು ವೃತ್ತಾಕಾರ ವಾಗಿರುವುದರಿಂದ ಹದಿಮೂರನೆಯ ಶತಮಾನದ ಮಧ್ಯಭಾಗದವೆಂದು ನಿರ್ಧರಿಸಬಹುದು. ಬುದ್ಧ ವೇಣುಗೋಪಾಲ ವಿಗ್ರಹಗಳು ಗಮನಾರ್ಹ ವಾಗಿವೆ.

ಗೋಪಾಲಕೃಷ್ಣ ಗುಡಿಯ ಗೋಡೆಯ ಮೇಲೆ ಪೂರ್ವದಿಂದ ಪ್ರದಕ್ಷಿಣೆಯಾಗಿರುವ ವಿಗ್ರಹಗಳು :

ಪೂರ್ವಮುಖ–ಹರಿಹರ (ಅಕ್ಷಮಾಲಾ ತ್ರಿಶೂಲ ಚಕ್ರ ಶಂಖ), ಗರುಡ, ನಾರಾಯಣ, ಕೇಶವ, ವಾಮನ ದಂಡ ಕಮಂಡಲು ಹಿಡಿದಿರು ವನು, ಪರಿಚಾರಿಕೆ, ವಿಷ್ಣು (ಗದಾ ಪದ್ಮ ಶಂಖ ಚಕ್ರ), ಇಬ್ಬರು ದೇವಿಯರು, ನಾಲ್ವರು ಪರಿಚಾರಿಕೆಯರು, ಧ್ಯಾನಿಬುದ್ಧ (ಪದ್ಮಾಸನ ದಲ್ಲಿ ಕುಳಿತಿರುವನು. ಉಷ್ಣೀಷವಿಲ್ಲ; ಸಾಮಾನ್ಯವಾಗಿ ಪ್ರಭಾವಳಿ ಯಲ್ಲದೆ ಮತ್ತೆಲ್ಲಿಯೂ ಹೊಯ್ಸಳ ಶಿಲ್ಪದಲ್ಲಿ ಕಂಡುಬರುವುದಿಲ್ಲ), ವೇಣುಗೋಪಾಲ.

ದಕ್ಷಿಣ–ಕಾಳಿಂಗಮರ್ದನ, ಗರುಡ, ಪುರುಷೋತ್ತಮ, ಇಬ್ಬರು ದೇವಿಯರು, ನಾಲ್ವರು ಚಾಮರಧಾರಿಣಿಯರು, ಸ್ಥಾನಕ ನರಸಿಂಹ, ಸ್ಥಾನಕ ಶ್ರೀಧರ,

ಪಶ್ಚಿಮ–ನಾರಾಯಣ, ಅರ್ಜುನ-ಮತ್ಸ್ಯಯಂತ್ರ, ಗೋವರ್ಧನ

ಧಾರಿ, ಇಬ್ಬರು ದೇವಿಯರು, ನಾಲ್ವರು ಚಾಮರಧಾರಿಣಿಯರು, ಪರಶು ರಾಮ, ಗೋವಿಂದ, ಹಲಾಯುಧ, ಚತುರ್ಭುಜ ಲಕ್ಷ್ಮೀ (ಪದ್ಮ ಚಕ್ರ ಶಂಖ ಫಲ), ದ್ವಿಭುಜ ಶ್ರೀರಾಮ (ಬಾಣ ಧನುಸ್), ಧರಣೀವರಾಹ. ಉತ್ತರ ಗರ್ಭಗುಡಿಯ ವಾಯವ್ಯದಿಂದ ಪ್ರದಕ್ಷಿಣೆಯಾಗಿ—

ಪಶ್ಚಿಮ ಗೋಡೆ—ಅಂಜಲಿಹಸ್ತನಾದ ರಾಜ (ಪ್ರಹ್ಲಾದ ?), ಯೋಗನರಸಿಂಹ, ಇಬ್ಬರು ಚಾಮರಧಾರಿಣಿಯರು, ವಾಮನ ದೇವಿ ಯರು, ಹಲಾಯುಧ, ಗರುಡ, ಪ್ರದ್ಯುಮ್ನ, ಇಬ್ಬರು ದೇವಿಯರು, ಇಬ್ಬರು ಚಾಮರಧಾರಿಣಿಯರು, ಗರುಡ, ಶ್ರೀರಾಮ, ಕೃಷ್ಣ, ದೇವಿಯರು.

ಉತ್ತರ ಗೋಡೆ—ಕೇಶವ-ಲಕ್ಷ್ಮೀ, ಮೋಹಿನೀ-ದರ್ಪಣ, ಚಾಮರ ಧಾರಿಣಿ, ಪ್ರದ್ಯುಮ್ನ, ದೇವಿಯರು, ಇಬ್ಬರು ಚಾಮರಧಾರಿಣಿಯರು, ಸ್ಥಾನಕ ನರಸಿಂಹ, ಎಡದಲ್ಲಿ ಇಬ್ಬರು ದೇವಿಯರು, ಒಬ್ಬ ಚಾಮರ ಧಾರಿಣಿ,

ಪೂರ್ವದ ಗೋಡೆ—ಸ್ಥಾನಕ ವಿಷ್ಣು (ಭಗ್ನ), ದೇವಿ, ಪರಶುರಾಮ ಪರಿಚಾರಿಕೆ, ವಿಷ್ಣು, ದೇವಿಯರು, ಪರಿಚಾರಕರು, ಕಲ್ಕಿ (ದ್ವಿಭುಜಗಳಲ್ಲಿ ಕತ್ತಿ ಖೇಟ), ಗರುಡ, ಧರಣೀವರಾಹ ದೇವಿ, ಕಾಳಿಂಗಮರ್ದನ ನೃತ್ಯ, ಡವಣೆ ರುದ್ರವೀಣೆ ತಾಳ ಮೃದಂಗ ಬಾರಿಸುವವರು.

ಮೇಲ್ಛಾವಣಿಯ ಬೋದಿಗೆಗಳು ಮಣಿಸರಗಳಿಂದ ಅಲಂಕೃತ ವಾಗಿವೆ. ಸಭಾಮಂಡಪದ ಬೋದಿಗೆ ಮಾತ್ರ ಎರಡು ಮುರುವಾಗಿ ಕೆಳಭಾಗದಲ್ಲಿ ತೊಲೆಗಳನ್ನು ಹೊಂದಿದೆ. ಕೈಪಿಡಿ ಗೋಡೆ ದೇವಾ ಲಯದ ಸುತ್ತಲೂ ಇದೆ. ಇದರಮೇಲೆ ಶಿಖರಗಳು, ಸಳ-ಸಿಂಹ ಯಕ್ಷ ಮಕರ ವಿಷ್ಣುವಿನ ರೂಪಗಳು ಇವೆ. ಈ ವಿಗ್ರಹಗಳಲ್ಲಿ ಮುಖ್ಯವಾದವು ಪೂರ್ವದ್ವಾರದ ಮೇಲೆ ರಾಮ ಸೀತಾ ಲಕ್ಷ್ಮಣ ಕಪಿಗಳು, ಕೆಳಗೆ ಎರಡು ಸಿಂಹಗಳೊಡನೆ ಹೋರಾಡುವ ಸಳ, ಆಗ್ನೇಯ ಮೂಲೆ-ಕಾಳಿಂಗ ಮರ್ದನ ಮತ್ತು ವೇಣುಗೋಪಾಲ, ಸಭಾಮಂಡಪದ ನೈರುತ್ಯ- ಇಬ್ಬರು ಯೋಧರು, ನವರಂಗದ ದಕ್ಷಿಣ—ಲಕ್ಷ್ಮೀನಾರಾಯಣ— ಮೋಹಿನಿ, ನವರಂಗದ ಉತ್ತರ-ಯೋಗನರಸಿಂಹ, ಮುಖಮಂಡಪದ ಉತ್ತರ-ಹಲಾಯುಧ, ಸಭಾಮಂಡಪದ ಆಗ್ನೇಯ—ಹನುಮಂತ, ಬುದ್ಧ,

ಕಲ್ಕಿ, ರಾಮನು ಸುವರ್ಣಮೃಗವನ್ನು ಸಂಹರಿಸುವುದು, ಶಿಖರಗಳು. ಉತ್ತರ ಮತ್ತು ದಕ್ಷಿಣ ಶಿಖರಗಳು ಪಶ್ಚಿಮ ಶಿಖರದಂತೆ ಮೂರು ಸಾಲು ಕೀರ್ತಿಮುಖ ಉಪಶಿಖರಗಳನ್ನು ಹೊಂದಿವೆ. ಇವುಗಳಲ್ಲಿ ವಿಗ್ರಹಗಳಿವೆ ದಕ್ಷಿಣ ಶಿಖರದಲ್ಲಿ-ಲಕ್ಷ್ಮೀನರಸಿಂಹ, ಯೋಗನರಸಿಂಹ, ಉಗ್ರನರಸಿಂಹ, ಮತ್ತು ಬುದ್ಧ, ಇತ್ಯಾದಿ ಗಮನಾರ್ಹವಾಗಿದೆ. ಶಿಖರಗಳ ಮುಂದೆ ಚಾಚಿಕೊಂಡಿರುವ ಫಲಕಗಳಲ್ಲಿ ದಕ್ಷಿಣ ಉತ್ತರಗಳಲ್ಲಿ ವಿಷ್ಣು, ಪಶ್ಚಿಮ ಶಿಖರದಲ್ಲಿ ಜನಾರ್ದನ ವಿಗ್ರಹಗಳಿವೆ.

ಸಭಾಮಂಡಪ ಮೂವತ್ತೊಂಬತ್ತು ಅಂಕಣಗಳ ಚತುರಸ್ರ ಶಾಲೆಯಾಗಿದೆ. ಒಳಗೆ ನಲ್ವತ್ತಾರು ದುಂಡಾದ ಸ್ತಂಭಗಳಿವೆ. ಒಳಗೆ ಗೋಡೆಯ ಸುತ್ತಲೂ ಕಲ್ಲಿನ ಜಗತಿ ಇವೆ. ಜಗತಿಯ ಮೇಲೆ ಅರಸೀಕೆರೆಯಲ್ಲಿದ್ದಂತೆ ಆನೆಗಳ ಸಾಲು, ಪದಾತಿಗಳು ಇವೆ. ಒಂದೊಂದು ಆನೆಯು ಹದಿನೆಂಟಂಗುಲ ಎತ್ತರವಿದೆ. ದುಂಡಾದ ಸ್ತಂಭಗಳು ಕುಬಟೂರು ನಾಡಕಲಶಿ ಸ್ತಂಭಗಳಂತಿವೆ.

ಮೇಲ್ಚಾವಣಿಗಳಲ್ಲಿ ಸಾಮಾನ್ಯವಾಗಿ ಪದ್ಮಗಳಿವೆ. ನೈರುತ್ಯದ ಎರಡನೇ ಭುವನೇಶ್ವರಿಯಲ್ಲಿ ಒಬ್ಬನು ಮೂವರೊಡನೆ ಹೊಡೆದಾಡುತ್ತಿರುವನು. ಪಶ್ಚಿಮ ದ್ವಾರದ ಹತ್ತಿರ ವೇಣುಗೋಪಾಲ, ಗೋವುಗಳು, ನರ್ತಕರು, ಗಾಯಕರಿರುವರು. ಲತಾಪಟ್ಟಿಕೆಯಲ್ಲಿ ಶಂಖ ಚಕ್ರಗಳಿವೆ. ಇದಕ್ಕೆ ಪೂರ್ವದ ಭುವನೇಶ್ವರಿಯಲ್ಲಿ ನಾಗಬಂಧ ಕಾಳಿಂಗಮರ್ದನ ಲತೆ ಗೋವುಗಳು ಇವೆ.

ದಕ್ಷಿಣ ಗರ್ಭಗುಡಿ—ಸುಕನಾಸಿ ದ್ವಾರದಲ್ಲಿ ದ್ವಾರಪಾಲಕರು ಜಾಲಂಧ್ರ, ಮೇಲೆ ಗಜಲಕ್ಷ್ಮೀ ಇವೆ. ಸುಕನಾಸಿ ಮೊದಲು ಸಭಾಮಂಡಪದ ಭಾಗವಾಗಿದ್ದಿತು. ಗರ್ಭಗುಡಿ ದ್ವಾರವೂ ಹೀಗೆಯೇ ಇದೆ; ಆದರೆ ಜಾಲಂಧ್ರವಿಲ್ಲ. ಮೇಲ್ಚಾವಣಿಯಲ್ಲಿ ಪದ್ಮಗಳಿವೆ. ಗರುಡಪೀಠದ ಮೇಲೆ ಏಳಡಿ ಎತ್ತರದ ಸುಂದರವಾದ ವೇಣುಗೋಪಾಲ ತ್ರಿಭಂಗದಲ್ಲಿ ನಿಂತು ಕೊಳಲನ್ನು ಬಾರಿಸುತ್ತಿರುವನು. ಎತ್ತಿದ ಬೆರಳುಗಳು ಕಂಡು ಬರುತ್ತವೆ. ಪಕ್ಕಗಳಲ್ಲಿ ದೇವಿಯರು, ಗೋವುಗಳು, ಗೋಪಿಯರು, ಋಷಿಗಳು, ಹಿಂದೆ ಶಂಖ ಪದ್ಮ ಗದಾ ಚಕ್ರ ಇವೆ. ಮೇಲೆ ಕಿರೀಟವು

ಸೋಮನಾಥಪುರದ ವಿಗ್ರಹಕ್ಕಿಂತ ಚೆನ್ನಾಗಿದೆ. ಪ್ರಭಾವಳಿಯಲ್ಲಿ ಮಣಿ ತೋರಣ ಕಲ್ಪವೃಕ್ಷ ಇವೆ. ದಶಾವತಾರಗಳಿಲ್ಲ.

ಉತ್ತರ ಗರ್ಭಗುಡಿ–ಉತ್ತರದ ಸುಕನಾಸಿ ಗರ್ಭಗುಡಿಗಳು ದಕ್ಷಿಣ ದಲ್ಲಿದ್ದಂತೆಯೇ ಇವೆ. ಗರುಡಪೀಠದ ಮೇಲೆ ಉತ್ಕುಳಿಕಾಸನದಲ್ಲಿ ಕುಳಿತಿರುವ ಯೋಗನರಸಿಂಹಮೂರ್ತಿ ಆರೂವರೆ ಅಡಿ ಎತ್ತರವಿದೆ. ಹಿಂದಿನ ಕೈಗಳಲ್ಲಿ ಚಕ್ರ ಶಂಖಗಳಿವೆ. ಮುಂದಿನ ಕೈಗಳು ಯೋಗ ಪಟ್ಟದಿಂದ ಸುತ್ತಿರುವ ಮೊಣಕಾಲುಗಳ ಮೇಲಿವೆ. ಕಿರೀಟ, ಉದ್ದವಾದ ಕಿವಿ, ತೆರೆದ ಬಾಯಿ, ಗುಂಡಾದ ಕಣ್ಣುಗಳು ಭವ್ಯವಾಗಿವೆ. ನಾಗತೋರಣ ದಲ್ಲಿ ದಶಾವತಾರಗಳಿವೆ.

ಉಪ್ಪರಿಗೆ ಅಥವಾ ಮಹಾದ್ವಾರವು ಎತ್ತರವಾಗಿ ವಿಶಾಲವಾದ ಶಾಲೆಯನ್ನೂ ಮುಂದಿನ ಮಂಡಪವನ್ನೂ ಹೊಂದಿದೆ. ಮುಂದೆ ಮೆಟ್ಟಿಲು ಗಳು ಪಕ್ಕಗಳಲ್ಲಿ ಎರಡು ಬಳಪದಕಲ್ಲಿನ ಆನೆಗಳು ಇವೆ. ಗೋಡೆಗಳ ಮೇಲೆ ಹೆಚ್ಚು ಅಲಂಕಾರಗಳಿಲ್ಲ. ಮುಂದಿನ ಮಂಡಪದ ಮೇಲ್ಛಾವಣಿ ಇಳಿಜಾರಾಗಿದೆ. ಒಳಗೆ ಕಲ್ಲಿನ ಜಗತಿ, ಬಾಗಿರುವ ಕಟಾಂಜನಗಳಿವೆ. ನಾಲ್ಕು ದುಂಡಾದ ಸ್ತಂಭಗಳ ಮೇಲೆ ಇರುವ ಮೇಲ್ಛಾವಣಿಯಲ್ಲಿ ಆರು ದೊಡ್ಡ ಪದ್ಮಗಳಿವೆ. ಒಳಗಿನ ಶಾಲೆ ಸುಮಾರು ಹದಿನೇಳು ಅಡಿ ಎತ್ತರ ವಿದೆ. ಇಲ್ಲಿನ ಸ್ತಂಭಗಳು ಉದ್ದವಾಗಿ ತೆಳುವಾಗಿವೆ. ಬಹುಶಃ ಈ ಭಾಗವು ಕುಬಟೂರು ಶೃಂಗೇರಿ ಜೈನ ಬಸದಿಗಳಂತೆ ಹನ್ನೊಂದನೆಯ ಶತಮಾನ ದ್ದಾಗಿರಬಹುದು. ಆದರೆ ಮುಂದಿನ ಮಂಡಪದಿಂದ ತಿಳಿದುಬರುವುದೇ ನೆಂದರೆ ಸುಮಾರು ೧೨೦೦ ರಲ್ಲಿಯೂ ಹೀಗೆ ಕಟ್ಟುತ್ತಿದ್ದರೆಂದು ಹೇಳ ಬಹುದು. ಇದರ ಉದ್ದವಾದ ಸ್ತಂಭಗಳ ಅಂತರ ಹನ್ನೆರಡಡಿ ಇದೆ. ಮೇಲ್ಛಾವಣಿಯ ಒಂಬತ್ತು ಅಂಕಣಗಳಲ್ಲಿ ಪದ್ಮಗಳಿವೆ.

೬೦. ಚಟ್ಚಟ್ಟಹಳ್ಳಿ : ಹಳೆಯಬೀಡಿಗೆ ಸುಮಾರು ಮೂರು ಮೈಲಿ ಈಶಾನ್ಯದಲ್ಲಿರುವ ಚಟ್ಚಟ್ಟಹಳ್ಳಿಯಲ್ಲಿ ಚಟ್ಟೇಶ್ವರವೆಂಬ ತ್ರಿಕೂಟಾಚಲ ವಿದೆ. ದಕ್ಷಿಣಾಭಿಮುಖವಾಗಿರುವ ದೇವಾಲಯದ ಚಟ್ಟೇಶ್ವರದ ಗರ್ಭ ಗುಡಿ ನವರಂಗ ಎಡದಲ್ಲಿ ಪೂರ್ವಕ್ಕೆ ತಿರುಗಿಕೊಂಡಿದೆ. ನವರಂಗ ದ್ವಾರಕ್ಕೆ ಎದುರಾಗಿರುವ ವಿಷ್ಣುಗೃಹವು ದಕ್ಷಿಣಕ್ಕೂ ಸೂರ್ಯ ಗೃಹವು

ಪಶ್ಚಿಮಕ್ಕೂ ಅಭಿಮುಖವಾಗಿವೆ. ಮುಖಮಂಡಪದ ಪೂರ್ವದಲ್ಲಿ ಒಂದು ಶಾಸನವೂ ನವರಂಗದ ತೊಲೆಯಮೇಲೆ ದ್ವಾರದ ಹತ್ತಿರ ಮತ್ತೊಂದು ಶಾಸನವು ಇವೆ. ಇಮ್ಮಡಿ ವೀರಬಲ್ಲಾಳನ ದಂಡನಾಯಕನಾದ ಚಟ್ಟ ದಣಾಯಕನು ಸುಮಾರು ಈ ೧೨೦೦ರಲ್ಲಿ ದೇವಾಲಯವನ್ನು ಕಟ್ಟಿಸಿದನು.

ದೇವಾಲಯಕ್ಕೆ ಜಗತಿ ಇಲ್ಲ. ಗೋಡೆಯ ಪೀಠದಲ್ಲಿ ಐದು ಪಟ್ಟಿಕೆ ಗಳಿವೆ; ಆದರೆ ಕೆತ್ತನೆಕೆಲಸವಿಲ್ಲ. ಗೋಡೆಗಳ ಮೇಲೆ ವಿಗ್ರಹಗಳಿಲ್ಲ. ಕೈಪಿಡಿ ಗೋಡೆಯಮೇಲೆ ಶಿಖರಗಳು ಮಣಿಸಾಲು ಇವೆ. ಉತ್ತರ ಗೋಪುರ ಬಿದ್ದುಹೋಗಿದೆ. ಮಿಕ್ಕೆರಡು ಶಿಖರಗಳಲ್ಲೂ ಮೂರು ಸಾಲು ಗಳಿವೆ. ಕಳಶಗಳು ಹೋಗಿವೆ. ಪಶ್ಚಿಮ ಗೋಪುರದಲ್ಲಿ ಮಾತ್ರ ಯಕ್ಷರು, ತಾಂಡವೇಶ್ವರ ಇವೆ. ಸುಕನಾಸಿಯ ಮೇಲಿನ ಭಾಗದಲ್ಲಿ ಸಳ ಮುಂತಾದ ವಿಗ್ರಹಗಳಿಲ್ಲ.

ಮುಖಮಂಡಪದ ಮೆಟ್ಟಲುಗಳ ಪಕ್ಕಗಳಲ್ಲಿ ಹಿಂದೆ ಗೋಪುರ ಗಳಿದ್ದವು. ಒಳಗೆ ಕಲ್ಲಿನ ಜಗತಿ ಇದೆ. ಎರಡು ಬಳಪದಕಲ್ಲಿನ ಕಂಬಗಳು, ಮೇಲ್ಛಾವಣಿಯಲ್ಲಿ ಅಷ್ಟಕೋಣಗಳು, ಕರ್ಣಿಕೆ ಇವೆ.

ನವರಂಗ ದ್ವಾರದಲ್ಲಿ ಶೈವದ್ವಾರಪಾಲಕರು ಮೇಲೆ ಗಜಲಕ್ಷ್ಮಿ ಇವೆ. ನವರಂಗದ ಒಂಬತ್ತಂಕಣಗಳ ಮಧ್ಯೆ ಭುವನೇಶ್ವರಿ, ತೊಲೆಯಲ್ಲಿ ಅಷ್ಟಕೋಣದ ಶ್ರೀಚಕ್ರ, ಮಧ್ಯದಲ್ಲಿ ಪದ್ಮ ಚೆನ್ನಾಗಿ ಕೊರೆದಿದೆ. ಮಧ್ಯದ ನಾಲ್ಕು ಸ್ತಂಭಗಳು ದುಂಡಾಗಿವೆ. ಒಂಬತ್ತು ಭುವನೇಶ್ವರಿ ಗಳಲ್ಲೂ ರೇಖಾಚಿತ್ರಗಳಿವೆ. ನವರಂಗದ ಪಶ್ಚಿಮದ ಗೋಡೆಯಲ್ಲಿ ಮೂಷಕ ಸಿಂಹ ಪೀಠಗಳಿರುವುದರಿಂದ ಗಣೇಶ ಮತ್ತು ಮಹಿಷಮರ್ದಿನಿ ವಿಗ್ರಹಗಳಿದ್ದಿರಬೇಕು. ಈಗ ಇವುಗಳ ಬದಲು ವೀರಭದ್ರ ಭೈರವ ವಿಗ್ರಹಗಳಿವೆ. ಒಂದು ಸಣ್ಣ ನಂದಿಯು ನವರಂಗದಲ್ಲಿದೆ.

ಮುಖ್ಯ ಗರ್ಭಗುಡಿಗೆ ಸುಕನಾಸಿ ಇದೆ. ಸುಕನಾಸಿಯ ದ್ವಾರದಲ್ಲಿ ದ್ವಾರಪಾಲಕರು, ಜಾಲಂದ್ರ, ಮೇಲೆ ಗಜಲಕ್ಷ್ಮಿ ಇವೆ. ಮೇಲ್ಛಾವಣಿ ಚಪ್ಪಟೆಯಾಗಿದೆ. ಗರ್ಭಗೃಹದ ದ್ವಾರದಮೇಲೆ ಗಜಲಕ್ಷ್ಮಿ ಒಳಗೆ ಸಣ್ಣ ಲಿಂಗ ಇವೆ.

ಉತ್ತರ ಗರ್ಭಗುಡಿಯ ಸುಕನಾಸಿ ತೆರದಿದೆ. ಇದರ ಮೇಲ್ಛಾವಣಿ

ಯಲ್ಲಿ ವೃತ್ತಗಳಿವೆ. ಬಿರುಕುಬಿಟ್ಟಿರುವುದರಿಂದ ಎರಡು ಮೇಲ್ಚಾವಣಿಗಳನ್ನೂ ನೋಡಬಹುದು. ಗರ್ಭಗುಡಿಯ ದ್ವಾರ ಸಾಮಾನ್ಯವಾಗಿದೆ. ಒಳಗಿನ ಗರುಡಪೀಠದ ಮೇಲಿರುವ ವಿಗ್ರಹ ಭಗ್ನವಾಗಿದೆ. ಆರು ಅಡಿ ಎತ್ತರವಿರುವ ವಿಷ್ಣು ವಿಗ್ರಹ(ಕೇಶವ?), ಪಕ್ಕದಲ್ಲಿ ದೇವಿಯರು, ಚಾಮರ ಧಾರಿಣಿಯರು ಇರುವರು. ತೋರಣದಲ್ಲಿ ದಶಾವತಾರಗಳಿವೆ.

ಪೂರ್ವದ ಗರ್ಭಗುಡಿಯಲ್ಲಿ ಸಪ್ತಾಶ್ವಪೀಠದಮೇಲೆ ಸೂರ್ಯ ವಿಗ್ರಹವಿದೆ. ಪಕ್ಕದಲ್ಲಿ ಛಾಯಾದೇವಿಯರು, ಪ್ರಭಾವಳಿಯಲ್ಲಿ ದ್ವಾದಶಾದಿತ್ಯರು ಇರುವರು.

ಈ ಚಟ್ಟೇಶ್ವರ ದೇವಾಲಯದ ನೈರುತ್ಯದಲ್ಲಿ ವಿಷ್ಣುದೇವಾಲಯದ ಮುಖಮಂಡಪ ನವರಂಗದ್ವಾರ ಗೋಡೆ ಮಾತ್ರ ಉಳಿದಿವೆ. ಮುಂದಿನ ತೊಲೆಯಮೇಲೆ ೧೨೦೦ರ ಶಾಸನವಿದೆ. ಗೋಡೆಗಳ ಮೇಲೆ ಕೇಶವ, ಕೃಷ್ಣ ದೇವಿಯರ ವಿಗ್ರಹಗಳು ಉಳಿದಿವೆ.

೬೧. ದೊಡ್ಡಗದ್ದವಳ್ಳಿ : ಹಾಸನ–ಬೇಲೂರು ರಸ್ತೆಯ ಒಂಬತ್ತನೆ ಮೈಲಿ ಕಲ್ಲಿನ ಪಶ್ಚಿಮಕ್ಕೆ ಒಂದೂವರೆ ಮೈಲಿಯಲ್ಲಿ ದೊಡ್ಡಗದ್ದವಳ್ಳಿ ಇದೆ. ರಸ್ತೆಯಿಂದ ಒಂದು ಕಾಲುದಾರಿ ಗುಡ್ಡದಮೇಲೆ ಹೋಗುತ್ತದೆ. ದೊಡ್ಡಗದ್ದವಳ್ಳಿಯ ಲಕ್ಷ್ಮೀದೇವಾಲಯ ಅಷ್ಟು ಅಲಂಕೃತವಲ್ಲದಿದ್ದರೂ ವಿಷ್ಣುವರ್ಧನನ ಕಾಲದಲ್ಲಿಯೇ ನಿರ್ಮಿತವಾಯಿತು. ಅಲ್ಲಿನ ಶಾಸನದಿಂದ (ಹಾಸನ ೧೪೯) ವಿಷ್ಣುವರ್ಧನನ ಆಳಿಕೆಯಲ್ಲಿ ವರ್ತಕನಾದ ಕುಲ್ಲಹನ ರಾಹುತ ಅವನ ಪತ್ನಿ ಸಹಜಾದೇವಿ ಗದ್ದುಂಬಳ್ಳಿಯನ್ನು ಅಭಿನವಕೊಲ್ಹಾಪುರ ಎಂಬ ಅಗ್ರಹಾರವಾಗಿ ಮಾಡಿ ಮಹಾಲಕ್ಷ್ಮೀ ದೇವಾಲಯವನ್ನು ೧೧೧೩ರಲ್ಲಿ ಕಟ್ಟಿಸಿದರೆಂದು ತಿಳಿದುಬರುವುದು. ಇಮ್ಮಡಿ ಬಲ್ಲಾಳ ಮುಂತಾದವರು ಅನೇಕ ದಾನಗಳನ್ನು ಕೊಟ್ಟಿರುವರು. ಆದರೆ ದೇವಾಲಯವನ್ನು ವಿಸ್ತರಿಸಲಿಲ್ಲ.

ಲಕ್ಷ್ಮೀದೇವಾಲಯ ಹಲವು ವಿಷಯಗಳಲ್ಲಿ ಪ್ರಸಿದ್ಧಿಯಾಗಿದೆ. ಚತುಷ್ಕೂಟ ದೇವಾಲಯಕ್ಕೆ ಉದಾಹರಣೆಯಾಗಿದೆ. ಅಲ್ಲದೆ ಮಹಾಲಕ್ಷ್ಮಿಯೇ ಪ್ರಧಾನ ದೇವತೆಯಾದ ಗುಡಿಗಳು ಕೊಲ್ಹಾಪುರದಲ್ಲಿ ವಿನಾ ಇನ್ನೆಲ್ಲಿಯೂ ಇಲ್ಲ. ಅಗಲವಾದ ಅಂಗಳಕ್ಕೆ ದಕ್ಷಿಣದಲ್ಲಿ ಮಂಡಪದ

ಮೂಲಕ ಪ್ರವೇಶವಿದೆ. ಉತ್ತರದಲ್ಲಿಯೂ ಮೊದಲು ದ್ವಾರವಿದ್ದಿತು. ದೇವಾಲಯಕ್ಕೆ ನಾಲ್ಕು ಶಿಖರಗಳಿವೆ. ಮೂರು ಶಿಖರಗಳು ಮೆಟ್ಟಲು ಮೆಟ್ಟಲಾಗಿವೆ. ಮೂಲೆಗಳಲ್ಲಿರುವ ಗುಡಿಗಳ ಮೇಲೆ ನಾಲ್ಕು ಸಣ್ಣ ಶಿಖರಗಳಿವೆ. ಲಕ್ಷ್ಮೀಗುಡಿ ಮೇಲಿರುವ ಶಿಖರವು ಮಾತ್ರ ಅನೇಕ ಸಣ್ಣ ಗೋಪುರಗಳನ್ನೊಳಗೊಂಡಿದೆ. ದೇವಾಲಯದ ಈಶಾನ್ಯದಲ್ಲಿರುವ ವೀರಭದ್ರಗುಡಿಯು ಹೊಯ್ಸಳ ಕಾಲದ್ದಾಗಿದೆ. ಇದರ ಶಿಖರವೂ ಸೇರಿ ಒಂಬತ್ತು ಶಿಖರಗಳಿರುತ್ತವೆ.

ದೇವಾಲಯಕ್ಕೆ ಜಗತಿ ಇಲ್ಲ. ಗೋಡೆಗಳ ಕೆಳಭಾಗದಲ್ಲಿ ಆರು ಪಟ್ಟಿಕೆಗಳಿವೆ. ಮೇಲ್ಭಾಗದಲ್ಲಿ ಶಿಖರಗಳು ಕಲಶಗಳು ಸಾಮಾನ್ಯವಾಗಿವೆ. ಸಿಂಹಲಲಾಟ ನಾಗತೋರಣಗಳು ಇವೆ. ಕಾಳೀಗುಡಿಯ ಪೂರ್ವ ಗೋಡೆಯಲ್ಲಿರುವ ಗೂಡಿನಲ್ಲಿ ಮಾತ್ರ ಕಾಳೀವಿಗ್ರಹವಿದೆ. ಮಿಕ್ಕ ಗೂಡುಗಳು ಖಾಲಿಯಾಗಿವೆ.

ಮೇಲ್ಚಾವಣಿ ಕೈಪಿಡಿಗೋಡೆಗಳ ಮೇಲೂ ಹೆಚ್ಚಾಗಿ ಅಲಂಕಾರಗಳಿಲ್ಲ. ಶಿಖರಗಳು ಎರಡು ವಿಧವಾಗಿವೆ. ಮೆಟ್ಟಲು ಮೆಟ್ಟಲಾಗಿರುವ "ಪಿರಮಿಡ್" ಆಕಾರದ ಮೂರು ಶಿಖರಗಳಲ್ಲಿ ಎಂಟು ಅಥವಾ ಒಂಬತ್ತು ಪಟ್ಟಿಕೆಗಳಿವೆ. ಇವುಗಳಲ್ಲಿ ಸಣ್ಣ ವಿಮಾನಗಳನ್ನೂ ಕೀರ್ತಿಮುಖಗಳನ್ನೂ ಕೆತ್ತಿರುವರು. ಲಕ್ಷ್ಮೀಗುಡಿಯ ಮೇಲಿನ ಶಿಖರದಲ್ಲಿ ಎರಡು ಸಾಲುಗೋಪುರಗಳಿವೆ. ಇವು ಪಲ್ಲವ ಶಿಖರಗಳನ್ನು ಹೋಲುತ್ತವೆ. ಇದರ ಸಾಲುಗೋಪುರಗಳಲ್ಲಿ ಕೀರ್ತಿಮುಖ ತೋರಣಗಳು ಯಕ್ಷರು ಪುಷ್ಪಗಳು ಇವೆ. ಶಿಖರಗಳು ಸುಕನಾಸಿಯ ಮೇಲೆ ಚಾಚಿಕೊಂಡಿರುವ ಭಾಗದಲ್ಲಿ ಕೀರ್ತಿಮುಖ ವಿಗ್ರಹ ಮತ್ತು ಸಳ-ಸಿಂಹಗಳನ್ನು ಹೊಂದಿವೆ. ಮೊದಲಿದ್ದ ಒಂಬತ್ತು ಶಿಖರಗಳ ಒಂಬತ್ತು ಸಳವಿಗ್ರಹಗಳಲ್ಲಿ ಈಶಾನ್ಯದ ವಿಗ್ರಹ ಮಾತ್ರ ಹೋಗಿದೆ. ಶಿಖರಗಳ ಮೇಲೆ ಅಲಂಕೃತವಾದ ಕಲ್ಲಿನ ದೊಡ್ಡ ಕಲಶಗಳಿವೆ.

ನವರಂಗಕ್ಕೆ ಎರಡು ದ್ವಾರಗಳಿವೆ. ಪೂರ್ವ ದ್ವಾರವು ಹೆಚ್ಚು ಅಲಂಕೃತವಾಗಿಲ್ಲ. ದ್ವಾರಬಂಧಗಳಲ್ಲಿ ವೈಷ್ಣವ ದ್ವಾರಪಾಲಕರು ಸಿಂಹ ಯಾಳಿ ಪೀಠಗಳ ಮೇಲೆ ಇರುವರು. ದ್ವಾರಗಳ ಮೇಲೆ ಸಿಂಹಗಳು,

ಮಧ್ಯದಲ್ಲಿ ಖಾಲಿಯಾದ ಭಾಗಗಳು, ಇವುಗಳ ಮೇಲೆ ನಾಲ್ಕು ಶಿಖರಗಳ ಮಧ್ಯದಲ್ಲಿ ಕೀರ್ತಿಮುಖ ಇವೆ. ನವರಂಗವನ್ನು ಎರಡು ಒಂಬತ್ತಂಕಣ ಶಾಲೆಗಳನ್ನು ಸೇರಿಸಿ ಮಾಡಿದಂತೆ ಕಂಡುಬರುತ್ತದೆ. ದುಂಡಾದ ಘಂಟಾ ಕಾರದ ಸ್ತಂಭಗಳಿವೆ. ಪೂರ್ವಭಾಗದಲ್ಲಿ ಕಲ್ಲಿನ ಜಗತಿ ಜಾಲಂದ್ರಗಳಿವೆ. ಕಾಳೀಗುಡಿಯ ದ್ವಾರಪಾಲಕರಾದ ಎರಡು ಭೇತಾಳ ವಿಗ್ರಹಗಳು ನವರಂಗದಲ್ಲಿವೆ. ಭೇತಾಳಗಳು ಅಸ್ತಿಗಳನ್ನು ತೋರಿಸುತ್ತ ಕೆದರಿದ ಕೂದಲನ್ನು ಹೊಂದಿ, ವೃತ್ತನೇತ್ರ, ದೊಡ್ಡ ಕರ್ಣಕುಂಡಲ, ವಿವೃತ ಮುಖ ದಂತ ಲೋಲಜಿಹ್ವ ನಗ್ನವಾಗಿವೆ. ಎರಡು ಪುರುಷ ವಿಗ್ರಹಗಳ ಗೂಢಾಂಗಗಳು ದೊಡ್ಡವಾಗಿವೆ. ಪಶ್ಚಿಮದಲ್ಲಿರುವ ಭೇತಾಳದ ಕೈಗಳು ಹೋಗಿವೆ. ಪಕ್ಕದಲ್ಲಿ ಇತರ ಭೇತಾಳಗಳಿವೆ. ಪೂರ್ವದ ಭೇತಾಳ ಬಲಗೈಯಲ್ಲಿ ಕತ್ತಿ ಕತ್ತರಿಸಿದ ಮನುಷ್ಯನ ತಲೆಗಳನ್ನೂ ಎಡಗೈಯಲ್ಲಿ ಪಾತ್ರೆಯನ್ನೂ ಹಿಡಿದಿದೆ. ಒಂದೊಂದು ವಿಗ್ರಹವೂ ಆರೂವರೆ ಅಡಿ ಎತ್ತರವಿದೆ. ಇಂತಹ ಭೇತಾಳ ವಿಗ್ರಹಗಳು ಮೈಸೂರಿನಲ್ಲಿ ಇನ್ನೆಲ್ಲಿಯೂ ಸಿಕ್ಕಿಲ್ಲ. ಮೇಲ್ಛಾವಣಿಗಳು ಚಪ್ಪಟೆಯಾಗಿವೆ. ಪಶ್ಚಿಮ ಭಾಗದ ಮಧ್ಯ ಭುವನೇಶ್ವರಿಯಲ್ಲಿ ವೀಣೆಯನ್ನು ಬಾರಿಸುತ್ತ ಕುಣಿಯುತ್ತಿರುವ ಪುರುಷ ವಿಗ್ರಹ(ವೀರಭದ್ರ ?)ವಿದೆ. ಇದಕ್ಕೆ ಉತ್ತರದಲ್ಲಿರುವ ಭುವನೇಶ್ವರಿ ಯಲ್ಲಿ ಹಾರುತ್ತಿರುವ ಕಪಾಲಿಯು ಎರಡು ಕೈಗಳಲ್ಲಿ ಕತ್ತಿ ಪಾತ್ರೆ ಹಿಡಿದಿರುವನು. ಪೂರ್ವಭಾಗದ ಹೊರಚಾವಣಿಗಳಲ್ಲಿ ಅಷ್ಟದಿಕ್ಪಾಲಕ ರಿರುವರು. ಒಳಚಾವಣಿಗಳ ಕೆತ್ತನೆಕೆಲಸ ಮಾಸಿಹೋಗಿದೆ.

ದೇವಾಲಯದ ನಾಲ್ಕು ಗರ್ಭಗುಡಿಗಳಲ್ಲಿ ಕಾಳೀ, ಲಿಂಗ, ಲಕ್ಷ್ಮೀ ಮತ್ತು ವಿಷ್ಣು ಇದ್ದು ಈಶಾನ್ಯದಲ್ಲಿ ಭೈರವನ ಗುಡಿ ಇದೆ. ಅಭಿನವ ಕೊಲ್ಹಾಪುರ ಎಂದು ಗ್ರಾಮಕ್ಕೆ ಹೆಸರಿಟ್ಟು ಮಹಾಲಕ್ಷ್ಮಿ ಪ್ರಧಾನ ದೇವತೆಯೆಂದು ಶಾಸನದಲ್ಲಿ ಹೇಳಿದ್ದರೂ ಈಗ ಕಾಳಿ ಪ್ರಮುಖವಾಗಿದೆ. ಕಾಳಿಯ ಗರ್ಭಗುಡಿಗೆ ಬೇರೆ ಸುಕನಾಸಿ ಇಲ್ಲ. ದ್ವಾರದಲ್ಲಿ ನೃತ್ಯಮಾಡುವ ಮೋಹಿನೀ ವಿಗ್ರಹಗಳಿವೆ. ದ್ವಾರಬಂಧದಮೇಲೆ ಕಾಳಿಯ ತೆರೆದ ಬಾಯಿ ಕೋರೆಹಲ್ಲು ನಾಲಿಗೆ ಪಕ್ಕದಲ್ಲಿ ಭೇತಾಳಗಳು ಇವೆ. ಗರ್ಭಗುಡಿಯ ಮೇಲ್ಛಾವಣಿಯಲ್ಲಿ ಪದ್ಮವಿದೆ. ಪೀಠದಮೇಲೆ ಒಂದು ಭೇತಾಳ ಮಡಕೆ

ಯಂತಿರುವ ಮೃದಂಗವನ್ನು ಬಾರಿಸುತ್ತಿದೆ. ಈ ಮೃದಂಗದ ಮೇಲೆ ಚರ್ಮ ಹರಡಿದೆ ಮತ್ತು ಸುತ್ತಲೂ ಒಂದು ಹಾವು ಇದೆ. ಈ ಪೀಠದ ಮೇಲೆ ಕಾಳಿಯು ಶವಾಸನದ ಮೇಲೆ ಕುಳಿತಿರುವಳು. ಅಷ್ಟಭುಜಗಳಲ್ಲಿ ಕತ್ತಿ ಗದೆ ತ್ರಿಶೂಲ ಬಾಣ ಡಮರು ಪಾಶ ಧನು ಮತ್ತು ಪಾತ್ರೆಯನ್ನು ಹಿಡಿದಿರುವಳು. ಕೋರೆಹಲ್ಲು ಬಾಯಲ್ಲಿ ಕಾಣಿಸುತ್ತಿವೆ. ಜಟಾಮುಕುಟ ಸರ್ಪಕುಂಡಲಗಳಿವೆ. ಪ್ರಭಾವಳಿಯಲ್ಲಿ ಭೂತಗಳು ವಾದ್ಯ ಬಾರಿಸುತ್ತ, ಕತ್ತಿ ಝಳಪಿಸುತ್ತ ಭಕ್ಷಿಸುತ್ತ ಇವೆ.

ಲಕ್ಷ್ಮೀ ಗರ್ಭಗುಡಿಗೆ ಸುಕನಾಸಿ ಇದೆ. ಸುಕನಾಸಿ ದ್ವಾರ ಸಾಮಾನ್ಯವಾಗಿದೆ. ಗರ್ಭಗುಡಿಯ ದ್ವಾರದ ಮೇಲೆ ತಾಂಡವೇಶ್ವರ ವಿಗ್ರಹವಿದೆ. ಗರ್ಭಗುಡಿಯ ದಕ್ಷಿಣ ಗೋಡೆಯಲ್ಲಿ ಒಂದು ಗೂಡಿದೆ. ಮೇಲ್ಚಾವಣಿಯಲ್ಲಿ ಪದ್ಮವಿದೆ. ಪೀಠದ ಮೇಲೂ ಸಾಮಾನ್ಯವಾದ ಪದ್ಮವಿದೆ. ಸುಮಾರು ಮೂರಡಿ ಎತ್ತರವಿರುವ ಲಕ್ಷ್ಮೀ ವಿಗ್ರಹ ಸಮಭಂಗದಲ್ಲಿ ನಿಂತಿದೆ. ನಾಲ್ಕು ಕೈಗಳಲ್ಲಿ ಅಕ್ಷಮಾಲೆ ಶಂಖ ಚಕ್ರ ಫಲಸಹಿತ ಗದೆ ಇವೆ. ಕಿರೀಟಕ್ಕೆ ಪ್ರಭಾವಳಿ ಇದೆ. ಆದರೆ ತೋರಣವೇ ಇಲ್ಲ. ಹೊಯ್ಸಳ ಶಿಲ್ಪದಲ್ಲಿ ತೋರಣವಿಲ್ಲದ ವಿಗ್ರಹಗಳು ಅಪರೂಪ. ದೇವಿಯ ಪಕ್ಕದಲ್ಲಿ ಪರಿಚಾರಕರಿರುವರು. ಚಡ್ಡಿಯನ್ನು ಧರಿಸಿ ಮೇಲ್ಭಾಗ ಬತ್ತಲೆಯಾಗಿದೆ. ಸ್ತನ ಮತ್ತು ನಿತಂಬ ದೊಡ್ಡದಾಗಿ ಕಟಿ ಸಣ್ಣದಾಗಿದೆ. ಮುಖದಲ್ಲಿ ಸ್ತ್ರೀತ್ವ ಕಂಡುಬರುವುದಿಲ್ಲ. ಚಿಬುಕವು ಚತುರಸ್ರವಾಗಿದೆ. ಕಾಲು ಕೈಗಳು ಪೂರ್ತಿ ಮಾಡಿದಂತೆ ಕಂಡುಬರುವುದಿಲ್ಲ. ಬಹುಶಃ ಪ್ರಾಚೀನ ವಿಗ್ರಹವಲ್ಲವೇನೋ ಎಂದನಿಸುತ್ತದೆ. ಕ್ರಿ. ಶ. ೧೧೧೩ರಲ್ಲಿಯೇ ಮಾಡಿದ್ದರೆ ಸಾಮಾನ್ಯ ಹೊಯ್ಸಳ ವಿಗ್ರಹವೆನ್ನಬೇಕು.

ಕೊಲ್ಹಾಪುರದ ಮಹಾಲಕ್ಷ್ಮಿಯನ್ನನುಸರಿಸಿ ಮಾಡಿದ್ದರೆ ಬೇರೆ ಲಕ್ಷಣಗಳಿರಬೇಕು. ಕೊಲ್ಹಾಪುರವು ಸುಮಾರು ಕ್ರಿಸ್ತ ಶಕ ಒಂದನೆಯ ಶತಾಬ್ದದಿಂದಲಾದರೂ ಪ್ರಸಿದ್ಧ ಶಾಕ್ತಕ್ಷೇತ್ರವಾಗಿದ್ದಿತು. ಕೊಲ್ಹಾಪುರದ ಆಸೀನ ಮಹಾಲಕ್ಷ್ಮಿಗೂ ಇಲ್ಲಿರುವ ಸ್ಥಾನಕ ಲಕ್ಷ್ಮಿಗೂ ಬಹಳ ವ್ಯತ್ಯಾಸವಿದೆ.

ದಕ್ಷಿಣ ಗರ್ಭಗುಡಿಯ ದ್ವಾರದಮೇಲೆ ಯೋಗನರಸಿಂಹ

ವಿಗ್ರಹವಿದೆ. ಒಳಗೆ ದೊಡ್ಡ ಗರುಡಪೀಠವಿದೆ ; ಆದರೆ ಇದರ ಮೇಲೆ ಭೈರವವಿಗ್ರಹವನ್ನಿಟ್ಟಿರುವರು. ಬಹುಶಃ ವಿಷ್ಣುವಿಗ್ರಹವಿದ್ದಿರಬೇಕು.

ಪೂರ್ವಾಭಿಮುಖವಾದ ಈಶ್ವರನ ಗುಡಿಯಲ್ಲಿ ಲಿಂಗವಿದೆ. ಶಾಸನಗಳಲ್ಲಿ ಇದನ್ನು ಭೂತನಾಥನೆಂದು ಕರೆದಿದ್ದರೂ ಈಗ ವಿರೂಪಾಕ್ಷನೆಂಬ ಹೆಸರು ಬಂದಿದೆ. ಲಿಂಗಕ್ಕೆ ದಪ್ಪವಾದ ಶಿರೋಭಾಗವಿದೆ. ಸುಕನಾಸಿಯಲ್ಲಿ ಷಣ್ಮುಖ ಗಣೇಶ ನಂದಿ ಇತ್ಯಾದಿ ವಿಗ್ರಹಗಳಿವೆ. ಗರ್ಭಗುಡಿ ದ್ವಾರ ಮೇಲ್ಪ್ಯಾವಣಿಗಳು ಮಿಕ್ಕಂತೆಯೇ ಇವೆ.

ಈಶಾನ್ಯದಲ್ಲಿರುವ ಭೈರವನ ಗುಡಿ ಪ್ರತ್ಯೇಕವಾಗಿದ್ದರೂ ಹೊಯ್ಸಳ ಕಾಲದ್ದಾಗಿದೆ. ಸುಕನಾಸಿಯ ದ್ವಾರದಮೇಲೆ ಯೋಗಾಸನದಲ್ಲಿ ಕುಳಿತಿರುವ ದಕ್ಷಿಣಾಮೂರ್ತಿ, ಗರ್ಭಗುಡಿಯ ದ್ವಾರದಮೇಲೆ ಕಾಳಿಯ ಮುಖ ಇವೆ. ಗರ್ಭಗುಡಿ ದ್ವಾರಬಂಧಗಳಲ್ಲಿ ಎಡಗಡೆ ದಕ್ಷಿಣಾಮೂರ್ತಿ, ಬಲಗಡೆ ಮೋಹಿನಿ ಇರುವುದು ಗಮನಾರ್ಹವಾಗಿದೆ. ಇವುಗಳ ಪಕ್ಕದಲ್ಲಿ ಒಬ್ಬ ಮನುಷ್ಯನು ತನ್ನ ಹೊಟ್ಟೆಯನ್ನು ಬಗೆದು ಕರುಳನ್ನು ತೆಗೆಯುತ್ತಿರುವ, ಮತ್ತೊಂದು ಕಡೆ ಒಬ್ಬನು ಸತ್ತುಬಿದ್ದಿರುವವನ ತಲೆಯನ್ನು ತುಳಿಯುತ್ತ ತನ್ನ ತಲೆಯನ್ನೇ ಕತ್ತಿಯಿಂದ ಕತ್ತರಿಸಿಕೊಳ್ಳುತ್ತಿರುವ ವಿಗ್ರಹಗಳಿವೆ. ಭೈರವ ವಿಗ್ರಹದ ಪೀಠದಮೇಲೆ ನಾಯಿ, ಅದರಮೇಲೆ ಭೂತಗಳಿಂದ ಪರಿವೃತನಾದ ಭೈರವ ವಿಗ್ರಹವಿದೆ. ಕತ್ತಿ ಹಿಡಿದ ಮುಂದಿನ ಬಲಗೈ ಮುರಿದುಹೋಗಿದೆ.

ಪ್ರಾಕಾರದ ಗೋಡೆ ಮೂರಡಿ ದಪ್ಪ, ಏಳಡಿ ಎತ್ತರದ ಬಳಪದ ಕಲ್ಲಿನಿಂದ ಕಟ್ಟಿದೆ. ಮೂಲೆಗಳಲ್ಲಿರುವ ಗುಡಿಗಳು ಉತ್ತರ ಅಥವಾ ದಕ್ಷಿಣಕ್ಕೆ ಮಾತ್ರ ಅಭಿಮುಖವಾಗಿವೆ. ಇವುಗಳ ಅಲಂಕೃತವಾದ ದ್ವಾರಗಳ ಮೇಲೆ ಲಕ್ಷ್ಮೀ ವಿಗ್ರಹಗಳಿವೆ. ಇವುಗಳಲ್ಲಿ ಯಾವ ವಿಗ್ರಹಗಳಿದ್ದವೋ ಹೇಳಲು ಆಧಾರಗಳಿಲ್ಲ.

ಪೂರ್ವದಿಂದ ಅಂಗಳಕ್ಕೆ ಹೋಗಲು ಗಜಲಕ್ಷ್ಮಿ ಇರುವ ದ್ವಾರವಿದೆ. ಇದರ ಮುಂದೆ ಒಂದಂಕಣದ ಮುಖಮಂಡಪದ ತಳಪಾಯವಿದೆ. ಮತ್ತೊಂದು ದ್ವಾರ ಪಶ್ಚಿಮದಲ್ಲಿರುವ ಮಂಡಪಕ್ಕೆ ದಾರಿಯಾಗಿದೆ. ಈ ಮಂಡಪದಲ್ಲಿ ದುಂಡಾದ ಸ್ತಂಭಗಳ ಒಂಬತ್ತಂಕಣಗಳು ಇವೆ. ಒಳಗೆ

ಕಲ್ಲಿನ ಜಗತಿಗಳಿವೆ. ದ್ವಾರದಮೇಲೆ ಗಣೇಶ ಮೇಲ್ಭಾವಣಿಯ ಹೊರಗಿನ ಭುವನೇಶ್ವರಿಗಳಲ್ಲಿ ಅಷ್ಟದಿಕ್ಪಾಲಕರು ಇರುವರು. ಮಧ್ಯ ಭುವನೇಶ್ವರಿಯಲ್ಲಿ ತಾಂಡವೇಶ್ವರ ವಿಗ್ರಹವಿದೆ. ಕಟಾಂಜನ ಸಾಮಾನ್ಯವಾಗಿದೆ.

ದೇವಾಲಯದ ಪೂರ್ವದಲ್ಲಿ ಕೆರೆಗೆ ಹೋಗುವುದಕ್ಕಾಗಿ ಸೋಪಾನದ ಮೆಟ್ಟಲುಗಳಿವೆ. ಶಾಕ್ತಾಗಮಗಳ ದೃಷ್ಟಿಯಿಂದ ದೊಡ್ಡ ಗದ್ದವಳ್ಳಿಯ ದೇವಾಲಯ ಬಹಳ ಮುಖ್ಯವಾದುದು.

೬೨. **ಸೆಟ್ಟಿಕೆರೆ :** ಚಿಕ್ಕನಾಯಕನ ಹಳ್ಳಿಗೆ ನೈರುತ್ಯದಲ್ಲಿ ಐದು ಮೈಲಿ ದೂರದಲ್ಲಿ ಸೆಟ್ಟಿಕೆರೆ ಇದೆ. ಈ ಹಳ್ಳಿಯ ನೈರುತ್ಯದಲ್ಲಿರುವ ಕೆರೆಯ ಹತ್ತಿರ ಹೊಯ್ಸಳ ಕಾಲದ ಅಗ್ರಹಾರವಿದ್ದಿತು. ಪಶ್ಚಿಮದಲ್ಲಿ ವಿಷ್ಣುದೇವಾಲಯ ಈಶಾನ್ಯದಲ್ಲಿ ಶಿವದೇವಾಲಯಗಳಿವೆ. ಯೋಗ ಮಾಧವ ದೇವಾಲಯ ತ್ರಿಕೂಟವಾಗಿದ್ದರೂ ಪಶ್ಚಿಮದ ಗರ್ಭಗುಡಿಗೆ ಮಾತ್ರ ಸುಕನಾಸಿ ಶಿಖರಗಳಿವೆ. ನವರಂಗದ ಆಗ್ನೇಯ ಮೂಲೆಯಲ್ಲಿರುವ ಶಾಸನದಿಂದ ಶಕ ೧೧೯೮ ದುರ್ಮತಿ(ಕ್ರಿ. ಶ. ೧೨೬೧)ಯಲ್ಲಿ ಮೂರನೆಯ ನರಸಿಂಹನ ದಂಡನಾಯಕನಾದ ಗೋಪಾಲ ದಣಾಯಕನು ಅಗ್ರಹಾರ ಮಾಡಿಸಿದನೆಂದು ತಿಳಿದುಬರುವುದು. ಮೂರು ಗರ್ಭಗುಡಿಗಳು ಪಶ್ಚಿಮದ ಸುಕನಾಸಿ ಒಳಗಿನ ನವರಂಗ ಪೂರ್ವದ ಒಂದು ಅಂಕಣದ ಮುಖ ಮಂಡಪ ಹೊಯ್ಸಳ ಕಾಲದ್ದಾಗಿವೆ. ಅನಂತರ ಮುಖಮಂಡಪದ ಜಗತಿಗಳನ್ನು ತೆಗೆದು ಹೊರಗಿನ ನವರಂಗವನ್ನು ಬಳಪದಕಲ್ಲು ಕಣಶಿಲೆಗಳಿಂದ ಕಟ್ಟಿರುವರು. ಈ ನವರಂಗದಲ್ಲಿ ದಕ್ಷಿಣದಲ್ಲಿ ಒಂದು ಸಣ್ಣ ಗರ್ಭಗುಡಿ, ಪೂರ್ವ ಉತ್ತರದಲ್ಲಿ ಎರಡು ದ್ವಾರಗಳು ಸೇರಿಸಲ್ಪಟ್ಟವು. ಮಹಾದ್ವಾರ ಮತ್ತು ಎತ್ತರವಾದ ಗರುಡಸ್ತಂಭವನ್ನು ಆಮೇಲೆ ಸೇರಿಸಿದಂತೆ ಕಂಡುಬರುತ್ತದೆ.

ಜಗತಿಯು ನಕ್ಷತ್ರಾಕಾರವಾಗಿ ಮೂರಡಿ ಎತ್ತರವಿದೆ. ಇದರ ಮೇಲೆ ಐದು ಸಾಲುಗಳಿವೆ. ನವರಂಗವು ಚತುರಸ್ರವಾಗಿದೆ. ಈ ಜಗತಿಯ ಮೇಲೆ ಗೋಡೆಯ ಪೀಠಿಕೆಯಲ್ಲಿ ಐದು ಚಿತ್ರಪಟ್ಟಿಕೆಗಳಿವೆ, ವಿಗ್ರಹಗಳಿಲ್ಲ. ಗೋಡೆಯ ಮೇಲ್ಭಾಗದಲ್ಲಿ ಶಿಖರಗಳು ವಿವಿಧ ರೂಪಗಳಲ್ಲಿವೆ. ನಕ್ಷತ್ರಾಕಾರದ ಗರ್ಭಗುಡಿಗೆ ಉತ್ತರ ದಕ್ಷಿಣ ಪಶ್ಚಿಮಗಳಲ್ಲಿ ಚತುರಸ್ರ ಭಾಗಗಳು

ಸೇರಿಸಲ್ಪಟ್ಟಿವೆ. ಮೇಲ್ಛಾವಣಿಯ ಬೋದಿಗೆ ಕೈಪಿಡಿ ಗೋಡೆಯಮೇಲೆ ಸಣ್ಣ ಗೋಪುರಗಳಿವೆ. ವಿಮಾನವು ನಾಲ್ಕು ಸಾಲು ಶಿಖರಗಳನ್ನೂ ಕಲ್ಲಿನ ಕಳಶವನ್ನೂ ಹೊಂದಿದೆ. ಹೆಚ್ಚು ಕೆತ್ತನೆ ಇಲ್ಲ.

ಹೊರಗಿನ ನವರಂಗದಲ್ಲಿ ಬಳಪದಕಲ್ಲಿನ ಭಾಗಗಳನ್ನು ಮತ್ತಾವ ದೇವಾಲಯದಿಂದಲೋ ತಂದು ಕಣಶಿಲೆಯೊಡನೆ ಜೋಡಿಸಿರುವರು. ಉತ್ತರ ದ್ವಾರವನ್ನು ಮುಚ್ಚಿರುವರು. ಪೂರ್ವ ದ್ವಾರವು ಸಾಮಾನ್ಯ ವಾಗಿದೆ. ನೈರುತ್ಯ ಮೂಲೆಯಲ್ಲಿರುವ ಗುಡಿಯಲ್ಲಿ ಹೊಯ್ಸಳ ಕಾಲದ ದೇವೀ ವಿಗ್ರಹವನ್ನಿಟ್ಟಿರುವರು. ದೇವಿಯು ಸುಖಾಸನದಲ್ಲಿ ಕುಳಿತು ಅಭಯ ಹಸ್ತ ಪದ್ಮ ದಾನಮುದ್ರೆಗಳನ್ನು ಹೊಂದಿರುವಳು (ಲಕ್ಷ್ಮೀ). ಪೀಠದಲ್ಲಿ ಸಿಂಹವಿದೆ. ತೋರಣ ನಾಗಬಂಧದಲ್ಲಿದೆ. ಇದನ್ನು ಲಕ್ಷ್ಮಿ ಯೆಂದು ಪೂಜಿಸುತ್ತಿದ್ದರೂ ಪಾರ್ವತಿಯಂತೆ ಕಂಡುಬರುತ್ತದೆ. ಹಳ್ಳಿಯ ಆಗ್ನೇಯದಲ್ಲಿದ್ದ ಒಂದು ಶಿವಾಲಯದಿಂದ ತಂದು ಇಲ್ಲಿಟ್ಟಿರಬೇಕು. ಈ ಹೊರನವರಂಗದ ಎರಡು ಬಳಪದಕಲ್ಲಿನ ಸ್ತಂಭಗಳು ಹೊಯ್ಸಳ ರೀತಿಯಲ್ಲಿವೆ. ಮೇಲ್ಛಾವಣಿಯಲ್ಲಿ ಪದ್ಮದ ದಳಗಳು ಮತ್ತು ಮಧ್ಯದ ಮೊಗ್ಗು ಬಣ್ಣದಿಂದ ಅಲಂಕೃತವಾಗಿವೆ. ಇದರಿಂದ ಒಳಗಿನ ನವರಂಗಕ್ಕೆ ಒಂದು ಹೊಯ್ಸಳ ದ್ವಾರವಿದೆ. ಒಳಗಿನ ನವರಂಗದಲ್ಲಿ ಒಂಬತ್ತಂಕಣ ಗಳಿವೆ. ಇದರ ಪಶ್ಚಿಮ ಗೋಡೆಯಲ್ಲಿ ಗಣೇಶ ಮಹಿಷಮರ್ದಿನಿ ವಿಗ್ರಹ ಗಳಿವೆ. ಮಹಿಷಮರ್ದಿನಿ ಒಂದು ಕಾಲು ಮೇಲೆ ನಿಂತು ಮತ್ತೊಂದು ಕಾಲಿನಿಂದ ಮಹಿಷವನ್ನು ತುಳಿಯುತ್ತಿರುವಳು. ಇಲ್ಲಿ ನಾಲ್ಕು ದುಂಡಾದ ಸ್ತಂಭಗಳು, ಮೇಲ್ಛಾವಣಿಯಲ್ಲಿ ಪದ್ಮಗಳು ಇವೆ.

ದಕ್ಷಿಣ ಗರ್ಭಗುಡಿಯ ದ್ವಾರದಲ್ಲಿ ವೈಷ್ಣವ ದ್ವಾರಪಾಲಕರು ಇರುವರು. ಸುಂದರವಾದ ವೇಣುಗೋಪಾಲ ಐದಡಿ ಎತ್ತರವಿದೆ. ತೋರಣದಲ್ಲಿ ದಶಾವತಾರಗಳಿವೆ. ಉತ್ತರ ಗರ್ಭಗುಡಿಯಲ್ಲಿ ಲಕ್ಷ್ಮೀ ನಾರಾಯಣ ವಿಗ್ರಹವಿದೆ. ಸುಖಾಸನದಲ್ಲಿ ಕುಳಿತಿರುವ ನಾರಾಯಣನು ಶಂಖ ಪದ್ಮ ಗದಾ ಚಕ್ರಗಳನ್ನು ಹಿಡಿದಿರುವನು. ಎಡತೊಡೆಯ ಮೇಲೆ ಲಕ್ಷ್ಮಿ ಕುಳಿತಿರುವಳು. ಪ್ರಭಾವಳಿಯಲ್ಲಿ ದಶಾವತಾರಗಳಿವೆ.

ಪಶ್ಚಿಮ ಗರ್ಭಗುಡಿಯ ಸುಕನಾಸಿ ದ್ವಾರದಲ್ಲಿ ಜಾಲಂಧ್ರವಿದೆ.

ಇಲ್ಲಿ ಈಗ ರಾಮಾನುಜ, ನಮ್ಮಾಳ್ವಾರರ ವಿಗ್ರಹಗಳನ್ನಿಟ್ಟಿರುವರು. ಗರ್ಭಗೃಹದ ದ್ವಾರದಲ್ಲಿ ದ್ವಾರಪಾಲಕರು, ಮೇಲೆ ಐದು ಶಿಖರಗಳು ಇವೆ. ಗರುಡಪೀಠದ ಮೇಲೆ ಒಂಬತ್ತಡಿ ಎತ್ತರದ ಯೋಗಮಾಧವ ವಿಗ್ರಹವಿದೆ. ಪದ್ಮಾಸನದಲ್ಲಿ ಒಂದು ಕಾಲ್ಮೇಲೆ ಮತ್ತೊಂದು ಕಾಲನ್ನು ಇಟ್ಟು ಎಡಗೈಯಲ್ಲಿ ಬಲಗೈಯನ್ನು ಇಟ್ಟುಕೊಂಡು ಜೈನ ಬೌದ್ಧ ವಿಗ್ರಹಗಳಂತೆ ವಿಷ್ಣುವು ಕುಳಿತಿರುವನು. ಹಿಂದಿನ ಕೈಗಳಲ್ಲಿ ಚಕ್ರ (ಬಲಗಡೆ), ಶಂಖ (ಎಡಗೈ)ಗಳಿವೆ. ಮೇಲಿನ ತೋರಣದಲ್ಲಿ ದಶಾವತಾರಗಳು ಸಿಂಹಮುಖ ಕುಳಿತಿರುವ ಒಂದು ವಿಗ್ರಹವಿದೆ. ಯೋಗಮಾಧವನಿಗೆ ಸುಂದರವಾದ ಕಿರೀಟ ಬೆರಳಿನ ಉಂಗುರ ಭುಜಕೀರ್ತಿ ಕಾಲುಂಗುರ ಇತ್ಯಾದಿ ಆಭರಣ ಗಳಿವೆ. ಕಣ್ಣುಗಳು ತೆರೆದಿವೆ. ಮುಖದಲ್ಲಿ ಮಂದಹಾಸವಿದೆ. ಯೋಗ ಮಾಧವ ವಿಗ್ರಹ ಅಪರೂಪವಾದುದು.

ಮಹಾದ್ವಾರವು ಬಳಪದಕಲ್ಲಿನ ಒರಟಾದ ಅಷ್ಟಕೋಣ ಕಂಬ ಗಳನ್ನು ಹೊಂದಿದೆ. ಇದರ ಎದುರಿನಲ್ಲಿ ಮೂವತ್ತೈದಡಿ ಎತ್ತರದ ಕಣಶಿಲೆಯ ಗರುಡಸ್ತಂಭವಿದೆ.

ಈ ಹಳ್ಳಿಯ ಈಶ್ವರ ದೇವಾಲಯದಲ್ಲಿರುವ ಭೈರವ ಕೇಶವ ವಿಗ್ರಹಗಳು ಪ್ರಾಚೀನ. ರಂಗನಾಥ ಹನುಮಂತ ದೇವಾಲಯಗಳು ಪಾಳೆಯಗಾರರ ಕಾಲದ್ದಾಗಿವೆ.

೬೩. ತುರುವೆಕೆರೆ : ಬಾಣಸಂದ್ರಕ್ಕೆ ಎಂಟು ಮೈಲಿ ದಕ್ಷಿಣದಲ್ಲಿ ತುರುವೆಕೆರೆ ಇದೆ. ಇದರ ಉತ್ತರದಲ್ಲಿರುವ ಕೆರೆಯಿಂದ ಈ ಹೆಸರು ಬಂದಿದೆ. ಸೋಮನಾಥಪುರವನ್ನು ಕಟ್ಟಿಸಿದ ಸೋಮೇಶ್ವರ ದಂಡ ನಾಯಕನು ೧೨೬೩ರಲ್ಲಿ ಇಲ್ಲಿ ದಾನಗಳನ್ನು ಮಾಡಿದಾಗ, ಈ ಕೆರೆ ಚೆನ್ನಿಗರಾಯ ಶಂಕರೇಶ್ವರ ದೇವಾಲಯಗಳಿದ್ದವೆಂದು ಹೇಳಬಹುದು. ಚೆನ್ನಿಗರಾಯ, ದೇವಾಲಯಕ್ಕೆ ಮೂರಡಿ ಎತ್ತರದ ನಕ್ಷತ್ರಾಕಾರದ ಜಗತಿ ಇದೆ. ಮೇಲಿನ ಗೋಡೆಯ ಪೀಠದಲ್ಲೂ ಐದು ಪಟ್ಟಿಕೆಗಳಿವೆ. ಕೆತ್ತನೆ ಇಲ್ಲ. ಗೋಡೆಯ ಮೇಲ್ಭಾಗದಲ್ಲಿ ಕಂಬಗಳು ಶಿಖರಗಳು ಇವೆ. ಮೇಲ್ಛಾವಣಿಯ ಬೋದಿಗೆ ಕೈಪಿಡಿ ಗೋಡೆಗಳು ಸಾಮಾನ್ಯವಾಗಿವೆ. ಗರ್ಭಗುಡಿಯ ಮೇಲೆ ಐದಂತಸ್ತಿನ ವಿಮಾನವಿದೆ. ಕೊನೆಯಲ್ಲಿ ಕಲ್ಲಿನ

ಕಲಶವಿದೆ. ಸುಕನಾಸಿ ನವರಂಗಗಳು ಚತುರಸ್ರವಾಗಿವೆ. ಮುಖಮಂಡಪದಲ್ಲಿ ಕಲ್ಲಿನ ಜಗತಿಗಳು ಕಟಾಂಜನ ದುಂಡಾದ ಕಂಬಗಳು ಪದ್ಮವುಳ್ಳ ಮೇಲ್ಛಾವಣಿ ಇವೆ.

ನವರಂಗದ್ವಾರದಲ್ಲಿ ಇಬ್ಬರು ವೈಷ್ಣವ ದ್ವಾರಪಾಲಕರು, ಮೇಲೆ ವೇಣುಗೋಪಾಲ ವಿಗ್ರಹ ಇವೆ. ನವರಂಗದ ನಾಲ್ಕು ಕಂಬಗಳು ದುಂಡಾಗಿವೆ. ಮೇಲ್ಛಾವಣಿಯ ಭುವನೇಶ್ವರಿಗಳು ಎಂಟು ಪದ್ಮಗಳನ್ನು ಹೊಂದಿವೆ. ಸುಕನಾಸಿ ಹತ್ತಿರವಿರುವ ಭುವನೇಶ್ವರಿಯಲ್ಲಿ ಒಂಬತ್ತು ಭಾಗಗಳಿದ್ದು ಪುಷ್ಪಗಳಿವೆ.

ಸುಕನಾಸಿ ದ್ವಾರದಲ್ಲಿ ಜಾಲಂಧ್ರವಿದೆ. ಗರ್ಭಗುಡಿಯಲ್ಲಿ ಐದೂವರೆ ಅಡಿ ಎತ್ತರದ ಸಾಮಾನ್ಯವಾದ ಚೆನ್ನಕೇಶವ ವಿಗ್ರಹವಿದೆ. ತೋರಣದಲ್ಲಿ ದಶಾವತಾರಗಳಿವೆ.

ಮೂಲೆಶಂಕರೇಶ್ವರ ಗುಡಿಯು ಚೆನ್ನಕೇಶವ ಗುಡಿಯಂತೆಯೇ ಇದೆ. ಆದರೆ ಜಗತಿ ಇಲ್ಲ. ಶಿಖರವು ನುಗ್ಗಿಹಳ್ಳಿ ಶಿಖರದಂತೆ ನಕ್ಷತ್ರಾಕಾರವಾಗಿ ನಾಲ್ಕು ಅಂತಸ್ತುಗಳಲ್ಲಿ ಪಿರಮಿಡ್ ಆಕಾರದ ಗೋಪುರಗಳನ್ನು ಹೊಂದಿದೆ. ನವರಂಗದ್ವಾರದಲ್ಲಿರುವ ಕಂಬಗಳು ಆನೆಕೊಂಡ ದೇವಾಲಯದಲ್ಲಿದ್ದಂತೆ ಹದಿನಾರು ಮೂಲೆಗಳ ಪದ್ಮಾಕಾರವಾಗಿವೆ.

ನವರಂಗದ ಪೂರ್ವಭಾಗದಲ್ಲಿ ನಂದಿ, ವಾಯುವ್ಯ ಮೂಲೆಯಿಂದ ಪ್ರದಕ್ಷಿಣೆಯಾಗಿ ವಾಹನಗಳುಳ್ಳ ಸಪ್ತಮಾತೃಕೆಯರು, ಸೂರ್ಯನ ಪೀಠದ ಮೇಲೆ ಇಟ್ಟಿರುವ ಗಣೇಶ, ಚಿಕ್ಕಗಣೇಶ, ಭೈರವ, ಚೇಳು ಇರುವ ಪೀಠದ ಮೇಲೆ ವೀರಭದ್ರ, ಸುಖಾಸನದಲ್ಲಿ ಕುಳಿತು ರಾಕ್ಷಸನ ತಲೆಯನ್ನು ಹಿಡಿದಿರುವ ಭೈರವ, ಷಣ್ಮುಖ, ಲಿಂಗಕ್ಕೆ ಅಭಿಮುಖವಾಗಿರುವ ನಂದಿ ವಿಗ್ರಹಗಳಿವೆ.

ಗರ್ಭಗುಡಿಯಲ್ಲಿ ಕರಿಯ ಕಲ್ಲಿನ ನಾಲ್ಕಡಿ ಎತ್ತರದ ಲಿಂಗವಿದೆ. ಗಂಗಾಧರ ಮತ್ತು ಬೇಟೆರಾಯ ಗುಡಿಗಳು ಹದಿನೆಂಟನೆಯ ಶತಮಾನದ್ದಾಗಿವೆ. ಬೇಟೆರಾಯ ವಿಗ್ರಹ (ಜನಾರ್ದನ) ಹೊಯ್ಸಳ ಕಾಲದ್ದಿರಬಹುದು.

೬೪. ನಿಟ್ಟೂರು : ಇಲ್ಲಿನ ಶಾಂತೀಶ್ವರ ಬಸದಿಯಲ್ಲಿ ಗರ್ಭ

ಗೃಹ, ಸುಕನಾಸಿ, ಒಂಬತ್ತಂಕಣಗಳ ನವರಂಗದ ಹಳೆಯ ಭಾಗಗಳು. ಅನಂತರ ಈಶಾನ್ಯದಲ್ಲಿ ಪದ್ಮಾವತಿಗಾಗಿ ಒಂದು ಗುಡಿಯನ್ನು ಕಟ್ಟಿ ಎರಡಕ್ಕೂ ಸಂಬಂಧಿಸಿದಂತೆ ಮುಖಮಂಡಪವನ್ನು ಕಟ್ಟಲಾಯಿತು. ಈಚೆಗೆ ಮುಖಮಂಡಪವನ್ನು ಮುಚ್ಚಿ ಅದಕ್ಕೆ ದಕ್ಷಿಣದಲ್ಲಿ ಬ್ರಹ್ಮದೇವನಿಗಾಗಿ ಒಂದು ಗುಡಿಯನ್ನೂ, ಮತ್ತೊಂದು ಮುಖಮಂಡಪ ಮಹಾದ್ವಾರಗಳನ್ನೂ ಸೇರಿಸಿರುವರು.

ದೇವಾಲಯಕ್ಕೆ ಜಗತಿಯಿಲ್ಲ. ಗೋಡೆಯ ಪೀಠದಲ್ಲಿ ಐದು ಪಟ್ಟಿಕೆಗಳು ಚಿತ್ರಗಳಿಲ್ಲದೆ ಇವೆ. ಗೋಡೆಯ ಮೇಲ್ಭಾಗದಲ್ಲಿ ನಾಲ್ಕು ದಳದ ಹೂಗಳು ಮತ್ತು ಶಿಖರಗಳು ಇವೆ. ಎರಡು ಮೇಲ್ಚಾವಣೆಗಳಿವೆ. ಕೈಪಿಡಿ ಗೋಡೆಯನ್ನು ಇಟ್ಟಿಗೆ ಗಾರೆಯಿಂದ ಕಟ್ಟಿರುವರು. ನವರಂಗದ ಹೊರಗೋಡೆಯಲ್ಲಿರುವ ಗೂಡುಗಳು ಶಿಖರಗಳಿಂದ ಅಲಂಕೃತವಾಗಿವೆ. ನವರಂಗದ ಉತ್ತರದಲ್ಲಿ ಜೈನ ಶಾಸನವಿದೆ. ಚಂದ್ರಸಿದ್ಧಾಂತಿ ಚಕ್ರವರ್ತಿಯ ಶಿಷ್ಯನಾದ "ಧರ್ಮಾಂಬುನಿಧಿ" ಎಂಬ ಬಿರುದುಳ್ಳವನ ಹೆಸರು, ಮಾಳಬ್ಬೆ ಚೌಡಿಯಕ್ಕರ ನಿಸಿದಿ ಎಂದು ಈ ಶಾಸನ ಹೇಳುವುದು.

ಒಳಗಿನ ಮುಖಮಂಡಪದ ಕಂಬಗಳು ದುಂಡು, ಹದಿನಾರು ಕೋಣ, ಅಷ್ಟಕೋಣ, ಮೂವತ್ತೆರಡು ಕೋಣ, ಆರು ಕೋಣ, ನಕ್ಷತ್ರ ಕಮಲಗಳಂತೆ ವಿವಿಧ ರೀತಿಯಲ್ಲಿದೆ. ಬಳಪದಕಲ್ಲಿನ ಐದಡಿ ಉದ್ದದ ಶಾಸನದ ಕಲ್ಲಿನಲ್ಲಿ ಹೊಯ್ಸಳ ಕನ್ನಡ ಅಕ್ಷರಗಳಿವೆ. ಈ ಬಸದಿ ಮೂಲ ಸಂಘ ದೇಶೀಗಣಕ್ಕೆ ಸೇರಿದುದು. ನವರಂಗ ದ್ವಾರದ ಕಂಬಗಳು ಅಲಂಕೃತವಾಗಿವೆ. ದ್ವಾರದಮೇಲೆ ಜಿನವಿಗ್ರಹ ಕನ್ನಡ ಶಾಸನವಿದೆ. ಶಿಲ್ಪಿ ಮಾಳೊಪಿಯ ಮಲ್ಲಯನ ಹೆಸರಿದೆ.

ನವರಂಗದ ಮೇಲ್ಚಾವಣಿಯ ಭುವನೇಶ್ವರಿಗಳು ಚೆನ್ನಾಗಿದೆ. ಆದರೆ ಇಲ್ಲಿ ಒಂದು ವಿಗ್ರಹವನ್ನಿಟ್ಟಿರುವರು. ಮೂಲಗರ್ಭಗುಡಿಯಲ್ಲಿನ ಅಂಧಕಾರದಲ್ಲಿ ಶಾಂತಿನಾಥ ವಿಗ್ರಹವಿದೆ.

೬೫. ಕಡಬ : ಷಿಂಷಾ ಹೊಳೆಯ ಹತ್ತಿರ ಇರುವ ಕಡಬದ ಕೈಲಾಸೇಶ್ವರಗುಡಿ ಚೋಳರ ಕಾಲದ ಕಟ್ಟಡವಾಗಿದ್ದು ಈಚೆಗೆ ಪಾಳೆಯಗಾರರ ಕಾಲದಲ್ಲಿ ಇಟ್ಟಿಗೆ ಗೋಪುರಗಳನ್ನು ಸೇರಿಸಿರುವರು. ಗರ್ಭ

ಗೃಹದ ಉತ್ತರ ಪಶ್ಚಿಮ ಗೋಡೆಗಳಮೇಲೆ ಗ್ರಂಥಾಕ್ಷರದ ಶಾಸನಗಳಿವೆ. ಇಲ್ಲಿನ ಶ್ರೀರಾಮದೇವಾಲಯದಲ್ಲಿರುವ ಯೋಗನರಸಿಂಹ ವಿಗ್ರಹ ಮಾತ್ರ ಹೊಯ್ಸಳ ಕೆಲಸವಾಗಿದೆ.

೬೬. ಬೂದ್ನೂರು : ಮಂಡ್ಯಕ್ಕೆ ನಾಲ್ಕೂವರೆ ಮೈಲಿ ಪೂರ್ವದಲ್ಲಿ ಹೊಸ ಬೂದನೂರಿದೆ. ಹೊಯ್ಸಳ ಮೂರನೆಯ ನರಸಿಂಹನ ಕಾಲದಲ್ಲಿ ಬಹುಶಃ ೧೨೬೬ರಲ್ಲಿ ಯುವರಾಜನಾದ ಮೂರನೆಯ ವೀರ ಬಲ್ಲಾಳನು ಅಗ್ರಹಾರವನ್ನು ಮಾಡಿಸಿದನು. ಇವನ ನಿಜವಾದ ಹೆಸರು ಮಲ್ಲಿಕಾರ್ಜುನ ಎಂಬುದು ಶಾಸನದಲ್ಲಿ ಕಂಡುಬರುತ್ತದೆ. ಬೂದ್ನೂರು ಹತ್ತಿರವಿರುವ ಗುತ್ತಲು ಗ್ರಾಮದಲ್ಲಿ ಹೊಯ್ಸಳ ಸೈನ್ಯ ತಮಿಳು ಅಧಿಕಾರಿಗಳು ಗಡಿಯನ್ನು ಕಾಯುತ್ತಿದ್ದರು.

ಇಲ್ಲಿನ ಕಾಶೀವಿಶ್ವೇಶ್ವರ ಅನಂತಪದ್ಮನಾಭ ದೇವಾಲಯಗಳು ಒಂದೇ ಕಾಲದಲ್ಲಿ ನಿರ್ಮಿತವಾದವು. ಎರಡೂ ಪಾಳುಬಿದ್ದಿವೆ. ವಿಶ್ವೇಶ್ವರ ದೇವಾಲಯಕ್ಕೆ ಪ್ರಾಕಾರ ಆಗ್ನೇಯದಲ್ಲಿ ಮಹಾದ್ವಾರಗಳಿದ್ದವು. ಈಗ ಶಿಖರ ಹೊರಗೋಡೆಗಳೂ ಬಿದ್ದುಹೋಗಿವೆ. ಜಗತಿಯು ಮುಚ್ಚಿಹೋಗಿದೆ. ಗೋಡೆಯ ಪೀಠಿಕೆಯಲ್ಲಿ ಏಳು ಸಾಲುಗಳಿವೆ. ಗೋಡೆಯನ್ನು ಎರಡು ಭಾಗವಾಗಿ ವಿಂಗಡಿಸಿದೆ. ಕೆಳಭಾಗದಲ್ಲಿ ಕೆತ್ತನೆಯಿಲ್ಲ. ಮೇಲೆ ಶಿಖರಗಳಿವೆ. ವಿಮಾನ ಮೇಲ್ಛಾವಣಿಯ ಬೋದಿಗೆಗಳು ಹೋಗಿವೆ.

ಮುಂದಿನ ಮುಖಮಂಡಪಕ್ಕೆ ಕಟಾಂಜನಗಳಿದ್ದವು ; ಜಗತಿಗಳಿವೆ. ಎರಡು ದುಂಡಾದ ಬಳಪದಕಲ್ಲಿನ ಕಂಬಗಳಿವೆ. ಮೇಲ್ಛಾವಣಿ ಸುಂದರವಾಗಿದೆ. ಎರಡು ಸಾಲು ನಕ್ಷತ್ರಾಕಾರದ ಬೋದಿಗೆಗಳ ಮಧ್ಯದಲ್ಲಿ ಹೂವಿನ ದಳ, ಹನ್ನೆರಡು ಮೂಲೆಗಳ ನಕ್ಷತ್ರಗಳು ಇವೆ. ಮಧ್ಯದಿಂದ ಜೋಲಾಡುವ ಕರ್ಣಿಕೆ ಬಾಳೆಕಾಯಿಗಳ ಗೊಂಚಲಿನಂತಿದೆ.

ನವರಂಗದ್ವಾರದಮೇಲೆ ತಾಂಡವೇಶ್ವರವಿದೆ, ದ್ವಾರಪಾಲಕರಿಲ್ಲ. ಮುಂದೆ ಕೊರೆಯಲು ಹಾಗೆಯೇ ಬಿಟ್ಟಿರುವರು. ಒಂಬತ್ತಂಕಣದ ನವರಂಗದ ಮಧ್ಯದಲ್ಲಿ ದೊಡ್ಡದಾದ ನಂದಿ ಇದೆ (ಇದನ್ನು ಮಂಡ್ಯದ ಟೌನ್‌ಹಾಲಿಗೆ ಸಾಗಿಸಿರುವರು). ನವರಂಗದ ಪಶ್ಚಿಮ ಭಾಗದಲ್ಲಿ

ಐದು ಗೂಡುಗಳಿವೆ. ಬಹುಶಃ ಪಂಚಾಯತನ ವಿಗ್ರಹಗಳಿದ್ದಿರಬಹುದು. ಗಣೇಶ ಕುಮಾರ ಸಪ್ತಮಾತೃಕೆಯರನ್ನು ಈಗ ಪೂರ್ವದಲ್ಲಿ ಕಟ್ಟಿರುವ ಗುಡಿಯಲ್ಲಿಟ್ಟಿರುವರು. ಸುಮಾರು ೧೩೦೦ರಲ್ಲೂ ಹೊಯ್ಸಳ ಶಿಲ್ಪ ಚೆನ್ನಾಗಿದ್ದಿತೆಂದು ಇವುಗಳಿಂದ ಕಂಡುಬರುತ್ತದೆ. ನವರಂಗದ ನಾಲ್ಕು ಕಂಬಗಳು ದಪ್ಪವಾಗಿ ಗುಂಡಾಗಿವೆ. ಮಧ್ಯದ ಭುವನೇಶ್ವರಿ ಮುಖ ಮಂಡಪದ ಭುವನೇಶ್ವರಿಯಂತೆಯೇ ಸುಂದರವಾಗಿದೆ. ಕೆಳಗಿನ ಸಾಲಿನಲ್ಲಿ ಅಷ್ಟದಿಕ್ಪಾಲಕರಿರುವರು.

ಸುಕನಾಸಿ ದ್ವಾರದಲ್ಲಿ ಬಲಗಡೆ ಮಾತ್ರ ಶೈವದ್ವಾರಪಾಲ ಇದೆ; ಎಡಗಡೆಯದು ಹೋಗಿದೆ. ಮೇಲ್ಛಾವಣಿಗಳಲ್ಲಿ ಒಂಬತ್ತು ಹೂವುಗಳಿವೆ. ಗರ್ಭಗೃಹದಲ್ಲಿ ಮೂರು ಗೂಡುಗಳಲ್ಲಿ ಪೀಠ ಮಾತ್ರ ಇದೆ. ಲಿಂಗವು ಅದೃಶ್ಯವಾಗಿದೆ. ಇದರ ಪೂರ್ವದಲ್ಲಿ ಭೈರವ ಗುಡಿ ಇದ್ದಿತು. ಈಚೆಗೆ ಭೈರವ ವಿಗ್ರಹ ಅದೃಶ್ಯವಾಗಿ ಚೇಳು ಇರುವ ಪೀಠ ಮಾತ್ರ ಉಳಿದಿದೆ.

ಆಗ್ನೇಯದಲ್ಲಿರುವ ಮಹಾದ್ವಾರದಲ್ಲಿ ದುಂಡಾದ ಕಂಬಗಳಿವೆ. ಬಹುಶಃ ಹೊಯ್ಸಳ ಕಾಲದ್ದಾಗಿರಬಹುದು.

ಪಶ್ಚಿಮದಲ್ಲಿರುವ ಅನಂತಪದ್ಮನಾಭ ಗುಡಿ ಕಾಶೀವಿಶ್ವೇಶ್ವರ ಗುಡಿಯಂತೆಯೇ ಇದೆ. ದೊಡ್ಡ ಕಲ್ಲುಗಳ ತಳಪಾಯದ ಮೇಲೆ ಹೊಯ್ಸಳ ಶಿಲ್ಪಿಗಳು ಕಟ್ಟಿರುವರು. ಹಳೆಯ ಪ್ರಾಕಾರ ಜಗತಿಗಳು ಅಲ್ಲಲ್ಲಿ ಕಂಡುಬರುತ್ತವೆ. ಗೋಡೆಯ ಪೀಠಿಕೆಯಲ್ಲಿ ಐದು ಪಟ್ಟಿಕೆಗಳು ಮಾತ್ರ ಇವೆ. ಶಿಖರವು ಚೆನ್ನಾಗಿದ್ದರೂ ಅಲಂಕೃತವಾಗಿಲ್ಲ. ಮುಖಮಂಡಪದ ಹತ್ತಿರ ದುಂಡಾದ ಕಂಬಗಳು, ಮೇಲ್ಛಾವಣಿಯ ಭಾಗಗಳು ಬಿದ್ದಿವೆ. ಕಟಾಂಜನದ ಕೆಲವು ಭಾಗಗಳನ್ನು ಹೊಸದಾಗಿ ಕಟ್ಟಿರುವ ಗುಡಿಯಲ್ಲಿ ಸೇರಿಸಿರುವರು.

ನವರಂಗದ್ವಾರದ ಮೇಲೆ ವಿನ್ಯಾಸರೇಖೆಗಳು ಮಾತ್ರ ಇವೆ. ನವರಂಗದಲ್ಲಿ ಒಂಬತ್ತಂಕಣಗಳು, ದಪ್ಪವಾದ ಕಂಬಗಳು, ಎರಡು ಗೂಡುಗಳು ಇವೆ. ಬಹುಶಃ ಈಗ ಬಾಗಿಲ ಹತ್ತಿರ ಮುರಿದುಬಿದ್ದಿರುವ ವಿಷ್ಣು ವಿಗ್ರಹವು ಒಂದು ಗೂಡಿನಲ್ಲಿದ್ದಿತು. ಮಧ್ಯದ ಭುವನೇಶ್ವರಿಯಲ್ಲಿ ಛತ್ರಾಕಾರದ ನಕಾಶೆ ಇದೆ. ನವರಂಗದ ಆಗ್ನೇಯ ಮೂಲೆಯಲ್ಲಿ

ಶಕ ೧೧೯೧(ಕ್ರಿ. ಶ. ೧೨೬೭)ನೆಯ ಮೂರನೆಯ ನರಸಿಂಹನ ಶಾಸನವಿದೆ. ಸುಕನಾಸಿ ದ್ವಾರವು ಚೆನ್ನಾಗಿ ಅಲಂಕೃತವಾಗಿದೆ. ಇದರ ದ್ವಾರಪಾಲಕರು ಹೊರಗೆ ಬಿದ್ದಿರುವರು. ಗರ್ಭಗೃಹ ದ್ವಾರದಮೇಲೆ ಲಕ್ಷ್ಮಿ ಇದೆ. ಒಳಗಿದ್ದ ವಿಗ್ರಹವನ್ನು ಈಗ ಪೂರ್ವದಲ್ಲಿ ಕಟ್ಟಿರುವ ಒಂದು ಗುಡಿಯಲ್ಲಿಟ್ಟಿರುವರು. ಸುಮಾರು ಆರು ಅಡಿ ಎತ್ತರವಿರುವ ಪದ್ಮನಾಭನು ಶಂಖ ಪದ್ಮ ಚಕ್ರ ಗದೆಯನ್ನು ಹಿಡಿದಿರುವನು. ಪೀಠದಲ್ಲಿ ಗರುಡ, ಮೇಲಿನ ತೋರಣದಲ್ಲಿ ದಶಾವತಾರಗಳು ಇವೆ. ಇಲ್ಲಿನ ವಿಗ್ರಹಗಳಲ್ಲಿ ಪದ್ಮಾಸನದಲ್ಲಿ ಕುಳಿತಿರುವ ವಿಷ್ಣು(ಧನ್ವಂತರಿ?)ವನ್ನು ಹೊಸ ಗುಡಿಯಲ್ಲಿಡಲಾಗಿದೆ.

೬೭. ಶಿವಗಂಗೆ: ನೆಲಮಂಗಲ ತಾಲ್ಲೂಕಿನಲ್ಲಿ ಇರುವ ಶಿವಗಂಗೆಯು ಗಂಗ ರಾಷ್ಟ್ರಕೂಟರ ಕಾಲದಿಂದ ಪ್ರಸಿದ್ಧವಾಗಿದ್ದಿತು. ವಿಷ್ಣುವರ್ಧನನ ಕಾಲದಲ್ಲಿ ಇದು ಶೈವ ಮತ್ತು ಜೈನ ಕೇಂದ್ರವಾಗಿದ್ದಿತು. ವಿಷ್ಣುವರ್ಧನನ ಪಿರಿಯರಸಿ ಪಟ್ಟಮಹಾದೇವಿಯಾದ ಶಾಂತಲೆಯು ಪ್ರಭಾಚಂದ್ರರ ಸನ್ನಿಧಿಯಲ್ಲಿ ಇಲ್ಲಿ ಸಲ್ಲೇಖನ ವಿಧಿಯಿಂದ ಪ್ರಾಣವನ್ನು ತ್ಯಜಿಸಿದಳು. ವಿಷ್ಣುವರ್ಧನನ ಆಪ್ತದಂಡನಾಯಕನಾದ ಬಿಟ್ಟಿ(ವಿಷ್ಣು) ದಂಡನಾಥನು ಇಲ್ಲಿನ ಮಂಡಪಗಳನ್ನು ಕಟ್ಟಿಸಿದನೆಂದು ಶಾಸನಗಳು ಹೇಳುವುವು. ಆದರೆ ಈಗ ಹೊಯ್ಸಳ ಕುರುಹುಗಳು ಹೆಚ್ಚಾಗಿ ಕಾಣಿಸುವುದಿಲ್ಲ. ವಿಜಯನಗರ ಮತ್ತು ಕೆಂಪೇಗೌಡರ ಕಾಲದ ಕಟ್ಟಡಗಳೇ ಹೆಚ್ಚಾಗಿವೆ.

ಗಂಗಾಧರೇಶ್ವರ ದೇವಾಲಯದ ಪೂರ್ವ ಮಹಾದ್ವಾರದ ಕಣಶಿಲೆಯ ಸ್ತಂಭಗಳು ಹೊಯ್ಸಳ ಕಾಲದ್ದಾಗಿವೆ. ಈಗಿನ ನವರಂಗದಲ್ಲಿರುವ ಹಳೆಯ ಕಲ್ಯಾಣಮಂಡಪ ನಂದಿಮಂಡಪದ ಕಂಬಗಳು ಮೆರಗುಕೊಟ್ಟ ಕರಿಯ ಕಲ್ಲಿನ ಹೊಯ್ಸಳ ಸ್ತಂಭಗಳಾಗಿವೆ. ನಂದಿಮಂಡಪದ ನಾಲ್ಕು ಸ್ತಂಭಗಳಮೇಲೆ ಇರುವ ಶಾಸನಗಳಿಂದ ಕ್ರಿ. ಶ. ೧೧೯೬ರಲ್ಲಿ ಶಿವಗಂಗನಾಥನಿಗೆ ದಾನಕೊಟ್ಟಂತೆ ಕಂಡುಬರುತ್ತದೆ. ಗುಹೆಯ ಒಳಗಿನ ಶಾಲೆಯಲ್ಲಿರುವ ಒಂದೆರಡು ವಿಗ್ರಹಗಳು ಹೊಯ್ಸಳ ಕಾಲದ್ದಾಗಿವೆ. ಗರ್ಭಗುಡಿಯಲ್ಲಿರುವ ಸುಮಾರು ಮೂರು ಅಡಿ ಎತ್ತರದ

ಗಂಗಾಧರೇಶ್ವರ ಲಿಂಗ ಬಹುಶಃ ಗಂಗ ಅಥವಾ ಪಲ್ಲವರ ಕಾಲದ್ದೆಂದು ಹೇಳಬಹುದು. ಎದುರಿಗಿರುವ ನಂದಿ ಹೊಯ್ಸಳ ಕೆಲಸವಾಗಿದೆ. ಹೊನ್ನಾದೇವಿ ಮತ್ತು ಭೈರವೀ (ಕಾಮಾಕ್ಷಿ) ವಿಗ್ರಹಗಳೂ ಬಹುಶಃ ಹದಿನಾಲ್ಕನೆಯ ಶತಮಾನದ ಹೊಯ್ಸಳ ವಿಗ್ರಹಗಳು. ಬೆಟ್ಟದ ಮೇಲಿರುವ ಗಂಗೋತ್ಪತ್ತಿ ಸ್ತಂಭದ ಸುತ್ತಲೂ ಹೊಯ್ಸಳ ನರಸಿಂಹನ ಶಾಸನವಿದೆ.

ಶಿವಗಂಗೆಯಲ್ಲಿರುವ ಶಾಂತೀಶ್ವರ ದೇವಾಲಯ ಬಹುಶಃ ಗಂಗ ನೊಳಂಬರ ಕಾಲದ್ದಾಗಿದೆ. ಇದರ ಹೊರಗೋಡೆಗಳು ನಂದಿಯ ಅರುಣಾಚಲ ಗುಡಿಯ ಗೋಡೆಗಳಂತೆ ಅಲಂಕೃತವಾಗಿವೆ. ಮುಖ ಮಂಡಪ ಮತ್ತು ನವರಂಗದ ಕಂಬಗಳು ಕಣಶಿಲೆಯಿಂದ ಮಾಡಿದ್ದರೂ ಹೊಯ್ಸಳ ಸ್ತಂಭಗಳಂತಿವೆ. ಲಿಂಗವು ವೃತ್ತಾಕಾರದ ಶಿರವನ್ನು ಹೊಂದಿ ಕರಿಯ ಕಲ್ಲಿನಿಂದ ಸುಮಾರು ಮೂರು ಅಡಿ ಎತ್ತರವಾಗಿ ಮಾಡಲಾಗಿದೆ. ವಿಷ್ಣುವರ್ಧನನ ರಾಣಿಯಾದ ಶಾಂತಲೆಯ ಹೆಸರಿನಲ್ಲಿ ಶಾಂತೀಶ್ವರ ಲಿಂಗವು ಸ್ಥಾಪಿತವಾಗಿರಬಹುದು.

೬೮. ಭದ್ರಾವತಿ : ಬೆಂಕಿಪುರವೆಂದು ಹೊಯ್ಸಳರ ಕಾಲದಿಂದಿದ್ದ ಭದ್ರಾವತಿಯು ಭದ್ರಾನದಿಯ ದಡದಲ್ಲಿದೆ. ಹಳೆ ಊರಿನ ಮಧ್ಯದಲ್ಲಿರುವ ಲಕ್ಷ್ಮೀನರಸಿಂಹ ದೇವಾಲಯದಲ್ಲಿ ನವರಂಗದ ತೊಲೆಯ ಮೇಲೆ ಹೊಯ್ಸಳ ಶಾಸನವಿದೆ. ಬಹುಶಃ ಹದಿಮೂರನೆಯ ಶತಾಬ್ದದ ಮಧ್ಯದಲ್ಲಿ ಈ ದೇವಾಲಯ ನಿರ್ಮಿತವಾಯಿತು.

ತ್ರಿಕೂಟಾಚಲವಾದ ಈ ದೇವಾಲಯಕ್ಕೆ ಮೂರು ಗರ್ಭಗುಡಿಗಳು ನಕ್ಷತ್ರಾಕಾರ ಜಗತಿಯ ಮೇಲಿವೆ. ಜಗತಿಯ ಮೂಲೆಗಳಲ್ಲಿ ಆನೆಗಳಿವೆ. ಒಂದೆರಡು ಮಾತ್ರ ಕಾಣಿಸುತ್ತವೆ. ಗೋಡೆಯ ಪೀಠಿಕೆಯಲ್ಲಿ ಆರು ಪಟ್ಟಿಕೆಗಳಿವೆ. ಗೋಡೆಯನ್ನು ಮಧ್ಯದ ಬೋದಿಗೆಯಿಂದ ಎರಡು ಭಾಗ ಮಾಡಿರುವರು. ಮೇಲಿನ ಭಾಗದಲ್ಲಿ ಕಂಬಗಳು, ಗೋಪುರಗಳು ಇವೆ. ಕೆಳಗಿನ ಭಾಗದಲ್ಲಿ ಹದಿನೈದಂಗುಲ ಎತ್ತರದ ಸಾಮಾನ್ಯವಾದ ವಿಗ್ರಹಗಳಿವೆ. ಇವುಗಳಲ್ಲಿ ಮುಖ್ಯವಾದುವು :

ನವರಂಗದ ಆಗ್ನೇಯ ಗೋಡೆ—ಸ್ಥಾನಕ ವಿಷ್ಣು, ದಂಪತಿಗಳು, ಸೂರ್ಯ, ಪರಿಚಾರಿಕೆ, ನೃತ್ಯಮೋಹಿನಿ.

ಪಶ್ಚಿಮ ಗರ್ಭಗುಡಿ–ದಕ್ಷಿಣಮುಖ–ನೃತ್ಯಗಣೇಶ, ಮಹಿಷಮರ್ದಿನಿ, ನೃತ್ಯಸರಸ್ವತಿ, ಸ್ಥಾನಕ ಸರಸ್ವತಿ, ಭೈರವ, ಮಾಧವ, ವೇಣುಗೋಪಾಲ, ನೃತ್ಯಮೋಹಿನಿ, ಕಾಳಿಂಗಮರ್ದನ, ಕೇಶವ, ವೇಣುಗೋಪಾಲ ಪ್ರಭೇದಗಳು, ಬೇಡಿತಿ, ಇತ್ಯಾದಿ ರೂಪಗಳಲ್ಲಿ ಮೋಹಿನಿ, ಮಾಧವ, ಮನ್ಮಥ-ರತಿ, ಸೂರ್ಯ (ಶಿಲ್ಪಿ "ಮಾಬ"), ಹರಿಹರ, ಮೋಹಿನಿ–ದಕ್ಷಿಣಾಮೂರ್ತಿ, ಗೋವಿಂದ, ಲಕ್ಷ್ಮೀನಾರಾಯಣ.

ಉತ್ತರ ಮುಖ–ನೃತ್ಯಮೋಹಿನಿ, ಮೋಹಿನಿ-ಕಪಿ, ಕೋದಂಡ ರಾಮ, ಲಕ್ಷ್ಮಣ, ಹನುಮಂತ, ಕಾಳಿಂಗಮರ್ದನ, ಉಗ್ರನರಸಿಂಹ, ಕೇಶವ, ಹಲಾಯುಧ, ಮಾಧವ, ಗೋವರ್ಧನಧಾರಿ, ಜಲಂಧರ ಸಂಹಾರ, ಶಿವ ನರ್ತಕರು,: ನವನೀತಚೋರ ಕೃಷ್ಣ, ಮೋಹಿನಿಯ ಭಂಗಿಗಳು.

ದಕ್ಷಿಣ ಗರ್ಭಗುಡಿ ಗೋಡೆ–ನೃತ್ಯದುರ್ಗ, ಯೋಗನಾರಾಯಣ, ನೃತ್ಯಮೋಹಿನಿ, ಕೇಶವ, ವರದರಾಜ, ವಾಮನ, ವೇಣುಗೋಪಾಲ, ಜನಾರ್ದನ, ಗೋವಿಂದ, ಪಾಂಡುರಂಗ (ಕಟಿಪ್ರದೇಶದ ಕೈಗಳಲ್ಲಿ ಹೂವು ಅಥವಾ ಚೀಲ ಹಿಡಿದಿರುವನು), ದಕ್ಷಿಣಾಮೂರ್ತಿ, ಕಾಳಿಂಗ ಮರ್ದನ, ಶಿವನು ಖಟ್ವಾಂಗ ಹಿಡಿದು ನರ್ತಿಸುವುದು, ಕೇಶವ, ಪರಶು ರಾಮ, ಸೂರ್ಯ, ಸ್ಥಾನಕ ವಿಷ್ಣು, ರತಿ ಮನ್ಮಥ, ಮಧುಸೂದನ, ಭೈರವ, ಗೋವಿಂದ, ನೃತ್ಯಮೋಹಿನಿ, ನಿಲುವಂಗಿ ಹಾಕಿಕೊಂಡು ಕತ್ತಿ ಗುರಾಣಿ ಹಿಡಿದ ಪುರುಷ (ದಕ್ಷಿಣಾಮೂರ್ತಿ?), ವೇಣುಗೋಪಾಲ, ಗೋವರ್ಧನಧಾರೀ, ನವನೀತಚೋರ, ಕಾಳಿಂಗಮರ್ದನ.

ಬೋದಿಗೆಗಳು ಒಂಬತ್ತಂಗುಲ ಮಾತ್ರ ಮುಂದೆ ಚಾಚಿಕೊಂಡಿವೆ. ಕೈಪಿಡಿ ಗೋಡೆಯಮೇಲೆ ಸಣ್ಣ ಗೋಪುರಗಳಿವೆ. ಮೂರು ಗರ್ಭ ಗುಡಿಗಳ ಮೇಲೂ ಶಿಖರಗಳು ಸುಕನಾಸಿಗಳ ಮೇಲೆ ಚಾಚಿಕೊಂಡಿವೆ. ಶಿಖರಗಳ ಮೇಲ್ಭಾಗವನ್ನು ಈಚೆಗೆ ಬದಲಾಯಿಸಿರುವರು.

ಒಂದಂಕಣದ ಮುಖಮಂಡಪದಲ್ಲಿರುವ ಎರಡು ಕಂಬಗಳು ಜಗತಿಗಳು ಕಟಾಂಜನಗಳಲ್ಲಿ ಅಲಂಕಾರಗಳಿಲ್ಲ. ಮೇಲ್ಛಾವಣಿಯಲ್ಲಿ ಪದ್ಮವಿವೆ. ನವರಂಗಕ್ಕೆ ಒಂದಂಕಣದ ಸುಕನಾಸಿಯನ್ನು ಸೇರಿಸಿರು

ವರು. ನವರಂಗದಲ್ಲಿ ಒಂಬತ್ತಂಕಣಗಳಿವೆ. ನಾಲ್ಕು ಕಂಬಗಳು ದುಂಡಾಗಿವೆ. ಪಶ್ಚಿಮ ಗೋಡೆಯಲ್ಲಿರುವ ಎರಡು ಗೂಡುಗಳಲ್ಲಿ ಸುಂದರವಾದ ಗಣೇಶ ಸರಸ್ವತಿ ವಿಗ್ರಹಗಳಿವೆ (ವಿಷ್ಣುಪಂಚಾಯತನ). ಮೇಲ್ಛಾವಣಿಯ ಮಧ್ಯಭಾಗವನ್ನು ತೆರೆದು ಈಚೆಗೆ ಕಿಟಕಿಯನ್ನು ಇಟ್ಟಿರುವರು.

ದಕ್ಷಿಣ ಸುಕನಾಸಿಯ ದ್ವಾರದಲ್ಲಿ ಜಾಲಂದ್ರಗಳಿವೆ. ದಕ್ಷಿಣ ಗರ್ಭ ಗುಡಿಯಲ್ಲಿ ಗರುಡಪೀಠದಮೇಲೆ ಐದಡಿ ಎತ್ತರದ ವೇಣುಗೋಪಾಲ ವಿಗ್ರಹ ಸುಂದರವಾಗಿದೆ (ಬಲಗೈಯ ಮುಂಬೆರಳು ಮುರಿದುಹೋಗಿದೆ). ಉತ್ತರ ಗರ್ಭಗುಡಿಯಲ್ಲಿ ಗರುಡಪೀಠದಮೇಲೆ ಐದೂವರೆ ಎತ್ತರದ ಸ್ಥಾನಕ ಪುರುಷೋತ್ತಮ ವಿಗ್ರಹವಿದೆ. ನಾಲ್ಕು ಕೈಗಳಲ್ಲಿ ಚಕ್ರ ಪದ್ಮ ಶಂಖ ಗದೆಗಳಿವೆ. ತೋರಣದಲ್ಲಿ ದಶಾವತಾರಗಳಿವೆ. ಪಶ್ಚಿಮ ಗರ್ಭ ಗುಡಿಯ ಸುಕನಾಸಿ ದ್ವಾರದಲ್ಲಿ ದ್ವಾರಪಾಲಕ ಜಾಲಂದ್ರಗಳಿವೆ. ದ್ವಾರದಮೇಲೆ ಲಕ್ಷ್ಮೀ ನರಸಿಂಹ ವಿಗ್ರಹವಿದೆ. ಮೇಲ್ಛಾವಣಿಯಲ್ಲಿ ಕಮಾನುಗಳಿವೆ. ಗರ್ಭಗುಡಿಯಲ್ಲಿ ಸುಖಾಸನದಲ್ಲಿ ಕುಳಿತ ನರಸಿಂಹ ಎಡತೊಡೆಯಮೇಲೆ ಕುಳಿತ ಲಕ್ಷ್ಮೀ ವಿಗ್ರಹಗಳೂ ತೋರಣದಲ್ಲಿ ದಶಾವತಾರಗಳೂ ಇವೆ.

೬೯. ಅಮೃತಪುರ: ತರೀಕೆರೆ ತಾಲ್ಲೂಕಿನಲ್ಲಿರುವ ಅಮೃತಪುರದ ಅಮೃತೇಶ್ವರ ದೇವಾಲಯದಲ್ಲಿ ಸುಮಾರು ಹತ್ತು ಶಾಸನಗಳಿವೆ. ಆಗ್ನೇಯದಲ್ಲಿರುವ ಶಾಸನವನ್ನು ಕವಿಚಕ್ರವರ್ತಿ ಜನ್ನನು ರಚಿಸಿದನು (ಬಸ್ರಾಳು ಶಾಸನ ನೋಡಿ). ಇಮ್ಮಡಿ ವೀರಬಲ್ಲಾಳನ ದಂಡನಾಯಕ ನಾದ ಅಮಿತಯ್ಯ (ಅಮೃತೇಶ್ವರ) ಕ್ರಿ. ಶ. ೧೧೯೬ರಲ್ಲಿ ಅಮೃತೇಶ್ವರ ಲಿಂಗದ ಪ್ರತಿಷ್ಠೆಮಾಡಿದನು. ಕ್ರಿ. ಶ. ೧೨೦೬ ಮತ್ತು ೧೨೧೦ರಲ್ಲಿ ದಾನಗಳನ್ನು ಕೊಟ್ಟಿರುವರು. ಅನಂತರ ವಿಜಯನಗರದ ರಾಜರು ೧೫೪೭ರಲ್ಲಿ ದಾನಮಾಡಿರುವರು.

ಮುಖಮಂಟಪ ಬಹುಶಃ ೧೨೦೬ರಲ್ಲಿ ರಚಿತವಾಯಿತು. ಹೊರ ಭಾಗದ ಪೀಠಿಕೆಯಲ್ಲಿ ಸುಮಾರು ನೂರು ದೊಡ್ಡ ಮತ್ತು ಸಣ್ಣ ಶಿಖರ ಗಳು ಬಹಳ ಚೆನ್ನಾಗಿ ಕೊರೆಯಲಾಗಿವೆ. ಈ ಶಿಖರಗಳ ರಚನೆ ಎರಡು

ರೀತಿಗಳ ಸಮನ್ವಯವಾಗಿದೆ. ಶಿಖರಗಳ ಮಧ್ಯದಲ್ಲಿ ಸಿಂಹಗಳು, ಆನೆಗಳು ಇವೆ. ಈ ಶಿಖರಗಳಮೇಲೆ ಮಂಡಪದ ಸುತ್ತಲೂ ಕಟಾಂಜನವಿದೆ. ಇದರ ಮೇಲ್ಭಾಗದಲ್ಲಿ ಲತೆಗಳು, ಕೆಳಭಾಗದಲ್ಲಿ ಸುರಳಿಗಳು ಇವೆ. ಮಧ್ಯದಲ್ಲಿ ಹೂವು ಹಣ್ಣು ನವಿಲು ಹಂಸ ಕಪಿ ರತಿಬಂಧಗಳಿವೆ. ಕಟಾಂಜನದ ಫಲಕಗಳಲ್ಲಿ ಋಷಿ ರಾಕ್ಷಸ ಕಪಿ ರತಿಬಂಧಗಳು, ದೊಡ್ಡ ಫಲಕಗಳಲ್ಲಿ ಪೌರಾಣಿಕ ಕಥೆಗಳು ಚಿತ್ರಿತವಾಗಿವೆ. ಈ ವಿಗ್ರಹಗಳು ಬೇಲೂರು ಹಳೆಯಬೀಡು ಸೋಮನಾಥಪುರ ವಿಗ್ರಹಗಳಿಗಿಂತ ಸುಂದರವಾಗಿವೆಯೆಂದು ಹೇಳಬಹುದು. ದಕ್ಷಿಣ ಕಟಾಂಜನದಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ರಾಮಾಯಣ, ಉತ್ತರ ಕಟಾಂಜನದಲ್ಲಿ ಭಾಗವತ, ಮಹಾಭಾರತ ಕಥೆಗಳಿವೆ.

ದಕ್ಷಿಣ ಕಟಾಂಜನ ನವರಂಗದ ಗೋಡೆಯಿಂದ ಪೂರ್ವಕ್ಕೆ—ರಾಮಾಯಣ: ದೇವತೆಗಳು ಋಷಿಗಳು ಅನಂತಶಾಯಿಯನ್ನು ಬೇಡಿಕೊಳ್ಳುವುದು, ದಶರಥನ ಪುತ್ರಕಾಮೇಷ್ಟಿ, ದಶರಥನ ಓಲಗ, ಮೂವರು ರಾಣಿಯರು, ನಾಲ್ವರು ಮಕ್ಕಳು ; ವಿಶ್ವಾಮಿತ್ರನು ರಾಮಲಕ್ಷ್ಮಣರನ್ನು ಕಳುಹಿಸಲು ಕೇಳುವುದು, ವಿಶ್ವಾಮಿತ್ರನೊಡನೆ ರಾಮಲಕ್ಷ್ಮಣರು ಹೊರಡುವುದು, ತಾಟಕಿವಧೆ, ಮಾರೀಚ-ಸುಬಾಹು ಪರಾಜಯ, ಜನಕನ ಆಸ್ಥಾನ, ಶಿವಧನುರ್ಭಂಗ, ಪರಶುರಾಮ ಗರ್ವಭಂಗ, ಹಿಂತಿರುಗುವುದು, ರಾಮಲಕ್ಷ್ಮಣ ಸೀತೆಯರ ವನವಾಸ, ನಿರ್ಗಮನ, ಭರತ ರಾಮ, ಶೂರ್ಪನಖಾ ನಾಸಿಕಾಛೇದ, ಸೀತೆ ಸುವರ್ಣಮೃಗವನ್ನು ನೋಡುವುದು, ರಾಮನು ಸುವರ್ಣಮೃಗವನ್ನು ಸಂಹರಿಸುವುದು, ಸೀತಾಪಹರಣ, ಜಟಾಯು ರಾವಣಯುದ್ಧ, ಜಟಾಯು-ರಾಮ, ಹನುಮಂತ-ಸುಗ್ರೀವರು ರಾಮನನ್ನು ಕಾಣುವುದು, ವಾನರರೊಡನೆ ಒಪ್ಪಂದ, ಸಪ್ತತಾಳಭೇದನ, ವಾಲಿ ಸಂಹಾರ, ಸುಗ್ರೀವ ಪಟ್ಟಾಭಿಷೇಕ, ರಾಮ-ಹನುಮಂತ, ಸೇತುಬಂಧ, ವಿಭೀಷಣ ಶರಣಾಗತಿ, ಅಶೋಕವನದಲ್ಲಿ ಸೀತೆ, ಹನುಮಂತನು ರಾವಣನ ದರ್ಬಾರಿನಲ್ಲಿ, ಲಕ್ಷ್ಮಣ-ಇಂದ್ರಜಿತ್, ಇಂದ್ರಜಿತ್-ಗಜಧ್ವಜ, ಇಂದ್ರಜಿದ್ವಧೆ.

ದಕ್ಷಿಣ ದ್ವಾರ—ರಾವಣನು ಸೀತೆಯನ್ನೆದುರಿಸುವುದು, ಸೀತೆಯ

ನಿರಾಕರಣೆ, ಸೀತೆಗೆ ಕೃತಕಶಿರಗಳನ್ನು ತೋರಿಸುವುದು, ಹನುಮಂತ-ರಾವಣ, ರಾವಣನ ಅನುಚರರು—ಶುನಕ ಮುಂತಾದವರ ಹೆಸರುಗಳನ್ನು ಕೆಳಗೆ ಬರೆದಿರುವರು. ಹನುಮಂತ ನಳರು ಜಂಬುಮಾಲಿ ಮುಂತಾದ ರಾಕ್ಷಸರನ್ನು ಕೊಲ್ಲುವುದು, ರಾಮನು ರಾಕ್ಷಸನಾಯಕರನ್ನು ಕೊಲ್ಲುವುದು (ಒಬ್ಬನಿಗೆ ವ್ಯಾಘ್ರಮುಖವಿದೆ), ಆನೆಗಳು ತುತ್ತೂರಿಗಳು ಕುಂಭಕರ್ಣನನ್ನು ಎಬ್ಬಿಸುವುದು, ಕುಂಭಕರ್ಣನು ಯುದ್ಧಕ್ಕೆ ಹೊರಡುವುದು, ಕಪಿಗಳ ಸಂಹಾರ, ಸುಗ್ರೀವನು ಕುಂಭಕರ್ಣನ ಮೇಲೆ ಬೀಳುವುದು, ರಾಮನು (?) ಕುಂಭಕರ್ಣನನ್ನು ಕೊಲ್ಲುವುದು, ರಾವಣನ ಮಾರಣ ಯಜ್ಞವನ್ನು ಕಪಿಗಳು ಕೆಡಿಸುವುದು, ರಾಕ್ಷಸ ಸ್ತ್ರೀಯರನ್ನು ವಾನರರು ಹಿಂಸಿಸುವುದು, ಹನುಮಂತ-ರಾವಣ ಯುದ್ಧ, ರಾಮ-ರಾವಣ ಯುದ್ಧ, ರಾವಣವಧೆ, ರಾಮಸೀತೆಯರ ಸಮಾಗಮ, ರಾಮನ ಓಲಗ.

ಪೂರ್ವ ದ್ವಾರ-ಉತ್ತರ ಕಟಾಂಜನ. ನವರಂಗದ ಗೋಡೆಯಿಂದ ಪೂರ್ವಕ್ಕೆ ಭಾಗವತ ಕಥೆ—

ಕಂಸನ ಓಲಗ, ದೇವಕಿಯ ಪ್ರಸೂತಿ, ವಸುದೇವನು ಕತ್ತೆಗೆ ನಮಸ್ಕರಿಸುವುದು (ಕೃಷ್ಣನ ಜನನವನ್ನು ತಿಳಿಸಬೇಡವೆಂದು?), ದುರ್ಗೆಯು ಕಂಸನಿಂದ ತಪ್ಪಿಸಿಕೊಳ್ಳುವುದು, ವಸುದೇವನು ಯಮುನೆಯನ್ನು ದಾಟುವುದು, ಗೋಪರು ಕೃಷ್ಣನನ್ನು ಸ್ವಾಗತಿಸುವುದು, ಯಶೋದೆ-ಕೃಷ್ಣ, ತೊಟ್ಟಿಲಿನಲ್ಲಿ ಕೃಷ್ಣ, ಶಕಟಾಸುರ ಭಂಜನ, ಪೂತನೀ ಸಂಹಾರ, ಯಶೋದೆ ಕೃಷ್ಣನನ್ನು ಬೈಯುವುದು, ಬಕಾಸುರ ಸಂಹಾರ, ಧೇನುಕ, ಕುಕ್ಕುಟ(?) ಸಂಹಾರ, ಯಮಳಾರ್ಜುನ, ಯಶೋದೆ-ಕೃಷ್ಣ, ನವನೀತಚೋರ, ತೂಗುಹಾಕಿದ ಮಡಕೆಗಳಿಂದ ಬೆಣ್ಣೆ ಕದಿಯುವುದು, ಕಾಳಿಂಗಮರ್ದನ, ವೇಣುಗೋಪಾಲ, ಗೋವರ್ಧನಧಾರಿ, ವೃಷಭ, ಅಶ್ವಗಳನ್ನು ಕೊಲ್ಲುವುದು, ಅಕ್ರೂರನು ಕೃಷ್ಣಬಲರಾಮರನ್ನು ಕರೆದುಕೊಂಡು ಹೋಗುವುದು, ಆರು ಫಲಕಗಳಲ್ಲಿ ಚಿತ್ರಗಳನ್ನು ಬಿಡಿಸಿಲ್ಲ, ಕಂಸ ವಧೆ.

ಉತ್ತರ ದ್ವಾರ-ಮಹಾಭಾರತ: ಕುಂತೀ ಪಾಂಡವರು ಭೀಷ್ಮನನ್ನು

ಮರೆಹೋಗುವುದು, ಭೀಷ್ಮನು ಕೌರವರನ್ನು ಬೈಯುವುದು, ಪಂಚ ಪಾಂಡವರು. ಭೀಮನು ಮರದಿಂದ ಕೌರವರನ್ನು ಉರುಳಿಸುವುದು, ದ್ರೋಣಾರ್ಜುನರು ದ್ರುಪದನನ್ನು ಭಂಗಿಸುವುದು, ವಿರೋಚನನು ಪಾಂಡವರನ್ನು ಮೋಸಗೊಳಿಸುವುದು, ಲಾಕ್ಷಾಗೃಹ ದಹನ, ಭೀಮನು ಪಾಂಡವರನ್ನು ರಕ್ಷಿಸುವುದು, ಹಿಡಿಂಬ ವಧ, ಬಕಾಸುರ ವಧ, ದ್ರುಪದನು ಯಜ್ಞಕುಂಡದಿಂದ ಧೃಷ್ಟದ್ಯುಮ್ನ ದ್ರೌಪದಿಯರನ್ನು ಪಡೆಯುವುದು, ಮತ್ಸ್ಯಯಂತ್ರಭೇದನ, ದ್ರೌಪದೀ ಸ್ವಯಂವರ, ಪಾಂಡವರು ಇತರ ರಾಜರನ್ನು ಓಡಿಸುವುದು, ಕೃಷ್ಣಾರ್ಜುನರು ಅಗ್ನಿಗೆ ವರಕೊಡುವುದು, ಖಾಂಡವ ದಹನ, ಇಂದ್ರನ ಪರಾಜಯ, ರಾಜಸೂಯಯಾಗ, ಶಿಶುಪಾಲ ವಧ, ಪಾಂಡವರು-ಕೃಷ್ಣ (?) ಚದುರಂಗವಾಡುವುದು, ದ್ರೌಪದೀ ವಸ್ತ್ರಾಪಹರಣ, ಪಾಂಡವರು ವನವಾಸಕ್ಕೆ ಹೋಗುವಾಗ ರಾಕ್ಷಸನನ್ನು(?) ಎದುರಿಸುವುದು, ಇಂದ್ರಕೀಲದಲ್ಲಿ ಅರ್ಜುನನ ತಪಸ್ಸು, ಅರ್ಜುನನು ವರಾಹವನ್ನು ಕೊಂದು ಶಿವನನ್ನು ಸೋಲಿಸುವುದು, ಶಿವನು ಅರ್ಜುನನಿಗೆ ಪಾಶುಪತಬಾಣವನ್ನು ಕೊಡುವುದು. ಮುಖ್ಯ ಗುಡಿಯ ಗೋಪುರದಲ್ಲಿ ಏಳು ಸಾಲು ಕೀರ್ತಿಮುಖಗಳು ಒಂದರಮೇಲೊಂದು ಪಶ್ಚಿಮ ದಕ್ಷಿಣ ಉತ್ತರಗಳಲ್ಲಿವೆ. ಇವುಗಳಲ್ಲಿ ಹದಿನೆಂಟು ರುದ್ರರು ಆಸೀನರಾಗಿರುವರು. ಪಶ್ಚಿಮದ ಕಲ್ಲಿನ ಕಳಶ ಹೋಗಿ ಈಗ ಲೋಹದ ಕಳಶವಿದೆ. ಸುಕನಾಸಿಯ ಮೇಲೆ ಬಂದಿರುವ ಭಾಗದ ಎರಡು ಪಕ್ಕಗಳಲ್ಲೂ ಬ್ರಹ್ಮ, ವಿಷ್ಣು, ಮೇಲೆ ಸಳ-ಸಿಂಹ, ಮುಂಭಾಗದಲ್ಲಿ ಕೀರ್ತಿಮುಖ, ಗಜಾಸುರಮರ್ದನ ವಿಗ್ರಹ ಗಳಿವೆ. ಗಜಾಸುರ ಸಂಹಾರ, ಶಿವನು ನೃತ್ಯಮಾಡುತ್ತಿರುವನು. ಹದಿನಾರು ಕೈಗಳಲ್ಲಿ ಹತ್ತು ಮುರಿದುಹೋಗಿವೆ. ಹತ್ತಿರ ನಂದಿ ನೃತ್ಯ ಗಣೇಶ, ಕಿನ್ನರ ಭೇತಾಳ, ಬಲಗಡೆ ವೀಣೆಯನ್ನು ಬಾರಿಸುತ್ತಿರುವ ಬ್ರಹ್ಮ, ಎಡಗಡೆ ಕೊಳಲೂದುತ್ತಿರುವ ವಿಷ್ಣು ಇರುವರು. ತೋರಣದಲ್ಲಿ ಅಷ್ಟದಿಕ್ಪಾಲಕರು ಇರುವರು. ಇವುಗಳ ಮುಂದೆ ನವರಂಗದ ಮೇಲ್ಛಾವಣಿ ಉಬ್ಬಿಕೊಂಡಿದೆ. ಇದರಲ್ಲಿ ಹಿಂದೆ ಒಂಬತ್ತು ಕಂಬಗಳ ಶಾಲೆ ಇದ್ದಿತೆಂದು ಹೇಳಲಾಗಿದೆ.

ನವರಂಗದಲ್ಲಿ ಮೂವತ್ತು ಅಂಕಣಗಳೂ ಮೇಲ್ಛಾವಣಿಗಳೂ ಇವೆ.

ಒಂದೊಂದು ಭುವನೇಶ್ವರಿಯಲ್ಲೂ ಬೇರೆ ಬೇರೆ ರೀತಿಯ ವಿನ್ಯಾಸವಿದೆ. ಕೆಲವು ವಿನ್ಯಾಸಗಳು ಚಾಳುಕ್ಯ ದೇವಾಲಯಗಳಲ್ಲಿ ಮಾತ್ರ ಕಂಡುಬರುತ್ತವೆ. ಮಧ್ಯ ಭುವನೇಶ್ವರಿಯಲ್ಲಿ ನೃತ್ಯಗಣೇಶ ಶಿವ ಕುಮಾರ ವೇಣುಗೋಪಾಲ ಬ್ರಹ್ಮ ಇತ್ಯಾದಿ ವಿಗ್ರಹಗಳ ಸಾಲು, ಅದರಮೇಲೆ ಅಷ್ಟದಿಕ್ಪಾಲಕರು ಪರಿವಾರಗಳು ಇವೆ.

ದಕ್ಷಿಣ ಮತ್ತು ಪೂರ್ವದ ಮುಖಮಂಡಪಗಳು ಇದೇ ರೀತಿಯಲ್ಲಿವೆ. ಉತ್ತರ ಗೋಡೆಯಲ್ಲಿ ಮುಖಮಂಡಪವಿಲ್ಲ. ಬಹುಶಃ ದಕ್ಷಿಣ ಮುಖಮಂಡಪದ ಮೂಲಕ ಬಲಗಡೆ ಇರುವ ಅಂಗಳದ ದೇವೀಗುಡಿಗೆ ಹೋಗುವಂತೆ ದ್ವಾರವಿದ್ದಿತು.

೭೦. ಕುಬಟೂರು : ಶಿರಾಳಕೊಪ್ಪಕ್ಕೆ ಉತ್ತರ ಆರು ಮೈಲಿ ದೂರದಲ್ಲಿರುವ ಆನವಟ್ಟಿ ಚಂದ್ರಹಾಸನ ಆನೆಗಳ ಹಟ್ಟಿ(ಲಾಯ) ಯಾಗಿದ್ದಿತೆಂದು ಹೇಳಲಾಗಿದೆ. ಇದಕ್ಕೆ ಅರ್ಧ ಮೈಲಿ ಉತ್ತರದಲ್ಲಿ ಚಂದ್ರಹಾಸನ ರಾಜಧಾನಿಯಾದ ಕುಂತಳನಗರ ಅಥವಾ ಕುಬಟೂರು ಇದೆ. ಇದರ ಪೂರ್ವದಲ್ಲಿರುವ ಕೈಟಭೇಶ್ವರ ದೇವಾಲಯವನ್ನು ವಿನಯಾದಿತ್ಯನ ಶಾಸನದಲ್ಲಿ ಕೋಟೀಶ್ವರ ಎಂದು ಕರೆಯಲಾಗಿದೆ. ವಿನಯಾದಿತ್ಯನು ಪಶ್ಚಿಮ ಚಾಳುಕ್ಯರ ಸಾಮಂತನಾಗಿದ್ದುದರಿಂದ ಚಾಳುಕ್ಯ ಲಕ್ಷಣಗಳೇ ಕಂಡುಬರುತ್ತವೆ. ಇದನ್ನು ಬೇಲೂರು ದೇವಾಲಯಕ್ಕೆ ಹೋಲಿಸಿದರೆ ವಿಷ್ಣುವರ್ಧನನು ಚಾಳುಕ್ಯ ಶಿಲ್ಪವನ್ನು ಎಷ್ಟು ಮಟ್ಟಿಗೆ ಅನುಸರಿಸಿ ಉತ್ತಮಪಡಿಸಿದನೆಂದು ತಿಳಿಯಬಹುದು. ಕ್ರಿ. ಶ. ೧೧೮೦ರಲ್ಲಿ ಈ ದೇವಾಲಯವನ್ನು ಜೀರ್ಣೋದ್ಧಾರಮಾಡಿ ಚಿನ್ನದ ಕಳಶವಿಟ್ಟಂತೆ ಒಂದು ಶಾಸನ ಹೇಳುತ್ತದೆ. ಆದರೆ ಹಳೆಯ ಗುಡಿಗೆ ಹೆಚ್ಚು ಮಾರ್ಪಾಟುಮಾಡಿಲ್ಲ. ಇದನ್ನು ಸುಮಾರು ೧೧೦೦ರಲ್ಲಿ ಕಟ್ಟಿರಬಹುದು.

ದೇವಾಲಯದ ಜಗತಿಯು ಕಾಣಿಸುವುದಿಲ್ಲ. ಪಶ್ಚಿಮ ಗೋಡೆಯ ಪೀಠದಲ್ಲಿ ಐದು ಪಟ್ಟಿಕೆಗಳಿವೆ. ನಾಲ್ಕನೆಯದರಲ್ಲಿ ಮಾತ್ರ ಅಲಂಕಾರವಿದೆ. ಗೋಡೆಯ ಮೇಲೆ ಕಂಬಗಳೂ ಶಿಖರಗಳೂ ಇವೆ. ಗರ್ಭಗೃಹದ ಗೋಡೆಯಲ್ಲಿ ದಕ್ಷಿಣ ಪಶ್ಚಿಮ ಉತ್ತರ ದಿಕ್ಕುಗಳಲ್ಲಿ ಗೋಪುರಗಳಿರುವ ಗೂಡು

ಗಳಿವೆ. ಪಶ್ಚಿಮದ ಮೇಲ್ಚಾವಣಿ ಬೋದಿಗೆ ಹದಿನೈದಂಗುಲ ವಿಸ್ತಾರ ವಾಗಿ ಬಗ್ಗಿದೆ. ವಿಮಾನದಲ್ಲಿ ನಾಲ್ಕು ಸಾಲು ಗೋಪುರಗಳೂ ಮೇಲೆ ಶಿಖರವೂ ಇವೆ. ಸುಕನಾಸಿಯ ಮೇಲೆ ವಿಮಾನವು ಚಾಚಿಕೊಂಡಿದೆ. ಗಾರೆಯ ನಂದಿಗಳನ್ನು ಕಲ್ಲಿನ ಶಿಖರದಲ್ಲಿಟ್ಟಿರುವರು. ಕಲ್ಲಿನ ಕಳಶಕ್ಕೆ ಬದಲು ಗಾರೆ ಮತ್ತು ಲೋಹದ ಕಳಶವನ್ನಿಡಲಾಗಿದೆ.

ಶಿಖರದಲ್ಲಿ ಮಹಿಷಮರ್ದಿನಿ, ಭೈರವ, (ಐದು ತಲೆಗಳಲ್ಲಿ) ಮೂರು ತಲೆಯ ಯೋಗಾಸನದಲ್ಲಿರುವ ದಶಭುಜ ಮಹೇಶ್ವರ ವಿಗ್ರಹಗಳಿವೆ. ಮಹೇಶ್ವರ ವಿಗ್ರಹವು ಬೇಲೂರಿನ ದಕ್ಷಿಣ ಗೂಡು ಪಶ್ಚಿಮ ಮುಖದಲ್ಲಿ ರುವ ತಾಂಡವೇಶ್ವರದಂತೆಯೇ ಇದೆ.

ಮಂಡಪದ ಪೀಠಿಕೆಯಲ್ಲಿ ಹೂವುಗಳು, ಅವುಗಳಮೇಲೆ ಸ್ತಂಭ ಗೋಪುರಗಳು, ಗೋಪುರಗಳ ಮಧ್ಯದಲ್ಲಿ ಸಿಂಹಮುಖಗಳು ಲತೆಗಳು ಇವೆ. ಈ ಗೋಪುರಗಳ ಮೇಲಿನ ಕಟಾಂಜನ ಬಾಗಿಕೊಂಡು ಪುಷ್ಪ ಗಳಿಂದ ಅಲಂಕೃತವಾಗಿದೆ. ಅಂಚಿನಲ್ಲಿರುವ ಸುರಳಿಯಲ್ಲಿ ಸಣ್ಣ ವಿಗ್ರಹಗಳಿವೆ. ಒಳಕ್ಕೆ ಐದು ದ್ವಾರಗಳಿವೆ. ಉತ್ತರ ದಕ್ಷಿಣ ಪೂರ್ವಗಳಲ್ಲದೆ ಈಗ ಮಣ್ಣುಗೋಡೆಯಿಂದ ಮುಚ್ಚಿರುವ ಪಶ್ಚಿಮ ಕೊನೆಯಲ್ಲಿ ಎರಡು ದ್ವಾರಗಳಿದ್ದವು. ದಕ್ಷಿಣ ಮತ್ತು ಉತ್ತರ ದ್ವಾರಗಳಲ್ಲಿ ಬಹುಶಃ ಆನೆ ಗಳಿದ್ದವು. ಮಂಡಪವು ಎಲ್ಲ ಕಡೆಗಳಲ್ಲೂ ತೆರೆದಿದ್ದಿತು. ಪಶ್ಚಿಮದಲ್ಲಿ ಮಣ್ಣಿನ ಗೋಡೆ ಹಾಕಿ ಸಣ್ಣ ನವರಂಗ ಮಾಡಿರುವರು. ಇದರ ಪಶ್ಚಿಮ ಭಾಗದಲ್ಲಿ ನಾಲ್ಕು ಶಿಖರಗಳುಳ್ಳ ಗೂಡುಗಳೂ, ಉತ್ತರ ಗೋಡೆಯಲ್ಲಿ ಒಂದು ಗೂಡೂ ಇವೆ. ಇಲ್ಲಿದ್ದ ವಿಗ್ರಹಗಳು ಹೋಗಿ ಈಗ ಸಪ್ತ ಮಾತೃಕಾ, ಗಣೇಶ, ಮಹಿಷಮರ್ದಿನಿ (ಕೆಲವು ಭಾಗಗಳು ಮಂಡಪದ ಆಗ್ನೇಯದಲ್ಲಿವೆ), ನಾರಾಯಣ, ಸೂರ್ಯ (?) ವಿಗ್ರಹಗಳಿವೆ. ಮಂಡಪದ ಕಂಬಗಳು ದುಂಡಾಗಿ ಹನ್ನೊಂದಡಿ ಎತ್ತರವಿರುವುವು. ಪಕ್ಕ ಗಳಲ್ಲಿ ಕಲ್ಲಿನ ಜಗತಿಗಳೂ ಹದಿನಾರು ಕೋಣದ ಸಣ್ಣ ಸ್ತಂಭಗಳೂ ಇವೆ. ಮಂಡಪದ ಮೇಲ್ಚಾವಣಿಗಳಲ್ಲಿ ಕಮಲಗಳಿವೆ. ಮಧ್ಯದ ಭುವನೇಶ್ವರಿ ಯಲ್ಲಿ ಮೂಲೆಕಲ್ಲುಗಳ ಮೇಲೆ ಲತೆಗಳು, ನರ್ತಕರು, ಅಷ್ಟದಿಕ್ಪಾಲಕರು, ಈ ಸಾಲಿನಮೇಲೆ ನಾಲ್ಕು ಸಾಲುಗಳಲ್ಲಿ ಯೋಗಿ ಸಿದ್ಧ ಮುಂತಾದವರೂ

ಮಧ್ಯದಿಂದ ತೂಗಾಡುವ ಮೂರು ಸಾಲು ದಳಗಳುಳ್ಳ ಕಮಲವೂ ಇವೆ. ಮಂಡಪದ ಮೇಲ್ಛಾವಣಿಯು ಬೋದಿಗೆ ತೊಲೆಗಳಿಗಿಂತ ನಾಲ್ಕಡಿ ಮುಂದಕ್ಕೆ ಚಾಚಿಕೊಂಡಿದೆ. ಇದರ ಕೆಳಭಾಗದಲ್ಲಿ ಮರಗೆಲಸದಂತೆ ತೊಲೆಗಳನ್ನೂ ಹೂವುಗಳನ್ನೂ ಕೆತ್ತಲಾಗಿದೆ.

ಮೇಲಿರುವ ಕಲ್ಲಿನ ಕೈಪಿಡಿ ಗೋಡೆಯಲ್ಲಿ ಕೀರ್ತಿಮುಖಗಳೂ ದೇವತಾವಿಗ್ರಹಗಳೂ ಇವೆ. ಪೂರ್ವದಿಂದ–ತಾಂಡವೇಶ್ವರ, ಯಕ್ಷರು, ನೃತ್ಯಗಣಪತಿ, ದಿಕ್ಪಾಲಕರು, ಭೈರವ, ಹರಿಹರ, ಬ್ರಹ್ಮ, ಪಾರ್ವತೀ; ಉತ್ತರದಲ್ಲಿ–ಉಗ್ರನರಸಿಂಹ, ವರಾಹ ಗರುಡ ಕೇಶವ ಕುಮಾರ (ಶೂಲ ಖೇಟ), ನೃತ್ಯದುರ್ಗಾ, ಉಮಾಮಹೇಶ್ವರ, ಸೂರ್ಯ, ಮಹಿಷಮರ್ದಿನಿ ವಿಗ್ರಹಗಳಿವೆ.

ಸುಕನಾಸಿ ದ್ವಾರದಲ್ಲಿ ಜಾಲಂಧ್ರ, ಮೇಲೆ ಗಜಲಕ್ಷ್ಮಿ, ಐದು ಗೋಪುರಗಳೂ ಇವೆ. ಮೇಲ್ಛಾವಣಿಯಲ್ಲಿ ಸುಮಾರು ನಾನೂರು ದಳಗಳ ಕಮಲವಿದೆ. ಗರ್ಭಗುಡಿಯ ದ್ವಾರದಮೇಲೆ ಲತಾಪಟ್ಟಿಕೆಗಳು ಗಜಲಕ್ಷ್ಮಿ ಏಳು ಗೋಪುರಗಳೂ ಇವೆ. ಗರ್ಭಗೃಹದಲ್ಲಿ ಉತ್ತರ ದಕ್ಷಿಣ ಪಶ್ಚಿಮ ಗೋಡೆಗಳಲ್ಲಿ ಗೂಡುಗಳಿವೆ. ಎತ್ತರವಾದ ಪಾಣಿಪೀಠದ ಮೇಲಿರುವ ಕೋಣಶಿರದ ದೊಡ್ಡಲಿಂಗವು ಬಹುಶಃ ದೇವಾಲಯಕ್ಕಿಂತಲೂ ಪ್ರಾಚೀನ.

ದೇವಾಲಯದ ಅಂಗಳದಲ್ಲಿ ಹೊಯ್ಸಳ ರೀತಿಯ ಐದು ಸಣ್ಣ ಕಟ್ಟಡಗಳಿವೆ. ಆದರೆ ಹೊಯ್ಸಳ ಕಾಲದ ವಿಗ್ರಹಗಳಿಲ್ಲ. ಪಾರ್ವತೀ ವಿಗ್ರಹ ಈಚಿನದಾಗಿದೆ.

೭೧. ನಾಡಕಳಸಿ : ಸಾಗರಕ್ಕೆ ಐದು ಮೈಲಿ ಈಶಾನ್ಯದಲ್ಲಿ ಕಾಡಿನಲ್ಲಿರುವ ನಾಡಕಳಸಿಯಲ್ಲಿ ಅವಳಿ ಹೊಯ್ಸಳ ದೇವಾಲಯಗಳಿವೆ. ಹೊಯ್ಸಳರ ಕಾಲದಲ್ಲಿ ಈ ಊರು ಪ್ರಸಿದ್ಧವಾಗಿದ್ದಿತು. ಎರಡು ದೇವಾಲಯಗಳು ಅಕ್ಕಪಕ್ಕದಲ್ಲಿ ಉತ್ತರಾಭಿಮುಖವಾಗಿವೆ. ಸ್ವಲ್ಪ ದೊಡ್ಡದಾದ ಮಲ್ಲಿಕಾರ್ಜುನ ದೇವಾಲಯ ತೆರೆದ ಮುಖಮಂಡಪ ಸುಕನಾಸಿ ಗರ್ಭಗೃಹಗಳನ್ನು ಹೊಂದಿದೆ. ಮೇಲಿನ ಶಿಖರವು ಹೋಗಿದೆ. ಗೋಡೆಯ ಪೀಠಿಕೆಯಲ್ಲಿ ಮೂರು ಪಟ್ಟಿಕೆಗಳು ಮಧ್ಯಭಾಗದಲ್ಲಿ ಗೋಪುರವಿರುವ ಗೂಡುಗಳೂ ಇವೆ. ಮಂಡಪದ ಕೆಳಭಾಗದಲ್ಲಿ ಲತಾಪಟ್ಟಿಕೆ

ಗೋಪುರಗಳು ಇವೆ. ಗೋಪುರಗಳ ಮೇಲೆ ಬಾಗಿದ ಕಟಾಂಜನವಿದೆ. ಕಟಾಂಜನದ ಅಂಚಿನಲ್ಲಿ ಸುರಳಿಗಳು ಹೂವು ಆನೆ ಹಂಸ ಕಪಿ ರತಿ ಬಂಧಗಳಿವೆ. ಮಂಡಪಕ್ಕೆ ಮೂರು ದ್ವಾರಗಳಿವೆ. ಮಂಡಪವು ಸುಮಾರು ೪೫ ಅಡಿ ಉದ್ದ ೩೫ ಅಡಿ ಅಗಲವಿದೆ. ದಕ್ಷಿಣ ಗೋಡೆಯಲ್ಲಿ ನಾಲ್ಕು ಶಿಖರಗಳುಳ್ಳ ಗೂಡುಗಳಿವೆ. ಇವುಗಳಲ್ಲಿ ಸಪ್ತಮಾತೃಕೆಯರು, ವಾಹನಗಳು, ವೀರಭದ್ರ, ಗಣೇಶ, ಮಹಿಷಮರ್ದಿನಿ, ನಾಲ್ಕನೆಯ ಗೂಡಿನ ಮೊದಲಿನ ವಿಗ್ರಹ ಹೋಗಿ ತ್ರಿಭಂಗದಲ್ಲಿ ನಿಂತಿರುವ ಮೂರು ಕೈಗಳಲ್ಲಿ ಅಭಯಪಾಶ (?) ಪಾತ್ರೆ ಹಿಡಿದು ಒಂದು ಎಡಗೈಯಿಂದ ದೇವಿಯನ್ನಾ ಲಂಗಿಸುತ್ತಿರುವ ವಿಗ್ರಹವಿದೆ. ದೇವಿಯು ಎಡಗಡೆ ನಿಂತಿರುವಳು. ಹಿಂದೆ ಅಲಂಕೃತವಾದ ಕುದುರೆ ಇದೆ. ಇದರ ಪೀಠದ ಮೇಲೆ ನಾಲ್ಕು ಸಾಲಿನ ಕನ್ನಡ ಶಾಸನವಿದೆ. ದೇವನ ಕಟಿಪ್ರದೇಶದಿಂದ ಒಂದು ಕಲ್ಲು ಜೋಲಾಡುತ್ತಿದೆ (ಇದು ಉಮಾಮಹೇಶ್ವರ ವಿಗ್ರಹವೆಂದು ೧೯೩೮ನೆಯ ವರದಿಯಲ್ಲಿ ಹೇಳಿದೆ). ಮಂಡಪದ ಹನ್ನೆರಡು ಸ್ತಂಭಗಳು ದುಂಡಾದ ಹೊಯ್ಸಳ ರೀತಿಯಲ್ಲಿವೆ. ಕಲ್ಲಿನ ಜಗತಿಗಳಮೇಲೆ ಇರುವ ಕಂಬಗಳು ಹದಿನಾರು ಮುಖಗಳನ್ನು ಹೊಂದಿವೆ. ದುಂಡಾದ ಕಂಬಗಳಮೇಲೆ ಎಂಟು ಸುಂದರವಾದ ಚಿತ್ರಗಳನ್ನು ಬರೆದಿರುವರು. ಮಂಡಪದ ಉತ್ತರದ ಅಂಕಣದಲ್ಲಿ ಬಳಪದಕಲ್ಲಿನ ಸುಂದರವಾದ ನಂದಿ ಇದೆ. ಮೇಲ್ಚಾವಣಿ ಗಳಲ್ಲಿ ಪುಷ್ಪಗಳೂ ಪದ್ಮಗಳೂ ಇವೆ. ಬೋದಿಗೆಗಳ ತೊಲೆಗಳ ಮೇಲೆ ಪಕ್ಷಿ ಮೃಗಗಳಿವೆ. ಸುಕನಾಸಿ ದ್ವಾರದಮೇಲೆ ಗಜಲಕ್ಷ್ಮಿ, ಅದರಮೇಲೆ ತಾಂಡವೇಶ್ವರ, ಬಲಕ್ಕೆ ಬ್ರಹ್ಮ ಮತ್ತು ಗಣೇಶ, ಎಡಕ್ಕೆ ವಿಷ್ಣು, ಮಹಿಷ ಮರ್ದಿನಿ ಇವೆ. ದ್ವಾರಬಂಧಗಳಲ್ಲಿ ಜಾಲಂಧ್ರ ನರ್ತಕರು ಗಾಯಕರು ಇವೆ. ಗರ್ಭಗೃಹದ್ವಾರದಲ್ಲಿ ಏಳು ಸಾಲು ಹೂವು ಸುರಳಿ ಮಣಿಸರ ಗಳಿವೆ. ಗರ್ಭಗುಡಿಯಲ್ಲಿ ಐದಡಿ ಉದ್ದ ಮೂರಡಿ ಅಗಲದ ಚಪ್ಪಟೆ ಯಾದ ಲಿಂಗವಿದೆ.

ಸದಾಶಿವ ದೇವಾಲಯವು ಮಲ್ಲಿಕಾರ್ಜುನ ದೇವಾಲಯಕ್ಕೆ ಹತ್ತು ಗಜ ದೂರದಲ್ಲಿದೆ. ಸದಾಶಿವ ಅಥವಾ ಬಿಲ್ಲೇಶ್ವರ ದೇವರನ್ನು ಈಗ ನೀಲಕಂಠ ಅಥವಾ ರಾಮೇಶ್ವರ ಎಂದು ಕರೆಯುವರು. ಈ ದೇವಾ

ಲಯಕ್ಕೆ ಗರ್ಭಗುಡಿ ಮುಖಮಂಡಪ ಮಾತ್ರ ಇದ್ದು ಸುಕನಾಸಿ ಇಲ್ಲ. ಒಂದು ಪ್ರದಕ್ಷಿಣೆಯನ್ನು ಸೇರಿಸಿರುವರು. ಈ ಪ್ರದಕ್ಷಿಣೆ ಪಟ್ಟಿಕೆಗಳಿರುವ ಪೀಠಿಕೆಯ ಮೇಲಿದೆ. ಮಂಡಪದ ಹೊರಗೆ ಶಿಖರಗಳು ಬಾಗಿದ ಕಟಾಂಜನವಿದೆ. ಕಟಾಂಜನದ ಉತ್ತರ ಮುಖದಲ್ಲಿ ರತಿಬಂಧಗಳು, ಇವುಗಳಮೇಲೆ ಸುರಳಿ ಇವೆ. ಮೇಲ್ಛಾವಣಿ ಬೋದಿಗೆ ಕಂಬಗಳು ಮಲ್ಲಿಕಾರ್ಜುನ ದೇವಾಲಯದಂತೆಯೇ ಇವೆ. ಮೂರು ಕಂಬಗಳ ಕೆಳಭಾಗದಲ್ಲಿ ಉದ್ದವಾದ ಹೊಯ್ಸಳ ಶಾಸನವಿದೆ. ಮುಖಮಂಡಪ ದ್ವಾರದ ಪಕ್ಕಗಳಲ್ಲಿ ಆನೆಗಳು, ಒಳಗೆ ಕಲ್ಲಿನ ಜಗತಿ ಇವೆ. ಮಂಡಪದ ನೈರುತ್ಯದಲ್ಲಿರುವ ಗೂಡಿನಲ್ಲಿ ಸ್ಥಾನಕ ಮಾಧವ (ಗದೆ ಭಗ್ನ, ಚಕ್ರ ಶಂಖ, ಪದ್ಮ) ವಿಗ್ರಹವಿದೆ. ಆಗ್ನೇಯದಲ್ಲಿ ಭಗ್ನವಾದ ಗಣೇಶ, ದ್ವಾರದ ಹತ್ತಿರ ಭಗ್ನವಾದ ನಂದಿ ಇವೆ. ಗರ್ಭಗೃಹದಲ್ಲಿ ಸಾಮಾನ್ಯವಾದ ಲಿಂಗವಿದೆ. ಗರ್ಭಗುಡಿಯ ಮೇಲಿರುವ ಶಿಖರವು ಮೆಟ್ಟಲು ಮೆಟ್ಟಲಾಗಿದೆ. ನಾಲ್ಕು ದಿಕ್ಕುಗಳಲ್ಲೂ ಕೀರ್ತಿಮುಖಗಳು, ಸುಕನಾಸಿ ಮೇಲೆ ಚಾಚಿರುವ ಭಾಗದಲ್ಲಿ ಸಳವಿಗ್ರಹ, ಉತ್ತರದ ಕೀರ್ತಿಮುಖದಲ್ಲಿ ತಾಂಡವೇಶ್ವರ ಇವೆ. ಈ ದೇವಾಲಯದ ಪ್ರದಕ್ಷಿಣೆ ಗಮನಾರ್ಹವಾಗಿದೆ.

೭೨. **ಕೂಡ್ಲಿ :** ಶಿವಮೊಗ್ಗೆಗೆ ಈಶಾನ್ಯದಲ್ಲಿ ತುಂಗಾ–ಭದ್ರಾ ಸಂಗಮದಲ್ಲಿರುವ ಕೂಡಲಿಯಲ್ಲಿ ಹೊಯ್ಸಳ ಕಾಲದ ರಾಮೇಶ್ವರ ಮತ್ತು ನರಸಿಂಹ ದೇವಾಲಯಗಳಿವೆ. ರಾಮೇಶ್ವರ ದೇವಾಲಯಕ್ಕೆ ಜಗತಿ ಇಲ್ಲ. ನವರಂಗದ್ವಾರಗಳ ಪಕ್ಕಗಳಲ್ಲಿ ಮೊದಲು ಆನೆಗಳಿದ್ದು ಈಗ ಪೂರ್ವ ದ್ವಾರದಲ್ಲಿ ಮಾತ್ರ ಎರಡು ಇವೆ. ನವರಂಗದ ಒಳಗೆ ಕಲ್ಲಿನ ಜಗತಿ ಇದೆ. ಇಲ್ಲಿರುವ ಹದಿನೆಂಟು ಕಂಬಗಳಲ್ಲಿ ಹದಿನಾರು ದುಂಡಾಗಿವೆ, ಮಿಕ್ಕೆರಡು ಹದಿನಾರುಮುಖಹೊಂದಿವೆ. ಮೇಲ್ಛಾವಣಿಗಳಲ್ಲಿ ಪದ್ಮಗಳು, ಮಧ್ಯದ ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರು ಗಜಾಸುರಮರ್ದನ ಇವೆ. ಹಿಂದಿನ ಗೋಡೆಯ ಎರಡು ಗೂಡುಗಳಲ್ಲಿ ಗಣೇಶ ಮತ್ತು ಮಹಿಷಮರ್ದಿನಿ ವಿಗ್ರಹಗಳಿವೆ. ಮಿಕ್ಕೆರಡು ಗೂಡುಗಳನ್ನು ಸುಣ್ಣ ಬಳಿದು ಮುಚ್ಚಿರುವರು. ನವರಂಗದಲ್ಲಿ ನಂದಿ ವೀರಭದ್ರ ಭೈರವ ವಿಗ್ರಹ ಗಳಿವೆ. ಮಹಿಷಮರ್ದಿನಿಯ ಮುಂದೆ ಮತ್ತಾವುದೋ ದೇವಾಲಯದ

ಕಲ್ಲಿನ ಜಾಲಂಧ್ರವನ್ನಿಟ್ಟಿರುವರು. ಸುಕನಾಸಿ ದ್ವಾರದಲ್ಲೂ ಜಾಲಂಧ್ರ ಗಜಲಕ್ಷ್ಮೀ ಇವೆ. ಗರ್ಭಗುಡಿ ದ್ವಾರದಮೇಲೂ ಗಜಲಕ್ಷ್ಮಿ, ಒಳಗೆ ಪೀಠದಮೇಲೆ ಸಣ್ಣ ರಾಮೇಶ್ವರಲಿಂಗ ಇವೆ. ಗರ್ಭಗುಡಿ ಮೇಲಿನ ಕಲ್ಲಿನ ಶಿಖರದಲ್ಲಿ ದುಂಡಾದ ಕಲ್ಲಿನ ಕಳಶ, ಸುಕನಾಸಿಯಮೇಲೆ ಚಾಚಿರುವ ಭಾಗದಲ್ಲಿ ಸಳನ ವಿಗ್ರಹ ಇವೆ.

ಇದಕ್ಕೆ ನೈರುತ್ಯದಲ್ಲಿ ಇಪ್ಪತ್ತಡಿ ದೂರದಲ್ಲಿ ನರಸಿಂಹ ದೇವಾಲಯ ವಿದೆ. ಇದರ ಗೋಡೆಗಳು ಮತ್ತು ಕಂಬಗಳು ಹೆಚ್ಚು ಅಲಂಕೃತ ವಾಗಿವೆ. ಗೋಡೆಗಳಮೇಲೆ ಗೋಪುರಗಳೂ ತೋರಣಗಳೂ ಇವೆ. ಕಂಬ ಗಳಮೇಲೆ ಮಣಿಸರಗಳಿವೆ. ಮೇಲ್ಛಾವಣಿಯ ಮಧ್ಯದ ಭುವನೇಶ್ವರಿ ಯಲ್ಲಿ ದೊಡ್ಡ ಪದ್ಮವಿದೆ. ನವರಂಗ ಮತ್ತು ಗರ್ಭಗುಡಿಗಳ ದ್ವಾರದಲ್ಲಿ ಜಾಲಂಧ್ರಗಳಿವೆ. ಗರ್ಭಗುಡಿಯಲ್ಲಿರುವ ನರಸಿಂಹ ವಿಗ್ರಹ ಬಹಳ ಪುರಾತನದಾಗಿ ಕಂಡುಬರುತ್ತದೆ. ಇದಕ್ಕೆ ಚಿಂತಾಮಣಿ ನರಸಿಂಹನೆಂದು ಹೆಸರು. ಸುಮಾರು ಮೂರಡಿ ಎತ್ತರವಿರುವ ನರಸಿಂಹ ವೀರಾಸನದಲ್ಲಿ ಕುಳಿತು ಎರಡು ಕೈಗಳನ್ನು ಹೊಂದಿರುವನು. ಬಲಗೈಯಲ್ಲಿ ಪಾತ್ರೆ– ಚಿಂತಾಮಣಿ ಹಿಡಿದು, ಎಡಗೈಯನ್ನು ತೊಡೆಯಮೇಲಿಟ್ಟಿರುವನು. ದೇವರ ಹಣೆಯಮೇಲೆ ಪ್ರಹ್ಲಾದನ ಹಸ್ತದ ಗುರುತಿದೆ. ಇದು ಅಪೂರ್ವ ವಾದ ವಿಗ್ರಹ. ಇಲ್ಲಿನ ಉತ್ಸವಮೂರ್ತಿ ಅಭಯ ಚಕ್ರ ಶಂಖ ಕಟಿ ಹಸ್ತವುಳ್ಳ ವೆಂಕಟೇಶ ವಿಗ್ರಹವಾಗಿದೆ.

೭೩. **ಶ್ರವಣಬೆಳಗೊಳ :** ಇತಿಹಾಸಪ್ರಸಿದ್ಧವಾದ ಶ್ರವಣ ಬೆಳಗೊಳದಲ್ಲಿ ಕ್ರಿ. ಶ. ಸುಮಾರು ಆರನೆಯ ಶತಮಾನದಿಂದ ಶಾಸನಗಳು ಕಂಡುಬರುತ್ತವೆ. ಹೊಯ್ಸಳರಿಗೆ ಮುಂಚೆ ಗಂಗರಾಜನಾದ ಶಿವಮಾರನು ಒಂದು ಬಸದಿಯನ್ನು ಮಾಡಿಸಿದನು. ಮಾರಸಿಂಹ ಚಾಮುಂಡರಾಯರ ಕಾಲದಲ್ಲಿ ಶ್ರವಣಬೆಳಗೊಳ ಪ್ರಸಿದ್ಧವಾದ ಕ್ಷೇತ್ರವಾಗಿ ಭಾರತದ ನಾನಾ ಭಾಗಗಳಿಂದ ಜೈನರನ್ನಾಕರ್ಷಿಸಿತು. ಕೊನೆಯ ರಾಷ್ಟ್ರಕೂಟ ರಾಜನಾದ ಇಂದ್ರನು ಅಂತ್ಯದಿನಗಳನ್ನಿಲ್ಲಿ ಕಳೆದನು. ಚಾಮುಂಡರಾಯನು ಗೊಮ್ಮ ಟೇಶ್ವರ ವಿಗ್ರಹದ ಜೀರ್ಣೋದ್ಧಾರವನ್ನು ಮಾಡಿಸಿ ಚಾಮುಂಡರಾಯ ಬಸದಿಯನ್ನು ಕಟ್ಟಿಸಿದನು. ಅತ್ತಿಮಬ್ಬೆ ಕವಿರತ್ನರು ಇಲ್ಲಿಗೆ ಬಂದಿದ್ದ

ರೆಂಬುದಕ್ಕೆ ಶಾಸನ ಮತ್ತು ಸಾಹಿತ್ಯಾಧಾರಗಳಿವೆ. ಕಲ್ಯಾಣದ ಚಾಳುಕ್ಯ ಚಕ್ರವರ್ತಿಗಳು ಇಲ್ಲಿ ಯಾವ ಕಟ್ಟಡಗಳನ್ನೂ ಕಟ್ಟಿಸಿದಂತೆ ಕಂಡು ಬರುವುದಿಲ್ಲ. ಅಜಿತಸೇನ, ನೇಮಿಸೇನ ಆರ್ಯಸೇನ, ಮುಂತಾದವರು ಗೊಮ್ಮಟ ಪ್ರತಿಷ್ಠಾಕಾಲದಲ್ಲಿ ಗೊಮ್ಮಟಸಾರ, ಇತ್ಯಾದಿ ಗ್ರಂಥಗಳನ್ನು ರಚಿಸಿ ಚಾಮುಂಡರಾಯನಿಗೆ ಗೊಮ್ಮಟರಾಯ ಅಥವಾ "ರಾಯ" ಎಂಬ ಬಿರುದನ್ನು ಕೊಟ್ಟರು. ಚಾಮುಂಡರಾಯನ ಮಗನಾದ ಜಿನ ದೇವಣ್ಣನು ಬೆಳ್ಗೊಳದಲ್ಲಿ ಒಂದು ಬಸದಿಯನ್ನು ಕಟ್ಟಿಸಿದನು (ಶ್ರ. ಬೆ. ೧೨೧).

ಹೊಯ್ಸಳರ ಆರಂಭದಶೆಯಲ್ಲಿ ಅವರ ಪ್ರಭಾವವು ಶ್ರವಣಬೆಳಗೊಳದಲ್ಲಿ ಹೆಚ್ಚಾಗಿ ಕಂಡುಬರುವುದಿಲ್ಲ. ಸೊಸೆವೂರು (ಅಂಗಡಿ), ಬೇಲೂರು, ಹಳೆಯಬೀಡುಗಳು ಹತ್ತಿರದಲ್ಲಿಯೇ ಇದ್ದರೂ ಹೊಯ್ಸಳರು ಮೊದಲು ಜೈನರಾಗಿದ್ದರೆಂದು ಕಥೆಗಳಿದ್ದರೂ ವಿಷ್ಣುವರ್ಧನನ ಕಾಲದ ವರೆಗೂ ಶ್ರವಣಬೆಳಗೊಳದಲ್ಲಿ ಹೊಯ್ಸಳರ ಕಟ್ಟಡಗಳು ಕಂಡು ಬರುವುದಿಲ್ಲ. ಸುಮಾರು ಕ್ರಿ. ಶ. ೧೦೦೦ದಿಂದ ೧೧೦೦ರವರೆಗೆ ಒಂದು ಶತಾಬ್ದ ಗೊಮ್ಮಟ ವಿಗ್ರಹ ಬಯಲಲ್ಲೇ ಇದ್ದಿತೆಂದು ಕಂಡುಬರುತ್ತದೆ. ಅನಂತರ ಸುಮಾರು ಕ್ರಿ.ಶ. ೧೧೨೦ರಲ್ಲಿ ಗಂಗರಾಜನು ಸುತ್ತಾಲಯವನ್ನು ಮಾಡಿಸಿದನು. ಗಂಗರಾಜನ ತಂದೆಯಾದ ಏಚನು ನೃಪಕಾಮನ ದಂಡ ನಾಯಕನಾಗಿದ್ದನೆಂದು ಶಾಸನಗಳು ಹೇಳುವುವು. ವಿನಯಾದಿತ್ಯನು ಅನೇಕ ದೇವಾಲಯಗಳನ್ನು ಕಟ್ಟಿಸಿದನೆಂದೂ ಹೇಳಿದೆ. ಆದರೆ ಶ್ರವಣ ಬೆಳಗೊಳದಲ್ಲಿ ಇವರ ಕಟ್ಟಡಗಳನ್ನು ಗುರ್ತಿಸಲು ಸಾಧ್ಯವಿಲ್ಲ. ಎರೆಗಂಗ ಮತ್ತು ಒಂದನೇ ಬಲ್ಲಾಳರ ಕಾಲದಲ್ಲಿ ಗಂಗರಾಜನು ಮುಂದಕ್ಕೆ ಬಂದಿರಬೇಕು. ಮರಿಯಾನೆ ಭರತರು ಒಂದನೇ ಬಲ್ಲಾಳನೊಡನೆ ಸಂಬಂಧ ಬೆಳೆಸಿದರು. ಒಂದನೆ ಬಲ್ಲಾಳನು ಶಿವಭಕ್ತನಾಗಿದ್ದರೂ ಜೈನರೊಡನೆ ವಿವಾಹಸಂಬಂಧ ಮಾಡಿದ್ದನು.

ಶಾಸನದಿಂದ ನಿಶ್ಚಯಿಸಬಹುದಾದ ತಾರೀಖುಗಳಿಂದ ವಿಷ್ಣುವರ್ಧನನ ಕಾಲದಲ್ಲಿ ಮೊದಲು ಹೊಯ್ಸಳ ಕಟ್ಟಡಗಳು ಶ್ರವಣಬೆಳಗೊಳದಲ್ಲಿ ಕಂಡುಬರುವುವು. ಕ್ರಿ. ಶ. ೧೧೧೭ನೆಯ ತೇರಿನಬಸದಿ. ಗಂಗರಾಜನು

ಸುತ್ತಾಲಯವನ್ನೂ ಜಿನನಾಥಪುರವನ್ನೂ ಮಾಡಿದನು. ಗಂಗರಾಜನು ವಿನಯಾದಿತ್ಯನ ಕಾಲದಿಂದ ಇದ್ದು ವಿಷ್ಣುವರ್ಧನನ ಪಟ್ಟಾಭಿಷೇಕ ದಿಗ್ವಿಜಯಗಳಿಗೆ ಕಾರಣನಾಗಿ ೧೧೩೩ ವರೆಗೂ ಜೀವಿಸಿದ್ದನು. (ಇವನ ಮಗ ಬೊಪ್ಪನು ಹಳೆಯಬೀಡಿನಲ್ಲಿ ಪಾರ್ಶ್ವನಾಥ ಬಸದಿಯನ್ನು ಕಟ್ಟಿಸಿದನು.) ಗಂಗರಾಜನು ಇಂದಿರಾಕುಲಗೃಹ(ಶಾಸನಬಸದಿ)ವನ್ನು ಕಟ್ಟಿಸಿದನು. ತನ್ನ ತಾಯಿ ಪೋಚವ್ವೆಯ ಹೆಸರಿನಲ್ಲಿ "ಕತ್ತಲೆ ಬಸದಿ" ಯನ್ನೂ (ಸು. ೧೧೧೮), ಪತ್ನಿ ಲಕ್ಷ್ಮಿಯು ಎರಡು ಕಟ್ಟಿ ಬಸದಿಯನ್ನು ಕಟ್ಟಿಸಿದರು. ಪೋಚವ್ವೆ ೧೧೨೦ರಲ್ಲೂ ಲಕ್ಷ್ಮಿಯು ೧೧೨೧ರಲ್ಲೂ ಇವರ ಗುರು ಶುಭಚಂದ್ರನು ೧೧೨೩ರಲ್ಲೂ ಗತಿಸಿದರು. ಪೋಚಿಮಬ್ಬೆಯೂ ಲಕ್ಷ್ಮಿಯೂ ಅನೇಕ ಬಸದಿಗಳನ್ನು ಕಟ್ಟಿಸಿದರೆಂದು ಹೇಳಲಾಗಿದೆ. ಗಂಗರಾಜನ ಅಣ್ಣನ ಹೆಂಡಿತಿ ಜಕ್ಕಣಬ್ಬೆ ಜಕ್ಕಿ ಕಟ್ಟಿ ಕೆರೆ ಮುಂತಾದುವನ್ನು ಮಾಡಿಸಿದಳು. ಋಷಭತೀರ್ಥಂಕರ ಬಸದಿಯನ್ನು ಮಾಡಿಸಿರಬಹುದು. ಗಂಗರಾಜನ ಅಣ್ಣನ ಮಗನಾದ ಏಚನು ಬಸದಿಗಳನ್ನು ಮಾಡಿಸಿದ್ದನು.

ಇದೇ ಸಮಯದಲ್ಲಿ ವಿಷ್ಣುವರ್ಧನನ ಪಿರಿಯರಸಿ ಶಾಂತಲೆಯು ೧೧೨೩ರಲ್ಲಿ ಸವತಿ ಗಂಧವಾರಣ ಬಸದಿಯನ್ನು ಕಟ್ಟಿಸಿದಳು. ೧೧೩೮ರಲ್ಲಿ ಕಿರಿಯ ಬಸವಾಚಾರಿ ಒಂದು ದೇವಾಲಯವನ್ನು ಕಟ್ಟಿಸಿದನು. ವಿಷ್ಣುವರ್ಧನನ ಕಾಲದಲ್ಲಿ ಚಿಕ್ಕಮರಿಯಾನೆ ಭರತರು ಗಂಗರಾಜನ ಮಗ ಬೊಪ್ಪನ ಭಾವಂದಿರಾಗಿದ್ದು ಎರಡು ವಿಗ್ರಹಗಳನ್ನು ಸ್ಥಾಪಿಸಿದರು. ಭರತನು ದ್ವಾರದ ಹತ್ತಿರ ಬಾಹುಬಲಿ ಭರತರ ವಿಗ್ರಹಗಳನ್ನೂ ಅವುಗಳ ಹತ್ತಿರ ಮತ್ತು ಗೊಮ್ಮಟ ಹತ್ತಿರ ಇರುವ ಶಾಲೆಗಳಿಗೆ "ಹಪ್ಪಳಿಗೆ (?)" ಗಳನ್ನೂ ಸೋಪಾನಮಾರ್ಗವನ್ನೂ ಕಟ್ಟಿಸಿದನೆಂದು ಹೇಳಲಾಗಿದೆ. ಗಂಗವಾಡಿಯಲ್ಲಿ ಎಂಬತ್ತು ಹೊಸ ಬಸದಿಗಳನ್ನು ಕಟ್ಟಿಸಿ ಇನ್ನೂರನ್ನು ಜೀರ್ಣೋದ್ಧಾರ ಮಾಡಿಸಿದನೆಂದು ಶಾಸನದಲ್ಲಿ ಹೇಳಿದೆ. ಈ ಶಾಸನವನ್ನು ಭರತನ ಮಗಳಾದ ಶಾಂತಲೆಯು ಬರೆಸಿರುವಳು. ಸು. ೧೧೨೦ರಲ್ಲಿ ಮಹಾಪ್ರಧಾನಿ ಬಲದೇವಣ್ಣನು ಚಿತ್ರಪಟ್ಟಿಕೆಯನ್ನು ಮಾಡಿಸಿದನು (ಗೊಮ್ಮಟನ ಮುಂದಿರುವ ಮಂಡಪದ ಭುವನೇಶ್ವರಿ-ಇಂದ್ರನು ಕಳಶವನ್ನು ಹಿಡಿದಿರುವುದು).

ಒಂದನೆಯ ನರಸಿಂಹನ ಕಾಲದಲ್ಲಿ ಹುಳ್ಳನು ಗೊಮ್ಮಟ ವಿಗ್ರಹದ ಸುತ್ತಲೂ ಇರುವ ಚತುರ್ವಿಂಶತಿ ತೀರ್ಥಂಕರ ದೇವಾಲಯವನ್ನು ಕಟ್ಟಿಸಿ ನರಸಿಂಹನು ಬೆಳಗೊಳಕ್ಕೆ ಬಂದಿದ್ದಾಗ ಭವ್ಯಚೂಡಾಮಣಿ ಎಂಬ ಹೆಸರನ್ನು ಅದಕ್ಕೆ ಕೊಡಿಸಿದನು. ಕ್ರಿ. ಶ. ೧೧೭೫ರಲ್ಲಿ ಇಮ್ಮಡಿ ಬಲ್ಲಾಳನು ಮತ್ತಷ್ಟು ದಾನಗಳನ್ನು ಕೊಟ್ಟನು.

ಇಮ್ಮಡಿ ವೀರಬಲ್ಲಾಳನ ಮಂತ್ರಿಯಾದ ಚಂದ್ರಮೌಳಿಯು ಶೈವನಾಗಿದ್ದರೂ ತನ್ನ ಹೆಂಡಿತಿ ಆಚಿಯಕ್ಕ ಜೈನಳಾಗಿದ್ದು ಕಟ್ಟಿಸಿದ ಅಕ್ಕನ ಬಸದಿಗೆ ೧೧೮೧ರಲ್ಲಿ ಚಕ್ರವರ್ತಿಯಿಂದ ದಾನಗಳನ್ನು ಕೊಡಿಸಿದನು. ಇಮ್ಮಡಿ ಬಲ್ಲಾಳನ ಪಟ್ಟಣಸ್ವಾಮಿಯಾದ ನಾಗಿದೇವನು (ಆಚಿಯಕ್ಕನ ಸಹೋದರಿಯ ಗಂಡ) ನೃತ್ಯಶಾಲೆ, ಪಾರ್ಶ್ವನಾಥನ ಮುಂದೆ ಜಗತಿ, ನಗರಜಿನಾಲಯ, ಕಮಠಪಾರ್ಶ್ವ ಬಸದಿಯ ಮುಂದೆ ನೃತ್ಯಶಾಲೆ, ನಾಗಸಮುದ್ರವೆಂಬ ಕೆರೆ ಮುಂತಾದುವನ್ನು ಸು. ೧೨೦೦ ರಲ್ಲಿ ಮಾಡಿಸಿದನು.

ಇಮ್ಮಡಿ ಬಲ್ಲಾಳನ ದಂಡನಾಯಕನಾದ ವಸುಧೈಕಬಾಂಧವ ರೇಚಿಮಯ್ಯನು ಜಿನನಾಥಪುರದಲ್ಲಿ ಶಾಂತಿನಾಥ ಬಸದಿಯನ್ನು ಮಾಡಿಸಿದನು. ಅನಂತರ ಹೊಯ್ಸಳರ ಕಾಲದಲ್ಲಿ ಹೆಚ್ಚು ಕಟ್ಟಡಗಳಾಗಲಿಲ್ಲವೆಂದು ಕಂಡುಬರುತ್ತದೆ.

ಜೈನಬಸದಿಗಳೆಲ್ಲ ಸಾಮಾನ್ಯವಾಗಿ ಗರ್ಭಗುಡಿ ಸುಕನಾಸಿ ನವರಂಗ ಮುಖಮಂಡಪ ಮಾನಸ್ತಂಭಗಳನ್ನು ಹೊಂದಿರುತ್ತವೆ. ಮಾನಸ್ತಂಭಗಳು ಎತ್ತರವಾಗಿ ಮೇಲೆ ಒಂದು ಚಿಕ್ಕ ಮಂಡಪದಲ್ಲಿ ನಾಲ್ಕು ದಿಕ್ಕುಗಳಿಗೂ ತಿರುಗಿಕೊಂಡಿರುವ ನಾಲ್ಕುತೀರ್ಥಂಕರ ವಿಗ್ರಹಗಳನ್ನು ಹೊಂದಿರುತ್ತವೆ. ಬ್ರಹ್ಮದೇವ ಸ್ತಂಭಗಳ ಮೇಲೆ ಬ್ರಹ್ಮದೇವನ ವಿಗ್ರಹವೊಂದೇ ಇರುತ್ತದೆ. ಕೆಲವು ಬಸದಿಗಳಲ್ಲಿ ಮಾತ್ರ ಬಲಿಪೀಠಗಳು ಇವೆ.

ಶ್ರವಣಬೆಳಗೊಳದ ಕಟ್ಟಡಗಳು: ಸು. ೮೦೦ರಿಂದ ೧೧೦೦ವರೆಗೆ ಭದ್ರಬಾಹು ಗುಹೆ, ಶಿವಮಾರ ಚಂದ್ರಪ್ರಭ ಬಸದಿ (ಕ್ರಿ. ಶ. ೮೦೦), ಕಂಚಿನದೊಣೆ (೯೦೦), ಇರುವೆ ಬ್ರಹ್ಮದೇವ (೯೫೦), ಚಾಮುಂಡ

ರಾಯನ ಬಸದಿ, ಕೂಗೆ ಬ್ರಹ್ಮಸ್ತಂಭ, ಗೊಮ್ಮಟವಿಗ್ರಹ, ಬ್ರಹ್ಮದೇವ, ಮುಂದಿನ ಗುಳ್ಳಿಕಾಯಜ್ಜಿ, ತ್ಯಾಗಬ್ರಹ್ಮ ಕಂಬ, ಅಖಂಡ ಬಾಗಿಲು (೯೭೦-೯೯೦), ಚಾಮುಂಡರಾಯನ ಮಗನಾದ ಜಿನದೇವಣ್ಣನ ಬಸದಿ, (ಚಾವುಂಡರಾಯ ಬಸದಿಯ ಮೇಲ್ಭಾಗ), ಹಳೆ ಬೆಳಗೊಳದ ಪಾರ್ಶ್ವನಾಥ (೧೦೯೪).

ಅನಿರ್ದಿಷ್ಟಕಾಲದ ಕಟ್ಟಡಗಳು: ಚಿಕ್ಕಬೆಟ್ಟದ ಶಾಂತಿನಾಥ, ಸುಪಾರ್ಶ್ವ, ಶಾಂತೀಶ್ವರ, ಒದೆಗಲ್ ಬಸ್ತಿಗಳು, ಭರತೇಶ್ವರ ವಿಗ್ರಹ, ಮಜ್ಜಿಗಣ್ಣ ಬಸದಿ, ಪಾರ್ಶ್ವನಾಥ ಬಸದಿ.

ಹೊಯ್ಸಳ ಕಾಲದ ಕಟ್ಟಡಗಳು: ಗಂಗರಾಜನ ಮನೆತನದವರು ೧೧೧೫ರಿಂದ ೧೧೨೦ರ ಒಳಗೆ ಅನೇಕ ಕಟ್ಟಡಗಳನ್ನು ಕಟ್ಟಿಸಿದರು. ಗೊಮ್ಮಟನ ಸುತ್ತಾಲಯ (೧೧೧೫-೧೧೧೮), ಜಿನನಾಥಪುರ ಅಗ್ರಹಾರ (೧೧೧೭), ತೇರಿನ ಬಸದಿ (೧೧೧೭), ಕತ್ತಲೆ ಬಸದಿ (೧೧೧೮) ಶಾಸನ ಬಸದಿ (೧೧೧೮), ಎರಡುಕಟ್ಟೆ ಬಸದಿ (೧೧೧೮), ಸಾಣೆಹಳ್ಳಿಯಲ್ಲಿ ಜಕ್ಕವ್ವೆಯ ಬಸದಿ (೧೧೨೦), ಶ್ರವಣಬೆಳ್ಗೊಳದಲ್ಲಿ ಜಕ್ಕಿ ಕಟ್ಟೆ (೧೧೨೦), ವಿಷ್ಣುವರ್ಧನನ ಪಿರಿಯರಸಿ ಶಾಂತಲೆಯು ಸವತಿ ಗಂಧವಾರಣ ಬಸದಿಯನ್ನು ೧೧೨೩ರಲ್ಲಿ ಕಟ್ಟಿಸಿದಳು. ಪಾರ್ಶ್ವನಾಥ ಬಸದಿಯು ೧೧೨೯ಕ್ಕೆ ಹಿಂದೆ ಇದ್ದಿತು. ದಂಡನಾಯಕ ಭರತನು ಅಖಂಡ ಬಾಗಿಲಿನ ಪಕ್ಕಗಳಲ್ಲಿ ಭರತ ಬಾಹುಬಲಿಗಳ ವಿಗ್ರಹಗಳನ್ನೂ ಅದಕ್ಕೆ ಸೋಪಾನವನ್ನೂ ಕಟ್ಟಿಸಿದನು. ೧೧೩೫ರಲ್ಲಿ ಅರೆಗಲ್ ಬಸದಿ, ೧೧೩೮ರಲ್ಲಿ ಬೊಪ್ಪನ ಚೈತ್ಯಾಲಯ, ೧೧೪೫ರಲ್ಲಿ ಚಂದ್ರಗುಪ್ತ ಬಸದಿಯ ಕಟಾಂಜನ ನಿರ್ಮಿತವಾದವು. ಇವೆಲ್ಲ ವಿಷ್ಣುವರ್ಧನನ ಕಾಲದಲ್ಲಾದವು.

ಒಂದನೆಯ ನರಸಿಂಹ ಮತ್ತು ಇಮ್ಮಡಿ ಬಲ್ಲಾಳರ ಕಾಲದಲ್ಲಿ ಹುಳ್ಳನು ಬೆಳಗೊಳದೊಳಗೆ ಭಂಡಾರ ಬಸದಿಯನ್ನು ಕಟ್ಟಿಸಿದನು (೧೧೫೯, ೧೧೭೫). ಅಕ್ಕನ ಬಸದಿಯು ೧೧೮೧ರಲ್ಲಿ ನಿರ್ಮಿತವಾಯಿತು. ನಗರಜಿನಾಲಯ ಮಹಾನವಮಿ ಮಂಡಪಗಳು ೧೧೭೬ ರಿಂದ ೧೨೦೦ರಲ್ಲಿ ನಿರ್ಮಿತವಾಗಿರಬೇಕು. ಇಮ್ಮಡಿ ಬಲ್ಲಾಳನ ದಂಡನಾಯಕನಾದ ವಸುಧೈಕಬಾಂಧವ ರೇಚರಸನು ೧೨೦೦ರಲ್ಲಿ ಜಿನನಾಥಪುರದ ಶಾಂತೀಶ್ವರ ಬಸದಿಯನ್ನು ಕಟ್ಟಿಸಿದನು.

ಇಮ್ಮಡಿ ನರಸಿಂಹ, ಸೋಮೇಶ್ವರ ಮತ್ತು ಮೂರನೆಯ ಬಲ್ಲಾಳರು ಹಿಂದಿನ ದಾನಗಳನ್ನು ಪುನಃ ಕೊಟ್ಟರು. ಹೊಸ ಕಟ್ಟಡಗಳಾದಂತೆ ಕಂಡುಬರುವುದಿಲ್ಲ. ಸಿದ್ಧರ ಬಸದಿ, ಮಂಗಾಯಿ ಬಸದಿ ಮುಂತಾದವು ವಿಜಯನಗರ ಕಾಲದ ಕಟ್ಟಡಗಳು. ಸಂಪೂರ್ಣವಾಗಿ ಹೊಯ್ಸಳ ರೀತಿಯಲ್ಲಿರುವ ಕಟ್ಟಡಗಳು ಅಕ್ಕನ ಬಸದಿ, ಜಿನನಾಥಪುರದ ಶಾಂತೀಶ್ವರ ಬಸದಿಗಳು ಮಾತ್ರವೆಂದು ಹೇಳಬಹುದು.

(೧) **ಸುತ್ತಾಲಯ :** ಗಂಗರಾಜನು ಕ್ರಿ. ಶ. ೧೧೧೫ರ ಮೇಲೆ ೧೧೧೮ರ ಒಳಗೆ ಗೊಮ್ಮಟೇಶನ ಸುತ್ತಲೂ ಮಂಡಪವನ್ನು ಕಟ್ಟಿಸಿದನು. ಅದು ವರೆಗೂ ಬಯಲಲ್ಲಿದ್ದ ಗೊಮ್ಮಟ ವಿಗ್ರಹಕ್ಕೆ ಚಾಮುಂಡರಾಯನ ಅನಂತರ ಐವತ್ತು ವರ್ಷಗಳಲ್ಲಿ ಈ ಸುತ್ತಾಲಯವನ್ನು ಕಟ್ಟಿಸಲು ರಾಜಕೀಯ ಕಾರಣಗಳಿರಬೇಕೆಂದು ಊಹಿಸಲಾಗಿದೆ. ಈ ಸುತ್ತಾಲಯದಲ್ಲಿ ೪೩ ವಿಗ್ರಹಗಳಿವೆ. ಎರಡು ಕೂಷ್ಮಾಂಡಿನಿ ಮತ್ತು ಒಂದು ಬಾಹುಬಲಿ ವಿಗ್ರಹ ಗಳನ್ನು ಬಿಟ್ಟರೆ ಮಿಕ್ಕವೆಲ್ಲವೂ ತೀರ್ಥಂಕರರ ವಿಗ್ರಹಗಳಾಗಿವೆ. ಪೂರ್ವ ದಿಂದ ಇರುವ ವಿಗ್ರಹಗಳು–ಮೂರಡಿ ಎತ್ತರದ ಕೂಷ್ಮಾಂಡಿನಿ ಆಸೀನ ಳಾಗಿ ಪುಷ್ಪ ಫಲಗಳನ್ನು ಬಲ–ಎಡಗೈಗಳಲ್ಲಿ ಹಿಡಿದಿರುವಳು. ಈ ಯಕ್ಷ ದೇವತೆಯ ಕಾಲ ಸುಮಾರು ೧೩೯೧, ಚಂದ್ರಪ್ರಭ, ಸಪ್ತಫಣಗಳ ನಾಗಸಹಿತ ಪಾರ್ಶ್ವ, ಶಾಂತಿನಾಥ, ಐದಡಿ ಎತ್ತರದ ಋಷಭ (ಕ್ರಿ. ಶ. ೧೧೮೦), ನೇಮಿ, ಅಜಿತ, ವಾಸುಪೂಜ್ಯ (೧೧೮೦), ವಿಮಲ, ಅನಂತ, ನಮಿ, ಶಂಭವ, ಸುಪಾರ್ಶ್ವ (ಐದು ಹೆಡೆ ಸರ್ಪ), ಪಾರ್ಶ್ವ, ದಕ್ಷಿಣದಲ್ಲಿ–ಶಂಭವ (೧೧೮೦), ಶೀತಳ, ಅಭಿನಂದನ, ಚಂದ್ರಪ್ರಭ, ಪುಷ್ಪದಂತ, ಮುನಿಸುವ್ರತ, ಶ್ರೇಯಾಂಸ, ವಿಮಲ (೧೧೮೦), ಕುಂಥು, ಧರ್ಮನಾಥ, ನೇಮಿನಾಥ, ಅಭಿನಂದನ (೧೨೦೦), ಶಾಂತಿನಾಥ (೧೧೮೦), ಅರ, ಮಲ್ಲಿ, ಮುನಿಸುವ್ರತ; ಪಶ್ಚಿಮದಲ್ಲಿ–ಪಾರ್ಶ್ವ, ಶೀತಲ, ಪುಷ್ಪದನ್ತ, ಪಾರ್ಶ್ವ, ಅಜಿತ, ಸುಮತಿ, ವರ್ಧಮಾನ (೧೧೮೦–೧೨೦೦), ಶಾಂತಿ, ಮಲ್ಲಿ (೧೨೦೦), ಕೂಷ್ಮಾಂಡಿನಿ (ಆಸೀನಮೂರ್ತಿ, ಎಡಗೈಯಲ್ಲಿ ಫಲ, ಬಲಗೈ ಮಗುವಿನ ತಲೆಯ ಮೇಲೆ), ಬಾಹುಬಲಿ, ಎರಡು ಚಂದ್ರಪ್ರಭ ವಿಗ್ರಹಗಳು (೧೬–೧೭ನೆಯ ಶತಮಾನ). ಬಸವಿಶೆಟ್ಟಿ ೧೧೮೦–೧೨೦೦ರಲ್ಲಿ

೨೪ ತೀರ್ಥಂಕರರ ವಿಗ್ರಹಗಳನ್ನು ಮಾಡಿಸಿದನೆಂದು ಶಾಸನಗಳು (ಶ್ರ. ಬೆ. ೧೮೭, ೧೮೮) ಹೇಳುವುವು. ಆದರೆ ಕೆಲವು ವಿಗ್ರಹಗಳನ್ನು ಅದೇ ಕಾಲದಲ್ಲಿ ಇತರರು ಮಾಡಿಸಿದರೆಂದು ವಿಗ್ರಹಗಳ ಶಾಸನಗಳು ಹೇಳುವುವು. ಆದುದರಿಂದ ಗಂಗರಾಜನ ಅನಂತರ ಐವತ್ತು ವರ್ಷಗಳಾದಮೇಲೆ ಈ ವಿಗ್ರಹಗಳು ಸ್ಥಾಪಿಸಲ್ಪಟ್ಟವು. ಈ ಬಸವಿಸೆಟ್ಟಿಯೇ ಸುತ್ತಾಲಯದ ಭಿತ್ತಿಯನ್ನು ಮಾಡಿಸಿದನು. ಅವನ ಮಕ್ಕಳು ಮುಂದಿನ ಜಾಲಂದ್ರಗಳನ್ನು ಮಾಡಿಸಿದರು.

(೨) **ತೇರಿನ ಬಸದಿ:** ಈ ಬಸದಿಯಲ್ಲಿ ಬಾಹುಬಲಿ, ಮುಂದೆ "ತೇರು" ಇವೆ. ಗರ್ಭಗುಡಿ, ಸುಕನಾಸಿ ಮತ್ತು ನವರಂಗಗಳಿವೆ. ಬಾಹುಬಲಿ ವಿಗ್ರಹ ಸುಮಾರು ಐದಡಿ ಎತ್ತರವಿದೆ. ಇದರ ಮುಂದಿರುವ "ತೇರಿ"ಗೆ ಮಂದರವೆಂದು ಹೆಸರು. ಮಂದರಗಳಲ್ಲಿ ನಂದೀಶ್ವರ ಮತ್ತು ಮೇರು ಎಂಬ ಭೇದಗಳಿವೆ ಎಂದೂ ಇದು ಮೇರು ಮಂದರವೆಂದೂ ಹೇಳಲಾಗಿದೆ. ಇದರ ಸುತ್ತಲೂ ೫೨ ಜಿನ ವಿಗ್ರಹಗಳನ್ನು ಕೆತ್ತಿರುವರು. ೧೧೧೭ರಲ್ಲಿ ವಿಷ್ಣುವರ್ಧನನ ಮಹಾವಡ್ಡವ್ಯವಹಾರಿಗಳಾದ ಹೊಯ್ಸಳ ಸೆಟ್ಟಿ ನೇಮಿ ಸೆಟ್ಟಿಗಳ ತಾಯಂದಿರಾದ ಮಾಚಿಕಬ್ಬೆ ಶಾಂತಿಕಬ್ಬೆಯರು ಈ ದೇವಾಲಯವನ್ನು ಮಂದರವನ್ನು ಮಾಡಿಸಿದರು (ಶ್ರ. ಬೆ. ೧೩೭).

(೩) **ಶಾಸನ ಬಸ್ತಿ:** ಗರ್ಭಗುಡಿ ಸುಕನಾಸಿ ನವರಂಗವಿರುವ ಈ ಬಸದಿಯಲ್ಲಿ ಐದಡಿ ಎತ್ತರದ ಆದಿನಾಥ ವಿಗ್ರಹವಿದೆ. ಸುಕನಾಸಿಯಲ್ಲಿ ಯಕ್ಷಯಕ್ಷಿಣಿಯಾದ ಗೋಮುಖ-ಚಕ್ರೇಶ್ವರೀ ವಿಗ್ರಹಗಳಿವೆ. ಹೊರಗಿನ ಗೋಡೆಗಳಲ್ಲಿ ಗೂಡುಗಳೂ ಶಿಖರಗಳೂ ಕೆಲವು ಜಿನವಿಗ್ರಹಗಳೂ ಇವೆ. ಗಂಗರಾಜನು ಇದಕ್ಕೆ ಇಂದಿರಾಕುಲಗೃಹವೆಂದು ಹೆಸರಿಟ್ಟು ಆದಿನಾಥನಿಗೆ ವಿಷ್ಣುವರ್ಧನನಿಂದ ಪಡೆದ 'ಪರಮ' ಗ್ರಾಮವನ್ನು ೧೧೧೮ರಲ್ಲಿ ದಾನಮಾಡಿದನು.

(೪) **ಎರಡುಕಟ್ಟೆ ಬಸದಿ:** ಗಂಗರಾಜನ ಹೆಂಡತಿಯಾದ ಲಕ್ಷ್ಮಿಯು ಆದಿನಾಥನಿಗೆ ಸು. ೧೧೧೮ರಲ್ಲಿ ಈ ಬಸದಿಯನ್ನು ಕಟ್ಟಿಸಿದಳು. ಇದಕ್ಕೆ ಪೂರ್ವ ಪಶ್ಚಿಮಗಳಲ್ಲಿ ಮೆಟ್ಟಲುಗಳಿರುವುದರಿಂದ ಎರಡುಕಟ್ಟೆಬಸದಿ ಎಂದು ಹೆಸರಾಯಿತು. ಐದಡಿ ಎತ್ತರದ ಆದಿನಾಥ ವಿಗ್ರಹ ಇಬ್ಬರು

ಪುರುಷಚಾಮರಧಾರಕರನ್ನು ಹೊಂದಿದೆ. ಪೀಠದ ಮೇಲೆ ಲಕ್ಷ್ಮಿಯ ಶಾಸನವಿದೆ, ಸುಕನಾಸಿಯಲ್ಲಿ ಯಕ್ಷಯಕ್ಷಿಣಿಯರಿರುವರು.

(೫) ಕತ್ತಲೆ ಬಸದಿ: ಚಿಕ್ಕ ಬೆಟ್ಟದಮೇಲೆ ಅತ್ಯಂತ ದೊಡ್ಡದಾದ ಈ ಬಸದಿ ೧೨೪ ಅಡಿ ಉದ್ದ ೪೦ ಅಡಿ ಅಗಲವಿದೆ. ಗರ್ಭಗೃಹ, ಅದರ ಸುತ್ತಲೂ ಪ್ರದಕ್ಷಿಣ, ಸುಕನಾಸಿ, ನವರಂಗ, ಮುಖಮಂಡಪ ಮತ್ತು ಹೊರಗಿನ ಶಾಲೆಗಳಿವೆ. ಇದಕ್ಕೆ ಪದ್ಮಾವತೀ ಬಸ್ತಿ ಎಂಬ ಹೆಸರು. ಹೊರಗಿನ ಶಾಲೆಯಲ್ಲಿರುವ ಪದ್ಮಾವತೀವಿಗ್ರಹದಿಂದ ಇದಕ್ಕೆ ಈ ಹೆಸರು ಬಂದಿರಬಹುದು. ಇದಕ್ಕೆ ಹಿಂದೆ ಗೋಪುರವಿದ್ದಂತೆ ಕಂಡುಬರುವುದು. ಗರ್ಭಗುಡಿಯಲ್ಲಿ ಆರಡಿ ಎತ್ತರದ ಆಸೀನ ಆದಿತೀರ್ಥಂಕರ ವಿಗ್ರಹವಿದೆ. ಪಕ್ಕದಲ್ಲಿ ಪುರುಷ ಚಾಮರಧಾರಕರಿರುವರು. ಮುಂದಿನ ಶಾಲೆಯು ಈಚಿನ ಕಟ್ಟಡವಾಗಿದೆ. ಇದರ ಈಶಾನ್ಯ ಮೂಲೆಯಲ್ಲಿ ಮೇಲಕ್ಕೆ ಹೋಗಲು ಮೆಟ್ಟಲುಗಳಿವೆ; ಮೇಲೆ ಮಹಡಿ ಇದೆ.

ಆದಿತೀರ್ಥಂಕರ ವಿಗ್ರಹದ ಪೀಠದಲ್ಲಿರುವ ಶಾಸನದಿಂದ ಗಂಗ ರಾಜನು ತನ್ನ ತಾಯಿಯಾದ ಪೋಚವ್ವೆಯ ಹೆಸರಿನಲ್ಲಿ ಈ ಬಸದಿಯನ್ನು ಕಟ್ಟಿಸಿದನು ಎಂದು ತಿಳಿದುಬರುವುದು. ಈ ಬಸದಿಯಲ್ಲಿ ಮಾತ್ರ ಪ್ರದಕ್ಷಿಣ ಮಾರ್ಗ ಕಂಡುಬರುತ್ತದೆ.

(೬) ಅರೆಗಲ್ ಬಸದಿ: ಗಂಗರಾಜನು ಶ್ರವಣಬೆಳಗೊಳಕ್ಕೆ ಒಂದು ಮೈಲಿ ಉತ್ತರದಲ್ಲಿ ಜಿನನಾಥಪುರ ಅಗ್ರಹಾರವನ್ನು ಮಾಡಿಸಿದನು. ಇಲ್ಲಿನ ಅರೆಗಲ್ ಬಸದಿ ಕ್ರಿ. ಶ. ೧೧೩೫ರಲ್ಲಿ ನಿರ್ಮಿತವಾಯಿತು. ಗರ್ಭಗುಡಿ ಸುಕನಾಸಿ ನವರಂಗಗಳಿವೆ. ಈಗ ಗರ್ಭಗುಡಿಯಲ್ಲಿರುವ ಅಮೃತಶಿಲೆಯ ಪಾರ್ಶ್ವನಾಥ ವಿಗ್ರಹದ ಮೇಲೆ ಹನ್ನೊಂದು ಹೆಡೆಗಳ ಸರ್ಪವಿದೆ. ಈ ವಿಗ್ರಹ ಇತ್ತೀಚೆಗೆ ಸ್ಥಾಪಿತವಾಯಿತು (೧೮೮೯). ಮೂಲ ವಿಗ್ರಹ ಭಿನ್ನವಾಗಿ ಹತ್ತಿರ ಕೆರೆಯಲ್ಲಿ ಬಿದ್ದಿದೆ. ದೇವಾಲಯದ ಪಕ್ಕ ದಲ್ಲಿರುವ ಶಾಸನದಿಂದ ಇದು ೧೧೩೫ರಲ್ಲಿ ಸ್ಥಾಪಿತವಾದಂತೆ ಕಂಡುಬರು ತ್ತದೆ. ಸುಕನಾಸಿಯಲ್ಲಿ ಕುಳಿತಿರುವ ಧರಣೇಂದ್ರ ಪದ್ಮಾವತಿ ವಿಗ್ರಹಗಳು ಎರಡೂವರೆ ಅಡಿ ಎತ್ತರವಾಗಿವೆ. ಈ ಬಸದಿಯಲ್ಲಿ ಚತುರ್ವಿಂಶತಿ ತೀರ್ಥಂಕರ, ಪಂಚಪರಮೇಷ್ಠಿ, ನವದೇವತಾ ನಂದೀಶ್ವರ ಉತ್ಸವ ವಿಗ್ರಹಗಳು ಸುಂದರವಾಗಿವೆ.

(೭) **ಸವತಿ ಗಂಧವಾರಣ ಬಸದಿ:** ವಿಷ್ಣುವರ್ಧನನ ರಾಣಿಯಾದ ಶಾಂತಲೆಯು ಚಿಕ್ಕ ಬೆಟ್ಟದಮೇಲೆ ೬೦ ಅಡಿ ಉದ್ದ ೩೫ ಅಡಿ ಅಗಲ ವಿರುವ ಈ ಬಸದಿಯನ್ನು ೧೧೨೩ರಲ್ಲಿ ಕಟ್ಟಿಸಿದಳು. ಇಲ್ಲಿನ ಶಾಂತಿನಾಥ ವಿಗ್ರಹ ಐದಡಿ ಎತ್ತರವಿದೆ. ಪಕ್ಕದಲ್ಲಿ ಪುರುಷ ಚಾಮರಧಾರಕರಿರುವರು. ಸುಕನಾಸಿಯಲ್ಲಿ ಯಕ್ಷಯಕ್ಷಿಣಿಯರಾದ ಕಿಂಪುರುಷ ಮಹಾಮಾನಸಿಯರಿರುವರು. ಹೊರಗೋಡೆಗಳ ಮೇಲೆ ಕಂಬಗಳೂ ಗರ್ಭಗುಡಿಯ ಮೇಲೆ ಗೋಪುರವೂ ಇವೆ. ಶಾಂತಲೆಯು ಕಟ್ಟಿಸಿದ ಕಪ್ಪೆ ಚೆನ್ನಿಗ ದೇವಾಲಯವು ಇದಕ್ಕಿಂತಲೂ ಸುಂದರವಾಗಿದೆ.

(೮) **ಪಾರ್ಶ್ವನಾಥ ಬಸದಿ:** ಚಿಕ್ಕ ಬೆಟ್ಟದ ಪಾರ್ಶ್ವನಾಥ ಬಸದಿಯಲ್ಲಿ ಗರ್ಭಗೃಹ ಸುಕನಾಸಿ ನವರಂಗ ಮುಖಮಂಡಪಗಳಿವೆ. ನವರಂಗ ಮುಖಮಂಡಪಗಳಿಗೆ ಪಕ್ಕದಲ್ಲಿ ಶಾಲೆಗಳಿವೆ. ಹೊರಗಿನ ಗೋಡೆಗಳ ಮೇಲೆ ಸಣ್ಣ ಸ್ತಂಭಗಳೂ ಗೋಪುರಗಳೂ ಇವೆ. ದೇವಾಲಯವೆಲ್ಲ ೫೫ ಅಡಿ ಉದ್ದ ೨೯ ಅಡಿ ಅಗಲ ಇದೆ. ಗರ್ಭಗುಡಿಯಲ್ಲಿ ಹದಿನೈದಡಿ ಎತ್ತರದ ದೊಡ್ಡ ಪಾರ್ಶ್ವನಾಥ ವಿಗ್ರಹವಿದೆ. ಪಾರ್ಶ್ವನಾಥನ ಶಿರೋಭಾಗ ದಲ್ಲಿ ಏಳು ಹೆಡೆಯ ಸರ್ಪವಿದೆ. (ಇದರ ಮುಂದಿರುವ ಉದ್ದವಾದ ಮಾನಸ್ತಂಭವನ್ನು ಚಿಕ್ಕದೇವರಾಯನ ಕಾಲದಲ್ಲಿ ಪುಟ್ಟಯ್ಯ ಎಂಬುವನು ಮಾಡಿಸಿದಂತೆ ಅನಂತಕವಿಯ ಬೆಳುಗೊಳದ ಗೊಮ್ಮಟೇಶ್ವರ ಚರಿತೆಯಿಂದ ತಿಳಿಯುವುದು. ಈ ಮಾನಸ್ತಂಭದ ಪೀಠಿಕೆಯ ನಾಲ್ಕು ಮುಖಗಳಲ್ಲಿಯೂ ವಿಗ್ರಹಗಳಿವೆ. ದಕ್ಷಿಣ ಮುಖದಲ್ಲಿ ಕುಳಿತಿರುವ ಪದ್ಮಾವತಿ, ಪೂರ್ವದಲ್ಲಿ ಪಾಶ ಅಂಕುಶ ಫಲ ಅಭಯಹಸ್ತನಾದ ನಿಂತಿರುವ ಯಕ್ಷ, ಉತ್ತರದಲ್ಲಿ ಕುಳಿತಿರುವ ಕೂಷ್ಮಾಂಡಿನಿ (ಅಭಯ ಪಾಶ ಅಂಕುಶ ಫಲ), ಪಶ್ಚಿಮದಲ್ಲಿ ಕುದುರೆಯ ಮೇಲಿರುವ ಬ್ರಹ್ಮ ವಿಗ್ರಹಗಳಿವೆ. ಮಾನಸ್ತಂಭದ ಮೇಲ್ಭಾಗದಲ್ಲಿ ಸಣ್ಣ ಗುಡಿಯಲ್ಲಿ ನಾಲ್ಕು ದಿಕ್ಕುಗಳಿಗೂ ಅಭಿಮುಖ ವಾಗಿರುವ ಜಿನವಿಗ್ರಹಗಳಿವೆ.

ಈ ಪಾರ್ಶ್ವನಾಥ ಬಸದಿಯನ್ನು ಕಟ್ಟಿಸಿದ ಕಾಲ ಸರಿಯಾಗಿ ತಿಳಿಯದು. ನವರಂಗದಲ್ಲಿರುವ ಶಾಸನ (ಶ್ರ. ಬೆ. ೬೭) ಮಲ್ಲಿಷೇಣ ಮಲಧಾರಿಗಳು ಗತಿಸಿದ ಕಾಲವನ್ನು (೧೧೨೯) ಸೂಚಿಸುವುದು. ಆದ್ದರಿಂದ ಬಹುಶಃ ಗಂಗರಾಜನ ಕಾಲದಲ್ಲಿ ನಿರ್ಮಿತವಾಗಿರಬಹುದು.

(೯) **ಸಾಣೇಹಳ್ಳಿ ಬಸದಿ:** ಶ್ರವಣಬೆಳಗೊಳಕ್ಕೆ ಮೂರು ಮೈಲಿ ದೂರದಲ್ಲಿರುವ ಸಾಣೇಹಳ್ಳಿಯಲ್ಲಿ ಗಂಗರಾಜನ ಅಣ್ಣನ ಹೆಂಡತಿಯಾದ ಜಕ್ಕಿಮವ್ವೆ ಸು. ೧೧೨೦ರಲ್ಲಿ ಒಂದು ಬಸದಿಯನ್ನು ಕಟ್ಟಿಸಿದಳು. ಈಗ ಇದು ಬಿದ್ದುಹೋಗಿದೆ. ಜಕ್ಕಿಮವ್ವೆ ಹಳ್ಳಿಯಲ್ಲಿರುವ ಭಂಡಾರ ಬಸದಿಯ ದಕ್ಷಿಣದಲ್ಲಿ ಜಕ್ಕಿಕಟ್ಟೆ ಎಂಬ ಕೆರೆಯನ್ನೂ, ಅಲ್ಲಿನ ಬಂಡೆಗಳ ಮೇಲೆ ಜಿನ ವಿಗ್ರಹಗಳನ್ನೂ ಮಾಡಿಸಿದಳು.

(೧೦) **ಭರತ ಬಾಹುಬಲಿ ವಿಗ್ರಹಗಳು:** ದೊಡ್ಡಬೆಟ್ಟದ ಅಖಂಡ ಬಾಗಿಲಿನ ಮುಂದೆ ಎರಡು ಪಕ್ಕಗಳಲ್ಲಿ ಇರುವ ಬಾಹುಬಲಿ, ಭರತ ವಿಗ್ರಹಗಳನ್ನು ದಂಡನಾಯಕ ಕಿರಿಯ ಭರತಮಯ್ಯನು ಸ್ಥಾಪಿಸಿದನು. ಭರತನು ಮುಂದಿನ ಮೆಟ್ಟಿಲುಗಳನ್ನು ಮಾಡಿಸಿದನೆಂದು ಶಾಸನಗಳು ಹೇಳುವುವು. ಬಹುಶಃ ೧೧೩೦ರಲ್ಲಿ ಈ ವಿಗ್ರಹಗಳ ಪ್ರತಿಷ್ಠೆ ಸೋಪಾನ ಗಳಾದವು.

(೧೧) **ಬೊಪ್ಪನ ಚೈತ್ಯಾಲಯ:** ಕ್ರಿ. ಶ. ೯೮೨-೯೭೫ರಲ್ಲಿ ನಿರ್ಮಿತ ವಾದ ಚಾಮುಂಡರಾಯ ಬಸದಿಯಲ್ಲಿ ಈಗಿರುವ ನೇಮಿನಾಥ ವಿಗ್ರಹ ವನ್ನು ಗಂಗರಾಜನ ಮಗನಾದ ಏಚಣನು ೧೧೩೮ರಲ್ಲಿ ತ್ರೈಲೋಕ್ಯ ರಂಜನ ಅಥವಾ ಬೊಪ್ಪನ ಚೈತ್ಯಾಲಯಕ್ಕೆ ಮಾಡಿಸಿದನು.

(೧೨) **ಚಂದ್ರಗುಪ್ತ ಬಸದಿಯ ಕಟಾಂಜನ:** ಸುಮಾರು ಎಂಟು ಒಂಬತ್ತನೆಯ ಶತಮಾನದ ಚಂದ್ರಗುಪ್ತ ಬಸದಿ ಸಣ್ಣದಾಗಿದ್ದು ಪಾರ್ಶ್ವನಾಥ ಪದ್ಮಾವತೀ ಕೂಷ್ಮಾಂಡಿನೀ ಧರಣೇಂದ್ರ ಯಕ್ಷ ಸರ್ವಾಹ್ಣ ಯಕ್ಷ ವಿಗ್ರಹಗಳನ್ನು ಹೊಂದಿದ್ದಿತು. ಸುಮಾರು ೧೧೪೫ರಲ್ಲಿ ಇದಕ್ಕೆ ಅಲಂಕೃತವಾದ ದ್ವಾರವನ್ನು ಜಾಲಂದ್ರಗಳುಳ್ಳ ಕಟಾಂಜನವನ್ನು ಸೇರಿಸಲಾಯಿತು. ದ್ವಾರದ ಪ್ರತಿಯೊಂದು ಫಲಕದಲ್ಲಿಯೂ ಚೆನ್ನಾಗಿ ಕೊರೆದಿರುವ ಐದು ಚಿತ್ರಪಟ್ಟಿಕೆಗಳಿವೆ. ಜಾಲಂದ್ರದ ಕಟಾಂಜನದಲ್ಲಿ ಹತ್ತು ಸಾಲು ಕಿಂಡಿಗಳು, ಅವುಗಳ ಮಧ್ಯದಲ್ಲಿ ಪ್ರತಿಯೊಂದು ಸಾಲಿನಲ್ಲೂ ೪೫ ಚಿತ್ರಫಲಕಗಳು ಇವೆ. ಈ ಚಿತ್ರಗಳಲ್ಲಿ ಶ್ರುತಕೇವಲಿ ಭದ್ರಬಾಹು ಚಂದ್ರಗುಪ್ತರ ಕಥೆ ವರ್ಣಿಸಲ್ಪಟ್ಟಿದೆ ಎಂದು ಹೇಳುವರು. ಪೂರ್ವ ಭಾಗದಲ್ಲಿ ಮೂರನೆಯ ಸಾಲಿನ ಮಧ್ಯದಲ್ಲಿ "ದಾಸೋಜಃ" ಎಂದು

ಶಿಲ್ಪಿಯ ಹೆಸರು ಕಂಡುಬರುತ್ತದೆ. ಈ ದಾಸೋಜನೇ ಶ್ರ. ಬೆ. ೧೪೦ನೆಯ ಶಾಸನಗಳನ್ನು ಕೆತ್ತಿರುವುದರಿಂದ ಈ ಭಾಗವು ಕ್ರಿ. ಶ. ೧೧೪೫ರಲ್ಲಿ ನಿರ್ಮಿತವಾಗಿರಬೇಕು. (ಗಂಗಣ್ಣನ ಲಿಖಿತ। ಸೆವಣೊ ಬಲ್ಲರದೇವ ರೂವಾರಿ ರಾವೋಜನ ಮಗ ದಾಸೋಜ ಕಂಡರಿಸಿದ.)

(೧೩) ಭಂಡಾರಿ ಬಸದಿ : (ಚತುರ್ವಿಂಶತಿ ತೀರ್ಥಂಕರ ಬಸದಿ,) ಶ್ರವಣಬೆಳಗೊಳ ಗ್ರಾಮದಲ್ಲಿರುವ ಭಂಡಾರಿ ಬಸದಿಯು ೨೬೬ ಅಡಿ ಉದ್ದ ೭೮ ಅಡಿ ಅಗಲವಿದೆ. ಗರ್ಭಗೃಹ ಸುಕನಾಸಿ ನವರಂಗ ಮುಖಮಂಡಪ ಕೈಸಾಲೆ ಮತ್ತು ಪ್ರಾಕಾರಗಳಿವೆ. ಹೊಯ್ಸಳ ಒಂದನೇ ನರಸಿಂಹನ ಭಂಡಾರಿಯಾದ ಹುಳ್ಳನು ಕ್ರಿ. ಶ. ೧೧೫೯ರಲ್ಲಿ ಕಟ್ಟಿಸಿದುದರಿಂದ ಭಂಡಾರಿ ಬಸದಿ ಎಂದು ಹೆಸರಾಯಿತು. ನರಸಿಂಹನು ಇಲ್ಲಿಗೆ ಬಂದಿದ್ದಾಗ ಭವ್ಯ ಚೂಡಾಮಣಿ ಎಂಬ ಹೆಸರನ್ನು ಕೊಟ್ಟು ಇದಕ್ಕೆ ಸವಣೇರು ಹಳ್ಳಿಯನ್ನು ದಾನಮಾಡಿದನು. ಶ್ರ. ಬೆ. ೩೪ನೆಯ ಶಾಸನದಲ್ಲಿ ಇದರ ವರ್ಣನೆಯಿದೆ:

ಕ॥ ಗೊಮ್ಮಟಪುರ ಭೂಷಣಮಿದು ಗೊಮ್ಮಟಮಾಯ್ತೆನೆ ಸಮಸ್ತ ಪರಿಕರ ಸಹಿತಂ
ಸಮ್ಮದದಿಂ ಹುಳ್ಳ ಚಮೂಪಂಮ್ಮಾಡಿಸಿದಂ ಜಿನೋತ್ತಮಾಳಯಮನಿದಂ ॥

ವೃ॥ ಪರಿಸೂತ್ರಂ ನೃತ್ಯಗೇಹಂ ಪ್ರವಿಪುಳ ವಿಳಸತ್ಪಕ್ಷ ದೇಶಸ್ಥ ಶೈಲ
ಸ್ಥಿರ ಜೈನಾವಾಸಯುಗ್ಮಂ ವಿವಿಧಸುವಿಧ ಪತ್ರೋಲ್ಲಸದ್ಭಾವ ರೂಪೋ
ತ್ಕರ ರಾಜದ್ವಾರ ಹರ್ಮ್ಯಂ ಬೆರಸತುಳ ಚತುರ್ವಿಂಶತೀರ್ತ್ಥೇಶಗೇಹಂ
ಪರಿಪೂರ್ಣ್ಣಂ ಪುಣ್ಯಪುಂಜ ಪ್ರತಿಮ ಮೆಸೆದುದೀಯುಂದದಿಂ ಹುಳ್ಳನಿಂದಂ ॥

ಹುಳ್ಳನು ಪರಿಸೂತ್ರ, ನೃತ್ಯಗೇಹ, ಎರಡು ಪಕ್ಕಗಳಲ್ಲಿ ಎರಡು ಕಲ್ಲಿನ ದೇವಾಲಯಗಳು, ರಾಜದ್ವಾರ, ಹರ್ಮ್ಯ ಸಹಿತವಾದ ಚತುರ್ವಿಂಶತಿ ತೀರ್ಥಂಕರ ಬಸದಿಯನ್ನು ಮಾಡಿಸಿದನು.

ಗರ್ಭಗುಡಿಯಲ್ಲಿ ಉದ್ದವಾದ ಪೀಠದಮೇಲೆ ಮೂರು ಅಡಿ ಎತ್ತರದ ಇಪ್ಪತ್ತನಾಲ್ಕು ಸ್ಥಾನಕ ಜಿನವಿಗ್ರಹಗಳಿವೆ. ಗರ್ಭಗುಡಿಗೆ ಮೂರು ಬಾಗಿಲುಗಳಿವೆ. ಮಧ್ಯದ ಬಾಗಿಲುವಾಡವನ್ನು ಚೆನ್ನಾಗಿ ಕೊರೆದಿದೆ.

ಬಾಗಿಲುಗಳ ಪಕ್ಕಗಳಲ್ಲಿ ಜಾಲಂಧ್ರಗಳಿವೆ. ಮಧ್ಯ ಬಾಗಿಲಿಗೆ ಎದುರಾಗಿ ವಾಸುಪೂಜ್ಯ, ಇದರ ಬಲಕ್ಕೆ ಹನ್ನೊಂದು, ಎಡಕ್ಕೆ ಹನ್ನೆರಡು ಜಿನ ವಿಗ್ರಹಗಳಿವೆ. ಸುಕನಾಸಿಯ ಎಡಗಡೆಯಲ್ಲಿ ಪದ್ಮಾವತೀ ಬ್ರಹ್ಮ ವಿಗ್ರಹಗಳಿವೆ. ನವರಂಗದ ಮಧ್ಯದಲ್ಲಿ ಹತ್ತು ಚದುರಡಿ ವಿಸ್ತಾರ ವಾಗಿರುವ ಒಂದೇ ಚಂದ್ರಶಿಲೆ ನಾಲ್ಕು ಕಂಬಗಳ ಮಧ್ಯದಲ್ಲಿದೆ. ಇಂತಹ ಅಖಂಡ ಶಿಲೆಗಳು ಮುಂದಿನ ಭಾಗದಲ್ಲೂ ಇವೆ. ಇಂತಹ ದೊಡ್ಡ ಚಪ್ಪಡಿಗಳನ್ನು ಹೇಗೆ ಸಾಗಿಸಿದರೆಂಬುದು ಕುತೂಹಲಾಸ್ಪದವಾಗಿದೆ. ನವರಂಗದ ದ್ವಾರಬಂಧದ ಮೇಲೆ ಪುರುಷ ಮೃಗ ಲತಾ ಚಿತ್ರಗಳಿವೆ. ಸುತ್ತಲೂ ಇರುವ ಶಾಲೆಗೆ ಕಟಾಂಜನವಿದೆ. ದುಂಡಾದ ನಾಲ್ಕಡಿ ಎತ್ತರದ ಕಂಬಗಳಿಗೆ ಎರಡೂವರೆ ಅಡಿ ಅಗಲದ ಎರಡೆರೆಡು ಕಲ್ಲು ಚಪ್ಪಡಿಗಳನ್ನು ಮಧ್ಯೆ ಒಂಬತ್ತಂಗುಲ ಅಂತರವಿರುವಂತೆ ಜೋಡಿಸಿರು ವರು. ಈ ಚಪ್ಪಡಿಗಳ ಮೇಲೆ ಕೆತ್ತನೆ ಕೆಲಸವಿಲ್ಲ. ಇಂತಹ ಕಟಾಂಜನ ದಕ್ಷಿಣ ಭಾರತದಲ್ಲಿ ಅಪೂರ್ವವಾದುದು. ಬಸದಿಯ ಮುಂದಿರುವ ಮಾನಸ್ತಂಭವು ಏಕಶಿಲೆಯಿಂದ ಮಾಡಿದುದಾಗಿದೆ.

(೧೪) **ಗೊಮ್ಮಟೇಶ್ವರನ ಮುಂದಿನ ಮಂಡಪ :** ದಂಡನಾಯಕ ಭರತನು ಸು. ೧೧೬೦ರಲ್ಲಿ ಗೊಮ್ಮಟೇಶ್ವರ ಮುಂದಿನ ಶಾಲೆಯ "ಹಪ್ಪಳಿಗೆ" (ಉಪ್ಪರಿಗೆ?)ಯನ್ನು ಮಾಡಿಸಿದನೆಂದು ಹೇಳಿಕೊಂಡಿರುವನು. ಈ ಮಂಡಪದ ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರೂ ಪರಿವಾರದವರೂ, ಮಧ್ಯದಲ್ಲಿ ಕಳಶವನ್ನು ಹಿಡಿದಿರುವ ಇಂದ್ರನೂ ಇರುವರು. ಕಣಶಿಲೆ ಯಲ್ಲಿ ಕೆತ್ತನೆಕೆಲಸ ಸುಂದರವಾಗಿದೆ. ಇಲ್ಲಿರುವ ಶಾಸನದಿಂದ (ಶ್ರ.ಬೆ. ೨೨೧) ಪ್ರಧಾನಿ ಬಲದೇವನು ಹನ್ನೆರಡನೆಯ ಶತಾಬ್ದದ ಆದಿಭಾಗದಲ್ಲಿ ಮಾಡಿಸಿದನೆಂದು ತಿಳಿದುಬರುತ್ತದೆ.

(೧೫) **ಅಕ್ಕನ ಬಸದಿ :** ಶ್ರವಣಬೆಳಗೊಳದಲ್ಲಿ ಸಂಪೂರ್ಣ ಹೊಯ್ಸಳ ರೀತಿಯಲ್ಲಿ ಕಟ್ಟಿದುದು ಇದು ಒಂದೇ ಕಟ್ಟಡವೆನ್ನಬಹುದು. ಶಾಂತಲೆಯ ಗಂಧವಾರಣ ಬಸದಿಯು ಕೂಡ ಹೊಯ್ಸಳ ರೀತಿಯಲ್ಲಿಲ್ಲ. ಗರ್ಭಗೃಹ ಸುಕನಾಸಿ ನವರಂಗ ಮುಖಮಂಡಪಗಳಿವೆ. ಗರ್ಭಗುಡಿಯ ದ್ವಾರವು ಚೆನ್ನಾಗಿ ಅಲಂಕೃತವಾಗಿದ್ದು ಒಳಗೆ ಐದಡಿ ಎತ್ತರದ ಸ್ಥಾನಕ

ಪಾರ್ಶ್ವನಾಥ ವಿಗ್ರಹವಿದೆ. ಇದರಮೇಲೆ ಏಳುಹೆಡೆ ಸರ್ಪವಿದೆ. ಸುಕನಾಸಿ ದ್ವಾರದ ಪಕ್ಕಗಳಲ್ಲಿ ಜಾಲಂಧ್ರಗಳಿವೆ. ಸುಕನಾಸಿಯಲ್ಲಿ ಧರಣೇಂದ್ರ ಪದ್ಮಾವತಿಯರ ಆಸೀನಮೂರ್ತಿಗಳಿವೆ. ಇವು ಮೂರೂವರೆ ಅಡಿ ಎತ್ತರ ವಿದ್ದು ಐದು ಹೆಡೆ ಸರ್ಪವನ್ನು ಹೊಂದಿವೆ. ನವರಂಗದಲ್ಲಿ ಹಳೆಯಬೀಡಿನ ಬಸ್ತಿಹಳ್ಳಿಯಲ್ಲಿರುವ ಹೊಳಪುಕೊಟ್ಟ ಬಳಪದಕಲ್ಲಿನ ಸ್ತಂಭಗಳಂತೆ ಇಲ್ಲಿಯೂ ಸುಂದರವಾದ ನಾಲ್ಕು ಕಂಬಗಳಿವೆ. ಮೇಲ್ಛಾವಣಿ ಎರಡಡಿ ಆಳವಾಗಿದ್ದು ಒಂಬತ್ತು ಭುವನೇಶ್ವರಿಗಳನ್ನು ಹೊಂದಿದೆ. ಕಂಬಗಳ ಮೇಲೂ ಭುವನೇಶ್ವರಿಗಳಲ್ಲೂ ಕೆತ್ತನೆಕೆಲಸವು ಚೆನ್ನಾಗಿದೆ. ಮುಖ ಮಂಡಪದಲ್ಲೂ ಭುವನೇಶ್ವರಿ ಚೆನ್ನಾಗಿದೆ. ಇಲ್ಲಿ ಎತ್ತರವಾದ ಜಗತಿಯ ಮೇಲೆ ಪುಷ್ಪಪಟ್ಟಿಕೆ ಇದೆ. ಹೊರಗೋಡೆಗಳಲ್ಲಿ ಸಣ್ಣ ಕಂಬಗಳೂ ಶಿಖರಗಳೂ ಇವೆ. ಗೋಪುರದ ನಾಲ್ಕು ಕಡೆಗಳ ಮಧ್ಯಭಾಗದಲ್ಲಿ ಮಾತ್ರ ಕೆಲವು ವಿಗ್ರಹಗಳಿವೆ. ಗೋಪುರವು ಚಾಚಿಕೊಂಡಿರುವ ಭಾಗದಲ್ಲಿ ಚಿತ್ರ ಫಲಕವಿದೆ. ಬಹಳ ಸುಂದರವಾಗಿ ಕೊರೆದಿರುವ ಸಿಂಹಲಲಾಟದ ಕೆಳಗೆ ಕುಳಿತಿರುವ ಜಿನವಿಗ್ರಹವಿದೆ. ಜಿನನಮೇಲೆ ಮುಕ್ಕೊಡೆ, ಪಕ್ಕಗಳಲ್ಲಿ ಪುರುಷ ಚಾಮರಧರರು, ನಿಂತಿರುವ ಜಿನ ಯಕ್ಷಯಕ್ಷಿಯರಿರುವರು. ಮುಂದೆ ಚಾಚಿರುವ ಭಾಗದ ಎರಡು ಪಕ್ಕಗಳಲ್ಲೂ ಸರಸ್ವತಿ ವಿಗ್ರಹಗಳಿವೆ. ಗೋಪುರದ ಮುಂಭಾಗದಲ್ಲಿಯೇ ಕುಳಿತಿರುವ ಜಿನವಿಗ್ರಹ ಮತ್ತೊಂದು ಇದೆ. ಇದರ ಪಕ್ಕಗಳಲ್ಲಿ ಯಕ್ಷಯಕ್ಷಿಯರಿರುವರು. ಪೀಠದ ಎರಡು ಕಡೆಗಳಲ್ಲಿ ಆನೆಗಳಿವೆ. ದೇವಾಲಯದ ದಕ್ಷಿಣಗೋಡೆಯು ಕುಸಿದಿರು ವುದರಿಂದ ಒಡೆಗಲ್ಲುಗಳನ್ನು ಕೊಡಲಾಗಿದೆ.

ಈ ಸುಂದರ ದೇವಾಲಯವನ್ನು ಇಮ್ಮಡಿ ವೀರಬಲ್ಲಾಳನ ಸಂಧಿ ವಿಗ್ರಹಿ ಮಂತ್ರಿಯಾದ ಶೈವಬ್ರಾಹ್ಮಣ ಚಂದ್ರಮೌಳಿಯ ಹೆಂಡತಿ ಜೈನಳಾದ ಆಚಿಯಕ್ಕ ಕಟ್ಟಿಸಿದುದರಿಂದ ಅಕ್ಕನ ಬಸದಿ ಎಂಬ ಹೆಸರು ಬಂದಿತು. ಪಾರ್ಶ್ವನಾಥ ಪೀಠದ ಶಾಸನದಿಂದಲೂ (ಶ್ರ. ಬೆ. ೩೩೧), ದೇವಾಲಯದಲ್ಲಿರುವ ಮತ್ತೊಂದು ಸುಂದರವಾದ ಶಾಸನದಿಂದಲೂ (ಶ್ರ. ಬೆ. ೩೨೭), ಕ್ರಿ. ಶ. ೧೧೮೧ನೆಯ ಚೆನ್ನರಾಯಪಟ್ಟಣದ ೧೫೦ನೆಯ ಶಾಸನದಿಂದಲೂ ಆಚಿಯಕ್ಕ ಈ ಬಸದಿಯನ್ನು ಕಟ್ಟಿಸಿದಳೆಂದೂ ಚಂದ್ರ

ಮೌಳಿಯು ಇಮ್ಮಡಿ ಬಲ್ಲಾಳನಿಂದ ದಾನಗಳನ್ನು ಕೊಡಿಸಿದನೆಂದೂ ತಿಳಿದುಬರುವುದು. ಈ ಚಂದ್ರಮೌಳಿಯೇ ಜಗನ್ನಾಥ ವಿಜಯವನ್ನು ರಚಿಸಿದ ರುದ್ರಭಟ್ಟನ ಪೋಷಕನಾಗಿದ್ದನು. ರುದ್ರಭಟ್ಟನ ದೇವನೂರು ಬಾಣಾವರಕ್ಕೆ ಐದು ಮೈಲಿ ಉತ್ತರದಲ್ಲಿದೆ.

ಗೌರಿತಪಂಗಳಂನೆಗಳ್ದು ತಾಂನೆರೆದಳ್ಗಡ ಚಂದ್ರಮೌಳಿಯೊಳ್
ನಾರಿಯರ್ಗಿನ್ನದೇ ಸೊಬಗು ಪೇಳ್ವಲವುಂ ಭವದೊಳ್ನಿರನ್ತರಂ
ಸಾರ ತಪಂಗಳಂ ಪಡೆದು ತಾಂ ನೆರೆದಂ ಗಡ ಚಂದ್ರಮೌಳಿ ಗಂ
ಭೀರೆಯೆನಿಪ್ಪ ತನ್ನ ನಿಯಮಾಚಲೆವೋಲ್ ಸೊಬಗಿಂಗೆ ನೋನ್ತರಾರ್ ॥
ಶಕವರ್ಷದ ಸಾಯಿರದ ನೂಱಿನಾಲ್ಕನೆಯ ಪ್ಲವಸಂವತ್ಸರದ
ಪುಷ್ಯ ಬಹುಳ ತದಿಗೆ ಶುಕ್ರವಾರದುತ್ತರಾಯಣ ಸಂಕ್ರಾನ್ತಿಯಂದು
ಸ್ವ| ಶೀಲಧಿಚಂದ್ರಮೌಳಿ ವಿಭುವಾಚಲದೇವಿ ನಿಜೋದ್ಧಕಾಂತೆಯಾ
ಲೋಳ ಮೃಗಾಕ್ಷಿ ಮಾಡಿಸಿದ ಬೆಳ್ಗೊಳ ತೀರ್ಥದ ಪಾರ್ಶ್ವದೇವರ
ಚಾರ್ಣಿಗೆ ಬೇಡೆ ಒಮ್ಮೆಯನ ಪಳ್ಳಿಯನಿತ್ತನುದಾರಿ ವೀರ ಬ
ಲ್ಲಾಳ ನೃಪಾಳಕಂ ಧರೆಯುಮಬ್ಧಿಯುಮುಳ್ಳಿನ ಮೆಯ್ದೆ ಸಲ್ವಿನಂ ॥

(ಶ್ರ. ಬೆ. ೩೨೭)

(೧೬) **ನಗರಜಿನಾಲಯ :** ಊರಿನಲ್ಲಿರುವ ಸಣ್ಣದಾದ ನಗರ ಜಿನಾಲಯವನ್ನು ಇಮ್ಮಡಿ ಬಲ್ಲಾಳನ ಪಟ್ಟಣಸ್ವಾಮಿಯಾದ ನಾಗದೇವನು ೧೧೯೬ರಲ್ಲಿ ಕಟ್ಟಿಸಿದನು. ಇದಕ್ಕೆ ಶ್ರೀನಿಲಯ ಎಂಬ ಹೆಸರೂ ಇದ್ದಿತು. ಊರಿನ ವ್ಯಾಪಾರಿಗಳು ದಾನಗಳನ್ನು ಕೊಟ್ಟಿರುವುದರಿಂದ ನಗರ ಜಿನಾಲಯ ಎಂಬ ಹೆಸರು ಇದಕ್ಕೆ ಬಂದಿತು. ಗರ್ಭಗೃಹ ಸುಕನಾಸಿ ನವರಂಗಗಳಿವೆ. ಗರ್ಭಗುಡಿಯಲ್ಲಿ ಎರಡೂವರೆ ಅಡಿ ಎತ್ತರದ ಸ್ಥಾನಕ ಆದಿನಾಥ ವಿಗ್ರಹವಿದೆ. ನವರಂಗದ ಎಡಗಡೆ ಕೋಣೆಯಲ್ಲಿ ಎರಡಡಿ ಎತ್ತರದ ನಿಂತಿರುವ ಬ್ರಹ್ಮದೇವ ವಿಗ್ರಹವಿದೆ. ಎಡಗೈಯಲ್ಲಿ ಫಲ, ಬಲಗೈಯಲ್ಲಿ ಚಾವಟಿಹಿಡಿದು ಪಾದುಕೆಗಳನ್ನು ಧರಿಸಿರುವನು. ಪೀಠದಲ್ಲಿ ಕುದುರೆ ಇದೆ. ನಾಗದೇವನು ಕಮಠ ಪಾರ್ಶ್ವ ಬಸದಿಯ ನೃತ್ಯಶಾಲೆ, ಜಗತಿ, ನಯಕೀರ್ತಿಯ ನಿಸಿದಿಗೆ (೧೧೭೬), ನಾಗಸಮುದ್ರವೆಂಬ ಕೆರೆ (ಜಿಗಣೆಕಟ್ಟೆ) ಮಾಡಿಸಿದನು. ಕ್ರಿ. ಶ. ೧೪೩೨ನೆಯ ಒಂದು ಶಾಸನವು (ಶ್ರ. ಬೆ. ೩೫೮) "ಪಂಡಿತಯತಿ"ಯ ತಪಃಪ್ರಭಾವದಿಂದ ನಗರ ಜಿನಾಲಯವಾಯಿತೆಂದು ಹೇಳುವುದು.

(೧೭) ಶಾಂತೀಶ್ವರ ಬಸದಿ : ಜಿನನಾಥಪುರದಲ್ಲಿರುವ ಶಾಂತಿನಾಥ ಬಸದಿಯನ್ನು ವಸುಧೈಕಬಾಂಧವ ರೇಚರಸನು ಸು. ೧೨೦೦ರಲ್ಲಿ ಕಟ್ಟಿಸಿದನು. ಶ್ರವಣಬೆಳಗೊಳದಲ್ಲಿರುವ ಅಕ್ಕನ ಬಸದಿಯಂತೆಯೇ ಇದು ಸಂಪೂರ್ಣ ಹೊಯ್ಸಳ ರೀತಿಯಲ್ಲಿದೆ. ನಕ್ಷತ್ರಾಕಾರದ ಜಗತಿಯ ಮೇಲೆ ಗರ್ಭಗೃಹ ಸುಕನಾಸಿ ರಂಗಮಂಡಪಗಳಿವೆ. ನವರಂಗದಲ್ಲಿ ನಾಲ್ಕು ಹೊಯ್ಸಳ ರೀತಿಯ ದುಂಡಾದ ಕಂಬಗಳು ಮಣಿಸಾಲುಗಳಿಂದ ಅಲಂಕೃತವಾಗಿವೆ. ಒಂದು ಕಂಬಕ್ಕೆ ಪೂರ್ತಿ ಕೆಲಸವಾಗಿಲ್ಲ. ಮೇಲ್ಛಾವಣಿಯಲ್ಲಿ ಒಂದೂವರೆ ಅಡಿ ಆಳದ ಒಂಬತ್ತು ಭುವನೇಶ್ವರಿಗಳಿವೆ. ಒಂದು ಫಲಕದಲ್ಲಿ ಸಿಂಹಮುಖ ಲತೆಗಳು, ಚತುರಸ್ರ ಮಧ್ಯದಲ್ಲಿ ಅಷ್ಟಕೋಣದ ನಕ್ಷತ್ರ, ಅದರ ಮಧ್ಯದಲ್ಲಿ ಮೂರು ಸುತ್ತು ಎಸಳುಗಳುಳ್ಳ ಕಮಲ ಮತ್ತು ಕರ್ಣಿಕೆ ಇವೆ. ನವರಂಗದ ಒಳಗೆ ಎರಡು ಅಲಂಕೃತವಾದ ಗೂಡುಗಳು ಈಗ ಖಾಲಿಯಾಗಿವೆ.

ಗರ್ಭಗುಡಿಯಲ್ಲಿ ಐದೂವರೆ ಅಡಿ ಎತ್ತರದ ಶಾಂತಿನಾಥ ವಿಗ್ರಹ, ಪ್ರಭಾವಳಿ ಪುರುಷ ಚಾಮರಧರರ ಸಹಿತವಾಗಿದೆ. ಇದರ ಪೀಠದಲ್ಲಿ ವಸುಧೈಕಬಾಂಧವ ರೇಚರಸನ ಶಾಸನವಿದೆ :

"ಸ್ವಸ್ತಿ ಶ್ರೀಮೂಲಸಂಘ ದೇಶೀಯಗಣ ಪೊಸ್ತಕಗಚ್ಛದ ಕೊಣ್ಡಕುನ್ದಾನ್ವಯ ಕೊಲ್ಲಾಪುರದ ಸಾವನ್ತ ಬಸದಿಯ ಪ್ರತಿಬದ್ಧದ ಶ್ರೀಮಾಘನನ್ದಿ ಸಿದ್ಧಾನ್ತದೇವರ ಶಿಷ್ಯರು ಶುಭಚಂದ್ರ ತ್ರೈವಿದ್ಯದೇವರ ಶಿಷ್ಯರಪ್ಪ ಸಾಗರಣಂದಿ ಸಿದ್ಧಾನ್ತದೇವರಿಗೆ ವಸುಧೈಕಬಾಂಧವ ಶ್ರೀಕರಣದ ರೇಚಿಮಯ್ಯ ದಂಡನಾಯಕರು ಶಾನ್ತಿನಾಥದೇವರ ಪ್ರತಿಷ್ಠೆಯಂ ಮಾಡಿ ಧಾರಾಪೂರ್ವಕಂ ಕೊಟ್ಟರು."

(ಶ್ರ. ಬೆ. ೪೮೦)

ಹೊರಗಿನ ಗೋಡೆಗಳ ಮೇಲೆ ಮೂರು ಸಾಲು ಜಗತಿಯ ಪಟ್ಟಿಕೆಗಳಿವೆ. ಆದರೆ ಈ ಪಟ್ಟಿಕೆಗಳಲ್ಲಿ ಚಿತ್ರಗಳಿಲ್ಲ. ಇದರಮೇಲೆ ಸಣ್ಣ ಕಂಬಗಳು ಗೋಪುರಗಳು ಗೋಡೆಯ ಮಧ್ಯಭಾಗವನ್ನು ವಿಭಾಗಿಸಿವೆ. ಲತಾಪಟ್ಟಿಕೆ ತೋರಣ ಮತ್ತು ಗೋಪುರಗಳ ಕೆಳಗೆ ಸುಮಾರು ಮೂರಡಿ ಎತ್ತರದ ವಿಗ್ರಹಗಳಿವೆ. ದಕ್ಷಿಣದ ಗೋಡೆಯಲ್ಲಿ ದ್ವಿಭುಜ

ಯಕ್ಷಿ, ನರ್ತಕಿ, ವಾದ್ಯಗಾರರು, ಕೊಳಲನ್ನು ಬಾರಿಸುತ್ತಿರುವವನು, ವೃದಂಗದವನು, ಸ್ಥಾನಕ ಜಿನ, ಚಾಮರಧರರು, ಕೆಳಗೆ ಅರ್ಧ ಕೆತ್ತಿದ ಚಿತ್ರಪಟ್ಟಿಕೆ, ಚಾಮರಧಾರಿಣಿ, ನಗ್ನಸ್ತ್ರೀ ಮತ್ತು ದೊಡ್ಡ ಚೇಳು, ಇಕ್ಷು ದಂಡ ಹಿಡಿದ ಮನ್ಮಥ, ಚತುರ್ಭುಜಮೂರ್ತಿ, ಪಶ್ಚಿಮದ ಗೋಡೆಯಲ್ಲಿ ಚತುರ್ಭುಜಮೂರ್ತಿ, ದ್ವಿಭುಜನರ್ತಕಿ, ಮಾರ್ದಂಗಿಕ, ಬಲಗೈಯಲ್ಲಿ ಹೂ ಎಡಗೈಯಲ್ಲಿ ದರ್ಪಣ ಹಿಡಿದು ತ್ರಿಭಂಗದಲ್ಲಿ ನಿಂತಿರುವ ಸ್ತ್ರೀ, ನಿಂತಿರುವ ಜಿನ, ಸ್ಥಾನಕ ಸ್ತ್ರೀವಿಗ್ರಹ (ಪುಷ್ಪ ದರ್ಪಣ), ದ್ವಿಭುಜಸ್ತ್ರೀ, ಅಕ್ಷಮಾಲಾ ಅಂಕುಶಪಾಶ, ಪುಸ್ತಕ (?) ಹಿಡಿದು ಕುಳಿತಿರುವ ಸರಸ್ವತಿ, ಚತುರ್ಭುಜ ಸ್ಥಾನಕಮೂರ್ತಿ, ಉತ್ತರ ಗೋಡೆಯಲ್ಲಿ ಮಾರ್ದಂಗಿಕ, ನರ್ತಕಿ, ದೇವಿ, ಲತಾತೋರಣದಲ್ಲಿ ಕುಳಿತಿರುವ ದೇವಿ, ನರ್ತಕಿ, ಸ್ಥಾನಕ ಜಿನ, ಸ್ಥಾನಕಮೂರ್ತಿ, ದ್ವಿಭುಜ ಪುರುಷ, ಆಸೀನಳಾದ ದೇವಿ, ಲತಾತೋರಣದ ಕೆಳಗೆ ಚಾಮರಧಾರಿಣಿ, ನಿಂತಿರುವ ಪುರುಷದೇವತೆ, ನೃತ್ಯವಿಗ್ರಹ ಗಾಯಕರು, ಎತ್ತರವಾದ ಪಾದುಕೆಗಳ ಮೇಲೆ ನಿಂತಿರುವ ಸ್ತ್ರೀವಿಗ್ರಹ, ಕೊಳಲನ್ನು ಹಿಡಿದಿರುವ ಸ್ತ್ರೀ, ಸ್ಥಾನಕನ (ಪಾರ್ಶ್ವ) ಚಾಮರಧರರು, ನಿಂತಿರುವ ಚತುರ್ಭುಜ ಸ್ತ್ರೀ, ದೇವತೆ, ದ್ವಿಭುಜ ವಿಗ್ರಹ, ವಸ್ತುವನ್ನು ಹಿಡಿದು ನರ್ತಿಸುತ್ತಿರುವ ಪುರುಷ (ಕಾಲುಗಳಮೇಲೆ ಗೆಜ್ಜೆ ಸಾಲುಗಳಿವೆ), ಗಾಯಕರು ಚತುರ್ಭುಜ ಸ್ಥಾನಕ ವಿಗ್ರಹ ಕಂಡು ಬರುತ್ತವೆ.

ಬಹುಶಃ ಇಮ್ಮಡಿ ಬಲ್ಲಾಳನ ಕಾಲದಲ್ಲಿ ಬೇಲೂರು ಚೆನ್ನಕೇಶವ ದೇವಾಲಯದ ಹೊರಗಣ ವಿಗ್ರಹಗಳನ್ನು ಮಾಡಿದ ಶಿಲ್ಪಿಗಳನ್ನೇ ರೇಚಿಮಯ್ಯನು ಕರೆಸಿಕೊಂಡು ಈ ವಿಗ್ರಹಗಳನ್ನೂ ಮಾಡಿಸಿದಂತೆ ಕಂಡುಬರುತ್ತದೆ. ಸುಮಾರು ನಲ್ವತ್ತು ಸ್ತ್ರೀವಿಗ್ರಹಗಳಿವೆ, ಸ್ತ್ರೀವಿಗ್ರಹಗಳ ಕೇಶಬಂಧನಗಳು ಗಮನಾರ್ಹವಾಗಿವೆ. ದಕ್ಷಿಣದ ಗೋಡೆ ಕುಸಿದಿರುವುದರಿಂದ ಕಲ್ಲಿನ ಒತ್ತೆಕೊಡಲಾಗಿದೆ. ಕ್ರಿ. ಶ. ೧೬೩೮ರಲ್ಲಿ ಪಾಳೆದ ಪದುಮಣ್ಣನು ಬಸದಿಯ ಜೀರ್ಣೋದ್ಧಾರ ಮಾಡಿಸಿದನು.

(೧೮) ಶಾಂತಿನಾಥ ಬಸದಿ: ಚಿಕ್ಕಬೆಟ್ಟದ ಶಾಂತಿನಾಥ ಬಸದಿಯಲ್ಲಿ ಗರ್ಭಗುಡಿ ಸುಕನಾಸಿ ಮಂಡಪಗಳಿವೆ. ಇದರ ಗೋಡೆಗಳ ಮೇಲೆ

ಚಿತ್ರಗಳಿದ್ದವು. ಈಗ ಕೆಲವು ಕುರುಹುಗಳು ಮಾತ್ರ ಇವೆ. ಶಾಂತಿನಾಥ ವಿಗ್ರಹ ಹನ್ನೊಂದಡಿ ಎತ್ತರವಿರುವ ಸ್ಥಾನಕಮೂರ್ತಿಯಾಗಿದೆ. ಈ ಬಸದಿಯ ಕಾಲವನ್ನು ನಿರ್ಧರಿಸಲು ಶಾಸನಗಳು ಸಿಕ್ಕಿಲ್ಲ.

(೧೯) **ಸುಪಾರ್ಶ್ವ ಬಸದಿ:** ಶಾಂತಿನಾಥ ಬಸದಿಯ ರೀತಿಯಲ್ಲಿಯೇ ಇದೆ. ಏಳು ಹೆಡೆ ಹಾವನ್ನು ಛತ್ರವಾಗುಳ್ಳ ಸುಪಾರ್ಶ್ವ (?) ವಿಗ್ರಹ ಮೂರು ಅಡಿ ಎತ್ತರದ ಆಸೀನಮೂರ್ತಿಯಾಗಿದೆ. ಇದರ ಕಾಲವೂ ನಿಶ್ಚಿತವಾಗಿಲ್ಲ.

(೨೦) **ಮಜ್ಜಿಗಣ್ಣ ಬಸದಿ:** ಮೇಲಿನ ಎರಡು ಬಸದಿಗಳಂತೆಯೇ ಇದರ ನಿರ್ಮಾಣ ಕಾಲವೂ ತಿಳಿದಿಲ್ಲ. ಹೊರಗೋಡೆಗಳ ಫಲಕಗಳ ಮೇಲೆ ಹೂವಿನ ಸಾಲುಗಳಿವೆ. ಗರ್ಭಗುಡಿಯಲ್ಲಿ ಮೂರುವರೆ ಅಡಿ ಎತ್ತರದ ಅನಂತನಾಥ ವಿಗ್ರಹವಿದೆ.

(೨೧) **ಮಹಾನವಮಿ ಮಂಡಪ:** ಕತ್ತಲೆ ಬಸದಿಯ ದಕ್ಷಿಣದಲ್ಲಿ ಎರಡು ಮಂಡಪಗಳಿವೆ. ಇವುಗಳ ಮಧ್ಯದಲ್ಲಿ ಶಾಸನಸ್ತಂಭಗಳಿವೆ. ಉತ್ತರ ಮಂಡಪದ ಶಾಸನಸ್ತಂಭವು ಬಹಳ ಸುಂದರವಾಗಿದೆ. ಮೇಲ್ಭಾಗದಲ್ಲಿ ಗೋಪುರವನ್ನು ಚೆನ್ನಾಗಿ ಕೊರೆದಿರುವರು. ನಯಕೀರ್ತಿ ಕ್ರಿ. ಶ. ೧೧೭೬ರಲ್ಲಿ ಗತಿಸಿದಾಗ ನಾಗದೇವನು ಈ ಶಾಸನವನ್ನು ಹಾಕಿಸಿದನು. ಬಹುಶಃ ಇಮ್ಮಡಿ ಬಲ್ಲಾಳನ ಕಾಲದಲ್ಲಿ ಈ ಮಂಡಪವನ್ನು ಕಟ್ಟಿರಬೇಕು.

ಚಾಮುಂಡರಾಯ ಬಸದಿಗೆ ದಕ್ಷಿಣದಲ್ಲಿ ಒಂದು, ಎರಡುಕಟ್ಟೆ ಬಸದಿಗೆ ಪೂರ್ವದಲ್ಲಿ ಒಂದು, ತೇರಿನ ಬಸದಿಗೆ ದಕ್ಷಿಣದಲ್ಲಿ ಎರಡು ಮಂಡಪಗಳಲ್ಲೂ ಶಾಸನಗಳಿವೆ.

(೨೨) **ಭರತೇಶ್ವರ:** ಮಹಾನವಮಿ ಮಂಡಪಕ್ಕೆ ಪಶ್ಚಿಮದಲ್ಲಿ ಭರತೇಶ್ವರನೆಂದು ಹೇಳುವ ಅಪೂರ್ವವಾದ ಒಂದು ವಿಗ್ರಹವಿದೆ. ಇದರ ಹತ್ತಿರ ಇರುವ ಒಂದು ಶಾಸನದಲ್ಲಿ (ಶ್ರ. ಬೆ. ೬೧) "ಶ್ರೀಮತ್........ ಪು....ಸಿಷ್ಯರ್ ಅರಿಟ್ಟೊನೇಮಿ ಮಾಡಿಸಿದರ್ ಸಿದ್ದಂ" ಎಂದು ಸುಮಾರು ಕ್ರಿ. ಶ. ೯೦೦ರ ಅಕ್ಷರಗಳಲ್ಲಿ ಬರೆದಿದೆ. ಅರಿಷ್ಟನೇಮಿಯು ಈ ವಿಗ್ರಹವನ್ನು ದೊಡ್ಡಬೆಟ್ಟದ ಗೊಮ್ಮಟವಿಗ್ರಹವನ್ನೂ ಮಾಡಿಸಿರಬಹುದೆಂದು ಊಹಿಸ

ಲಾಗಿದ್ದಿತು. ಆದರೆ ಈ ಶಾಸನದಿಂದ ಅರಿಷ್ಟನೇಮಿ ಏನು ಮಾಡಿಸಿದ ನೆಂಬುದು ಸ್ಪಷ್ಟವಾಗಿಲ್ಲ. ಅರಿಷ್ಟನೇಮಿ ಶಿಲ್ಪಿಯಾಗಿರಲಾರನು. ಅನೇಕ ಜೈನಗುರುಗಳು ಈ ಹೆಸರನ್ನು ಹೊಂದಿದ್ದರೆಂಬುದು ಶಾಸನಗಳಿಂದ ತಿಳಿದುಬರುತ್ತದೆ. ಭರತವಿಗ್ರಹ ಗೊಮ್ಮಟನಿಗೆ ಅಭಿಮುಖವಾಗಿ ಪಶ್ಚಿಮಕ್ಕೆ ತಿರುಗಿಕೊಂಡಿದೆ. ಒಂಬತ್ತು ಅಡಿ ಎತ್ತರವಿದೆ. ಕಾಲುಗಳನ್ನು ಬಿಡಿಸಿದ್ದರೆ ಸುಮಾರು ಹನ್ನೆರಡು ಅಡಿ ಇರುತ್ತಿದ್ದಿತು. ಐವತ್ತೇಳು ಅಡಿ ಎತ್ತರದ ಗೊಮ್ಮಟನಿಗೂ ಹನ್ನೆರಡು ಅಡಿ ಭರತನಿಗೂ ಯಾವುದೋ ಒಂದು ಪ್ರಮಾಣವಿದ್ದಿರಬಹುದು.

(೨೩) **ಇರುವೆ ಬ್ರಹ್ಮದೇವ:** ಚಿಕ್ಕಬೆಟ್ಟದ ಪ್ರಾಕಾರದ ಉತ್ತರ ದ್ವಾರಕ್ಕೆ ಉತ್ತರದಲ್ಲಿ ಗರ್ಭಗುಡಿ ಮಾತ್ರವಿದೆ. ಇದರಲ್ಲಿ ಬ್ರಹ್ಮನ ವಿಗ್ರಹ ವಿದೆ. ಇದರ ಮುಂದಿನ ಬಂಡೆಯಮೇಲೆ ಜಿನವಿಗ್ರಹಗಳು ಆನೆ ಕಂಬ ಗಳನ್ನು ಕೆಲವರ ಹೆಸರುಗಳನ್ನೂ ಕೊರೆದಿರುವರು. ದ್ವಾರದ ಮೇಲಿರುವ ಶಾಸನಗಳಿಂದ ಬಹುಶಃ ಕ್ರಿ. ಶ. ೯೫೦ರಲ್ಲಿ ಕಟ್ಟಿರಬಹುದೆಂದು ಹೇಳ ಬಹುದು.

(೨೪) **ಭದ್ರಬಾಹು ಗುಹೆ:** ಭದ್ರಬಾಹುವಿನ ಪಾದಚಿಹ್ನೆಗಳಿರುವ ಈ ಗುಹೆ ಬಹಳ ಪುರಾತನವಾದುದು. ಸುಮಾರು ೧೧೦೦ರ ಒಂದು ಶಾಸನ ಇಲ್ಲಿದ್ದಿತು (ಶ್ರ. ಬೆ. ೧೬೬). ಈಚಿಗೆ ಇದು ಬಹುಶಃ ಮಂಡಪ ವನ್ನು ಕಟ್ಟಿಸಿದಾಗ ನಾಶವಾಗಿದೆ.

(೨೫) **ಚಾಮುಂಡರಾಯನ ಬಂಡೆ:** ಚಿಕ್ಕಬೆಟ್ಟದ ಕೆಳಗಿರುವ ಈ ಬಂಡೆಯಿಂದ ಚಾಮುಂಡರಾಯನು ಬಾಣ ಹೊಡೆದು ಗೊಮ್ಮಟೇಶ್ವರ ವ್ಯಕ್ತವಾಗುವಂತೆ ಮಾಡಿದನೆಂದು ಹೇಳಲಾಗಿದೆ. ಇಲ್ಲಿ ಕೆಲವು ಜಿನ ವಿಗ್ರಹಗಳೂ ಶಾಸನಗಳೂ ಇವೆ.

(೨೬) **ಲಕ್ಕಿದೊಣೆ ಮತ್ತು ಕಂಚಿನದೊಣೆ:** ಚಿಕ್ಕಬೆಟ್ಟದ ಈ ಎರಡು ದೊಣೆಗಳು ಬಹುಶಃ ೯೦೦ರಲ್ಲಿಯೇ ಕದಂಬರ ಕಾಲದಲ್ಲಿದ್ದವು.

(೨೭) **ಶಾಂತೀಶ್ವರ ಬಸದಿ:** ಸುಮಾರು ೫೬ ಅಡಿ ಉದ್ದ ೩೦ ಅಡಿ ಅಗಲವಿರುವ ಈ ಬಸದಿ ಎತ್ತರವಾದ ಜಗತಿಯ ಮೇಲಿದೆ. ಗಾರೆಯ ಗೋಪುರವಿದೆ. ಸುಕನಾಸಿಯಲ್ಲಿ ಯಕ್ಷಯಕ್ಷಿಣಿಯರಿರುವರು. ಹಿಂದಿನ

ಗೋಡೆಯ ಮಧ್ಯದಲ್ಲಿ ನಿಂತಿರುವ ಜಿನವಿಗ್ರಹ ಒಂದು ಗೂಡಿನಲ್ಲಿದೆ. ಇದರ ಕಾಲವೂ ನಿಶ್ಚಿತವಾಗಿಲ್ಲ.

(೨೮) **ಹಳೆಬೆಳಗೊಳದ ಪಾರ್ಶ್ವನಾಥ:** ಶ್ರವಣಬೆಳಗೊಳಕ್ಕೆ ನಾಲ್ಕು ಮೈಲಿ ಉತ್ತರದಲ್ಲಿ ಹಳೆಬೆಳಗೊಳವಿದೆ. ಇದರಲ್ಲಿ "ಹೊಯ್ಸಳ" ರೀತಿಯ ಪಾರ್ಶ್ವನಾಥ ಬಸದಿ ಇದೆ. ಗರ್ಭಗುಡಿಯಲ್ಲಿ ನಿಂತಿರುವ ಎರಡೂವರೆ ಅಡಿ ಎತ್ತರದ ಜಿನವಿಗ್ರಹವಿದೆ. ಸುಕನಾಸಿಯ ಗೋಡೆಗೆ ಸೇರಿಸಿರುವ ಭಗ್ನವಾದ ಐದಡಿ ಎತ್ತರದ ಪಾರ್ಶ್ವನಾಥ ಸ್ಥಾನಕಮೂರ್ತಿ ಬಹುಶಃ ಮೂಲವಿಗ್ರಹವಾಗಿದ್ದಿತು. ಪಾರ್ಶ್ವನಾಥನ ಹಿಂದೆ ಸರ್ಪದ ಸುರಳಿ ಮೇಲೆ ಏಳು ಹೆಡೆಗಳ ಛತ್ರ ಇದೆ. ನವರಂಗದ ಭುವನೇಶ್ವರಿ ಸುಂದರ ವಾಗಿದೆ. ಎಂಟು ದಿಕ್ಕುಗಳಲ್ಲೂ ಅಷ್ಟದಿಕ್ಪಾಲಕರೂ ಪರಿವಾರದವರೂ ಇರುವರು. ಮಧ್ಯದಲ್ಲಿ ಐದು ಹೆಡೆಗಳ ಕೆಳಗೆ ಧರಣೇಂದ್ರನು ಎಡಗೈಯಲ್ಲಿ ಧನಸ್ಸು ಬಲಗೈಯಲ್ಲಿ ಶಂಖ(?) ವನ್ನು ಹಿಡಿದಿರುವನು. ನವರಂಗದಲ್ಲಿ ಚೆನ್ನಾಗಿ ಕೆತ್ತಿದ ಐದಡಿ ಎತ್ತರದ ಎರಡು ಚಾಮರಧರರ ವಿಗ್ರಹಗಳು ಭಗ್ನವಾಗಿ ಬಿದ್ದಿವೆ. ಸುಮಾರು ಮೂರು ಅಡಿ ಎತ್ತರದ ಆಸೀನ ಜಿನ ವಿಗ್ರಹವು ಇದೆ. ನವರಂಗದ್ವಾರವನ್ನು ಚೆನ್ನಾಗಿ ಕೆತ್ತಿರುವರು. ಹೊರಗಿನ ಗೋಡೆಗಳ ಮೇಲೆ ಸಣ್ಣ ಕಂಬಗಳೂ ಗೂಡುಗಳೂ ಇವೆ. ದೇವಾಲಯದ ಜಗತಿಯ ಮೂಲೆಗಳಲ್ಲಿ ಆನೆಗಳಿವೆ. ಈ ದೇವಾಲಯದಲ್ಲಿರುವ ಶಾಸನ ದಿಂದ (ಎ. ಕ. ೫. ಚೆ ರಾ ಪ ೧೪೮) ೧೦೯೪ರಲ್ಲಿ ವಿಷ್ಣುವರ್ಧನನ ತಂದೆ ಯಾದ ಎರೆಯಂಗನು ಗೋಪನಂದಿಗೆ ರಾಚನಹಳ್ಳಿ ಮತ್ತು ಬೆಳಗೊಳ ೧೨ನ್ನು ಬೆಳಗೊಳದ ಬಸದಿಗಳ ಜೀರ್ಣೋದ್ಧಾರಕ್ಕಾಗಿ ಕೊಟ್ಟನೆಂದು ತಿಳಿದುಬರುತ್ತದೆ. ಆದುದರಿಂದ ೧೦೯೪ರಲ್ಲಿಯೇ ಈ ದೇವಾಲಯ ವಿದ್ದಿರಬೇಕು. ಈ ಗೋಪನಂದಿಯ ಪ್ರಶಂಸೆಯು ಸು. ೧೧೦೦ರ ಶ್ರ. ಬೆ. ೬೯ ಶಾಸನದಲ್ಲಿ ಕಂಡುಬರುತ್ತದೆ.

೭೪. ಬೆಳಗಾಮಿ: ಹಳೆಯ ಮೈಸೂರಿನ ಉತ್ತರ ಭಾಗದಲ್ಲಿ ಚಾಳುಕ್ಯರ ಕಾಲದ ಕಟ್ಟಡಗಳನ್ನು ವಿಮರ್ಶಿಸುವುದು ಆವಶ್ಯಕವಾಗಿದೆ. ಬೆಳ್ಗಾವಿ ಅಥವಾ ಬೆಳಗಾಮಿ ಕರ್ಣಾಟಕದಲ್ಲಿ ಪ್ರಾಚೀನ ಪಟ್ಟಣವಾಗಿದ್ದು ಕಾಳಾಮುಖಾಚಾರ್ಯರ ಕೇಂದ್ರವಾಗಿದ್ದಿತು. ಇಲ್ಲಿನ ವಿಶ್ವವಿದ್ಯಾಲಯವು

ಬಹಳ ಪ್ರಸಿದ್ಧವಾಗಿದ್ದಿತೆಂದು ಶಾಸನಗಳಿಂದ ತಿಳಿದುಬರುತ್ತದೆ. ಇಲ್ಲಿನ ತ್ರಿಪುರಾಂತಕ ದೇವಾಲಯ ಬೆಳಗಾಮಿ ಹಳ್ಳಿಗೆ ಈಶಾನ್ಯದಲ್ಲಿ ಸುಮಾರು ಮೂರು ಫರ್ಲಾಂಗು ದೂರದಲ್ಲಿದೆ. ಈಗಿರುವ ದೇವಾಲಯದಲ್ಲಿ ಎರಡು ಗರ್ಭಗುಡಿಗಳು ಪೂರ್ವಾಭಿಮುಖವಾಗಿವೆ. ದಕ್ಷಿಣದ ಮಂಡಪಕ್ಕೆ ದಕ್ಷಿಣದಲ್ಲಿ ದ್ವಾರವಿದೆ ಮತ್ತು ಇದರ ಪೂರ್ವದಲ್ಲಿ ಒಂದು ದ್ವಾರವು ಉತ್ತರದ ಶಾಲೆಗೆ ಸೇರಿದೆ. ಉತ್ತರ ಶಾಲೆಯ ಉತ್ತರದಲ್ಲಿ ಮತ್ತೊಂದು ದೇವಾಲಯ ದಕ್ಷಿಣಾಭಿಮುಖವಾಗಿದೆ. ದಕ್ಷಿಣ ಶಾಲೆಯ ದಕ್ಷಿಣದಲ್ಲಿ ದಕ್ಷಿಣ ಮಂಡಪಕ್ಕೆ ಒಂದು ದ್ವಾರವಿದೆ. ಉತ್ತರದ ಭಾಗ, ದಕ್ಷಿಣದ ಗುಡಿ ಮತ್ತು ದಕ್ಷಿಣ ಮಂಡಪದ ಮಧ್ಯ ಭಾಗಗಳಲ್ಲಿ ಉತ್ತಮ ಕೆತ್ತನೆ ಕೆಲಸ ಕಂಡುಬರುತ್ತದೆ. ದಕ್ಷಿಣ ಮಂಡಪದ ಇತರ ಅಂಕಣಗಳು, ಮುಖಮಂಡಪ ಬಹುಶಃ ಅನಂತರ ಸೇರಿಸಲ್ಪಟ್ಟವು. ದೇವಸ್ಥಾನದ ಮೂಲಭಾಗವು ಉತ್ತರ ಭಾಗವಾಗಿದ್ದು ದಕ್ಷಿಣಾಭಿಮುಖವಾಗಿದ್ದಿತು. ದಕ್ಷಿಣಪಾರ್ಶ್ವದ ಸ್ವಲ್ಪ ದೂರದಲ್ಲಿ ಸುಂದರವಾದ ಮಂಡಪವಿದ್ದಿತು. ಇದರ ನಾಲ್ಕು ಕಂಬಗಳು ಚೆನ್ನಾಗಿ ಅಲಂಕೃತವಾಗಿವೆ. ಈ ಮಂಡಪಕ್ಕೂ ದೇವಾಲಯಕ್ಕೂ ಪೂರ್ವ ದಿಕ್ಕಿನಿಂದ ಮೆಟ್ಟಲುಗಳಿದ್ದಿರಬಹುದು. ತ್ರಿಪುರಾಂತಕೇಶ್ವರನ ಗರ್ಭಗುಡಿ ಪೂರ್ವಾಭಿಮುಖವಾಗಿದ್ದು, ಇದರ ಉತ್ತರ ಗರ್ಭಗುಡಿಯಲ್ಲಿ ವಿಷ್ಣುವಿಗ್ರಹವಿದ್ದಿತು. ಅಲ್ಲದೆ ದಕ್ಷಿಣದಲ್ಲಿ ಮಂಡಪಕ್ಕೆ ಅಭಿಮುಖವಾಗಿ ಮತ್ತೊಂದು ಗುಡಿ ಇದ್ದಿತು. ಮುಖ್ಯ ಗರ್ಭಗುಡಿಯ ಕೆತ್ತನೆ ಕೆಲಸ ಬೇಲೂರನ್ನು ಹೋಲುವುದರಿಂದ ಬಹುಶಃ ವಿಷ್ಣುವರ್ಧನನ ಆಳಿಕೆಯ ಆರಂಭದಲ್ಲಿ ಆಗಿರಬಹುದು. ಕೇದಾರೇಶ್ವರ ಮತ್ತು ತ್ರಿಪುರಾಂತಕ ದೇವಾಲಯಗಳ ತಲವಿನ್ಯಾಸ ವಿಗ್ರಹಗಳನ್ನು ನೋಡಿದರೆ ಬಹುಶಃ ಮೂವತ್ತು ನಾಲ್ವತ್ತು ವರ್ಷ ಅಂತರವಿದ್ದಿತೆಂದು ಹೇಳಬಹುದು. ಹದಿಮೂರನೆಯ ಶತಮಾನದ ಮಧ್ಯಭಾಗದಲ್ಲಿ ಬದಲಾವಣೆಗಳಾದವು. ಮಂಡಪವನ್ನು ವಿಸ್ತರಿಸಿ ಎರಡು ಗುಡಿಗಳಿಗೂ ಸೇರುವಂತೆ ಮಾಡಿ ಪೂರ್ವದಲ್ಲಿ ಮತ್ತೊಂದು ಮುಖಮಂಡಪವನ್ನು ಸೇರಿಸಲಾಯಿತು. ಮುಖ್ಯ ಗುಡಿಯ ಮುಖಮಂಡಪ ಈಗ ಅದೃಶ್ಯವಾಗಿದೆ.



ಶೃಂಗೇರಿಯ ವಿದ್ಯಾಶಂಕರ ದೇವಾಲಯದ ಆಗ್ನೇಯ ದಿಕ್ಕಿನ ದೃಶ್ಯ

ದೇವಾಲಯದ ಪೀಠಿಕೆ ಮತ್ತು ಹೊರಗೋಡೆಗಳನ್ನು ಈಚಿಗೆ ಬದಲಾಯಿಸಿ ಕಟ್ಟಲಾಗಿದೆ. ಆದರೆ ಗುಡಿಯು ಒಂದು ಜಗತಿಯ ಮೇಲಿದ್ದಿತೆಂದು ಕಂಡುಬರುತ್ತದೆ. ಇದರ ಮೇಲಿನ ಗೋಡೆಗಳ ಪೀಠಿಕೆ ಉತ್ತರದಲ್ಲಿ ಸಾಮಾನ್ಯವಾಗಿದೆ. ಮಂಡಪದ ಭಾಗದಲ್ಲಿ ಒರಟಾದ ಕಟಾಂಜನವಿದೆ. ಪೀಠಿಕೆಯಲ್ಲಿ ಕೆತ್ತನೆ ಇದ್ದು ಇದರ ಕೆಲವು ಕಲ್ಲುಗಳನ್ನು ಜಗತಿಯಲ್ಲೂ ಈಚಿಗೆ ಸೇರಿಸಿರುವರು. ಈ ಕೆತ್ತನೆಗಳಲ್ಲಿ ಪಂಚತಂತ್ರ ರಾಮಾಯಣ ಕಥೆಗಳು ಚಿತ್ರಿತವಾಗಿವೆ. ಇವುಗಳ ಮಧ್ಯೆ ಅನೇಕ ವಿಧವಾದ ರತಿಬಂಧಗಳಿವೆ. ಉತ್ತರದಿಂದ ಪ್ರದಕ್ಷಿಣೆಯಾಗಿ—

ಒಬ್ಬ ಮಹಾಪುರುಷನನ್ನು ಸರ್ಪಗಳೂ ಆನೆಗಳೂ ಹಿಂಸಿಸುತ್ತ ಕೊನೆಗೆ ಗೌರವಿಸುತ್ತಿವೆ. ಅವನು ನಿದ್ರಿಸುವಾಗ ಸರ್ಪಗಳು ಬಿಸಿಲಿನಿಂದ ರಕ್ಷಿಸುತ್ತಿವೆ; ಪಕ್ಷಿಗಳು ಅವನಿಗೆ ಆಹಾರವನ್ನು ತರುತ್ತಿವೆ.

ಎರಡು ಹಂಸಗಳು ಆಮೆಯನ್ನೆತ್ತಿಕೊಂಡು ಹೋಗುತ್ತವೆ. ಆಮೆ ಬಾಯಿ ತೆರೆದಾಗ ಕೆಳಕ್ಕೆ ಬಿದ್ದು ಸಾಯುತ್ತದೆ.

ಒಬ್ಬ ಪುರುಷನು ಸ್ತ್ರೀಯನ್ನು ಕಾಡಿನಲ್ಲಿ ಕರಡಿಯಿಂದ ರಕ್ಷಿಸುವನು. ಕೋಲಾಟವಾಡುವ ಸ್ತ್ರೀಯರು. ಹೊಡೆದಾಡುವ ಎರಡು ಟಗರುಗಳ ಮಧ್ಯದಲ್ಲಿ ನರಿಯು ಪ್ರವೇಶಿಸಿ ಸಾಯುವುದು.

ಮೊಸಳೆಯು ಕಪಿಯನ್ನು ಹೊತ್ತುಕೊಂಡು ಹೋಗುತ್ತದೆ; ಆದರೆ ಕಪಿಯು ತಪ್ಪಿಸಿಕೊಳ್ಳುತ್ತದೆ. ಗಂಡು ಕತ್ತೆ ಮತ್ತು ಸ್ತ್ರೀ ರತಿಬಂಧ, ಹೆಣ್ಣು ಕತ್ತೆ ಮನುಷ್ಯ, ಶ್ರೀರಾಮನ ಸಪ್ತತಾಳ ಭೇದನ, ವಾಲಿಸಂಹಾರ.

ದೇವಾಲಯದ ಉತ್ತರ ಮತ್ತು ದಕ್ಷಿಣ ಹೊರಗೋಡೆಯು ನಾಶವಾಗಿದೆ. ವಾಯವ್ಯ ಗೋಡೆಯ ಗೂಡಿನಲ್ಲಿ ಮಾತ್ರ ಮಹಿಷಮರ್ದಿನಿ ವಿಗ್ರಹವಿದೆ. ಗುಡಿಗಳ ಗೋಪುರಗಳು ಹೋಗಿವೆ. ದಕ್ಷಿಣ ಮುಖ ಮಂಡಪದ ಸ್ತಂಭಗಳು, ಲೋವೆಗಳು ಮಾತ್ರ ಉಳಿದಿವೆ.

ಮಂಡಪವು ಚತುರಸ್ರಾಕಾರವಾಗಿ ದಕ್ಷಿಣ ಮತ್ತು ಪೂರ್ವದಲ್ಲಿ ತೆರೆದುಕೊಂಡಿದೆ. ಪಕ್ಕಗಳಲ್ಲಿ ಕಲ್ಲಿನ ಜಗತಿಗಳಿವೆ. ನಾಲ್ಕು ದಿಕ್ಕುಗಳಲ್ಲೂ ದ್ವಾರಗಳಿವೆ. ಮಧ್ಯ ಅಂಕಣದ ನಾಲ್ಕು ಕಂಬಗಳು, ಭುವನೇಶ್ವರಿ ಪ್ರಾಚೀನವಾದವು. ಕಂಬಗಳ ಮೇಲೆ ಮದನಿಕೆ ವಿಗ್ರಹ

ಗಳಿದ್ದಿರಬೇಕು. ಇತರ ಅಂಕಣಗಳ ಹದಿನಾರು ಮೂಲೆ ಸ್ತಂಭಗಳು ಸಾಮಾನ್ಯವಾಗಿವೆ. ಮಧ್ಯ ಅಂಕಣದ ಭುವನೇಶ್ವರಿಯಲ್ಲಿ ಪದ್ಮ, ರಾಮಾಯಣ ಸುಂದರಕಾಂಡದ ಕಥೆ, ಅಷ್ಟ ದಿಕ್ಪಾಲಕರು ಮತ್ತು ಶಿವಗಣಗಳು ಯುದ್ಧಮಾಡುತ್ತಿರುವುದು ಚಿತ್ರಿತವಾಗಿವೆ. ಹನುಮಂತನು ಸೀತೆಯನ್ನು ಕಂಡುಹಿಡಿಯುವುದು, ಬಾಲದ ಬೆಂಕಿಯಿಂದ ಲಂಕಾದಹನ ಮಾಡುವುದು, ಹೊಯ್ಸಳ ಶಿಲ್ಪದಲ್ಲಿ ಅಪರೂಪವಾಗಿದೆ.

ದಕ್ಷಿಣ ಗುಡಿಯ ದ್ವಾರಬಂಧವು ಪುಷ್ಪಪಟ್ಟಿಕೆ, ನರ್ತಕರು, ನಾಗ ಬಂಧಗಳಿಂದ ಸುಂದರವಾಗಿ ಅಲಂಕೃತವಾಗಿದೆ. ಇದು ಬೇಲೂರು ಗರ್ಭ ಗೃಹದ್ವಾರವನ್ನು ಹೋಲುತ್ತದೆ. ದ್ವಾರದ ಮೇಲೆ ಗಜಲಕ್ಷ್ಮಿ ವಿಗ್ರಹ ವಿದೆ. ಗರ್ಭಗುಡಿಯಲ್ಲಿ ತಗ್ಗಾದ ಪಿಂಡಿಕೆಯ ಮೇಲೆ ಸಣ್ಣ ಲಿಂಗವಿದೆ. ಇದರ ಹಿಂದೆ ಇರುವ ಸರಸ್ವತೀ ವಿಗ್ರಹಕ್ಕೆ ಅಂಕುಶವನ್ನು ಹಿಡಿದಿರುವ ಒಂದೇ ಕೈ ಉಳಿದಿದೆ. ಸಣ್ಣ ನಡು ಉನ್ನತ ಕುಚ ನಿಡಿದಾದ ಬೆನ್ನು ಬೇಲೂರಿನ ಮೋಹಿನಿ ವಿಗ್ರಹಗಳನ್ನು ಹೋಲುತ್ತದೆ. ಬಹುಶಃ ಕ್ರಿ. ಶ. ೧೧೦೦ರಲ್ಲಿ ಮಾಡಿರಬಹುದು. ದಕ್ಷಿಣದಿಂದ ನವರಂಗಕ್ಕೆ ಹೋಗುವ ಬಾಗಿಲು ದಕ್ಷಿಣ ಗರ್ಭಗುಡಿಯ ದ್ವಾರವನ್ನು ಹೋಲುತ್ತದೆ. ಎರಡು ಪಕ್ಕಗಳಲ್ಲಿ ನಾಲ್ಕೂವರೆ ಅಡಿ ಎತ್ತರದ ಶೈವ ದ್ವಾರಪಾಲಕ ರಿರುವರು. ಹಳೆಯಬೀಡಿನ ದ್ವಾರಪಾಲಕರಂತೆ ಅತಿಯಾಗಿ ಅಲಂಕರಿ ಸಲ್ಪಟ್ಟಿಲ್ಲ. ದ್ವಾರಪಾಲಕರ ಪಕ್ಕಗಳಲ್ಲಿ ಜಾಲಂಧ್ರಗಳಿವೆ. ಇವುಗಳಲ್ಲಿ ನೃತ್ಯವಿಗ್ರಹಗಳನ್ನು ಕೊರೆದಿರುವರು. ಈ ಗೋಡೆಯ ಮೇಲೆ ಹಳೆಯ ಮೇಲ್ಛಾವಣಿಯು ಸ್ವಲ್ಪ ಕಾಣಿಸುತ್ತದೆ.

ನವರಂಗದಲ್ಲಿನ ನಾಲ್ಕು ಕಂಬಗಳನ್ನು ಲೇತ್‌ಮೇಲೆ ತಿರುಗಿಸಿ ದುಂಡಾಗಿ ಮಾಡಿರುವರು. ಸ್ತಂಭದ ಕೆಳಭಾಗದಲ್ಲಿ ಲತಾತೋರಣಗಳು, ಕೆಳಗೆ ನರ್ತಕಿ, ಉಮಾಮಹೇಶ್ವರ, ದಶಾವತಾರ, ಇತ್ಯಾದಿ ವಿಗ್ರಹಗಳಿವೆ. ಸಂಗೀತಗಾರರು, ಬಲಿ-ವಾಮನವಿಗ್ರಹಗಳು ಇವುಗಳಲ್ಲಿ ಸುಂದರವಾಗಿವೆ. ನವರಂಗದ ಪೂರ್ವಭಾಗದಲ್ಲಿರುವ ನಂದಿಯ ಮುಖವು ತೆರೆದಿದೆ. ಗರ್ಭ ಗುಡಿಯ ದ್ವಾರದ ಒಂದು ಪಕ್ಕದಲ್ಲಿ ರತಿ-ಮನ್ಮಥ ಮತ್ತೊಂದು ಪಕ್ಕದಲ್ಲಿ ಜಿಂಕೆ(?)ತಲೆಯ ದೇವತೆ ಮತ್ತು ಸ್ತ್ರೀ ವಿಗ್ರಹಗಳಿವೆ. ದ್ವಾರಬಂಧಗಳ

ಪಕ್ಕಗಳಲ್ಲಿ ನಾಗಬಂಧಗಳಿರುವ ಜಾಲಂಧ್ರಗಳು ಬಹಳ ಸುಂದರವಾಗಿವೆ. ಈ ಜಾಲಂಧ್ರಗಳ ಅಂಚಿನಲ್ಲಿ ಸ್ತ್ರೀ ವಿಗ್ರಹಗಳಿವೆ. ದ್ವಾರದಮೇಲೆ ಗಜಾಸುರಮರ್ದನ, ಶಿವ; ಬಲಗಡೆ ಬ್ರಹ್ಮ, ಕುಮಾರ, ಗಣೇಶ; ಎಡಗಡೆ ಕೇಶವ, ಗರುಡ, ಪರಿವಾರದೇವತೆಗಳು, ದಿಕ್ಪಾಲಕರು ಇರುವರು. ಸುಕನಾಸಿಯಲ್ಲಿ ಬೇಲೂರು ದೇವಾಲಯದಲ್ಲಿದ್ದಂತೆ ಚಂದ್ರಶಿಲೆ ಇದೆ. ಅನಂತರದ ಹೊಯ್ಸಳ ದೇವಾಲಯುಗಳಲ್ಲಿ ಚಂದ್ರಶಿಲೆಯು ಇರುವುದಿಲ್ಲ. ಗರ್ಭಗುಡಿಯಲ್ಲಿ ಪೀಠದಮೇಲೆ ಚಪ್ಪಟೆತಲೆಯ ಲಿಂಗವಿದೆ.

ತೆರೆದ ಸುಕನಾಸಿ ಮೂಲಕ ಉತ್ತರ ಗರ್ಭಗುಡಿಗೆ ಹೋಗಬಹುದು. ಇದರ ದ್ವಾರವೂ ಸುಂದರವಾಗಿದೆ. ಇದರ ಕೆತ್ತನೆ ಕೆಲಸದಲ್ಲಿ ಅನೇಕ ವಿಧವಾದ ಪೌರಾಣಿಕ ಪ್ರಾಣಿಗಳಿವೆ. ಗರ್ಭಗುಡಿಯಲ್ಲಿ ಆರೂವರೆ ಅಡಿ ಎತ್ತರದ ಭಂಗವಾದ ಕೇಶವ ವಿಗ್ರಹ ಮುಂದಿನ ಕೈಗಳನ್ನೂ ಕಾಲು ಗಳನ್ನೂ ಕಳೆದುಕೊಂಡಿದೆ. ಪಕ್ಕಗಳಲ್ಲಿ ದೇವಿಯರು, ಪರಿಚಾರಿಕೆಯರು, ತೋರಣದಲ್ಲಿ ದಶಾವತಾರಗಳು ಇವೆ. ದೇವರಿಗೆ ಪ್ರಭಾವಳಿ ಇದೆ. ವಿಷ್ಣುವರ್ಧನನಿಗಿಂತ ಪ್ರಾಚೀನವಾದುದರಿಂದ ಈ ವಿಷ್ಣು ವಿಗ್ರಹ ಗಮನಾರ್ಹವಾದುದು.

ನವರಂಗದಲ್ಲಿ ಐದು ಗರ್ಭಗುಡಿಗಳು ಈಗ ಖಾಲಿಯಾಗಿವೆ. ದಕ್ಷಿಣ ಜಾಲಂಧ್ರಗಳ ಹಿಂದೆ ಸಪ್ತಮಾತೃಕೆಯರು ಮಾತ್ರ ಸಾಲಾಗಿ ಕುಳಿತಿರುವ ಫಲಕವಿದೆ.

ಹೊಯ್ಸಳ ಲಾಂಛನವಿಲ್ಲದಿರುವುದರಿಂದ ಬಹುಶಃ ವಿಷ್ಣುವರ್ಧನ ನಿಗೆ ಹಿಂದೆ ವಿನಯಾದಿತ್ಯನ ಕಾಲದಲ್ಲಿ ಈ ದೇವಾಲಯ ನಿರ್ಮಿತ ವಾಯಿತು. ಈ ಶಿಲ್ಪಿಗಳು ಅನಂತರ ಬೇಲೂರಿಗೆ ಹೋಗಿರಬೇಕು.

ಕೇದಾರೇಶ್ವರ ದೇವಾಲಯ: ಶಿರಾಳಕೊಪ್ಪದಿಂದ ಬೆಳಗಾವಿಗೆ ಹೋಗುವ ದಾರಿಯಲ್ಲಿ ಬೆಳಗಾಮಿಯ ಈಶಾನ್ಯದಲ್ಲಿ ಕೆರೆಯ ಕಟ್ಟೆಯ ಮೇಲೆ ಕೇದಾರೇಶ್ವರ ದೇವಾಲಯವಿದೆ. ಇದರ ಸುತ್ತಮುತ್ತಲೂ ಮನೆಗಳ ತಲಪಾಯಗಳಿರುವುದರಿಂದ ಈ ಸ್ಥಳವು ಬಹುಶಃ ಹಳೆಯ ಊರಾಗಿದ್ದಿತು. ಕೇದಾರೇಶ್ವರ ದೇವಾಲಯವು ಚಾಳುಕ್ಯ ಅಥವಾ ಹೊಯ್ಸಳ ಆರಂಭಕಾಲದ ಕಟ್ಟಡವಾಗಿದೆ. ಹೆಚ್ಚು ಕೆತ್ತನೆ ಕೆಲಸವಿಲ್ಲ

ದಿದ್ದರೂ ತ್ರಿಕೂಟಾಚಲ ರೀತಿಯಲ್ಲಿದೆ. ಉದಯಾದಿತ್ಯ ಅಥವಾ ವಿನಯಾದಿತ್ಯ ಹೊಯ್ಸಳನು ಚಾಳುಕ್ಯರ ಸಾಮಂತನಾಗಿ ಬನವಾಸಿಯ ನ್ನಾಳುತ್ತಿದ್ದಾಗ ಕಟ್ಟಿಸಿರಬಹುದು. ಇತ್ತೀಚೆಗೆ ಪೂರ್ವದ ನಂದಿ ಮಂಡಪವನ್ನು ಸೇರಿಸಿರುವರು. ಪಕ್ಕದಲ್ಲಿರುವ ಪ್ರಭುದೇವ ಗುಡಿಯು ಹದಿಮೂರನೆಯ ಶತಮಾನದ್ದಾಗಿದೆ. ಮಹಾದ್ವಾರವು ಸುಮಾರು ಹದಿನಾಲ್ಕನೆಯ ಶತಮಾನದ್ದು.

ದೇವಾಲಯವು ಚತುರಸ್ರಾಕಾರದ ಜಗತಿಯ ಮೇಲಿದೆ. ಈ ಜಗತಿಯ ಮೇಲ್ಭಾಗ ಮಾತ್ರ ಕಾಣಿಸುತ್ತದೆ. ಗೋಡೆಗಳ ಕೆಳಭಾಗದಲ್ಲಿ ಸಾಧಾರಣವಾದ ನಾಲ್ಕು ಪಟ್ಟಿಕೆಗಳಿವೆ. ಗೋಡೆಗಳ ಮಧ್ಯದಲ್ಲಿ ಸಣ್ಣ ಕಂಬಗಳೂ ಗೂಡುಗಳೂ ಇವೆ. ಈ ಗೂಡುಗಳಿಗೆ ಶಿಖರ ಕಳಶಗಳಿವೆ. ಮೂರು ವಿಮಾನಗಳು ಚತುರಸ್ರವಾಗಿ ಕಲ್ಲಿನ ಕಲಶಗಳನ್ನು ಹೊಂದಿವೆ. ಈ ವಿಮಾನ ಶಿಖರಗಳು ಸುಕನಾಸಿಗಳಮೇಲೆ ಚಾಚಿಕೊಂಡು ಸಳ ವಿಗ್ರಹಗಳನ್ನೂ ಕೀರ್ತಿಮುಖಗಳನ್ನೂ ಹೊಂದಿವೆ. ಉತ್ತರ ವಿಮಾನದ ಸಳ ವಿಗ್ರಹ ಪ್ರಭುದೇವ ಗುಡಿಯ ಹತ್ತಿರ ಅರ್ಧ ಕೆಲಸಮಾಡಿ ಬಿದ್ದಿದೆ; ಕೀರ್ತಿಮುಖಗಳೂ ಖಾಲಿಯಾಗಿವೆ. ಲಾಳದ ಆಕಾರದ ಕೀರ್ತಿ ಮುಖಗಳ ಅಂಚಿನಲ್ಲಿ ಅಷ್ಟದಿಕ್ಪಾಲಕರು ಸಿಂಹಮುಖ ಮಕರ ಲತಾ ಪಟ್ಟಿಕೆಗಳಿಂದ ಚೆನ್ನಾಗಿ ಅಲಂಕೃತವಾಗಿವೆ. ಪಶ್ಚಿಮ ವಿಮಾನ ಮಿಕ್ಕೆರಡ ಕ್ಕಿಂತಲೂ ಎತ್ತರವಾಗಿದ್ದು ಇದರ ಕೀರ್ತಿಮುಖವೂ ಹೆಚ್ಚು ಕೆತ್ತನೆ ಕೆಲಸ ತೋರಿಸುತ್ತದೆ. ಗೋಪುರ ವಿಗ್ರಹಗಳಲ್ಲಿ ಆಗ್ನೇಯದಿಂದ ಭೈರವ, ತಾಂಡವೇಶ್ವರ, ಉಮಾಮಹೇಶ್ವರ, ಉಗ್ರನರಸಿಂಹ, ವರಾಹ ವಿಗ್ರಹಗಳು ಸುಂದರವಾಗಿವೆ.

ಮಂಡಪದ ಪೀಠಭಾಗವು ಕುಬಟೂರು ದೇವಾಲಯದಂತೆ ಪುಷ್ಪ ಪಟ್ಟಿಕೆ, ಸಣ್ಣ ಕೀರ್ತಿಮುಖಗಳು, ಸಣ್ಣ ಕಂಬಗಳ ಮೇಲೆ ಶಿಖರಗಳು, ದುಂಡಾದ ಕಂಬಗಳು, ನರ್ತಕರು, ಗಾಯಕರು, ಲತಾಪಟ್ಟಿಕೆಯಲ್ಲಿ ಪುಷ್ಪ, ಪಕ್ಷಿ, ಪ್ರಾಣಿ, ಮಲ್ಲರು, ನರ್ತಕರು, ಇತ್ಯಾದಿ ವಿಗ್ರಹಗಳಿವೆ.

ಮೇಲ್ಚಾವಣಿಯ ಬೋದಿಗೆಯ ಮೇಲೆ ಕೈಪಿಡಿಗೋಡೆಯಲ್ಲಿ ಸಿಂಹ ಮತ್ತು ಆನೆ ಸಾಲುಗಳಿವೆ. ಶಿಖರಗಳ ಮೇಲ್ಭಾಗದಲ್ಲಿ ಕೀರ್ತಿ

ಮುಖಗಳು, ಪೂರ್ವದಿಂದ ಪ್ರದಕ್ಷಿಣೆಯಾಗಿ ತಾಂಡವೇಶ್ವರ, ಭೈರವ, ಕೇಶವ, ನಂದಿಕೇಶ್ವರ ವಿಗ್ರಹಗಳಿವೆ.

ಮಂಡಪವು ಚತುರಸ್ರಾಕಾರವಾಗಿ ಮೊದಲು ಪಶ್ಚಿಮದಲ್ಲಿ ಮಾತ್ರ ನವರಂಗಕ್ಕೆ ಸಂಬಂಧಿಸಿದ್ದಿತು. ನವರಂಗದಲ್ಲಿ ನಾಲ್ಕು ಕಂಬಗಳಿವೆ. ನವರಂಗದ ಆರು ಗೂಡುಗಳಲ್ಲಿ ಒಂದರಲ್ಲಿ ಮಾತ್ರ ಸಪ್ತಮಾತೃಕೆ ಫಲಕ ವಿದೆ. ಮತ್ತೆ ಕೆಲವು ವಿಗ್ರಹಗಳನ್ನು ಗೂಡುಗಳಲ್ಲಿ ತುಂಬಿರುವರು. ಮಂಡಪದ ಪೂರ್ವಭಾಗದಲ್ಲಿ ಈಚೆಗೆ ಕಟ್ಟಿದ ನಂದಿಮಂಡಪವಿದೆ.

ಒಳಗಿನ ನಾಲ್ಕು ಕಂಬಗಳನ್ನು ಲೇತ್‌ಮೇಲೆ ತಿರುಗಿಸಿ ದುಂಡಾಗಿ ಮಾಡಿರುವರು. ಹೊರಗಿನ ಕಂಬಗಳು ಹದಿನಾರು ಮುಖಗಳನ್ನು ಹೊಂದಿವೆ. ನವರಂಗ ಮತ್ತು ಮಂಡಪದ ಮಧ್ಯದಲ್ಲಿರುವ ಕಂಬಗಳಲ್ಲೇ ಹೆಚ್ಚು ಕೆತ್ತನೆ ಕೆಲಸವಿದೆ. ಮೇಲ್ಚಾವಣಿಯ ತೊಲೆಗಳಮೇಲೆ ಪುಷ್ಪ ಗಳನ್ನು ಕೆತ್ತಲಾಗಿದೆ. ಮೇಲ್ಚಾವಣಿ ಚಪ್ಪಟೆಯಾಗಿದ್ದು ಭುವನೇಶ್ವರಿ ಗಳಲ್ಲಿ ಪದ್ಮಗಳಿವೆ. ಮಧ್ಯ ಭುವನೇಶ್ವರಿಯಲ್ಲಿ ತಾಂಡವೇಶ್ವರ ಅಷ್ಟ ದಿಕ್ಪಾಲಕರು ಇರುವರು. ನವರಂಗದ ಮತ್ತೊಂದು ಭುವನೇಶ್ವರಿಯಲ್ಲಿ ಐದಡಿ ವಿಸ್ತಾರದ ದೊಡ್ಡ ಪದ್ಮವಿದೆ.

ದಕ್ಷಿಣ ಗರ್ಭಗುಡಿಯ ದ್ವಾರವು ಚಾಳುಕ್ಯ ರೀತಿಯಲ್ಲಿ ಗಜಲಕ್ಷ್ಮಿ ಮತ್ತು ಎತ್ತರ ಶಿಖರಗಳನ್ನು ಹೊಂದಿದೆ. ಒಳಗೆ ಸಣ್ಣ ಲಿಂಗವಿದೆ. ಉತ್ತರ ಗರ್ಭಗುಡಿಗೂ ಇಂತಹ ದ್ವಾರವಿದೆ. ಇಲ್ಲಿ ಸ್ಥಾನಕ ಕೇಶವ ವಿಗ್ರಹ, ತೋರಣದಲ್ಲಿ ದಶಾವತಾರಗಳು ಇವೆ. ಪಶ್ಚಿಮ ಗರ್ಭಗುಡಿಗೆ ಮಾತ್ರ ಸುಕನಾಸಿ ಜಾಲಂದ್ರಗಳಿವೆ. ಇದರ ದ್ವಾರದಮೇಲೆ ಶಿವ, ಪಕ್ಕಗಳಲ್ಲಿ ಬ್ರಹ್ಮ, ವಿಷ್ಣು, ಗಣೇಶ, ಷಣ್ಮುಖ ವಿಗ್ರಹಗಳಿವೆ. ಪಶ್ಚಿಮ ಗರ್ಭಗುಡಿಯ ದ್ವಾರವು ಇತರ ಗರ್ಭಗುಡಿಗಳ ದ್ವಾರಗಳಂತೆಯೇ ಇದೆ. ಇಲ್ಲಿಯೂ ದುಂಡುತಲೆಯ ಸಣ್ಣ ಲಿಂಗವಿದೆ.

ಪ್ರಭುದೇವ ಗುಡಿ : ಕೇದಾರೇಶ್ವರ ಗುಡಿಯ ಎಡಗಡೆ ತ್ರಿಕೂಟಾಚಲ ವಾದ ಪ್ರಭುದೇವಗುಡಿ ಮುಖಮಂಡಪ ಸಣ್ಣ ನವರಂಗ ಮೂರು ಗರ್ಭ ಗುಡಿಗಳನ್ನು ಹೊಂದಿದೆ. ಹಿಂದಿನ ಗೋಡೆಗಳ ಮಧ್ಯಭಾಗದಲ್ಲಿ ಪುಷ್ಪ ಪಟ್ಟಿಕೆ ಇದೆ. ಪೀಠದ ಮುಂಭಾಗದ ಕಟಾಂಜನದಲ್ಲೂ ಪುಷ್ಪಗಳಿವೆ.

ಮಂಡಪದ ಜಗತಿಗಳ ಮೇಲೆ ದುಂಡಾದ ಕಂಬಗಳಿವೆ. ಮಂಡಪದ ಮಧ್ಯದಲ್ಲಿರುವ ನಾಲ್ಕು ಸ್ತಂಭಗಳು ಘಂಟಾಕಾರವಾಗಿವೆ. ನವರಂಗ ದ್ವಾರ ಮತ್ತು ಜಾಲಂಧ್ರಗಳಲ್ಲಿರುವ ವಿಗ್ರಹಗಳನ್ನು ಸುಣ್ಣ ಬಳಿದು ಮುಚ್ಚಿರುವರು. ನವರಂಗ ದ್ವಾರದ ಎರಡು ಪಕ್ಕಗಳಲ್ಲೂ ಎರಡು ಗೂಡುಗಳಿವೆ. ಬಹುಶಃ ಬಲದಲ್ಲಿ ಗಣೇಶ ಎಡಗಡೆ ಮಹಿಷಮರ್ದಿನಿ ವಿಗ್ರಹಗಳಿದ್ದಿರಬೇಕು. ದಕ್ಷಿಣ ಮತ್ತು ಪಶ್ಚಿಮ ಗರ್ಭಗುಡಿಗಳಲ್ಲಿ ದುಂಡು ತಲೆಯ ಲಿಂಗಗಳು, ಉತ್ತರ ಗರ್ಭಗುಡಿಯಲ್ಲಿ ಹದಿನೇಳನೆಯ ಶತಮಾನದ ವೀರಭದ್ರ ವಿಗ್ರಹ ಇವೆ.

ಕೇದಾರೇಶ್ವರ ದೇವಾಲಯದ ಎದುರಿಗೆ ಬಳಪದಕಲ್ಲಿನ ಮಹಾ ದ್ವಾರವಿದೆ. ದಕ್ಷಿಣದಲ್ಲಿ ಭಗ್ನವಾದ ಮತ್ತೊಂದು ಮಂಡಪವಿದೆ. ಅಂಗಳದಲ್ಲಿ ಚಾಳುಕ್ಯ ಅರಸನೆಯ ವಿಕ್ರಮಾದಿತ್ಯನ ಕಾಲದಿಂದ ಮೈಸೂರಿನ ನಾಲ್ಕನೇ ಚಾಮರಾಜ ಒಡೆಯರ ಕಾಲದವರೆಗಿನ ಅನೇಕ ಶಾಸನಗಳಿವೆ.

ಪ್ರಭುದೇವ ಗುಡಿಯ ಮುಂದೆ ಅಷ್ಟಕೋಣಾಕಾರದ ಒಂದು ಗುಡಿಯಿದೆ.

ಪಂಚಲಿಂಗೇಶ್ವರ ದೇವಾಲಯ ಸಣ್ಣದಾಗಿದ್ದರೂ ಇದರ ಗರ್ಭಗುಡಿಯ ದ್ವಾರವು ಎತ್ತರವಾಗಿದೆ. ಇಲ್ಲಿದ್ದ ದ್ವಾರಪಾಲಕ ವಿಗ್ರಹಗಳು ಈಗ ಬೆಂಗಳೂರು ವಸ್ತುಪ್ರದರ್ಶನಾಲಯದಲ್ಲಿವೆ. ಲಿಂಗವು ಕೂಡ ಬಹಳ ದೊಡ್ಡದಾಗಿದೆ. ಕಾಳಾಮುಖಾಚಾರ್ಯರ ಸ್ಥಾನವಾಗಿದ್ದುದರಿಂದ ಹಿಂದೆ ಈ ದೇವಾಲಯ ವಿಸ್ತಾರವಾಗಿದ್ದಿರಬೇಕು. ಈಗ ಗರ್ಭಗುಡಿ ಸುಕನಾಸಿ ಮಾತ್ರ ಉಳಿದಿವೆ. ಮುಂದಿನ ಮಂಡಪವನ್ನು ಆಮೇಲೆ ಸೇರಿಸಿರಬೇಕು. ಸುಕನಾಸಿ ದ್ವಾರವು ಚೆನ್ನಾಗಿ ಅಲಂಕೃತವಾಗಿದೆ. ಮೇಲ್ಛಾವಣಿ ಬಹಳ ಎತ್ತರದಲ್ಲಿದೆ. ದೇವಾಲಯದ ಸುತ್ತಲೂ ಬಿದ್ದಿರುವ ವಿಗ್ರಹಗಳಲ್ಲಿ ಉಮಾಮಹೇಶ್ವರ ವಿಗ್ರಹ (ಮೈ. ಆರ್. ರಿ. ೧೯೧೧) ಚಾಳುಕ್ಯ ಕಾಲದ ಸುಂದರ ಶಿಲ್ಪವಾಗಿದೆ. ಶಿವನ ಕಿರೀಟ, ನಿಂತಿರುವ ಭಂಗಿ ಹತ್ತನೆಯ ಶತಾಬ್ದದ ಶಿಲ್ಪವನ್ನು ಹೋಲುವುದು. ಅಭಯ ತ್ರಿಶೂಲ ಪಾಲೆ ಯಜ್ಞೋಪವೀತ ಉದರಬಂಧ ಛನ್ನವೀರಗಳನ್ನು ಹೊಂದಿ ಎಡಗೈಯಿಂದ ನಿಂತಿರುವ ಪಾರ್ವತಿಯನ್ನಾಲಿಂಗಿಸುತ್ತಿರುವನು.

ಪಾರ್ವತಿ ತ್ರಿಭಂಗದಲ್ಲಿ ನಿಂತು ಬಲಗೈಯಿಂದ ಶಿವನನ್ನಾಲಿಂಗಿಸುತ್ತ ಎಡಗೈಯಲ್ಲಿ ಪದ್ಮವನ್ನು (?) ಹೊಂದಿರುವಳು. ಕೇಶಬಂಧ, ಓಲೆ, ಸರ ಮುಂತಾದುವು ಗಮನಾರ್ಹವಾಗಿವೆ. ಬಲಗಡೆ ಗಣೇಶ, ಎಡಗಡೆ ಒಂದು ಪುರುಷ ವಿಗ್ರಹಗಳಿವೆ. ಶಿವನ ಕಿರೀಟದಿಂದ ಜಟೆ ಅಥವಾ ನಾಗವು, ಹಿಂಪೆ ಪ್ರಭಾವಳಿ ಇವೆ.

೭೫. **ಉದ್ರಿ :** ಸೊರಬಕ್ಕೆ ಆರು ಮೈಲಿ ಈಶಾನ್ಯದಲ್ಲಿ ಚರಿತ್ರೆಯಲ್ಲಿ ಪ್ರಸಿದ್ಧವಾದ ಉದ್ಧುರ, ಉದ್ಧರೆ (ಉದ್ರಿ) ಬನವಾಸಿ ಸೀಮೆಯ ಕಂಪಣವಾಗಿದ್ದಿತು. ಇದು ಜಿಡ್ಡುಳಿಗೆ ನಾಡಿನ ರಾಜರ ಭಂಡಾರಸ್ಥಳವೂ ಆಗಿದ್ದಿತು. ಕೋಟೆ ಗೋಡೆಗಳು, ದೇವಾಲಯಗಳು, ವೀರಗಲ್ಲುಗಳು, ಶಾಸನಗಳು ಅನೇಕವಾಗಿವೆ. ಸುಮಾರು ಐದಡಿ ಎತ್ತರದ ಮಹಾಸತಿ ವಿಗ್ರಹಗಳು ಬಲಗೈ ಎತ್ತಿಕೊಂಡು ಎಡಗೈಯಲ್ಲಿ ಕಳಶಗಳನ್ನು ಹಿಡಿದುಕೊಂಡಿವೆ. ಅನೇಕ ವಿಗ್ರಹಗಳು ಸುತ್ತಮುತ್ತಲೂ ಬಿದ್ದಿವೆ. ಭಗ್ನವಾದ ಅನೇಕ ದೇವಾಲಯಗಳಲ್ಲಿ ಉತ್ತರದಲ್ಲಿರುವ ಶಿವಾಲಯ ಗರ್ಭಗುಡಿ ಸುಕನಾಸಿ ನವರಂಗವನ್ನು ಹೊಂದಿದೆ. ಸುಕನಾಸಿ ದ್ವಾರದ ಪಕ್ಕದ ಗೂಡುಗಳಲ್ಲಿ ಬಲಗಡೆ ಷಣ್ಮುಖ ವಿಗ್ರಹ ಎಡಗಡೆ ಖಾಲಿಯಾಗಿದೆ. ಎಡ ಗೂಡಿನ ಪಕ್ಕದಲ್ಲಿ ಯಕ್ಷಿಣಿ (?) ಬಲಗೈಯಲ್ಲಿ ಕಮಲವನ್ನು ಹಿಡಿದಿರುವಳು ; ಎಡಗೈ ಹೋಗಿದೆ. ಷಣ್ಮುಖನ ಎದುರಿಗೆ ಸಣ್ಣ ಲಿಂಗ ಬಸವ ಇವೆ. ಗರ್ಭಗುಡಿಯಲ್ಲಿ ಗಣಪತಿ ವಿಗ್ರಹವನ್ನು ಗೋಡೆಗೆ ಒರಗಿಸಿದೆ. ಸುಕನಾಸಿ ದ್ವಾರದಮೇಲೆ ಜೈನವಿಗ್ರಹ ಚಾಮರಧಾರಿಣಿಯರು ಇರುವರು. ಸುಕನಾಸಿಯಲ್ಲಿ ಸಪ್ತಮಾತೃಕೆಯರ ಫಲಕವಿದೆ. ಬಹುಶಃ ಕ್ರಿ. ಶ. ೧೧ನೆಯ ಜೈನ ಗುಡಿಯನ್ನು ಶೈವವಾಗಿ ಮಾರ್ಪಡಿಸಿರಬಹುದು (ಎ. ಕ. VIII, ಸೊರಬ 146). ನವರಂಗದ ದ್ವಾರದಮೇಲೆ ಜಾಲಂದ್ರದಲ್ಲಿ ಶಂಕರ ವಿಗ್ರಹವಿದೆ. ನವರಂಗದ ಕಂಬಗಳು ಹೊಯ್ಸಳ ರೀತಿಯಲ್ಲಿ ಸುಂದರವಾಗಿವೆ. ಮಧ್ಯದ ಭುವನೇಶ್ವರಿಯಲ್ಲಿ ದೊಡ್ಡ ಕಮಲವಿದೆ.

ಉದ್ರಿಯಲ್ಲಿ ಹಾಳಾಗಿರುವ ಮತ್ತೆರಡು ಶಿವಾಲಯಗಳಿವೆ. ಮತ್ತೊಂದು ಲಕ್ಷ್ಮೀನಾರಾಯಣ ದೇವಾಲಯಕ್ಕೆ ಸುಕನಾಸಿ ಗರ್ಭಗುಡಿಗಳು ಮಾತ್ರ ಇವೆ. ಗರ್ಭಗೃಹದ ದ್ವಾರದಮೇಲೆ ಗಜಲಕ್ಷ್ಮಿ,

ಸುಕನಾಸಿ ದ್ವಾರದ ಮೇಲೆ ವೇಣುಗೋಪಾಲ ವಿಗ್ರಹಗಳಿವೆ. ಗರ್ಭಗುಡಿಯಲ್ಲಿ ಹೊಯ್ಸಳ ರೀತಿಯ ಲಕ್ಷ್ಮೀನಾರಾಯಣ ವಿಗ್ರಹ ಆಸೀನಮೂರ್ತಿಯಾಗಿ ಶಂಖ ಪದ್ಮ ಗದಾ ಚಕ್ರಗಳನ್ನು ಹೊಂದಿದೆ. ಲಕ್ಷ್ಮಿಯು ನಾರಾಯಣನ ತೊಡೆಯ ಮೇಲೆ ಕುಳಿತಿರುವಳು.

೭೬. ಬಂದಣಿಕೆ: ನಾಗರಖಂಡದ ಕದಂಬರ ರಾಜಧಾನಿಯಾಗಿದ್ದ ಬಂದಣಿಕೆ ಹನ್ನೊಂದು ಹನ್ನೆರಡನೆಯ ಶತಾಬ್ದಗಳಲ್ಲಿ ಪ್ರಸಿದ್ಧ ಪಟ್ಟಣವಾಗಿದ್ದಿತು. ಹಳೆಯ ಪಟ್ಟಣದ ಅವಶೇಷಗಳು ವಿಸ್ತಾರವಾಗಿ ಹರಡಿಕೊಂಡಿವೆ. ಈಗ ಕಾಡು ಬೆಳೆದು ದುಷ್ಟಮೃಗಗಳು ಸೇರಿಕೊಂಡಿವೆ. ಇಲ್ಲಿನ ಕಟ್ಟಡಗಳನ್ನು ಮೈಸೂರು ಆರ್ಕಿಯಲಾಜಿಕಲ್ ರಿಪೋರ್ಟು ೧೯೧೧ರಲ್ಲಿ ಗಮನಿಸಲಾಗಿದೆ. ಕ್ರಿ. ಶ. ೯೧೮ನೆಯ ಜೈನ ಬಸದಿ, ತ್ರಿಮೂರ್ತಿ ದೇವಾಲಯ ಮತ್ತು ಸೋಮೇಶ್ವರ (ಬೊಪ್ಪೇಶ್ವರ) ಗುಡಿ ಮುಖ್ಯವಾದವು. ಕ್ರಿ. ಶ. ೧೨೦೦ ಮತ್ತು ೧೨೦೩ರಲ್ಲಿ ಬೊಪ್ಪಸೆಟ್ಟಿ ಬಸದಿಯನ್ನು ಜೀರ್ಣೋದ್ಧಾರ ಮಾಡಿಸಿ ಮುಂದಿನ ಮಂಡಪವನ್ನು ಕಟ್ಟಿಸಿದನು. ಮತ್ತೆ ಕೆಲವರು ದಾನಗಳನ್ನು ಕೊಟ್ಟಿರುವರು. ತ್ರಿಮೂರ್ತಿ ದೇವಾಲಯವನ್ನು ಬಹುಶಃ ಸೋಮೇಶ್ವರ ದೇವಾಲಯದ ಕಾಲದಲ್ಲಿಯೇ (ಸು. ೧೧೯೦) ಕಟ್ಟಿಸಿರಬಹುದು. ಸೋಮೇಶ್ವರ ದೇವಾಲಯದ ಹೊರಗೋಡೆಯ ಜಾಲಂಧ್ರಗಳು ಬಹಳ ಚೆನ್ನಾಗಿ ಕೆತ್ತಲ್ಪಟ್ಟಿವೆ.

ಬಂದಣಿಕೆಯಲ್ಲಿ ಬನಶಂಕರಿ, ಶಿವ ಮತ್ತು ಖಾಲಿಯಾದ ಮತ್ತೊಂದು ದೇವಾಲಯಗಳು ಇವೆ. ಶಿವದೇವಾಲಯವನ್ನು ಶಾಸನದಲ್ಲಿ ಸೋಮೇಶ್ವರ ಎಂದು ಕರೆದಿದ್ದರು. ಈಗ ಸಹಸ್ರಲಿಂಗೇಶ್ವರ ಎಂದು ಕರೆಯಲಾಗಿದೆ. ಇವೆಲ್ಲವೂ ಪಾಳುಬಿದ್ದಿವೆ.

೭೭. ಪುರ: ಸೊರಬಕ್ಕೆ ಎಂಟು ಮೈಲಿ ದಕ್ಷಿಣದಲ್ಲಿ ಪುರ ಎಂಬ ಸಣ್ಣ ಹಳ್ಳಿ ಇದೆ. ಹೊಯ್ಸಳರ ಕಾಲದಲ್ಲಿ ಇದಕ್ಕೆ ಭವ್ಯಪುರವೆಂಬ ಹೆಸರಿದ್ದಿತು (ಎ. ಕ. VIII, ಸೊರಬ 521). ಇಲ್ಲಿನ ಸೋಮೇಶ್ವರ ದೇವಾಲಯ ಹೊಯ್ಸಳ ಕಟ್ಟಡವಾಗಿದೆ. ಗರ್ಭಗುಡಿ ಸುಕನಾಸಿ ರಂಗಮಂಡಪ ದ್ವಾರಗಳೆಲ್ಲ ಚೆನ್ನಾಗಿ ಕೆತ್ತಲ್ಪಟ್ಟಿವೆ. ಸುಕನಾಸಿ ದ್ವಾರದ ಎರಡು ಪಕ್ಕಗಳಲ್ಲೂ ಜಾಲಂಧ್ರ ಗೋಡೆಗಳಿವೆ. ನವರಂಗದಲ್ಲಿ ಸುಕನಾಸಿ



ಹಳೇ ಶೃಂಗೇರಿಯ ವಿದ್ಯಾಶಂಕರ
ಲಿಂಗದ ಮುಂದುಗಡೆ ದೃಶ್ಯ



ಋಷ್ಯಶೃಂಗೇಶ್ವರ ದೇವಾಲಯದ ನಂದಿ

ಹತ್ತಿರ ಸುಕನಾಸಿ ದ್ವಾರದ ಪಕ್ಕದಲ್ಲಿ ಎದುರುಬದರಾಗಿ ಎರಡು ಗೂಡುಗಳಿವೆ. ಎಡಗಡೆಯಿಂದ ಇವುಗಳಲ್ಲಿ ಸಪ್ತಮಾತೃಕ, ಉಮಾ ಮಹೇಶ್ವರ, ಚಾಮುಂಡೇಶ್ವರಿ, ಪದ್ಮ ಚಕ್ರ ಶಂಖ ಗದೆ ಹಿಡಿದಿರುವ ವಿಷ್ಣು ವಿಗ್ರಹಗಳಿವೆ. ಅಲ್ಲದೆ ನವರಂಗದಲ್ಲಿ ಒಂದು ವೀರಗಲ್ಲು ಮತ್ತು ವೀರಭದ್ರ ವಿಗ್ರಹ ಇವೆ. ಗರ್ಭಗುಡಿ ಸುಕನಾಸಿ ದ್ವಾರಗಳ ಮೇಲೆ ಗಜಲಕ್ಷ್ಮಿ, ನವರಂಗದ್ವಾರದ ಮೇಲೆ ಸರಸ್ವತಿ ಇವೆ. ಮುಖ ಮಂಡಪದಲ್ಲಿ ಎತ್ತರ ಜಗತಿ ಕಲ್ಲಿನ ಕಟಾಂಜನಗಳಿವೆ. ಹೊರಗೋಡೆಗಳ ಮಧ್ಯದಲ್ಲಿ ಲತಾಪಟ್ಟಿಕೆ ಇದೆ. ವಿಮಾನವು ಸಾಧಾರಣವಾಗಿ ಕಲಶ ರಹಿತವಾಗಿದೆ.

ಗರ್ಭಗುಡಿಯಲ್ಲಿ ಲಿಂಗವಿಲ್ಲ. ಪಾಣಿಪೀಠದ ಮೇಲೆ ವೃಷಭ ವಾಹನನಾದ ಸೋಮೇಶ್ವರನ ವಿಗ್ರಹವಿದೆ. ಸೋಮೇಶ್ವರನು ನಾಗ ಕುಂಡಲ ಧರಿಸಿ ಅಭಯ ತ್ರಿಶೂಲ ಡಮರುಗ ಕಪಾಲ ಹಿಡಿದಿರುವನು. ಗೋಪುರದ ಮುಂದೆ ಗಾರೆಯಿಂದ ಕಟ್ಟಿದ ಹೊಯ್ಸಳ ಚಿಹ್ನೆ, ಇದರ ಪಕ್ಕದಲ್ಲಿ ಗಂಟೆಯನ್ನು ಹಿಡಿದಿರುವ ಮನುಷ್ಯ ವಿಗ್ರಹ ಇವೆ. ಹೊಯ್ಸಳ ವಿಗ್ರಹದ ಮುಂದೆ ಇರುವ ಫಲಕದಲ್ಲಿ ಗರ್ಭಗುಡಿಯಲ್ಲಿರುವ ವಿಗ್ರಹವೇ ಕೆತ್ತಲ್ಪಟ್ಟಿದೆ.

೭೮. ಕೊಡಗನೂರು: ದಾವಣಗೆರೆ ತಾಲ್ಲೂಕಿನ ಕೊಡಗನೂರು ಹತ್ತನೆಯ ಶತಮಾನದಲ್ಲಿ ಪ್ರಸಿದ್ಧವಾಗಿದ್ದಿತು. ಇಲ್ಲಿ ಹಾಳಾದ ಕೆಲವು ದೇವಾಲಯಗಳಿವೆ. ಕೊಡಗನೂರಿಗೆ ತೆಂಕಣ ಅಯ್ಯಾವಳೆ ಎಂಬ ಹೆಸರಿದ್ದಿತು, (ಎ. ಕ. XI., ದಾವಣಗೆರೆ ೧೪೯, ಚಾ. ವಿ. ಸಂ. 37— ವಿಷ್ಣುದೇವಾಲಯ, ದಾವಣಗೆರೆ, ೧೫೩, ಶಕ ೯೭೦). (ಸೋಮೇಶ್ವರ ದೇವಾಲಯ—ದಾವಣಗೆರೆ ೧೫೧. ಚಾ. ವಿ. ಸಂ. ೨೫, ಉಚ್ಚಂಗಿ ಪಾಂಡ್ಯ). ಬನದಶಂಕರಿ (ದೊಡ್ಡ ಮಾಗಡಿ ಶಾಸನ, ದಾವಣಗೆರೆ ೧೪೬ ಕ್ರಿ. ಶ. ೧೫೧೮). ಮಾಯಕೊಂಡದಲ್ಲಿ ಈಗ ಕಲ್ಲೇಶ್ವರ, ಹನುಮಂತ, ದುರ್ಗಾ, ಮಲ್ಕನ್ದೇವ ಗುಡಿಗಳು ಇವೆ. ಈ ಮಲ್ಕನ್ದೇವರು ಕ್ರಿ. ಶ. ೧೧೦೧ರ ಶಾಸನದಲ್ಲಿ ಉಕ್ತವಾದ ಸೋಮೇಶ್ವರ ಇರಬಹುದು. ಈ ದೇವಾಲಯದಲ್ಲಿ ನಾಲ್ಕು ಗಂಟೆಯ ಆಕಾರದ ಕಂಬಗಳಿವೆ. ಕಲ್ಲೇಶ್ವರ

ದೇವಾಲಯದ ನವರಂಗ ಸ್ತಂಭಗಳು ಪ್ರಾಚೀನವಾಗಿವೆ. ದಾವಣಗೆರೆ ೧೪೯-೧೫೨ನೇ ಶಾಸನಗಳು ಇದಕ್ಕೆ ಪೂರ್ವದಲ್ಲಿವೆ.

೭೯. **ವಡೇರಹಳ್ಳಿ :** ಇಲ್ಲಿನ ಕಲ್ಲೇಶ್ವರ ಚಾಳುಕ್ಯರ ಕಾಲದಲ್ಲಿ ಕ್ರಿ. ಶ. ೧೦೪೧ರಲ್ಲಿದ್ದಿತು (ದಾವಣಗೆರೆ ೧೪೫); ಈಗ ಹಾಳಾಗಿದೆ.

೮೦. **ನಲ್ಕುಂದ :** ಸುಮಾರು ಏಳನೆಯ ಶತಮಾನದಿಂದ ನಲ್ಕುಂದ ಪ್ರಸಿದ್ಧವಾಗಿದ್ದಿತು. ಹಳ್ಳಿಯ ಈಶಾನ್ಯದಲ್ಲಿ ಈಶ್ವರದೇವಾಲಯು ತ್ರಿಕೂಟಾಚಲವಾಗಿದೆ. ಮೂರು ಗರ್ಭಗುಡಿಗಳು, ನವರಂಗ, ದಕ್ಷಿಣ ದಲ್ಲಿ ದ್ವಾರ ಇವೆ. ಮೇಲ್ಛಾವಣಿ ತಗ್ಗಾಗಿದೆ. ಗೋಪುರವು ಹೋಗಿದೆ. ಕಂಬಗಳು ದ್ವಾರಗಳು ವಿಗ್ರಹಗಳು ಬಳಪದಕಲ್ಲಿನಿಂದ ಮಾಡಿದುವಾಗಿವೆ. ದ್ವಾರಬಂಧಗಳ ಮೇಲೆ ಕಲಶ ಲತೆ ಹಗ್ಗದ ಸುರಳಿ ಕೆತ್ತಲಾಗಿದೆ. ಲತೆಯಲ್ಲಿ ನಿಂತ ವಿಗ್ರಹಗಳಿವೆ. ಕಂಬಗಳು ಚತುರಸ್ರವಾಗಿ ನಾಲ್ಕು ಎಂಟು ಹದಿನಾರು ಮೂಲೆಗಳನ್ನು ಚಕ್ರಾಕಾರದ ಬೋದಿಗೆಗಳನ್ನು ಹೊಂದಿವೆ. ಮೇಲ್ಛಾವಣಿಯ ಭುವನೇಶ್ವರಿಗಳಲ್ಲಿ ಕೆತ್ತನೆ ಇಲ್ಲ. ನವರಂಗದಲ್ಲಿ ಸಪ್ತಮಾತೃಕಾ, ನಾಗ, ಬಳಪದಕಲ್ಲಿನ ಗಣೇಶ, ಗರ್ಭ ಗುಡಿಯ ಮುಂದೆ ಸಣ್ಣ ನಂದಿ, ಎರಡು ಕೈಯಿನ ವಿಗ್ರಹ (ವಿಷ್ಣು?) ಇವೆ. ಈ ವಿಗ್ರಹದ ಕೈಗಳು ಮುರಿದುಹೋಗಿವೆ. ಇದರ ಪ್ರಭಾವಳಿಯಲ್ಲಿ ಲತಾಪಟ್ಟಿಕೆಯ ಆರು ಸುರುಳಿಗಳಲ್ಲಿ ವಿಗ್ರಹಗಳಿವೆ. ದಶಾವತಾರಗಳಿಲ್ಲ. ಅಕ್ಷಮಾಲ (ಶಂಖದ ಬದಲು) ಶಂಖ ಚಕ್ರ ಗದೆಯುಳ್ಳ ವಿಷ್ಣು (ಕೇಶವ?) ವಿಗ್ರಹವಿದೆ. ಇದರ ಪ್ರಭಾವಳಿಯಲ್ಲಿ ಎಂಟು ಅವತಾರಗಳು ಮಾತ್ರ ಇವೆ. ಬಹುಶಃ ಇವು ಉತ್ತರ ಗರ್ಭಗುಡಿಯ ವಿಗ್ರಹವಾಗಿರ ಬಹುದು. ಕಲ್ಯಾಣಿ ಚಾಳುಕ್ಯರ ಕಾಲದ್ದೆಂದು ಕಂಡುಬರುತ್ತದೆ.

೮೧. **ಅಣಬೇರು :** ಇಲ್ಲಿ ಹನ್ನೆರಡನೆಯ ಶತಾಬ್ದದ ಈಶ್ವರ ದೇವಾಲಯದ ವಿಗ್ರಹಗಳು ಸಿಕ್ಕಿದವು—ಪದ್ಮ ಚಕ್ರ ಶಂಖ ಗದೆ ಹಿಡಿದ ಜನಾರ್ದನ, ಗಣೇಶ, ಸೂರ್ಯನಾರಾಯಣ, ಸಪ್ತಮಾತೃಕಾ ಇವು ಗಳನ್ನು ಲಿಂಗದೊಡನೆ ಚಾವಡಿಯಲ್ಲಿಟ್ಟಿರುವರು.

೮೨. **ಕೆಬ್ಬೂರು :** ಮಾಯಕೊಂಡಕ್ಕೆ ನಾಲ್ಕು ಮೈಲಿ ಈಶಾನ್ಯದಲ್ಲಿ "ಕರ್ವೂರು" ಆರನೆಯ ವಿಕ್ರಮಾದಿತ್ಯ ಮತ್ತು ಉಚ್ಚಂಗಿಯ ತ್ರಿಭು

ವನಮಲ್ಲ ಪಾಂಡ್ಯನ ಕಾಲದಲ್ಲಿ ವೀರರಾಜೇಂದ್ರ ಚತುರ್ವೇದಿ ಮಂಗಲ, ನಿತ್ಯ ವಿನೋದ ಚತುರ್ವೇದಿ ಮಂಗಲ ಎಂದು ಪ್ರಸಿದ್ಧವಾಗಿದ್ದಿತು. ಪೂರ್ವದಲ್ಲಿ ಕಲಿದೇವ (ಮೂಲಸ್ಥಾನ ಸ್ವಯಂಭು ಕಲಿದೇವ), ಗವರೇಶ್ವರ, ವಾಯುವ್ಯದಲ್ಲಿ ಅವಿಮುಕ್ತೇಶ್ವರ ದೇವಾಲಯಗಳು ಇದ್ದ ವೆಂದು ಶಾಸನಗಳಿಂದ ಕಂಡುಬರುವುದು (ದಾವಣಗೆರೆ ೧೫೫, ೧೫೬), ಮಣ್ಣಿನ ಕೋಟೆಗೋಡೆ ಇದೆ. ಇಲ್ಲಿನ ಕಲ್ಲೇಶ್ವರ ಮೂರು ಕಾರ್ನೀಸು ಗಳುಳ್ಳ ಪೀಠದಮೇಲಿದೆ. ಗರ್ಭಗೃಹ ತೆರೆದ ಸುಕನಾಸಿ ನವರಂಗಗಳು ಸಾಮಾನ್ಯವಾಗಿವೆ. ನವರಂಗದ ನಾಲ್ಕು ಕಂಬಗಳು ಹದಿನಾರು ಮುಖ ಗಳನ್ನು ಹೊಂದಿವೆ.

ವಾಯುವ್ಯದಲ್ಲಿ ಅರ್ಧ ಮೈಲಿ ದೂರದಲ್ಲಿದ್ದ ಅವಿಮುಕ್ತೇಶ್ವರ ಗುಡಿ ಈಗ ಹಾಳಾಗಿದೆ. ಇದರಮೇಲೆ ಭಗ್ನವಾದ ನಂದಿ ಇದೆ. ಇದರ ಶಾಸನ (ದಾವಣಗೆರೆ ೧೫೬)ದಲ್ಲಿ ಕ್ರಿ. ಶ. ೧೧ಗಳರಲ್ಲಿಯೇ ಮಹಾಮಂಡಲೇಶ್ವರ ಮಯ್ಯಗೊಂಡದೇವನು ಚಾಳುಕ್ಯ ವಿಕ್ರಮ ಸಂವತ್ಸರ ಜಯ ವರ್ಷದಲ್ಲಿ ಕಬ್ಬೂರಿನ ಅವಿಮುಕ್ತೇಶ್ವರನಿಗೆ ದಾನಕೊಟ್ಟಂತೆ ಹೇಳಿದೆ.

೮೩. ಬಾಡ : ಚಾಳುಕ್ಯವಿಕ್ರಮ ಶಕದ ಶಾಸನಗಳಿಂದ (ದಾವಣ ಗೆರೆ ೧೫೯–೧೬೨) ಬಾಡವು ಹನ್ನೊಂದು ಹನ್ನೆರಡನೆಯ ಶತಮಾನಗಳಲ್ಲಿ ದೊಡ್ಡ ಅಗ್ರಹಾರವಾಗಿದ್ದಿತೆಂದು ತಿಳಿದುಬರುತ್ತದೆ. ಹಳ್ಳಿಯ ಪೂರ್ವದಲ್ಲಿ ಕೋಡಿ ಬಸವಣ್ಣನ ಗುಡಿ ಎಂದು ಈಗ ಕರೆಯುವ ತ್ರಿಕೂಟಾಚಲ ದೇವಾಲಯವಿದೆ. ಇಲ್ಲಿ ಆಲೇಶ್ವರ (ಅಲ್ಲಾಳೇಶ್ವರ), ನಾರಾಯಣ ಸ್ವಯಂಭುವಿಗ್ರಹಗಳಿದ್ದವು. ನವರಂಗಕ್ಕೆ ನಲ್ಕುಂದದ ದೇವಾಲಯದಂತೆ ದಕ್ಷಿಣ ದ್ವಾರವಿದೆ. ಇಟ್ಟಿಗೆಗಳ ಜಗತಿಯಮೇಲೆ ತಗ್ಗಾಗಿ ದೇವಾಲಯ ವನ್ನು ಕಟ್ಟಲಾಗಿದೆ. ಇಟ್ಟಿಗೆಗಳು ಒಂಬತ್ತಂಗುಲ ಉದ್ದ, ಏಳಂಗುಲ ಅಗಲ ಇವೆ. ಈ ಇಟ್ಟಿಗೆಜಗತಿಗೆ ಕಲ್ಲನ್ನು ಹೊದಿಸಿದೆ. ನವರಂಗದ ಕಂಬಗಳು ಎಂಟು ಹದಿನಾರು ಮೂಲೆಗಳನ್ನು ಹೊಂದಿವೆ. ಮೇಲಿನ ಕಟ್ಟಡಕ್ಕೆ ಗ್ರಾನೈಟ್ ಕಲ್ಲನ್ನೂ, ವಿಗ್ರಹಗಳಿಗೆ ಬಳಪದಕಲ್ಲನ್ನೂ, ಉಪಯೋಗಿಸಿರುವರು. ಭಗ್ನವಾದ ಸಪ್ತಮಾತೃಕಾ ಮತ್ತು ನಂದಿ ವಿಗ್ರಹಗಳು ಹತ್ತಿರ ಬಿದ್ದಿವೆ. ಇಲ್ಲಿದ್ದ ಗರುಡ ಸೂರ್ಯನಾರಾಯಣ

ದುರ್ಗಾವಿಗ್ರಹಗಳನ್ನು ಹನುಮಂತರಾಯನ ಗುಡಿಗೆ ಸಾಗಿಸಿರುವರು. ಇಲ್ಲಿನ ಶಾಸನಗಳ ಕಾಲವು ಚಾಳುಕ್ಯ ವಿಕ್ರಮ ಸಂವತ್ಸರ ೨೯–೩೦, ಶಾಲಿವಾಹನ ಶಕ ೯೮೧–೯೮೬ ಆಗಿವೆ. ಹನ್ನೊಂದನೆಯ ಶತಮಾನದ ಮಧ್ಯಭಾಗದಲ್ಲಿಯೇ ಈ ದೇವಾಲಯ ಇದ್ದಿರಬೇಕು.

೮೪. **ಮಳಲಕೆರೆ :** ಕ್ರಿ. ಶ. ೧೦೭೧ನೆಯ ಶಾಸನದಿಂದ (ದಾವಣಗೆರೆ ೧೩೩) ಮಣ(ಳ)ಲಕೆರೆ ಪ್ರಸಿದ್ಧ ಅಗ್ರಹಾರವಾಗಿದ್ದಿತೆಂದೂ ಮೂಲಸ್ಥಾನೇಶ್ವರ ದೇವಾಲಯವಿದ್ದಿತೆಂದೂ ತಿಳಿದುಬರುತ್ತದೆ. ಈ ಈಶ್ವರನ ಗುಡಿಯೂ ತ್ರಿಕೂಟಾಚಲವಾಗಿದೆ. ಮೂರು ಗರ್ಭಗುಡಿಗಳು, ತೆರೆದ ಸುಕನಾಸಿಗಳು, ಒಂದೇ ನವರಂಗಮಂಡಪ ಇವೆ. ನಲ್ಲೂರು ಬಾಡದ ಗುಡಿಗಳಂತೆ ಇದಕ್ಕೆ ದಕ್ಷಿಣಕ್ಕೆ ದ್ವಾರವಿದೆ. ಹೊರಗೋಡೆಗಳನ್ನು ಇಲ್ಲಿನ ಇತರ ದೇವಾಲಯಗಳಂತೆಯೇ ಮಣ್ಣಿನಿಂದ ಮುಚ್ಚಿರುವರು.

ನವರಂಗದ ಮಧ್ಯದಲ್ಲಿರುವ ನಾಲ್ಕು ಕಂಬಗಳೂ ಚತುರಸ್ರವಾಗಿವೆ. ಪೂರ್ವಾಭಿಮುಖವಾದ ಗರ್ಭಗುಡಿಯಲ್ಲಿ ಲಿಂಗವಿದೆ. ದಕ್ಷಿಣಾಭಿಮುಖವಾದ ಗರ್ಭಗುಡಿಯಲ್ಲಿ ಅಕ್ಷಮಾಲಾ (ಪದ್ಮಕ್ಕೆ ಬದಲು), ಪ್ರಯೋಗ ಚಕ್ರ ಶಂಖ ಗದೆಗಳನ್ನು ಹೊಂದಿದ ಜನಾರ್ದನ ವಿಗ್ರಹ(?)ವಿದೆ. ಪಶ್ಚಿಮ ಮುಖವಾದ ಗರ್ಭಗುಡಿಯಲ್ಲಿ ಸೂರ್ಯನಾರಾಯಣನಿರುವನು. ಜನಾರ್ದನ ಗರ್ಭಗುಡಿಯಲ್ಲಿ ವಾರಾಹೀ ಮತ್ತು ಶಿವಪಾರ್ವತಿ ವಿಗ್ರಹಗಳನ್ನು ಇಟ್ಟಿರುವರು. ಜನಾರ್ದನನಿಗೆ ಜಟಾಮುಕುಟವಿದೆ. ಪದ್ಮಕ್ಕೆ ಬದಲು ಅಕ್ಷಮಾಲೆ ಇದೆ; ಆದರೆ ಫಾಲಾಕ್ಷವಿಲ್ಲ. ಹನ್ನೊಂದನೆಯ ಶತಮಾನದ ವೈಷ್ಣವ ವಿಗ್ರಹಕ್ಕೆ ಇಲ್ಲಿನ ಮತ್ತು ನಲ್ಲೂರುದ ವಿಗ್ರಹಗಳು ಸಾಕ್ಷಿಯಾಗಿವೆ. ಅದೇ ಗರ್ಭಗುಡಿಯಲ್ಲಿ ಒರಟಾದ ಚಂಡಿಕೇಶ ಇದೆ.

ನವರಂಗದಲ್ಲಿ ಮಹಿಷಮರ್ದಿನಿಯನ್ನಿಟ್ಟಿರುವರು. ಇದರ ಪಕ್ಕದಲ್ಲಿ ದೀರ್ಘಶಿಖೆ, ರುದ್ರಾಕ್ಷ ಸರ, ಹಾರಗಳನ್ನು ಧರಿಸಿ ಪದ್ಮಾಸನದಲ್ಲಿ ಕುಳಿತು ಧ್ಯಾನಮಗ್ನನಾದ ಭಕ್ತನ ವಿಗ್ರಹವಿದೆ. ಇವನ ಪಾರ್ಶ್ವಗಳಲ್ಲಿ ಸೂರ್ಯ ಚಂದ್ರ ಪರಿಚಾರಿಕೆಯರ ವಿಗ್ರಹಗಳೂ ಇವೆ. ಬಹುಶಃ ಕಾಳಾಮುಖ ಆಚಾರ್ಯನ ಅಥವಾ ದೇವಾಲಯ ಕಟ್ಟಿಸಿದವನ ವಿಗ್ರಹವಿರಬಹುದು. ಮುಖ್ಯ ಗರ್ಭಗುಡಿಯ ಸುಕನಾಸಿಯಲ್ಲಿ ಪಾಣಿವಟ್ಟ ಲಿಂಗವನ್ನಿಟ್ಟಿರುವರು.

ಈ ಹಳ್ಳಿಯಲ್ಲಿ ಬಳಪದಕಲ್ಲಿನ ವೀರಗಲ್ಲು ಮಾಸ್ತಿಕಲ್ಲುಗಳು, ಹೊಯ್ಸಳ ಕಾಲದ ಭಗ್ನವಾದ ಜನಾರ್ದನ ವಿಗ್ರಹ ಬಿದ್ದಿವೆ. ಚಿನ್ನದ ವರಹ ಹಣಗಳು ಆಗಾಗ ಸಿಕ್ಕುತ್ತವೆ. ಇಲ್ಲೊಂದು ವಿದ್ಯಾಸ್ಥಾನ ವಿದ್ದಿತೆಂದು "ವಿದ್ಯಾರ್ಥಿ ಮಾಣಿ"ಗಳಿಗೆ ಆಹಾರ ವಸ್ತ್ರಗಳಿಗೆ ದಾನ ಕೊಡಲಾಯಿತೆಂದು ಇಲ್ಲಿನ ಶಾಸನ (ದಾವಣಗೆರೆ ೧೭೩) ತಿಳಿಸುತ್ತದೆ.

೮೫. ಕೆಂದಗಲ್ಲು: ಇಲ್ಲಿನ ಕಲ್ಲೇಶ್ವರ ದೇವಾಲಯವು ಚಾಳುಕ್ಯರ ಕಾಲದ್ದಾಗಿದೆ. ನವರಂಗದ ಕಂಬಗಳು ಚತುರಸ್ರವಾಗಿವೆ. ಗರುಡ ಪೀಠದ ಮೇಲೆ ನಿಂತಿರುವ ಕೇಶವನು ಪದ್ಮ ಶಂಖ ಚಕ್ರ ಗದೆಯನ್ನು ಹೊಂದಿರುವನು. ಪ್ರಭಾವಳಿಯಲ್ಲಿ ದಶಾವತಾರಗಳಿಲ್ಲ. ವಿಗ್ರಹವು ಐದೂವರೆ ಅಡಿ ಎತ್ತರವಿದೆ. ನವರಂಗದಲ್ಲಿ ಸಪ್ತಮಾತೃಕಾ, ಗಣೇಶ, ಚಂಡಿಕೇಶ, ಮಹಿಷಮರ್ದಿನಿ, ನಾಗರಕಲ್ಲುಗಳಿವೆ. ಗರ್ಭಗೃಹದ್ವಾರದ ಮೇಲೆ ಗಜಲಕ್ಷ್ಮಿ ಇದೆ.

ದಾವಣಗೆರೆ ೧೪೩ನೆಯ ಶಾಸನದಿಂದ ದಕ್ಷಿಣದಲ್ಲಿ ಪ್ರಭಾಚಂದ್ರ ಜಿನಾಲಯವಿದ್ದಿತೆಂದೂ ಶಕ ೯೨೫ರಲ್ಲಿ ಶ್ರೀನಂದಿಪಂಡಿತನಿಗೆ ದಾನ ಕೊಡಲಾಯಿತೆಂದೂ ಕಂಡುಬರುತ್ತದೆ.

೮೬. ಶಾಗಲಿ: ಇಲ್ಲಿನ ಮಲ್ಲಿಕಾರ್ಜುನ ಗುಡಿಯು ಕ್ರಿ. ಶ. ೧೧೨೩ ರಲ್ಲಿದ್ದಿತೆಂದು ಶಾಸನದಿಂದ ಕಂಡುಬರುತ್ತದೆ. ಆರನೆ ವಿಕ್ರಮಾದಿತ್ಯನ ಕಾಲದಲ್ಲಿ ಶುಭಕೃತು ಮಾಘ ಶುದ್ಧ ಪಂಚಮಿ ಬ್ರಿಹವಾರದಲ್ಲಿ ಮಲ್ಲಿಕಾರ್ಜುನ ದೇವಾಲಯದ ಜ್ಞಾನಶಕ್ತಿ ಪಂಡಿತನಿಗೆ ದಾನಕೊಡಲ್ಪಟ್ಟಿತು (ದಾವಣಗೆರೆ ೧೨೭). ಹೊರಗಿನ ಗೋಡೆಗಳನ್ನು ಕಲ್ಲಿನಿಂದ ಮುಚ್ಚಿರುವರು. ಒಳಗೆ ದೇವಾಲಯ ತ್ರಿಕೂಟಾಚಲವಾಗಿದೆ. ಪೂರ್ವ ಮುಖವಾದ ಗರ್ಭಗುಡಿಯಲ್ಲಿ ಮಲ್ಲಿಕಾರ್ಜುನ ಲಿಂಗ, ದಕ್ಷಿಣ ಮುಖವಾದ ಗುಡಿಯಲ್ಲಿ ಅಕ್ಷಮಾಲಾ ತ್ರಿಶೂಲ ಚಕ್ರ ಗದೆ ಹಿಡಿದ ಹರಿಹರ, ಪಶ್ಚಿಮ ಮುಖವಾದ ಗುಡಿಯಲ್ಲಿ ಮತ್ತೊಂದು ಲಿಂಗವಿದೆ. ನವರಂಗದಲ್ಲಿ ನಾಲ್ಕು ಚತುರಸ್ರ ಕಂಬಗಳು ಮೇಲ್ಛಾವಣಿ ಕೆತ್ತನೆ ಕೆಲಸವಿಲ್ಲದೆಯೂ ಇವೆ. ನಂದಿ ಸಪ್ತಮಾತೃಕಾ, ಚಂಡಿಕೇಶ್ವರ, ನಾಗ ಭೈರವ, ಎರಡು ಗಣೇಶ ವಿಗ್ರಹಗಳಿವೆ. ಅಂಗಳದಲ್ಲೂ ನಾಗರಕಲ್ಲುಗಳಿವೆ.

೮೭. **ಲೊಕ್ಕಿಗೆರೆ:** ಇದು ಚಾಳುಕ್ಯರ ಕಾಲದ ಅಗ್ರಹಾರವಾಗಿದ್ದಿತು. ಕೆಲವು ದೇವಾಲಯಗಳು, ಮಾಸ್ತಿಕಲ್ಲು ವೀರಕಲ್ಲುಗಳು ಇವೆ. ವಾಯುವ್ಯದಲ್ಲಿ ಒಂದು ಮೈಲಿ ದೂರದಲ್ಲಿ ಗಿರಿಜಾಪುರದ ಕಡೆಗೆ "ತುರಿವಿನ ಮಾಳ" ಇವೆ. ಇಲ್ಲಿನ ವೀರಗಲ್ಲಿನಲ್ಲಿ ಹೊಯ್ಸಳ ಕಾಲದ ವೀರಸು ಗೋವುಗಳನ್ನು ರಕ್ಷಿಸಿದುದನ್ನು ಚಿತ್ರಿಸಿದೆ. ಹಳೆಯ ಕೆರೆಯ ಪಶ್ಚಿಮದಲ್ಲಿ ಕೋಡಿ ಕಲ್ಲೇಶ್ವರ ದೇವಾಲಯ ದಕ್ಷಿಣ ಮುಖವಾಗಿ ತ್ರಿಕೂಟಾಚಲವಾಗಿದೆ. ಇಲ್ಲಿನ ಮಿಕ್ಕ ದೇವಾಲಯಗಳಂತೆ ಇದನ್ನೂ ಮಣ್ಣಿನಿಂದ ಮುಚ್ಚಿರುವರು. ದಕ್ಷಿಣ ದ್ವಾರವನ್ನು ಮುಚ್ಚಿ ಈಚೆಗೆ ಉತ್ತರ ಗರ್ಭಗುಡಿಯ ಉತ್ತರಗೋಡೆಯಲ್ಲಿ ಬಾಗಿಲನ್ನು ಮಾಡಿರುವರು. ಮೂರು ಗರ್ಭಗುಡಿಗಳು ತೆರೆದ ಸುಕನಾಸಿಗಳು ನವರಂಗದ ನಾಲ್ಕು ಕಂಬಗಳು ಇತರ ದೇವಾಲಯಗಳಂತೆಯೇ ಇವೆ. ಗರ್ಭಗೃಹ ದ್ವಾರಬಂಧಗಳ ಮೇಲೆ ಕಳಶ ಚಿತ್ರಪಟ್ಟಿಕೆ ಮೇಲೆ ಗಜಲಕ್ಷ್ಮಿ ಇವೆ. ಇಲ್ಲಿನ ವಿಗ್ರಹಗಳನ್ನು ಸೂರ್ಯನ ಗರ್ಭಗುಡಿಯಲ್ಲಿ ಹಾಕಿರುವರು. ಸಪ್ತಮಾತೃಕಾ, ಚಂಡಿಕೇಶ, ಮಹಿಷಮರ್ದಿನಿ ವಿಗ್ರಹಗಳಿವೆ. ಸೂರ್ಯ ವಿಗ್ರಹಕ್ಕೆ ಲತಾ ತೋರಣ, ಪಕ್ಕದಲ್ಲಿ ಛಾಯೆಯರು ಬಾಣಬಿಡುತ್ತಿರುವುದು ಕೆತ್ತಲಾಗಿದೆ. ಸೂರ್ಯನ ಕೈಗಳು ಮುರಿದಿವೆ. ನವರಂಗದಲ್ಲಿ ಗಣೇಶ, ನಾಗರಕಲ್ಲು, ಚಂಡಿಕೇಶ, ಬಸವ ವಿಗ್ರಹಗಳಿವೆ. ಇಲ್ಲಿನ ಈಶಾನ್ಯ ಕಂಬದ ಮೇಲಿರುವ ಶಾಸನ ಶಕ ೧೧೫೮ ರಲ್ಲಿ ಹೊಯ್ಸಳ ಸೋಮೇಶ್ವರನ ಕಾಲದಲ್ಲಿ 'ಕೇತೇಶ್ವರ'ನಿಗೆ ದಾನಕೊಟ್ಟಂತೆ ಹೇಳುತ್ತದೆ. ನೈರುತ್ಯ ಕಂಬದಮೇಲೆ ಹೊಯ್ಸಳ ಇಮ್ಮಡಿ ನರಸಿಂಹನ ಕ್ರಿ. ಶ. ೧೨೨೯ರ ಶಾಸನದಲ್ಲಿ ಲಿಂಗವನ್ನು ಮೂಲಸ್ಥಾನದ ಕಲಿದೇವ ಎಂದು ಕರೆಯಲಾಗಿದೆ. ಮಹಾಪ್ರಧಾನ ಪೋಲಾಳ್ವ ದಣ್ನಾಯಕರ ಸುಂಕಾಧಿಕಾರಿ ಗೋಪರಸ ಮುಂತಾದವರು ಲೋಕಿಯಕೆಱೆಯ ಮೂಲಸ್ಥಾನದ ಶ್ರೀ ಕಲಿದೇವರಿಗೆ ಒಂದು ಗದ್ಯಾಣ ಎರಡು ಹಣವನ್ನು ಶಕ ೧೧೫೧ರ ವಿರೋಧಿ ಚೈತ್ರ ಬಹುಳದಮಾವಾಸ್ಯೆ ಸಂಕ್ರಮಣ ವ್ಯತೀಪಾತದಲ್ಲಿ ಕೊಟ್ಟರು (ಸೋಮವಾರ, ಮಾರ್ಚ್ ೨೬, ೧೨೨೯).

ಕೇತೇಶ್ವರ ದೇವಾಲಯವು ಪ್ರಾಚೀನವಾದುದು. ಬಳಪದಕಲ್ಲಿನ

ಈ ಕಟ್ಟಡ ಹನ್ನೆರಡು ಹದಿಮೂರನೆಯ ಶತಾಬ್ದಗಳಲ್ಲಿ ಪ್ರಸಿದ್ಧವಾಗಿದ್ದಿತು. ಹೊರಗೋಡೆಗಳನ್ನು ಮಣ್ಣಿನಿಂದ ಮುಚ್ಚಿರುವರು. ಆದರೂ ಗೋಡೆಗಳು ಮೇಲ್ಛಾವಣಿ ಕೈಪಿಡಿ ಗೋಡೆಗಳು ಅಲ್ಲಲ್ಲಿ ಕಂಡುಬರುತ್ತವೆ. ಗುಡಿಯು ಪೂರ್ವಮುಖವಾಗಿದೆ. ಪೂರ್ವದ ಗೋಡೆಯಲ್ಲಿ ಜಾಲಂದ್ರವಿದೆ, ಬೋದಿಗೆಗಳು ಬಗ್ಗಿವೆ. ಮೇಲಿನ ಕೈಪಿಡಿ ಗೋಡೆಯಲ್ಲಿ ಹೆಚ್ಚು ಕೆತ್ತನೆ ಕೆಲಸವಿಲ್ಲ. ಪಾಳೆಯಗಾರರ ಕಾಲದ ಗಾರೆಯ ಗೋಪುರವಿದೆ. ನವರಂಗದ ಕಂಬಗಳು ದುಂಡಾಗಿ ಹದಿನಾರು ಮುಖವಾಗಿವೆ. ಮೇಲಿನ ಕಮಲ ಚಕ್ರಗಳೂ ಹದಿನಾರು ಮುಖವಾಗಿವೆ. ಪೀಠಿಕೆಗಳು ಚತುರಸ್ರವಾಗಿವೆ. ಈಶಾನ್ಯ ಕಂಬದಮೇಲೆ ಶಕ ೧೧೫೮(ಕ್ರಿ. ಶ. ೧೨೩೬)ದ ಹೊಯ್ಸಳ ಸೋಮೇಶ್ವರನ ಶಾಸನವಿದೆ (ದಾವಣಗೆರೆ ೧೯). ನವರಂಗದ ಭುವನೇಶ್ವರಿಯಲ್ಲಿ ತಾಂಡವೇಶ್ವರ ಇದೆ. ಗಣೇಶ ಮಹಿಷಮರ್ದಿನಿ ವಿಗ್ರಹಗಳನ್ನು ನವರಂಗದಲ್ಲಿಟ್ಟಿರುವರು. ಗರ್ಭಗುಡಿಯ ಮೇಲ್ಛಾವಣಿ ಚಪ್ಪಟೆಯಾಗಿ ಪದ್ಮ ಹೊಂದಿದೆ. ಗರ್ಭಗುಡಿಯಲ್ಲಿ ಕೇತೇಶ್ವರ ಲಿಂಗವಿದೆ. ಪಶ್ಚಿಮಗೋಡೆಯ ದಕ್ಷಿಣ ಮೂಲೆಯಲ್ಲಿ ಮುಚ್ಚಿರುವ ಒಂದು ಅಡಿ ವಿಸ್ತಾರದ ಗೂಡು ಇದೆ.

ಲೊಕ್ಕಿಕೆರೆಯ ದಕ್ಷಿಣದಲ್ಲಿ ನಾರಾಯಣಗುಡಿ ಇದೆ. ಇದು ಗರ್ಭಗುಡಿ ಸುಕನಾಸಿಗಳ ಮೇಲ್ಛಾವಣಿಗಳು ಬಾಗಿದ್ದು ಪದ್ಮಗಳನ್ನು ಹೊಂದಿವೆ. ಗರ್ಭಗುಡಿಯಲ್ಲಿ ಮೂರಡಿ ಎತ್ತರದ ಭಗ್ನವಾದ ಬಳಪದ ಕಲ್ಲಿನ ನಾರಾಯಣ ವಿಗ್ರಹವಿದೆ. ನಾಲ್ಕು ಕೈಗಳಲ್ಲಿ ಪದ್ಮ ಪ್ರಯೋಗಚಕ್ರ ಶಂಖ ಭಗ್ನವಾದ ಗದೆ ಇವೆ. ಈ ದೇವಾಲಯದ ಪೀಠದಲ್ಲಿ ಮೂರು ಪಟ್ಟಿಕೆಗಳಿವೆ. ಸುಕನಾಸಿ ದ್ವಾರವನ್ನು ಕೇತೇಶ್ವರ ದೇವಾಲಯದಂತೆ ಬಳಪದಕಲ್ಲಿನಿಂದ ಮಾಡಿರುವರು. ನಾರಾಯಣನ ಪ್ರಯೋಗ ಚಕ್ರದಿಂದ ಈ ದೇವಾಲಯ ಪ್ರಾಚೀನವೆಂದು ಹೇಳಬಹುದು.

ಲೊಕ್ಕಿಕೆರೆಯ ಮೈಲಾರ ಮತ್ತು ವೀರಭದ್ರ ಗುಡಿಗಳು ಆಧುನಿಕವಾದರೂ ಬಳಪದಕಲ್ಲಿನ ವಿಗ್ರಹಗಳು ಹೊಯ್ಸಳ ಕಾಲದ್ದಾಗಿವೆ. ೧೬ನೆಯ ಶತಾಬ್ದದ ಆಂಜನೇಯ ಗುಡಿ ಒಂದಿದೆ.

೮೮. ಹದಡಿ : ಹದಡಿ ಚಾಳುಕ್ಯರ ಕಾಲದಲ್ಲಿ ಪ್ರಸಿದ್ಧವಾಗಿದ್ದರೂ

ಈಗ ಅಲ್ಲಿ ಹಳೆಯ ದೇವಾಲಯಗಳಿಲ್ಲ. ಇದಕ್ಕೆ ಎರಡು ಫರ್ಲಾಂಗ್ ಉತ್ತರದಲ್ಲಿ ಬಹುಶಃ "ಮುದಿಹದರಿ" ಇದ್ದಿತು. ತ್ರೈಲೋಕ್ಯಮಲ್ಲ ನನ್ನಿ ಳನ್ನೊಳಂಬ ಪೆರ್ಮಾನಡಿ ಕದಂಬಳಿಗೆ ನಾಡನ್ನಾಳುತ್ತಿದ್ದಾಗ ಪಲ್ಲವಾ ಭರಣ ಬ್ರಹ್ಮಾಧಿರಾಜರ ಪೆರ್ಗಡೆ ಶಾನ್ತಿಮಯನ ಶಾಸನವಿದೆ (ದಾವಣಗೆರೆ ೧೨೪). ಬ್ರಹ್ಮಾಧಿರಾಯನು ಬ್ರಹ್ಮೇಶ್ವರ ದೇವಾಲಯದ ಬ್ರಹ್ಮವೇದ ಜೀಯನಿಗೆ ಶಕ ೯೫೮ರಲ್ಲಿ (ಕ್ರಿ. ಶ. ೧೦೩೬) ದಾನ ವನ್ನು ಕೊಟ್ಟಿರುವನು. (ದಾವಣಗೆರೆ ೧೨೬). ಇಟ್ಟಿಗೆಕಲ್ಲು ರಂಗನಾಥ ದೇವಾಲಯ ಕೋಟೆಯಲ್ಲಿದೆ. ಇಲ್ಲಿನ ಇಟ್ಟಿಗೆಗಳು ೧೨×೭×೨ ೧/೨ ಅಂಗುಲ ಪ್ರಮಾಣದಲ್ಲಿವೆ. ಕೋಟೆಯಲ್ಲಿ ಸಿಕ್ಕಿದ ಒಂದು ಬಳಪದಕಲ್ಲಿನ ಶಿರೋಭಾಗವನ್ನು ಆಂಜನೇಯ ದೇವಾಲಯದ ಎಡದಲ್ಲಿರುವ ತೇರಿನ ಹತ್ತಿರ ಗೂಡಿಸಲ್ಲಿಟ್ಟಿರುವರು. ಬಹುಶಃ ೧೧ನೇ ಶತಮಾನದ ವಿಗ್ರಹದ ಶಿರೋಭಾಗವಾಗಿರಬೇಕು. ಲಂಬಕರ್ಣ ವಿಶಾಲನೇತ್ರ ಕಿರೀಟ ಭಾಗ ವನ್ನು ಚೆನ್ನಾಗಿ ಕೊರೆದಿರುವರು.

ಆಂಜನೇಯ ದೇವಾಲಯದ ಮುಖಮಂಡಪ ಪಶ್ಚಿಮ ಗೋಡೆ ಯಲ್ಲಿ ಸೇರಿಸಿರುವ ಗಜಲಕ್ಷ್ಮಿ, ಗರ್ಭಗುಡಿಯ ಪಶ್ಚಿಮ ಗೋಡೆಗೆ ಆನಿಸಿರುವ ಭಗ್ನವಾದ ವಿಷ್ಣು ವಿಗ್ರಹ ಚಾಳುಕ್ಯ ಶಿಲ್ಪಗಳಾಗಿವೆ.

೮೯. **ಹೊನ್ನೂರು:** ಇದರ ಉತ್ತರದಲ್ಲಿ ಹಳೆಯ ಕೋಟೆಯ ಅವಶೇಷಗಳಿವೆ. ಕೋಟೆಗೆ ಪೂರ್ವದಲ್ಲಿ ಹನುಮಂತ ಈಶ್ವರ ದೇವಾಲಯಗಳಿವೆ. ಈಶ್ವರ ದೇವಾಲಯವು ಚಾಳುಕ್ಯರ ಕಾಲದ್ದು. ಗರ್ಭಗುಡಿಯ ಲಿಂಗ ಎರಡೂವರೆ ಅಡಿ ಎತ್ತರವಿದೆ. ಮುಖಮಂಡಪ ವನ್ನು ೧೭ನೆಯ ಶತಮಾನದಲ್ಲಿ ಸೇರಿಸಿರುವರು. ಮುಖಮಂಡಪದ ಆಗ್ನೇಯದಲ್ಲಿ ಚಾಳುಕ್ಯ ಶಾಸನವಿದೆ. ಗರ್ಭಗೃಹದ್ವಾರದ ಮೇಲೆ ಗಜಲಕ್ಷ್ಮಿಯನ್ನು ಕೆತ್ತಿರುವರು.

೯೦. **ಆನಗೋಡು:** ಮರುಳಸಿದ್ಧ ಕಾವ್ಯದಲ್ಲಿ ಮರುಳಸಿದ್ಧನು ಇಲ್ಲಿ ಪವಾಡಗಳನ್ನು ಮಾಡಿದನೆಂದು ಹೇಳಿದೆ. ದಾವಣಗೆರೆಗೆ ಹತ್ತು ಮೈಲಿ ಆಗ್ನೇಯದಲ್ಲಿ ಆನು(ನ)ಗೋಡಿದೆ. ಹಳ್ಳಿಯ ಉತ್ತರದಲ್ಲಿರುವ ಕೆರೆಯ ಹತ್ತಿರ ೧೧ನೆಯ ಶತಮಾನದ ಸಿದ್ಧೇಶ್ವರ ದೇವಾಲಯ ತ್ರಿಕೂಟಾ

ಚಲವಾಗಿದೆ. ಅನಂತರ ಮುಖಮಂಡಪಗಳನ್ನು ಸೇರಿಸಿರುವರು. ನವರಂಗಕ್ಕೆ ಈಗ ಪೂರ್ವ ಮತ್ತು ದಕ್ಷಿಣದಲ್ಲಿ ಎರಡು ದ್ವಾರಗಳಿವೆ. ಮೊದಲಿನ ದೇವಾಲಯದಲ್ಲಿ ಮೂರು ಗರ್ಭಗುಡಿಗಳು, ತೆರೆದ ಸುಕನಾಸಿಗಳು, ನವರಂಗ ಇದ್ದವು. ನವರಂಗದ ಮಧ್ಯದಲ್ಲಿ ನಾಲ್ಕು ಚತುರಸ್ರ ಕಂಬಗಳು ಎಂಟು ಮೂಲೆಗಳನ್ನು ಹೊಂದಿವೆ. ಭುವನೇಶ್ವರಿಯಲ್ಲಿ ಪದ್ಮವಿದೆ. ನವರಂಗದಲ್ಲಿ ವಿಷ್ಣು, ಸೂರ್ಯನಾರಾಯಣ, ಮಹಿಷ ಮರ್ದಿನಿ, ನಂದಿ, ವೀರಭದ್ರ ವಿಗ್ರಹಗಳಿವೆ. ಪಶ್ಚಿಮದ ಗರ್ಭಗುಡಿಯಲ್ಲಿ ಲಿಂಗವಿದೆ. ವಿಷ್ಣುವಿದ್ದ ಉತ್ತರ ಗರ್ಭಗುಡಿಯನ್ನು ಶಾಲೆಯಾಗಿ ಮಾಡಿ ಅದರ ಪಶ್ಚಿಮದಲ್ಲಿ ೧೭ನೆಯ ಶತಮಾನದ ಪಾರ್ವತಿ ವಿಗ್ರಹ ವನ್ನಿಟ್ಟಿರುವರು. ಸೂರ್ಯನಿದ್ದ ಪೂರ್ವ ಗರ್ಭಗುಡಿಯನ್ನು ಶಾಲೆ ಯಾಗಿ ಮಾರ್ಪಡಿಸಿ ಅದಕ್ಕೆ ಮುಖಮಂಡಪ ಪೂರ್ವದ್ವಾರಗಳನ್ನು ಸೇರಿಸಿರುವರು. ದಕ್ಷಿಣದ ಮೊದಲಿನ ದ್ವಾರದ ಮುಂದೆ ಎರಡು ಜಗತಿಗಳುಳ್ಳ ಮುಖಮಂಡಪವನ್ನು ಸೇರಿಸಲಾಗಿದೆ. ಶಿಖರವು ಕೂಡ ೧೭ನೆಯ ಶತಮಾನದ್ದು. ದಕ್ಷಿಣ ಮುಖಮಂಡಪದ ಕಂಬಗಳ ಮೇಲೆ ಸಿಂಹ ಹನುಮಂತ ಭಕ್ತವಿಗ್ರಹಗಳನ್ನು ಕೆತ್ತಿರುವರು. ಪೂರ್ವ ಮಂಡಪದ ಕಂಬಗಳು ಎಂಟು ಮೂಲೆಗಳನ್ನು ಹೊಂದಿವೆ.

ಈ ದೇವಾಲಯದ ದಕ್ಷಿಣದಲ್ಲಿ ಮೈಲಾರ ಜನಾರ್ದನ ಗುಡಿಗಳಿವೆ. ಇವುಗಳ ಮುಂದೆ ನಾಲ್ಕು ಕಂಬಗಳ ಮಂಡಪ, ಅದರ ಮೇಲೆ ನಂದಿ ಇವೆ. ಸಿದ್ಧೇಶ್ವರ ದೇವಾಲಯದ ಪೂರ್ವದಲ್ಲಿ ಕೆರೆ ಇದೆ. ಜಟ್ಟಿಗ ಹನುಮಂತ ದೇವಾಲಯಗಳೂ ಇದ್ದವೆಂದು ಪುರುಳಸಿದ್ಧ ಕಾವ್ಯದಲ್ಲಿ ಹೇಳಿದೆ.

೯೧. ಕೊಗ್ಗನೂರು : ದಾವಣಗೆರೆಗೆ ಈಶಾನ್ಯ ದಿಕ್ಕಿನಲ್ಲಿ ಎಂಟು ಮೈಲಿ ದೂರದಲ್ಲಿ ಕೊಗ್ಗನೂರಿದೆ. ಇಲ್ಲಿನ ಈಶ್ವರ ಗುಡಿ ಹನ್ನೊಂದನೆಯ ಶತಮಾನದ ತ್ರಿಕೂಟಾಚಲವಾಗಿದ್ದಿತು. ಈಗ ಪೂರ್ವ ಮತ್ತು ಉತ್ತರ ಗರ್ಭಗುಡಿಗಳನ್ನು ಮುಚ್ಚಿರುವ ಹೊರಗೋಡೆಗಳನ್ನು ಮಣ್ಣಿನಿಂದ ಮುಚ್ಚಲಾಗಿದೆ. ದಕ್ಷಿಣದಲ್ಲಿ ದ್ವಾರವಿದೆ. ನವರಂಗದಲ್ಲಿ ಚತುರಸ್ರವಾದ ನಾಲ್ಕು ಕಂಬಗಳು ಮಧ್ಯದಲ್ಲಿವೆ. ಭುವನೇಶ್ವರಿಯಲ್ಲಿ ಪದ್ಮವನ್ನು

ಕೊರೆದಿರುವರು. ಉತ್ತರ ಗರ್ಭಗುಡಿಯ ಸುಕನಾಸಿಯಲ್ಲಿ ಸಪ್ತ ಮಾತೃಕಾ, ಮಹಿಷಮರ್ದಿನಿ, ಗದಾ ಪ್ರಯೋಗಚಕ್ರ ಶಂಖ ಪದ್ಮ ಧರಿಸಿದ ವಿಷ್ಣು, ನಾಗರಕಲ್ಲು, ಸೂರ್ಯ, ವೀರಭದ್ರ ವಿಗ್ರಹಗಳಿವೆ. ಸುಕನಾಸಿ ದ್ವಾರದಮೇಲೆ ಗಜಲಕ್ಷ್ಮಿ ಇದೆ. ನವರಂಗದಲ್ಲಿ ನಂದಿ ಗರ್ಭಗುಡಿಯಲ್ಲಿ ಲಿಂಗ ಇವೆ.

೯೨. ಹಾಲುವಣ : ಹೊನ್ನಾಳಿ-ಹರಿಹರ ರಸ್ತೆಯಲ್ಲಿ ಕೊಮಾರನ ಹಳ್ಳಿಗೆ ಆಗ್ನೇಯದಲ್ಲಿ ಹಾಲುವಣವಿದೆ. ಇದರ ಕೆರೆಯ ಕಟ್ಟೆಯ ಮೇಲೆ ಚಾಳುಕ್ಯ ತ್ರಿಭುವನಮಲ್ಲನ ಕಾಲದ ಈಶ್ವರ ಗುಡಿ ಇದೆ. ಹೊರ ಗೋಡೆಗಳನ್ನು ಕಲ್ಲಿನಿಂದ ಮುಚ್ಚಿರುವರು. ಸುಕನಾಸಿಯ ಬಳಪದ ಕಲ್ಲಿನ ದ್ವಾರದ ಪಕ್ಕಗಳಲ್ಲಿ ಜಾಲಂದ್ರಗಳಿವೆ. ಸುಕನಾಸಿ ದ್ವಾರದಮೇಲೆ ಕಮಲಗಳಿವೆ. ಇದರ ಮೇಲ್ಛಾವಣಿ ಅಷ್ಟಕೋಣಾಕಾರವಾಗಿದ್ದು ಮಧ್ಯದಲ್ಲಿ ಕಮಲವಿದೆ. ಇಲ್ಲಿ ಹಳೆಯ ನಂದಿ ಇದೆ. ಗರ್ಭಗುಡಿಯಲ್ಲಿ ಬಟ್ಟಲಿನಂತಿರುವ ಪಾಣಿಪೀಠದ ಮೇಲೆ ಲಿಂಗವಿದೆ. ಅಂಗಳದಲ್ಲಿ ಪೀಠಗಲ್ಲುಗಳ ಮೇಲೆ ಚಾಳುಕ್ಯ ಶಾಸನಗಳಿವೆ.

———

WO 1854—MUPM—2,000 copies—17-4-64